1954

ನಾನು ಪೋಲೀಸನಾಗಿದ್ದೆ

ಬಸವರಾಜ ಕಟ್ಟೀಮನಿ

ಶಾರದಾ ಪ್ರಕಟನಾಲಯ
ಬೆಂಗಳೂರು ೨

ಶಾರದಾ ಸಾಹಿತ್ಯ ಮಾಲೆ – ೪೦

ನಾನು ಪೋಲೀಸನಾಗಿದ್ದೆ

ಸಾಮಾಜಿಕ ಕಾದಂಬರಿ

ಬಸವರಾಜ ಕಟ್ಟೀಮನಿ

ಮುದ್ರಣ ಮತ್ತು ಪ್ರಕಾಶನ:
ಶಾರದಾ ಪ್ರಕಟನಾಲಯ
ಅರಳೇಪೇಟೆ, :: ಬೆಂಗಳೂರು – ೨.

ರಕ್ಷಾಪತ್ರದ ರಚನೆ:
ಜಿ. ಕೆ. ಮೂರ್ತಿ

ಪಡಿಯಚ್ಚು:
ಷಣ್ಮುಗಂ ಪ್ರೋಸೆಸ್ ಸ್ಟುಡಿಯೊ
ಬೆಂಗಳೂರು

ರಕ್ಷಾಪತ್ರದ ಮುದ್ರಣ:
ಗೋಲ್ಡನ್ ಪ್ರಿಂಟಿಂಗ್ ವರ್ಕ್ಸ್
ಬೆಂಗಳೂರು ೨

ಪ್ರಥಮ ಮುದ್ರಣ: ಸೆಪ್ಟಂಬರ್ ೧೯೫೪

ಬೆಲೆ:
ಒಂದೂವರೆ ರೂಪಾಯಿ

This book is an imaginative representation of our life intended solely as a work of fiction, and all the characters are imaginary. If the names of any actual persons are used, such a coincidence is one of pure accident.

ಪರಿವಿಡಿ

ಹೆಡ್‌ಕ್ವಾರ್ಟರ್ಸ್

ಗೊಬ್ಬೂರಿನಲ್ಲಿ

ಕಾಲವಾಡದಲ್ಲಿ

ಸಮರ್ಪಣ:

ಮೈಸೂರು ರಾಜ್ಯದ ಗೃಹಮಂತ್ರಿಗಳಾದ

ಶ್ರೀ ಎಚ್. ಸಿದ್ಧವೀರಪ್ಪನವರಿಗೆ

ಆದರಪೂರ್ವಕವಾಗಿ

ಈ ಲೇಖಕರ ಇತರ ಕೃತಿಗಳು

ಕಾದಂಬರಿ

ಸ್ವಾತಂತ್ರ್ಯದೆಡೆಗೆ
ಮೂಡಿ ಮುಡಿದವರು
ಜ್ವಾಲಾಮುಖಿಯ ಮೇಲೆ
ಮೋಹದ ಬಲೆಯಲ್ಲಿ
ಬೀದಿಯಲ್ಲಿ ಬಿದ್ದವಳು
ಮಣ್ಣು ಮತ್ತು ಹೆಣ್ಣು
ಜರತಾರಿ ಜಗದ್ಗುರು
ಖಾನಾವಳಿಯ ನೀಲಾ
ನೀ ನನ್ನ ಮುಟ್ಟಬೇಡ
ಜನಿವಾರ ಮತ್ತು ಶಿವದಾರ
ಬಲೆಯ ಬೀಸಿದರು

ಸಣ್ಣ ಕತೆ

ಕಾರವಾನ್
ಗುಲಾಬಿ ಹೂ
ಆಗಸ್ಟ್ ಒಂಭತ್ತು
ಸೆರೆಯಿಂದ ಹೊರಗೆ
ಜೋಳದ ಬೆಳೆಯ ನಡುವೆ

ಕಥಾನಾಯಕನ ಬಿನ್ನಹ

ನಾನೊಬ್ಬ ಪೋಲೀಸನಾಗಿದ್ದೆ, ಹತ್ತು ವರ್ಷಗಳ ವರೆಗೆ.

ಅದು ಪಾರತಂತ್ರ್ಯದ ಕಾಲ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ವರ್ಷವೊಂದರಲ್ಲಿಯೆ ನಾನೂ ಸ್ವತಂತ್ರನಾದೆ.

ನಾನೀಗ ಪೋಲೀಸನಾಗಿಲ್ಲ.

ನಿಮ್ಮ ಹಾಗೇ ನಾನೂ ಒಬ್ಬ ನಾಗರಿಕ, ಅಷ್ಟೆ.

ನನಗೆ ಗೊತ್ತು : ಪೋಲೀಸು ಸಿಪಾಯಿಗಳು, ಪೋಲೀಸು ಅಧಿಕಾರಿಗಳು, ಆ ಇಲಾಖೆಯ ವೈಶಿಷ್ಟ್ಯಗಳು, ಪೋಲೀಸರ ಜೀವನ ವೈಖರಿ ಇವುಗಳ ಬಗೆಗೆ ಸಾಮಾನ್ಯ ಜನತೆಯಲ್ಲಿ ವಿಶೇಷವಾದ ಕುತೂಹಲವಿರುತ್ತದೆ.

ಪೋಲೀಸರನ್ನು ಎಲ್ಲರೂ ನೋಡಿರುತ್ತಾರೆ; ಅವರೊಡನೆ ವ್ಯವಹರಿಸುವ ಸಂದರ್ಭಗಳೂ ಬಂದಿರುತ್ತವೆ ಅನೇಕರಿಗೆ. ಆದರೂ, ಪೋಲೀಸ್ ಪ್ರಪಂಚ ವೆಂಬ ಕೋಟೆಯಲ್ಲಿ ಪ್ರವೇಶಿಸಿ ಅಲ್ಲಿನ ವ್ಯಕ್ತಿಗಳ ನೈಜಸ್ವರೂಪ, ರೀತಿ ನೀತಿ, ಆಚಾರ ವಿಚಾರಗಳನ್ನೂ, ಅವರ ಅಂತರಂಗದ ಬಯಕೆ, ಮನಸ್ಸಿನ ಹೊಯ್ದಾಟ ಗಳನ್ನೂ ಸರಿಯಾಗಿ ಅರಿತುಕೊಂಡವರು ಮಾತ್ರ ವಿರಳವೆಂದೇ ಹೇಳಬೇಕು.

ಪತ್ತೇದಾರಿ ಕಾದಂಬರಿಗಳೆಂಬ ಹೆಸರಿನಲ್ಲಿ ಪ್ರಕಟವಾಗುವ ಕೆಲವು ಪುಸ್ತಕಗಳನ್ನು ನಿಮ್ಮಲ್ಲಿ ಅನೇಕರು ಓದಿರಬಹುದು.

ಇದು – ಆ ಜಾತಿಯ ಕಾದಂಬರಿಯಲ್ಲ.

ಪತ್ತೇದಾರಿ ಕಾದಂಬರಿಗಳಲ್ಲಿ, ಅಪರಾಧಗಳನ್ನು ಪತ್ತೆ ಮಾಡುವ ಗೂಢ ಚಾರರ ಬುದ್ಧಿಕೌಶಲವನ್ನು ಕಂಡು ನೀವು ತಲೆದೂಗಿರಬಹುದು. ಆದರೆ, ನಿಮ್ಮ ಹಾಗೇ ಮಾನವಪ್ರಾಣಿಗಳಾದ ಪೋಲೀಸರ ಜೀವನದ ಸೂಕ್ಷ್ಮ ವೈಶಿಷ್ಟ್ಯಗಳನ್ನು ಮಾತ್ರ ಆ ಬಗೆಯ ಪುಸ್ತಕಗಳಲ್ಲಿ ನೀವು ಕಾಣಲಾರಿರಿ.

ಪೋಲೀಸರನ್ನು ಮಾನವಪ್ರಾಣಿಗಳೆಂದು ಕಂಡು, ನಿರೀಕ್ಷಿಸಿ, ಅವರ

ವರ್ಣಮಯ ಜೀವವನ್ನು ಚಿತ್ರಿಸುವ 'ಸಾಮಾಜಿಕ ಕಾದಂಬರಿ' ನಮ್ಮ ಕನ್ನಡಲ್ಲಿಯಂತೂ ಇದುವರೆಗೂ ಪ್ರಕಟವಾಗಿಲ್ಲ. ನಮ್ಮ ಕಾದಂಬರಿಕಾರರಲ್ಲಿ ಹೆಚ್ಚು ಮಂದಿಗೆ ಈ ವಿಶಿಷ್ಟ ಪ್ರಪಂಚದ ಪರಿಚಯವಿಲ್ಲದಿರುವುದೇ ಇದಕ್ಕೆ ಕಾರಣ.

ಪೋಲೀಸ್ ಪ್ರಪಂಚದ ಬಗೆಗೆ ಕನ್ನಡದಲ್ಲಿ ರಚಿತವಾದ ಈ ಪ್ರಪ್ರಥಮ ಕಾದಂಬರಿಯ ಕರ್ತೃಗಳಿಗೆ ಮಾತ್ರ ಈ ಪ್ರಪಂಚದ ಪೂರ್ಣ ಪರಿಚಯ ವಿದೆಯೆಂದು ನಾನು ಹೇಳಿದರೆ ನಿಮ್ಮಲ್ಲಿ ಅನೇಕರಿಗೆ ಆಶ್ಚರ್ಯವಾಗಬಹುದೋ ಏನೊ. ನನ್ನ ಹತ್ತು ವರ್ಷಗಳ ಅನುಭವಗಳನ್ನು ಈ ಕೃತಿಯಲ್ಲಿ ಚಿತ್ರಿಸಿರುವ ಈ ಕಾದಂಬರಿಕಾರರು ತಮ್ಮ ಬಾಲ್ಯದ ಹದಿನಾಲ್ಕು ವರ್ಷಗಳನ್ನು ಪೋಲೀಸ್ ಕೋಟೆಯ ಶಿಬಿರಗಳಲ್ಲೇ ಕಳೆದಿದ್ದಾರೆ. ಪೋಲೀಸ್ ಸಿಪಾಯಿಯೊಬ್ಬನ ಮಗನಾಗಿ ಜನಿಸಿದ ಈ ಲೇಖಕರು ಪೋಲೀಸ್ ಪ್ರಪಂಚದ ಸಕಲ ವೈಶಿಷ್ಟ್ಯಗಳನ್ನೂ ಸಮೀಪದಿಂದ ನಿರೀಕ್ಷಿಸಿದ್ದುದರ ಫಲವಾಗಿ ಈ ಕೃತಿಯಲ್ಲಿ ಯಥಾರ್ಥತೆಯೂ ನೈಜತೆಯೂ ಒಡಮೂಡುವಂತಾಗಿದೆ.

ಇಲ್ಲಿ ಚಿತ್ರಿತವಾಗಿರುವುದು ಮುಖ್ಯವಾಗಿ ನನ್ನ ಕಥೆ. ಅದರ ಜೊತೆಗೇ, ನನ್ನೊಡನೆ ಕೂಡಿ ಕೆಲಸ ಮಾಡಿದ ಇತರ ಪೋಲೀಸರ, ಅಧಿಕಾರಿಗಳ ಕಥೆಗಳೂ ಬಂದಿವೆ. ಇಲ್ಲಿ 'ಒಳ್ಳೆಯವರೂ' ಇದ್ದಾರೆ; 'ಕೆಟ್ಟವರೂ' ಇದ್ದಾರೆ. ಮಾನವನು ಯಾವಾಗಲೂ ತನ್ನ ಪರಿಸರದ ಶಿಶು. ಈ ಮಾತು ಪೋಲೀಸ್ ಇಲಾಖೆಯಲ್ಲಿನ ಜನರಿಗೂ ಅನ್ವಯಿಸುತ್ತದೆ.

ಇಲ್ಲಿ ಚಿತ್ರಿತವಾಗಿರುವ ನನ್ನ ಮತ್ತು ಇನ್ನಿತರ ಪೋಲೀಸರ ಜೀವನ ವೈಖರಿಯನ್ನು ಕಂಡು, "ಇದೇನು, ಪೋಲೀಸು ಇಲಾಖೆ ಇಷ್ಟು ಕೆಟ್ಟು ಹೋಗಿದೆಯೇ!" ಎಂದು ಕೆಲವರು ದಿಗಿಲುಗೊಳ್ಳಬಹುದು. "ಇದೆಲ್ಲಾ ನಿಜವೇ!" ಎಂದು ಹೆಚ್ಚು ಜನ ಒಪ್ಪಿಕೊಳ್ಳಬಹುದು. ಪೋಲೀಸ್ ಇಲಾಖೆಯ ವಾತಾವರಣ ಹದಗೆಟ್ಟುಹೋಗಿದೆಯೆಂಬ ಕಟುಸತ್ಯವನ್ನು ಸಾಮಾನ್ಯವಾಗಿ ಎಲ್ಲರೂ ಕಂಡುಕೊಂಡಿದ್ದಾರೆ. ಪ್ರಧಾನಿ, ಪಂಡಿತ ನೆಹರು ಅವರಿಗೂ ಈ ವಿಷಯ ಗೊತ್ತಿದೆ, ದಾತಾರ ಬಳವಂತರಾಯರಿಗೂ ಗೊತ್ತಿದೆ, ಮುರಾರಜಿ ದೇಸಾಯಿಯವರಿಗೂ ಗೊತ್ತಿದೆ, ಹನುಮಂತಯ್ಯನವರಿಗೂ ಗೊತ್ತಿದೆ, ಸಿದ್ಧವೀರಪ್ಪನವರಿಗೂ ಗೊತ್ತಿದೆ, ಇನ್ನಿತರ ಕಾಂಗ್ರೆಸ್ ಸಚಿವರುಗಳಿಗೂ

ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಈಚೆಗೆ, ಈ ಸ್ಥಿತಿಯನ್ನು ಸುಧಾರಿಸಲು ಯತ್ನಗಳೂ ನಡೆದಿವೆ. ಅನೇಕ ಆಪಾದನೆಗಳಿಗೊಳಗಾಗಿ ಅನೇಕ ಪೋಲೀಸರು ಅನೇಕ ಬಾರಿ ಶಿಕ್ಷೆಗಳಿಗೊಳಗಾಗುತ್ತಿದ್ದಾರೆ. "ಪೋಲೀಸ್ ಇಲಾಖೆಯಲ್ಲಿ ಎಲ್ಲವೂ ಸರಿಯಾಗಿಲ್ಲ," ಎಂಬ ಮಾತನ್ನು ಯಾರೂ ಅಲ್ಲಗಳೆಯಲಾರರು.

ನಮ್ಮೀ ವಿಶಾಲ ಪ್ರಪಂಚದ ಸಾವಿರಾರು ಅಂಗಗಳಲ್ಲೊಂದು ಈ ಪೋಲೀಸ್ ಪ್ರಪಂಚ; ಸಮಾಜದ ಇತರ ಅಂಗಗಳಿಗಂಟಿಕೊಂಡಿರುವ ವ್ಯಾಧಿಗಳು ಈ ಅಂಗಕ್ಕೂ ಅಂಟಿಕೊಂಡಿರುವುದು ಸಹಜವೇ ಆಗಿದೆ.

ಈ ಅಂಗಗಳೆಲ್ಲವನ್ನೂ ಒಟ್ಟಾಗಿಯೇ ಚಿಕಿತ್ಸೆಗೊಳಪಡಿಸಿದಾಗ ಮಾತ್ರ ಸುಧಾರಣೆ ಸಾಧ್ಯವಾದೀತು. ಸಮಾಜವನ್ನೆಲ್ಲ ಸುಧಾರಿಸದೆ, ಕೇವಲ ಪೋಲೀಸರನ್ನು ಸುಧಾರಿಸಲು ಹೊರಡುವುದು ಬುದ್ಧಿವಂತಿಕೆಯ ಲಕ್ಷಣವಲ್ಲ.

ಅದು ಸುಧಾರಣೆಯ ವಿಚಾರ.

ಅದಕ್ಕೆ ಮೊದಲು ವಾಸ್ತವ ಸ್ಥಿತಿಯ ಸಮರ್ಪಕ ತಿಳಿವಳಿಕೆ ಅಗತ್ಯವಲ್ಲವೆ?

ಪೋಲೀಸರು 'ಕೆಡಲು' ಕಾರಣಗಳೇನೆಂಬುದನ್ನು ನಮ್ಮ ಮುಖಂಡರುಗಳಲ್ಲೆಷ್ಟು ಜನರು ಸರಿಯಾಗಿ ಬಲ್ಲರು? ನನ್ನೀ ಕಥೆಯನ್ನು ಓದಿ ಅವರೂ ಸತ್ಯದರ್ಶನ ಪಡೆಯಬಹುದಾಗಿದೆ.

ಕೊನೆಯದಾಗಿ ಓದುಗರಲ್ಲಿ ನನ್ನ ಪ್ರಾರ್ಥನೆಯಿಷ್ಟೆ:

ನನ್ನೀ ಕಥೆಯನ್ನು ಮೊದಲಿನಿಂದ ಕೊನೆಯವರೆಗೆ ಸಮಾಧಾನದಿಂದ ಓದಿನೋಡಿ. ಮಧ್ಯದಲ್ಲೇ ತಾಳ್ಮೆ ಕಳೆದುಕೊಂಡು, ಅವಸರದಿಂದ ತೀರ್ಪು ಕೊಡಬೇಡಿ. ಕಥೆಯನ್ನೆಲ್ಲ ಪೂರ್ತಿಯಾಗಿ ಓದಿದ ತರುವಾಯ ನೀವು ನನ್ನನ್ನು ಮೆಚ್ಚಿದರೂ ಅಷ್ಟೆ. ಖಂಡಿಸಿದರೂ ಅಷ್ಟೆ.

ಎಂದು ನಿಮ್ಮ,

ಕಥಾನಾಯಕ.

ನಾನು ಪೋಲೀಸನಾಗಿದ್ದೆ

ಹೆಡ್ - ಕ್ವಾರ್ಟರ್ಸ್

೧

ಹಳ್ಳಿಯಿಂದ ನಗರಕ್ಕೆ

ಬೆಳಗಿನಿಂದ ಕಾಯುತ್ತಿದ್ದ ಸೆಕೆಯನ್ನಾರಿಸಲೇನೊ ಎನ್ನುವಂತೆ ಇದ್ದಕ್ಕಿದ್ದ ಹಾಗೆ ಅಡ್ಡಮಳೆ ಸೆಳೆಯಲಾರಂಭಿಸಿತು. ಗುಡುಗು ಗದ್ದರಿಸಿತು. ಮಿಂಚು ಹರಿದಾಡಿತು – ಹಾವಿನ ನಾಲಗೆಯಂತೆ. ಆಕಾಶವೆಲ್ಲ ಒಂದು ಕಡಲಾಯಿತು. ಗಾಳಿ ಹುಚ್ಚುಹುಚ್ಚಾಗಿ ಬೀಸಿ ಆಲಿಕಲ್ಲುಗಳನ್ನು ತೂರಿತು. ಅನಂತರ ಪಡುವಲದ ಕಡೆಯಿಂದ ಮಳೆ ಹೊಡೆಯತೊಡಗಿತು. ಮಂಜಿನಗಡ್ಡೆಯನ್ನು ತಿಂದವರ ಹೊಟ್ಟೆಯಂತೆ ನೆಲ ತಂಪಾಯಿತು.

ಮುಂಗಾರುಮಳೆಯ ಮೋಜನ್ನು ದಿಟ್ಟಿಸುತ್ತ ನಾನು ಪಡಸಾಲೆಯಲ್ಲಿ ಕುಳಿತುಕೊಂಡಿದ್ದೆ. ಅಂಗಳದಲ್ಲಿ ಹುಡುಗರು ಆಲಿಕಲ್ಲುಗಳನ್ನು ಹೆಕ್ಕಿ ಬಾಯಿಗಿಟ್ಟುಕೊಳ್ಳುವ ಕಾಯಕದಲ್ಲಿ ಮಗ್ನರಾಗಿದ್ದರು. ನನ್ನ ಚಿಕ್ಕ ತಮ್ಮಂದಿರು, ವೀರಭದ್ರ, ಜಯಣ್ಣರೂ ಮಳೆಯ ನೀರಲ್ಲಿ ತೊಯಿಸಿಕೊಳ್ಳುತ್ತ ಆಲಿಕಲ್ಲು ಮುಕ್ಕುತ್ತಿದ್ದರು.

ಗೌಡರ ಹೊಲದಲ್ಲಿ ಕೋಲಿಯಾರಿಸುವ ಕೂಲಿಗೆ ಹೋಗಿದ್ದ. ನನ್ನ ತಾಯಿ ಪೂರ್ತಿಯಾಗಿ ತೊಯಿಸಿಕೊಂಡು ಮನೆಗೆ ಬಂದಳು. ಅಲ್ಲಲ್ಲಿ ನರೆತಿದ್ದ ಅವಳ ತಲೆಗೂದಲುಗಳಿಂದ ನೀರು ತಟತಟನೆ ತೊಟ್ಟಿಕ್ಕುತ್ತಿತ್ತು. ತಾಯಿ

ಬಂದವಳೆ ನನ್ನ ತಮ್ಮಂದಿರನ್ನು ಗದರಿಸಿ ಅವರು ಅಂಗಳವನ್ನು ತ್ಯಜಿಸಿ ಮನೆಯೊಳಗಡೆ ಬರುವಂತೆ ಮಾಡಿದಳು. ಮಳೆಯ ನೀರಿನಲ್ಲಿ ನೆನೆದು ಹೋಗಿದ್ದ ಸೆರಗನ್ನು ಹಿಂಡಿ ಗಾಳಿಯಲ್ಲಿ ಬೀಸುತ್ತಾ ಸೀರೆಯನ್ನು ಬದಲಿಸಲು ಒಳಗಡೆ ಹೋದಳು.

ಹೊರಗಡೆ ಗುಡುಗು ಗದ್ದರಿಸುತ್ತಿತ್ತು ಇನ್ನೂ. ಗಾಳಿ ಭಯಂಕರವಾಗಿ ಬೀಸುತ್ತಿತ್ತು ಇನ್ನೂ. ಎದೆಯನ್ನು ನಡುಗಿಸುವಂತೆ ಮಿಂಚು ಸೆಳೆಯುತ್ತಿತ್ತು ಇನ್ನೂ.

ನನ್ನ ಮನಸ್ಸಿನ ಆಕಾಶದಲ್ಲೂ ಗಾಳಿ ಮಿಂಚು ಗುಡುಗುಗಳ ಕೋಲಾಹಲಕ್ಕಾರಂಭವಾಗಿತ್ತು. ಮಳೆಯಲ್ಲಿ ನೆನೆದು ನಡುಗುತ್ತ ಬಂದ ನನ್ನ ತಾಯಿಯ ಮೂರ್ತಿ ಒಳಗಣ್ಣುಗಳೆದುರಿಗೆ ನಿಂತು ನನ್ನನ್ನು ಲಜ್ಜಿತನನ್ನಾಗಿ ಮಾಡುತ್ತಿತ್ತು.

ಅವಳು, ಐವತ್ತು ವರ್ಷ ವಯಸ್ಸಿನ ನನ್ನ ತಾಯಿ ಬೆಳಗಿನಿಂದ ಸಂಜೆಯವರೆಗೆ ಬಿಸಿಲಲ್ಲಿ ಮಳೆಯಲ್ಲಿ ಕಷ್ಟಪಡುತ್ತಾ ಬೇರೆಯವರ ಹೊಲಗಳಲ್ಲಿ ಕೂಲಿ ಕೆಲಸ ಮಾಡಿ ಪಾವು ಜೋಳ ಸಂಪಾದಿಸಿ ತಂದು ನಾಲ್ಕು ಜನರ ನಮ್ಮ ಸಂಸಾರ ನಡಸುತ್ತಿದ್ದಳು. ನಾನು, ಇಪ್ಪತ್ತರ ಹರಯದ ಅವಳ ಹಿರಿಯ ಮಗ, ಸಂಪಾದಿಸಿ ತಂದು ಮನೆತನದ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾದವನು ಬೆಳಗಿನಿಂದ ಸಂಜೆಯವರೆಗೆ ಮನೆಯಲ್ಲಿ ಬಿದ್ದುಕೊಂಡು ಪುಸ್ತಕಗಳನ್ನೋದುತ್ತ ಕಾಲ ತಳ್ಳುತ್ತಿದ್ದೆ, ಅವಳು ಬೆವರು ಸುರಿಸಿ ದುಡಿದು ತಂದ ಅನ್ನ ತಿಂದು ದೇಹ ಬೆಳಸುತ್ತಿದ್ದೆ.

ಅದು ಲಜ್ಜಾಸ್ಪದವಾದ ವಿಷಯವೆಂಬ ಕಲ್ಪನೆ ನನಗಿರಲಿಲ್ಲವೆಂದೇನೂ ಅಲ್ಲ. ಕೆಲಸವೆಂದರೆ ಪಲಾಯನ ಹೇಳಿಸುವ ಸೋಮಾರಿಯೂ ನಾನಾಗಿರಲಿಲ್ಲ. ನಿಜವಾಗಿ, ಸೋಮಾರಿತನವೆಂದರೆ ನನಗಾಗುತ್ತಿರಲಿಲ್ಲ. ನಾನೂ ಏನನ್ನಾದರೂ ಮಾಡಲು ಬಯಸುತ್ತಿದ್ದೆ. ಯಾವುದಾದರೊಂದು ಕೆಲಸ ಹಿಡಿದು ತಾಯಿಯನ್ನೂ ತಮ್ಮಂದಿರನ್ನೂ ಸುಖದಲ್ಲಿಡುವ ಆಸೆಯೂ ನನ್ನದಾಗಿತ್ತು.

ಆದರೆ, ಕೆಲಸವೆಂದ ಮಾತ್ರಕ್ಕೆ ಎಂಥದಾದರೊಂದು ಕೆಲಸಕ್ಕೂ ನಾನು ಹೋಗುವಂತಿರಲಿಲ್ಲ. ತಾಯಿಯ ಹಾಗೆ ಕೋಲಿ ಆರಿಸುವ ಕೂಲಿ ಕೆಲಸ ನಾನು ಮಾಡುವ ಹಾಗಿರಲಿಲ್ಲ. ಮ್ಯಾಟ್ರಿಕ್ ಪಾಸು ಮಾಡಿದ ಸುಶಿಕ್ಷಿತ ಯುವಕ ಅಶಿಕ್ಷಿತ ಹಳ್ಳಿಗರ ಹಾಗೆ ಕೂಲಿ ಕೆಲಸ ಮಾಡುವುದುಂಟೇ?

ನಿಜವಾಗಿ, ನನಗೇನೊ ಕೂಲಿ ಕೆಲಸದ ಬಗ್ಗೆ ತಾತ್ಸಾರವಿರಲಿಲ್ಲ. ಯಾವ ಕೆಲಸವಾದರೇನು, ಎಲ್ಲ ಒಂದೇ ಅಲ್ಲವೆ? ಮ್ಯಾಟ್ರಿಕ್ ಪಾಸಾದವನು ಕೂಲಿ ಮಾಡಬಾರದೆಂಬ ಕಟ್ಟಳೆಯೇನೂ ಇಲ್ಲವಲ್ಲ. ಯೋಗ್ಯವಾದ ನೌಕರಿ ಸಿಕ್ಕ ದಿದ್ದರೆ ಸುಶಿಕ್ಷಿತರಾದರೂ ಏನು ಮಾಡಬೇಕು? ಹೊಟ್ಟೆ ತುಂಬಿಸಿಕೊಳ್ಳು ವುದಕ್ಕೆ ಎಂಥ ದುಡಿಮೆಯಾದರೇನು?

"ಎರಡು ವರ್ಷ ನೌಕರಿಗಾಗಿ ಕಾದು ಕಾದು ಸಾಕಾಯಿತು ಅವ್ವಾ. ಇನ್ನೂ ಎಷ್ಟು ದಿನ ಅಂತ ಹೀಗೇ ಕೂತಿರಲಿ ಕೆಲಸಗೇಡಿಯಾಗಿ? ನಾನೂ ಕೂಲಿ ಮಾಡಿದರೆ ಹ್ಯಾಗೆ?" ಎಂದು ಒಂದುದಿನ ತಾಯಿಯೊಡನೆ ಮಾತು ತೆಗೆದಾಗ, ಅವಳು ಭಯಂಕರ ವಾರ್ತೆ ಕೇಳಿದವರಂತೆ ಬೆಚ್ಚಿ ಬಿದ್ದು,

"ಛೆ. ಛೆ. ಎಂಥಾ ಮಾತೋ ತಮ್ಮಾ! ಇಷ್ಟು ಕಲಿತು ನೀ ಕೂಲೀ ಮಾಡೂದಂದರ ಎಂಥಾ ಮಾತೋ ತಮ್ಮಾ! ನಕ್ಕಾರು ಕೇಳಿದವರು!" ಎಂದು ಹೇಳಿದ್ದಳು.

ನಾನು ಆ ವಿಷಯ ಮುಂದುವರಿಸಿರಲಿಲ್ಲ.

ತಾಯಿಯೆಂದುದೂ ನಿಜವಾದ ಮಾತೇ ಆಗಿತ್ತು. ಕೈಯಲ್ಲಿ ಕುರುಪಿ ಹಿಡಿದುಕೊಂಡು ನಾನು ಕೂಲಿಗೆ ಹೋಗಿದ್ದಲ್ಲಿ ಹಳ್ಳಿಯ ಜನರೆಲ್ಲರೂ ಖಂಡಿತ ವಾಗಿಯೂ ನಗುತ್ತಿದ್ದರು. ಮ್ಯಾಟ್ರಿಕ್ ಪಾಸಾಗಿದ್ದ ನಾನು ಸ್ಟೇಶನ್ ಮಾಸ್ತರಾಗುವೆನೆಂದೇ ಅವರ ನಂಬುಗೆಯಾಗಿತ್ತು.

ಮ್ಯಾಟ್ರಿಕ್ ಪಾಸಾದ ಹೊಸದರಲ್ಲಿ ನನಗೂ ಹಾಗೇ ಅನ್ನಿಸುತ್ತಿತ್ತು. ಸ್ಟೇಶನ್ ಮಾಸ್ತರ್ ಆದರೂ ಆಗಬಹುದು, ರೈಲು ಗಾರ್ಡ್ ಆದರೂ ಆಗ ಬಹುದು - ಎಂದೆಲ್ಲ ನಾನು ಕನಸು ಕಟ್ಟಿದ್ದೆ. ಒಂದು ವರ್ಷದವರೆಗೆ ಅರ್ಜಿ ಗಳನ್ನು ಬರೆಯುತ್ತಿರುವುದೇ ನನ್ನ ಕಾಯಕವಾಗಿತ್ತು. ಅರ್ಜಿಗಳನ್ನು ಬರೆಯುವುದು, ಟೈಪ್ ಮಾಡುವುದು, ಕಳ್ಳೇಕಾಯಿ ನಗರಕ್ಕೆ ಹೋಗಿ ನೌಕರಿಗಾಗಿ ಅವರಿವರ ವಶೀಲಿ ದೊರಕಿಸಲು ಯತ್ನಿಸುವುದು, ಲಂಚದ ಬೇಡಿಕೆ ಬಂದಾಗ ಕೈಬೀಸುತ್ತಾ ಹಳ್ಳಿಗೆ ಹಿಂದಿರುಗುವುದು. ಒಂದು ವರ್ಷ ಹಾಗೆ ಅಲೆದ ತರುವಾಯ ನನ್ನ ಕನಸುಗಳೆಲ್ಲ ಒಡೆದು ಹೋಗಿದ್ದುವು. ಲಂಚ ಕೊಡ ದಿದ್ದರೆ ನೌಕರಿ ದೊರೆಯುವುದಿಲ್ಲವೆಂಬ ಕಟುಸತ್ಯದ ಅರಿವು ನನಗಾಗಿತ್ತು.

ಲಂಚ ಕೊಡಬಾರದೆಂಬ ತತ್ತ್ವಕ್ಕೆ ನಾನೇನು ಬದ್ಧನಾಗಿರಲಿಲ್ಲ.

ನನಗಾಗಬೇಕಾಗಿದ್ದುದು ಒಂದು ನೌಕರಿ; ನಮ್ಮ ನಾಲ್ಕು ಜನರ ಹೊಟ್ಟೆ ತುಂಬುವಷ್ಟೇ ಸಂಬಳದ ನೌಕರಿ. ಅದನ್ನು ದೊರಕಿಸಲೆಂದು ಲಂಚ ತೆರಲೂ ನಾನು ಸಿದ್ಧನಾಗಿದ್ದೆ.

ಆದರೆ, ನನ್ನ ಹತ್ತಿರ ಕೊಂಚವೂ ಹಣವಿರಲಿಲ್ಲ.

ಹಣ ಬರುವುದಾದರೂ ಎಲ್ಲಿಂದ?

ನಮ್ಮ ಮನೆತನ ರೈತರದಾದರೂ ನಮಗೆ ಸ್ವಂತದ ಭೂಮಿಯೇನೂ ಇರಲಿಲ್ಲ. ಕೂಲಿ ಮಾಡಿ ಅರಹೊಟ್ಟೆಯಿಂದಿರುವ ಕಟು ಜೀವನದಿಂದ ಬೇಸರ ಪಟ್ಟುಕೊಂಡು ನನ್ನ ತಂದೆ ಪೋಲೀಸ್ ಖಾತೆಯಲ್ಲಿ ಸಶಸ್ತ್ರ ಸಿಪಾಯಿಯೆಂದು ಕೆಲಸಕ್ಕೆ ಸೇರಿ, ಇಪ್ಪತ್ತು ವರ್ಷ ಸೇವೆ ಸಲ್ಲಿಸಿ, ನನ್ನನ್ನು ಮ್ಯಾಟ್ರಿಕ್‌ವರೆಗೆ ಓದಿಸಿ, ಯಾವುದೋ ಕಾಹಿಲೆಗೆ ಬಲಿಯಾಗಿ ತೀರಿಕೊಂಡಾಗ ನಮ್ಮ ಮನೆಯಲ್ಲಿ ಒಂದು ರೂಪಾಯಿಯೂ ಉಳಿದಿರಲಿಲ್ಲ. ಅವನಿಗೆ ಸಿಕ್ಕುತ್ತಿದ್ದ ಇಪ್ಪತ್ತು ರೂಪಾಯಿ ಸಂಬಳ ನಮ್ಮ ಸಂಸಾರ ನಿರ್ವಾಹಕ್ಕೇ ಸಾಲುತ್ತಿರಲಿಲ್ಲ. ಆದರೂ, ಹೇಗೋ ಕಷ್ಟಪಟ್ಟು ನನ್ನ ಶಿಕ್ಷಣಕ್ಕೆ ಕಾಸು ಉಳಿಸಿ ನನ್ನನ್ನು ಓದಿಸಿದ್ದರು. ಮ್ಯಾಟ್ರಿಕ್ ಪಾಸಾದೊಡನೆ ನಾನು ದೊಡ್ಡ ನೌಕರಿ ಹಿಡಿದು ನೂರು ರೂಪಾಯಿ ಸಂಬಳ ತರುವೆನೆಂದೂ, ಮನೆತನದ ಕಷ್ಟಗಳನ್ನೆಲ್ಲ ನಿವಾರಿಸುವೆನೆಂದೂ ನನ್ನ ತಂದೆ ತಾಯಿಗಳು ಭಾವಿಸಿದ್ದರು. ನನಗೆ ನೌಕರಿ ದೊರೆಯದಿದ್ದುದನ್ನು ಕಂಡು ನಿರಾಶನಾಗಿ ಆ ವ್ಯಥೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಾಣ ಬಿಟ್ಟಿದ್ದ ನನ್ನ ತಂದೆ. ಅವನ ಅಂತ್ಯವಿಧಿಗಳಿಗಾಗಿ ಅವಶ್ಯವಿದ್ದ ಮೂರು ರೂಪಾಯಿಗಳು ಕೂಡಾ ನಮ್ಮಲ್ಲಿರಲಿಲ್ಲ. ಗೌಡರಿಂದ ಕೈಗಡ ಪಡೆದು ಆ ಕಾರ್ಯ ನಡಸುವ ಪ್ರಸಂಗ ಬಂದಿತ್ತು. ಕೊರಳಲ್ಲಿನ ತಾಳಿಯನ್ನು ಬಿಟ್ಟರೆ ನಮ್ಮ ತಾಯಿಯ ಮೈ ಮೇಲೆ ಬೇರೆ ಬಂಗಾರವಿರಲಿಲ್ಲ.

ಇನ್ನು ಹಣ ಬರುವುದಾದರೂ ಎಲ್ಲಿಂದ?

ನೌಕರಿ ದೊರಕಿಸಲು ನಾನು ಲಂಚ ಕೊಡುವುದಾದರೂ ಏನನ್ನು?

ಅಂತೆಯೆ, ಕಳ್ಳೇಕಾಯಿ ನಗರಕ್ಕೆ ಹೋದವನು ಮುಖ ಬಾಡಿಸಿಕೊಂಡು ಹಳ್ಳಿಗೆ ಹಿಂದಿರುಗುತ್ತಿದ್ದೆ.

ನನ್ನ ಕಂದಿದ ಮುಖ ನೋಡಿ ಒಂದು ನಿಟ್ಟುಸಿರು ಬಿಟ್ಟು ಮೌನವಾಗಿ ತನ್ನ ಕೆಲಸಕ್ಕೆ ಹೋಗುತ್ತಿದ್ದಳು ತಾಯಿ. ಬಡತನದ ಸಾವಿರ ಸಂಕಷ್ಟ

ಗಳನ್ನೆದುರಿಸುವುದರಲ್ಲಿ ಸೋತು ಹೋಗಿದ್ದ, ದುರ್ಬಲ ದೇಹದ ನನ್ನ ಆ ತಾಯಿ ಆ ವಯಸ್ಸಿನಲ್ಲೂ ಕಾಯಕಷ್ಟ ಮಾಡಬೇಕಾಗಿ ಬಂದಿತ್ತು. ಎಷ್ಟೋ ಸಲ ನನ್ನ ಗಂಟಲಲ್ಲಿ ರೊಟ್ಟಿ ಇಳಿಯುವುದೂ ಕಷ್ಟವಾಗುತ್ತಿತ್ತು. ಕತ್ತು ಬಿಗಿದು ಬಂದು ಕಣ್ಣಂಚಿನಲ್ಲಿ ನೀರು ಕಾಣಿಸಿಕೊಳ್ಳುತ್ತಿತ್ತು. ಅಂಥ ಸಂದರ್ಭಗಳಲ್ಲೆಲ್ಲ ತಾಯಿ ನನ್ನನ್ನು ಸಂತೈಸಿ ಸಮಾಧಾನದ ಮಾತುಗಳನ್ನಾಡುತ್ತಿದ್ದಳು.

"ನೀನ್ಯಾಕ ಚಿಂತೀ ಮಾಡುತೀ ಶಿವಣ್ಣಾ? ಹೊಟ್ಟಿ ತುಂಬಾ ಉಣ್ಣಪ್ಪಾ."

ಗದಗದನೆ ನಡುಗುವ ಧ್ವನಿಯಲ್ಲಿ ನಾನು ಹೇಳುತ್ತಿದ್ದೆ :

"ಹ್ಯಾಗಾದರೂ ಊಟ ಮಾಡಲಿ ಅವ್ವಾ?"

"ಐ, ಬಿಡು ಬಿಡು ತಮ್ಮಾ. ನೌಕರಿ ಸಿಗಲಿಲ್ಲಂತ ಕಣ್ಣೀರು ಹಾಕುತಾರೇನು ಯಾರಾದರೂ! ನೀನೇನು ಕಲಿತು ಚಲೋ ಶ್ಯಾಣ್ಯಾ ಆಗಿದ್ದೀ. ನಿನ್ನಂಥಾವಗ ನೌಕರಿ ಸಿಗೂದಿಲ್ಲಂದರ ಯಾರಾದರೂ ನಕ್ಕಾರು. ಏನು ಸ್ವಲ್ಪ ತಡಾ ಆದೀತು. ಆಗಲೇಳು. ಇಂದಿಲ್ಲಾ ನಾಳೆ ದೇವರು ಕಣ್ಣು ತಗದಾನು."

ಅವಳ ಪ್ರೀತಿಯ ಆಳದಲ್ಲಿ ಮುಳುಗಿ ನನ್ನ ದುಃಖವನ್ನು ನಾನು ಮರೆಯುತ್ತಿದ್ದೆ. ನನ್ನ ದೃಷ್ಟಿಯಲ್ಲಿ ಅವಳು ಕೇವಲ ತಾಯಿಯಾಗಿರಲಿಲ್ಲ; ದಯೆ, ಕಾರುಣ್ಯ, ವಾತ್ಸಲ್ಯ ತ್ಯಾಗ ಮೊದಲಾದ ಉದಾತ್ತ ಗುಣಗಳ ಮೂರ್ತಿಮಂತ ಪ್ರತೀಕವಾಗಿದ್ದಳು. ಅವಳಂಥ ತಾಯಿಯನ್ನು ಪಡೆದ ನಾನೇ ಧನ್ಯ ಎಂದುಕೊಂಡು ಪುಲಕಿತನಾಗುತ್ತಿದ್ದೆ. ನನಗೊಂದು ನೌಕರಿ ದೊರಕಿದ ಬಳಿಕ ಆಕೆಗೆ ಯಾವ ಕೆಲಸವನ್ನೂ ಮಾಡಗೊಡದೆ ಸಂಪೂರ್ಣ ಸುಖದಲ್ಲಿರಿಸುವುದೆಂದು ಮನಸ್ಸಿನಲ್ಲೇ ಎಣಿಕೆ ಹಾಕಿಕೊಂಡಿದ್ದೆ.

ಮನಸ್ಸಿನಲ್ಲಿನ ಎಣಿಕೆ! ಆ ಎಣಿಕೆಗಳಿಗೊಂದು ಲೆಕ್ಕವೆ!

ನೌಕರಿಯಿಂದ ಬರುವ ಸಂಬಳವನ್ನೆಲ್ಲ ತಾಯಿಯ ಕೈಗೆ ಕೊಡುವುದು, ಇಬ್ಬರು ತಮ್ಮಂದಿರಿಗೂ ಉಚ್ಚ ಶಿಕ್ಷಣ ಕೊಡಿಸುವುದು, ನಾಲ್ಕೈದು ವರ್ಷಗಳಲ್ಲಿ ಸ್ವಲ್ಪ ಹಣ ಉಳಿಸಿ ಹಳ್ಳಿಯಲ್ಲಿನ ಈ ಹಾಳು ಮನೆಯನ್ನು ಹೊಸದಾಗಿ ಕಟ್ಟಿಸುವುದು, ಮತ್ತೆ ನಾಲ್ಕೈದು ವರ್ಷ ಕಳೆದ ಬಳಿಕ ಒಂದೆರಡು ಕೂರಿಗೆ ಹೊಲ ಖರೀದಿ ಮಾಡುವುದು, ನೌಕರಿಯಿಂದ ನಿವೃತ್ತನಾದ ತರುವಾಯ

ಹಳ್ಳಿಗೆ ಹಿಂದಿರುಗಿ ಬಂದು ಬೇಸಾಯದಲ್ಲಿ ಮನಸ್ಸು ತೊಡಗಿಸಿ ನೆಮ್ಮದಿಯಿಂದಿರುವುದು....

ಎಣಿಕೆಗಳು. ಬರಿಯ ಎಣಿಕೆಗಳು.

ಕನಸುಗಳು. ಬರಿಯ ಕನಸುಗಳು.

೧೯೩೬ ರಲ್ಲಿ ಆರಂಭವಾದ ಆ ಕನಸುಗಳು ಒಂದೂವರೆ ವರ್ಷದ ಅವಧಿಯಲ್ಲಿಯೇ ಒಡೆದು ಅದೃಶ್ಯವಾಗಿದ್ದುವು. ಮತ್ತೆ ಅರ್ಧವರ್ಷದಷ್ಟು ಸಮಯ ಉರುಳಿತ್ತು. ಈಗ ಕನಸು ಕಾಣುವ ಪ್ರವೃತ್ತಿಯೆ ನನ್ನಲ್ಲಿ ಇಲ್ಲವಾಗಿತ್ತು. ಬೆಳಗಿನಿಂದ ಇರುಳಿನ ವರೆಗೆ ಒಂದು ಬಗೆಯ ಶೂನ್ಯದಲ್ಲಿ ನನ್ನ ಮನಸ್ಸು ಅಲೆದಾಡುತ್ತಿರುತ್ತಿತ್ತು. ಪುಸ್ತಕವನ್ನು ಕೈಯಲ್ಲಿ ಹಿಡಿದು ಕುಳಿತರೆ ಹಾಗೇ ಗಂಟೆಗಳ ಕಾಲ ಕುಳಿತಿರುತ್ತಿದ್ದೆ. ತಾಯಿ ಬಂದು ಕೂಗಿದಾಗಲೇ ಎಚ್ಚರವಾಗುತ್ತಿತ್ತು. ಹಳ್ಳಿಯ ಹಿಂಭಾಗದಲ್ಲಿನ ಗುಡ್ಡಕ್ಕೆ ಹೋಗಿ ಕಲ್ಲುಬಂಡೆಯೊಂದರ ಮೇಲೆ ಕುಳಿತು ಮೋಡಗಳನ್ನೊ ಹೊಲಗಳನ್ನೊ ಗಿಡಗಳನ್ನೊ ದಿಟ್ಟಿಸುತ್ತ ಗಂಟೆಗಳ ಕಾಲ ಹಾಗೇ ಕುಳಿತಿರುತ್ತಿದ್ದೆ. ದನಗಾಹಿಗಳು ಬಂದು ಕೂಗಿದರೆ ಎಚ್ಚರವಾಗುತ್ತಿತ್ತು. ಆಗಾಗ ನನ್ನಷ್ಟಕ್ಕೆ ನನಗೇ ಭೀತಿಯಾಗುತ್ತಿತ್ತು–ನೌಕರಿ ದೊರೆಯಲ್ಲಿಲ್ಲವೆಂದು ನಾನು ಹುಚ್ಚನಾಗುವೆನೊ ಏನೊ ಎಂದು. ಕೂಳು ಕಹಿಯಾಗಿತ್ತು, ಬಾಳು ಕಹಿಯಾಗಿತ್ತು, ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ಯೋಚನೆಯೂ ನಾಲ್ಕೈದು ಬಾರಿ ತಲೆಯಲ್ಲಿ ಸುಳಿದು ಮಾಯವಾಗಿತ್ತು. ನಾನೊಬ್ಬ ಇಲ್ಲದಂತಾದರೆ ತಾಯಿಯ ಭಾರ ಸ್ವಲ್ಪವಾದರೂ ಕಡಿಮೆಯಾಗಬಹುದು....ಆದರಾ ಯೋಚನೆ ಬಹಳ ಹೊತ್ತು ಉಳಿಯುತ್ತಿರಲಿಲ್ಲ. ನಿರಾಸೆಯನ್ನು ಕೊಡಹಿ ನಾನು ಮತ್ತೆ ಕೊಂಚಮಟ್ಟಿಗಾದರೂ ಆಶಾವಾದಿಯಾಗುತ್ತಿದ್ದೆ. "ಕಲ್ಲೊಳಗೆ ಪುಟ್ಟಿ ಕೂಗುವ ಕಪ್ಪೆಗಳಿಗೆಲ್ಲ" ಆಹಾರವಿತ್ತು ನೋಡಿಕೊಳ್ಳುವ ಆ ದೇವರು ನನ್ನನ್ನೂ ಕೈ ಬಿಡಲಿಕ್ಕಿಲ್ಲವೆಂದೇ ನನಗೆನ್ನಿಸುತ್ತಿತ್ತು.

ಹೀಗೆ, ಒಮ್ಮೆ ಆಸೆ, ಒಮ್ಮೆ ನಿರಾಸೆ. ಒಮ್ಮೆ ಉತ್ಸಾಹ, ಒಮ್ಮೆ ನಿರುತ್ಸಾಹ, ಒಮ್ಮೆ ಮಂಕು. ತಾಯಿ ಕೂಲಿಗೆ ಹೋಗುತ್ತಿದ್ದಳಾದುದರಿಂದ ಎರಡು ಹೊತ್ತು ರೊಟ್ಟಿ ಅಂಬಲಿಗಂತೂ ಕೊರತೆಯಾಗಿರಲಿಲ್ಲ. ಕೂಲಿಯಿಲ್ಲದ ದಿನಗಳಲ್ಲಿ ಒಂದು ತುತ್ತು ತಿಂದು ಅರಹೊಟ್ಟೆಯಿಂದಿರುವುದೂ ನಮಗೆ ಅಭ್ಯಾಸ

ವಾಗಿತ್ತು. ಹೊಟ್ಟೆಯದೇ ತಾಪತ್ರಯವಿರುವಾಗ ಬಟ್ಟೆಯ ಮಾತು ಕೇಳ ಬೇಕಾಗಿಲ್ಲ. ತಾಯಿಯ ಸೀರೆಗಳೆರಡೂ ಹರಿದು ಹೋಗಿದ್ದುವು. ಕುಬುಸಗಳೂ ಅಷ್ಟೆ. ಅವುಗಳನ್ನೆ ಅಲ್ಲಿ ಇಲ್ಲಿ ಹೊಲಿದು, ಅಲ್ಲಿ ಇಲ್ಲಿ ತೇಪೆ ಹಚ್ಚಿ ಅವಳು ಸಾಗಿಸಿದ್ದಳು. ವೀರಭದ್ರ, ಜಯಣ್ಣರ ಮತ್ತು ನನ್ನ ಅಂಗಿಗಳದೂ ಅಂಥದೇ ಗತಿ. ದಿನಗೂಲಿಯ ಪಾವು ಜೋಳ ನಮ್ಮ ಹೊಟ್ಟೆಗೇ ಸಾಲುತ್ತಿರಲಿಲ್ಲ. ಬಟ್ಟೆಗಳನ್ನು ಕೊಳ್ಳಲು ಹಣ ಎಲ್ಲಿಂದ ಬರಬೇಕು? ಮೊದಲು ನಾನು ನೌಕರಿ ಹಿಡಿಯಬೇಕು. ನನ್ನ ಸಂಬಳ ಬಂದ ಬಳಿಕ ನಾವೆಲ್ಲ ಹೊಸ ಬಟ್ಟೆ ಕಾಣ ಬೇಕು. ಅಲ್ಲಿಯವರೆಗೂ ಹರಕು ಅರಿವೆಗಳ ಮೇಲೇ ಸಾಗಬೇಕು. ನನಗೆ ನೌಕರಿ ಸಿಕ್ಕುವುದು ಎಂದೋ? ತಾಯಿಗೊಂದು ಹೊಸ ಸೀರೆ ಬರುವುದು ಎಂದೋ? ಚಿಂದಿ ಚಿಂದಿಯಾಗಿರುವ ಅವಳ ಸೀರೆ....

"ಥೂ! ನಾನು ಗಂಡಸಾಗಿ ಹುಟ್ಟಿದ್ದು ವ್ಯರ್ಥ! ನನಗಾಗಿ ಎಷ್ಟೋ ಕಷ್ಟಪಟ್ಟು ನಾನು ಮ್ಯಾಟ್ರಿಕ್ ಮುಗಿಸುವಂತೆ ಮಾಡಿದ ಈ ತಾಯಿಯನ್ನು ಹರಕು ಸೀರೆಯಲ್ಲಿ ಹೆರರ ಹೊಲಗಳಲ್ಲಿ ದುಡಿಸುತ್ತಿದ್ದೇನಲ್ಲ. ನಾಚಿಕೆಗೇಡು.... ನಾಚಿಕೆಗೇಡು!" ಎಂದು ನನ್ನಷ್ಟಕ್ಕೆ ನಾನೆ ಅಂದುಕೊಳ್ಳುತ್ತ ಪಡಸಾಲೆ ಯಿಂದೆದ್ದು ಅಡುಗೆಯ ಮನೆಗೆ ಬಂದೆ. ಆ ವೇಳೆಗಾಗಲೆ ಒಲೆಯಲ್ಲಿ ಬೆಂಕಿ ಯುರಿಸಿ, ನವಣೆಯ ಮಡಕೆಯನ್ನಿರಿಸಿ ಕೈ ಕಾಯಿಸುತ್ತ ಕುಳಿತಿದ್ದಳು ತಾಯಿ. ವೀರಭದ್ರ ಅವಳ ಬಲ ಭುಜಕ್ಕೂ ಜಯಣ್ಣ ಎಡ ಭುಜಕ್ಕೂ ಅಂಟಿ ಕೊಂಡಿದ್ದರು.

ನಾನು ಮನಸ್ಸಿನಲ್ಲಿ ಒಂದು ನಿರ್ಧಾರ ಮಾಡಿಕೊಂಡೇ ಬಂದಿದ್ದವನು ತಾಯಿಯ ಬಳಿಯಲ್ಲಿ ಕುಳಿತು ನಿಧಾನವಾಗಿ ಆರಂಭಿಸಿದೆ:

"ನಾಳೆ ಮುಂಜಾನೆಯ ರೈಲಿಗೆ ನಾನು ಓರೆಕೋರೆ ನಗರಕ್ಕೆ ಹೋಗು ತ್ತೇನೆ ಅವ್ವಾ."

"ಯಾಕಪ್ಪಾ? ಅಲ್ಲೇನಾದರೂ ನೌಕರಿ ಸಿಗೂದೈತೇನು?"

"ಇಲ್ಲೇ ಕೂತುಕೊಂಡಿದ್ದರೆ ಕಡೆಯವರೆಗೂ ನೌಕರಿ ಸಿಗಲಿಕ್ಕಿಲ್ಲ ಅವ್ವಾ."

"ಮೊನ್ನೆ ಒಂದು ಅರ್ಜಿ ಹಾಕಿದ್ದಿಯಲ್ಲ, ಅದರದೇನಾತು?"

"ಅದೂ ಸಿಗುವ ಹಾಂಗ ಕಾಣುವದಿಲ್ಲ. ಎಲ್ಲಾ ಕಡೆಗೂ ವಶೀಲಿ ಬೇಕು. ಲಂಚ ಬೇಕು."

ನಾನು ನಗರಕ್ಕೆ ಹೋಗುವ ಮಾತು ತೆಗೆಯುತ್ತಲೂ ಆರು ವರ್ಷ ವಯಸ್ಸಿನ ಪುಟ್ಟ ಜಯಣ್ಣನಿಗೂ ನನ್ನೊಡನೆ ಹೊರಡುವ ಆಸೆಯಾಯಿತು. "ನಾನೂ ಬರ್‍ತೀನಿ ಅಣ್ಣಾ," ಎಂದು ಅವನು ರಾಗಕ್ಕಾರಂಭಿಸಿದ.

"ಇನ್ನೊಂದೆರಡು ತಿಂಗಳು ಹೋದ ವ್ಯಾಲ ನೀನು ಬಂದೀಯಂತೆ ಜಯಣ್ಣಾ."

"ನಾನು ಅಣ್ಣಾ ?" ಎಂದು ಕೇಳಿದ, ಹುತ್ತು ವರ್ಷಗಳ ವೀರಭದ್ರ. ಹಳ್ಳಿಯ ಸಾಲೆಯಲ್ಲಿ ಮೂರನೇ ತರಗತಿಯಲ್ಲಿ ಅವನು ಓದುತ್ತಿದ್ದ.

"ನೀನೂ ಬಂದೀಯಂತೆ. ಅವ್ವನೂ ಬಂದಾಳು. ಎಲ್ಲರೂ ಹೋಗೋಣ," ಎಂದೆ ನಾನು.

ಸುಕ್ಕುಗಟ್ಟುತ್ತಿದ್ದ ತಾಯಿಯ ಮುಖದ ಮೇಲೆ ಸಂತೋಷದ ನೆರಳು ಹರಡಿದಂತಾಯಿತು.

"ಏನಾರ ನೌಕರಿ ಸಿಕ್ಕೈತೇನೋ ಶಿವಣ್ಣಾ ?"

"ಇಲ್ಲವ್ವಾ, ಇನ್ನೂ ಸಿಕ್ಕಿಲ್ಲ. ಅಲ್ಲಿ ಹೋದರೆ ಸಿಗಬಹುದು ಅಂತನಿಸುತೈತಿ."

"ಅರೀದ ಊರು. ದೊಡ್ಡ ಪಟ್ಟಣ. ಅಲ್ಲಿ ಇರಾಂವ ಎಲ್ಲಿ, ಉಣ್ಣಾವ ಎಲ್ಲಿ ? ಅದಕ್ಕೆಲ್ಲಾ ರೊಕ್ಕ ಬ್ಯಾಡಾ ?"

"ಏನೂ ಬ್ಯಾಡವ್ವ. ದೇವರು ಏನಾದರೂ ಹಾದಿ ತೋರಿಸಿಯಾನು. ಖರ್ಚಿಗಷ್ಟು ರೊಕ್ಕ ಆದರೆ ಸಾಕು."

"ಅಲ್ಲಿ ಹೋಗಿ ಇಳಿದುಕೊಳ್ಳೂದಕ್ಕಾದರೂ ಒಂದು ಜಾಗಾ ಬ್ಯಾಡೇನಪ್ಪಾ ?"

"ನನ್ನ ಗೆಳೆಯನೊಬ್ಬ ಇದಾನವ್ವ. ಅವರಲ್ಲಿರುತೀನಿ. ಅವನೂ ನಾನೂ ಕೂಡೇ ಹೈಸ್ಕೂಲಿನಾಗ ಕಲಿತವರು. ಅವನೀಗ ನೌಕರಿ ಮಾಡುತಾ ಇದ್ದಾನ. ತಿಂಗಳೊಪ್ಪತ್ತು ಅವರ ಮನಿಯೊಳಗ ಊಟಾ ಮಾಡಬಹುದು."

ಆಗಲೂ ತಾಯಿಗೆ ಸಮಾಧಾನವಾಗಲಿಲ್ಲ. ಕೈಲಿ ಕಾಸಿಲ್ಲದ ನನ್ನನ್ನು ಪರಸ್ಥಳಕ್ಕೆ ಕಳಿಸಲು ಅವಳು ಸಿದ್ಧಳಿರಲಿಲ್ಲ. ಅಲ್ಲದೆ, ಬೇರೆಯವರಿಗೊಂದು ಭಾರವಾಗಿ ನಾನಿರುವುದೂ ಅವಳಿಗೆ ಒಪ್ಪಿಗೆಯಾಗುವಂತಿರಲಿಲ್ಲ. ರೈತಕುಲದಲ್ಲಿ ಹುಟ್ಟಿ, ಕಾಯಕಷ್ಟದಿಂದ ಜೀವನ ಸಾಗಿಸಿದ್ದ ಸ್ವಾಭಿಮಾನಿ ಸ್ತ್ರೀ ನನ್ನ ತಾಯಿ.

ಪರರ ಕೂಳಿಗೆ ಎಂದೂ ಕೈಚಾಚಿದಾಕೆಯಲ್ಲ. ಅವಳ ಆ ಸ್ವಾಭಿಮಾನದ ಕೆಚ್ಚು ನನ್ನಲ್ಲೂ ಮೂಡಿ ಬಂದಿದ್ದಿತಾದರೂ ಆ ಸಂದರ್ಭದಲ್ಲಿ ಕೆಲದಿನಗಳ ಮಟ್ಟಿಗಾದರೂ ಅದಕ್ಕೆ ತಿಲಾಂಜಲಿ ಕೊಡದೆ ಬೇರೆ ಗತಿಯಿರಲಿಲ್ಲ. ಓರೆಕೋರೆ ನಗರದಲ್ಲಿ ಬ್ಯಾಂಕಿನಲ್ಲಿ ಗುಮಾಸ್ತೆಯಾಗಿದ್ದ ನನ್ನ ಗೆಳೆಯ ಚೆನ್ನಪ್ಪನೂ ಒಳ್ಳೆಯ ಯುವಕ. ಹೈಸ್ಕೂಲಿನಲ್ಲಿದ್ದಾಗ ಅವನೂ ನಾನೂ ಸೋದರರಂತೆ ನಡೆದುಕೊಂಡು ಬಂದಿದ್ದೆವು. ಚೆನ್ನಪ್ಪ ಸಿರಿವಂತನಲ್ಲವಾದರೂ ತುಂಬಾ ಉದಾರಿಯಾಗಿದ್ದ. ಓರೆಕೋರೆ ನಗರಕ್ಕೆ ಬಂದು ತಮ್ಮ ಮನೆಯಲ್ಲಿದ್ದು, ನೌಕರಿ ಹುಡುಕುವುದೊಳ್ಳೆಯದೆಂದು ಅವನೇ ನನಗೆ ಎರಡು ಮೂರು ಬಾರಿ ಕಾಗದ ಬರೆದಿದ್ದ. ನಾನೇ ನಿಶ್ಚಯಕ್ಕೆ ಬಂದಿರಲಿಲ್ಲ. ಆದರೆ, ಅಂದು ಸಾಯಂಕಾಲ ತಾಯಿ ಮಳೆಯಲ್ಲಿ ತೋಯಿಸಿಕೊಂಡು ಬಂದುದ್ದನ್ನು ಕಂಡಾಗ ನನ್ನ ಮನಸ್ಸು ಥಟ್ಟನೆ ನಿರ್ಧಾರಕ್ಕೆ ಬಂದುಮುಟ್ಟಿತ್ತು. ಯಾವ ನೌಕರಿಯೂ ಸಿಗದಿದ್ದರೆ ಕೊನೆಗೆ ಪೋಲೀಸ್ ಕೆಲಸವಾದರೂ ಚಿಂತೆಯಿಲ್ಲ. ನನ್ನ ತಂದೆಯೂ ಪೋಲೀಸನಾಗಿರಲಿಲ್ಲವೆ? ನಾನೇಕೆ ಆಗಬಾರದು ?

ಆದರೆ, ತಾಯಿಯ ಎದುರಿಗೆ ಮಾತ್ರ ಆ ವಿಚಾರವನ್ನು ನಾನು ಹೇಳಲಿಲ್ಲ. ನಾನು ಯಾವುದಾದರೊಂದು ಕಚೇರಿಯಲ್ಲಿ ಗುಮಾಸ್ತೆಯಾಗಬೇಕೆಂದು ಅವಳು ಆಶಿಸುತ್ತಿದ್ದಳು. ಗುಮಾಸ್ತೆಯ ನೌಕರಿಗಿದ್ದ ಮರ್ಯಾದೆ ಪೋಲೀಸ್ ಕೆಲಸಕ್ಕೆಲಿಂದ ಬಂದೀತು? ಈಗಲೂ ಅಷ್ಟೆ, ಆಗಲೂ ಅಷ್ಟೆ: ಪೋಲೀಸ್ ಖಾತೆಯೆಂದರೆ ಬಹಳ ಹೊಲಸು ಖಾತೆಯೆಂಬ ಕೆಟ್ಟ ಹೆಸರು. ನನ್ನ ತಂದೆಯೂ ಅನೇಕ ಬಾರಿ ನನಗೆ ಹೇಳಿದ್ದ: "ಏನಾದರೂ ಪೋಲೀಸ್ ಆಗಬ್ಯಾಡ ಶಿವಣ್ಣಾ. ಅದರಂಥಾ ಕೆಟ್ಟ ಖಾತೆ ಯಾವದೂ ಅಲ್ಲ. ಈ ಇಪ್ಪತ್ತು ವರ್ಷ ನನ್ನ ರಕ್ತ ಕುಡಿದೈತಿ ಆ ಖಾತೆ. ನೀನು ಮಾತ್ರ ಪ್ರಾಣ ಹೋಗುವ ಪ್ರಸಂಗ ಬಂದರೂ ಪೋಲೀಸ್ ಮಾತ್ರ ಆಗಬ್ಯಾಡ."

ತಂದೆಯ ಆ ನುಡಿಗಳು ಯಾವಾಗಲೂ ನನ್ನ ತಲೆಯಲ್ಲಿ ದುಮುದುಮಿಸುತ್ತಿದ್ದುವು. ಪೋಲೀಸನಾಗುವ ಬಯಕೆ ನನಗೂ ಇರಲಿಲ್ಲ. ಕೊನೆಯ ಉಪಾಯವೆಂದು ಅದಕ್ಕೆ ಮೊರೆಹೋಗಬೇಕಾಗಿ ಬಂದಿದ್ದಿತಷ್ಟೆ. ಓರೆಕೋರೆ

ನಗರದಲ್ಲಿ ಬೇರಾವುದಾದರೊಂದು ನೌಕರಿ ಸಿಕ್ಕಿದರೂ ಸಿಕ್ಕಬಹುದು ಎಂಬ ಕ್ಷೀಣ ಆಸೆಯೊಂದು ನನ್ನೆದೆಯಲ್ಲಿ ಇನ್ನೂ ಜೀವದಿಂದಿತ್ತು.

ತಾಯಿಗೆ ಪರಿಪರಿಯಾಗಿ ತಿಳಿಸಿ ಹೇಳಿ, ನಗರಕ್ಕೆ ಹೊರಡಲು ಅವಳ ಸಮ್ಮತಿ ದೊರಕಿಸಿ, ಯಾರ ಹತ್ತಿರವೊ ಕೈಗಡ ಬೇಡಿ ತಂದು ಅವಳು ಕೊಟ್ಟ ಮೂರು ರೂಪಾಯಿಗಳನ್ನು ಕೋಟಿನ ಕಿಸೆಗೆ ಸೇರಿಸಿ ಮಾರನೆಯ ದಿನ ನಾನು ಹೊರಟು ನಿಂತೆ. ನಾನು ಮಾಡಿಕೊಳ್ಳಬೇಕಾದ ಸಿದ್ಧತೆಯೇನೂ ಇರಲಿಲ್ಲ. ಅಂಗಿಯನ್ನೂ ಪಾಯಜಾಮವನ್ನೂ ಕಂಬಳಿಯಲ್ಲಿ ಸುತ್ತಿ, ಸುರುಳಿ ಮಾಡಿ ಅದಕ್ಕೊಂದು ದಾರ ಬಿಗಿದು ಕಟ್ಟಿದುದಾಯಿತು. ತಾಯಿ ಕಟ್ಟಿಕೊಟ್ಟ ರೊಟ್ಟಿಯ ಗಂಟನ್ನು ಕೈಚೀಲದಲ್ಲಿ ಹಾಕಿ, ಚೀಲವನ್ನು ಹೆಗಲಿಗೇರಿಸಿದುದಾಯಿತು. ಕತ್ತು ಬಿಗಿದು ಬಂದಿರಲು, ಬಾಗಿ ತಾಯಿಯ ಪಾದ ಮುಟ್ಟಿ ನಮಸ್ಕರಿಸಿದುದಾಯಿತು. ಬಸವಣ್ಣ ದೇವರ ಗುಡಿಗೆ ಹೋಗಿ ಅಡ್ಡಬಿದ್ದು ವಂದಿಸಿ, ಗಂಟೆ ಬಾರಿಸಿ, 'ಅಂಗಾರ' ಹಚ್ಚಿಕೊಂಡು "ನೌಕರಿ ಬೇಗ ಕೊಡಿಸು ಬಸವಣ್ಣಾ," ಎಂದು ಬೇಡಿಕೊಂಡು, ಮತ್ತೊಮ್ಮೆ ಕೈಮುಗಿದು ಬಂದುದಾಯಿತು, "ಹೋಗಿ ಬರುತ್ತೇನೆ" ಎಂದು ಹಳ್ಳಿಯಲ್ಲಿನ ಜನರಿಗೆಲ್ಲ ಹೇಳಿ ಮತ್ತೆ ಮನೆಗೆ ಬಂದು ಕಂಬಳಿ ಸುರುಳಿಯನ್ನು ಬಲಗೈಯಲ್ಲಿ ಹಿಡಿದುಕೊಂಡುದಾಯಿತು.

ಪುಟ್ಟ ಜಯಣ್ಣ ತನ್ನ ಚಲ್ಲಣ ಹಾಕಿಕೊಂಡು ತಾನೂ ನನ್ನೊಡನೆ ಹೊರಡಲು ತಯಾರಾಗಿ ನಿಂತಿದ್ದ. ಅವನಿಂದ ತಪ್ಪಿಸಿಕೊಂಡು ಹೊರಡುವುದು ಬಲು ಪ್ರಯಾಸದ ಕೆಲಸವಾಗಿತ್ತು.

"ನಾನೂ ಬರ್ತೀನಿ, ಅಣ್ಣಾ, ನಾನೂ ಬರ್ತೀನಿ," ಎಂದು ಅವನು ಬೆಳಗಿನಿಂದಲೂ ಒಂದೇಸಮನೆ ಹಲುಬುತ್ತಿದ್ದ. ನಾನೇ ಎತ್ತಿ ಆಡಿಸಿ ಬೆಳಸಿದ್ದ ಆ ಮಗುವಿನ ಬಗ್ಗೆ ನನ್ನಲ್ಲಿ ವಿಶೇಷವಾದ ಪ್ರೀತಿಯಿತ್ತು. ದಿನವೂ ನನ್ನೊಡನೆಯೆ ನನ್ನ ತಟ್ಟೆಯಲ್ಲಿಯೆ ಊಟ ಮಾಡುವುದು ಅವನಿಗೆ ಅಭ್ಯಾಸವಾಗಿತ್ತು. ನನಗೂ ಹಾಗೆಯೆ. ಹೊರಗಡೆ ಆಡುತ್ತಿದ್ದ ಅವನನ್ನು ಕರೆಯದೆ ಎಂದೂ ನಾನೊಬ್ಬನೆ ಊಟ ಮಾಡಿರಲಿಲ್ಲ. ಹಳ್ಳಿಗೆ ಸಮೀಪದಲ್ಲಿದ್ದ ರೈಲ್ವೆ ಸ್ಟೇಷನ್ನಿನತ್ತ ನಾನು ತಿರುಗಾಡಲು ಹೊರಟರೆ ಅವನೂ ನನ್ನನ್ನು ಹಿಂಬಾಲಿಸಿಕೊಂಡು

ಬರುತ್ತಿದ್ದ. ಅಷ್ಟು ನಿಕಟವಾಗಿ ಅಂಟಿಕೊಂಡಿದ್ದ ಆ ಎಳೆಯ ಜೀವವನ್ನು ಬಿಟ್ಟು ಹೋಗಬೇಕಾಗಿ ಬಂದಾಗ ನನ್ನ ಕರುಳೂ ತಳಮಳಿಸತೊಡಗಿತ್ತು. ಆದರೇನು ಮಾಡುವುದು ಆಗ ನಾನು ಅವನನ್ನು ಜೊತೆಯಲ್ಲಿ ಕರೆದೊಯ್ಯು ವಂತಿರಲಿಲ್ಲ. ಅಂತೆಯೆ, ವ್ಯಸನವನ್ನು ಹತ್ತಿಕ್ಕಿಕೊಂಡು ಮನಸ್ಸು ಗಟ್ಟಿಮಾಡಿ ಹೊರಡಬೇಕಾಗಿತ್ತು.

"ಹೋಗಿ ಬರ್ತೇನೆ ಅವ್ವಾ," ಎನ್ನುತ್ತಾ ನಾನು ಮನೆಯ ಹೊರಗಡೆ ಹೆಜ್ಜೆಯಿಟ್ಟೆ.

"ಹೋಗಿ ಬಾರಪ್ಪಾ. ಹೋದ ಕೂಡಲೆ ಪತ್ರ ಹಾಕು."

ಜಯಣ್ಣನನ್ನು ತಾಯಿ ಗಟ್ಟಿಯಾಗಿ ಹಿಡಿದುಕೊಂಡಿದ್ದಳಾದರೂ ಅವನು ತನ್ನೆಲ್ಲ ಶಕ್ತಿಯನ್ನೂ ಉಪಯೋಗಿಸಿ ಅವಳ ಕೈಯಿಂದ ಕೊಸರಿಕೊಂಡು ನನ್ನ ಹಿಂದೆ ಹೊರಟುಬಿಟ್ಟ. ಆಕ್ರೋಶಕ್ಕೂ ಆರಂಭವಾಗಿತ್ತು. ತಾಯಿಗೆ ಅವನು ಮಣಿಯದಂತಾಗಲು ರೈತನೊಬ್ಬ ಬಂದು ಅವನನ್ನು ಹೊತ್ತುಕೊಂಡು ಗುಡಿಯ ಕಡೆ ಹೊರಟುಹೋದ. ಅಲ್ಲಿಂದಲೂ ಅವನ ಪ್ರತಿಭಟನೆಯ ಕೂಗು, ರೋದನ ಧ್ವನಿ ಕೇಳಿಸುತ್ತಿತ್ತು.

ಹತ್ತು ಹೆಜ್ಜೆ ಮುಂದೆ ಹೋಗಿದ್ದ ನಾನು ಒಮ್ಮೆ ಹಿಂದಿರುಗಿ ನೋಡಿದೆ. ಅಳುತ್ತ ನಿಂತಿದ್ದ ವೀರಭದ್ರನನ್ನು ಅವಚಿ ಹಿಡಿದು ನನ್ನ ತಾಯಿ ನಿಂತುಕೊಂಡಿದ್ದಳು. ಅವಳ ಕಣ್ಣುಗಳಿಂದಲೂ ಕಂಬನಿಗಳುರುಳುತ್ತಿದ್ದುವು.

"ತ್ರಾಸ ಮಾಡಿಕೋಬ್ಯಾಡ ಜೀವಕ್ಕ. ಪ್ರಸಂಗ ಬಂದರ ಅದನ್ನ ಮಾರಿ ಬಿಡು. ಉಪವಾಸ ವನವಾಸ ಮಾಡಬ್ಯಾಡ," ಎಂದು ಅವಳು ಕೂಗಿ ಹೇಳಿದಳು.

ಮಾರಿಬಿಡಬಹುದೆಂದು ಅವಳು ಹೇಳಿದುದು ತನ್ನ ಮಂಗಲಸೂತ್ರದ ಬಂಗಾರದ ತಗಡನ್ನು. ನಾನೆಷ್ಟು ಬಾರಿ ಬೇಡವೆಂದರೂ ಕೇಳದೆ ಅದನ್ನಾಕೆ ನನ್ನ ಕೈಗೆ ಕೊಟ್ಟಿದ್ದಳು. "ಪ್ರಸಂಗ ಹೆಂಗ ಬಂದೀತು ಅಂತ ಹೇಳಾಕ ಬರೂದಿಲ್ಲ ತಮ್ಮಾ. ಇದೊಂದು ತಗಡು ಇಟ್ಟುಕೊಂಡಾದರೂ ನಾನೇನು ಮಾಡಲಿ? ತಗೊಂಡು ಹೋಗು. ವೇಳೆ ಬಂದಾಗ ಉಪಯೋಗ ಆದೀತು,"

ಎಂದು ಹೇಳಿದ್ದಳು. ಕಾಗದದಲ್ಲಿ ಅದನ್ನು ಸುತ್ತಿ ನನ್ನ ಕೋಟಿನ ಒಳಗಿಸೆಯಲ್ಲಿ ಎಚ್ಚರಿಕೆಯಿಂದ ಇಟ್ಟುಕೊಂಡಿದ್ದೆ. ೧೯೩೮ ನೆಯ ವರ್ಷದ ಆ ಮೇ ತಿಂಗಳಲ್ಲಿ ನಾನು ನಮ್ಮೂರನ್ನು ತ್ಯಜಿಸಿ ಹೊರಟಾಗ ನನ್ನ ಜೇಬಿನಲ್ಲಿದ್ದುದು ಅದೊಂದು ಬಂಗಾರದ ತಗಡು ; ಮತ್ತು ಮೂರು ರೂಪಾಯಿ ಅಷ್ಟೆ.

೨

ನಾನೂ ಪೋಲೀಸನಾದೆ

ಓರೆಕೋರೆ ನಗರ ಜಿಲ್ಲೆಯ ಮುಖ್ಯಸ್ಥಳ. ತಕ್ಕಮಟ್ಟಿಗೆ ದೊಡ್ಡದೇ ಆದ ನಗರ. ಜಿಲ್ಲಾ ಸ್ಥಳವಾದುದರಿಂದ ಅಲ್ಲಿ ಸರಕಾರಿ ನೌಕರರ ಸಂಖ್ಯೆಯೆ ವಿಶೇಷ. ಆ ನಗರದಿಂದ ಹನ್ನೆರಡು ಮೈಲು ದೂರವಿರುವ ಗೊಬ್ಬೂರು ನಗರ ಓರೆಕೋರೆಗಿಂತ ದೊಡ್ಡದು. ಓರೆಕೋರೆಯಲ್ಲಿ ಅರವತ್ತು ಸಾವಿರ ಜನರಿದ್ದರೆ ಗೊಬ್ಬೂರಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರಿದ್ದಾರೆ. ವ್ಯಾಪಾರ ವ್ಯವಹಾರ ಉದ್ದಿಮೆಗಳಿಗೂ ಹೆಸರಾದ ಊರು ಗೊಬ್ಬೂರು. ಓರೆಕೋರೆ ಜಿಲ್ಲಾಸ್ಥಳ ವಾದರೂ ಆ ಜಿಲ್ಲೆಯಲ್ಲಿ ಗೊಬ್ಬೂರಿಗೇ ಮಹತ್ವ ಹೆಚ್ಚು.

ಗೊಬ್ಬೂರಿನಲ್ಲಾದರೂ ನನಗೆ ಯಾವುದೊಂದು ಕೆಲಸ ಸಿಕ್ಕಬಹುದೆಂದು ಆಸೆಯಿಟ್ಟುಕೊಂಡು ಅಲ್ಲಿಗೂ ಹೋಗಿ ನಿರಾಶನಾಗಿ ಬಂದಿದ್ದೆ. ಓರೆಕೋರೆ ನಗರಕ್ಕೆ ಬಂದು ಗೆಳೆಯ ಚೆನ್ನಪ್ಪನಲ್ಲಿ ಬಿಡಾರ ಹೂಡಿದುದಕ್ಕೆ ಆಗಲೆ ಒಂದು ತಿಂಗಳು ಕಳೆಯುತ್ತ ಬಂದಿತ್ತು. ಅವನು, ಅವನ ತಾಯಿ ತಂದೆಗಳು ಎಲ್ಲರೂ ನನ್ನನ್ನು ತುಂಬಾ ಆತ್ಮೀಯತೆಯಿಂದ ನೋಡಿಕೊಳ್ಳುತ್ತಿದ್ದರಾದರೂ ನನ್ನ ಮನಸ್ಸಿಗೆ ಶಾಂತಿಯಿರಲಿಲ್ಲ.

"ಎಷ್ಟು ದಿನ ಅಂತ ಹೀಗೆ ಕೂತಿರಲಿ ಚೆನ್ನಣ್ಣಾ? ಊರಿಗೆ ಹೋಗಿ

ಬಿಡ್ತೇನೆ," ಎಂದು ನಾನೊಂದು ದಿನ ಮಾತು ತೆಗೆದಾಗ ಚೆನ್ನಪ್ಪ ಕೋಪಿಸಿಕೊಂಡಂತೆ ನಟಿಸುತ್ತ ನುಡಿದಿದ್ದ :

"ಊರು....ಊರು....ಊರು....ಇದೂ ನಿನ್ನ ಊರೇ, ಇದೂ ನಿನ್ನ ಮನೆಯೇ ಅಲ್ಲವೇನು? ನೀನಿನ್ನೂ ನಿನ್ನ ಸಂಕೋಚ ಬಿಡಲಿಲ್ಲ. ನಾನು ಬೇರೆಯವನೆಂದೇ ನಿನ್ನ ತಿಳಿವಳಿಕೆ, ಅಲ್ಲವೇನು?"

"ಛೆ. ಛೆ. ಹಾಗಲ್ಲ ಚೆನ್ನಣ್ಣಾ. ಆದರೂ...."

"ಆದರೂ ಇಲ್ಲ, ಗೀದರೂ ಇಲ್ಲ. ಅವಸರದಲ್ಲಿ ಯಾರಿಗೂ ಯಾವಾಗಲೂ ನೌಕರಿ ಸಿಕ್ಕಿಲ್ಲ. ಒಂದೆರಡು ತಿಂಗಳು ಸುಮ್ಮನಿರು. ಏನಾದರೂ ಸಿಕ್ಕೇ ಸಿಗುತದೆ."

"ಏನೋ. ನನಗಂತೂ ಆಸೆಯುಳಿದಿಲ್ಲ. ಪೋಲೀಸ್ ಕೆಲಸ ಸಿಕ್ಕರೆ ಸಿಕ್ಕೀತು ಅಷ್ಟೇ."

ಪೋಲೀಸ್ ಎಂಬ ಶಬ್ದವನ್ನು ಕೇಳುತ್ತಲೂ ಚೆನ್ನಣ್ಣ ಬಿದ್ದು ಬಿದ್ದು ನಗತೊಡಗಿದ್ದ.

"ನಿನ್ನಂಥಾ ಬುದ್ಧಿವಂತ, ಎಂ. ಎ. ದವರನ್ನೂ ನಾಚಿಸುವಂತೆ ಇಂಗ್ಲಿಷ್ ಮಾತನಾಡಬಲ್ಲವನು ಪೋಲೀಸ್ ಸಿಪಾಯಿಯಾಗುವದಂದರೇನು! ಛೆ. ಛೆ. ಛೆ...."

ಮತ್ತೆ ನಗತೊಡಗಿದ್ದ ಚೆನ್ನಣ್ಣ.

ನನಗೂ ಉಕ್ಕಿ ಬಂದಿತ್ತು ನಗು. ಚೆನ್ನಣ್ಣ ಆಡಿದುದರಲ್ಲಿ ಅತಿಶಯೋಕ್ತಿಯೇನೂ ಇರಲಿಲ್ಲ. ಇಂಗ್ಲಿಷ್ ಭಾಷೆಯಲ್ಲಿ ನನಗಿದ್ದ ಶಕ್ತಿ ಹೈಸ್ಕೂಲಿಗೆಲ್ಲ ಹೆಸರಾಗಿತ್ತು. ಇಂಗ್ಲಿಷಿನಲ್ಲಿ ನಾನು ಬರೆದ ಪ್ರಬಂಧಗಳನ್ನು ಪ್ರತಿಯೊಂದು ತರಗತಿಯಲ್ಲೂ ಅಭಿಮಾನದಿಂದ ಓದಿ ತೋರಿಸುತ್ತಿದ್ದರು ನಮ್ಮ ಮುಖ್ಯೋಪಾಧ್ಯಾಯರು. ನಾನು ಮುಂದೆ ಓದಿದರೆ ಖಂಡಿತವಾಗಿಯೂ ಕಲೆಕ್ಟರನಾಗಬಹುದೆಂದು ಅವರು ಹೇಳುತ್ತಿದ್ದರು. ಮುಂದೆ ಓದಬೇಕೆಂಬ ಆಕಾಂಕ್ಷೆಯೇನೋ ನನಗಿದ್ದಿತಾದರೂ ಅದನ್ನು ಪೂರೈಸಲು ಅವಶ್ಯವಿದ್ದ ಹಣವಿಲ್ಲದೆ ಆ ಯೋಚನೆಯನ್ನು ತ್ಯಜಿಸಿ ನೌಕರಿಯ ಬೇಟೆಗಾರಂಭಿಸಬೇಕಾಗಿ ಬಂದಿತ್ತು. ನಾನು ಹೇಳುವುದು ಜಂಬದ ಮಾತೇನೂ ಅಲ್ಲ. ನಿಜವಾಗಿ ನನ್ನ ಇಂಗ್ಲಿಷು

'ಅತ್ಯುತ್ತಮ' ದರ್ಜೆಯದಾಗಿತ್ತು. ಕನ್ನಡದಲ್ಲಿ ಮಾತನಾಡಿದಷ್ಟು ಸಹಜವಾದ ರೀತಿಯಲ್ಲಿಯೆ ನಾನು ಇಂಗ್ಲಿಷಿನಲ್ಲೂ ಮಾತನಾಡಲು ಶಕ್ತನಾಗಿದ್ದೆ.

ನನ್ನಂಥವನು ಪೋಲೀಸ್ ಸಿಪಾಯಿಯಾಗುವುದು !

ಚೆನ್ನಣ್ಣನಿಗೂ ನಗು. ನನಗೂ ನಗು.

"ಮಾರ್ಕೆಟ್ಟಿನಲ್ಲಿ ಕೂಲಿ ಮಾಡಿದರೂ ಅಡ್ಡಿಯಿಲ್ಲ ಶಿವಣ್ಣಾ. ಆದರೆ ಪೋಲೀಸ್ ಕೆಲಸಕ್ಕೆ ಮಾತ್ರ ಸೇರಬೇಡ. ಕೂಲಿಯವನಿಗಿದ್ದ ಕಿಮ್ಮತ್ತು ಕೂಡ ಪೋಲೀಸರಿಗಿಲ್ಲ."

ಅದೆಲ್ಲ ಸರಿಯೆ. ನನಗೂ ಗೊತ್ತಿತ್ತು ಎಲ್ಲವೂ. ಆದರೆ, ಚನ್ನಣ್ಣ ಹೇಳಿದಂತೆ ಮಾರುಕಟ್ಟೆಯಲ್ಲಿ ಕೂಲಿ ಮಾಡುವುದೂ ಅಷ್ಟೊಂದು ಸುಲಭ ಕೆಲಸವಾಗಿರಲಿಲ್ಲ. ಅದಕ್ಕೂ ಬಹಳ ಮನೋಧೈರ್ಯ ಬೇಕು, ಸ್ಥೈರ್ಯ ಬೇಕು. ಎರಡು ಬಿಲ್ಲೆ ಮೂರು ಬಿಲ್ಲೆಗಳಿಗಾಗಿ ಎರಡು ಮೈಲು ಮೂರು ಮೈಲುಗಳಷ್ಟು ದೂರ ಎರಡು ಮಣ ಮೂರು ಮಣ ಭಾರ ಹೊತ್ತು ಬೆವರಿಳಿಸ ಬೇಕಾಗುತ್ತಿತ್ತು ಕೂಲಿಯವರು. ನನ್ನಿಂದ ಅಂಥ ಕೆಲಸವಾಗುವುದು ಎಂದಿಗೂ ಸಾಧ್ಯವಿರಲಿಲ್ಲ. ಅದಕ್ಕಿಂತ ಪೋಲೀಸ್ ಸಿಪಾಯಿಯ ಕೆಲಸವೇ ವಾಸಿ ಎಂದು ನನಗೆನ್ನಿಸುತ್ತಿತ್ತು.

ಒಂದು ಸಂಜೆ, ನಗರಸಭೆಯ ಕಚೇರಿಯೆದುರಿಗೆ ಹಾದು ನಾನು ಬರುತ್ತಿದ್ದ ಹಾಗೆ ಎದುರಿಗೆ ಪರಿಚಿತ ಮುಖವೊಂದನ್ನು ಕಂಡು ಸಂತೋಷದಿಂದ ನಿಂತುಕೊಂಡೆ. ನಮ್ಮ ಹೈಸ್ಕೂಲಿನಲ್ಲಿಯೆ ಕಲಿತು ಮ್ಯಾಟ್ರಿಕ್ ಪಾಸು ಮಾಡಿದ ಯುವಕ ಅವನೂ. ಮಲ್ಲಾಪುರ ಎಂದು ಅವನ ಹೆಸರು. ಪಾಠಗಳಲ್ಲಿ ಅಷ್ಟು ಮುಂದುವರಿದವನಲ್ಲವಾದರೂ ಅವನು ಆಟಗಳಲ್ಲಿ ಹೆಸರುಗಳಿಸಿಕೊಂಡಿದ್ದ. ಫುಟ್‌ಬಾಲ್, ಹಾಕಿ ಆಟಗಳಲ್ಲಿ ಪ್ರಾವೀಣ್ಯತೆಯನ್ನೂ ಪಡೆದುಕೊಂಡಿದ್ದ. ಸಾಕಷ್ಟು ದಷ್ಟಪುಷ್ಟವಾಗಿದ್ದ ದೇಹದ ಉಲ್ಲಸದ ಮುಖಮುದ್ರೆಯ ಯುವಕ ಮಲ್ಲಾಪುರ.

ಎರಡು ವರ್ಷಗಳ ತರುವಾಯ ಅದೇ ಮೊದಲನೆಯ ಬಾರಿ ನಾವು ಸಂಧಿಸುತ್ತಿದ್ದೆವಾದುದರಿಂದ ಸಹಜವಾಗಿಯೆ ಇಬ್ಬರಿಗೂ ಸಂತೋಷವಾಗಿತ್ತು.

"ಹಲೋ! ಎಲ್ಲಿದ್ದೀರಿ?" ನನ್ನ ಕೈಕುಲುಕಿಸುತ್ತಾ ಅವನು ಕೇಳಿದ.

"ಇಲ್ಲೇ ಇದ್ದೇನಲ್ಲ ರಸ್ತೆಯಲ್ಲಿ!" ನಾನು ನಗುತ್ತಾ ಹೇಳಿದೆ.

ಅವನು ನನ್ನ ಕೈ ಹಿಡಿದು ಎಳೆಯುತ್ತ ಹತ್ತಿರದಲ್ಲಿದ್ದ ಚಹದಂಗಡಿಗೆ ಕರೆದೊಯ್ದು, ಉಪ್ಪಿಟ್ಟು ಚಹಕ್ಕೆ ಹೇಳಿ, ನನ್ನತ್ತ ತಿರುಗಿ, ಕೇಳಿದ:

"ಎಷ್ಟು ದಿನವಾಯಿತು ಇಲ್ಲಿಗೆ ಬಂದು ?"

"ಒಂದು ತಿಂಗಳಾಗುತಾ ಬಂತು," ಎಂದು ನಾನು ಹೇಳಿದಾಗ ಅವನಿಗೆ ಆಶ್ಚರ್ಯವಾಗದಿರಲಿಲ್ಲ. ನಾನಿರುವುದೆಲ್ಲಿ, ಮಾಡುತ್ತಿರುವುದೇನು ಎಂಬುದನ್ನೆಲ್ಲ ಕೇಳಿ ತಿಳಿದುಕೊಂಡ ತರುವಾಯ ಅವನು ಹೇಳಿದ:

"ನೀವು ಇಲ್ಲಿರಬಹುದೆಂದು ನನಗೆ ಗೊತ್ತೇ ಆಗಲಿಲ್ಲ. ಹೂಂ. ನಾನು ಊರಲ್ಲಿ ಬರುವದು ಬಹಳ ಅಪರೂಪವೆ."

"ಅಂದರೆ? ನೀವೆಲ್ಲಿ ಇರುತ್ತೀರಿ ಹಾಗಾದರೆ ?"

ಆ ಪ್ರಶ್ನೆಗೆ ಅವನಿಂದ ತಕ್ಷಣ ಉತ್ತರಬರಲಿಲ್ಲ. ಅವನ ದುಂಡನೆಯ ಮುಖದ ಮೇಲಿನ ಉಲ್ಲಸದ ಕಳೆ ಮಾಯವಾಗಿ ಅದಕ್ಕೆ ಪ್ರತಿಯಾಗಿ ವ್ಯಸನ ಮಿಶ್ರಿತ ಲಜ್ಜೆ ಅಲ್ಲಿ ಮೂಡಿದಂತೆ ಕಾಣಿಸಿತು.

"ಏನಾದರೂ ತೊಂದರೆಯೇ ಮಲ್ಲಾಪುರ ?" ನಾನು ಕೇಳಿದೆ.

ಅವನು ದೃಷ್ಟಿಯನ್ನು ಮೇಜಿನ ಕಡೆ ತಿರುಗಿಸಿ ಒಂದು ನಿಮಿಷ ಮಾತ ನಾಡದೆ ಕುಳಿತುಕೊಂಡ. ಉಪ್ಪಿಟ್ಟು ಬಂತು. ಒಂದು ಚಮಚ ಉಪ್ಪಿಟ್ಟನ್ನು ಬಾಯಿಗೆ ಹಾಕಿಕೊಂಡು ನುರಿಸುತ್ತಾ ಅವನು ಹೇಳಿದ:

"ತೊಂದರೆಯೇನೂ ಇಲ್ಲ. ಆದರೆ...."

"ನೀವಿಲ್ಲಿ ಮಾಡುತ್ತಿರುವದಾದರೂ ಏನು ?"

ಮತ್ತೆ ಎರಡು ಮೂರು ನಿಮಿಷಗಳ ವರೆಗೆ ಮೌನವಾಗಿ ಉಪ್ಪಿಟ್ಟು ತಿನ್ನುತ್ತ ಕುಳಿತಿದ್ದ ಮಲ್ಲಾಪುರ. ಮಾಣಿ ಬಂದು ಚಹ ಇಟ್ಟು ಹೋದ. ಚಹವನ್ನು ಗುಟುಕರಿಸುತ್ತಾ ಮಲ್ಲಾಪುರ ಹೇಳಿದ:

"ನಾನು ಪೋಲೀಸ್ ಖಾತೆಗೆ ಸೇರಿಬಿಟ್ಟೆ."

ಅದುವರೆಗಿನ ಅವನ ವಿಚಿತ್ರ ವರ್ತನೆಯನ್ನು ನಾನಾಗ ಅರ್ಥಮಾಡಿ ಕೊಂಡೆ. ಪೋಲೀಸ್ ಕೆಲಸಕ್ಕೆ ಸೇರಲು ಇಷ್ಟವಿರದಿದ್ದರೂ ಅವನು ಸೇರಿಕೊಳ್ಳ ಬೇಕಾಗಿ ಬಂದಿತ್ತು. ಅಂತೆಯೆ ಅವನಿಗೆ ಆ ವಿಷಯವಾಗಿ ನಾಚಿಕೆ ಯಾಗುತ್ತಿತ್ತು.

"ಏನು ಮಾಡುವದು ಶಿವಣ್ಣಾ! ಬೇರೆ ನೌಕರಿಯೂ ಸಿಗಲಿಲ್ಲ. ಖಾಲಿ ಕೂತುಕೊಳ್ಳುವಂತಿರಲಿಲ್ಲ. ಏನಾದರೂ ಮಾಡಲೇಬೇಕಲ್ಲಾ!"

"ಅದೂ ಖರೆ. ನಾನೂ ಏನಾದರೂ ಮಾಡಲೇಬೇಕಲ್ಲ. ನೌಕರಿಗಾಗಿ ತಿರುಗಿ ತಿರುಗಿ ನನಗೂ ಸಾಕಾಗಿ ಹೋಯಿತು. ನಾನೂ ಪೋಲೀಸ್ ಖಾತೆಗೇ ಸೇರಿಕೊಳ್ಳಬೇಕೆಂತ ಮಾಡಿದ್ದೀನಿ.

"ಏನೂ ಅಡ್ಡಿಯಿಲ್ಲ. ಅದನ್ನು ಬಿಟ್ಟರೆ ಬೇರೆ ಗತಿಯಿಲ್ಲವಲ್ಲಾ. ನಮ್ಮ ದೇಶದೊಳಗೆ ಏನು ಉದ್ಯೋಗಗಳೇ, ವ್ಯವಸಾಯಗಳೇ, ಗಿರಣಿಗಳೇ, ಕಾರಖಾನೆಗಳೇ? ಮ್ಯಾಟ್ರಿಕ್ ಪಾಸಾದವರು ನಮ್ಮಂಥವರು ಲಕ್ಷ ಲಕ್ಷ ಮಂದಿ. ನಮಗೆಲ್ಲಾ ಎಲ್ಲಿಂದ ಬರಬೇಕು ನೌಕರಿ? ಅದಕ್ಕೇ ಈ ಸರಕಾರದ ಕಾವಲು ನಾಯಿಗಳಾಗಿ ಹೊಟ್ಟೆ ತುಂಬಿಕೊಳ್ಳಬೇಕಾದ ಪ್ರಸಂಗ...."

"ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಬಂದ ಮೇಲಾದರೂ ಈ ಪರಿಸ್ಥಿತಿ ಬದಲಾಗಬಹುದಲ್ಲ ಮಲ್ಲಾಪುರ?"

ಮಲ್ಲಾಪುರ ಗಹಗಹಿಸಿ ನಗತೊಡಗಿದ. "ಸ್ವಾತಂತ್ರ್ಯ! ನಾವು ಜೀವದಿಂದಿರುವವರೆಗೂ ಸ್ವಾತಂತ್ರ್ಯ ಬರುವಂತೆ ಕಾಣುವದಿಲ್ಲ. ನಮ್ಮಂಥ ಕಲಿತವರೆಲ್ಲಾ ಪೋಲೀಸ್ ಖಾತೆ ಸೇರಿ ಬ್ರಿಟಿಷರ ಗುಲಾಮರಾಗಿಬಿಟ್ಟರೆ ಸ್ವಾತಂತ್ರ್ಯಕ್ಕಾಗಿ ಹೋರಾಡುವವರಾದರೂ ಯಾರು ಶಿವಣ್ಣಾ?"

ಸಂಶಯದ ದೃಷ್ಟಿಯನ್ನು ಚಹದಂಗಡಿಯಲ್ಲಿ ಹೊರಳಿಸುತ್ತ ರಾಜಕೀಯದ ಮಾತನ್ನು ಅಲ್ಲಿಗೇ ನಿಲ್ಲಿಸಿದ ಮಲ್ಲಾಪುರ. ಪೋಲೀಸು ಸಿಪಾಯಿಯೊಬ್ಬ ಸರಕಾರವನ್ನು ಟೀಕಿಸಿ ಮಾತನಾಡುವುದು ಇಂದಿನಂತೆಯೇ, ಅಂದೂ ಕೂಡ ಗಂಡಾಂತರದ ವಿಷಯವಾಗಿತ್ತು,

ಹಣ ಕೊಟ್ಟು ಹೊರಗಡೆ ಬಂದೆವು. ನನ್ನನ್ನು ಬೀಳ್ಕೊಂಡು ಹೊರಡುತ್ತಾ ಮಲ್ಲಾಪುರ ಕೇಳಿದ:

"ಹಾಗಾದರೇನು ನಿಶ್ಚಯ ಮಾಡೇಬಿಟ್ಟರೇನು?"

"ಏನು ಮಾಡು ಅಂತೀರಿ ನೀವು?" ಅನಿಶ್ಚಯದ ಧ್ವನಿಯಲ್ಲಿ ಕೇಳಿದೆ.

"ಬೇರೆ ಏನೂ ಇಲ್ಲದಿದ್ದರೆ ಇದಕ್ಕೆ ಸೇರಲಿಕ್ಕಡ್ಡಿಯಿಲ್ಲ."

"ನಿಮ್ಮದೇನು ಅನುಭವ? ಆ ಮಂದಿಯ ಸಹವಾಸ ಎಂಥಾದ್ದು?"

ಮಲ್ಲಾಪುರ ಮುಗುಳ್ನಗು ನಕ್ಕು ನುಡಿದ;

"ಅದು ಇಂಥಾದ್ದೇ ಅಂತ ಹೇಳಲು ಬರುವದಿಲ್ಲ – ಸ್ವತಃ ಬಂದು ನಾಲ್ಕು ದಿನ ಇದ್ದು ಅನುಭವಿಸಿದಾಗಲೇ ಗೊತ್ತಾದೀತು."

"ಅಲ್ಲರೀ, ಪೋಲೀಸ್ ಆಫೀಸರುಗಳು ಬಹಳ ಕೆಟ್ಟವರು, ಒರಟು ಮಂದಿ ಅಂತಾರಲ್ಲ?"

"ಕೆಟ್ಟವರು ಎಲ್ಲಾ ಕಡೆಗೂ ಇದ್ದಾರೆ. ಬರೀ ಪೋಲೀಸ್ ಖಾತೆಯಲ್ಲಷ್ಟೇ ಯಾಕೆ? ಅಂತೂ ಅದೂ ಒಂದು ವಿಚಿತ್ರ ಪ್ರಪಂಚ. ನಿಮಗೂ ಗೊತ್ತಿರಬೇಕಲ್ಲರೀ? ನಿಮ್ಮ ತಂದೆ ಪೋಲೀಸ್ ಸಿಪಾಯಿಯಾಗಿದ್ದರಲ್ಲವೇನು?"

"ಹೌದು. ಸ್ವಲ್ಪ ಸಲ್ಪ ಗೊತ್ತಿದೆ."

"ಆಯಿತಲ್ಲ. ಬಹಳ ಚಲೋದೇ ಆಯ್ತು. ತಂದೆಯೂ ಪೋಲೀಸ. ಮಗನೂ ಪೋಲೀಸ. ವಂಶಪರಂಪರಾಗತ ಉದ್ಯೋಗವಾದಂತಾಯ್ತು. ನಾಳೆ ಡಿ. ಎಸ್. ಪಿ. ಆಫೀಸಿಗೆ ಹೋಗಿ ಅರ್ಜಿ ಕೊಡಿರಿ. ನೌಕರಿ ಸಿಗಬಹುದು."

"ಡಿ. ಎಸ್. ಪಿ. ಹ್ಯಾಗೆ? ಒಳ್ಳೆಯವರೋ?"

"ನಾನಿನ್ನೂ ರಿಕ್ರೂಟು. ಅವರೊಂದಿಗೆ ಸಂಬಂಧ ಬಂದಿಲ್ಲ – ಮನುಷ್ಯ ಯುರೋಪಿಯನ್. ಒಳ್ಳೆಯವ ಅಂತ ಎಲ್ಲರೂ ಹೇಳ್ತಾರೆ. ಆದರೆ ಬಹಳ ಸ್ಟ್ರಿಕ್ಟ ಅಂತೆ."

"ಅರ್ಜಿ ತಗೊಂಡು ಅವರನ್ನೇ ಭೆಟ್ಟಿಯಾದರೆ ಹ್ಯಾಗೆ? ಭೆಟ್ಟಿ ಕೊಡುತಾರೋ ಇಲ್ಲೋ?"

"ಅದು ಅವರ ಮನಸ್ಸಿನಮ್ಯಾಲ ಇರುವ ಸಂಗತಿ. ಅಚ್ಛಾ. ನಾನು ಹೊರಡುತೀನಿ. ಪರೇಡಿಗೆ ಹೊತ್ತಾಗುತ್ತದೆ."

"ನೀವೀಗ ಎಲ್ಲಿ, ಹೆಡ್‌ಕ್ವಾರ್ಟರಿನಲ್ಲೇ ಇದೀರೇನು?"

"ಮೊದಲು ಟ್ರೇನಿಂಗ್ ಮುಗೀಬೇಕಲ್ಲ! ಅಲ್ಲಿಯತನಕ ಇಲ್ಲೇ."

ಅವನು ಹೊರಟುಹೋದ. ನಾನು ಮತ್ತೆ ನಗರಸಭೆಯ ಕಚೇರಿಯೆದುರಿಗೆ ಹಾಯ್ದು ಭಾಷಣಗಳು ನಡೆಯುವ ಬಯಲಿಗೆ ಬಂದು ಕೆಲಹೊತ್ತು ಅಲ್ಲಿ ಕುಳಿತಿದ್ದು ಅನಂತರ ಎದ್ದು ಚೆನ್ನಪ್ಪನ ಮನೆಯತ್ತ ನಡೆದೆ. ಮಲ್ಲಾಪುರನನ್ನು ಕಂಡ ಸಂಗತಿಯನ್ನು ನಾನು ಚೆನ್ನಪ್ಪನ ಮುಂದೆ ಎತ್ತಲಿಲ್ಲ.

ಮಾರನೆಯ ದಿನ ಬೆಳಗ್ಗೆ ಹತ್ತು ಗಂಟೆಗೆ ಇಬ್ಬರೂ ಸೇರಿ ಊಟ ಮುಗಿಸಿ

ತರುವಾಯ ಚೆನ್ನಪ್ಪ ತನ್ನ ಕೆಲಸಕ್ಕೆ ಹೊರಟು ಹೋಗುತ್ತಲೂ ನಾನು ಇಂಗ್ಲಿಷಿನಲ್ಲಿ ಅರ್ಜಿಯೊಂದನ್ನು ಬರೆದು ತಯಾರಿಸಿ ಕೋಟಿನ ಕಿಸೆಯಲ್ಲಿಟ್ಟು ಕೊಂಡು ಡಿ. ಎಸ್. ಪಿ. ಯವರ ಕಚೇರಿಗೆ ಹೊರಟೆ.

ಕಚೇರಿಯ ಗಡಿಯಾರದಲ್ಲಿ ಹನ್ನೆರಡರ ಗಂಟೆ ಬಾರಿಸುತ್ತಿದ್ದ ಹಾಗೆ ಡಿ. ಎಸ್. ಪಿ. ಯವರ ಮೋಟಾರು ಕಾರು ಕಚೇರಿಯ ಬಳಿ ಬಂದು ನಿಂತಿತು. ಆರು ಆರೂವರೆ ಅಡಿ ಎತ್ತರದ ಭವ್ಯಾಕೃತಿಯ ಪ್ರಭಾವಶಾಲಿ ಮುಖಮುದ್ರೆಯ ಆ ವ್ಯಕ್ತಿ ಕಾರಿನಿಂದಿಳಿದು ಕಚೇರಿಯತ್ತ ಹೆಜ್ಜೆಯಿಡುತ್ತಲೂ ಅಂಗಳದಲ್ಲೂ ಕಟ್ಟೆಯ ಮೇಲೂ ಕಾದು ನಿಂತಿದ್ದ ಪೋಲೀಸರೆಲ್ಲ ಥಟ್ಟನೆ ಸೆಟೆದು ನಿಂತು ಸಲಾಂ ಹೊಡೆದರು. ಅರ್ಜಿಯನ್ನು ಕೈಯಲ್ಲಿ ಹಿಡಿದುಕೊಂಡು ಸಾಹೇಬರ ದೃಷ್ಟಿಗೆ ಬೀಳುವಂಥ ಸ್ಥಳದಲ್ಲಿ ನಿಂತುಕೊಂಡಿದ್ದ ನಾನೂ ಒಂದು ಸಲಾಂ ಹಾಕಿದೆ.

ಪೋಲೀಸ್ ಅಧಿಕಾರಿಗಳಿಗೆ ನಾನು ಸಲ್ಲಿಸಿದ್ದ ಪ್ರಪ್ರಥಮ ಸಲಾಂ ಅದು.

ನನ್ನ ವಂದನೆಯನ್ನು ಸ್ವೀಕರಿಸಿ ಸಾಹೇಬರು ನನ್ನನ್ನು ದಿಟ್ಟಿಸುತ್ತಲೆ ತಮ್ಮ ಕೊಟಡಿಗೆ ಹೋದರು. ಕಾಗದ ಪತ್ರಗಳ ಕಟ್ಟುಗಳನ್ನು ಕೈಯಲ್ಲಿ ಹಿಡಿದಿದ್ದ ಹಿರಿಯ ಗುಮಾಸ್ತೆ ಅವರನ್ನು ಹಿಂಬಾಲಿಸಿದರು.

ಹೊರಗಡೆ ನಿಂತುಕೊಂಡಿದ್ದ ನಾನು ಯಾರೋ ದೊಡ್ಡಮನುಷ್ಯನಾಗಿರ ಬಹುದೆಂದು ಸಾಹೇಬರು ಭಾವಿಸಿಕೊಂಡಿರಬೇಕು. ನನ್ನನ್ನು ಒಳಗಡೆ ಕರೆಯಲು ಹಿರಿಯ ಗುಮಾಸ್ತೆಗೆ ಆಜ್ಞೆಯಾಯಿತು. ಮಧ್ಯಮ ವಯಸ್ಸಿನ, ಧೂರ್ತ ಕಣ್ಣುಗಳ ಆ ಆಸಾಮಿ ಹೊರಗಡೆ ಬಂದು ಅಸಮಾಧಾನದ ಧ್ವನಿ ಯಲ್ಲಿಯೆ ಕೇಳಿದ:

"ಏನ್ರಿ, ಯಾರು ನೀವು? ಏನು ಬೇಕಾಗಿತ್ತು?"

ನಾನು ಬೇರೇನನ್ನೂ ಅವನಿಗೆ ಹೇಳಲಿಲ್ಲ. "ಡಿ. ಎಸ್. ಪಿ. ಯವರನ್ನು ಭೆಟ್ಟಿಯಾಗಬೇಕಾಗಿತ್ತು," ಎಂದಿಷ್ಟೆ ಹೇಳಿದೆ.

"ಹಾಗಾದರೆ ಬರ್ರಿ." ನನ್ನನ್ನು ನುಂಗಿಬಿಡುವಂತೆ ದಿಟ್ಟಿಸುತ್ತಾ ಅವನು ಹೇಳಿದ.

ಡಿ. ಎಸ್. ಪಿ. ಯವರ ಕೊಟಡಿಯಲ್ಲಿ ಪ್ರವೇಶಿಸಿದೊಡನೆ ನಾನು

ಮತ್ತೊಮ್ಮೆ ಸಲಾಂ ಹೊಡೆದು, ಪೋಲೀಸರ ಹಾಗೇ ಸ್ವಲ್ಪ ಸೆಟೆದು ನಿಂತು ಕೊಂಡೆ.

ಸಾಹೇಬರು ಶೋಧಕ ದೃಷ್ಟಿಯಿಂದ ನನ್ನನ್ನು ನಿಟ್ಟಿಸಿ ನೋಡಿದರು. ಆರು ಅಡಿಗಳಿಗಿಂತ ಹೆಚ್ಚಾಗಿದ್ದ ನನ್ನ ಎತ್ತರದ ನಿಲುವನ್ನೂ ಮುಖಮುದ್ರೆ ಯನ್ನೂ ಕಂಡು ಅವರು ಪ್ರಭಾವಿತರಾದಂತೆ ಕಾಣಿಸಿತು. ನನ್ನ ಅರ್ಜಿಯನ್ನು ಓದಿ ನೋಡಿದರು. ಇಂಗ್ಲಿಷಿನಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದರು. ಕೊಂಚವೂ ತಡವರಿಸದೆ, ಶುದ್ಧವಾದ ಇಂಗ್ಲಿಷಿನಲ್ಲೇ ನಾನು ಉತ್ತರವಿತ್ತಾಗ ಸಾಹೇಬರು ತುಂಬಾ ಸಂತುಷ್ಟರಾದಂತೆ ಕಾಣಿಸಿತು. ವೈದ್ಯಕೀಯ ಪರೀಕ್ಷೆಗಾಗಿ ನನ್ನನ್ನು ಸಿವಿಲ್ ಸರ್ಜನರ ಕಡೆಗೆ ಕಳಿಸಲು ಗುಮಾಸ್ತೆಗೆ ಅಪ್ಪಣೆ ಮಾಡಿದರು. ಗುಮಾಸ್ತೆಯ ಮುಖದ ಮೇಲೆ ಬೆಂಕಿಯುರಿಯುತ್ತಿತ್ತು. ಸಡಿಲಾಗಿ ಕಳಚಿ ಬೀಳುತ್ತಿದ್ದ ದೋತರವನ್ನು ಬಿಗಿಮಾಡಿಕೊಳ್ಳುತ್ತಾ ಅವರು ನಿಂತಿದ್ದರು. ಸಾಹೇಬರಿಗೆ ಮತ್ತೊಮ್ಮೆ ಸಲಾಂ ಹೊಡೆದು ನೌಕರಿ ದೊರೆಯಿತೆಂಬ ಸಂತೋಷ ದಿಂದ ಉಬ್ಬುತ್ತಾ ಹೊರಗಡೆ ಬಂದು ಗುಮಾಸ್ತೆಗಾಗಿ ಕಾದು ಕುಳಿತೆ.

ಒಂದು ನಿಮಿಷ ಬಿಟ್ಟು ಅವರು ಬಂದರು.

"ಏನೋ ಮೂರ್ಖಾ! ಮ್ಯಾಟ್ರಿಕ್ ಪಾಸಾಗಿರುವಿ. ಡಿ. ಎಸ್. ಪಿ. ಯವರ ಹತ್ತರ ನೌಕರಿಗಾಗಿ ಬಂದಿರುವಿ. ನಮಗೆ ಮೊದಲೇ ಯಾಕೆ ತಿಳಿಸಲಿಲ್ಲ?"

ನೌಕರಿ ಕೇಳಲು ಹೋಗುವವರೆಲ್ಲ ಹಿರಿಯ ಗುಮಾಸ್ತೆಗೆ ಮೊದಲೇ ತಿಳಿಸಬೇಕೆಂಬ ನಿಯಮವೇನಾದರೂ ಇರಲಿಕ್ಕಿಲ್ಲವಷ್ಟೆ! ನಾನು ಗಾಬರಿಗೊಂಡು ಹೇಳಿದೆ:

"ನನಗೆ ಗೊತ್ತಿರಲಿಲ್ಲ ರಾಯರೆ. ಕ್ಷಮಿಸಿರಿ."

"ನೀವು ಕಲಿತವರು ಅಂತ ಇಷ್ಟು ಸೊಕ್ಕು ನಿಮಗೆ. ಕಳ್ಳರು ನೀವೆಲ್ಲಾ. ಸಾಹೇಬರ ಭೆಟ್ಟಿಗೆ ಬರುವಾಗ ಟೊಪ್ಪಿಗೆ ಹಾಕಿಕೊಂಡು ಬರಬೇಕನ್ನುವದೂ ಗೊತ್ತಿಲ್ಲ ನಿಮಗೆ. ಬ್ರೂಟ್ಸ್!"

ಮುಂದೇನು ಮಾತನಾಡುವುದೆಂಬುದು ನನಗೆ ತಿಳಿಯಲಿಲ್ಲ. ಗುಮಾಸ್ತೆ ನನ್ನ ಮೇಲೆ ಕೋಪಿಸಿಕೊಳ್ಳಲು ಕಾರಣವೇನೆಂಬುದೂ ನನಗೆ ಅರ್ಥವಾಗಲಿಲ್ಲ. ಒಂದು ನಿಮಿಷ ಸುಮ್ಮನಿದ್ದು ನಾನು ಕೇಳಿದೆ:

" ದವಾಖಾನೆಗೆ ಚೀಟಿ ಕೊಡಿರಿ ರಾಯರೆ."

" ನಾಳೆ ಬಾ ಹೋಗು," ಎಂದು ನುಡಿದವರೆ ಅವರು ಅಲ್ಲಿ ನಿಲ್ಲದೆ ತಮ್ಮ ಸ್ಥಳಕ್ಕೆ ಹೊರಟು ಹೋದರು.

ದೇವರು ವರ ಕೊಟ್ಟರೂ ಪೂಜಾರಿ ಕೊಡ ಎಂಬ ಗಾದೆ ನನಗಾಗ ನೆನಪಾಯಿತು. ಡಿ. ಎಸ್. ಪಿ. ಯವರು ನನ್ನೊಡನೆ ತುಂಬಾ ಸಭ್ಯತನದಿಂದ ವರ್ತಿಸಿದ್ದರೆ ಈ ಗುಮಾಸ್ತೆ ಪೂರಾ ಅಸಭ್ಯತನದಿಂದ ವರ್ತಿಸಿದ್ದ. " ಬ್ರೂಟ್ಸ್" ಎಂಬ ಬೈಗಳು ಎಷ್ಟು ಸುಲಭವಾಗಿ ಬಂದಿತ್ತು ಅವನ ಬಾಯಿಂದ! ಡಿ. ಎಸ್. ಪಿ. ಕಚೇರಿಯ ಎಲ್ಲ ಗುಮಾಸ್ತೆಗಳೂ ಪೋಲೀಸರೊಡನೆ ಮಾತನಾಡುವ ಧಾಟಿಯೇ ಹಾಗೆ ಎಂಬುದು ಆ ಮೇಲೆ ನನಗೆ ಗೊತ್ತಾಯಿತು. ಪೋಲೀಸರೂ ಕೂಡ ತಮ್ಮ ಹಾಗೆಯೆ ಮಾನವ ಪ್ರಾಣಿಗಳು, ಅವರಿಗೂ ಆತ್ಮಗೌರವ ಸ್ವಾಭಿಮಾನಗಳುಂಟು, ಅವರೊಡನೆ ಶಿಷ್ಟಸಮ್ಮತ ರೀತಿಯಿಂದ ವರ್ತಿಸಬೇಕು ಎಂಬ ಅರಿವೇ ಈ ಗುಮಾಸ್ತೆಗಳಿಗಿರುವುದಿಲ್ಲ. ಪೋಲೀಸ್ ಖಾತೆಯಲ್ಲಿ ಅಶಿಕ್ಷಿತರೇ ವಿಶೇಷವಾಗಿ ಸೇರುತ್ತಿದ್ದುದೇ ಅದಕ್ಕೆ ಕಾರಣ. ಆ ಅಶಿಕ್ಷಿತರಿಗೆ ನೌಕರಿಯೆ ದೊಡ್ಡದಾಗಿರುತ್ತಿತ್ತು. ಅದನ್ನು ಕಾಪಾಡಿಕೊಳ್ಳಲೆಂದು ಅವರು ಮಾನವತೆ, ಆತ್ಮಗೌರವ, ಆತ್ಮಾಭಿಮಾನಗಳಿಗೆಲ್ಲ ತಿಲಾಂಜಲಿಯಿತ್ತು ಯುತ್ತಿದ್ದರು. ಡಿ.ಎಸ್. ಪಿ. ಕಚೇರಿಯ ಗುಮಾಸ್ತೆಗಳು ಒಂದೆರಡು ಒದೆತ ಕೊಟ್ಟರೂ ಸಹಿಸಿಕೊಂಡು ಸುಮ್ಮನಿದ್ದು ಬಿಡುತ್ತಿದ್ದರು ಪೋಲೀಸರು. ಅಂತೆಯೆ, ಆ ಗುಮಾಸ್ತೆಗಳು ಮರಿ ಹಿಟ್ಲರುಗಳಂತೆ ಮೆರೆಯುತ್ತಿದ್ದರು.

ನಾಲ್ಕೈದು ನಿಮಿಷ ಕಟ್ಟೆಯ ಮೇಲೆಯೆ ನಿಂತುಕೊಂಡಿದ್ದು ಅನಂತರ ಹಿರಿಯ ಗುಮಾಸ್ತೆಯ ಹತ್ತಿರ ಹೋಗಿ ನಾನು ಹೇಳಿದೆ:

" ನನ್ನನ್ನು ಸರ್ಜನ್ನರ ಕಡೆ ಕಳಿಸಬೇಕು ಅಂತ ಸಾಹೇಬರು ಹೇಳಿದ್ದಾರಲ್ಲ. ಕಳಿಸುತ್ತೀರೋ ಇಲ್ಲವೋ?"

ಯಾವುದೋ ಕಾಗದವನ್ನೋದುವ ನಟನೆ ಮಾಡುತ್ತಿದ್ದ ಗುಮಾಸ್ತೆ ತಲೆಯನ್ನೇ ಮೇಲಕ್ಕೆತ್ತಲಿಲ್ಲ.

" ಹಾಗಾದರೆ ನಾನೇ ಮತ್ತೊಮ್ಮೆ ಸಾಹೇಬರಲ್ಲಿಗೆ ಹೋಗಿ ಕೇಳಿ ಬರ್ತೀನಿ."

ನಾನು ಹಾಗೆನ್ನುತ್ತಲೂ ಗುಮಾಸ್ತೆ ಥಟ್ಟನೆ ಮುಖವೆತ್ತಿ ನನ್ನನ್ನು ಕ್ರೂರದೃಷ್ಟಿಯಿಂದ ನಿಟ್ಟಿಸುತ್ತಾ;

"ನಿನಗೇನು ನೌಕರಿ ಬೇಕೋ ಬ್ಯಾಡೋ? ಬೇಕಾಗಿದ್ದರೆ ನಾ ಹೇಳಿದಂತೆ ಮಾಡು ಹೋಗು," ಎಂದರು.

ಆ ಮನುಷ್ಯನನ್ನು ಕೆರಳಿಸಿ, ಸಿಗುವುದರಲ್ಲಿದ್ದ ನೌಕರಿಯನ್ನು ಕಳೆದುಕೊಳ್ಳಲು ನಾನು ಸಿದ್ಧನಿರಲಿಲ್ಲ. ಮತ್ತೊಂದು ಮಾತನಾಡದೆ ಅಲ್ಲಿಂದ ಹೊರಟು ಹೊರಗೆ ಬಂದೆ. ಕಟ್ಟೆಯ ಮೇಲೆ ನಿಂತುಕೊಂಡು ಬೀಡಿ ಸೇದುತ್ತಿದ್ದ ಸಿಪಾಯಿಯೊಬ್ಬನ ಹತ್ತಿರ ಹೋಗಿ,

"ಹೆಡ್‌ಕ್ಲಾರ್ಕ್ ಸಾಹೇಬರು ಹೀಗ್ಯಾಕೆ ಮಾಡ್ತಾರ್ರೀ?" ಎಂದು ಕೇಳಿದೆ.

"ಹ್ಯಾಗೆ ಮಾಡ್ತಾರೆ?" ವಿಚಿತ್ರವಾಗಿ ನಗುತ್ತಾ ಕೇಳಿದ ಆ ಸಿಪಾಯಿ.

ನಾನು ಸ್ವಲ್ಪದರಲ್ಲಿಯೆ ನಡೆದುದೆಲ್ಲವನ್ನೂ ವಿವರಿಸುತ್ತಲೂ ಆತ ಮತ್ತೆ ನಕ್ಕು ಹೇಳಿದ:

"ಹೊಸದಾಗಿ ನೌಕರಿ ಹಿಡಿಯಲು ಬರುವವರೆಲ್ಲಾ ಹೆಡ್‌ಕ್ಲಾರ್ಕರಿಗೆ ಇಪ್ಪತ್ತೈದು ರೂಪಾಯಿ 'ಮಾಮೂಲು' ಕೊಡಬೇಕಾಗುತದ. ನಿಮಗೆ ಗೊತ್ತಿಲ್ಲೇನು?"

ನನ್ನ ಕಾಲುಗಳಲ್ಲಿ ಶಕ್ತಿಯೆ ಇಲ್ಲದಂತಾಯಿತು. ಇಪ್ಪತ್ತೈದು ರೂಪಾಯಿ!

"ಇಲ್ಲ. ನನಗೆ ಗೊತ್ತಿರಲಿಲ್ಲ."

"ಈಗಾದರೂ ಗೊತ್ತಾಯ್ತಲ್ಲ!" ಎಂದು ನುಡಿದು ಆ ಸಿಪಾಯಿ ಬೀಡಿಯ ಹೊಗೆ ಬಿಡುತ್ತಾ ಹೊರಟುಹೋದ.

ತಲೆ ಬಾಗಿಸಿಕೊಂಡು ನಾನೂ ಅಲ್ಲಿಂದ ನಡೆದೆ. ಹಾದಿಯುದ್ದಕ್ಕೂ ಒಂದೇ ಯೋಚನೆ. ಇಪ್ಪತ್ತೈದು ರೂಪಾಯಿ ಎಲ್ಲಿಂದ ತರುವುದು? ಗೊತ್ತಾದ 'ಮಾಮೂಲು' ಕೊಡದಿದ್ದರೆ ಆ ಗುಮಾಸ್ತೆ ನನ್ನ ನೌಕರಿಗೆ ಕಲ್ಲು ಹಾಕುವನೆಂದೇ ತೋರುತ್ತದೆ. ಡಿ. ಎಸ್. ಪಿ. ಸಾಹೇಬರೇನೊ ಒಳ್ಳೆಯವರೇ ಆಗಿರಬಹುದು. ಗುಮಾಸ್ತೆಗಳ ಈ ದುರ್ವ್ಯವಹಾರ ಅವರಿಗೆ ತಿಳಿಯದೆಂದೇ ಕಾಣುತ್ತದೆ. ಯಾವುದಾದರೊಂದು ನೆಪದಿಂದ ನನ್ನ ಅರ್ಜಿಯನ್ನು ತಳ್ಳಿಹಾಕ

ಬಲ್ಲ ಸಾಮರ್ಥ್ಯವೂ ಈ ಗುಮಾಸ್ತೆಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬರುವುದೊ ಇಲ್ಲವೊ.

ಮುಂದೇನನ್ನು ಮಾಡುವುದು ?

ಇಪ್ಪತ್ತೈದು ರೂಪಾಯಿ ಲಂಚ ತೆತ್ತರೆ ನೌಕರಿ ಸಿಕ್ಕೀತು. ನನ್ನ ಹತ್ತಿರ ಇಪ್ಪತ್ತೈದು ಆಣೆಗಳೂ ಇರಲಿಲ್ಲ. ಹಳ್ಳಿಯಿಂದ ಬರುವಾಗ ಕಿಸೆಯಲ್ಲಿದ್ದ ಮೂರು ರೂಪಾಯಿಗಳಲ್ಲಿ ಒಂದೂವರೆ ರೂಪಾಯಿ ರೈಲಿನ ಟಿಕೆಟ್ಟಿಗೆ ಹೋಗಿತ್ತು. ಇನ್ನುಳಿದುದು ಈ ಒಂದು ತಿಂಗಳಲ್ಲಿ ಖರ್ಚಾಗಿ ಹೋಗಿತ್ತು. ತಾಯಿಯ ತಾಳಿಯನ್ನು ಮಾರಿದರೂ ಅದರಿಂದ ಬಹಳವಾದರೆ ಒಂದೆರಡು ರೂಪಾಯಿ ಬರಬಹುದು, ಅಷ್ಟೆ.

ಆ ರಾತ್ರಿಯಲ್ಲೆಲ್ಲ ನನಗೆ ನಿದ್ದೆ ಬರಲಿಲ್ಲ. ಹಲವು ಯೋಚನೆಗಳನ್ನು ಮೆಲುಕುಹಾಕುತ್ತಾ ಮಗ್ಗುಲು ಬದಲಿಸುತ್ತಲಿದ್ದೆ.

"ಯಾಕೆ ಶಿವಣ್ಣಾ? ನಿದ್ದೆ ಬರುವದಿಲ್ಲೇನು?" ಎಂದು ಕೇಳಿದ ಚೆನ್ನಪ್ಪ, ಮಧ್ಯರಾತ್ರಿಯಲ್ಲಿ ಅವನಿಗೊಮ್ಮೆ ಎಚ್ಚರವಾಗಿದ್ದಾಗ.

"ಇದೇ ಈಗ ಎಚ್ಚರಾತು," ಎಂದು ಹೇಳಿ ನಾನು ಸದ್ದಾಗದಂತೆ ಬಿದ್ದು ಕೊಂಡು ಇರುಳನ್ನು ಕಳೆದೆ.

ಮರುದಿನ ಒಂದು ವಿಷಯವನ್ನು ಮನಸ್ಸಿನಲ್ಲಿಯೆ ನಿರ್ಧರಿಸಿಕೊಂಡು ಡಿ. ಎಸ್. ಪಿ. ಕಚೇರಿಗೆ ಹೋಗಿ ಗುಮಾಸ್ತೆಯನ್ನು ಕಂಡೆ.

ನನ್ನನ್ನು ನೋಡುತ್ತಲೂ ಅವನು ಹುಬ್ಬು ಗಂಟುಹಾಕಿಕೊಂಡು,

"ಹೊರಗೆ ಕೂಡು. ನಾನು ಕರೆಸಿದಾಗ ಒಳಗೆ ಬಾ," ಎಂದು ಹೇಳಿದ.

ಸರಿ. ನಾನು ಹೊರಗಡೆ ಬಂದು ಅಲ್ಲಿದ್ದ ಬೆಂಚಿನ ಮೇಲೆ ಕುಳಿತು ಕೊಂಡೆ.

ಗುಮಾಸ್ತೆಯಿಂದ ಈಗ, ಇನ್ನೊಂದು ನಿಮಿಷಕ್ಕೆ ಕರೆ ಬರಬಹುದೆಂದು ಕಾಯುತ್ತ ಕುಳಿತುದಾಯಿತು. ಹನ್ನೊಂದು....ಹನ್ನೆರಡು....ಒಂದು.... ಎರಡು....ಮೂರು ಗಂಟೆ ಬಾರಿಸಿದರೂ ಅವರಿಂದ ಕರೆ ಬರಲಿಲ್ಲ. ಕುಳಿತು ಕುಳಿತು ನನಗೆ ಬೇಸರವಾಗಿ ಹೋಗಿತ್ತು. ಎದ್ದು ಅಂಗಳದಲ್ಲಿ ಅಡಿಯಿಡುತ್ತಿದ್ದು, ಮತ್ತೆ ಬಂದು ಕುಳಿತುಕೊಂಡೆ. ನಾಲ್ಕು ಗಂಟೆಯಾಯಿತು. ಕಚೇರಿ ಮುಚ್ಚುವ ಸಮಯ. ನನಗೆ ಗಾಬರಿಗಿಟ್ಟುಕೊಂಡಿತು. ಇಪ್ಪತ್ತೈದು

ರೂಪಾಯಿಗಳನ್ನು ಸಲ್ಲಿಸಿದ ತರುವಾಯವೆ ಅವರು ನನ್ನನ್ನು ಆಸ್ಪತ್ರೆಗೆ ಕಳಿಸುವರೆಂಬುದಂತೂ ಸ್ಪಷ್ಟವಾದಂತಾಯಿತು.

ಕೊನೆಯ ಯತ್ನ ಮಾಡಿನೋಡಿದರಾಯಿತೆಂದು ಯೋಚಿಸಿ, ಧೈರ್ಯ ತಂದುಕೊಂಡು ನಾನು ಮತ್ತೆ ಒಳಗೆ ಹೋಗಿ ಅವರನ್ನು ಕಂಡೆ.

"ಕರೆಸಿದಾಗ ಬಾ ಅಂತ ಹೇಳಿರಲಿಲ್ಲೇನು ನಿನಗೆ? ಅಪ್ಪಣೆಯಿಲ್ಲದೆ ಯಾಕೆ ಬಂದೆ ಒಳಗೆ?" ಎಂದು ಗದರಿಸಿದರು ಗುಮಾಸ್ತೆ. ಅವರ ಮುಖ ರೋಷದಿಂದ ಕೆಂಪಗಾಗಿತ್ತು.

"ನಿಮಗೆ ಕೊಡಲು ನನ್ನ ಹತ್ತರ ರೊಕ್ಕ ಇಲ್ಲ. ಸಾಹೇಬರಿಗೆ ತಿಳಿಸಿ ಹೊರಟುಹೋಗುತೀನಿ. ನನಗೀ ನೌಕರಿಯೇ ಬೇಡ." ಗಂಭೀರವಾದ ಧ್ವನಿಯಲ್ಲಿ ನಾನು ಹೇಳಿದೆ.

ಗುಮಾಸ್ತೆ ತಣ್ಣಗಾದರು. ತಮ್ಮೆಲ್ಲ ಕೋಪವನ್ನೂ ನುಂಗಿಕೊಂಡು ಸಿವಿಲ್‌ಸರ್ಜನರಿಗೆ ಚೀಟಿ ಬರೆದು ಕೊಟ್ಟರು. ನಾನು ಮುಗುಳ್ನಗು ಬೀರುತ್ತಾ ಅವರಿಗೂ ಒಂದು ಸಲಾಂ ಹೊಡೆದು ಸಂತೋಷದಿಂದ ಹೊರಟುಬಂದೆ.

ಮರುದಿನ ಬೆಳಗ್ಗೆ ಸಿವಿಲ್ ಹಾಸ್ಪಿಟಲಿಗೆ ಹೋಗಿ ಸರ್ಜನರನ್ನು ಕಂಡೆ. ಅವರು ನನ್ನನ್ನು ಪರೀಕ್ಷಿಸಿ ನೋಡಿ ಪೋಲೀಸ್ ಕೆಲಸಕ್ಕೆ 'ಫಿಟ್' ಇರುವುದಾಗಿ ಶಿಫಾರಸು ಪತ್ರ ಬರೆದುಕೊಟ್ಟರು. ಅಲ್ಲಿಂದ ನೇರವಾಗಿ ಡಿ. ಎಸ್. ಪಿ. ಕಚೇರಿಗೆ ಬಂದು ಮತ್ತೆ ಗುಮಾಸ್ತೆಯನ್ನು ಕಂಡೆ. ಅವನು ಪಿಟ್ಟೆಂದು ಮಾತನಾಡದೆ ನನಗೆ ನೌಕರಿ ಕೊಡುವ 'ಹುಕುಂ' ತಯಾರಿಸಿದ. ಅದರ ಮೇಲೆ ಡಿ. ಎಸ್. ಪಿ. ಯವರ ಸಹಿಯಾಗಿ ಬರುತ್ತಲೂ ನಾನು ಸಮಾಧಾನದ ಉಸಿರುಬಿಡುತ್ತಾ ನೌಕರಿಯನ್ನಾರಂಭಿಸಲು 'ಹೆಡ್‌ಕ್ವಾರ್ಟರ್ಸ್' ಕಡೆಗೆ ಕಾಲು ಹಾಕಿದೆ.

ನಗರದಿಂದ 'ಪೋಲೀಸ್ ಹೆಡ್‌ಕ್ವಾರ್ಟರ್ಸ್' ಎರಡು ಮೈಲುಗಳಷ್ಟು ದೂರದಲ್ಲಿತ್ತು. ಹಾದಿಯುದ್ದಕ್ಕೂ ನನ್ನ ತಲೆಯಲ್ಲಿ ವಿಚಾರಗಳ ತಾಕಲಾಟ. ಹೊಟ್ಟೆಯ ಚಿಂತೆಯಾದರೂ ತಪ್ಪಿತೆಂದು ನನಗೆ ಸಮಾಧಾನವಾಗಿದ್ದಿತಾದರೂ ಮಧ್ಯೆ ಮಧ್ಯೆ ಅತೃಪ್ತಿಯ ಹೊಗೆ ಕವಿದು ಆ ಸಮಾಧಾನವನ್ನು ಮರೆಯಿಸುತ್ತಿತ್ತು.

"ಪ್ರಾಣ ಹೋಗುವ ಪ್ರಸಂಗ ಬಂದರೂ ಪೋಲೀಸನಾಗಬ್ಯಾಡ," ನನ್ನ ತಂದೆಯ ಕಳವಳದ ನುಡಿ.

"ಕೂಲಿ ಮಾಡಿದರೂ ಅಡ್ಡಿಯಿಲ್ಲ. ಕೂಲಿಯವನಿಗಿದ್ದ ಕಿಮ್ಮತ್ತೂ ಪೋಲೀಸರಿಗಿಲ್ಲ!" ಚೆನ್ನಪ್ಪನ ಸ್ಪಷ್ಟ ಮಾತು.

ಆದರೂ ಕೊನೆಗೆ ನಾನು ಆ 'ಕಿಮ್ಮತ್ತಿಲ್ಲದ' ಕೆಲಸಕ್ಕೇ ಸೇರಿಕೊಂಡಿದ್ದೆ. ಈ ವಾರ್ತೆಯನ್ನು ಕೇಳಿ ಚೆನ್ನಣ್ಣ ಏನೆನ್ನುವನೊ. ತಾಯಿಗೆಷ್ಟು ವ್ಯಸನವಾಗುವುದೊ.

ಹಾಗೆ ಚಿಂತಿಸುತ್ತಾ ನಾನು "ಹೆಡ್‌ಕ್ವಾರ್ಟರ್ಸ್"ನ ಸೀಮೆಯಲ್ಲಿ ಅಡಿಯಿರಿಸಿದೆ. ಸಾಲುಸಾಲಾಗಿ ನಿಂತ "ಪೋಲೀಸ್ ಲೈನು"ಗಳು ನನ್ನ ಸ್ಥಿತಿಯನ್ನು ಕಂಡು ವಿಕಟವಾಗಿ ನಕ್ಕ ಹಾಗೆ ನನಗೆ ಭಾಸವಾಯಿತು.

೩

"ರಿಕ್ರೂಟ್"

ಪೋಲೀಸ್ ಹೆಡ್‌ಕ್ವಾರ್ಟರ್ಸ್ ಎಂದರೇನೆಂಬುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತು. ಸಶಸ್ತ್ರ ಪೋಲೀಸರ ಕಾದಿರಿಸಿದ ಪಡೆಯ ವಾಸಸ್ಥಾನ ಅದು. ಪ್ರತಿಯೊಂದು ಜಿಲ್ಲೆಗೂ ಒಂದು 'ಹೆಡ್‌ಕ್ವಾರ್ಟರ್ಸ್' ಇದೆ. ನಗರದಿಂದ ತುಸು ದೂರದಲ್ಲಿ ಪ್ರತ್ಯೇಕವಾದ ಸ್ಥಳದಲ್ಲಿಯೆ ಅದರ ಯೋಜನೆಯಾಗಿರುತ್ತದೆ. ಪ್ರತಿಯೊಂದು ಹೆಡ್‌ಕ್ವಾರ್ಟರಿನಲ್ಲಿಯೂ ಆರೇಳು ನೂರರಷ್ಟು ಪೋಲೀಸರಿರುತ್ತಾರೆ. ಅವರಿಗಾಗಿ ಒಂದೇ ಬಗೆಯ ಮನೆಗಳನ್ನೊಳಗೊಂಡ ಹತ್ತಿಪ್ಪತ್ತು ಓಣಿಗಳಿರುತ್ತವೆ. ಅವುಗಳನ್ನು 'ಪೋಲೀಸ್ ಲೈನ್ಸ್' ಎಂದು ಕರೆಯುತ್ತಾರೆ.

ಹತ್ತಿಪ್ಪತ್ತು ಓಣಿಗಳಿರುವ ಆ ಪ್ರದೇಶವೂ ಒಂದು ಚಿಕ್ಕ ಊರಿನಂತೆಯೆ ಕಾಣಿಸುತ್ತದೆ. ಸಾಲುಸಾಲಾಗಿ ಏಕಪ್ರಕಾರವಾಗಿ ಕಟ್ಟಲ್ಪಟ್ಟ ಆ ಮನೆಗಳನ್ನು ನೋಡಿದಾಗ ಅಲ್ಲಿನ ಅಚ್ಚುಕಟ್ಟುತನವೂ ಶಿಸ್ತಿನ ಪದ್ಧತಿಯೂ ಒಮ್ಮೆಲೆ ಎದ್ದು ಕಾಣುತ್ತದೆ. ಹೆಡ್‌ಕ್ವಾರ್ಟರಿಗಾಗಿಯೆ ನೀರು ದೀಪಗಳ ಪ್ರತ್ಯೇಕ ವ್ಯವಸ್ಥೆಯಿರುತ್ತದೆ. ಕಸ ಎಸೆಯಲು ತೊಟ್ಟಿಗಳ ಏರ್ಪಾಟೂ ಇರುತ್ತದೆ. ಓಣಿಗಳಲ್ಲಿ ಹೊಲಸು ಕೂಡಿ ಬೀಳದಂತೆ ದಕ್ಷತೆ ವಹಿಸಲಾಗುವುದರಿಂದ ಎಲ್ಲ ಕಡೆಗೂ ಸ್ವಚ್ಛತೆ ಎದ್ದು ಕಾಣುತ್ತದೆ. ಪೋಲೀಸರ ಮಕ್ಕಳಿಗಾಗಿ ಪ್ರಾಥಮಿಕ ಶಾಲೆಗಳೂ,

ಆಟದ ಬಯಲುಗಳೂ ಇರುತ್ತವೆ. ಪೋಲೀಸರ ಕವಾಯತಿಗಾಗಿ ಇರುವ ಬಯಲು ಬೇರೆಯೆ. ನಗರದಿಂದ ಹೆಡ್‌ಕ್ವಾರ್ಟರನ್ನು ಪ್ರವೇಶಿಸುತ್ತಲೂ ಮೊದಲು ಕಣ್ಣಿಗೆ ಬೀಳುವುದು ಕಚೇರಿ. ಅದರ ಮುಂದೆ ಪ್ರತಿನಿತ್ಯ ಇಪ್ಪತ್ನಾಲ್ಕು ಗಂಟೆಗಳ ಕಾಲವೂ ಬಂದೂಕಧಾರಿ ಪೋಲೀಸರ ಕಾವಲು ನಡೆಯುತ್ತದೆ. ಹೆಡ್‌ಕ್ವಾರ್ಟರಿನ ಈ ಎಲ್ಲ ಪೋಲೀಸರ ಮೇಲೆ ಒಬ್ಬ ಫೌಜದಾರ್ (ಸಬ್-ಇನಸ್ಪೆಕ್ಟರ್) ಇರುತ್ತಾರೆ. ಅವರೇ ಆ ಸ್ಥಳದ ಸರ್ವಸತ್ತಾಧಿಕಾರಿ.

ಹೊಸದಾಗಿ ನೌಕರಿಗೆ ಸೇರಿದವರೆಲ್ಲ ಮೊತ್ತಮೊದಲು ಹೆಡ್‌ಕ್ವಾರ್ಟರಿಗೆ ಬಂದು ಆರು ತಿಂಗಳುಗಳ ಕಾಲ 'ರಿಕ್ರೂಟ್' ಆಗಿ ತರಬೇತಿ ಪಡೆಯ ಬೇಕಾಗುತ್ತದೆ. ಈ ತರಬೇತಿಯ ಅವಧಿ ಕೊನೆಗಂಡು ಪರೀಕ್ಷೆಯಲ್ಲಿ ಪಾಸಾದ ತರುವಾಯವೆ 'ರಿಕ್ರೂಟ್'ಗಳು 'ಪೋಲೀಸ'ರಾಗುವುದು.

ಡಿ. ಎಸ್. ಪಿ. ಕಚೇರಿಯ ಆಜ್ಞೆಯ ಕಾಗದವನ್ನು ಕೈಯಲ್ಲಿ ಹಿಡಿದು ಕೊಂಡು ನಾನು ಹೆಡ್‌ಕ್ವಾರ್ಟರಿನ ಫೌಜದಾರರ ಕಚೇರಿಯಲ್ಲಿ ಅಡಿಯಿರಿಸಿದೆ. ಚೆನ್ನಾಗಿ ಮಡಿ ಮಾಡಿದ ಸಮವಸ್ತ್ರ ಧರಿಸಿ ಕುರ್ಚಿಯಲ್ಲಿ ಸೆಟೆದು ಕುಳಿತಿದ್ದ, ಮಧ್ಯಮ ವಯಸ್ಸಿನ ದಷ್ಟಪುಷ್ಟ ದೇಹದ ಆ ಫೌಜದಾರರು ತಮ್ಮ ತೀಕ್ಷ್ಣ ದೃಷ್ಟಿಯನ್ನು ನನ್ನ ಮೇಲೆ ಹರಿದಾಡಿಸಿದರು.

ನಾನು ಅವರಿಗೆ 'ಸಲಾಂ' ಹೊಡೆದುದಲ್ಲದೆ 'ಗುಡ್‌ಮಾರ್ನಿಂಗ್ ಸರ್' ಎಂದೆ.

"ಕಾಯ್ ಮ್ಹಣತಾ? (ಏನನ್ನುತ್ತೀರಿ?)" ಫೌಜದಾರರು ಮರಾಠಿ ಭಾಷೆಯಲ್ಲಿ ಕೇಳಿದರು. ಅವರಿಗೆ ಇಂಗ್ಲಿಷ್ ಅರ್ಥವಾಗುವುದಿಲ್ಲವೆಂಬುದು ನನಗಾಗಲೆ ಗೊತ್ತಾಯಿತು.

ನನಗೂ ತಕ್ಕಮಟ್ಟಿಗೆ ಮರಾಠಿ ಮಾತನಾಡಲು ತಿಳಿಯುತ್ತಿದ್ದಿತಾದುದ ರಿಂದ ನಾನು ಅವರೊಡನೆ ಅದೇ ಭಾಷೆಯಲ್ಲಿ ಮಾತನಾಡಿ, ನನ್ನೊಡನಿದ್ದ ಪತ್ರವನ್ನು ಕೊಟ್ಟು, ನಾನು ಪೋಲಿಸನಾಗಲು ಬಂದಿರುವೆನೆಂದು ಹೇಳಿದೆ.

ಅವರು ಆ ಪತ್ರವನ್ನು ಕೈಗೆ ತೆಗೆದುಕೊಂಡು, ಮತ್ತೆ ನನ್ನ ಕೈಗೇ ಕೊಟ್ಟು, ಅದನ್ನೋದಿ ಮರಾಠಿಯಲ್ಲಿ ಭಾಷಾಂತರಿಸಿ ಹೇಳಲು ತಿಳಿಸಿದರು. ನಾನು ಓದಿ ಹೇಳುತ್ತಲೂ ಅವರ ಮುಖದ ಮೇಲೆ ಆನಂದದ ನಗೆ ನರ್ತಿಸ ತೊಡಗಿತು. ಅವರು ಮರಾಠಿಗರು. ಜಮಾದಾರರಾಗಿದ್ದವರು ತಾತ್ಕಾಲಿಕ

ಬಡ್ತಿ ಹೊಂದಿ ಈ ಕನ್ನಡ ಪ್ರದೇಶಕ್ಕೆ ಫೌಜದಾರರಾಗಿ ಬಂದಿದ್ದರು. ಅವರಿಗೆ ಕನ್ನಡ ಅರ್ಥವಾಗುತ್ತಿರಲಿಲ್ಲ. ಮರಾಠಿ ಮತ್ತು ಇಂಗ್ಲಿಷ್ ಎರಡನ್ನೂ ಬಲ್ಲ ಒಬ್ಬ ಮನುಷ್ಯನೂ ಇಡಿಯ ಹೆಡ್‌ಕ್ವಾರ್ಟರಿನಲ್ಲಿ ಅವರಿಗೆ ಸಿಕ್ಕಿರಲಿಲ್ಲ. ಅಂತೆಯೆ ನನ್ನನ್ನು ಕಂಡಾಗ ಅವರಿಗೆ ಆನಂದವಾಯಿತು.

"ನಿಮಗೆ ಮತ್ತಾವ ಭಾಷೆ ತಿಳಿಯುತ್ತದೆ?" ಎಂದು ಅವರು ಪ್ರಶ್ನಿಸಿದರು.

"ಹಿಂದೀ ಕೂಡಾ ಸ್ವಲ್ಪ ಸ್ವಲ್ಪ ತಿಳಿಯುತ್ತದೆ," ಎಂದು ನಾನು ಹೇಳಿದಾಗ ಅವರಿಗೆ ಇನ್ನೂ ಸಂತೋಷವಾಯಿತು.

ಅವರು 'ಸ್ಟೋರ್ ಹವಾಲ್ದಾರ್'ನನ್ನು ಕರೆದು ನನಗೆ 'ಡ್ರೆಸ್' ಕೊಡುವಂತೆ ಹೇಳಿದರು. ಪೋಲೀಸ್ ಸಿಪಾಯಿಯ 'ಡ್ರೆಸ್' ಎಂಥದಿರುವುದೆಂಬುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತು. ಖಾಕಿ ಕೋಟು, ಹಾಫ್ ಪ್ಯಾಂಟು, ಕಾಲು ಚೀಲ, 'ಬ್ಯಾಂಡೇಜ್', ಕೆಂಪು ಪಟ್ಟಿಯನ್ನೊಳಗೊಂಡ ಕಪ್ಪು ಟೊಪ್ಪಿಗೆ, ಕಪ್ಪು ಬಣ್ಣದ ಬಲು ಭಾರವಾದ ಚಪ್ಪಲುಗಳು, ಹಿತ್ತಾಳೆಯ ಗುಂಡಿಗಳು, ನಡುವಿಗೆ ಬಿಗಿಯುವ ಚರ್ಮದ ಪಟ್ಟಿ ಕಪ್ಪು ಬಣ್ಣದ ಜಮಖಾನವೊಂದು. ಇವುಗಳನ್ನೆಲ್ಲ ತುಂಬಿ ಇಡುವುದಕ್ಕಾಗಿ ಕಪ್ಪು ಬಣ್ಣದ ತಗಡಿನ ಪೆಟ್ಟಿಗೆಯೊಂದನ್ನೂ ಕೊಡಲಾಗುತ್ತದೆ.

'ಸ್ಟೋರ್ ಹವಾಲ್ದಾರ್' ನನಗೆ ಕೊಟ್ಟ ಕೋಟು, ಚಲ್ಲಣಗಳು ನನ್ನ ಮೈಗೆ ಹೊಂದಿಕೊಳ್ಳುವಂತಿರಲಿಲ್ಲ. ನೌಕರಿ ಬಿಟ್ಟು ಹೋಗಿದ್ದ ಪೋಲಿಸನೊಬ್ಬನ ಬಟ್ಟೆಗಳವು.

"ನಿಮ್ಮ ಮೈಗೆ ಬರದಿದ್ದರೆ ಸಿಂಪಿಗನಿಂದ ಸರಿಪಡಿಸಿಕೊಳ್ಳಿರಿ," ಎಂದ ಹವಾಲ್ದಾರ್.

ಕಪ್ಪು ಪೆಟ್ಟಿಗೆಯಲ್ಲಿ ಆ ವಸ್ತುಗಳನ್ನು ತುಂಬಿ ಅಲ್ಲಿಂದ ಹೊರಡಲು ಸಿದ್ಧನಾದೆ.

"ನಾನು ಎಲ್ಲಿ ಇರಬೇಕು ರಾವ್ ಸಾಹೇಬರೆ?"

ನನ್ನ ಪ್ರಶ್ನೆಗೆ ಅವರಿನ್ನೂ ಉತ್ತರವಿತ್ತಿರಲಿಲ್ಲ. ಅಷ್ಟರಲ್ಲಿ ಇನ್ನೊಂದು ಇಂಗ್ಲಿಷ್ ಕಾಗದ ಅವರ ಕೈ ಸೇರಿತ್ತು. ಅವನ್ನೂ ನಾನು ಓದಿಹೇಳಿದ ಬಳಿಕ ಅವರು 'ರಿಕ್ರೂಟ್ ಕಮಾಂಡರ'ನ್ನು ಕರೆದು ನನಗೊಂದು ಕೋಣೆಯನ್ನು

ಕೊಡಲು ತಿಳಿಸಿದರು. ತರಬೇತಿ ಪಡೆಯುವ ಉಮೇದುವಾರರಿಗೆಲ್ಲ ಮೇಲಾಧಿಕಾರಿಯಾಗಿದ್ದವನು ಈ ' ರಿಕ್ರೂಟ್ ಕಮಾಂಡರ್ '? ಅವನು ಒಂದು ಕೋಣೆಗೆ ನನ್ನನ್ನು ಕರೆದು ತಂದು ಅಲ್ಲಿರಲು ತಿಳಿಸಿ ಹೊರಟು ಹೋದ.

ಆ ಕೋಣೆಯಲ್ಲಾಗಲೆ ಇನ್ನಿಬ್ಬರು 'ರಿಕ್ರೂಟ'ರಿದ್ದರು. ನನ್ನ ಸ್ನೇಹಿತ ಮಲ್ಲಾಪುರನೂ ಅಲ್ಲಿಯೆ ಇದ್ದುದನ್ನು ಕಂಡು ನನಗೆ ಸಂತೋಷವಾಯಿತು. ಅವನೂ, ಇನ್ನೊಬ್ಬ 'ರಿಕ್ರೂಟ'ನೂ ನನ್ನನ್ನು ಹಸನ್ಮುಖದಿಂದ ಬರಮಾಡಿಕೊಂಡರು. ಸರಕಾರಿ ಪೆಟ್ಟಿಗೆಯನ್ನು ನಡುಮನೆಯ ಮೂಲೆಯೊಂದರಲ್ಲಿಟ್ಟು ಕೈ ಕಾಲು ಮುಖ ತೊಳೆದುಕೊಂಡು ಬಂದು ಮಲ್ಲಾಪುರನೊಡನೆ ಮಾತನಾಡುತ್ತ ಕುಳಿತು ಕೊಂಡೆ. ಇನ್ನೊಬ್ಬ ಉಮೇದುವಾರ ವಿಜಾಪುರ ಜಿಲ್ಲೆಯವನೆಂದೂ ಮನಗೂಳಿ ಎಂಬುದು ಅವನ ಹೆಸರೆಂದೂ ಗೊತ್ತಾಯಿತು. ಅವನೂ ನನ್ನ ಸಮವಯಸ್ಕನೇ. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಫೇಲಾಗಿ ಇಲ್ಲಿಗೆ ಬಂದು ಪೋಲೀಸ್ ಖಾತೆಗೆ ಸೇರಿಕೊಂಡಿದ್ದ.

ನಾನು ಆ ಕೋಣೆಗೆ ಬಂದುದ್ದಕ್ಕೆ ಇನ್ನೂ ಹತ್ತು ನಿಮಿಷವಾಗಿರಲಿಲ್ಲ. ಅಷ್ಟರಲ್ಲಿಯೆ ಸಿಪಾಯಿಯೊಬ್ಬ ಬಂದು ' ರಾವ್ ಸಾಹೇಬರು ' ನನ್ನನ್ನು ಕರೆಯುತ್ತಿರುವುದಾಗಿ ಹೇಳಿದ. 'ರಾವ್ ಸಾಹೇಬ'ರೆಂದರೆ ಫೌಜದಾರರು. ನಮ್ಮ ಭಾಗದಲ್ಲಿ ಪೋಲೀಸರೆಲ್ಲ ಫೌಜದಾರರುಗಳನ್ನು 'ರಾವ್ ಸಾಹೇಬ್' ಎಂದೇ ಸಂಬೋಧಿಸುತ್ತಾರೆ.

"ನೀವು ಬಂದು ಇನ್ನೂ ಐದು ಮಿನಿಟಾಗಿಲ್ಲ. ಈಗಲೇ ರಾವ್ ಸಾಹೇಬರ ಕರೆ! ಪಾಪ!" ಎಂದ ಮಲ್ಲಾಪುರ.

ನನಗೆ ಕೊಂಚ ಗಾಬರಿಯಾಗದಿರಲಿಲ್ಲ.

" ಹಾಗಂದರೇನ್ರಿ ?"

" ರಾವ್ ಸಾಹೇಬರು ಕರೆದರೆ ಸಾಕು, ಏನಾದರೂ ಶಿಕ್ಷೆ ಕಟ್ಟಿಟ್ಟದ್ದೇ."

ನನಗೆ ಇನ್ನಷ್ಟು ಗಾಬರಿಯಾಯಿತು.

" ಮುಂದೆ ಹ್ಯಾಗೆ ?"

" ಹಾಗೆಲ್ಲ ವಿಚಾರ ಮಾಡುತಾ ಕೂಡುವ ಹಾಗಿಲ್ಲ. ಇದು ಪೋಲೀಸ್ ಖಾತೆ. ಕರೆದ ಕೂಡಲೆ ಎದ್ದು ಹೋಗಬೇಕು," ಎಂದು ಮಲ್ಲಾಪುರ ಹೇಳುತ್ತಿದ್ದ ಹಾಗೆಯೆ ಇನ್ನೊಬ್ಬ ಸಿಪಾಯಿ ನನ್ನನ್ನು ಕರೆಯಲು ಬಂದ. ನಾನು

ದಿಗಿಲುಗೊಂಡು ತಕ್ಷಣ ಎದ್ದು ಕಚೇರಿಗೆ ಬಂದೆ. ಮತ್ತೊಂದು 'ಸಲಾಂ' ಹೊಡೆದುದಾಯಿತು.

ಸ್ವಲ್ಪ ಹೆದರಿಕೊಂಡಂತಿದ್ದ ನನ್ನನ್ನು ಕಂಡು ಫೌಜದಾರರು ನಕ್ಕರು. ಯಾವುದೂ ಅರ್ಥವಾಗದೆ ನಾನು ಒಂದು ಕಡೆ ನಿಂತುಕೊಂಡಿದ್ದೆ. ಅಷ್ಟರಲ್ಲಿ ಫೌಜದಾರರ ಮನೆಯಿಂದ ಅವರಿಗಾಗಿ ಚಹ ಬಂದಿತ್ತು. ಅವರು ನನಗೂ ಒಂದು ಕಪ್ ಕೊಟ್ಟರು. ನಾನು ಸಂಕೋಚದಿಂದ ನಿಂತುಕೊಂಡಿದ್ದೆ. ಫೌಜದಾರರು ಒತ್ತಾಯದಿಂದ ನಾನು ಚಹ ಕುಡಿಯುವಂತೆ ಮಾಡಿದರು. ಹೊಸಬನಾದ ನನ್ನೊಡನೆ ಅವರು ತೋರುತ್ತಿದ್ದ ಸಲುಗೆಯನ್ನು ಕಂಡು ಸಿಪಾಯಿಗಳಿಗೆಲ್ಲ ಸಹಜವಾಗಿಯೆ ವಿಸ್ಮಯವಾಗಿತ್ತು.

ನನಗಾಗಿ ಒಂದು 'ಸ್ಟೂಲು' ತರಿಸಿದರು ಫೌಜದಾರರು.

"ಬಸಾ! (ಕೂಡ್ರಿ)" ಎಂದರು.

ಮೇಲಾಧಿಕಾರಿಯ ಮುಂದೆ ಕೂತುಕೊಳ್ಳುವಂತಿರಲಿಲ್ಲ. ನಾನು ನಿಂತುಕೊಂಡೇ ಇದ್ದೆ.

"ಬಸಾ ಹೋ!" ಎಂದು ಮತ್ತೆ ಆಜ್ಞೆಯಾಯಿತು.

ನಾನು ಕೊಂಚ ಮುದುಡಿಕೊಂಡು ಕುಳಿತುಕೊಂಡೆ.

"ತುಮಚೆ ಪೆನ್ ಕಾಡಾ! (ನಿಮ್ಮ ಪೆನ್ನು ತೆಗೆಯಿರಿ)," ಎಂದರು.

ನಾನು ಫೌಂಟನ್ ಪೆನ್ ಕೈಲಿ ಹಿಡಿದು ಸಿದ್ಧನಾದೆ. ಅವರು ಮರಾಠಿಯಲ್ಲಿ ಹೇಳಿದುದನ್ನು ಇಂಗ್ಲಿಷಿನಲ್ಲಿ ಬರೆದುಕೊಡುವಂತೆ ಹೇಳಿ ವಿಷಯವನ್ನು ತಿಳಿಸಿದರು. ನಾನು ಆ ಪ್ರಕಾರ ಬರೆದುಕೊಟ್ಟೆ. ಅದರ ಕೆಳಗೆ ಅವರು ಮೋಡಿಯಲ್ಲಿ ಸಹಿ ಹಾಕಿ, ಮುಖದಲ್ಲಿ ತೃಪ್ತಿಯ ನಗೆ ತುಳುಕಿಸುತ್ತಾ ನಮ್ಮ ಕಮಾಂಡರನನ್ನು ಕರೆದು, "ಈ ಹುಡುಗನಿಗೆ ಇಂಗ್ಲೀಷ್, ಕನ್ನಡ, ಮರಾಠಿ, ಹಿಂದೀ ಬರುತ್ತಿದ್ದು ನಾನು ಇವನನ್ನು ನನ್ನ ಕೆಲಸಕ್ಕಾಗಿ ಆಫೀಸಿನಲ್ಲಿಟ್ಟುಕೊಳ್ಳುತ್ತೇನೆ. ನೀವು ಇವನನ್ನು ಮುಂಜಾನೆ ಒಂದೇ ಸಲ ಮಾತ್ರ ಪರೇಡಿಗೆ ಹಚ್ಚಿರಿ. ಮಧ್ಯಾಹ್ನ ಮತ್ತು ಸಂಜೆಯ ಪರೇಡ್ ಇವನಿಗೆ ಮಾಫ್ ಮಾಡಿರಿ. ಅವನು ಹುಷಾರ ಇದ್ದಾನೆ. ಎಲ್ಲವನ್ನೂ ತಾನೇ ಕಲಿತುಕೊಳ್ಳಬಲ್ಲ," ಎಂದು ಹೇಳಿದರು.

'ರಿಕ್ರೂಟ'ರ ಮೇಲೆಲ್ಲ ಸರ್ವಾಧಿಕಾರಿಯಂತೆ ದರಬಾರು ನಡಸುವ

ನಮ್ಮ ಕಮಾಂಡರನಿಗೆ ಫೌಜದಾರರ ಮಾತು ರುಚಿಸಲಿಲ್ಲ. ಒಂದು ನಿಮಿಷ ಸುಮ್ಮನಿದ್ದು ಅವನೆಂದ:

" ರಿಕ್ರೂಟರಿಗೆ ಈ ತರದ ಸವಲತ್ತು ಕೊಡುವದು ಚಲೋದಲ್ಲ ರಾವ್ ಸಾಹೇಬರೆ. ಹೀಗೆ ಮಾಡಿದರೆ ಅವರ ತರಬೇತಿ ಸರಿಯಾಗಿ ಆಗಲಿಕ್ಕಿಲ್ಲ."

ಅವನು ಯೋಗ್ಯವಾದ ಮಾತನ್ನೇ ಆಡುತ್ತಿದ್ದನೆಂದು ನನಗೂ ಅನ್ನಿಸದಿರಲಿಲ್ಲ.

ಆದರೆ ಫೌಜದಾರರಿಗೆ ಮಾತ್ರ ಅದು ಒಪ್ಪಿಗೆಯಾಗಲಿಲ್ಲ. ಕಮಾಂಡರನು ತನಗೆ ಬುದ್ಧಿವಾದ ಮಾಡುವ ಸಾಹಸಕ್ಕೆ ಪ್ರವೃತ್ತನಾದುದನ್ನು ಕಂಡು ಅವರಿಗೆ ಕೊಂಚ ಕೋಪ ಬಂತು.

" ಅದೇನೇ ಇರಲಿ. ಇದು ನನ್ನ ಹುಕುಂ. ಆ ಪ್ರಕಾರ ನೀವು ಮಾಡಿರಿ. ನಾನು ಡಿ. ಎಸ್. ಪಿ. ಸಾಹೇಬರಿಗೆ ಹೇಳುತ್ತೇನೆ. ನಿಮಗೇನೂ ಚಿಂತೆ ಬೇಡ."

ಕಮಾಂಡರ್ ನೆಟಿದು ನಿಂತು " ಅಚ್ಛಾ ಸಾಬ್," ಎಂದು ಹೇಳಿ ಸಲಾಂ ಹೊಡೆದು ಹೊರಟು ಹೋದ.

" ನಿಮ್ಮ ಊಟದ ವ್ಯವಸ್ಥೆ ಹ್ಯಾಗೆ?" ಫೌಜದಾರರು ಕೇಳಿದರು.

" ಇದುವರೆಗೆ ಗೆಳೆಯರೊಬ್ಬರಲ್ಲಿ ಊಟ ಮಾಡುತ್ತಿದ್ದೆ. ಇನ್ನು ಮುಂದೆ ಖಾನಾವಳಿಗೆ ಹೋಗಬೇಕಾಗುವದು."

" ಆಯ್ತು. ಹಾಗೇ ಮಾಡಿರಿ."

ಫೌಜದಾರರ ಅಪ್ಪಣೆ ಪಡೆದು ಕಚೇರಿಯನ್ನು ತ್ಯಜಿಸಿ ನಾನು ಕೋಣೆಯ ಕಡೆ ಸಾಗಿದ್ದ ಹಾಗೆ ಕಮಾಂಡರನ ಕರ್ಕಶ ಧ್ವನಿ ಕೇಳಬಂದಿತು.

" ಏ ರಿಕ್ರೂಟ್, ಇಧರ್ ಆವ್ !"

ಮತ್ತೇನು ಬಂತಪ್ಪಾ ! ಎಂದುಕೊಳ್ಳುತ್ತಾ ನಾನು ಅವನ ಬಳಿ ಬಂದೆ.

" ಫೌಜದಾರರ ವಕೀಲಿ ಇಲ್ಲಿ ನಡೆಯದು. ನೀನು ನಿಯಮಗಳ ಪ್ರಕಾರ ಪರೇಡಿಗೆ ಬರದಿದ್ದರೆ ಡಿ. ಎಸ್. ಪಿ. ಯವರ ಮುಂದೆ ನಿಲ್ಲಿಸಿ ಡಿಸ್‌ಮಿಸ್ ಮಾಡಿಸುತ್ತೇನೆ. ಹುಷಾರ್ !"

ಕಮಾಂಡರನ ವೈರ ಕಟ್ಟಿಕೊಳ್ಳಲು ನನಗಿಷ್ಟವಿರಲಿಲ್ಲ. ಅವನು ಹೇಳಿದ

ಹಾಗೆಯೆ ಮಾಡುವುದಾಗಿ ಹೇಳಿ ಕೋಣೆಗೆ ಬಂದೆ. ಮಲ್ಲಾಪುರನೂ ಮನೆಗೂಳಿಯೂ ಊಟಕ್ಕೆ ಕುಳಿತಿದ್ದರು.

"ಏಳ್ರಿ. ನೀವೂ ಊಟ ಮಾಡೇಳಿರಿ."

"ನಾನು ಊರಲ್ಲಿ ಹೋಗಿ ಖಾನಾವಳಿಯಲ್ಲಿ ಉಂಡು ಬರ್ತೀನಿ."

"ಇನ್ನೊಂದು ತಾಸಿಗೆ ಪರೇಡ್ ಅದೆಯಲ್ಲ. ಅದನ್ನು ತಪ್ಪಿಸಿದಿರಂದರೆ ಇವತ್ತೇ ಮನೆಗೆ ಹೋಗಬೇಕಾದೀತು. ಏಳಿರೇಳಿರಿ," ಎಂದ ಮಲ್ಲಾಪುರ.

ಸರಿ. ಅಲ್ಲಿಯೆ ಒಂದು ರೊಟ್ಟಿ ತಿಂದು ಸ್ವಲ್ಪ ಅನ್ನ ನುಂಗಿದ್ದಾಯಿತು. ಕಚೇರಿಯಲ್ಲಿ ನಡೆದುದನ್ನೆಲ್ಲ ಅವರಿಬ್ಬರಿಗೂ ಹೇಳುತ್ತ ಕುಳಿತಿದ್ದ ಹಾಗೆಯೆ 'ತುತೂ ತೂ' ಎಂದು 'ಬ್ಯೂಗಲ್' ಕೂಗತೊಡಗಿತು. ಹೆಡ್ ಕ್ವಾರ್ಟರಿನಲ್ಲಿ ಪೋಲೀಸರನ್ನು ಯಾವುದೊಂದು ಕೆಲಸಕ್ಕಾಗಿ ಎಚ್ಚರಿಸುವುದಕ್ಕೆ ತುತೂರಿಯನ್ನೇ ಉಪಯೋಗಿಸುವ ಪದ್ಧತಿಯುಂಟು. ಅದರ ಉಚ್ಚ ಧ್ವನಿ ಎಂಥ ಗಾಢ ನಿದ್ರೆಯಲ್ಲಿದ್ದವರನ್ನೂ ಬಡಿದೆಬ್ಬಿಸುತ್ತದೆ.

ವಿರಮಿಸಿಕೊಳ್ಳುತ್ತಿದ್ದವರೂ ಎದ್ದು ಸಮವಸ್ತ್ರ ಧರಿಸಿಕೊಂಡೆವು. ಪರೇಡ್ ನಡೆಯುವ ಬಯಲಿಗೆ ಬಂದುದಾಯಿತು – ಕಮಾಂಡರರು 'ಹಾಜರಿ' ತೆಗೆದುಕೊಂಡರು. ಹೊಸಬನಾದ ನನ್ನ ಹೆಸರೂ 'ಹಾಜರಿ ಪುಸ್ತಕ'ದಲ್ಲಿ ಸೇರಿಸಲ್ಪಟ್ಟಿತು. ಪರೇಡಿಗೆ ಅಪರಿಚಿತನಾದುದರಿಂದ ನಾನು ಆ ದಿನವೇ ಇತರರೊಡನೆ ಕವಾಯತು ಮಾಡುವಂತಿರಲಿಲ್ಲ. ಹಿರಿಯ ರಿಕ್ರೂಟನೊಬ್ಬನ ವಶಕ್ಕೆ ನನ್ನನ್ನೊಪ್ಪಿಸಿ ಕವಾಯತಿನ ಪ್ರಾಥಮಿಕ ಪಾಠಗಳನ್ನು ತಿಳಿಸಿಕೊಡಲು ಹೇಳಿದರು ಕಮಾಂಡರ್. ಆ ಹಿರಿಯ ರಿಕ್ರೂಟ್ ಒಳ್ಳೆಯವನಾಗಿದ್ದ. ತನಗೆ ಗೊತ್ತಿದ್ದುದನ್ನೆಲ್ಲ ತಿಳಿಸಿ ಹೇಳಿದ. ನನ್ನಿಂದಾಗಿ ಅಂದು ತನಗೆ ಒಂದು ತಾಸಿನ ಕವಾಯತು ತಪ್ಪಿದಂತಾಯಿತೆಂದು ಅವನಿಗೂ ಆನಂದವಾಗಿತ್ತು. ನಮ್ಮ ಕಮಾಂಡರನ ಬಗ್ಗೆ ಕೆಲವು ವಿಷಯಗಳೂ ಅವನಿಂದ ನನಗೆ ತಿಳಿದುಬಂದುವು.

"ಹಾಗೆ ನಮ್ಮ ಕಮಾಂಡರ್ ದುಷ್ಟನೇನೂ ಅಲ್ಲ. ಅವನು ಬಹಳ ಆಸೆಬುರುಕ. ನಾವು ಏನಾದರೂ ತಂದು ಕೊಟ್ಟರೆ, ತೊಂದರೆ ಕೊಡದೆ ಸುಮ್ಮನಿರುತ್ತಾನೆ. ಊರಲ್ಲಿ ಹೋಗಬೇಕಾಗಿದ್ದರೆ ನಾವು ಯಾವ ಕಾರಣದಿಂದ ಹೊರಟಿದ್ದರೂ ಕಾಯಿಪಲ್ಯೆ ತರಲಿಕ್ಕೆ ಹೊರಟಿದ್ದೆವೆಂದು ಅವನಿಗೆ ಹೇಳಬೇಕು. ಅಂದರೆ ಅವನ ಪರವಾನಿಗೆ ಸಿಗುತದೆ. ಬರುವಾಗ ಅವನಿಗೆ ಒಂದೆರಡಾಣೆಯ

ಕಾಯಿಪಲ್ಯ ತಂದುಕೊಟ್ಟರಾಯ್ತು. ಸಿನಿಮಾ ನೋಡಲಿಕ್ಕೆ ಹೋಗುವದಿದ್ದರೆ ಕಮಾಂಡರನ ಹತ್ತು ಮಕ್ಕಳ ಪೈಕಿ ಒಬ್ಬ ಹುಡುಗನನ್ನು ಸಂಗಡ ಕರೆದೊಯ್ದರಾಯ್ತು. ಅವನು ಬಿಡುತ್ತಾನೆ," ಎಂದು ವಿವರಿಸಿದ ಆ ರಿಕ್ರೂಟ್.

ಆ ವೇಳೆಗೆ ಕವಾಯತು ಮುಗಿಯಿತು. ಕೋಣೆಗೆ ಬಂದು ಎರಡು ಗಂಟೆಗಳ ಕಾಲ ನಿದ್ದೆ ಮಾಡಿ ಎದ್ದೆವು. ಅನಂತರ ಶಾಲೆ. ಅಲ್ಲಿ ನಮಗೆ ಕಾನೂನಿನ ಶಿಕ್ಷಣ ಕೊಡಲಾಗುತ್ತಿತ್ತು. ಶಿಕ್ಷಕನಾಗಿದ್ದವನೊಬ್ಬ ಮುದುಕ ಜಮಾದಾರ. ಅವನ ಕಣ್ಣು ಕಿವಿ ಎರಡೂ ಸರಿಯಾಗಿ ಕೆಲಸ ಕೊಡುತ್ತಿರಲಿಲ್ಲ. ರಿಜಸ್ಟರಿನಲ್ಲಿ ನನ್ನ ಹೆಸರು ಬರೆಯಲ್ಪಟ್ಟಿತು. ಮಾಸ್ತರರ 'ಲೆಕ್ಚರಿ' ಗಾರಂಭವಾಯಿತು. ಅದನ್ನು ಲಕ್ಷ್ಯಗೊಟ್ಟು ಕೇಳುತ್ತಿದ್ದವರು ಬಹಳ ಕಡಮೆಯೆ. ಮಾಸ್ತರರ ಕಿವಿ ಮಂದವಾಗಿದ್ದುದರಿಂದ ಅವರ ಭಯವನ್ನಿಟ್ಟುಕೊಳ್ಳದೆ ಪಿಸುದನಿಯಲ್ಲಿ ಹರಟುತ್ತಿದ್ದವರೇ ಹೆಚ್ಚು ಮಂದಿ. ಮಲ್ಲಾಪುರ ನನಗೆ ಹೇಳುತ್ತಿದ್ದ:

"ಈ ಮಾಸ್ತರರಿಗೊಂದು ಬಂಡಲ್ ಬೀಡಿ, ಒಂದು ಕಡ್ಡೀ ಪೆಟ್ಟಿಗೆ ಕೊಟ್ಟು ಆ ದಿವಸ ಕ್ಲಾಸಿಗೆ ಚಕ್ಕರ್ ಕೊಡಬಹುದು. ಚಹಾ ಅಂದರೆ ಬಿದ್ದು ಸಾಯುತ್ತಾನೆ ಈ ಮುದುಕ. ನಮ್ಮ ಕೋಣೆಯಲ್ಲಿ ಅವಲಕ್ಕಿ ಚಹಾ ಮಾಡಿ ಕರೆದರೆ ಕ್ಲಾಸನ್ನೂ ಬಿಟ್ಟು ಓಡಿಬರುತ್ತಾರೆ ಮಾಸ್ತರರು. ರಿಕ್ರೂಟರು ತಮ್ಮ ಕೋಣೆಗಳಿಗೆ ಹೋಗುತ್ತಾರೆ."

"ಇವರಿಗೆ ಚಹ ಸಿಗುವದಿಲ್ಲವೇನು?"

"ಎರಡು ಹೊತ್ತು ಊಟ ಸಿಗುವದೇ ಇವರ ಪುಣ್ಯ." ಎಂದು ನಗುತ್ತಾ ಹೇಳಿದ ಮಲ್ಲಾಪುರ.

"ಅದೇನ್ರಿ, ಹೀಗನ್ನುತ್ತೀರಿ?"

"ಮಾಸ್ತರರ ಮನೆಯಲ್ಲಿರುವವಳು ಮೂರನೆಯ ಹೆಂಡತಿ, ಇನ್ನೂ ಹರಯದಾಕೆ. ಸಂಬಳವನ್ನೆಲ್ಲಾ ಅವಳ ಕೈಗೆ ಕೊಡುತ್ತಾರೆ. ಅವಳು ಅದನ್ನು ತನ್ನ ಪೆಟ್ಟಿಗೆಯಲ್ಲಿಟ್ಟು ಕೀಲಿ ಹಾಕುತ್ತಾಳೆ. ಚಹಾ ಅವಲಕ್ಕಿ ಏನೂ ಇಲ್ಲ. ಅದಕ್ಕೇ ಇವರು ತಮ್ಮ ಚಟಗಳನ್ನು ನಮ್ಮಿಂದ ತೀರಿಸಿಕೊಂಡು ಶಾಂತರಾಗಬೇಕಾಗುತದೆ."

ನನಗೂ ನಗು ಬಂತು. ಅದರೊಡನೆ ತುಸು ಸಮಾಧಾನವೂ ಆಯಿತು. ಹೆಡ್ ಕ್ವಾರ್ಟರೆಂದರೆ ಏನೋ! ಎಂದು ದಿಗಿಲುಗೊಂಡಿದ್ದೆ. ಇಲ್ಲಿಯ

ಒಂದೊಂದೇ ವಿಷಯ ತಿಳಿದ ಹಾಗೆ ಭಯಪಟ್ಟುಕೊಳ್ಳುವ ಅಗತ್ಯವೇನೂ ಇಲ್ಲ ವೆನ್ನಿಸಿತು. ಒಂದೆರಡು ದಿನಗಳಲ್ಲಿಯೆ ಆ ವಾತಾವರಣಕ್ಕೆ ನಾನೂ ಹೊಂದಿಕೊಂಡೆ. ಭೋಜನಾಲಯದಿಂದ ಊಟದ ಡಬ್ಬಿ ಬರತೊಡಗಿತು. ಚೆನ್ನಪ್ಪ ತನ್ನ ಮನೆಯಿಂದಲೆ ಊಟ ಕಳಿಸುವುದಾಗಿ ಹಟ ಹಿಡಿದಿದ್ದ. ನಾನು ಪೋಲೀಸ್ ಖಾತೆ ಸೇರಿಕೊಂಡುದು ಅವನಿಗೆ ಎಷ್ಟೂ ಒಪ್ಪಿಗೆಯಾಗಿರಲಿಲ್ಲ.

"ಬೇರೆ ಹಾದಿಯಿರಲಿಲ್ಲವಲ್ಲ ಚೆನ್ನಣ್ಣಾ. ಮತ್ತೇನು ಮಾಡುವದು? ನನ್ನ ಮೇಲೆ ನಿನ್ನ ಉಪಕಾರ ಬಹಳವಾಯ್ತು. ನಿನ್ನಿಂದಲೇ ನಾನು ನನ್ನ ಕಾಲ ಮೇಲೆ ನಿಂತುಕೊಳ್ಳುವಂತಾಯ್ತು," ಎಂದೆಲ್ಲ ಹೇಳಿ ಅವನನ್ನು ಸಮಾಧಾನಗೊಳಿಸಲು ಯತ್ನಿಸಿದೆ.

ಹೆಡ್‌ಕ್ವಾರ್ಟರಿನಲ್ಲಿ ಹೆಚ್ಚಾಗಿ ಅಶಿಕ್ಷಿತ ಪೋಲೀಸರೇ ತುಂಬಿಕೊಂಡಿದ್ದರು. ಅವರೆಲ್ಲರೂ "ಆರ್ಮ್ಡ ಬ್ರ್ಯಾಂಚ್" (ಸಶಸ್ತ್ರ ಶಾಖೆ) ದವರು. ನಮ್ಮ ರಿಕ್ರೂಟರ ಗುಂಪಿನಲ್ಲಿ ಸುಶಿಕ್ಷಿತರಾದ ಕೆಲವರು "ಅನಾರ್ಮ್ಡ" (ಶಸ್ತ್ರರಹಿತ) ಜನರಿದ್ದೆವು. ಸಶಸ್ತ್ರ ಶಾಖೆಯ ಪೋಲೀಸರಿಗೆ ನಮ್ಮನ್ನು ಕಂಡರಾಗುತ್ತಿರಲಿಲ್ಲ. ಸಶಸ್ತ್ರ ಮತ್ತು ಶಸ್ತ್ರರಹಿತ ಪೋಲೀಸರ ಮಧ್ಯೆ ವಿಲಕ್ಷಣವಾದುದೊಂದು ವಿರೋಧ ಭಾವನೆಯು ಅಡ್ಡುಗೋಡೆ ಬೆಳೆದುನಿಂತ ಹಾಗಿತ್ತು. ನಮ್ಮ ಕಮಾಂಡರನೂ ಸಶಸ್ತ್ರ ಶಾಖೆಯವನೇ—

ಗಡಿಯಾರದ ಮುಳ್ಳು ತಿರುಗಿದ ಹಾಗೆ ಅಲ್ಲಿ ನಮ್ಮ ದಿನದ ಕಾರ್ಯಕ್ರಮ ನಡೆಯುತ್ತಿತ್ತು. ಬೆಳಗಿನ ಏಳು ಗಂಟೆಗೆ ಮೊದಲನೆಯ ಕವಾಯತು. ಅದಕ್ಕಾಗಿ ಸಿದ್ಧರಾಗಲು ನಾವು ಐದು ಗಂಟೆಗೆಲ್ಲ ಎದ್ದು ನಮ್ಮ ಗುಂಡಿ, ಚಪ್ಪಲು, ಪಟ್ಟಿ ಮೊದಲಾದುವುಗಳನ್ನು 'ಪಾಲಿಶ್' ಮಾಡಿ ಮುಖಕ್ಷೌರ ಮಾಡಿಕೊಂಡು, ಚಹವನ್ನೊ ಹಾಲನ್ನೊ ಸೇವಿಸಿ, ಆರೂವರೆಯ ಹೊತ್ತಿಗೆ ಕವಾಯತಿನ ಬಯಲಿನ ಮೇಲೆ ಉಪಸ್ಥಿತರಾಗುತ್ತಿದ್ದೆವು. ಏಳರಿಂದ ಒಂಭತ್ತರ ವರೆಗೆ ಸತತ ಎರಡು ಗಂಟೆಗಳ ಕಾಲ ಕವಾಯತು ನಡೆಯುತ್ತಿತ್ತು. ಒಂಭತ್ತೂವರೆಯಿಂದ ಹನ್ನೊಂದರವರೆಗೆ ಕಾನೂನಿನ ಶಿಕ್ಷಣ. ಹನ್ನೆರಡು ಗಂಟೆಗೆ ಮತ್ತೆ ಕವಾಯತು. ಒಂದು ಗಂಟೆಗೆ ಬಿಡುವು. ಆಗ ಊಟ. ಕೊಂಚ ವಿಶ್ರಾಂತಿ. ಮೂರುವರೆ ಗಂಟೆಗೆ ಮತ್ತೆ ಕಾನೂನಿನ ಶಿಕ್ಷಣ. ನಾಲ್ಕೂವರೆ ಗಂಟೆಗೆ ಅದ ಮುಗಿದ ಬಳಿಕ ಐದರಿಂದ ಆರೂವರೆಯವರೆಗೆ ಕವಾಯತು. ರಾತ್ರಿ ಎಂಟು

ಗಂಟೆಗೆ 'ಹಾಜರಿ.' ಅದು ಮುಗಿದು ನಾವು ಕೋಣೆಗೆ ಬರಲು ಒಂಭತ್ತು ಗಂಟೆಯಾಗುತ್ತಿತ್ತು. ಆಮೇಲೆ ಊಟ, ನಿದ್ರೆ. ರಾತ್ರಿ ಎಲ್ಲಿಗೂ ಹೋಗಕೂಡ ದೆಂಬ ಕಟ್ಟಪ್ಪಣೆ. ಕಮಾಂಡರನಿಗೆ ಕಾಯಿಪಲ್ಯದ ಲಂಚ ತೆತ್ತು ಹೋಗಿ ಬರಬಹುದಾಗಿತ್ತು, ಆ ಮಾತು ಬೇರೆ.

ಪೋಲೀಸರ ಕವಾಯತಿನ ಕಷ್ಟ ಪೋಲೀಸರಿಗೇ ಗೊತ್ತು. ಬೇರೆಯವರಿಗೆ ಅದರ ಸರಿಯಾದ ಕಲ್ಪನೆ ಬರಲಾರದು, ಗಂಟೆಗಂಟೆಗಳ ಕಾಲ ಕವಾಯತು ಮಾಡಿದಾಗ ತೊಡೆಗಳು ತುಂಬಿ ಬರುತ್ತಿದ್ದುವು. ನರಗಳ ನರಳಾಟಕ್ಕಾರಂಭ ವಾಗುತ್ತಿತ್ತು. ಮೂರು ದಿನಗಳಲ್ಲಿಯೆ ನನಗೆ ಸಾಕಪ್ಪಾ ಸಾಕು! ಎನ್ನಿಸಿತು. ಈ ಕವಾಯತೂ ಬೇಡ, ಈ ನೌಕರಿಯೂ ಬೇಡವೆನ್ನಿಸಿತು. ಆದರೇನು! ಹಾಗೆಲ್ಲ ನೌಕರಿ ಬಿಟ್ಟು ಹೋಗುವಂತಿರಲಿಲ್ಲವಲ್ಲ!

ಈ ಮೂರು ದಿನಗಳಲ್ಲಿ ಫೌಜದಾರರು ಒಂದು ಸಲವೂ ನನ್ನನ್ನು ಕರೆಯಿಸಲಿಲ್ಲ. ನಾಲ್ಕನೆಯ ದಿನ ನಮ್ಮ ಕವಾಯತು ನಡೆದ ಸಮಯಕ್ಕೆ ಅವರು ಅಲ್ಲಿಗೆ ಬಂದರು. ಅವರು ಬರುವುದನ್ನು ಕಂಡೊಡನೆ ಕಮಾಂಡರರು ನಮ್ಮನ್ನು ಇನ್ನೂ ಜೋರಾಗಿ ಓಡಾಡಿಸತೊಡಗಿದರು.

ಫೌಜದಾರರು ಹತ್ತಿರ ಬರುತ್ತಲೂ ಪದ್ಧತಿಯಂತೆ ಕವಾಯತು ನಿಲ್ಲಿಸಿ ಅವರಿಗೆ 'ಸಲಾಂ' ಕೊಡಲ್ಪಟ್ಟಿತು. ಅವರು ಒಂದು ನಿಮಿಷ ಎಲ್ಲ ರಿಕ್ರೂಟ ರನ್ನೂ ನಿರೀಕ್ಷಿಸುತ್ತಿದ್ದು, ನನ್ನನ್ನು ಕಂಡು 'ಫಾಲ್ ಔಟ್' (ಹೊರಗೆ ಬಾ) ಎಂದರು.

ನಾನು ಹೊರಗೆ ಬಂದು ನಿಂತುಕೊಂಡೆ.

" ಮೂರು ದಿನಗಳ ತನಕ ನೀನು ಆಫೀಸಿಗೆ ಯಾಕೆ ಬರಲಿಲ್ಲ?"

ಫೌಜದಾರರ ಆ ಪ್ರಶ್ನೆಗೆ ಏನು ಉತ್ತರವೀಯುವುದೆಂದು ಯೋಚಿಸುತ್ತಾ ಒಂದು ಕ್ಷಣ ನಾನು ಮೌನವಾಗಿ ನಿಂತುಕೊಂಡಿದ್ದೆ. ನಿಜವಾದ ಕಾರಣವನ್ನು ಹೇಳುವಂತಿರಲಿಲ್ಲ. ಕಮಾಂಡರರೂ, ಕಾನೂನಿನ ಮಾಸ್ತರರೂ ನನ್ನನ್ನು ಬಿಡಲಿಲ್ಲವೆಂದು ಹೇಳಿದರೆ ಮುಂದೆ ಅವರ ಕೈಯಲ್ಲಿ ತೊಂದರೆಪಟ್ಟುಕೊಳ್ಳ ಬೇಕಾದ ಪ್ರಸಂಗ ಬರುವುದು ಖಂಡಿತ.

" ಮೂರು ನಾಲ್ಕು ದಿವಸಗಳವರೆಗಾದರೂ ಪರೇಡ್ ಅಭ್ಯಾಸ ವಾಗಲೆಂದು ಆಫೀಸಿಗೆ ಬರಲಿಲ್ಲ ರಾವ್ ಸಾಹೇಬ್," ಎಂದು ಹೇಳಿದೆ.

ಫೌಜದಾರರು ನಕ್ಕರು. ಕಮಾಂಡರನೂ ನಕ್ಕ. ನನ್ನ ಮುಖದ ಮೇಲೂ ಮುಗುಳ್ನಗು ಮೂಡಿತು.

ನನ್ನಿಂದ ಒಂದೇ ಸಲ ಕವಾಯತು ಮಾಡಿಸಬೇಕೆಂದು ಕಮಾಂಡರನಿಗೆ 'ಹುಕುಂ' ಆಯಿತು. ಅರ್ಥಾತ್ ಅವನಿಗದು ಸೇರಿಕೆಯಾಗಲಿಲ್ಲ. ಕಾನೂನಿನ ತರಗತಿಗೂ ನಾನು ಒಂದೇ ಸಲ ಹೋದರಾಯಿತೆಂದು ಗೊತ್ತಾಯಿತು. ಫೌಜದಾರರು ನನಗೆ ಕೊಡ ಮಾಡಿದ ಸೌಕರ್ಯಗಳನ್ನು ಕಂಡು ಅಸೂಯೆ ಪಟ್ಟು ಕೊಳ್ಳುವವರೂ ಇರದಿರಲಿಲ್ಲ – ಅಂಥವರು ಕಮಾಂಡರನಿಗೆ ಹೇಳಿ ನನಗೆ ತೊಂದರೆಗಳನ್ನೊಡ್ಡ ತೊಡಗಿದರು. ಒಂದೇ ಸಲ ಕವಾಯತಿಗೆ ಹೋದರೂ ಆಗ ನನಗೆ ಹೆಚ್ಚಿನ 'ಶಿಕ್ಷೆಯ ಪರೇಡ್' ಕೊಡತೊಡಗಿದರು.

'ಶಿಕ್ಷೆಯ ಪರೇಡ್' ಎಂದರೆ ಜನರಿಗೆ ತಿಳಿಯಲಾರದು. ಕವಾಯತು ಮಾಡುವವರನ್ನೆಲ್ಲ ಹಾಗೇ ನಿಲ್ಲಿಸಿ ಒಬ್ಬನಿಗೇ ಕವಾಯತು ಮಾಡ ಹಚ್ಚುವುದಕ್ಕೆ 'ಶಿಕ್ಷೆಯ ಪರೇಡ್' ಎನ್ನುತ್ತಾರೆ. ಒಂದು ವಾರದ ವರೆಗೆ ಕಮಾಂಡರ್ ನನ್ನ ಮೇಲೆ ಆ ಶಿಕ್ಷೆಯನ್ನು ಪ್ರಯೋಗಿಸುತ್ತಿದ್ದ. ನನಗೆ ಭಯಂಕರ ಶ್ರಮ ವಾಗುತ್ತಿತ್ತು. ಒಂದೊಂದು ಸಲವಂತೂ ಮೂರ್ಛೆ ಬಂದು ಬೀಳುವಷ್ಟು ಆಯಾಸವಾಗುತ್ತಿತ್ತು. ಅದನ್ನೆಲ್ಲ ನಾನು ಮೂಕವಾಗಿ ಸಹಿಸಿಕೊಂಡು ಸುಮ್ಮ ನಿದ್ದ ಹಾಗೆ ಕಮಾಂಡರನ ತಗಾದೆ ಹೆಚ್ಚತೊಡಗಿತು. ಒಂದುದಿನ ನಾನು ನಿತ್ರಾಣನಾಗಿ, ಕವಾಯತು ಬಿಟ್ಟು ನೆಲಕ್ಕೆ ಕುಸಿದುಬಿದ್ದೆ. ಅವನು ರೇಗಿ ಬಾಯಿಗೆ ಬಂದ ಶಬ್ದಗಳನ್ನಾಡತೊಡಗಿದ. ನನ್ನ ತಾಳ್ಮೆಯ ಕೊನೆಯ ಕಣವೂ ಇಲ್ಲದಂತಾಗಿತ್ತು.

"ಈ ರೀತಿಯಾಗಿ ನೀವು ನನಗೆ ತ್ರಾಸಕೊಟ್ಟರೆ ನಾನು ಡಿ. ಎಸ್. ಪಿ. ಸಾಹೇಬರನ್ನು ಕಂಡು ಅವರಿಗೆ ಎಲ್ಲಾ ಹೇಳಿಬಿಡುತ್ತೇನೆ. ಬಹಳವಾದರೆ ಅವರು ನನ್ನನ್ನು ನೌಕರಿಯಿಂದ ತೆಗೆದುಹಾಕಬಹುದು. ನಾನು ಮ್ಯಾಟ್ರಿಕ್ ಪಾಸಾದವ. ಟೈಪಿಂಗ್ ತಿಳಿದವ. ಎಲ್ಲಾದರೂ ಬೇರೆ-ಕಡೆ ನೌಕರಿ ಹುಡುಕಿ ಕೊಳ್ಳುತ್ತೇನೆ."

ನನ್ನ ಮಾತು ಕೇಳಿ ಕಮಾಂಡರ್ ಶಾಂತನಾದ. ನನ್ನನ್ನು ಸಂತೈಸಿ ಕವಾಯತನ್ನು ಅಲ್ಲಿಗೇ ನಿಲ್ಲಿಸಿದ. ಅವನ ನಡೆವಳಿಕೆಯಲ್ಲಾದ ಈ ಆಕಸ್ಮಿಕ

ಬದಲಾವಣೆಯನ್ನು ಕಂಡು ನನಗೂ ಆಶ್ಚರ್ಯವಾಯಿತು, ನನ್ನನ್ನು ಕಂಡು ಹೊಟ್ಟೆಕಿಚ್ಚುಪಟ್ಟುಕೊಳ್ಳುತ್ತಿದ್ದ ಇತರ ರಿಕ್ರೂಟರಿಗೂ ಆಶ್ಚರ್ಯವಾಯಿತು.

ಕವಾಯತು ಮುಗಿಸಿಕೊಂಡು ನಾನು ಕೋಣೆಗೆ ಬರುವಾಗ ಕಮಾಂಡರ್ ನನ್ನನ್ನು ಕರೆದು ತನ್ನ ಮನೆಗೆ ಆಹ್ವಾನಿಸಿದ. ನನಗೆ ಇನ್ನೂ ಆಶ್ಚರ್ಯವಾಯಿತು. ವೈರಿಯಂತಿದ್ದವನು ಒಮ್ಮಿಂದೊಮ್ಮೆಲೆ ಸ್ನೇಹಿತನಂತೆ ವರ್ತಿಸುತ್ತಿರುವನಲ್ಲ!

ತನ್ನ ಮನೆಯ ಪಡಸಾಲೆಯಲ್ಲಿ ಜಮುಖಾನ ಹಾಸಿ, ನನ್ನನ್ನು ಕೂಡಿಸಿ ಅವನು ಒಳಗೆ ಹೋಗಿ ಸಮವಸ್ತ್ರ ತೆಗೆದಿಸಿ ಬಂದು ತಾನೂ ಕುಳಿತುಕೊಂಡ.

" ಬೀಡಿ ಐತೇನು ನಿಮ್ಮ ಹತ್ತಿರ ?" ಎಂದು ಕೇಳಿದ.

" ಇಲ್ಲ. ನಾನು ಬೀಡಿ ಸೇದುವದಿಲ್ಲ."

" ಏ, ಹಣಮ್ಯಾ, ಒಂದು ಬೀಡೀ ತತಾ," ಎಂದು ಕೂಗಿದ ಕಮಾಂಡರ್.

ಏಳೆಂಟು ವರ್ಷದ ಹುಡುಗನೊಬ್ಬ ಓಡುತ್ತ ಬಂದು ಬೀಡಿ - ಕಡ್ಡಿಪೆಟ್ಟಿಗೆ ಕೊಟ್ಟು ಹೋದ.

ಬೀಡಿಯನ್ನು ಹೊತ್ತಿಸಿ ಜುರುಜುರನೆ ಹೊಗೆಯೆಳೆಯುತ್ತ, ನಡುನಡುವೆ ಕೆಮ್ಮುತ್ತ ಕಮಾಂಡರ್ ಮಾತಿಗಾರಂಭಿಸಿದ :

" ನನ್ನಿಂದ ನಿಮಗ ಬಹಳ ತ್ರಾಸ ಆತೇನು ?"

ನಾನು ದೇಶಾವರದ ನಗು ಬೀರಿ, " ಏನಿಲ್ಲ, ಏನಿಲ್ಲ, ಬಿಡಿರಿ," ಎಂದೆ.

ಅವನು ಹೇಳಿದ :

" ಈಗ ನಾ ಮಾತಾಡುವದನ್ನು ಯಾರ ಮುಂದೂ ಹೇಳಬಾಡಿರಿ. ಈ ಫೌಜದಾರಗೂ ನನಗೂ ನೆಟ್ಟಗಿಲ್ಲ. ಅವನಿಗಿಂತ ನನ್ನದೇ ಹೆಚ್ಚು ವರ್ಷ ಸರ್ವಿಸ್ ಆಗೈತಿ. ಅವನಿಗಿಂತ ನಾನೇ ಸೀನಿಯರ್ ಇದ್ದೀನಿ. ನನಗೆ ಸಿಗಬೇಕಾಗಿದ್ದ ಫೌಜದಾರಿಕೆಯನ್ನು ಅವ ವಕೀಲಿ ಹಚ್ಚಿ ತಾ ಹೊಡಕೊಂಡು ಬಿಟ್ಟಾನ."

ಅವನು ಹೇಳುವುದನ್ನು ಕೇಳುತ್ತಾ ನಾನು ಸುಮ್ಮನೆ ಕುಳಿತಿದ್ದೆ. ಕಮಾಂಡರ್ ಮುಂದುವರಿಸಿದ :

" ರಿಕ್ರೂಟರನ್ನ ನನ್ನ ವಿರುದ್ಧ ಮಾಡಿ ನನ್ನ ಕಿಮ್ಮತ್ತು ಕಡಿಮೆ ಮಾಡಬೇಕಂತ ಫೌಜದಾರನ ಹೊಂಚು. ನೀವೂ ಅವನ ಸಂಗಡ ಸೇರಿಕೊಂಡಿರೇನೋ

ಅಂತ ನನಗೆ ಸಂಶಯ ಬಂದಿತ್ತು. ರಿಕ್ರೂಟರು ಯಾವಾಗಾದರೊಮ್ಮೆ ನನಗೆ ಕಾಯಿಪಲ್ಯೆ ತಂದುಕೊಡುತಿರುತಾರ. ನಾನೇನು ಅವರನ್ನ ಕೇಳುವದಿಲ್ಲ. ಅವರಾಗೇ ತಂದುಕೊಟ್ಟರ ತಗೊಳ್ಳುತೀನಿ. ಇದನ್ನೆಲ್ಲಾ ನೀವು ಫೌಜದಾರಗ ಚಾಡಿಹೇಳುತೀರಿ ಅಂತ ಒಬ್ಬ ರಿಕ್ರೂಟ್ ನನಗೆ ಹೇಳಿದ್ದರು. ಅದಕ್ಕೆ ನಿಮ್ಮ ಮೇಲೆ ಸ್ವಲ್ಪ ಸಿಟ್ಟು ಬಂದಿತ್ತು ನನಗೆ."

"ನಾನೆಂದೂ ಯಾರ ಮೇಲೂ ಚಾಡಿ ಹೇಳಿಲ್ಲರೀ. ಆ ಸ್ವಭಾವವೇ ನನ್ನಲ್ಲಿಲ್ಲ."

"ಈಗ ಎಲ್ಲಾ ಗೊತ್ತಾತು ನನಗೂ. ಈ ದಿವಸ ಪರೇಡ್ ನಡೆದಾಗ ನೀವು ಫೌಜದಾರನ ಹೆಸರು ತಗೊಳ್ಳದೆ ಡಿ. ಎಸ್. ಪಿ. ಯವರ ಹೆಸರು ತಗೊಂಡಿರಲ್ಲಾ, ಆಗಲೇ ಗೊತ್ತಾತು ನನಗೆ. ಇನ್ನು ಮ್ಯಾಲ ನೀವು ಮುಂಜಾನೆ ಪರೇಡಿಗೆ ಬರದಿದ್ದರೂ ಅಡ್ಡಿಯಿಲ್ಲ. ನಾನು ತ್ರಾಸ ಕೊಟ್ಟದ್ದನ್ನ ಮನಸಿ ನಾಗಿಟ್ಟುಕೋ ಬ್ಯಾಡಿರಿ. ಎಲ್ಲಾ ಮರತುಬಿಟ್ಟು ನಮ್ಮವರಾಗಿ ಇರ್ರಿ."

ನನಗೆ ಆನಂದ, ಆಶ್ಚರ್ಯ. ನಾನೇನೂ ಪ್ರಯತ್ನಪಡದಿದ್ದರೂ ನನ್ನ ತೊಂದರೆಗಳೆಲ್ಲ ಹೀಗೆ ತಾವಾಗಿಯೆ ದೂರವಾಗುತ್ತಿದ್ದುವು.

ಕಮಾಂಡರನ ಪುತ್ರರತ್ನ ಹಣಮಂತ ಅಲ್ಲಿಯೆ ಒಂದು ಮೂಲೆಯಲ್ಲಿ ಮುದುಡಿ ಕುಳಿತುಕೊಂಡು ತನ್ನ ಪಾಠವನ್ನು ತಪ್ಪುತಪ್ಪಾಗಿ ಓದುತ್ತಲಿದ್ದ. ಅವನನ್ನು ಹತ್ತಿರ ಕರೆದು ಅವನ ತಪ್ಪು ತಿಳಿಸಿಕೊಟ್ಟು ಸರಿಯಾಗಿ ಓದ ಬೇಕೆಂದು ಹೇಳಿದೆ. ಆ ಉಪದ್ವ್ಯಾಪಕ್ಕೆ ನಾನು ತೊಡಗಿದ್ದುದೇ ತಪ್ಪಾಯಿತು.

"ನೀವಾದರೂ ಸ್ವಲ್ಪ ಇವಗ ಕಲಿಸಿ ಶ್ಯಾಣ್ಯಾನ್ನ ಮಾಡಿರಪ್ಪ!" ಎಂದ ಕಮಾಂಡರ್.

ಬೆಳಗಿನ ಕವಾಯತಿಗಾಗಿ ವಿನಿಯೋಗವಾಗುತ್ತಿದ್ದ ಸಮಯವನ್ನೇ ಈ ಶಿಷ್ಯಮಣಿಗೆ ಪಾಠ ಹೇಳಲು ಉಪಯೋಗಿಸಬೇಕೆಂದು ಕಮಾಂಡರ್ ಅಪೇಕ್ಷಿಸಿದ. ನಾನು ಒಪ್ಪಿಕೊಳ್ಳಲೇಬೇಕಾಯಿತು. ನಿರಾಕರಿಸಿದ್ದಲ್ಲಿ ಪುನಃ 'ಶಿಕ್ಷೆಯ ಪರೇಡ್' ಅನುಭೋಗಿಸಬೇಕಾಗುತಿತ್ತು.

ಹಾಗೆ, ಕಮಾಂಡರನ ಕೃಪಾದೃಷ್ಟಿ ಲಭಿಸಿತು. ಫೌಜದಾರರಿಂದಲೂ ಸಾಕಷ್ಟು ಸೌಕರ್ಯ ಲಭಿಸಿದ್ದುವು. ಕಾನೂನಿನ ಶಿಕ್ಷಕನನ್ನಂತೂ ಗಮನಿಸುವ

ಅಗತ್ಯವಿರಲಿಲ್ಲ. ಹೆಡ್‌ಕ್ವಾರ್ಟರಿನಲ್ಲಿ ನನ್ನ ದಿನಗಳು ಸುಖಮಯವಾಗಿ ಕಳೆಯತೊಡಗಿದುವು. ತಿಂಗಳು ಮುಗಿಯುತ್ತಲೂ ಸಂಬಳ ಕೈಸೇರಿತು.

ರಿಕ್ರೂಟನ ಸಂಬಳವೆಂದು ಹತ್ತೊಂಭತ್ತು ರೂಪಾಯಿ. ಮ್ಯಾಟ್ರಿಕ್ ಪಾಸಾದ ಬಗ್ಗೆ ಭತ್ತೆಯೆಂದು ಮೂರೂವರೆ ರೂಪಾಯಿ.

ಅಂತೂ ಎಲ್ಲ ಸೇರಿ ಇಪ್ಪತ್ತೆರಡೂವರೆ ರೂಪಾಯಿ ಕೈಗೆ ಬಂದುವು.

ನನ್ನ ಜೀವಮಾನದಲ್ಲಿ ನಾನು ಸ್ವತಃ ದುಡಿದು ಗಳಿಸಿದ ಮೊದಲನೆಯ ಸಂಬಳ ಅದು. ಆಗಿನ ನನ್ನ ಸಂತೋಷವನ್ನು ಹೇಗೆ ವರ್ಣಿಸಲಿ? ಸಂಬಳ ಕೈಸೇರಿದ ದಿನವೂ ಅದರ ಮರುದಿನವೂ ಗಾಳಿಯಲ್ಲಿ ತೇಲಾಡಿದ ಹಾಗೆ ಸುಖಾನುಭವವಾಗುತ್ತಿತ್ತು ನನಗೆ. ಆ ಅಲ್ಪ ಸಂಬಳವೂ ಮಹಾ ನಿಧಿಯಂತೆ ತೋರುತ್ತಿತ್ತು.

ಆ ದಿನವೆ ಹತ್ತು ರೂಪಾಯಿಗಳನ್ನು ಮನಿಯಾರ್ಡರ್ ಮೂಲಕ ತಾಯಿಗೆ ಕಳಿಸಿ ಒಂದು ಕಾಗದವನ್ನೂ ಬರೆದೆ. ತರಬೇತಿ ಮುಗಿಯುತ್ತಲೂ ಮನೆ ಹೂಡಿ ಅವರನ್ನು ಕರೆದುತರುವುದಾಗ ತಿಳಿಸಿದೆ. " ಪೋಲೀಸನಾದೆನೆಂದು ನೀನು ಅಸಮಾಧಾನಪಟ್ಟುಕೊಳ್ಳಬೇಡ ಅಪ್ಪ. ನಾನು ಮ್ಯಾಟ್ರಿಕ್ ಆದವ ನಿದ್ದೇನೆ. ಸಿಪಾಯಿಯ ಜಾಗೆಯಲ್ಲೇ ನಾನು ಬಹಳ ದಿನ ಉಳಿಯುವದಿಲ್ಲ. ಐದಾರು ವರ್ಷಗಳಲ್ಲೇ ಫೌಜದಾರಿಕೆಯ ತರಬೇತಿಗೆ ನನ್ನನ್ನು ಆರಿಸಿಯಾರು. ಅನಂತರ ನಾನೂ ಫೌಜದಾರನಾಗಬಹುದು," ಎಂದೆಲ್ಲ ಬರೆದು ತಾಯಿಯ ಮನಸ್ಸನ್ನು ಮುದಗೊಳಿಸಲು ಯತ್ನಿಸಿದೆ.

ಭೋಜನಾಲಯದ ಹಣ ಮುಟ್ಟಿಸಿದುದಾಯಿತು. ಉಳಿದ ಹಣದಲ್ಲಿ ಬಟ್ಟೆಗಳನ್ನು ಹೊಲಿಸಿಕೊಂಡು " ಸರದಾರ "ನಾದೆ. ನಮ್ಮ ಭಾಗದಲ್ಲಿ ಪೋಲೀಸರನ್ನು 'ಸರದಾರ್' ಎಂದು ಸಂಬೋಧಿಸುವ ರೂಢಿಯುಂಟು.

ಅಂದಿನಿಂದ ಕೊಂಚ ನೆಮ್ಮದಿಯಿಂದಲೇ ದಿನಗಳೆಯತೊಡಗಿದೆ. ಬೆಳಿಗ್ಗೆ ಕಮಾಂಡರನ ಮಗನಿಗೆ ಪಾಠ, ಒಂದು ತಾಸು ಕಾನೂನಿನ ಶಿಕ್ಷಣ, ಇನ್ನುಳಿದ ಸಮಯ ಫೌಜದಾರರ ಕಚೇರಿಯಲ್ಲಿ ಕೆಲಸ. ಮತ್ತೊಂದು ತಿಂಗಳು ಕಳೆಯುವುದರೊಳಗಾಗಿ ಹೆಡ್‌ಕ್ವಾರ್ಟರಿನಲ್ಲೆಲ್ಲ ನನ್ನ ಹೆಸರು ಪ್ರಖ್ಯಾತಿ ಪಡೆಯಿತು. ನಾನು ಬಹಳ ಜಾಣನೆಂದು ಎಲ್ಲರೂ ಹೊಗಳತೊಡಗಿದರು. ನನ್ನ ಜಾಣತನವೆಷ್ಟೆಂಬುದು ನನಗೇ ಗೊತ್ತು. ಕುರುಡರಲ್ಲಿ ಮೆಳ್ಳ ಶ್ರೇಷ್ಠ

ಎನ್ನುವುದಿಲ್ಲವೆ? ಅಶಿಕ್ಷಿತರಿಂದಲೂ ಅಜ್ಞರಿಂದಲೂ ತುಂಬಿದ ಆ ಸ್ಥಳದಲ್ಲಿ ನಾನೇ 'ಜಾಣ'ನೆನ್ನಿಸಿಕೊಂಡುದುದರಲ್ಲಿ ಅಂಥ ಹೆಗ್ಗಳಿಕೆಯೇನೂ ಇರಲಿಲ್ಲ.

ನಾನು ಬರುವುದಕ್ಕೆ ಮೊದಲು ಹೆಡ್‌ಕ್ವಾರ್ಟರಿನಲ್ಲಿದ್ದ ಸುಶಿಕ್ಷಿತರೆಂದರೆ ಇಬ್ಬರು ಮಾತ್ರ. ಅವರು ಕಚೇರಿಯಲ್ಲಿ ಕೆಲಸ ಮಾಡುವವರು. ಬರೆಯುವ ಕೆಲಸ ನೋಡಿಕೊಳ್ಳುತ್ತಿದ್ದ ಗುಮಾಸ್ತೆಯೊಬ್ಬ, ಟಪಾಲು ಕಳಿಸುವ ಸಿಪಾಯಿಯೊಬ್ಬ. ಅವರಿಬ್ಬರೂ ಶಸ್ತ್ರರಹಿತ ಶಾಖೆಯವರು. ಗುಮಾಸ್ತೆ, ಹವಲ್ದಾರ್ ದರ್ಜೆಯವನಾಗಿದ್ದ. ನಿರಕ್ಷರಿಗಳಾಗಿದ್ದ ಸಶಸ್ತ್ರ ಪೋಲೀಸರು ತಮ್ಮ ಕಾಗದ ಪತ್ರಗಳನ್ನು ಬರೆಸಿಕೊಳ್ಳಲೂ, ಓದಿಸಿಕೊಳ್ಳಲೂ ಈ ಇಬ್ಬರು ಪುಣ್ಯಾತ್ಮರಿಗೇ ಮೊರೆ ಹೋಗುತ್ತಿದ್ದರು. ಒಂದು ಪತ್ರ ಬರೆಸಿಕೊಳ್ಳಬೇಕಿದ್ದರೆ ಎರಡಾಣೆ ನಾಲ್ಕಾಣೆ ತೆರಬೇಕಾಗುತಿತ್ತು. ಅಶಿಕ್ಷಿತ ಸಿಪಾಯಿಗಳನ್ನು ಹಾಗೆ ಸುಲಿದು ಅವರಿಬ್ಬರೂ ಸಾಕಷ್ಟು ಹಣವನ್ನೂ ಸಂಪಾದಿಸಿದ್ದರು.

ನಾನು ಕಚೇರಿಯಲ್ಲಿ ಕೆಲಸ ಮಾಡತೊಡಗಿದಂದಿನಿಂದ ಅರ್ಜಿಗಳನ್ನು ಬರೆಯುವುದನ್ನೂ ಕಲಿತುಕೊಂಡು ಅಶಿಕ್ಷಿತ ಸಿಪಾಯಿಗಳಿಗೆಲ್ಲ ಉಚಿತವಾಗಿ ಬರೆದುಕೊಡತೊಡಗಿದೆ. ಆ ಬಡಜನಕ್ಕೆ ಅದೇ ಒಂದು ದೊಡ್ಡ ವಿಷಯವಾಗಿ ಕಾಣಿಸಿತು. ಅವರೆಲ್ಲ ನನ್ನನ್ನು ಗೌರವಾದರಗಳಿಂದ ನೋಡತೊಡಗಿದರು. ಸುಶಿಕ್ಷಿತರಿಗಿಂತ ಅಶಿಕ್ಷಿತರಲ್ಲಿಯೆ ಕೃತಜ್ಞತಾಗುಣ ಹೆಚ್ಚು. ತಮಗೆ ಉಪಕಾರ ಮಾಡಿದವನನ್ನು ಅವರು ಎಂದೂ ಮರೆಯುವುದಿಲ್ಲ. ಶಸ್ತ್ರರಹಿತ ಪೋಲೀಸರೆಂದರೆ ಮೂಗುಮುರಿಯುತ್ತಿದ್ದ ಆ ಸಶಸ್ತ್ರ ಪೋಲೀಸರೇ ನನ್ನನ್ನು ಮೆಚ್ಚಿಕೊಳ್ಳತೊಡಗಿದುದು ಹೆಡ್‌ಕ್ವಾರ್ಟರಿನಲ್ಲಿ ಒಂದು ಅಪೂರ್ವ ವಿಷಯವಾಗಿತ್ತು. ಅವರೆಲ್ಲರೂ ನನ್ನನ್ನು 'ಸರದಾರ'ನೆಂದೇ ಕರೆಯತೊಡಗಿದರು. ನನಗೆ ತಿಳಿಯದಿದ್ದ ಹಲವಾರು ವಿಷಯಗಳನ್ನು ಪ್ರೀತಿಯಿಂದ ತಿಳಿಸಿ ಹೇಳಿದರು.

ಈಗಲೂ, ಹೆಡ್‌ಕ್ವಾರ್ಟರಿನ ನೆನಪು ಬಂದಾಗಲೆಲ್ಲ ಆ ಅಶಿಕ್ಷಿತ ಮುಗ್ಧ ಸಿಪಾಯಿಗಳ ಮುಖಗಳು ಒಳಗಣ್ಣೆದುರು ಮೂಡುತ್ತವೆ. ಅವರ ಪ್ರಿಯ ಸಹವಾಸದಲ್ಲಿ ನಾನು ಕಳೆದ ಸುಖಮಯ ದಿನಗಳನ್ನು ಜ್ಞಾಪಿಸಿಕೊಂಡು ನಾನು ಪುಲಕಿತನಾಗುತ್ತೇನೆ.

ಆ ಆರುನೂರು ಜನ ಸರಳ ಹೃದಯದ ಸಿಪಾಯಿಗಳನ್ನು ನಾನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದೆ. ಅವರೂ ನನ್ನನ್ನು ಹೃತ್ಪೂರ್ವಕವಾಗಿ ಮೆಚ್ಚಿ

ಕೊಂಡಿದ್ದರು. ಅವರ ಬಿಚ್ಚುನುಡಿಗಳನ್ನು ನಾನು ಪ್ರೀತಿಸಿದೆ, ಅವರ ಮಾತಿನ ಧಾಟಿಯನ್ನು ನಾನು ಪ್ರೀತಿಸಿದೆ, ಅವರ ಚೇಷ್ಟೆಯನ್ನು, ಅವರ ಹುಡುಗಾಟಿಕೆಯನ್ನು ನಾನು ಪ್ರೀತಿಸಿದೆ.

ನಗರದ ಗಜಿಬಿಜಿಯಿಂದ ದೂರವಾಗಿ ಹಸುರಿನಿಂದ ಮೆರೆಯುವ ಗಿಡ ಮರಗಳ ಮಧ್ಯೆ, ಭರದಿಂದ ಬೀಸುವ ಗಾಳಿಗೆ ಮೈಯೊಡ್ಡಿ ನಿಂತ ಆ ಹೆಡ್‌ಕ್ವಾರ್ಟರನ್ನು ನಾನು ಪ್ರೀತಿಸಿದೆ. ಆ ಫೌಜದಾರ, ಆ ಕಮಾಂಡರ್, ಆ ಮುದುಕ ಮಾಸ್ತರ್, ಕಮಾಂಡರನ ಮಗ ಹಣಮ ಎಲ್ಲರನ್ನೂ ನಾನು ಪ್ರೀತಿಸಿದೆ. ಆ ಸ್ಥಳವನ್ನು ನಾನು ಬಿಟ್ಟು ಬಂದುದಕ್ಕೆ ಆಗಲೆ ಹದಿನೈದು ವರ್ಷ ಕಳೆದುಹೋಗಿವೆಯಾದರೂ ಈಗಲೂ ಈ ವ್ಯಕ್ತಿಗಳೆಲ್ಲ ನನಗೆ ಆತ್ಮೀಯರಾಗಿರುವಂತೆಯೆ ಭಾಸವಾಗುತ್ತದೆ. ನನ್ನ ಜೀವನದ ಅಂತ್ಯದವರೆಗೂ ನಾನು ಅವರನ್ನು ಮರೆಯಲಾರೆ. ಅವರೂ ನನ್ನನ್ನು ಮರೆಯಲಿಕ್ಕಿಲ್ಲವೆಂದೇ ನನ್ನ ಭಾವನೆ.

ಅವರ ಹಾಗೆ, ನಾನೆಂದೂ ಮರೆಯಲಾಗದ ಇನ್ನೂ ಕೆಲವು ವ್ಯಕ್ತಿಗಳೊಡನೆ ನನಗೆ ಸಂಬಂಧ ಬಂದಿತ್ತು ಹೆಡ್‌ಕ್ವಾರ್ಟರಿನಲ್ಲಿ.

ಆ ವ್ಯಕ್ತಿಗಳ ವಿಷಯ ವಿವರಿಸದೆ ಪೂರ್ಣವಾಗಲಾರದು ನನ್ನ ಕಥೆ.

೪

ಹಜಾಮರ ರಂಗಪ

ಹೆಡ್‌ಕ್ವಾರ್ಟರಿನ ಜೀವನದಲ್ಲಿ ಹಜಾಮರ ರಂಗಪ್ಪನದೂ ಒಂದು ಮುಖ್ಯ ಸ್ಥಾನ. ಅಲ್ಲಿನ ಆರುನೂರು ಜನ ಸಿಪಾಯಿಗಳೆಲ್ಲ ಅವನನ್ನು ಬಲ್ಲರು. ಆ ಆರುನೂರು ಜನರನ್ನು ಅವನು ಬಲ್ಲ. ಪ್ರತಿಯೊಬ್ಬ ಸಿಪಾಯಿಂದ ವ್ಯಕ್ತಿವೈಶಿಷ್ಟ್ಯಗಳನ್ನೂ ಅವನ ಮನೆಯ ವಿಷಯಗಳನ್ನೂ ಚರಿತ್ರೆಯನ್ನೂ ರಂಗಪ್ಪ ಬಲ್ಲವನು. ಹೊಸದಾಗಿ ಅಲ್ಲಿಗೆ ಬಂದ ಪ್ರತಿಯೊಬ್ಬ ಸಿಪಾಯಿಯೂ ಮೊದಲನೆಯ ಸಲ ತನ್ನ ಬಳಿ ಬಂದಾಗಲೇ ರಂಗಪ್ಪ ಅವನಿಗೆ ಹಜಾಮತಿ ಮಾಡುತ್ತಾ ಅವನ ವಿಷಯಗಳನ್ನೆಲ್ಲ ಕೇಳಿ ತಿಳಿದುಕೊಳ್ಳುತ್ತಿದ್ದ.

ಊರಿಗೆ ಬಂದವಳು ನೀರಿಗೆ ಬರದೆ ಇರುತ್ತಾಳೆಯೇ ಎನ್ನುವಹಾಗೆ ಹೆಡ್‌ಕ್ವಾರ್ಟರಿಗೆ ಬಂದವರು ಹಜಾಮ ರಂಗಪ್ಪನ ಬಳಿಗೆ ಬರದೆ ಇರುತ್ತಾರೆಯೆ ಎನ್ನುವಂತಾಗಿತ್ತು.

ರಂಗಪ್ಪ ಅಂಥ ಆಕರ್ಷಕ ಆಸಾಮಿಯೇನೂ ಅಲ್ಲ. ಕುಳ್ಳನೆಯ ಗುಂಡಗಿನ ದೇಹ. ಮೈಮೇಲೊಂದು ಮಾಸಿದ ಅಂಗಿ. ಅವನಿಗಾಗ ಐವತ್ತು ವರ್ಷವಿರಬಹುದು. ಅವನು ಈ ಭಾಗದವನಲ್ಲ. ಮದ್ರಾಸ್ ಪ್ರಾಂತದಲ್ಲಿನ ಒಂದು ಹಳ್ಳಿಯವನು. ಚಿಕ್ಕ ವಯಸ್ಸಿನಲ್ಲಿಯೆ ಓರೆಕೋರೆ ನಗರಕ್ಕೆ ಬಂದು ಹೆಡ್

ಕ್ವಾರ್ಟರಿನಲ್ಲಿ ನೆಲೆಸಿ ಹಜಾಮತಿಯ ವ್ಯವಸಾಯಕ್ಕಾರಂಭಿಸಿದ್ದನಂತೆ. ಪೋಲೀಸರಲ್ಲದವರಿಗೆ ಅಲ್ಲಿ ಕೋಣೆಗಳನ್ನು ಕೊಡಬಾರದೆಂಬ ನಿಯಮವಿದ್ದರೂ ರಂಗಪ್ಪನ ಮಟ್ಟಿಗೆ ಅದನ್ನು ರದ್ದುಪಡಿಸಿ ಅವನಿಗೂ ಒಂದು ಕೋಣೆಯನ್ನು ಕೊಡಲಾಗಿತ್ತು. ಅವನು ಮದುವೆಯಾಗಿ, ಹೆಂಡರು ಮಕ್ಕಳೊಡನೆ ತಕ್ಕ ಮಟ್ಟಿಗೆ ಸುಖವಾಗಿಯೆ ಸಂಸಾರ ಮಾಡಿಕೊಂಡಿದ್ದ.

ಹೆಡ್‌ಕ್ವಾರ್ಟರಿನಲ್ಲಿ ಪೋಲೀರರ ಸಂಖ್ಯೆ ಹೆಚ್ಚುತ್ತ ಬಂದ ಹಾಗೆ ಅವರೆಲ್ಲರ ಕ್ಷೌರ ಮಾಡುವುದು ಕಷ್ಟಕರವಾಯಿತಾದುದರಿಂದ ರಂಗಪ್ಪ ಮದ್ರಾಸಿನಿಂದ ಸಹಾಯಕರನ್ನು ಕರೆಯಿಸಿದ್ದ.

" ಅವರು ನಂಬಿಕೆಯಿಂದ ಕೆಲಸ ಮಾಡುತ್ತಾರೇನು ರಂಗಪ್ಪ ?" ಎಂದು ನಾನು ಕೇಳಿದಾಗ ಅವನು ತತ್ವಜ್ಞಾನಿಯಂತೆ ನಗುತ್ತಾ ಹೇಳುತ್ತಿದ್ದ :

" ಕೆಲವರು ನಂಬಿಕೆಯಿಂದಿರುತಾರೆ, ಇನ್ನು ಕೆಲವರು ಮೋಸಮಾಡಿ ನನ್ನ ರೊಕ್ಕ ಹಾರಿಸಿಕೊಂಡು ಓಡಿಹೋಗುತಾರೆ. ಏನು ಮಾಡುವದು ಹೇಳಿರಿ ಪ್ರಪಂಚ ಅಂದ ಮೇಲೆ ಎಲ್ಲಾ ತರದ ಮಂದಿ ಇರುವವರೇ."

ಹಾಗೆ ಓಡಿಹೋದವರಿಗೆ ಕೊರತೆಯಿರಲಿಲ್ಲ. ಅವರಲ್ಲೊಬ್ಬ ನೂರಿನ್ನೂರು ರೂಪಾಯಿಗಳ ಜೊತೆಗೆ ರಂಗಪ್ಪನ ಒಬ್ಬ ಮಗಳನ್ನೇ ಓಡಿಸಿಕೊಂಡು ಹೋಗಿದ್ದ ನೆಂಬ ಸಂಗತಿ ನನಗೆ ರಿಕ್ರೂಟನೊಬ್ಬನಿಂದ ಗೊತ್ತಾಯಿತು. ರಂಗಪ್ಪನ ಬಗ್ಗೆ ನನಗೆ ಮರುಕ ಬರದಿರಲಿಲ್ಲ. ಆದರೆ, ಆ ವಿಷಯವನ್ನು ಮಾತ್ರ ನಾನು ಅವ ನೆದುರಲ್ಲಿ ಪ್ರಸ್ತಾಪಿಸಲಿಲ್ಲ.

ಕತ್ತಿಯನ್ನು ಮಸೆಯುತ್ತಾ ರಂಗಪ್ಪ ಆಗಾಗ ತನ್ನ ನೆನಹುಗಳನ್ನು ಹೇಳುತ್ತಿದ್ದುದಿತ್ತು. ಯುರೋಪಿಯನ್ ಡಿ. ಎಸ್. ಪಿ. ಗಳಿಗೂ ಇವನು ಕ್ಷೌರ ಮಾಡುತ್ತಿದ್ದನಂತೆ. ಅವನ ಕೈಯ ಕೌಶಲವನ್ನು ಕಂಡು ಸಂತುಷ್ಟರಾದ ಆ ಸಾಹೇಬರು ಅವನಿಗೆ ಒಂದು ಸಲಕ್ಕೆ ಒಂದು ರೂಪಾಯಿಯವರೆಗೂ ಕೊಡುತ್ತಿದ್ದರಂತೆ.

" ಗೋರಾ (ಬಿಳಿ) ಮಂದಿಯ ದೊಡ್ಡ ಮನಸು ಕಾಳಾ (ಕಪ್ಪು) ಮಂದಿ ಗೆಲ್ಲಿಂದ ಬರಬೇಕು ಹೇಳಿರಿ. ಇವರ ತಲೆ ಗಡ್ಡ ಎಲ್ಲಾ ಬೋಳಿಸಿದರೂ ಎರಡಾಣೆ ಕೊಡಲು ಅಳುತಾರೆ," ಎಂದು ಹೇಳಿ ವಿಷಾದದ ನಗು ಬೀರುತ್ತಿದ್ದ ರಂಗಪ್ಪ.

ಹೆಡ್‌ಕ್ವಾರ್ಟರಿನಲ್ಲಿದ್ದ ಪೋಲೀಸರೆಲ್ಲ ಅವನಲ್ಲಿಯೆ ಕ್ಷೌರಕ್ಕೆ ಹೋಗು

ತ್ತಿದ್ದರು. ಪೋಲೀಸರ ಮಕ್ಕಳಿಗೂ ಅವನಲ್ಲಿಯೆ ಹಜಾಮತಿ. ಪ್ರತಿ ತಿಂಗಳೂ ಎರಡು ಬಾರಿ ಕ್ರಾಪ್ ಕಟ್, ಎಷ್ಟು ಬಾರಿಯಾದರೂ ಗಡ್ಡ ಮಾಡಿಸಿಕೊಳ್ಳ ಬಹುದು. ಅದಕ್ಕಾಗಿ ಪ್ರತಿಯೊಬ್ಬ ಪೋಲೀಸ ಕೊಡಬೇಕಾಗಿದ್ದುದು ತಿಂಗಳಿಗೆ ಕೇವಲ ಏಳು ಆಣೆ. ಆ ಏಳಾಣೆಗಳಲ್ಲಿಯೆ ಅವರ ಮಕ್ಕಳ ಕ್ಷೌರವೂ ಆಗುತ್ತಿತ್ತು. ಬಡವರಿಗೆ ಮಕ್ಕಳು ಹೆಚ್ಚು – ಪೋಲೀಸರಿಗೂ ಮಕ್ಕಳು ಹೆಚ್ಚು. ಒಬ್ಬೊಬ್ಬ ಪೋಲೀಸರಿಗೆ ಹತ್ತು ಹತ್ತು ಮಕ್ಕಳೂ ಇರುತ್ತಿದ್ದರು. ಅಂಥವರ ಬಗ್ಗೆ ರಂಗಪ್ಪನಿಗೆ ಕೊಂಚ ಮುನಿಸು. ಬೆಳಗಿನ ನಾಲ್ಕು ಗಂಟೆಗೆ ಆರಂಭವಾದ ಅವನ ಕಾಯಕ ರಾತ್ರಿ ಎಂಟರವರೆಗೆ ಸತತವಾಗಿ ಸಾಗುತ್ತಿತ್ತು.

ಕೊಡಬೇಕಾದ ಹಣವನ್ನು ಕೊಡದೆ ತಪ್ಪಿಸುವುದರಲ್ಲಿ ಪೋಲೀಸರು ತುಂಬಾ ಪಳಗಿದವರು. ರಂಗಪ್ಪನ ಏಳಾಣೆಗಳನ್ನು ಮಾತ್ರ ಯಾರೂ ಮುಳುಗಿಸುತ್ತಿರಲಿಲ್ಲ. ಅವನೇನಾದರೂ ಮುನಿದುಕೊಂಡರೆ ಪೋಲೀಸರ ಮರ್ಯಾದೆಯುಳಿಯುವಂತಿರಲಿಲ್ಲವಲ್ಲ! ಮುಖದಲ್ಲಿ ಒಂದು ಕೂದಲೂ ಉಳಿಯ ದಂತೆ ಸ್ವಚ್ಛವಾಗಿ ಗಡ್ಡ ತೆಗೆಸಬೇಕೆಂಬುದು ಪೋಲೀಸ್ ಖಾತೆಯಲ್ಲಿನ ಮುಖ್ಯ ಕಟ್ಟಳೆ. ಕವಾಯತಿನ ಕಾಲಕ್ಕೆ ಮುಖದ ಮೇಲೆ ಗಡ್ಡದ ಕೂದಲು ಕಾಣಿಸಿದ ರಾಯಿತು, ಮೇಲಧಿಕಾರಿಗಳು ಆ ಪೋಲೀಸರನ್ನು ಬಾಯಿಗೆ ಬಂದಹಾಗೆ ಬಯ್ಯುತ್ತಿದ್ದರು. ಆ ತಪ್ಪಿಗಾಗಿ 'ಶಿಕ್ಷೆಯ ಪರೇಡ್' ವಿಧಿಸುತ್ತಿದ್ದುದೂ ಇತ್ತು. ಅಂತೆಯೆ ಹಜಾಮರ ರಂಗಪ್ಪನನ್ನು ಸಂತುಷ್ಟವಾಗಿಡಲು ಎಲ್ಲ ಪೋಲೀಸರೂ ಯತ್ನಿಸುತ್ತಿದ್ದರು. ಅವನಿಂದ ಕ್ಷೌರ ಮಾಡಿಸಿಕೊಳ್ಳುತ್ತಿದ್ದಾಗ ಅವನನ್ನು ಅನಾವಶ್ಯಕವಾಗಿ ಹೊಗಳುವುದು, ಅವನ ಕೈ ಚಳಕವನ್ನು ಪ್ರಶಂಪಿ ಸುವುದು ನಡೆಯುತ್ತಿತ್ತು. ನಿರೀಕ್ಷಕರಿಗೆ ಅದೆಲ್ಲವೂ ಬಲು ಮೋಜಾಗಿ ಕಾಣುತ್ತಿತ್ತು.

ರಂಗಪ್ಪನನ್ನು ಪ್ರಸನ್ನಗೊಳಿಸಲು ನಾನೇನೂ ವಿಶೇಷ ಶ್ರಮಪಡ ಬೇಕಾಗಲಿಲ್ಲ. ಅವನು ಹೇಳುವುದಕ್ಕೆಲ್ಲ ಹೂಂಗುಟ್ಟುತ್ತಾ ತೆಪ್ಪಗೆ ಕೂತಿರುತ್ತಿದ್ದೆ.

"ಶಿವಣ್ಣನವರು ಬಹಳ ಚಲೋ ಮನುಷ್ಯರು. ಮಾತಿನಲ್ಲಿ ಬಹಳ ಜಾಣರು," ಎಂದು ನನ್ನನ್ನು ಪ್ರಶಂಸಿಸುತ್ತಿದ್ದ ರಂಗಪ್ಪ.

ವಾಸ್ತವವಾಗಿ ನಾನು ಅವನೊಡನೆ ಮಾತನಾಡುತ್ತಿದ್ದುದೇ ಕಡಮೆ.

ಅವನ ಮಾತುಗಳ ಮಧ್ಯೆ ಬಾಯಿಹಾಕದೆ ತಾಳ್ಮೆಯಿಂದ ಕೇಳುತ್ತ ಕುಳಿತಿರುತ್ತಿದ್ದುದೇ ನನ್ನ ಜಾಣತನವೆಂದು ತೋರುತ್ತದೆ. ತಮ್ಮ ಧ್ವನಿಯನ್ನು ತಾವೇ ಪ್ರೀತಿಸುವ ವ್ಯಕ್ತಿಗಳೂ ಉಂಟು ಪ್ರಪಂಚದಲ್ಲಿ. ಅಂಥವರಲ್ಲಿ ರಂಗಪ್ಪನೂ ಒಬ್ಬನಾಗಿದ್ದ.

ಒಂದುದಿನ ಅವನಾಗಿಯೆ ನನ್ನನ್ನು ಪ್ರಶ್ನಿಸಿದ:

"ನಿಮಗಿನ್ನೂ ಮದುವೆಯಾಗಿಲ್ಲ ಹೌದಲ್ಲೋ?"

"ಇಲ್ಲ," ಎಂದು ನಗುತ್ತಾ ಹೇಳಿದೆ ನಾನು.

"ಬಹಳ ಚಲೋದಾಯಿತು, ಬಹಳ ಚಲೋದಾಯಿತು. ಮದುವೆಯಾಗದೆ ಇರುವದೇ ನಿಜವಾದ ಸುಖ. ಮದುವೆಯೆಂದರೆ ಮನುಷ್ಯನ ಸ್ವಾತಂತ್ರ್ಯ ಸುಖ ಎರಡನ್ನೂ ನಾಶಮಾಡುವ ರಾಕ್ಷಸ."

ಸಹಜವಾಗಿಯೆ ನನಗೆ ನಗು ಬಂದಿತು.

ರಂಗಪ್ಪ ನಗಲಿಲ್ಲ. ತನ್ನ ಶಾಂತ ಗಂಭೀರ ಸ್ವರದಲ್ಲಿ ಅವನು ಹೇಳಿದ:

"ಚೇಷ್ಟೆಯ ಮಾತಲ್ಲರೀ ಇದು ಸರದಾರ್. ಅನುಭವದ ಮಾತು, ಅನುಭವದ ಮಾತು!"

ಮತ್ತೆ ನಾನು ನಗಲಿಲ್ಲ. ಆ ವಿಷಯವನ್ನು ಅಲ್ಲಿಗೇ ಬಿಟ್ಟು ರಂಗಪ್ಪ ಅಧಿಕಾರಿಗಳೊಬ್ಬರ ವ್ಹಿಸ್ಕಿ ಬಾಟಲುಗಳ ಕಥೆ ಹೇಳಲು ಮೊದಲು ಮಾಡಿದ. ಅಂಥ ನೂರಾರು ಕಥೆ ಹೇಳಿ ನಮ್ಮನ್ನು ನಗಿಸುತ್ತಿದ್ದ ರಂಗಪ್ಪ.

ಈಗಲೂ, ಅವನ ನೆನಪು ಬಂದಾಗಲೆಲ್ಲ ನನಗೆ ನಗುವುಕ್ಕಿ ಬರುತ್ತದೆ. ಅದು ವ್ಯಂಗ್ಯವಾದ ನಗುವಲ್ಲ; ಸಂತೋಷದ ನಗು.

ಅನಂತರದ ಈ ಹದಿನೈದು ವರ್ಷಗಳಲ್ಲಿ ನೂರಾರು ಹಜಾಮರನ್ನು ನಾನು ಕಂಡಿದ್ದೇನೆ. ಹಜಾಮರೆಂದರೆ ಹರಟೆಯಲ್ಲಿ ನುರಿತವರೆಂಬ ಮಾತು ನಿಜ. ಆದರೆ, ಹೆಡ್‌ಕ್ವಾರ್ಟರಿನ ರಂಗಪ್ಪನ ಹಾಗೆ ಸೊಗಸಾಗಿ ಹರಟಬಲ್ಲ ಇನ್ನೊಬ್ಬ ಹಜಾಮ ಕಾಣಸಿಗುವುದು ಅಪರೂಪ.

೫

ಹಾಲಿನ ಹಣಮುಕ್ಕ

ಹಜಾಮರ ರಂಗಪ್ಪನ ಹಾಗೆಯೆ ಹೆಡ್‌ಕ್ವಾರ್ಟರಿನ ಜೀವನದಲ್ಲಿ ರೋಮಾಂಚಕಾರಿಯಾದ ಪಾತ್ರವಹಿಸುತ್ತಿದ್ದ ಇನ್ನೊಂದು ವ್ಯಕ್ತಿ ಹಾಲಿನ ಹಣಮುಕ್ಕ.

ರಿಕ್ರೂಟ್ ಆಗಿ ಅಲ್ಲಿಗೆ ಹೋದ ಮರುದಿನವೆ ಹಣಮುಕ್ಕನನ್ನು ನಾನು ಕಂಡೆ. ಆ ಬೆಳಿಗ್ಗೆ ನಾವು ಎದ್ದು ಮುಖ ತೊಳೆದುಕೊಳ್ಳುತ್ತಿದ್ದ ಹಾಗೆ ಹಿತ್ತಿಲ ಬಾಗಿಲಿನಿಂದ ಅವಳ ಧ್ವನಿ ಕೇಳಬಂದಿತು.

"ಇನ್ನೂ ಎದ್ದೀರಿಲ್ರೀ ಸರದಾರರs!"

ಮಂಜುಲತೆ, ಮೋಹಕತೆಗಳೆರಡೂ ಸಮಸಮವಾಗಿ ಬೆರೆತುಕೊಂಡಿದ್ದುವು ಆ ಧ್ವನಿಯಲ್ಲಿ. ಅದು ಕಿವಿಗೆ ಬಿದ್ದೊಡನೆಯೆ ಅದನ್ನಾಡಿದವಳು ರೂಪವತಿಯೂ ಯುವತಿಯೂ ಬಿನ್ನಾಣಗಿತ್ತಿಯೂ ಆಗಿರಬೇಕೆಂಬ ಕಲ್ಪನೆ ಬರುವಂತಿತ್ತು. ನಾನು ಮಲ್ಲಾಪುರನ ಮುಖ ನೋಡಿದೆ; ಅವನು ನನ್ನ ಮುಖ ನೋಡಿದ, ಮನಗೂಳಿ ನಮ್ಮಿಬ್ಬರ ಮುಖ ನೋಡುತ್ತಾ ಮೆಲ್ಲನೆ ಕಣ್ಣು ಮಿಟುಕಿಸಿ ನಕ್ಕು ಹಾಲಿನ ಪಾತ್ರೆ ಹಿಡಿದುಕೊಂಡು ಹಿತ್ತಿಲ ಕಡೆ ಧಾವಿಸಿದ. ನಾನೂ ಸಹ ಕುತೂಹಲದಿಂದ ಅವನನ್ನು ಹಿಂಬಾಲಿಸಿಕೊಂಡು ಹೋದೆ.

ಬಚ್ಚಲಿನ ಹತ್ತಿರ ತನ್ನ ದೊಡ್ಡ ಬುಟ್ಟಿಯಿಟ್ಟುಕೊಂಡು ಕುಳಿತಿದ್ದ ಹಣಮಕ್ಕ ತಲೆಯೆತ್ತಿ ನನ್ನನ್ನು ದಿಟ್ಟಿಸಿ ನೋಡಿದಳು. ಅವಳ ವಿಶಾಲ ನೇತ್ರಗಳಲ್ಲಿ ನಗೆಮಿಂಚು ಹರಿದಾಡುತ್ತಿತ್ತು. ಹಣಮಕ್ಕನಿಗಾಗ ಮೂವತ್ತೋ ಮೂವತ್ತೈದೋ ವರ್ಷ ವಯಸ್ಸು. ಗೋದಿಗೆಂಪು ಬಣ್ಣದ ದೇಹ. ತಿದ್ದಿ ಮಾಡಿದಂತಿದ್ದ ಮೂಗು. ಸ್ವೇಚ್ಛೆಯಿಂದ ಉಂಡು ತಿಂದು ಮಾಟವಾಗಿ ಬೆಳೆದಿದ್ದ ದೇಹದ ಮೇಲೆ ವಯಸ್ಸು ತನ್ನ ಮುದ್ರೆಯೊತ್ತಿರಲಿಲ್ಲ ಇನ್ನು. ಅವಳು ನಕ್ಕಾಗ ಅವಳ ಸಮಸ್ತ ದೇಹವೂ ನಕ್ಕಂತೆ ತೋರುತ್ತಿತ್ತು.

"ಯಾರೋ ಹೊಸಾ ಸರದಾರ ಬಂದಾರಲ್ಲರೀ!" ಎಂದು ಕೇಳಿದಳು ಹಣಮಕ್ಕ, ಮೋಹಕವಾಗಿ ನಗುತ್ತ.

ಮನಗೂಳಿಯಿಂದ ನನ್ನ ಹೆಸರು, ಊರು, ಇನ್ನಿತರ ವಿಷಯಗಳನ್ನರಿತು ಕೊಂಡ ಬಳಿಕ ಹಣಮಕ್ಕ ನನ್ನ ಕಡೆ ತಿರುಗಿ ನಗುನಗುತ್ತ ಕೇಳಿದಳು:

"ನೀವೇನು ಚಾ ಕುಡೀತೀರೋ ಹಾಲು ಕುಡೀತೀರೋ ?"

"ಕುಡಿಯುವಂಥಾ ಹಾಲು ಸಿಕ್ಕರೆ ಕುಡೀತೇನೆ," ಎಂದು ನಾನು ಮಾರ್ಮಿಕವಾಗಿ ಉತ್ತರವಿತ್ತೆ.

ಅವಳು ಚದುರೆ. ನನ್ನ ಮಾತಿನ ಅಂತರಾರ್ಥವನ್ನು ಒಡನೆಯೆ ಗ್ರಹಿಸಿ ಕೊಂಡು ನನಗೆಂದೇ ವಿಶಿಷ್ಟವಾದ ನಗು ನಕ್ಕು ಮೆಲ್ಲಗೆ ಹೇಳಿದಳು:

"ಹಾಲು ಕುಡಿದು ಗೊತ್ತಿದ್ದವರಿಗೆ ಹಾಲೇ ಕೊಡ್ತೀನಿ ನಾನು."

"ಬ್ಯಾರೆಯವರಿಗೇನು ನೀರು ಕೊಡುತೀಯಾ?" ಎಂದು ನಾನು ಕೇಳಲಿಲ್ಲ. ಅವಳಾಗಲೆ ಎದ್ದು ತನ್ನ ಬುಟ್ಟಿಯನ್ನು ತಲೆಯ ಮೇಲಿಟ್ಟುಕೊಂಡು ಬಳುಕುತ್ತ ಬಳುಕುತ್ತ ಮುಂದಿನ ಕೋಣೆಗೆ ನಡೆದಿದ್ದಳು.

"ಎಂಥಾ ಬ್ಯೂಟೀ !" ಎಂದೆ ನಾನು.

"ಎಂಥಾ ಚ್ಯೂಟೀ !" ಎಂದ ಮಲ್ಲಾಪುರ.

"ಎಂಥಾ ಕ್ಯೂಟೀ !" ಎಂದ ಮನಗೂಳಿ,

ಅಷ್ಟೆ. ಮುಂದೆ ಅವಳ ವಿಚಾರ ಮಾತನಾಡಲು ಮೂವರಿಗೂ ಸಂಕೋಚ ವೆನ್ನಿಸಿತು.

ಪ್ರತಿದಿನವೂ ಸಮಯಕ್ಕೆ ಸರಿಯಾಗಿ ತಪ್ಪದೆ ಬರುತ್ತಿದ್ದಳು ಹಣಮಕ್ಕ –

ನಾನೂ ಅವಳೊಡನೆ ತಪ್ಪದೆ ಮಾತನಾಡುತ್ತಿದ್ದೆ. ಒಂದು ವಾರದೊಳಗಾಗಿ ಅವಳ ಸಮಸ್ತ ಚರಿತ್ರೆಯನ್ನು ನಾನು ಅರಿತುಕೊಂಡೆ.

ಅವಳು ವಿಧವೆ. ಗಂಡ ತೀರಿಕೊಂಡುದಕ್ಕೆ ಹತ್ತು ವರ್ಷವಾಗಿತ್ತು. ಅವಳ ಸಮಾಜದಲ್ಲಿ ವಿಧವಾ ವಿವಾಹ ನಿಷಿದ್ಧವಲ್ಲದಿದ್ದರೂ ಹಣಮಕ್ಕನಿಗೇ ಆ ಬಗ್ಗೆ ಆಸಕ್ತಿಯಿರಲಿಲ್ಲವಂತೆ.

"ನಿನಗೇನು ಇನ್ನೂ ತುಂಬು ಪ್ರಾಯ. ಮತ್ತೊಂದು ಮದುವೆಯಾಗಿದ್ದರೆ ಸುಖದಿಂದಿರಬಹುದಿತ್ತಲ್ಲ ಹಣಮಕ್ಕಾ?" ಎಂದು ನಾನು ಕೇಳಿದಾಗ ಅವಳು ಕೆನ್ನೆಗಳಲ್ಲಿಯೆ ನಗುತ್ತ ಹೇಳಿದ್ದಳು :

"ಈಗಾದರೂ ನನಗೇನು ದುಃಖ ಐತಿ ಬಿಡಿರಿ. ಒಬ್ಬ ಗಂಡನ ಅಂಕೆಯೊಳಗ ಸಾಯೂದಾದ್ರೂ ತಪ್ಪಿತು. ಈಗ ನಾ ಆರಾಮ ಇದ್ದೀನಿ."

ಅವಳ ಗಂಡ ಕಾಲವಾದಾಗ ಮನೆಯಲ್ಲಿ ನಾಲ್ಕು ನೂರು ರೂಪಾಯಿಗಳಿದ್ದುವಂತೆ. ಅವುಗಳಿಂದ ಮೂರು ಎಮ್ಮೆಗಳನ್ನು ಕೊಂಡು ಹಣಮಕ್ಕ ಹಾಲು ಮಾರುವ ವ್ಯವಸಾಯವನ್ನಾರಂಭಿಸಿದ್ದಳಂತೆ. ಹೊಸದರಲ್ಲಿ ಅವಳು ಚಹದಂಗಡಿಗೆ ಹಾಲು ಮಾರುತ್ತಿದ್ದಳು. ಆದರೆ ಅವರು 'ಡಿಗ್ರಿ' ಹಿಡಿದು ಹಾಲು ಕೊಳ್ಳುವವರಾದುದರಿಂದ ಹಣಮಕ್ಕನಿಗೆ ಲಾಭವಾಗುತ್ತಿರಲಿಲ್ಲ. ಅದೇ ವೇಳೆಯಲ್ಲಿ ಪೋಲೀಸರನೇಕರ ಪರಿಚಯವಾಯಿತು. ಹಾಲಿಗಾಗಿ ಪೋಲೀಸರೆಲ್ಲರೂ ಆಗ ನಗರಕ್ಕೆ ಬರಬೇಕಾಗುತಿತ್ತು. ಹಣಮಕ್ಕನ ಹಾಲಿನಿಂದಲೂ ರೂಪದಿಂದಲೂ ಸಂತುಷ್ಟರಾದ ಒಬ್ಬಿಬ್ಬರು ಪೋಲೀಸರು ಅವಳು ಹೆಡ್‌ಕ್ವಾರ್ಟರಿಗೇ ಬಂದು ವ್ಯವಹಾರ ನಡಸಿದರೆ ತುಂಬಾ ಲಾಭವಾಗಬಹುದೆಂದು ಸೂಚಿಸಿದಾಗ ಅವಳೂ ಒಪ್ಪಿದ್ದಳು. ಹೆಡ್‌ಕ್ವಾರ್ಟರಿನ ಸಮೀಪದಲ್ಲಿಯೆ ಒಂದು ಮನೆಯನ್ನು ಬಾಡಿಗೆಗೆ ಹಿಡಿದು ಅಲ್ಲಿಗೆ ತನ್ನ ಬಿಡಾರವನ್ನು ಸ್ಥಳಾಂತರಿಸಿದ್ದಳು. ಒಂಡೆರಡು ವರ್ಷಗಳಲ್ಲಿ ಆ ಮನೆಯನ್ನು ಖರೀದಿಗೆ ತೆಗೆದುಕೊಂಡುದಲ್ಲದೆ, ತನ್ನ ಎಮ್ಮೆಗಳನ್ನು ಮೇಯಿಸಲು ಪಕ್ಕದಲ್ಲಿದ್ದ ಪಡಭೂಮಿಯನ್ನೂ ಕೊಂಡುಕೊಂಡಿದ್ದಳು. ಅದರಲ್ಲಿ ಸಾಕಷ್ಟು-ಹುಲ್ಲು ಬೆಳೆಯುತ್ತಿತ್ತು. ಗಿರಾಕಿಗಳ ಸಂಖ್ಯೆ ಹೆಚ್ಚಿದ ಹಾಗೆ ಹಣಮಕ್ಕನ ಎಮ್ಮೆಗಳ ಸಂಖ್ಯೆಯಲ್ಲೇನೂ ಹೆಚ್ಚಳವಾಗಲಿಲ್ಲ. ಮೂರು ಎಮ್ಮೆಗಳ ಹಾಲನ್ನೇ ಹೆಡ್‌ಕ್ವಾರ್ಟರಿನಲ್ಲಿನ ನೂರಾರು ಸಂಸಾರಗಳಿಗೆ ಹಂಚುತ್ತಿದ್ದಳು ಹಣಮಕ್ಕ.

"ನಿನ್ನ ಎಮ್ಮೆಗಳೇನು ಕಾಮಧೇನು ಅವತಾರವೇನು ಹಣಮಕ್ಕ?" ಎಂದು ನಾನೊಮ್ಮೆ ಕೇಳಿದಾಗ,

"ಕಾಮಧೇನು ಯಾತಕ್ಕ ಬೇಕ್ರೀ ಇದಕ್ಕೆ? ನನ್ನ ಎಮ್ಮೆಗಳು ಯಾವ ಕಾಮಧೇನುವಿಗೂ ಕಡಿಮೆಯವಲ್ಲ – ಕೊಡಗಟ್ಲೆ ಹಾಲು ಹಿಂಡುತ್ತವೆ," ಎಂದು ಉತ್ತರವಿತ್ತು ಮಾರ್ಮಿಕವಾದ ನಗು ಬೀರಿದ್ದಳು ಹಣಮಕ್ಕ. ತಲೆಯಲ್ಲಿ ಸ್ವಲ್ಪ ಬುದ್ಧಿಯಿದ್ದವರಿಗೆಲ್ಲ ಅವಳ ಆ ನಗುವಿನ ಅರ್ಥ ಹೊಳೆಯುತ್ತಿತ್ತು. ಅವಳು ಪೂರೈಸುತ್ತಿದ್ದ ಹಾಲಿನಲ್ಲಿ ಕೆರೆಯ ನೀರಿನ ಪ್ರಮಾಣವೇ ವಿಶೇಷ ವಾಗಿರುತ್ತಿತ್ತು. ಆ ರಹಸ್ಯವನ್ನು ಎಲ್ಲರೂ ಅರಿತಿದ್ದರಾದರೂ ಅವಳೆದುರಿಗೆ ಮಾತ್ರ ಯಾರೂ ಆ ಬಗ್ಗೆ ಚಕಾರವೆತ್ತುತ್ತಿರಲಿಲ್ಲ. ಎಲ್ಲರನ್ನೂ ಸುಮ್ಮನಾಗಿಸುವ ಚಮತ್ಕಾರವಿತ್ತು ಅವಳ ನಗೆಯಲ್ಲಿ.

ಹಣಮಕ್ಕನಿಗಿಂತ ಮೊದಲು ಹೆಡ್‌ಕ್ವಾರ್ಟರಿನಲ್ಲಿ ಹಾಲು ಮಾರಿದವ ರಾರೂ ಅವಳಂತೆ ಹಣಮಾಡಿಕೊಂಡಿರಲಿಲ್ಲ. ಪೋಲೀಸರಿಂದ ಹಣ ವಸೂಲು ಮಾಡುವುದು ಬಹಳ ಪ್ರಯಾಸದ ಕೆಲಸ. ಹಣಮಕ್ಕ ಮಾತ್ರ ತನ್ನದೇ ಆದುದೊಂದು ವಿಶಿಷ್ಟ ತಂತ್ರದಿಂದ ಆ ಕೆಲಸವನ್ನು ಸುಲಭಗೊಳಿಸಿಕೊಂಡಿದ್ದಳು. ಹಣ ಕೊಡಲಿಲ್ಲವೆಂಬ ಕಾರಣದಿಂದ ಅವಳು ಹಾಲು ಕೊಡುವುದನ್ನು ನಿಲ್ಲಿಸು ತ್ತಿರಲಿಲ್ಲ. ಅಂಥ ಗಿರಾಕಿಗಳನ್ನೂ ಉಪಾಯಾಂತರಗಳಿಂದ ಹಾದಿಗೆ ತರುವ ಕಲೆ ಅವಳ ಹಸ್ತಗತವಾಗಿತ್ತು.

ಹಣಮಕ್ಕನಿಗೆ ಓದುಬರೆಹ ಗೊತ್ತಿರಲಿಲ್ಲ. ಅವಳ ಲೆಕ್ಕವೆಂದರೆ ಬಾಯ ಲೆಕ್ಕ. ಎರಡು – ಎರಡೂವರೆ ನೂರು ಮನೆಗಳಿಗೆ ಪೂರೈಸುತ್ತಿದ್ದ ಹಾಲಿನ ಲೆಕ್ಕವನ್ನೆಲ್ಲ ಚೊಕ್ಕವಾಗಿ ನೆನಪಿಟ್ಟುಕೊಳ್ಳುತ್ತಿದ್ದಳು. ಅಂಥ ಪ್ರಚಂಡ ಜ್ಞಾಪಕಶಕ್ತಿ ಅವಳದು. ರೊಕ್ಕ ವಸೂಲುಮಾಡುವಾಗ ಯಾರೊಡನೆಯೂ ತಂಟೆ ಮಾಡಿದವಳಲ್ಲ. ಗಿರಾಕಿಗಳ ಸ್ವಭಾವ ವಿಶೇಷಗಳನ್ನರಿತುಕೊಳ್ಳಲು ಬಹಳ ದಿನ ಬೇಕಾಗುತ್ತಿರಲಿಲ್ಲ ಅವಳಿಗೆ. ಹಣ ಮುಳುಗಿಸುವಂಥ ಜನರನ್ನು ತನ್ನ ಸವಿ ಮಾತು, ಸವಿ ನಗೆ, ಸೌಂದರ್ಯಗಳಿಂದ ವಶಮಾಡಿಕೊಂಡು ಒಂದಕ್ಕೆರಡರಷ್ಟು ವಸೂಲು ಮಾಡುತ್ತಿದ್ದಳೆಂದು ಹೆಡ್‌ಕ್ವಾರ್ಟರಿನಲ್ಲಿ ಪ್ರತೀತಿ ಯಿತ್ತು. "ಬೇರೆಯವರಿಗೆಲ್ಲ ಟೊಪ್ಪಿಗೆ ಹಾಕುವ ಪೋಲೀಸರಿಗೂ ಟೊಪ್ಪಿಗೆ

ಹಾಕುವಾಕೆ ಹಣಮಕ್ಕ," ಎಂದು ಅವಳ ಪ್ರಖ್ಯಾತಿ. ಹೆಡ್‌ಕ್ವಾರ್ಟರಿನ ವ್ಯಾಪಾರದಿಂದಲೇ ಅವಳು ಸಾಕಷ್ಟು ಹಣ ಮಾಡಿಕೊಂಡಿದ್ದಳು.

"ನಿನ್ನ ಮನೆಯಲ್ಲಿ ಇರುವಾಕೆ ನೀನೊಬ್ಬಳೇ. ಕಳ್ಳರು ಬಂದು ನಿನ್ನ ರೊಕ್ಕ ಎಬ್ಬಿಸಲಿಕ್ಕಿಲ್ಲವೇ ಹಣಮಕ್ಕಾ?" ಎಂದು ನಾವು ತಮಾಷೆಗಾಗಿ ಕೇಳಿದಾಗ ಅವಳು, ತಾನು ಹುಲಿಯಂಥ ನಾಯಿಯೊಂದನ್ನು ಸಾಕಿಕೊಂಡಿದ್ದು ಎಂಥ ದರೋಡೆಗಾರರು ಬಂದರೂ ಅದೊಂದೇ ಹೋರಾಡಿ ಅವಳ ಮನೆಯನ್ನು ರಕ್ಷಿಸಬಲ್ಲುದೆಂದು ಹೇಳುತ್ತಿದ್ದಳು. ಅದು ದಿಟವೂ ಆಗಿತ್ತು.

ಒಂದು ರಾತ್ರೆ ಅವಳ ಮನೆಯ ಹತ್ತಿರ ಹೆಜ್ಜೆಗಳ ಸಪ್ಪಳಾಯಿತಂತೆ. ಒಳಗಡೆ ಇದ್ದ ಅವಳ ನಾಯಿ ಭೀಕರವಾದ ಧ್ವನಿಯಲ್ಲಿ ಬೊಗಳಲು ಮೊದಲು ಮಾಡಿತಂತೆ. ಹಣಮಕ್ಕ ಎಚ್ಚತ್ತುಕೊಂಡು ಕಿಟಕಿಯಲ್ಲಿ ಮುಖವಿಟ್ಟು ನೋಡಿದಾಗ ಹೊರಗಡೆ ಯಾರೋ ನಿಂತುಕೊಂಡದ್ದು ಕಾಣಿಸಿತಂತೆ. ಅವಳು ನಾಯಿಗೆ 'ಛೂ' ಎನ್ನುತ್ತಲೂ ಅದು ಭಯಂಕರವಾಗಿ ಬೊಗಳಿ ಗದ್ದಲಮಾಡಿ ನೆರೆಹೊರೆಯವರನ್ನೆಲ್ಲ ಎಚ್ಚರುಗೊಳಿಸಿತಂತೆ. ಇವಳ ಮನೆಗೆ ಕನ್ನವಿಡಲು ಬಂದ ಕಳ್ಳರು ಅಲ್ಲಿಂದ ತಪ್ಪಿಸಿಕೊಂಡು ಹೋಗುವುದೇ ಕಷ್ಟವಾಯಿತಂತೆ. ಅಂದಿನಿಂದ ಅವಳ ಆ ಹುಲಿನಾಯಿಯ ಕೀರ್ತಿ ಎಲ್ಲ ಕಡೆಗೂ ಪಸರಿಸಿತಂತೆ. ಹಣಮಕ್ಕನಿಲ್ಲದ ವೇಳೆಯಲ್ಲಿ ಅವಳ ಮನೆಯ ಹತ್ತಿರ ಸುಳಿದಾಡುವುದಕ್ಕೂ ಜನ ಹೆದರುತ್ತಿದ್ದರು. ಅವಳ ನಾಯಿಯ ಪ್ರತಾಪ ಅಂಥದು. ಹಣಮಕ್ಕನ ಜೊತೆಗೆ ಬಂದವರ ಮೇಲೆ ಮಾತ್ರ ಅದು ಬೀಳುತ್ತಿರಲಿಲ್ಲ.

ಮೋಜಿಗಾಗಿ ಆ ನಾಯಿಗೆ "ಸಿಪಾಯಿ" ಎಂದು ಹೆಸರಿಟ್ಟಿದ್ದಳು ಹಣಮಕ್ಕ.

"ಪೋಲೀಸರ ಅವಮಾನ ಮಾಡಬೇಕು ಅಂತ ಇಂಥಾ ಹೆಸರಿಟ್ಟಿದ್ದೀಯೇನು ನಿನ್ನ ನಾಯಿಗೆ?" ಎಂದು ನಾನೊಮ್ಮೆ ಕೇಳಿದೆ.

"ಅದು ನನ್ನ ಮನೆ ಕಾಯುತ್ತೈತಿ. ನೀವು ಮಂದಿಯ ಮನೆ ಕಾಯುತ್ತೀರಿ. ಅದೂ ನನ್ನ ಹಾಲು ಕುಡಿಯುತ್ತೈತಿ. ನೀವೂ ನನ್ನ ಹಾಲು ಕುಡೀತೀರಿ. ಅಂದ ಮ್ಯಾಲ...." ಎಂದಿಷ್ಟೇ ಹೇಳಿ ವಾಕ್ಯವನ್ನು ಪೂರ್ಣಗೊಳಿಸದೆ ನಕ್ಕುಬಿಟ್ಟಳು ಹಣಮಕ್ಕ.

“ಇಂಥಾ ಮಾತು ಎಲ್ಲಾ ಎಲ್ಲಿ ಕಲಿತಿಯೇ ಹಣಮುಕ್ಕಾ?” ಎಂದು ನಾನು ಕೇಳಿದಾಗ ಅವಳು ಸೊಗಸಾಗಿ ಕೊರಳು ಕೊಂಕಿಸಿ ಹೇಳಿದಳು:

“ಊಂ. ಅದೆಲ್ಲಾ ಗುಟ್ಟು. ಹೇಳುವಂಥಾ ಮಾತಲ್ಲ.”

ಅವಳು ಗಿರಾಕಿಗಳಿಗೆ ಹಾಲು ಕೊಡುವ ಪದ್ಧತಿಯದೂ ಒಂದು ವಿಶೇಷವೆ. ಅವಳ ಬುಟ್ಟಿಯಲ್ಲಿ ನಾಲ್ಕು ಪಾತ್ರೆಗಳಿರುತ್ತಿದ್ದುವು. ಒಂದೊಂದು ಪಾತ್ರೆಯಲ್ಲಿ ಒಂದೊಂದು ಬಗೆಯ ಹಾಲು. ಪ್ರತಿ ತಿಂಗಳೂ ತಪ್ಪದೆ ದುಡ್ಡು ಕೊಡುವ ಜನರಿಗಾಗಿ ಒಳ್ಳೆಯ ಶುದ್ಧ ಹಾಲು. ನಾಲ್ಕೈದು ಸಲ ಕೇಳಿದ ಬಳಿಕ ದುಡ್ಡು ಕೊಡುವವರಿಗಾಗಿ ನೂರಕ್ಕೆ ಇಪ್ಪತ್ತೈದರಷ್ಟು ನೀರು ಸೇರಿಸಿದ ಹಾಲು. ಎರಡು ಮೂರು ತಿಂಗಳುಗಳ ತರುವಾಯ ಹಣ ಕೊಡುವವರಿಗಾಗಿ ಅರ್ಧದಷ್ಟು ನೀರು ಬೆರಸಿದ ಹಾಲು. ಹಣವನ್ನು ಪೂರ್ತಿಯಾಗಿ ಮುಳುಗಿಸುವಂಥವರಿಗೆ ನಾಲ್ಕನೆಯ ಬಗೆಯ ಹಾಲು. ಅದರ ಬಣ್ಣವಷ್ಟೆ ಬಿಳಿಯದು; ಮಿಕ್ಕುದೆಲ್ಲ ನೀರು.

ಹಣಮುಕ್ಕನ ಈ ಗುಟ್ಟು ತಿಳಿದಾಗ ನಾನು ನಕ್ಕದ್ದೇ ನಕ್ಕದ್ದು. ಹಣ ಮುಳುಗಿಸುವವರನ್ನು ಹಾದಿಗೆಳೆಯಲು ಇಂಥ ಉಪಾಯ ಅವಶ್ಯವೆಂದೇ ಅವಳ ವಾದ.

ಒಳ್ಳೆಯ ಹಾಲು ಕೊಡಬೇಕೆಂದು ಯಾರಾದರೂ ಹೇಳಿದಾಗ, ಮುಂದಿನ ತಿಂಗಳು ಮತ್ತೊಂದು ಎಮ್ಮೆ ಕೊಂಡುಕೊಳ್ಳುವುದಾಗಿಯೂ ಅಲ್ಲಿಯವರೆಗೆ ಸಹಿಸಬೇಕೆಂದೂ ಹೇಳಿ ಅವರನ್ನು ಸುಮ್ಮನಾಗಿಸುವಳು ಹಣಮುಕ್ಕ. ಮೊದಲನೆಯ ತಾರೀಖಿಗೆ ಪೋಲೀಸರಿಗೆಲ್ಲ ಸಂಬಳ ಸಿಕ್ಕ ಬಳಿಕ, ದುಡ್ಡು ಕೊಟ್ಟವರಿಗೂ ಕೊಡದವರಿಗೂ ಅವರವರ ‘ಗ್ರೇಡು’ಗಳ ಮೇರೆಗೆ ಹಣಮುಕ್ಕನಿಂದ ಹಾಲು ದೊರೆಯುತ್ತಿತ್ತು. ದುಡ್ಡು ಕೊಡದಿದ್ದವರಿಗೆ ಹಾಲು ಕೊಡುವುದನ್ನು ನಿಲ್ಲಿಸುತ್ತಿರಲಿಲ್ಲ ಹಣಮುಕ್ಕ. ಅವರಾಗಿ ಬೇಡವೆಂದು ಹೇಳಿದರೆ ಆ ಮಾತು ಬೇರೆ. ಹಣಮುಕ್ಕನದು ಅದ್ಭುತವಾದ ತರ್ಕ. ದುಡ್ಡು ಕೊಡದಿರುವವರೂ ಮನುಷ್ಯರೇ ಅಲ್ಲವೆ? ಅವರಿಂದ ದುಡ್ಡು ಸಿಕ್ಕದಿದ್ದರೂ ಕೂಡ ತಾನು ಹಾಲು ಕೊಡುವುದನ್ನು ನಿಲ್ಲಿಸದಿದ್ದುದನ್ನು ಕಂಡಾಗ ಅವರಿಗೇ ಪಶ್ಚಾತ್ತಾಪವುಂಟಾಗಬಹುದು, ತಾವು ಮಾಡುವುದು ಒಳ್ಳೆಯದಲ್ಲವೆಂಬ ತಿಳಿವಳಿಕೆ ಅವರಲ್ಲಿ ಮೂಡಿದಾಗ ಅವರು ಸ್ವಲ್ಪವಾದರೂ ಹಣ ಕೊಡಬಹುದು. ಅದಲ್ಲದೆ, ಅಂಥ

ವರಿಗೆಲ್ಲ ಹಣಮಕ್ಕ ಕೊಡುತ್ತಿದ್ದುದು ನಾಲ್ಕನೆಯ ಪಾತ್ರೆಯಲ್ಲಿನ ಹಾಲು. ಅವಳ ಲೆಕ್ಕದಂತೆ ಅವರಿಂದ ಬರಬೇಕಾದ ಹಣದಲ್ಲಿ ಕಾಲುಭಾಗದಷ್ಟೇ ಬಂದರೂ ಅವಳ ಹಾಲಿನ ಲೆಕ್ಕ ಬಂದಂತಾಗುತ್ತಿತ್ತು. ಮುಳುಗಿದುದೆಲ್ಲ ನೀರಿನ ದುಡ್ಡಲ್ಲವೆ? ಹೀಗಿತ್ತು ಹಣಮಕ್ಕನ ವ್ಯವಹಾರ ಚಾತುರ್ಯ!

ಹಣಮಕ್ಕನಿಗೆ ಮಕ್ಕಳುಮರಿ ಇರಲಿಲ್ಲ. ಸ್ತ್ರೀ ಸಹಜ ಆಸೆ ಆಕಾಂಕ್ಷೆಗಳು ಅವಳನ್ನು ಬಿಡುವುದುಂಟೇ? ತನ್ನ ಬಯಕೆಯನ್ನಾಕೆ ಹಾಲು ಮಾರಲು ಬಂದಾಗ ಪೂರೈಸಿಕೊಳ್ಳುತ್ತಿದ್ದಳೆಂದು ಹೆಡ್‌ಕ್ವಾರ್ಟರಿನಲ್ಲಿ ವದಂತಿಯಿತ್ತು. ಆದರೆ, ಯಾವನೊಬ್ಬ ಗಂಡುಸನ್ನೂ ಅವಳು ಮನಃಪೂರ್ವಕವಾಗಿ ಮೆಚ್ಚಿದವಳಲ್ಲ, ಅವನ ಬೆನ್ನು ಹಿಡಿದು ಅಲೆದವಳಲ್ಲ. ನಮ್ಮ ಪಕ್ಕದ ಕೋಣೆಯಲ್ಲಿದ್ದ ರಿಕ್ರೂಟನ ಜೊತೆಗೆ ಅವಳಿಗೆ ಸಂಬಂಧವಿದ್ದಿತೆಂದು ಅವನೇ ಹೇಳುತ್ತಿದ್ದ. ಅವನ ಕೋಣೆಗೆ ಹಾಲು ಕೊಡಲು ಹೋದ ಹಣಮಕ್ಕ ಅರ್ಧ ಗಂಟೆಯುವರೆಗೂ ಅಲ್ಲಿಯೆ ಇರುತ್ತಿದ್ದುದನ್ನು ನಾವು ಕಂಡಿದ್ದೆವು. ಅವಳ ಇಂಥ ಸಂಬಂಧಗಳನ್ನರಿತಿದ್ದರೂ ನಮಗಾರಿಗೂ ಅವಳ ಬಗ್ಗೆ ಬೇಸರವುಂಟಾಗುತ್ತಿರಲಿಲ್ಲ. ಎಲ್ಲರನ್ನೂ ಮೆಚ್ಚಿಸುವಂಥ ಮೋಡಿಯಿತ್ತು ಅವಳ ನಗೆಯಲ್ಲಿ.

ಹೆಡ್‌ಕ್ವಾರ್ಟರಿನಲ್ಲಿ ಹಾಲಿನ ವ್ಯವಹಾರಕ್ಕಾರಂಭಿಸಿದ ಹೊಸದರಲ್ಲಿ ಹಣಮಕ್ಕ ಇನ್ನೂ ಸುಂದರಿಯಾಗಿದ್ದಳಂತೆ. ಆಗ ಅಲ್ಲಿದ್ದ ಫೌಜದಾರ ಅವಳನ್ನು ಕಂಡು ಮರುಳಾದ. ಹಣಮಕ್ಕ ಅವನ ಮನೆಗೂ ಹಾಲು ಕೊಡುತ್ತಿದ್ದಳು. ಒಮ್ಮೆ ಅವನ ಮನೆಯವರು ಊರಿಗೆ ಹೋಗಿದ್ದಾಗ ಇವಳು ನಿತ್ಯದಂತೆ ಹಾಲು ಕೊಡಲು ಹಿತ್ತಿಲ ಬಾಗಿಲಲ್ಲಿ ಬಂದು ನಿಂತಳು. 'ಒಳಗೆ ಬಂದು ಕೊಡು' ಎಂದನಂತೆ ಫೌಜದಾರ. ಅವಳು ಬಾಗಿಲು ದಾಟಿ ಬರುತ್ತಲೂ ಆತ ಕದ ಮುಚ್ಚಿ ಚಿಲಕ ಹಾಕಿ ಅವಳನ್ನು ಒಳಗಡೆ ಎಳೆದೊಯ್ದು, ಗದ್ದಲ ಮಾಡಿದರೆ ಪಿಸ್ತೂಲಿನಿಂದ ಕೊಲ್ಲುವುದಾಗಿ ಹೆದರಿಸಿ ತನ್ನ ಲಾಲಸೆಯನ್ನು ತೃಪ್ತಿಪಡಿಸಿಕೊಂಡ. ಹಣಮಕ್ಕನ ಗಂಡ ಸತ್ತ ಬಳಿಕ ಅವಳು ಬೇರೊಬ್ಬ ಗಂಡುಸಿಗೆ ದೇಹನೊಪ್ಪಿಸಿದ್ದು ಅದೇ ಮೊದಲ ಬಾರಿ. ಕೆಲವು ದಿನಗಳ ಕಾಲ ಅವಳು ಫೌಜದಾರರ ಮನೆಗೆ ಹೋಗಲಿಲ್ಲ. ಅವರ ಮನೆಯವರು ಬಂದ ಬಳಿಕ ಮತ್ತೆ ಹೋಗತೊಡಗಿದಳು. ದಿನಗಳೆದ ಹಾಗೆ ಅದನ್ನೆಲ್ಲ ಮರೆತುಬಿಟ್ಟಳು.

ಹಣಮಕ್ಕನ ರೂಪಲಾವಣ್ಯಗಳಿಗೆ ನಾವೂ ಮೋಹಿತರಾಗಿದ್ದೆವು.

ನಮ್ಮ ಕೋಣೆಯಲ್ಲಿದ್ದ ನಾವು ಮೂವರೂ ಯುವಕರೇ. ಹಣಮಕ್ಕನಂಥ ಒನಪಿನ ಹೆಣ್ಣಿನ ಸಹವಾಸಕ್ಕಾಗಿ ಮೂವರಿಗೂ ಆಸೆಯಿತ್ತು. ಅವಳೂ ಸಿದ್ಧಳಾಗಿಯೆ ಇದ್ದಳು. ಆದರೆ ನಮಗೇ ಒಬ್ಬರ ಭಯ ಇನ್ನೊಬ್ಬರಿಗೆ. ಅವಳ ಮನೆಗೂ ಹೋಗುವ ಹಾಗಿರಲಿಲ್ಲ. ಹೆಡ್‌ಕ್ವಾರ್ಟರಿನಲ್ಲಿನ ಎಷ್ಟೋ ಜನರೊಡನೆ ಅವಳು ಸಂಬಂಧವಿಟ್ಟುಕೊಂಡಿದ್ದಳಾದರೂ ಎಂದೂ ಯಾರನ್ನೂ ತನ್ನ ಮನೆಗೆ ಕರೆದೊಯ್ದಿರಲಿಲ್ಲ. "ಇಂದು ಒಬ್ಬ ಬಂದರೆ ನಾಳೆ ಇಡೀ ಹೆಡ್‌ಕ್ವಾರ್ಟರೇ ಅಲ್ಲಿದ್ದೀತು," ಎನ್ನುತ್ತಿದ್ದಳು ಹಣಮಕ್ಕ.

"ರಾತ್ರಿಯಲ್ಲೆಲ್ಲಾ ಒಬ್ಬಳೇ ಹ್ಯಾಗಾದರೂ ಇರುತೀಯೆ?" ಎಂದು ಮಲ್ಲಾಪುರ ಒಮ್ಮೆ ಕೇಳಿದಾಗ ಹಣಮಕ್ಕ ಹೇಳಿದಳು :

"ನಾನೇನು ನಿಮ್ಮ ಹಾಂಗ ಖಾಲೀ ಇರುತೀನೇನು? ಮುಂಜಾನೆ ನಾಲ್ಕು ಗಂಟೆಗೆ ಎದ್ದವಳು ರಾತ್ರಿ ಹತ್ತು ಗಂಟೆಯ ತನಕ ಒಂದೇ ಸಮನೆ ದುಡಿದು ಹಣ್ಣಾಗಿರುತೀನಿ. ಹಾಸಿಗೆಯ ವ್ಯಾಲ ಬಿದ್ದದ್ದೇ ತಡ, ನಿದ್ದೆ ಬರುತೈತಿ. ನಿಮ್ಮ ಹಾಂಗ ಅಲ್ಲದ ಸಲ್ಲದ ವಿಚಾರ ನನಗೇನು ಬರೂದಿಲ್ಲ."

ದಿನವೂ ಬೆಳಿಗ್ಗೆ ಎದ್ದೊಡನೆ ಎಮ್ಮೆಗಳಿಗೆ ತಿನಿಸು ಹಾಕಿ, ಸಗಣಿ ಬಳಿದು ತಿಪ್ಪೆಗೆ ಹಾಕಿ, ಹಾಲು ಹಿಂಡಿಕೊಂಡು, ಕರುಗಳಿಗೆ ಮೊಲೆಯುಣ್ಣಿಸಿ, ಆರು ಗಂಟೆಗೆ ಹೆಡ್‌ಕ್ವಾರ್ಟರಿಗೆ ಬಂದು, ಹತ್ತು ಹನ್ನೊಂದರವರೆಗೆ ಹಾಲು ಹಂಚಿ, ಮನೆಗೆ ಹೋಗಿ ಅಡುಗೆಮಾಡಿ ಉಂಡು ಮಧ್ಯಾಹ್ನ ಎಮ್ಮೆಗಳನ್ನು ಮೇಯಿಸುವುದು; ಸಾಯಂಕಾಲ ಆರು ಗಂಟೆಗೆ ಮತ್ತೆ ಹಾಲು ಹಿಂಡಿಕೊಂಡು ಹೆಡ್‌ಕ್ವಾರ್ಟರಿಗೆ ಬಂದು ಎಂಟು ಗಂಟೆಗೆ ಮನೆಗೆ ಹಿಂದಿರುಗಿ ಊಟಮಾಡಿ ಮಲಗುವುದು, ಹಣಮಕ್ಕನ ನಿತ್ಯವಿಧಿ ಅದು.

"ರಾಣಿಗಿಂತ ಹೆಚ್ಚು ಸುಕದಿಂದಿದೀನಿ ನಾನು. ಯಾವದರ ಚಿಂತೀನೂ ಇಲ್ಲ," ಎನ್ನುತ್ತಿದ್ದಳು ಹಣಮಕ್ಕ.

೬

ಕರದಂಟಿನ ಕಾಡಸಿದ್ಧ

ನಗದು ಹಣ ತೆತ್ತು ವಸ್ತುಗಳನ್ನು ಕೊಳ್ಳುವುದು ಪೋಲೀಸರಿಗೆ ಗೊತ್ತೇ ಇಲ್ಲ. ಸಾಲ ಹೇಳುವುದು ಅವರ ವಿಶಿಷ್ಟ ಅಭ್ಯಾಸ. ಹೆಡ್‌ಕ್ವಾರ್ಟರಿನಲ್ಲಿ ಉದ್ದರಿ ಕೊಡದಿದ್ದರೆ ಯಾವ ವ್ಯಾಪಾರವೂ ನಡೆಯುವಂತಿರಲಿಲ್ಲ.

ಕಾಡಸಿದ್ಧನ ಕರದಂಟಿನ ವ್ಯಾಪಾರ ಮಾತ್ರ ಈ ನಿಯಮಕ್ಕೊಂದು ಅಪವಾದವಾಗಿತ್ತು. ಅವನ ವ್ಯಾಪಾರದ ವಸ್ತುವೇ ಅಂಥದು. ಎಂಥವರ ಬಾಯಲ್ಲೂ ನೀರೂರಿಸುವಂಥ ರುಚಿಕರವಾದ ಕರದಂಟು ತಯಾರಿಸುವುದರಲ್ಲಿ ಪಳಗಿದವನು ಕಾಡಸಿದ್ಧ. ಒಮ್ಮೆ ಆ ತಿಂಡಿಯ ರುಚಿ ನೋಡಿದವರು ದಿನವೂ ಕೊಂಚವನ್ನಾದರೂ ಕೊಳ್ಳದಿರುತ್ತಿರಲಿಲ್ಲ. ಚಿಕ್ಕಮಕ್ಕಳಿಗಂತೂ ಕಾಡಸಿದ್ಧನ ಕರದಂಟು ಎಂದರೆ ಅಚ್ಚುಮೆಚ್ಚು. ಮನೆಯಲ್ಲಿ ಕಾಡಿ ಬೇಡಿ ಕಣ್ಣೀರು ಸುರಿಸಿ ಹಿರಿಯರಿಂದ ಕಾಸು ಕಿತ್ತುಕೊಂಡು ಕಾಡಸಿದ್ಧನೆಡೆಗೆ ಧಾವಿಸುತ್ತಿದ್ದರು ಹುಡುಗರು. ಅವರೇ ಮುಖ್ಯ ಗಿರಾಕಿಗಳು ಕಾಡಸಿದ್ಧನಿಗೆ.

ಪ್ರತಿನಿತ್ಯ ಮಧ್ಯಾಹ್ನ ಮೂರು ಗಂಟೆಯ ವೇಳೆಗೆ ಕಾಡಸಿದ್ಧನ ಸವಾರಿ ಹೆಡ್‌ಕ್ವಾರ್ಟರಿಗೆ ಆಗಮಿಸುತ್ತಿತ್ತು. ಅವನಿಗಾಗ ಸುಮಾರು ನಲವತ್ತು ವರ್ಷ ವಯಸ್ಸು. ಕಪ್ಪು ಬಣ್ಣ. ಮಟ್ಟಸವಾದ ನಿಲುವು. ಮಾತುಗಾರಿಕೆಯಲ್ಲಿ

ಬಹಳ ಚುರುಕು. ಎಂಥ ಜಿಪುಣರಿಗೂ ತನ್ನ ಕರದಂಟು ಕಟ್ಟಿ ಕಾಸು ಕೀಳುವ ಆಸಾಮಿ. ಎಡಗೈಯಲ್ಲಿ ದುಡ್ಡು ಬಿದ್ದಾಗ ಅವನ ಬಲಗೈ ಕರದಂಟು ಕಟ್ಟಲು ಕಾಗದ ಹಿಡಿಯುತ್ತಿತ್ತು.

ತನ್ನ ಮಗಳು ಲಕ್ಷ್ಮಿಯನ್ನೂ ತನ್ನ ಜೊತೆಗೆ ಕರೆದುಕೊಂಡು ಬರುತ್ತಿದ್ದ ಕಾಡಸಿದ್ಧ. ಹದಿನಾರರ ಪ್ರಾಯದ ಆ ಹುಡುಗಿ ತಕ್ಕಮಟ್ಟಿನ ಚೆಲುವೆಯೆಂದೇ ಹೇಳಬಹುದಾಗಿತ್ತು. ತಂದೆಯ ಅಚ್ಚುಕಟ್ಟಿನ ನಿಲುವು, ಅವನ ಮೂಗಿನಂಥ ನೀಳವಾದ ಮೂಗು, ಅವನ ಕಣ್ಣುಗಳಂಥ ದೊಡ್ಡ ದೊಡ್ಡ ಕಣ್ಣು. ಬಣ್ಣ ಮಾತ್ರ ಸ್ವಲ್ಪ ಬಿಳಿಯದು.

ಕರದಂಟಿನ ಬಗ್ಗೆ ಆಸಕ್ತಿಯಿಲ್ಲದ ಯುವಕ ಪೋಲೀಸರೂ ಅಲ್ಲಿಗೆ ಬರುತ್ತಿದ್ದರು, ಲಕ್ಷ್ಮಿಯನ್ನು ನೋಡಲು. ಬಂದವರು ಹಾಗೆಯೆ ಹೋಗುವುದುಂಟೇ? ಒಂದಾಣೆ ಎರಡಾಣೆಗಳ ವ್ಯಾಪಾರವೂ ನಡೆಯುತ್ತಿತ್ತು. ಕರದಂಟು ಕೊಂಡು ಮೆಲ್ಲುತ್ತಾ ಲಕ್ಷ್ಮಿಯನ್ನು ಮಾತನಾಡಿಸಿ, ನಕ್ಕು ನಗಿಸಿ ಹೋಗುತ್ತಿದ್ದರು. ಮಾತುಗಾರಿಕೆಯಲ್ಲಿ ತಂದೆಯನ್ನೂ ಹಿಂದೆ ಹಾಕುವವಳು 'ಲಕ್ಷ್ಮಿ: ಎಲ್ಲ ಗಿರಾಕಿಗಳ ಜೊತೆಗೂ ಒಂದೇ ರೀತಿಯಿಂದ ಮಾತನಾಡುತ್ತಿದ್ದಳು. ಅವಳನ್ನು ಕಂಡು ಮೋಹಿತರಾದ ಯುವಕರಿಗೆ ಮಾತ್ರ ಅವಳ ರೀತಿ ಅರ್ಥವಾಗುತ್ತಿರಲಿಲ್ಲ. ತಮ್ಮನ್ನು ಕಂಡೇ ಅವಳು ಅಷ್ಟು ಉತ್ಸಾಹದಿಂದ ಮಾತನಾಡುವಳೆಂದು ಅವರ ಕಲ್ಪನೆ. ಒಬ್ಬಿಬ್ಬರು ಅವಳ ಕೈ ಹಿಡಿದು ಅದುಮಿದುದೂ ಇತ್ತು. ಬೇಕೆಂತಲೇ ಅವಳಿಗೆದುರಾಗಿ ನಿಂತು ಡಿಕ್ಕಿ ಹೊಡೆದವರೂ ಇದ್ದರು. ಯಾವುದಕ್ಕೂ ಲಕ್ಷ್ಮಿ ಮುನಿದುಕೊಂಡಿರಲಿಲ್ಲ. ಕಾಡಸಿದ್ಧನೂ ಆಕ್ಷೇಪಿಸಿರಲಿಲ್ಲ.

" ನೀನ್ಯಾಕೆ ಸುಮ್ಮನಿರುತ್ತೀ ಕಾಡಸಿದ್ಧಾ ? ಮಗಳಿಗೆ ಡಿಕ್ಕಿ ಹೊಡೆಯಗೊಡುತ್ತಾರೇ ?" ಎಂದು ನಾನೊಮ್ಮೆ ಕೇಳಿದಾಗ ಅವನು ತತ್ವಜ್ಞಾನಿಯಂತೆ ನಗುತ್ತ ಉತ್ತರವಿತ್ತ :

" ನಾ ಸತ್ತ ಮ್ಯಾಲ ಅವಳ ಪ್ರಪಂಚ ನಡೀಬೇಕಾದರೆ ಇದೇ ಕರದಂಟಿನ ವ್ಯಾಪಾರ ಮಾಡಬೇಕಲ್ಲ. ಡಿಕ್ಕಿ ಹೊಡೆಯುವದರಿಂದ ಆಗುವದಾದರೂ ಏನು ಹೇಳ್ರಿ. ಸಂತೆಯೊಳಗೆ ಎಷ್ಟೋ ಹೆಣ್ಣು ಗಂಡು ಡಿಕ್ಕಿ ಹೊಡೆಯುತ್ತಾರೆ. ಆ ಮ್ಯಾಲ ತಮ್ಮ ಮನೆಗಳಿಗೆ ಹೋಗುತ್ತಾರೆ. ಹೆಡ್‌ಕ್ವಾರ್ಟರ್ ಅಂದರೆ ನಮಗೂ ಒಂದುಸಂತೆ. ಲಕ್ಷ್ಮಿ ಈ ಸಂತೆಗೆ ಬಂದಾಗ ಒಬ್ಬಿಬ್ಬರು ಡಿಕ್ಕಿ

ಹೊಡೆದರೆ ಏನಾಯ್ತು? ನಮ್ಮ ಮಾಲು ಮಾರಾಟವಾಗಬೇಕು. ಅದು ಮಾರಿದಾಗ ನಾವು ಮನೆ ಸೇರಬೇಕು, ಮತ್ತೆ ಮರುದಿನದ ಕರದಂಟಿನ ತಯಾರಿ. ಬ್ಯಾರೆ ವಿಚಾರ ನಮಗ್ಯಾತಕ್ಕೆ?"

ಒಂದೆರಡು ತಿಂಗಳುಗಳಲ್ಲಿ ಅವನಿಗೂ ನನಗೂ ವಿಶೇಷ ಪರಿಚಯ ಬೆಳೆಯಿತು. ಒಂದು ಸಾಯಂಕಾಲ ನಾನು ಪೇಟೆಗೆ ಹೋಗಿದ್ದಾಗ ಬೀದಿಯಲ್ಲಿ ಕಾಡಸಿದ್ಧ ಅಕಸ್ಮಾತ್ತಾಗಿ ಭೆಟ್ಟಿಯಾದ. "ಬರ್ರಿ. ಚಾ ಕುಡಿಯೂಣು," ಎಂದು ಹೇಳಿ, ನಾನು ಬೇಡವೆಂದರೂ ಕೇಳದೆ ಬಲುವೆಯಿಂದ ನನ್ನನ್ನು ಚಹದಂಗಡಿಗೆ ಕರೆದೊಯ್ದ. ಚಹಾ ಆಯಿತು. ಎಲೆಯಡಿಕೆ ಮೆಲ್ಲುತ್ತಿದ್ದ ಹಾಗೇ ಕಾಡಸಿದ್ಧ ಹೇಳತೊಡಗಿದ:

"ಸರದಾರರೆ, ನೀವು ಈ ಬಡವನಿಗೊಂದು ಉಪಕಾರ ಮಾಡಬೇಕ್ರೀ."

"ಏನು ಮಾರಾಯ, ನಾನೂ ಬಡವನೇ. ನನ್ನಿಂದೇನು ಉಪಕಾರ ವಾದೀತು?" ಎಂದು ನಾನು ನಗುತ್ತಾ ಹೇಳಿದೆ.

"ನನ್ನ ಮಗಳನ್ನು ನೀವು ನೋಡೀರಲ್ಲ. ಅವಳು ಬೆಳೆದು ನಿಂತಿದ್ದಾಳೆ. ಅವಳಿಗೊಬ್ಬ ವರ ಬೇಕು. ನೀವು ಪ್ರಯತ್ನಮಾಡಿ ವರ ಹುಡುಕಿಕೊಟ್ಟರೆ ನಿಮ್ಮ ಉಪಕಾರವನ್ನ ಜನ್ಮ ಜನ್ಮಾಂತರಗಳಲ್ಲಿ ಮರೆಯುವದಿಲ್ಲ. ಲಕ್ಷ್ಮಿ ಸ್ವಲ್ಪ ಸ್ವಲ್ಪ ಓದಲಿಕ್ಕೂ ಬರೆಯಲಿಕ್ಕೂ ಕಲಿತಿದ್ದಾಳೆ. ಸಾಕಷ್ಟು ರೂಪವತಿ ಯೆನ್ನುವದಂತೂ ನಿಮಗೆ ಗೊತ್ತೇ ಐತಿ. ಆದರೆ ನಾ ಬಡವ. ಕರದಂಟು ಮಾರಿ ಬದುಕುವವ. ನನ್ನಂಥವನ ಮಗಳನ್ನು ಯಾರು ಕಟ್ಟಿಕೊಂಡಾರು? ಯಾವನಾದರೊಬ್ಬ ನಿರ್ಗತಿಕನ ಕೊರಳಿಗೆ ಅವಳನ್ನು ಕಟ್ಟುವ ಮನಸ್ಸು ನನಗಿಲ್ಲ. ಅವಳ ಲಗ್ನಕ್ಕಾಗೇ ಒಂದು ಸಾವಿರ ರೂಪಾಯಿ ಕೂಡಿಸಿಟ್ಟದ್ದೇನೆ. ಸ್ವಲ್ಪ ಒಡವೆಗಳನ್ನೂ ಮಾಡಿಸಿದ್ದೇನೆ. ಅವಳು ಲಗ್ನವಾಗಿ ಗಂಡನ ಮನೆಗೆ ಹೋದರೆ ನನ್ನ ಭಾರ ಇಳಿದಂತಾಯ್ತು. ನನ್ನ ಭಾಗೀರಥಿಯ ಆಸೆ ತೀರಿ ದಂತಾಯ್ತು."

"ಭಾಗೀರಥಿ ಅಂದರೆ ಯಾರು ಕಾಡಸಿದ್ಧ?"

"ಲಕ್ಷ್ಮಿಯ ತಾಯಿ. ಲಕ್ಷ್ಮಿ ಯಿನ್ನೂ ಆರುವರ್ಷದವಳಿದ್ದಾಗಲೇ ಭಾಗೀರಥಿ ತೀರಿಕೊಂಡಳು."

ಮಾತನ್ನು ನಿಲ್ಲಿಸಿ ಒಂದು ನಿಮಿಷ ಮೌನವಾಗಿ ಕುಳಿತಿದ್ದ ಕಾಡಸಿದ್ಧ.

ಅವನಿಗೆ ತನ್ನ ಹೆಂಡತಿಯ ನೆನಪು ಬಂದಿತ್ತು. ಅವಳ ಬಗ್ಗೆ ಅವನಿಗೆಷ್ಟು ಪ್ರೀತಿಯಿದ್ದಿತೊ! ತನ್ನ ಮಗಳ ಭವಿತವ್ಯದ ಬಗ್ಗೆ ಅನಿಗೆಷ್ಟು ಆಸಕ್ತಿ. ಕೇವಲ ಕರದಂಟು ಮಾರಿ ಸಾವಿರಾರು ರೂಪಾಯಿ ಕೂಡಿಸುವುದೆಂದರೆ ಸಾಮಾನ್ಯ ವಿಷಯವಲ್ಲ.

"ನಮ್ಮ ಮನೆಯ ತನಕ ಬಂದು ಹೋಗುತೀರಾ ಸರದಾರರೆ?" ಎಂದ ಕಾಡಸಿದ್ಧ. ಅವನ ಮನೆಗೆ ಹೋಗುವುದಕ್ಕೆ ನನಗೇನೂ ಸಂಕೋಚವೆನಿಸಲಿಲ್ಲ. ಅವನಾಗಲೆ ನನಗೆ ಆತ್ಮೀಯನಂತಾಗಿದ್ದ.

ಚಿಕ್ಕದಾಗಿದ್ದರೂ ಚೊಕ್ಕಟವಾಗಿದ್ದ ಮನೆ. ಎದುರಿಗೆ ಸ್ವಲ್ಪ ಬಯಲು ಸ್ಥಳ. ಅದರ ಸುತ್ತಲೂ ಬಿದಿರು ಬಿಗಿದು ಒಳಗಡೆ ಪುಟ್ಟದೊಂದು ತೋಟ ರಚಿಸಿಕೊಂಡಿದ್ದ. ಒಂದೆರಡು ಹೂವಿನ ಗಿಡಗಳು. ಹೀರೇಬಳ್ಳಿ, ಕುಂಬಳಬಳ್ಳಿ. ಅಲ್ಲಿಯೆ ಒಂದು ತುಳಸಿಯ ಕಟ್ಟೆ. ನಾವು ಮನೆಯಲ್ಲಿ ಅಡಿಯಿರಿಸಿದಾಗ ಲಕ್ಷ್ಮಿ ಕೈಯಲ್ಲಿ ಪುಸ್ತಕವೊಂದನ್ನು ಹಿಡಿದು ಓದುತ್ತಾ ಕುಳಿತಿದ್ದವಳು ನನ್ನನ್ನು ಕಂಡೊಡನೆ ಎದ್ದು ಅಡುಗೆಯ ಮನೆ ಸೇರಿಕೊಂಡಳು. ನಾನು ಕುತೂಹಲ ದಿಂದ ಆ ಪುಸ್ತಕ ತೆಗೆದು ನೋಡಿದೆ: ರಾಮಾಯಣದ ಕಥೆ.

ಒಳಗಡೆ ಲಕ್ಷ್ಮಿ ಚಹದ ಸಿದ್ಧತೆಗಾರಂಭಿಸಿದ್ದಳು.

"ಮತ್ಯಾಕೆ ಚಹ? ಏನೂ ಬೇಡ. ಇದೇ ಈಗ ಆಯಿತಲ್ಲ?" ಎಂದೆ ನಾನು.

"ಆಗ ಕುಡಿದದ್ದು ಬ್ಯಾರೆಯವರ ಚಹ. ಈಗ ಕುಡಿಯೂದು ಲಕ್ಷ್ಮಿಯ ಚಹ," ಎಂದ ಕಾಡಸಿದ್ಧ.

ಹೆಡ್‌ಕ್ವಾರ್ಟರಿನಲ್ಲಿ ಮಾತಿನ ಮಲ್ಲಿಯಾಗಿರುತ್ತಿದ್ದ ಲಕ್ಷ್ಮಿ ಮನೆಯಲ್ಲಿ ಮಾತ್ರ ಮೌನದ ಮೂರ್ತಿಯಂತಿದ್ದುದನ್ನು ಕಂಡಾಗ ನನಗೆ ಕೊಂಚ ಸೋಜಿಗ ವೆನ್ನಿಸದಿರಲಿಲ್ಲ. ಅವರ ಮನೆಯ ಪಡಸಾಲೆಯಲ್ಲಿ ನಾನು ಕುಳಿತಿದ್ದ ಇಪ್ಪತ್ತು ನಿಮಿಷಗಳ ಅವಧಿಯಲ್ಲಿ ಒಂದು ಸಲವೂ ನಮ್ಮ ಮುಂದೆ ಬರಲಿಲ್ಲ, ಒಂದು ಮಾತನ್ನೂ ಆಡಲಿಲ್ಲ. ಸಿದ್ಧನೇ ಮಾತನಾಡುತ್ತಿದ್ದ – ಒಂದೇಸಮನೆ.

ಹೈದರಾಬಾದು ಸಂಸ್ಥಾನಕ್ಕೆ ಸೇರಿದ ಗುಲಬರ್ಗ ಜಿಲ್ಲೆಯಲ್ಲಿನದೊಂದು ಚಿಕ್ಕ ಹಳ್ಳಿಯವನು ಸಿದ್ಧ. ಅವರದು ರೈತ ಮನೆತನವಂತೆ. ನಾಲ್ಕು ಜನ

ಸೋದರರಲ್ಲಿ ಎಲ್ಲರಿಗೂ ಚಿಕ್ಕವನೇ ಸಿದ್ಧ. ಕಿರಿಯ ಮಗನಾದುದರಿಂದ ಅವನನ್ನು ಹೆಚ್ಚಿನ ಸಲಿಗೆಯಿಂದ ಬೆಳಸಿದ್ದರು. ಗರಡಿ ಮನೆಯಲ್ಲಿ ಕಸರತ್ತು ಮಾಡುತ್ತ ಕುಸ್ತಿಯಾಡುತ್ತ ಸುಖವಾಗಿದ್ದ. ಸ್ವಲ್ಪ ಮನೆಯಲ್ಲಿ ಹೊಲವಿತ್ತು. ಇನ್ನು ಸ್ವಲ್ಪ ಹೊಲ ಲಾವಣಿಗೆ ಹಿಡಿದು ನಾಲ್ಕು ಎತ್ತಿನ ಬೇಸಾಯ ಮಾಡಿಕೊಂಡು ನೆಮ್ಮದಿಯಿಂದಿದ್ದರು. ಅವರ ಹೊಲದ ಪಕ್ಕದ ಹೊಲದವರಿಗೂ ಇವರಿಗೂ ಯಾವುದೋ ಕಾರಣದಿಂದ ಮನಸ್ತಾಪವುಂಟಾಗಿ ದ್ವೇಷ ಬೆಳೆದಿತ್ತು. ಒಂದೆರಡು ಸಲ ಹೊಡೆದಾಟವೂ ಆಗಿಹೋಗಿತ್ತು. ಆ ಹೊಲದವರ ಮಗಳು ಭಾಗೀರಥಿಗೂ ಸಿದ್ಧನಿಗೂ ಪ್ರೀತಿ. ಇಬ್ಬರಿಗೂ ಮದುವೆಯಾಗುವುದು ಸಾಧ್ಯವಿರಲಿಲ್ಲ. ಹಾಗೆಂದು ಅವರು ತಮ್ಮ ಪ್ರೇಮವನ್ನು ಮರೆಯಲು ಸಿದ್ಧರಿರಲಿಲ್ಲ. ಭಾಗೀರಥಿ ತನ್ನ ಮೈಮೇಲಿನ ಒಡವೆಗಳೊಂದಿಗೆ ಇವನ ಜೊತೆಗೆ ಓಡಿಹೋಗಲು ಸಿದ್ಧಳಾದಳು. ಇವನೂ ಮನೆಯಲ್ಲಿಯ ನೂರಿನ್ನೂರು ರೂಪಾಯಿ ಕದ್ದುಕೊಂಡು ಒಂದು ರಾತ್ರಿ ಅವಳನ್ನು ಕಟ್ಟಿಕೊಂಡು ಯಾರಿಗೂ ತಿಳಿಯದಂತೆ ಪಲಾಯನ ಮಾಡಿದ. ಓರೆಕೋರೆ ನಗರಕ್ಕೆ ಬಂದರು. ಕೆಲವು ತಿಂಗಳುಗಳ ಕಾಲ ಅವನು ನಿರುದ್ಯೋಗಿಯಾಗಿ ಅಲೆದುಕೊಂಡಿದ್ದ. ಭಾಗೀರಥಿಯೆ ಕರದಂಟು ಮಾಡಿ ಮಾರುವ ವ್ಯವಹಾರ ಹೂಡಿ ಕಾಡಸಿದ್ಧನನ್ನು ಅದಕ್ಕೆ ತೊಡಗಿಸಿದಳು. ಸುಮಾರು ಇಪ್ಪತ್ತು ವರ್ಷಗಳಿಂದ ಅವರು ಅದೇ ವ್ಯವಹಾರ ಮಾಡುತ್ತಾ ಬಡತನದಲ್ಲಿ ಕಾಲ ತಳ್ಳುತ್ತ ಬಂದಿದ್ದರು. ಅವನಿಗೆ ಹೆಡ್‌ಕ್ವಾರ್ಟರಿನ ಮಾರುಕಟ್ಟೆ ಲಭಿಸಿದ ಬಳಿಕ ಲಾಭವೂ ಬರತೊಡಗಿತು. ಹಣವನ್ನು ಪೋಲುಮಾಡದೆ ಕಾದಿಡುವುದರಲ್ಲಿ ಭಾಗೀರಥಿ ಜಾಣೆಯಾಗಿದ್ದಳು.

ಅವರಿಬ್ಬರೂ ಇಲ್ಲಿಗೆ ಓಡಿಬಂದಾಗ ಅವನಿಗೆ ಇಪ್ಪತ್ತೊಂದು ವರ್ಷ, ಅವಳಿಗೆ ಹದಿನಾರು. ಒಂದು ದಿನ ಅವನು ಪೇಟೆಗೆ ಹೋಗಿ ತಾಳಿಯೊಂದನ್ನು ಕೊಂಡು ತಂದು ಅವಳ ಕೊರಳಿಗೆ ಕಟ್ಟಿದ. ಮದುವೆಯಾದ ಗಂಡಹೆಂಡಿರಿಗಿಂತ ಹೆಚ್ಚಿನ ಪ್ರೇಮದಿಂದ ಅವರು ಬಾಳುವೆ ಸಾಗಿಸಿದ್ದರು. ನಾಲ್ಕು ವರ್ಷಗಳ ತರುವಾಯ ಲಕ್ಷ್ಮಿ ಜನಿಸಿದ್ದಳು. ಆಗ ಅವರಿಗಾದ ಸಂಭ್ರಮ ಹೇಳತೀರದು. ಬಾಣಂತಿಯಾದರೂ ಭಾಗೀರಥಿ ರಾತ್ರಿಯಿಡೀ ನಿದ್ದೆಗೆಟ್ಟು ಮಗಳ ಭವಿತವ್ಯದ ವಿಚಾರವಾಗಿ ಬಿಟ್ಟೂಬಿಡದೆ ಮಾತನಾಡಿದ್ದಳಂತೆ. ಮಗಳನ್ನು ಬೆಳಸಿ ದೊಡ್ಡವಳನ್ನಾಗಿ ಮಾಡುವುದು, ಅವಳಿಗೊಬ್ಬ ಯೋಗ್ಯ ವರನನ್ನು ಹುಡುಕಿ

ವಿಜೃಂಭಣೆಯಿಂದ ಮದುವೆ ಮಾಡುವುದು, ಕಷ್ಟಪಟ್ಟು ಕಾಸು ಕೂಡಿಸಿಟ್ಟು ನಾಲ್ಕಾರು ಒಡವೆ ಮಾಡಿಸಿ ಅವಳಿಗೆ ಸಲ್ಲಿಸುವುದು, ಮಗಳು ಅಳಿಯ ಸುಖವಾಗಿ ಸಂಸಾರ ಮಾಡುವುದನ್ನು ಕಂಡು ಸಂತೋಷಪಟ್ಟುಕೊಳ್ಳುವುದು, ಅನಂತರ ನಾವಿಬ್ಬರೂ ತಮ್ಮ ಊರಿಗೆ ಹಿಂದಿರುಗುವುದು. ಗಂಡಹೆಂಡಿರಂತೆ ಬಾಳಿದ ತಮ್ಮನ್ನು ತಮ್ಮ ಆಪ್ತರೇನೂ ಪೀಡಿಸಲಾರರು....

ಹಾಗೆ, ಆ ದಿನ ಭಾಗೀರಥಿ ಆಡಿದ ಮಾತುಗಳನ್ನು ಜ್ಞಾಪಿಸಿಕೊಂಡು ಹೇಳತ್ತಿದ್ದ ಕಾಡಸಿದ್ಧನ ಕಣ್ಣುಗಳಲ್ಲಿ ನೀರೂರಿತ್ತು. ಅಡುಗೆಯ ಮನೆಯಲ್ಲಿದ್ದ ಲಕ್ಷ್ಮಿಯೂ ತಾಯಿಯನ್ನು ನೆನೆಸಿಕೊಂಡು ಅಳತೊಡಗಿದ್ದಳು. ನನಗೆ ಅಯ್ಯೋ ಪಾಪ! ಎನ್ನಿಸದಿರಲಿಲ್ಲ.

ತಾನು ವಾಸಕ್ಕಿದ್ದ ಆ ಮನೆಯನ್ನು ಕಾಡಸಿದ್ಧ ಮೊದಲು ಬಾಡಿಗೆಗೆ ಇದ್ದನಂತೆ. ಕೆಲವು ವರ್ಷಗಳ ತರುವಾಯ ಒಂದುನೂರು ರೂಪಾಯಿಗಳಿಗೆ ಅದನ್ನು ಕೊಂಡುಕೊಂಡು ಗಂಡ ಹೆಂಡತಿ ಇಬ್ಬರೂ ಕೂಡಿ ಎರಡು ಮೂರು ತಿಂಗಳುಗಳ ಕಾಲ ದುಡಿದು ರಿಪೇರಿ ಮಾಡಿದ್ದರಂತೆ.

ಈ ವಿಚಾರ ಹೇಳುತ್ತಿದ್ದ ಹಾಗೇ ಕಾಡಸಿದ್ಧ ಪೆಟ್ಟಗೆಯೊಂದನ್ನು ತೆರೆದು ಅದರಲ್ಲಿದ್ದ ಎರಡು ಸೀರೆಗಳು, ಒಂದು ಚಿನ್ನದ ಒಡವೆ, ಒಂದು ಜೊತೆ ಬೆಳ್ಳಿಯ ತೋಳಬಂದಿ, ಕಾಲುಂಗುರ ಮೊದಲಾದುವುಗಳನ್ನು ಹೊರದೆಗೆದು ತೋರಿಸಿದ.

"ಇವೆಲ್ಲಾ ನನ್ನ ಭಾಗೀರಥಿಯವು. ಇವನ್ನು ಮಾತ್ರ ಅವಳ ಮನೆಗೇ ಮುಟ್ಟಿಸುತೀನಿ. ತನ್ನ ತಂದೆತಾಯಿಗಳ ಒಪ್ಪಿಗೆಯಿಲ್ಲದೆ ಅವಳು ಇವನ್ನು ತಂದಿದ್ದಳಲ್ಲ. ನಾನೂ ನನ್ನ ಮನೆಯಿಂದ ತಂದ ರೂಪಾಯಿ ತೆಗೆದು ಬೇರೆ ಕಡೆ ಇಟ್ಟೀನಿ. ಲಕ್ಷ್ಮಿಯ ಮದುವೆಯಾದ ಮರುದಿನವೇ ಊರಿಗೆ ಹೋಗಿ ಇವನ್ನೆಲ್ಲಾ ಅವರವರಿಗೆ ಮುಟ್ಟಿಸಿಬಿಡುತೀನಿ. ನನ್ನ ಮ್ಯಾಲಿನ ಸಿಟ್ಟನ್ನು ಅವರೆಲ್ಲಾ ಮರೆತಿರಬಹುದು. ಮರೆತಿರದಿದ್ದರೂ ಚಿಂತಿಲ್ಲ. ಮನೆತನಗಳ ಮರ್ಯಾದೆ ಕಳೆದೆನೆಂತ ನನ್ನನ್ನವರು ಕೊಂದುಹಾಕಿದರೂ ಅಡ್ಡಿಯಿಲ್ಲ."

"ನೀನಾಗೇ ಜೀವ ಕಳಕೊಳ್ಳುವದ್ಯಾಕೆ ಕಾಡಸಿದ್ಧಾ?"

"ನಾನಾಗೇ ಯಾಕೆ ಕಳಕೊಳ್ಳಲಿ ಬಿಡಿರಿ. ಮೊದಲು ಲಕ್ಷ್ಮಿಗೊಂದು ಮದುವೆಯಾಗಿ ಬಿಟ್ಟರೆ ನನ್ನ ಕೆಲಸ ಎಲ್ಲಾ ಮುಗಿದಂಗಾಗುತ್ತೈತಿ. ಓಡಿ ಬಂದವಳ ಮಗಳು ಅಂತ ಇವಳನ್ನ ಮದುವೆಯಾಗೂಪಕ್ಷ ಯಾರೂ

ತಯಾರಾಗದಿದ್ದರ ಹ್ಯಾಂಗ? ಕರದಂಟು ಮಾರುವ ಗಂಡುಬೀರಿ ಅಂತ ಮೂಗುಮುರಿದರ ಹ್ಯಾಂಗ? ವರ ಸಿಗದಿದ್ದರೆ ಇವಳ ಗತಿಯೇನು? ಇವಳು ಒಪ್ಪುವಂಥಾ ವರನ್ನ ನೀವು ಹುಡುಕಿಕೊಡಬೇಕು ಸರದಾರರೇ. ನನ್ನ ಮನೆ, ಒಂದು ಸಾವಿರ ರೂಪಾಯಿ, ಲಕ್ಷ್ಮಿಯ ವಸ್ತ್ರಾ ಒಡವೆ ಅವಳ ಸಂಗಡ ಕೊಡೂದಕ್ಕ ತಯಾರಿದೀನಿ."

ನಾನು ಮೂಕನಂತೆ ಕುಳಿತುಕೊಂಡಿದ್ದೆ. ಆ ವೇಳೆಗೆ ಲಕ್ಷ್ಮಿಯೂ ಹೊರಗಡೆ ಬಂದು ಬಾಗಿಲಿನಲ್ಲಿ ನಿಂತುಕೊಂಡಿದ್ದಳು. ತಂದೆ ಮಗಳು ಇಬ್ಬರೂ ಆಸೆಯ ಕಣ್ಣುಗಳಿಂದ ನನ್ನನ್ನೇ ದಿಟ್ಟಿಸುತ್ತಲಿದ್ದರು. ನನ್ನ ಮನಸ್ಸಿನಲ್ಲಿ ಬಗೆಬಗೆಯ ವಿಚಾರಗಳು. ನನ್ನ ಬಗ್ಗೆ ಕಾಡಸಿದ್ಧನಿಗೆ ಇಷ್ಟೊಂದು ಆತ್ಮೀಯತೆ ಯೇಕೆ? ಇದುವರೆಗೆ ಇವನು ಯಾರೆದುರಿಗೂ ಪ್ರಸ್ತಾಪಿಸದ ವಿಚಾರಗಳನ್ನು ನನ್ನೆದುರಿಗೆ ಹೇಳುತ್ತಿರುವುದೇಕೆ? ನಾನೇನು ವಯಸ್ಸಾದವನಲ್ಲ, ಅನುಭವಿಕನೂ ಅಲ್ಲ. ಲಕ್ಷ್ಮಿ ಒಪ್ಪುವಂಥ ವರನನ್ನು ಹುಡುಕಿಕೊಡುವುದು ನನ್ನಿಂದ ಸಾಧ್ಯವೆ?

ಮತ್ತೆ ಕಾಡಸಿದ್ಧನೇ ಹೇಳತೊಡಗಿದ:

"ನನಗೆ ಇನ್ನು ಹೆಚ್ಚಿನ ಆಶಾ ಏನೂ ಇಲ್ಲ ಸರದಾರರೇ. ನಮ್ಮೂರಲ್ಲಿ ಹೊಲ ಐತಿ, ಮನೆ ಐತಿ. ಮೈಯೊಳಗೆ ಇನ್ನೂ ದುಡಿಯುವ ಶಕ್ತಿ ಐತಿ. ಆದರೆ ಈಗಲೇ ನಾ ಅಲ್ಲಿ ಹೋಗುವ ಹಾಂಗಿಲ್ಲ. ಲಕ್ಷ್ಮಿಯನ್ನ ಅಲ್ಲಿಗೆ ಕರಕೊಂಡೂ ಹೋಗುವ ಹಾಂಗಿಲ್ಲ. ಓಡಿಹೋದಾಕೆಯ ಮಗಳು ಅಂತ ಅಲ್ಲಿ ಯಾರೂ ಇವಳನ್ನ ಲಗ್ನ ಆಗಲಾರರು. ಇವಳ ಲಗ್ನವಾದರೆ ಇಲ್ಲೇ ಆಗಬೇಕು. ಇಲ್ಲಿ ನಾನೂ ಒಬ್ಬ ಸಂಸಾರಿ. ಮನೆ ಐತಿ, ವ್ಯಾಪಾರ ಐತಿ, ಕೈಯಾಗ ನಾಕು ದುಡ್ಡೂ ಐತಿ. ಲಕ್ಷ್ಮಿಯ ಮದುವೆ ಆದರೆ ಇಲ್ಲೇ ಆಗೂದು. ನೀವು ಸಹಾಯ ಮಾಡಬೇಕ್ರೀ."

ಅವನು ಕರದಂಟು ಮಾರಲು ಕೂಡುತ್ತಿದ್ದ ಸ್ಥಳ ನನ್ನ ಕೋಣೆಯ ಸಮೀಪದಲ್ಲಿತ್ತು. ನಾನು ಯಾವ ಗೊಡವೆಗೂ ಹೋಗದೆ ನನ್ನ ಕೆಲಸಕ್ಕೆ ಹೋಗುತ್ತಿದ್ದುದನ್ನು ಅವನು ಕಂಡುಕೊಂಡಿದ್ದನಂತೆ. ನಾನು ಎಲ್ಲರಿಗೂ ಸಹಾಯ ಮಾಡುವುದನ್ನು ಕೇಳಿಕೊಂಡಿದ್ದನಂತೆ. ಅಂತೆಯೆ, ನಾನು ಅವನಿಗೂ ಸಹಾಯ ಮಾಡಬಹುದೆಂದು ಭಾವಿಸಿದನಂತೆ. "ಆಗಲಿ ಕಾಡಸಿದ್ಧಾ.

ನನ್ನಿಂದಾದ್ದು ಮಾಡುತೀನಿ," ಎಂದು ಹೇಳಿ ಎದ್ದು ನಿಂತೆ. "ನಾಳೆಯಿಂದ ಲಕ್ಷ್ಮಿ ಮನೆಯೊಳಗೇ ಇರಲಿ. ವ್ಯಾಪಾರಕ್ಕೆ ಅವಳನ್ನು ಕರೆದು ತರಬೇಡ," ಎಂದೂ ಹೇಳಿದೆ.

"ಹಾಂಗೇ ಮಾಡುತೀನಿ ಸರದಾರರೇ. ಇಲ್ಲೇ ಊಟ ಮಾಡಿಕೊಂಡೇ ಹೋಗಿರಿ," ಎಂದ ಕಾಡಸಿದ್ಧ.

ರಾತ್ರಿಯ 'ಹಾಜರಿ'ಗಾಗಿ ನಾನು ಬೇಗ ಹೆಡ್‌ಕ್ವಾರ್ಟರಿಗೆ ಹೋಗ ಬೇಕಾಗಿತ್ತು. ಆಗ ಆರುಗಂಟೆಯ ಸಮಯ. ಎಂಟು ಗಂಟೆಯೊಳಗಾಗಿ ಅಡುಗೆಯಾಗುವಂತಿದ್ದರೆ ಉಂಡು ಹೋಗುವುದಾಗಿ ಹೇಳಿದೆ.

"ಅದೇನು ದೊಡ್ಡದು ಬಿಡಿರಿ. ಒಂದು ತಾಸಿನೊಳಗಾಗಿ ಎಲ್ಲಾ ತಯಾರು ಮಾಡುತ್ತಾಳೆ ಲಕ್ಷ್ಮಿ," ಎಂದ ಕಾಡಸಿದ್ಧ.

ಒಡನೆಯೆ ಅಡುಗೆಯ ಮನೆಯಲ್ಲಿ ಲಕ್ಷ್ಮಿಯ ಗಡಿಬಿಡಿಗಾರಂಭವಾಯಿತು. ಪೇಟೆಯಲ್ಲಿ ಸುತ್ತಿ ಬರುವುದಾಗಿ ಹೇಳಿ ನಾನು ಹೊರಗಡೆ ಹೊರಟೆ. ನನ್ನ ತಲೆಯ ತುಂಬಾ ಯೋಚನೆಗಳು. ಆ ತಂದೆ ಮಗಳು ನಾನು ಕೊಟ್ಟ ಆಶ್ವಾಸನ ವನ್ನು ನಂಬಿ ಕುಳಿತಿರುವರು. ನನ್ನಿಂದ ಈ ಕೆಲಸವಾದೀತೇ? ಹಾಗೆ ಯೋಚಿ ಸುತ್ತ ಅಲ್ಲಿ ಇಲ್ಲಿ ಅಲೆದು ಮತ್ತೆ ಸಿದ್ಧನ ಮನೆಗೆ ಬಂದೆ. ಊಟವಾಯಿತು. ಲಕ್ಷ್ಮಿ ಬಹಳ ಚೆನ್ನಾಗಿ ಅಡುಗೆ ಮಾಡಿದ್ದಳು. ಪದಾರ್ಥಗಳೆಲ್ಲ ರುಚಿಕರ ವಾಗಿದ್ದುವು. ಅವಳು ಎಲ್ಲಾ ವಿಷಯಗಳಲ್ಲೂ ಪಳಗಿದ ಹುಡುಗಿ. ಎಂಥ ಗಂಡ ಸಿಕ್ಕರೂ ಅವನನ್ನು ಹಾದಿಗೆ ತರಬಲ್ಲ ವ್ಯಾವಹಾರಿಕ ಜಾಣ್ಮೆ, ದಿಟ್ಟತನ, ಮನೆತನ ಸಾಗಿಸುವ ಕೌಶಲ ಎಲ್ಲಾ ಅವಳಲ್ಲಿತ್ತು. ಇಂಥವಳನ್ನು ಯಾರಾದರೂ ಸಂತೋಷದಿಂದ ಲಗ್ನವಾಗಬಹುದೆಂದು ಯೋಚಿಸುತ್ತಾ ಹೆಡ್‌ಕ್ವಾರ್ಟರಿಗೆ ಹೊರಟೆ. ಕಾಡಸಿದ್ಧ ತುಸುದೂರದವರೆಗೆ ನನ್ನೊಡನೆ ಬಂದು ಆಪ್ತರನ್ನು ಬೀಳ್ಕೊಡುವಂತೆ ನನ್ನನ್ನು ಬೀಳ್ಕೊಂಡು ಹಿಂದಿರುಗಿ ಹೋದ.

ಮರುದಿನ ಸಿದ್ಧನ ಜೊತೆಗೆ ಲಕ್ಷ್ಮಿ ಬರಲಿಲ್ಲ. ಸಿದ್ಧನ ನಡವಳಿಕೆಯಲ್ಲೂ ಸ್ವಲ್ಪ ಗಾಂಭೀರ್ಯ ಎದ್ದು ಕಾಣಿಸುತ್ತಿತ್ತು. ಹೆಡ್‌ಕ್ವಾರ್ಟರಿಗೆ ಬಂದೊಡನೆ ಅವನು ನಮ್ಮ ಕೋಣೆಗೆ ಬಂದು ಒಂದು ಸೇರಿನಷ್ಟು ಕರದಂಟು ಇಟ್ಟು ನಮಸ್ಕಾರ ಮಾಡಿದ. ಹಣ ಕೊಡಲು ಹೋದರೆ ಸ್ವೀಕರಿಸಲಿಲ್ಲ. ಮುಂದೆ

ಪ್ರತಿದಿನವೂ ಹಾಗೆಯೆ ಕರದಂಟು ಕೊಡತೊಡಗಿದ. ಉಚಿತವಾಗಿ ಅದನ್ನು ತೆಗೆದುಕೊಳ್ಳಲು ನನ್ನ ಮನಸೊಪ್ಪದು. ಅವನು ಬಿಡುತ್ತಿರಲಿಲ್ಲ.

"ನನ್ನ ಲಕ್ಷ್ಮಿ ತನ್ನ ಅಣ್ಣನಿಗಂತ ಇದನ್ನ ಕಳಿಸುತ್ತಾಳೆ," ಎನ್ನುತ್ತಿದ್ದ ಕಾಡಸಿದ್ಧ.

ನಾನು ಚೇಷ್ಟೆಗಾಗಿ ಹೇಳುತ್ತಿದ್ದೆ : "ಅವಳಿಗೊಬ್ಬ ಗಂಡನನ್ನ ಹುಡುಕಿ ಕೊಡಲಿ ಅಂತ ಲಂಚ ಕೊಡ್ತಿರಬೇಕು.

ಕಾಡಸಿದ್ಧ ನಕ್ಕುಬಿಡುತ್ತಿದ್ದನಷ್ಟೆ.

ಹಬ್ಬ – ಹುಣ್ಣಿವೆಗಳಲ್ಲಿ ನನಗೆ ಊಟಕ್ಕೆ ಆಮಂತ್ರಣ ಬರುತ್ತಿತ್ತು – ಅವರ ಮನೆಯಿಂದ. ನಾನು ತಪ್ಪಿಸಿಕೊಳ್ಳುವಂತಿರಲಿಲ್ಲ. ತಪ್ಪಿಸಿದ ದಿನ ಅಡುಗೆಯನ್ನು ಕಟ್ಟಿ ಕಳಿಸುತ್ತಿದ್ದಳು ಲಕ್ಷ್ಮಿ. ಅದನ್ನು ಕಂಡು ಪೋಲೀಸರು ಅಲ್ಲದಸಲ್ಲದ ಮಾತುಗಳನ್ನಾಡಿದರೆ ಲಕ್ಷ್ಮಿಗೇ ಕೆಡಕೆಂದು ಬಗೆದು ನಾನು ಅವರ ಮನೆಗೇ ಊಟಕ್ಕೆ ಹೋಗಿ ಬರುತ್ತಿದ್ದೆ.

ಕೆಲದಿನಗಳ ತರುವಾಯ ಲಕ್ಷ್ಮಿಗೆ ಒಬ್ಬ ವರನನ್ನು ಹುಡುಕಿದ್ದಾಯಿತು. ಅವನು ಸುಸ್ವಭಾವಿ. ಲಕ್ಷ್ಮಿಯೂ ಅವನನ್ನು ಮನಃಪೂರ್ವಕವಾಗಿ ಒಪ್ಪಿಕೊಂಡಳು. ಸಾಕಷ್ಟು ಸಡಗರದಿಂದ ಮದುವೆಯೂ ಜರಗಿತು.

ಕರದಂಟು ಮಾರುತ್ತಿದ್ದ ಕಾಡಸಿದ್ಧ ಈಗ ಮಿಠಾಯಿ ಅಂಗಡಿಯೊಂದರ ಒಡೆಯನಾಗಿದ್ದಾನೆ. ವ್ಯಾಪಾರವೂ ಚೆನ್ನಾಗಿ ನಡೆದಿದೆ. ಸಿದ್ಧನ ಮನೆಯೂ ಬೆಳೆದಿದೆ. ಲಕ್ಷ್ಮಿಗೆ ಲಕ್ಷ್ಮಿಯೂ ಒಲಿದಿದ್ದಾಳೆ. ಸಿದ್ಧನ ಆಪ್ತರೂ ಅವನನ್ನು ಕ್ಷಮಿಸಿದ್ದಾರೆ. ಗಂಡನೊಡನೆ ಮಗಳು ಸುಖವಾಗಿ ಸಂಸಾರ ಮಾಡುವುದನ್ನು ಕಂಡು ಸಂತೋಷಿಸುತ್ತ ಹಾಯಾಗಿ ಕಾಲ ಕಳೆಯುತ್ತಿದ್ದಾನೆ ಕಾಡಸಿದ್ಧ.

೭

ಕಿರಾಣಿ ಅಂಗಡಿಯ ಕಾಶ್ಯಾಬಾ

ನೂರಾರು ಸಂಸಾರಗಳಿರುವ ಹೆಡ್‌ಕ್ವಾರ್ಟರಿನಲ್ಲಿ ಒಂದು ಕಿರಾಣಿ ಅಂಗಡಿಯಿರಬೇಕಾದುದು ಅವಶ್ಯವಷ್ಟೆ. ಆದರೆ ಮೊದಲು ಅಂಥ ಅಂಗಡಿಗಳಿಗೆ ಅಲ್ಲಿ ಅಪ್ಪಣೆ ದೊರೆಯುತ್ತಿರಲಿಲ್ಲ. ಸಾಮಾನುಗಳನ್ನು ಕೊಳ್ಳಲು ಪೋಲೀಸರು ನಗರಕ್ಕೇ ಹೋಗಬೇಕಾಗುತ್ತಿತ್ತು. ಕಾಶ್ಯಾಬಾ ಮಾತ್ರ ಅಧಿಕಾರಿಗಳಿಗೆ ದಮ್ಮಯ್ಯಗುಡ್ಡೆ ಹಾಕಿ ಅಂಗಡಿಯನ್ನಿಡಲು ಅಪ್ಪಣೆ ಪಡೆದುಕೊಂಡಿದ್ದ. ಅವನಿಗೊಂದು ಸರಕಾರಿ ಕೋಣೆಯೂ ಸಿಕ್ಕಿತ್ತು. ಪೋಲೀಸ್ ಖಾತೆಯಲ್ಲಿ ಕೆಲಸ ಮಾಡಿ ಜಮಾದಾರ್ ಸ್ಥಾನದವರೆಗೂ ಏರಿ ಅವನು ನಿವೃತ್ತಿ ಹೊಂದಿದ್ದ. ಅವನ ಮಗನೂ ಹೆಡ್‌ಕ್ವಾರ್ಟರಿನಲ್ಲಿಯೆ ಪೋಲೀಸನಾಗಿದ್ದ. ಪೋಲೀಸರ ಸ್ವಭಾವ ವೈಶಿಷ್ಟ್ಯಗಳನ್ನೂ ರೀತಿ ನೀತಿಗಳನ್ನೂ ಚೆನ್ನಾಗಿ ಅರಿತುಕೊಂಡಿದ್ದ ಕಾಶ್ಯಾಬಾ ಅಂಗಡಿ ಹೂಡಿದ ಕೆಲವೇ ವರ್ಷಗಳಲ್ಲಿ ಸಾಕಷ್ಟು ಹಣ ಮಾಡಿ ಕೊಂಡಿದ್ದ.

ಕಾಶ್ಯಾಬಾನ ಮಗನಿಗೆ ನಾಲ್ವರು ಹೆಣ್ಣು ಮಕ್ಕಳಿದ್ದರು. ಎಲ್ಲರೂ ಪ್ರಾಪ್ತವಯಸ್ಕರಾಗಿದ್ದರೂ ಯಾರಿಗೂ ಮದುವೆಯಾಗಿರಲಿಲ್ಲ. ಅವರು ನಾಲ್ವರೂ ಗಂಡುಬೀರಿಯರೆಂದು ಪ್ರಸಿದ್ಧಿ ಪಡೆದಿದ್ದರು. ಹೆಡ್‌ಕ್ವಾರ್ಟರಿನಲ್ಲಿನ

ತರುಣ ಪೋಲೀಸರನ್ನೆಲ್ಲ ಅವರು ತಮ್ಮ ಬಲೆಗೆ ಬೀಳಿಸಿಕೊಂಡು ವೇಶ್ಯಾವೃತ್ತಿಯನ್ನೆ ನಡೆಸಿದ್ದರು. ಇವರಿಂದ ರೋಗ ಅಂಟಿಸಿಕೊಂಡು ಗೋಳಾಡುತ್ತಿದ್ದ ಎಷ್ಟೋ ಜನರನ್ನು ನಾವು ನೋಡಿದ್ದೆವು. ಆ ಹುಡುಗಿಯರು ಯಾರ ಮಾತನ್ನೂ ಲಕ್ಷಿಸುತ್ತಿರಲಿಲ್ಲ. ಕಾಶ್ಯಾಬಾ ಮತ್ತು ಅವನ ಮಗ ಇಬ್ಬರೂ ಆ ಹುಡುಗಿಯರನ್ನು ಅಂಕೆಯಲ್ಲಿರಿಸಿಕೊಳ್ಳಲು ಯತ್ನಿಸಿದುದೆಲ್ಲ ವ್ಯರ್ಥವಾಗಿತ್ತು. ತಮ್ಮನ್ನು ಮದುವೆ ಮಾಡಿಕೊಟ್ಟರೆ ಹೋಗಿಬಿಡುವುದಾಗಿ ಹುಡುಗಿಯರು ಹೇಳುತ್ತಿದ್ದರು. ಈ ಮಾರಿಯರನ್ನು ಲಗ್ನವಾಗಲು ಸಿದ್ಧವಾಗುವವರಾದರೂ ಯಾರು? ದಿನಗಳೆದಂತೆ ಕಾಶ್ಯಾಬಾ ಆ ಹುಡುಗಿಯರ ನಡತೆಯ ಬಗ್ಗೆ ಯೋಚಿಸುವುದನ್ನೇ ನಿಲ್ಲಿಸುತ್ತ ಬಂದ. ಅವರು ಸಂಪಾದಿಸಿದ ಹಣದಲ್ಲಿ ಅರ್ಧ ಪಾಲು ಇವನಿಗೂ ದಕ್ಕತೊಡಗಿತು. ಕಾಶ್ಯಾಬಾ ಕಣ್ಣು ಮುಚ್ಚಿಕೊಂಡ, ಕಿವಿ ಮುಚ್ಚಿಕೊಂಡ. ಅವರು ಏನು ಮಾಡಿದರೇನಂತೆ! ಇವನಿಗೆ ಕಾಸು ಬಂದರಾಯಿತಲ್ಲ!

"ಕಾಶ್ಯಾಬಾ ಎಂದರೆ ಹೆಡ್‌ಕ್ವಾರ್ಟರಿನ ಶೈಲಾಕ್," ಎಂದು ಮುಲ್ಲಾಪುರ ಆಗಾಗ ತಮಾಷೆಗಾಗಿ ಹೇಳುತ್ತಿದ್ದ. ಶೈಲಾಕ್‌ಗೆ ಯಾವ ಅಂಶದಲ್ಲೂ ಕಡಮೆಯವನಾಗಿರಲಿಲ್ಲ ಕಾಶ್ಯಾಬಾ. ಅವನಂತೆ ಇವನಿಗೂ ದಯೆಯೆಂದರೆ ಅಪರಿಚಿತ ವಿಷಯ. ಪ್ರಾಮಾಣಿಕತನವಂತೂ ಇವನಿಗೆ ಗೊತ್ತೇ ಇರಲಿಲ್ಲ. ಹೊಸದಾಗಿ ಪೋಲೀಸ್ ಖಾತೆಗೆ ಸೇರಿದ 'ರೆಕ್ರೂಟ'ರನ್ನೆಲ್ಲ ಕಂಡು ತನ್ನ ಅಂಗಡಿಯಲ್ಲಿ ಸಾಮಾನು ತೆಗೆದುಕೊಂಡು ಹೋಗಬಹುದೆಂದು ತಿಳಿಸಿ ಹೋಗುತ್ತಿದ್ದ. ಒಂದು ಸಲ ಅವನಲ್ಲಿ ವ್ಯವಹಾರಕ್ಕಾರಂಭಿಸಿದರೆ ಮುಗಿಯಿತು, ಗಿರಾಕಿಗಳ ರಕ್ತವನ್ನೇ ಹೀರಿಬಿಡುತ್ತಿದ್ದ ಕಾಶ್ಯಾಬಾ. ಸಕ್ಕರೆ, ಚಹದ ಪುಡಿ, ಸೀಮೆಯೆಣ್ಣೆ, ಬೀಡಿ ಸಿಗರೇಟು, ಅಕ್ಕಿ ಬೇಳೆ ಮೊದಲಾದ ಸಾಮಾನುಗಳೆಲ್ಲ ಅವನಲ್ಲಿ ದೊರೆಯುತ್ತಿದ್ದುವು.

ನಗದು ಹಣ ಕೊಟ್ಟು ಕೊಳ್ಳುವ ಗಿರಾಕಿಗಳೆಂದರೆ ಬಹಳ ಸಿಟ್ಟು ಕಾಶ್ಯಾಬಾಗೆ. ಉದ್ದರಿ ಒಯ್ಯುವವರಿಂದಲೇ ಅವನಿಗೆ ಲಾಭ ಬರುತ್ತಿದ್ದುದು. ಮೊದಲನೆಯ ತಾರೀಖಿನವರೆಗೆ ಯಾರಿಗೆ ಎಷ್ಟು ಸಾಮಾನು ಬೇಕಿದ್ದರೂ ಉದ್ದರಿ ಕೊಡುತ್ತಿದ್ದ. ಒಂದು ಕೊಟ್ಟು ಎರಡು ಬರೆದು ಲೆಕ್ಕ ಏರಿಸಿ ಕೂಡುತ್ತಿದ್ದ. ಸಂಬಳದ ದಿನ, ಅವನೂ ಸಂಬಳ ಕೊಡುವ ಅಧಿಕಾರಿಗಳ

ಪಕ್ಕದಲ್ಲಿಯೆ ಕುಳಿತು ತನ್ನ ಲೆಕ್ಕ ವಸೂಲು ಮಾಡಿಕೊಳ್ಳುತ್ತಿದ್ದ. ತಮ್ಮ ಲೆಕ್ಕ ಹೆಚ್ಚಾಗಿದೆಯೆಂದು ಪೋಲೀಸರಿಗೆ ಅನುಮಾನ ಬಂದರೂ ಅಧಿಕಾರಿಗಳೆದುರಿಗೆ ಕಾಶ್ಯಾಬಾನ ಜೊತೆಗೆ ವಾದಕ್ಕಿಳಿಯಲಾರದೆ ಅವರು ಸುಮ್ಮನಿದ್ದು ಬಿಡಬೇಕಾಗಿ ಬರುತ್ತಿತ್ತು. ಕೆಲವರಂತೂ ತಮ್ಮ ಸಂಬಳದ ಮುಕ್ಕಾಲು ಪಾಲನ್ನು ಅವನಿಗೇ ಕೊಟ್ಟು ನಿಟ್ಟುಸಿರು ಬಿಡುತ್ತ ಬರುತ್ತಿದ್ದರು. ಸಂಬಳದ ದಿನವೆ ಕೈಯಲ್ಲಿನ ಹಣ ತೀರಿಹೋಗುತ್ತಿದ್ದಿತೆಂದ ಮೇಲೆ ಮತ್ತೆ ಒಂದು ತಿಂಗಳಿನವರೆಗೆ ಕಾಶ್ಯಾಬಾನ ಅಂಗಡಿಗೇ ಎಡತಾಕಬೇಕಾದ ಪ್ರಸಂಗವಿದ್ದೇ ಇರುತ್ತಿತ್ತು. ಹೀಗಿತ್ತು ಕಾಶ್ಯಾಬಾನ ಹಿಡಿತ: ಅದರಿಂದ ತಪ್ಪಿಸಿಕೊಳ್ಳುವುದು ಯಾರಿಗೂ ಸಾಧ್ಯವಾಗಿರಲಿಲ್ಲ.

ಒಂದು ಸಲ ನಮ್ಮ ಗೆಳೆಯ ಮಲ್ಲಾಪುರ ಕಾಶ್ಯಾಬಾನಲ್ಲಿ ಒಂದು ಬಿಲ್ಲೆಯ ಸಿಗರೇಟು ಕೊಂಡುಕೊಂಡ. ಬಿಲ್ಲೆಗೆರಡರಂತೆ ಸಿಕ್ಕುತ್ತಿದ್ದ 'ಬೈಸ್ಕೋಪ್' ಸಿಗರೇಟುಗಳವು. ಮಲ್ಲಾಪುರ ಒಂದಾಣೆ ಕೊಟ್ಟು ಚಿಲ್ಲರೆ ಕೊಡಲು ಕೇಳಿದ. ಚಿಲ್ಲರೆಯಿಲ್ಲವೆಂದು ಹೇಳಿ ಬಿಲ್ಲೆಯನ್ನು ಮರುದಿನ ಕೊಡಬಹುದೆಂದ ಕಾಶ್ಯಾಬಾ. ಅದರಂತೆ ಮರುದಿನ ಮಲ್ಲಾಪುರ ಒಂದು ಬಿಲ್ಲೆಯನ್ನು ಕೊಡಲು ಹೋದಾಗ ಕಾಶ್ಯಾಬಾ ಎರಡು ಬಿಲ್ಲೆ ಕೇಳಿದ. "ಎರಡು ಬಿಲ್ಲಿಯ ಸಿಗರೇಟು ಒಯ್ದು ಒಂದು ಬಿಲ್ಲಿ ಕೊಟ್ಟು ನನಗ ಟೊಪಿಗೀ ಹಾಕಲಿಕ್ಕೆ ಬರ್ತಾರ ಕಳ್ಳರು," ಎಂದೆಲ್ಲ ಕೂಗಾಡಿದ. ಮಲ್ಲಾಪುರನೂ ಕೋಪಿಸಿಕೊಂಡು ಕಾಶ್ಯಾಬಾನನ್ನು ಅವಾಚ್ಯ ಶಬ್ದಗಳಿಂದ ನಿಂದಿಸತೊಡಗಿದ, ಗದ್ದಲವಾಗಿ ಜನ ಕೂಡಿತು. ಕಾಶ್ಯಾಬಾನ ಮಗನ ನಾಲ್ವರು ಹುಡುಗಿಯರೂ ಕೈತಿರುವುತ್ತಾ ಮಲ್ಲಾಪುರನ ಮೈಮೇಲೆ ಬಂದರು. ಕೂಡಿದ ಜನರು ನಕ್ಕು ಜಗಳ ನಿಲ್ಲಿಸಿ ಮಲ್ಲಾಪುರನಿಂದ ಎರಡು ಬಿಲ್ಲೆ ಕೊಡಿಸಿ ಕಾಶ್ಯಾಬಾನ ಬಾಯಿ ಮುಚ್ಚಿಸಿದರು. "ಒಯ್ಯುವಾಗ ಮೆತ್ತಗೆ ಒಯ್ಯುತಾರ. ಕೊಡುವಾಗ ಕಣ್ಣೀರು ಹಾಕುತಾರ," ಎಂದು ಗೊಣಗುತ್ತಲೇ ಇದ್ದ ಕಾಶ್ಯಾಬಾ. ಅವನ ಪ್ರಾಮಾಣಿಕತನದ ನಿಜಸ್ವರೂಪವನ್ನು ಎಲ್ಲರೂ ಅರಿತವರಾಗಿದ್ದರೂ ಮಲ್ಲಾಪುರನ ಪಕ್ಷವಹಿಸಲು ಯಾರೂ ಸಿದ್ಧರಿರಲಿಲ್ಲ. ಕಾಶ್ಯಾಬಾನ ವೈರ ಕಟ್ಟಿಕೊಂಡವರು ಹೆಡ್‌ಕ್ವಾರ್ಟರಿನಲ್ಲಿ ಬಾಳುವೆ ನಡಸುವುದೇ ಕಠಿಣವಾಗುತ್ತಿತ್ತು. ಅವನು ಅತ್ಯಂತ ಅಪ್ರಿಯ ವ್ಯಕ್ತಿಯಾಗಿದ್ದರೂ ಅವನ ವ್ಯಾಪಾರ ಮಾತ್ರ ಬಿರುಸಾಗಿ ನಡೆಯುತ್ತಿತ್ತು. ಅವನು ಸಾಕಷ್ಟು

ಹಣವನ್ನೂ ಸಂಗ್ರಹಿಸಿದ್ದ. ಆ ನಾಲ್ವರು ಹುಡುಗಿಯರ ಲಗ್ನದ ಚಿಂತೆಯೊಂದೇ ಅವನನ್ನು ಕಾಡಿಸುತ್ತಿತ್ತು.

ತಮ್ಮ ಜಾತಿಯ 'ರಿಕ್ರೂಟ'ರಾರಾದರೂ ಹೆಡ್‌ಕ್ವಾರ್ಟರಿಗೆ ಬಂದಕೂಡಲೆ ಅವರ ಮೇಲೆ ಕಾಶ್ಯಾಬಾನ ದೃಷ್ಟಿ ಕೂಡುತ್ತಿತ್ತು. ಆ ನಾಲ್ವರು ಹುಡುಗಿಯರಲ್ಲಿ ಒಬ್ಬಳನ್ನಾದರೂ ದಾಟಿಸಿಬಿಡಲು ಪರಿಪರಿಯಾಗಿ ಯತ್ನಿಸುತ್ತಿದ್ದ. ಆದರೆ, ನಾಲ್ಕು ದಿನಗಳಲ್ಲಿಯೆ ಆ ಹುಡುಗಿಯರ ಚರಿತ್ರೆ ತಿಳಿದುಕೊಂಡ ರಿಕ್ರೂಟರು ಕಾಶ್ಯಾಬಾನ ಬಲೆಗೆ ತೊಡಕಿಕೊಳ್ಳುವ ಹವ್ಯಾಸಕ್ಕೆ ಬೀಳುತ್ತಿರಲಿಲ್ಲ. ಒಂದೆರಡು ರೂಪಾಯಿ ಕೊಟ್ಟು ಒಂದೆರಡು ದಿನ ಮೋಜು ಮಾಡಿದರಾಯಿತು – ಎನ್ನುತ್ತಿದ್ದವರೇ ಹೆಚ್ಚುಮಂದಿ. ಆ ಹುಡುಗಿಯರಿಗೆ ಬೇಕಾಗಿದ್ದುದೂ ಅಂಥ ಮೋಜೇ – ದಿನಕ್ಕೊಬ್ಬ ಗಂಡುಸನ್ನು ಹುಡುಕುವ ಅವರ ವ್ಯವಹಾರವನ್ನು ಕಂಡು ಹೆಡ್‌ಕ್ವಾರ್ಟರೆಲ್ಲವೂ ನಗುತ್ತಿತ್ತು. ಹಾಗೆ ನಗುವವರೇ ಅವರ ಹತ್ತಿರ ಹೋಗಿ ಬರುತ್ತಿದ್ದರು. ಆ ಮಾತು ಬೇರೆ.

ಬರಬರುತ್ತಾ ಈ ವ್ಯವಹಾರ ಅಸಹನೀಯವಾಯಿತು ಕಾಶ್ಯಾಬಾಗೆ. ಒಂದು ಬಾರಿ ಅವನಿಗೂ ಒಬ್ಬ ಹುಡುಗನಿಗೂ ಜಗಳಕ್ಕಾರಂಭವಾಗಿ ಕಾಶ್ಯಾಬಾ ಅವನನ್ನು ಬಯ್ಯುತ್ತಲೂ ಆ ಹುಡುಗ ಕಾಶ್ಯಾಬಾನ ಹೆಣ್ಣುಮಕ್ಕಳ ಚರಿತ್ರೆಯನ್ನೆಲ್ಲ ಕೀರ್ತನೆಯಂತೆ ವರ್ಣಿಸುತ್ತಾ ಹೆಡ್‌ಕ್ವಾರ್ಟರಿನ ಉದ್ದಕ್ಕೂ ತಿರುಗಿದ. ಅದರಿಂದ ಅವಮಾನಿತನಾದ ಕಾಶ್ಯಾಬಾ ಅಂದೇ ಒಂದು ನಿರ್ಧಾರಕ್ಕೆ ಬಂದ. ಆ ನಾಲ್ವರು ಹುಡುಗಿಯರ ಲಗ್ನವಾಗುವವರೆಗೂ ಮೀಸೆಯಿಡುವುದಿಲ್ಲವಾಗಿ ಪಣತೊಟ್ಟು ಬಹಳ ದಿನಗಳಿಂದ ಬೆಳಸಿದ್ದ ಮೀಸೆಯನ್ನು ಬೋಳಿಸಿಹಾಕಿದ.

ಹುಡುಗಿಯರಲ್ಲಿ ಹಿರಿಯವಳಾಗಿದ್ದ ಚಂಪಾವತಿ ತಮ್ಮ ಜಾತಿಯವನೇ ಆದ ಹಣಮಂತನೆಂಬ ಪೋಲೀಸನೊಡನೆ ಪ್ರಣಯ ಸಂಬಂಧ ಸಾಗಿಸಿದ್ದಳು. ಪ್ರತಿದಿನವೂ ಅವಳು ಹಣಮಂತನ ಕೋಣೆಗೆ ಹೋಗಿ ಬರುವುದು ರೂಢಿಯಾಗಿತ್ತು. ಅದನ್ನು ತಿಳಿದುಕೊಂಡಿದ್ದ ಕಾಶ್ಯಾಬಾ ಒಂದು ರಾತ್ರೆ ಚಂಪಾವತಿ ಹಣಮಂತನ ಕೋಣೆಯಲ್ಲಿದ್ದಾಗ ಅವರಿಬ್ಬರನ್ನೂ ಹಿಡಿದು ನಾಲ್ಕು ಜನರನ್ನು ಕೂಡಿಸಿ ದೊಡ್ಡದೊಂದು ಗದ್ದಲವನ್ನೇ ಎಬ್ಬಿಸಿದ.

"ಅರೀದ ಹುಡುಗೀರನ್ನ ಹೀಂಗ ಕೆಟ್ಟ ಹಾದಿಗೆ ಎಳೆಯುವವರನ್ನ ಏನು ಮಾಡಬೇಕು ನೀವೇ ಹೇಳಿರಿ," ಎಂದು ಜನರಿಗೆ ಸವಾಲು ಹಾಕಿದ ಕಾಶ್ಯಾಬಾ—

ಜನರು ಏನನ್ನು ತಾನೆ ಹೇಳಿಯಾರು! ಅವರು ಮುಸಿ ಮುಸಿ ನಕ್ಕು ಸುಮ್ಮನಿದ್ದರು.

“ಇವನ್ನ ಹಿಂಗೇ ಬಿಡೂದಿಲ್ಲ ನಾನು. ಡಿ. ಎಸ್. ಪಿ. ಯವರಿಗೆ ತಕರಾರು ಮಾಡಿ ಇವನ್ನ ಡಿಸ್‌ಮಿಸ್ ಮಾಡಿಸುತೀನಿ. ಏನಂತ ತಿಳಿದಿದ್ದಾನ!” ಎಂದ ಕಾಶ್ಯಾಬಾ.

“ಹೋಗಲಿ ಬಿಡು ಕಾಶ್ಯಾಬಾ. ಅವನೂ ನಿಮ್ಮ ಜಾತಿಯವನೇ ಇದ್ದಾನ. ಚಂಪಾವತಿಯನ್ನ ಅವನಿಗೇ ಕೊಟ್ಟು ಲಗ್ನಮಾಡಿಬಿಡು. ಪಾಪ, ಬಡವನ ನೌಕರಿಗ್ಯಾಕೆ ಕಲ್ಲು ಹಾಕುತ್ತೀ?” ಎಂದು ಒಬ್ಬರು ಸೂಚಿಸಿದರು.

ನೂರಾರು ಜನ ಗೆಳೆಯರ ಸಹವಾಸ ಮಾಡಿದ ಆ ಹುಡುಗಿಯನ್ನು ಲಗ್ನವಾಗಲು ಹಣಮಂತನಿಗೆ ಕೊಂಚವೂ ಇಷ್ಟವಿಲ್ಲವಾದರೂ ಬೇರೆ ಉಪಾಯವಿರಲಿಲ್ಲವಾದುದರಿಂದ ಅವನು ಒಪ್ಪಿಕೊಳ್ಳಲೇಬೇಕಾದ ಪ್ರಸಂಗ ಬಂತು. ಕಾಶ್ಯಾಬಾನ ಕಿಸೆಯಿಂದ ಒಂದು ಕಾಸೂ ಖರ್ಚಾಗದೆ ಚಂಪಾವತಿಯ ಮದುವೆ ನಡೆದುಹೋಯಿತು. ಹಣಮಂತನಿಗೊಬ್ಬ ಗೆಳೆಯನಿದ್ದ. ಅವನೊಬ್ಬ ಮೋಟಾರ್ ಡ್ರೈವರ್. ಹಣಮಂತನ ಸಹಾಯದಿಂದ ಎರಡನೆಯ ಹುಡುಗಿಯನ್ನು ಆ ಡ್ರೈವರನ ಕೊರಳಿಗೆ ಕಟ್ಟಲಾಯಿತು. ಕಾಶ್ಯಾಬಾ ಸಮಾಧಾನದ ಉಸಿರು ಹಾಕುತ್ತಲಿದ್ದ ಹಾಗೇ ಆ ಹುಡುಗಿ ಗಂಡನ ಮನೆಗೆ ಹೋದ ಮರುದಿನವೆ ಹೆಡ್‌ಕ್ವಾರ್ಟರಿಗೆ ತಿರುಗಿ ಬಂದು ತನ್ನ ಗಂಡನಿಗೆ ಗಂಡುಸುತನವೇ ಇಲ್ಲವೆಂದು ಸಾರಿಬಿಟ್ಟು ಇಲ್ಲಿಯೆ ಇರತೊಡಗಿದಳು. ಆ ಸುದ್ದಿಯನ್ನು ಕೇಳಿ ಮತ್ತೆ ಹೆಡ್‌ಕ್ವಾರ್ಟರೆಲ್ಲ ನಕ್ಕುಬಿಟ್ಟಿತು.

ಹಣಮಂತನ ಸಹಾಯದಿಂದ ಇನ್ನಿಬ್ಬರು ಹುಡುಗಿಯರಿಗೂ ಮದುವೆಗಳಾದುವು. ಅಲ್ಲಿಗೆ ಕಾಶ್ಯಾಬಾನ ಪಣ ಪೂರೈಸಿದ ಹಾಗಾಗಿ ಅವನು ಮತ್ತೆ ಮಿಾಸೆ ಕಾಯತೊಡಗಿದ.

ಮದುವೆಯಾದರೂ ಕೂಡ ಆ ಹುಡುಗಿಯರು ಹೆಡ್‌ಕ್ವಾರ್ಟರಿಗೆ ಬರುವುದನ್ನೂ ಪೋಲೀಸರು ಮತ್ತು ಅಧಿಕಾರಿಗಳೊಡನೆ ಪ್ರಣಯ ಸಂಬಂಧ ಇಟ್ಟುಕೊಳ್ಳುವುದನ್ನೂ ನಿಲ್ಲಿಸಲಿಲ್ಲ. ಅವರ ‘ವಶೀಲಿ’ಯಿಂದಲೇ ಅವರ ತಂದೆ ತನ್ನ ನೌಕರಿಯಲ್ಲಿ ಮೇಲಕ್ಕೇರುತ್ತ ಹೋಗಿ ಫೌಜದಾರನೂ ಆಗಿದ್ದಾನೆ.

೮

ಪರೀಕ್ಷೆ: ಪ್ರಯಾಣ

ನಾನು ಪೋಲೀಸ್ ರಿಕ್ರೂಟ್ ಆಗಿ ಹೆಡ್‌ಕ್ವಾರ್ಟರಿಗೆ ಬಂದು ಎರಡು ತಿಂಗಳಾಗುತ್ತಾ ಬಂದಿತ್ತು. ನನ್ನನ್ನು ಕೆಲಸಕ್ಕೆ ಸೇರಿಸಿಕೊಂಡ ಡಿ. ಎಸ್. ಪಿ. ಸಾಹೇಬರಿಗೆ ವರ್ಗವಾಗಿ ಅವರ ಸ್ಥಳಕ್ಕೆ ಇನ್ನೊಬ್ಬರು ಬರುವವರಿದ್ದರು. ಹೊಸ ಡಿ. ಎಸ್. ಪಿ. ಯವರನ್ನು ಸ್ವಾಗತಿಸಲೆಂದು ಹೆಡ್‌ಕ್ವಾರ್ಟರಿನಲ್ಲೆಲ್ಲ ಗಡಿಬಿಡಿಗಾರಂಭವಾಯಿತು. ಮೊದಲ ಸಂದರ್ಶನದಲ್ಲಿಯೆ ಅವರ ಮೆಚ್ಚುಗೆ ಗಳಿಸುವ ಹಂಬಲದಿಂದ, ಹೆಡ್‌ಕ್ವಾರ್ಟರಿನಲ್ಲಿನ ಕೊಳೆಯನ್ನೆಲ್ಲ ತೆಗೆದು ಹಾಕಿ ಎಲ್ಲ ಕಡೆಗೂ ಅಚ್ಚುಕಟ್ಟುತನ, ಸ್ವಚ್ಛತೆ ಉಂಟುಮಾಡಲು ಸಿದ್ಧತೆ ನಡೆಯ ತೊಡಗಿತು. ಆ ಕಾಲದಲ್ಲಿ ಯೂರೋಪಿಯನ್ ಅಧಿಕಾರಿಗಳೇ ಡಿ. ಎಸ್. ಪಿ. ಗಳಾಗಿರುತ್ತಿದ್ದರು. ಅಸ್ವಚ್ಛತೆಯೆಂದರೆ ಅವರಿಗಾಗುತ್ತಿರಲಿಲ್ಲ.

ಸರಿ. ಆರಂಭವಾಯಿತು ಸ್ವಚ್ಛತಾಯಜ್ಞ. ಚರಂಡಿಗಳನ್ನು ತೊಳೆಯು ವುದನ್ನು ಮೊದಲು ಮಾಡಿಕೊಂಡು ಕಕ್ಕಸದ ಡಬ್ಬಿಗಳಿಗೆ ಡಾಂಬರು ಬಳೆಯುವ ಕೆಲಸಗಳನ್ನೆಲ್ಲ ನಾವೇ ಮಾಡಬೇಕಾಯಿತು. 'ರಿಕ್ರೂಟ' ರಾಗಿದ್ದ ನಮ್ಮ ಮೇಲೆಯೆ ಇಂಥ ಕೆಲಸಗಳ ಭಾರ ವಿಶೇಷವಾಗಿತ್ತು. ನಾವು ಪೊರಕೆ ಹಿಡಿದೆವು, ಕಸ ತೆಗೆದೆವು. ಭಂಗಿಗಳು ತೊಳೆದಿದ್ದ ಡಬ್ಬಿಗಳನ್ನು ಹಿಡಿದು ಡಾಂಬರು

ಬಳಿದೆವು. ಕಕ್ಕಸಗಳ ತಗಡುಗಳ ಮೇಲೆ ಹೆಂಗುಸರ ಗಂಡುಸರ ಚಿತ್ರ ಬರೆದೆವು, ಹೆಡ್‌ಕ್ವಾರ್ಟರೆಲ್ಲವೂ ಝುಳಝುಳವಾಯಿತು, ಸಿಂಗರವಾಯಿತು.

ಮಾರನೆಯ ದಿನ ಹೊಸ ಡಿ. ಎಸ್. ಪಿ. ಸಾಹೇಬರು ಆಗಮಿಸಿದರು. ತುಂಬು ಸಂಭ್ರಮದೊಡನೆ ಅವರನ್ನು ಸ್ವಾಗತಿಸಲಾಯಿತು. ಹೆಡ್‌ಕ್ವಾರ್ಟರಿನಲ್ಲೆಲ್ಲ ಸುತ್ತಿ ಸಾಹೇಬರು ಕಚೇರಿಗೆ ಬಂದರು. ಕಚೇರಿಯ ಮುಂದೆ ಒಂದು ಟಪಾಲು ಪೆಟ್ಟಿಗೆ ಕಟ್ಟಲಾಗಿತ್ತು. ಎತ್ತರದ ಆಳುಗಳಿಗೆ ಮಾತ್ರ ತೆರೆಯಲು ಬರುವಂತೆ ಅದನ್ನು ಮೇಲಕ್ಕೆತ್ತರಿಸಿ ಇಡಲಾಗಿತ್ತು. ಹಲವು ತಿಂಗಳುಗಳಿಂದ ಅದರ ಮೇಲೆ ಬೀಳುತ್ತ ಬಂದಿದ್ದ ದೂಳನ್ನೊರೆಸುವ ವಿಚಾರ ಯಾರಿಗೂ ಹೊಳೆದಿರಲಿಲ್ಲ.

ಹೊಸದಾಗಿ ಬಂದ ಡಿ. ಎಸ್. ಪಿ. ಸಾಹೇಬರು ಆರು ಅಡಿ ಎರಡು ಇಂಚು ಎತ್ತರದ ಆಳು. ಕಚೇರಿಯಲ್ಲಿ ಅಡಿಯಿಡುತ್ತಿದ್ದಂತೆಯೆ ಅವರ ದೃಷ್ಟಿಯನ್ನು ಆ ಟಪಾಲು ಪೆಟ್ಟಿಗೆಯೇ ಸೆಳೆದುಕೊಂಡಿತು. ಸಾಹೇಬರು ಅದರ ಹತ್ತಿರ ನಿಂತರು, ಪೆಟ್ಟಿಗೆಯ ಮೇಲೆ ಕೈಯಿಟ್ಟರು, ಬೆರಳುಗಳಿಗೆ ಅಂಟಿಕೊಂಡ ದೂಳನ್ನು ಪಕ್ಕದಲ್ಲಿದ್ದ ಫೌಜದಾರರ ಮುಖಕ್ಕೆ ಊದಿದರು. ಮಾತನಾಡಲಿಲ್ಲ. ಪಾಪ! ಫೌಜದಾರರ ಮುಖ ಬಣ್ಣಗೆಟ್ಟು ಬಾಣಂತಿಯ ಮುಖದಂತಾಗಿ ಹೋಯಿತು. ಏಳೆಂಟು ದಿನಗಳ ವರೆಗೆ ಕಷ್ಟಪಟ್ಟು ದುಡಿದು ಹೆಡ್‌ಕ್ವಾರ್ಟರನ್ನು ಸ್ವಚ್ಛವಾಗಿಸಿದ್ದೆಲ್ಲ ವ್ಯರ್ಥವಾಗಿತ್ತು.

ಎರಡು ನಿಮಿಷಗಳ ಕಾಲ ಕಚೇರಿಯಲ್ಲಿದ್ದು ಅನಂತರ ಕವಾಯತು ಬಯಲಿಗೆ ಬಂದರು ಸಾಹೇಬರು. ಪೋಲೀಸರ ಕವಾಯತು ನಿರೀಕ್ಷಿಸಿ ಅವರು ನಮ್ಮ, ರಿಕ್ರೂಟರ ಸಾಲಿಗೆ ಬಂದರು. 'ಸಲಾಂ' ಕೊಡಲಾಯಿತು. ಸಾಹೇಬರು ಪ್ರತಿಯೊಬ್ಬರನ್ನೂ ಮಾತನಾಡಿಸಿ ಯೋಗಕ್ಷೇಮ ವಿಚಾರಿಸಿದರು. ರಿಕ್ರೂಟ್ ಭರತಿಯಾಗಿ ಎಷ್ಟು ಕಾಲವಾಗಿದ್ದಿತೆಂಬುದನ್ನು ತಿಳಿದುಕೊಂಡರು. ನಮ್ಮಲ್ಲಿ ಅನೇಕರು ಕೆಲಸಕ್ಕೆ ಸೇರಿ ಒಂದು ವರ್ಷವಾಗುತ್ತಾ ಬಂದಿತ್ತು. ನಾನೇ ಎಲ್ಲರಿಗಿಂತ ಕೊನೆಗೆ ಸೇರಿಕೊಂಡಿದ್ದವನು. ಆರು ತಿಂಗಳುಗಳಿಗಿಂತ ಹೆಚ್ಚು ಕಾಲ ಹೆಡ್‌ಕ್ವಾರ್ಟರಿನಲ್ಲಿದ್ದವರಿಗೆ 'ಫೈನಲ್ ಪರೀಕ್ಷೆ'ಯೆಂದೂ ಉಳಿದವರಿಗೆ 'ಸೆಮಿ ಫೈನಲ್ ಪರೀಕ್ಷೆ'ಯೆಂದೂ ಸಾಹೇಬರು ಹೇಳಿದರು. ಇನ್ನೊಂದು ವಾರಕ್ಕೆ ಪರೀಕ್ಷೆಯೆಂದು ಗೊತ್ತಾಯಿತು.

ಆ ದಿನವೂ ಬಂತು.

ಬೇರೆ ಪರೀಕ್ಷೆಗಳಿಗೂ ಪೋಲೀಸರ ಈ ಪರೀಕ್ಷೆಗಳಿಗೂ ಬಹಳ ವ್ಯತ್ಯಾಸವಿದೆ. ಶಾಲೆ ಕಾಲೇಜುಗಳ ಪರೀಕ್ಷೆಗಳಲ್ಲಿ ತೇರ್ಗಡೆಯಾಗದಿದ್ದವರು ಮತ್ತೊಂದು ಬಾರಿ ಕುಳಿತು ತೇರ್ಗಡೆಹೊಂದಬಹುದು. ಪೋಲೀಸರ ಪರೀಕ್ಷೆಯ ವಿಚಾರ ಹಾಗಲ್ಲ. ಇಲ್ಲಿ ಉತ್ತೀರ್ಣರಾಗದಿದ್ದರೆ ಬೇರೆ ಮಾತೇ ಇಲ್ಲ. ನೌಕರಿ ಕಳೆದುಕೊಂಡು ಮನೆಯ ಹಾದಿ ಹಿಡಿಯಬೇಕು.

ನಮ್ಮ ಆ ಮುದುಕ ಮಾಸ್ತರರು ನಮಗೆ ಶಿಕ್ಷಣ ಕೊಟ್ಟ ಪರಿಯಂತೂ ದೇವರಿಗೇ ಗೊತ್ತು ! ನಾವು ಕಲಿತುಕೊಂಡಿದ್ದುದೂ ಅಷ್ಟೆ. ತಮ್ಮ ಚಹಾ–ಬೀಡಿ ಚಟ ತೀರಿಸಿಕೊಳ್ಳುವುದರಲ್ಲಿಯೆ ವೇಳೆಗಳೆದಿದ್ದರು ನಮ್ಮ ಮಾಸ್ತರರು. ನಾವು ಓದಬೇಕಾಗಿದ್ದ ಪುಸ್ತಕಗಳೇನು ಕಥೆ ಕವಿತೆಗಳ ಪುಸ್ತಕಗಳಲ್ಲ; ಕಾಯದೆಗಳ ಪುಸ್ತಕಗಳು. ಎಂಥೆಂಥ ಬುದ್ಧಿವಂತರಿಗೂ ವಕೀಲರಿಗೂ ತಲೆ ಕೆಡಿಸುವಂಥವು. ನಾವು 'ರಿಕ್ರೂಟ'ರು ಅವುಗಳನ್ನು ಜೀರ್ಣಿಸಿಕೊಳ್ಳುವುದು ಬಹಳ ಪ್ರಯಾಸದ ಸಂಗತಿಯಾಗಿತ್ತು. ಆದರೂ ನನಗೇನೂ ಚಿಂತೆಯಿರಲಿಲ್ಲ. ನನ್ನದು ಕೊನೆಯ ಪರೀಕ್ಷೆಯಾಗಿರಲಿಲ್ಲವಲ್ಲ. ಈ ಸಲ ತೇರ್ಗಡೆಯಾಗದಿದ್ದರೂ ಮುಂದಿನ ಸಲ ಆಗುವೆನೆಂಬ ಧೈರ್ಯವಿತ್ತು.

ಪರೀಕ್ಷೆಯ ದಿನ ಬೆಳಿಗ್ಗೆ ಬೇಗ ಎದ್ದು ಮುಖಕ್ಷೌರ ತೀರಿಸಿಕೊಂಡು, ಸ್ನಾನ–ತಿಂಡಿ–ಚಹಾ ಮುಗಿಸಿ ಎಂಟುಗಂಟೆಯ ವೇಳೆಗೆ ಡಿ. ಎಸ್. ಪಿ. ಕಚೇರಿಗೆ ಬಂದೆವು. ಗುಮಾಸ್ತೆಯೊಬ್ಬರು ನಮ್ಮ ಹೆಸರು ಬರೆದುಕೊಂಡರು.

ಒಂಭತ್ತು ಗಂಟೆಗೆ ಪರೀಕ್ಷೆಗಾರಂಭವಾಯಿತು. ಪ್ರಶ್ನೆಗಳೆಲ್ಲ ಇಂಗ್ಲಿಷಿನಲ್ಲಿದ್ದುವು. ಸಾಮಾನ್ಯವಾಗಿ ನಮ್ಮ ಗುಂಪಿಗೆಲ್ಲ ಇಂಗ್ಲಿಷ್ ತಿಳಿಯುತ್ತಿತ್ತು.

ಶಾಲೆಗಳಲ್ಲಿನ ಪರೀಕ್ಷೆಗಳ ಕಾಲಕ್ಕೆ 'ಕಾಪಿ' ಹೊಡೆಯುವ ಚಟ ಅಂಟಿಸಿಕೊಂಡಿದ್ದ 'ರಿಕ್ರೂಟ'ರು ಕೆಲವರು ಇಲ್ಲಿಯೂ ಅದೇ ತಂತ್ರ ಉಪಯೋಗಿಸಲೆಂದು ಪಠ್ಯಪುಸ್ತಕಗಳನ್ನು ತೆಗೆದುಕೊಂಡು ಬಂದಿದ್ದರು. ಪ್ರಶ್ನೆಪತ್ರಿಕೆಗಳನ್ನು ನಮಗೆ ಕೊಡುವ ಮುನ್ನವೆ ಸಾಹೇಬರ ಸೂಚನೆಯ ಮೇರೆಗೆ ಪುಸ್ತಕಗಳನ್ನೆಲ್ಲ ಕಿತ್ತುಕೊಳ್ಳಲಾಯಿತು. ಸ್ವತಃ ಸಾಹೇಬರೇ ನಮ್ಮೆದುರಿಗೆ ಕುಳಿತುಕೊಂಡರು. ಇನ್ನು 'ಕಾಪಿ' ನಡೆಯುವ ಬಗೆ ಹೇಗೆ? 'ರಿಕ್ರೂಟ'ರ ಮುಖಗಳ ಮೇಲೆ ಕಳವಳ ಕಾಣಿಸಿಕೊಂಡಿತ್ತು. ನಮಗೆ ಮಾತ್ರ ಕಠಿಣ

ಪ್ರಶ್ನಗಳಿರಲಿಲ್ಲ. ಒಂದೂವರೆ ತಾಸಿನೊಳಗಾಗಿ ನನ್ನ ಉತ್ತರಗಳನ್ನು ಬರೆದು ಮುಗಿಸಿ ಸಾಹೇಬರಿಗೊಪ್ಪಿಸಿ ಹೊರಟು ನಿಂತೆ.

"ಇನ್ನೂ ಒಂದೂವರೆ ತಾಸು ಸಮಯವಿದೆಯಲ್ಲ. ಮತ್ತೊಮ್ಮೆ ಪೇಪರ್ ಓದಿ ಸರಿಯಾಗಿ ಬರೆಯಬಹುದು. ನಾಪಾಸಾದರೆ ನೌಕರಿ ಹೋದೀತು," ಎಂದರು ಸಾಹೇಬರು.

"ಸರಿಯಾಗೇ ಬರೆದಿದ್ದೇನೆ ಸಾಹೇಬರೆ. ಪಾಸಾಗುವೆನೆಂದು ಆತ್ಮ ವಿಶ್ವಾಸವಿದೆ," ಎಂದು ಉತ್ತರವಿತ್ತು 'ಸಲಾಂ' ಹೊಡೆದು ಹೊರಗೆ ಬಂದೆ. ನಾನು ಇಂಗ್ಲಿಷಿನಲ್ಲಿಯೆ ಉತ್ತರ ಬರೆದಿದ್ದೆನಾದುದರಿಂದಲೂ, ಇನ್ನೂ ಸಾಕಷ್ಟು ಸಮಯವಿದ್ದುದರಿಂದಲೂ ಸ್ವತಃ ಡಿ. ಎಸ್. ಪಿ. ಯವರೇ ನನ್ನ ಉತ್ತರಗಳನ್ನೋದಿ ನೋಡಿ ನೂರಕ್ಕೆ ಎಪ್ಪತ್ತೆಂಟು ಗುಣಗಳನ್ನು ಕೊಟ್ಟಿದ್ದರಂತೆ. ಉತ್ತರ ಪತ್ರಿಕೆಗಳನ್ನು ಕೊಡಲು ಸಾಹೇಬರ ಮೇಜಿನ ಬಳಿ ಹೋಗಿದ್ದ 'ರಿಕ್ರೂಟ' ನೊಬ್ಬ ಆ ವಿಷಯವನ್ನು ನನಗೆ ತಿಳಿಸಿದ. ಸಂತೋಷದಿಂದ ಹಾಡುತ್ತಾ ಹೆಡ್‌ಕ್ವಾರ್ಟರಿಗೆ ಬಂದೆವು.

ನನ್ನ ಪತ್ರಿಕೆಗಳನ್ನು ಸಾಹೇಬರೇ ಸ್ವತಃ ಪರೀಕ್ಷಿಸಿದುದನ್ನು ಕಂಡು ಗಾಬರಿಗೊಂಡಿದ್ದ 'ರಿಕ್ರೂಟ'ರೊಬ್ಬರು ಕನ್ನಡದಲ್ಲೇ ಉತ್ತರ ಬರೆದು ಬಂದಿದ್ದರು. ಸಾಹೇಬರಿಗೆ ಕನ್ನಡ ತಿಳಿಯುತ್ತಿರಲಿಲ್ಲವಲ್ಲ! ಈ 'ರಿಕ್ರೂಟರು' ಮನೆಗೆ ಬಂದ ಬಳಿಕ ಪುಸ್ತಕಗಳ ನೆರವಿನಿಂದ ಬೇರೊಂದು ಉತ್ತರ ಪತ್ರಿಕೆ ಸಿದ್ಧಗೊಳಿಸಿ, ಡಿ. ಎಸ್. ಪಿ. ಕಚೇರಿಯ ಸಿಪಾಯಿಯೊಬ್ಬನಿಗೆ ನಾಲ್ಕು ರೂಪಾಯಿ ಲಂಚ ತೆತ್ತು, ಮೊದಲಿನ ಪತ್ರಿಕೆಯ ಬದಲು ಈ ಹೊಸ ಪತ್ರಿಕೆಯನ್ನು ಫೈಲಿನಲ್ಲಿರಿಸುವ ವ್ಯವಸ್ಥೆ ಮಾಡಿದರು! ಈ ತಂತ್ರವನ್ನವಲಂಬಿಸಿಯೆ ಅನೇಕರು ಪರೀಕ್ಷೆಯಲ್ಲಿ ತೇರ್ಗಡೆಯಾದುದನ್ನು ನಾನು ಬಲ್ಲೆ.

ಪರೀಕ್ಷೆಯ ಫಲಿತಾಂಶ ಹೊರಬಿತ್ತು. ಕೊನೆಯ ಪರೀಕ್ಷೆಯಲ್ಲಿ ೬೦ ಗುಣ ಬಂದರೆ ಮಾತ್ರ ಪಾಸು. ಹದಿನೈದು ಮಂದಿ ಅನುತ್ತೀರ್ಣರಾಗಿದ್ದರು. ಸಾಹೇಬರು ಅವರನ್ನು ಮನೆಗೆ ಕಳಿಸಲಿಲ್ಲ. ಎಲ್ಲರಿಗೂ ಮತ್ತೆ ಮೂರು ತಿಂಗಳ ಅವಧಿ ಕೊಟ್ಟು ಚೆನ್ನಾಗಿ ಓದಿಕೊಳ್ಳುವಂತೆ ಎಚ್ಚರಿಕೆ ಕೊಟ್ಟರು.

ನಿರೀಕ್ಷಿಸಿಕೊಂಡಿದ್ದಂತೆ ನಾನು ಪಾಸಾದೆ, ಎಲ್ಲರಿಗಿಂತ ಹೆಚ್ಚು ಗುಣಗಳನ್ನೂ ದೊರಕಿಸಿದ್ದೆ. ಅದೇನು ದೊಡ್ಡ ವಿಷಯವಲ್ಲ.

ಮತ್ತೊಂದು ವಾರ ಉರುಳಿದ ತರುವಾಯ ಸಾಹೇಬರು ನಮ್ಮ ಕವಾಯತು ನಡೆದಲ್ಲಿಗೆ ಬಂದರು.

"ಮೊನ್ನೆ ನಡೆದ ಪರೀಕ್ಷೆಯಲ್ಲಿ ಪಾಸಾದವರೆಲ್ಲಾ ಮುಂದೆ ಬನ್ನಿ," ಎಂದು ಅಪ್ಪಣೆಯಾಯಿತು.

ಪಾಸಾಗಿದ್ದವರು ಮುಂದೆ ಹೋದೆವು. ಇನ್ನು ನಮ್ಮ ಕವಾಯತ್ ಜ್ಞಾನದ ಪರೀಕ್ಷೆಗಾರಂಭ.

ನಮ್ಮನ್ನೆಲ್ಲ ಒಂದು ಕಡೆ ಶಿಸ್ತಿನಿಂದ ನಿಲ್ಲಿಸಲಾಯಿತು.

ಪೋಲೀಸರ ಪಡೆಯೊಂದನ್ನು ಕರೆದು ನಮ್ಮ ಎದುರಿಗೆ ನಿಲ್ಲಿಸಲಾಯಿತು.

ಒಬ್ಬೊಬ್ಬ 'ರಿಕ್ರೂಟ'ನನ್ನೇ ಮುಂದೆ ಕರೆದು ಅವನ ಕವಾಯತ್ ಜ್ಞಾನವನ್ನು ಪರೀಕ್ಷಿಸತೊಡಗಿದರು ಸಾಹೇಬರು. ಪೋಲೀಸರ ಪಡೆಯಲ್ಲಿನ ಒಬ್ಬ ಪೋಲೀಸನನ್ನು ಕರೆದು ಅವನು ಒಂದು ಸ್ಥಳದಲ್ಲಿ ನಿಂತುಕೊಳ್ಳುವಂತೆ ಆಜ್ಞೆ ಕೊಡಬೇಕೆಂದು ಹೇಳಿದರು.' ಅದನ್ನು ಕೇಳಿ ನಾವೆಲ್ಲರೂ ಭೀತರಾದೆವು, ಆ ಆಜ್ಞೆಯನ್ನು ಕೊಡುವ ಬಗೆ ನಮಗಾರಿಗೂ ತಿಳಿದಿರಲಿಲ್ಲ.

'ರಿಕ್ರೂಟ'ರೆಲ್ಲ ಮುಂದೆ ಹೋಗಿ ಆಜ್ಞೆ ಕೊಡಲಾರದೆ ತೆಪ್ಪಗೆ ನಿಂತು ಕೊಂಡರು. ಕೊನೆಗೆ ನನ್ನ ಸರದಿ ಬಂತು. ನನ್ನನ್ನು ಸಾಹೇಬರ ಹತ್ತಿರ, 'ಮಾರ್ಚ್' ಮಾಡಿಸುತ್ತ ಕರೆದೊಯ್ಯಲು ಫೌಜದಾರರು ಬಂದು, ಎಲ್ಲ ರಿಕ್ರೂಟರಿಗೂ ಹೇಳಿದುದನ್ನೇ ನನಗೂ ಹೇಳಿ, ಸಾಹೇಬರು ನನಗೂ ಅದೇ ಆಜ್ಞೆಯಿಯಾಯಲು ತಿಳಿಸಿದಲ್ಲಿ ನಾನು ಹೇಳಬೇಕಾಗಿದ್ದುದನ್ನೂ ಮೆಲ್ಲಗಿನ ಧ್ವನಿಯಲ್ಲಿ ತಿಳಿಸಿಕೊಟ್ಟರು. ಪಾರಾದೆನಪ್ಪಾ! ಎಂದುಕೊಳ್ಳುತ್ತಾ ನಾನು 'ಮಾರ್ಚ್' ಮಾಡುತ್ತ ಮುಂದೆ ಹೋದೆ. ಅದೇ ಪ್ರಶ್ನೆಯೆ ಬಂತು. ಫೌಜದಾರರು ಹೇಳಿಕೊಟ್ಟಂತೆ ನಾನು ಆಜ್ಞೆ ವಿಧಿಸಿದೆ. ಸಾಹೇಬರಿಗೆ ಬೇಕಾಗಿದ್ದ ಉತ್ತರ ಸಿಕ್ಕಿತು. ಅದುವರೆಗೆ ಅಸಮಾಧಾನದಿಂದ ಗಂಟಿಕ್ಕಿ ಕೊಂಡಿದ್ದ ಅವರ ಮುಖದ ಮೇಲೆ ಆಗ ಸಮಾಧಾನ ಕಾಣಿಸಿಕೊಂಡಿತು. ಕವಾಯತಿನ ಪರೀಕ್ಷೆಯಲ್ಲಿ ನಾನೊಬ್ಬನೆ ಪಾಸಾದೆ. ಉಳಿದವರಿಗೆಲ್ಲ ಮತ್ತೆ ಎರಡು ವಾರಗಳ ಅವಧಿ ಕೊಡಲಾಯಿತು. ಫೌಜದಾರರ ಕೃಪೆಯಿಂದ ನಾನು ಪಾರಾಗಿಬಿಟ್ಟೆ.

ಮರುದಿನವೆ ನನ್ನನ್ನು ಗೊಬ್ಬೂರಿಗೆ ವರ್ಗಮಾಡಿದ ಬಗ್ಗೆ ಆಜ್ಞೆ ಬಂತು.

ಆ ವಾರ್ತೆ ತಿಳಿದಾಗ ಅನೇಕ ರಿಕ್ರೂಟರಿಗೆ ಹೊಟ್ಟೆಯುರಿಯದಿರಲಿಲ್ಲ. ನಾನು ಹೆಡ್‌ಕ್ವಾರ್ಟರಿಗೆ ಬಂದುದಕ್ಕೆ ಇನ್ನೂ ಮೂರು ತಿಂಗಳು ಕೂಡಾ ಕಳೆದಿರಲಿಲ್ಲ. ಮೂರು ತಿಂಗಳುಗಳ ತರುವಾಯ ರಿಕ್ರೂಟರಿಗೆ 'ಆರ್ಮ್ಸ್' ಎಂದರೆ ಬಂದೂಕಿನ ಪಾಠ ಹೇಳಿಕೊಡಲಾಗುತ್ತದೆ. ನನಗಿನ್ನೂ ಆ ಶಿಕ್ಷಣ ಲಭಿಸಿರಲಿಲ್ಲ. ಶಿಕ್ಷಣವೇ ಪೂರ್ಣವಾಗದಿರುವಾಗ ವರ್ಗ ಮಾಡುವುದು ಅನುಚಿತವೆಂದು ಅನೇಕರು ವಾದಿಸಿದುದಲ್ಲದೆ ನನ್ನ ಬಗ್ಗೆ ಡಿ. ಎಸ್. ಪಿ. ಯವರಿಗೆ ಸಹಿಯಿಲ್ಲದ ಅರ್ಜಿಗಳನ್ನು ಕಳಿಸಿದರು. ಅವುಗಳನ್ನು ನೋಡಿ ಸಾಹೇಬರಿಗೆ ಬಹಳ ಕೋಪ ಬಂತು. ನಾನು 'ಅನಾರ್ಮ್ಡ್ ಪೋಲೀಸ'ನಾದುದರಿಂದ ನನಗೆ ಬಂದೂಕನ್ನು ಹಿಡಿಯಲು ತಿಳಿದರೆ ಸಾಕು. ಮೂರು ದಿನಗಳಲ್ಲಿ ಅದನ್ನು ನನಗೆ ತಿಳಿಸಿಕೊಟ್ಟು ನನ್ನನ್ನು ಹೆಡ್‌ಕ್ವಾರ್ಟರಿನಿಂದ ಕಳಿಸಿಕೊಡುವಂತೆ ಸಾಹೇಬರ ಆಜ್ಞೆಯಾಯಿತು. ರಿಕ್ರೂಟರಿಗೆ ಪುನಃ ಅಸೂಯೆಗಾರಂಭವಾಯಿತು. ನಾನು ಅಷ್ಟು ಬೇಗ ಹೆಡ್‌ಕ್ವಾರ್ಟರನ್ನು ಬಿಟ್ಟು ಹೊರಡುವುದು ನಮ್ಮ ಫೌಜದಾರರಿಗೂ ಇಷ್ಟವಿರಲಿಲ್ಲ. ನನ್ನನ್ನು ಅಲ್ಲಿಯೆ ಉಳಿಸಿಕೊಳ್ಳಲು ಅವರೂ ಯತ್ನಿಸಿದರಾದರೂ ಯಶ ಲಭಿಸಲಿಲ್ಲ. ಸಂಬಳ ಬಂದೊಡನೆಯೆ ನಾನು ಅಲ್ಲಿಂದ ಹೊರಟು ಬಿಡಬೇಕಾಯಿತು. ನಮ್ಮ ಫೌಜದಾರರು, ಕಮಾಂಡರರು ಎಲ್ಲರಿಗೂ ದುಃಖ. ನನಗೂ ಕತ್ತು ಬಿಗಿದುಬಂದಿತ್ತು.

ನಗರಕ್ಕೆ ಬಂದು, ಚೆನ್ನಪ್ಪನ ಮನೆಯಲ್ಲಿ ಆ ರಾತ್ರಿಯನ್ನು ಕಳೆದು, ಬೆಳಗಿನ ಬಸ್ಸು ಹತ್ತಿ ಗೊಬ್ಬೂರಿಗೆ ಸಾಗಿದೆ.

ಗೊಬ್ಬರಿನಲ್ಲಿ

೯

ಖಟ್ಲೆಗಳ ಬೇಟೆ!

ಗೊಬ್ಬೂರು, ಓರೆಕೋರೆಗಿಂತ ದೊಡ್ಡ ನಗರವೆಂದು ಮೊದಲೇ ಹೇಳಿದ್ದೇನೆ. ಜಿಲ್ಲೆಯಲ್ಲೆಲ್ಲ ದೊಡ್ಡ ನಗರವಾದುದರಿಂದ ಅಲ್ಲಿಯ ಪೋಲೀಸ್ ಪಡೆಯ ಮೇಲೆ ಬುದ್ಧಿವಂತನೂ ಕರ್ತವ್ಯದಕ್ಷನೂ ಆದ ಅಧಿಕಾರಿಯನ್ನೇ ಫೌಜದಾರನನ್ನಾಗಿ ನಿಯಮಿಸುತ್ತಿದ್ದುದಿತ್ತು. ನಾನು ಅಲ್ಲಿಗೆ ವರ್ಗವಾಗಿ ಬಂದಾಗ ಇದ್ದ ಫೌಜದಾರರಂತೂ ಪ್ರಾಂತಕ್ಕೆಲ್ಲ ಪ್ರಸಿದ್ಧರಾಗಿದ್ದವರು. ಪೋಲೀಸ್ ಖಾತೆಯಲ್ಲಿ ಮಾತ್ರವಲ್ಲ, ಸಾರ್ವಜನಿಕರಲ್ಲೂ ಅವರ ವಿಷಯವಾಗಿ ಗೌರವದ ಭಾವನೆಯಿದ್ದುದನ್ನು ನಾನಾಗಲೆ ಕೇಳಿ ತಿಳಿದಿದ್ದೆ. ಜಾತಿಯಿಂದ ಮಹಮ್ಮದೀಯರಾಗಿದ್ದರೂ ಎಲ್ಲಾ ಜಾತಿಮತಗಳ ಜನರಿಗೂ ಪ್ರಿಯರಾಗಿದ್ದರು. ಮಹಮ್ಮದ್‌ಖಾನ್ ಎಂದು ಅವರ ಹೆಸರು. ಪೋಲೀಸರೆಲ್ಲ 'ರಾವ್ ಸಾಹೇಬ್' ಎಂದು ಅವರನ್ನು ಸಂಬೋಧಿಸುತ್ತಿದ್ದರೆ, ಸಾರ್ವಜನಿಕರು 'ಖಾನ್ ಸಾಹೇಬ್' ಎಂದು ಕರೆಯುತ್ತಿದ್ದರು.

ಮಹಮ್ಮದ್‌ಖಾನರಿಗಾಗ ಸುಮಾರು ನಲವತ್ತು ವರ್ಷ ವಯಸ್ಸು. ಮಧ್ಯಮ ತರಗತಿಯ ನಿಲುವು. ಕೊಂಚ ಚಪ್ಪಟೆಯಾಗಿದ್ದ ಮೂಗು. ಅವರ ಸ್ವಭಾವದ ಸರಳತನವನ್ನು ಸೂಚಿಸುವಂತಿದ್ದ ರೇಖಾಬದ್ಧ ತುಟಿಗಳ ಮೇಲೆ

ಯಾವಾಗಲೂ ಮಂದಹಾಸ ಮಿನುಗುತ್ತಿತ್ತು. ಪೋಲೀಸ್ ಸಿಪಾಯಿಗಳನ್ನೆಲ್ಲ ಅವರು ಪಿತೃಸದೃಶ ವಾತ್ಸಲ್ಯದಿಂದ ನೋಡಿಕೊಳ್ಳುತ್ತಿದ್ದರು. ಗೊಬ್ಬೂರಿಗೆ ಬಂದ ಮೊದಲಬಾರಿ ಅವರನ್ನು ಭೆಟ್ಟಿಯಾದಾಗಲೆ ಅವರ ವಾತ್ಸಲ್ಯಭಾವದ ಅನುಭವ ನನಗೆ ಬಂತು.

"ನೀನಿನ್ನೂ ಕಾಲೇಜ್ ವಿದ್ಯಾರ್ಥಿಯಂತೆ ಕಾಣುತ್ತೀಯಲ್ಲ! ವಿದ್ಯಾಭ್ಯಾಸವನ್ನೇಕೆ ಬಿಟ್ಟೆ?" ಎಂದು ಕೇಳಿದರು ಫೌಜದಾರರು. ನಾನು ಎಲ್ಲವನ್ನೂ ವಿವರಿಸಿ ಹೇಳುತ್ತಲೂ ಅವರು ಅನುಕಂಪ ವ್ಯಕ್ತಗೊಳಿಸಿ,

"ಸರಿ. ಸರಿ. ಎಲ್ಲರಿಗೂ ಅದೇ ತೊಂದರೆ. ಆಯಿತಲ್ಲ – ಈ ಖಾತೆಯಲ್ಲಿ ಕಲಿತವರು ಹೆಚ್ಚು ಜನರಿಲ್ಲ. ನಿಮ್ಮಂಥವರು ಇತ್ತಿತ್ತಲಾಗಿ ಸೇರಿಕೊಳ್ಳುತ್ತಿದ್ದೀರಿ. ನಿಮ್ಮಿಂದ ಖಾತೆಗೆ ಚಲೋ ಹೆಸರು ಬರಬೇಕು. ಲಗ್ನವಾಗಿದೆಯೋ?"

"ಇಲ್ಲ ರಾವ್‌ಸಾಹೇಬ್."

"ಹೋಗಲಿ ಬಿಡು. ಅದಕ್ಕೇನಂತೆ ಅವಸರ! ಮಾಡಿಬಿಡೋಣ ಇಲ್ಲಿಯೆ. ನಿನಗಾಗಿ ಒಂದು ಕನ್ಯೆಯನ್ನು ಹುಡುಕುವದೂ ನನ್ನದೊಂದು ಕೆಲಸವಾಯಿತು. ಈ ಊರಲ್ಲಿ ನಿಮ್ಮ ಜನ ಬೇಕಾದಷ್ಟು ಇದ್ದಾರೆ. ಅವರಿಗೆಲ್ಲಾ ಹೇಳಿಬಿಡುತ್ತೇನೆ."

ನಾನು ಆಶ್ಚರ್ಯದಿಂದ ಮೂಕನಂತೆ ನಿಂತುಕೊಂಡಿದ್ದೆ. ಅವರು ನಿಜವಾಗಿಯೂ ಅದ್ಭುತ ವ್ಯಕ್ತಿಯಾಗಿದ್ದರು.

ಪೋಲೀಸ್ ಸಿಪಾಯಿಗಳನ್ನು ಬೇರೆ ಬೇರೆ ಭಾಗಗಳಲ್ಲಿ 'ಡ್ಯೂಟಿ'ಗೆ ನಿಯಮಿಸಲು 'ಕಂಪನಿ ಆರ್ಡರ್ಲಿ' ಎಂಬ ಅಧಿಕಾರಿಯಿರುತ್ತಾನೆ. ಫೌಜದಾರರು ಅವನನ್ನು ಕರೆದು ನನಗೆ 'ಡ್ಯೂಟಿ' ಕೊಡುವಂತೆ ಹೇಳಿದರು. ಒಂದು ಚೌಕದಲ್ಲಿನ 'ಟ್ರಾಫಿಕ್ ಕಂಟ್ರೋಲ್ ಡ್ಯೂಟಿ' ನನ್ನ ಪಾಲಿಗೆ ಬಂತು.

ಗೊಬ್ಬೂರಿನ 'ಪೋಲೀಸ್ ಲೈನ್ಸ್'ನಲ್ಲಿ ನನಗೊಂದು ಕೋಣೆಯೂ ದೊರೆಯಿತು. ಅದೊಂದು ಪುಟ್ಟ ಹೆಡ್‌ಕ್ವಾರ್ಟರ್ಸ್ ಎನ್ನಬಹುದು. ಅಲ್ಲಿನಷ್ಟು ಮನೆಗಳಾಗಲಿ ಪೋಲೀಸರಾಗಲಿ ಇಲ್ಲಿ ಇರಲಿಲ್ಲ. ಅಲ್ಲಿಯ ಸ್ವಾರಸ್ಯವೂ ಇಲ್ಲಿರಲಿಲ್ಲ. 'ಪೋಲಿಸ್ ಲೈನ್ಸ್'ನ ಮುಂಭಾಗದಲ್ಲಿಯೆ ಫೌಜದಾರರ ಬಂಗಲೆಯೂ ಇತ್ತು.

ಫೌಜದಾರರು ಒಳ್ಳೆಯವರಾಗಿದ್ದರೂ ನಮ್ಮನ್ನು 'ಡ್ಯೂಟಿಗೆ' ಹಾಕುವ

'ಕಂಪನಿ ಆರ್ಡರ್ಲಿ' ಮಾತ್ರ ಭಯಂಕರ ಆಸಾಮಿಯಾಗಿದ್ದ. ಹೊಸದಾಗಿ ಬಂದ ನಮ್ಮಂಥ ಯುವಕರನ್ನಂತೂ ಅವನು ಬಹಳವಾಗಿ ಪೀಡಿಸುತ್ತಿದ್ದ. ಅವನನ್ನು ಕಂಡರೆ ಪ್ರತ್ಯಕ್ಷ ಯಮನನ್ನು ಕಂಡಂತೆಯೇ ಆಗುತ್ತಿತ್ತು. ಪ್ರತಿದಿನ ಆರುಗಂಟೆಗೆಲ್ಲ ನಾವು ಏಳಬೇಕು. ಪ್ರಾತರ್ವಿಧಿಗಳನ್ನು ಮುಗಿಸಿ, ಸಮವಸ್ತ್ರ ಧರಿಸಿ ಏಳು ಗಂಟೆಗೆ ಫೌಜದಾರರ ಮನೆಯ ಮುಂದೆ ಉಪಸ್ಥಿತರಿರಬೇಕು. ಅವರು ಹೊರಗಡೆ ಬಂದು ನಮ್ಮ ಸಮವಸ್ತ್ರಗಳು ಸಮರ್ಪಕವಾಗಿವೆಯೊ ಇಲ್ಲವೊ ಎಂದು ಪರೀಕ್ಷಿಸಿ ಏಳೂಮುಕ್ಕಾಲುಗಂಟೆಗೆ 'ಡ್ಯೂಟಿ'ಗೆ ಬಿಡುತ್ತಿದ್ದರು. ಎಂಟು ಗಂಟೆಯ ವೇಳೆಗೆ ನಮ್ಮ ನಮ್ಮ 'ಡ್ಯೂಟಿ'ಯ ಸ್ಥಳಗಳಲ್ಲಿ ನಾವು ಉಪಸ್ಥಿತರಾಗಬೇಕಾಗುತ್ತಿತ್ತು.

ಎಂಟು ಗಂಟೆಯಿಂದ ಹನ್ನೆರಡರವರೆಗೆ ನಾನು ಚೌಕದ ನಡುವೆ ನಿಂತು ವಾಹನಾದಿಗಳಿಗೆ ದಾರಿ ತೋರಿಸುವ 'ಡ್ಯೂಟಿ'ಯಲ್ಲಿ ನಿರತನಾಗಿರಬೇಕಾಗುತ್ತಿತ್ತು. ನನ್ನ ಪಾಲಿಗೆ ಬಂದುದು – ಆ ನಗರದಲ್ಲೆಲ್ಲ ವಾಹನಗಳ ಓಡಾಟ ಹೆಚ್ಚಾಗಿದ್ದ ಸ್ಥಳ. ಡಾಂಬರು ರಸ್ತೆಯ ಮೇಲೆ ನಿಂತು, ಸುಡುಸುಡುವ ಬಿಸಿಲಲ್ಲಿ ನಾಲ್ಕು ಗಂಟೆಗಳವರೆಗೆ ಕೆಲಸ ಮಾಡಬೇಕಾದರೆ ಸಾಕಪ್ಪಾ ಸಾಕು ಎನ್ನಿಸುತ್ತಿತ್ತು. ಬಿಸಿಲಿನ ಪ್ರತಾಪದಿಂದಾಗಿ ಒಂದು ವಾರದಲ್ಲಿ, ಸಮವಸ್ತ್ರದ ಹೊರಗಿನ ನನ್ನ ದೇಹ ಕಪ್ಪಾಗಿ ಒಳಗಿನ ಭಾಗ ಮಾತ್ರ ಕೆಂಪಾಯಿತು. ಮನೆಗೆ ಹೋಗಿ ಸ್ನಾನಕ್ಕೆ ನಿಂತುಕೊಂಡಾಗ ಕಾಮನ ಹಬ್ಬದ ಹುಲಿಯಂತೆ ಕಾಣುತ್ತಿದ್ದ ನನ್ನ ದೇಹವನ್ನು ನೋಡಿ ನಾನೇ ನಗುವಂತಾಗುತ್ತಿತ್ತು.

ಹನ್ನೆರಡು ಗಂಟೆಗೆ ಕೆಲಸ ಮುಗಿಸಿ ಪೋಲೀಸ್ ಸ್ಟೇಶನ್ನಿಗೆ ಹೋಗಿ ಕೆಲಸದ ವರದಿ ಒಪ್ಪಿಸಬೇಕಾಗುತ್ತಿತ್ತು. ವರದಿಯನ್ನು ಬರೆಯುವುದಕ್ಕೆಂದು ಪ್ರತಿಯೊಬ್ಬರಿಗೂ ಒಂದು ಟಿಪ್ಪಣಿ ಪುಸ್ತಕ ಕೊಡಲಾಗಿತ್ತು. ಅದರಲ್ಲಿ ನಾವು ಮಾಡಿದ ಕೆಲಸದ ವರದಿ ಬರೆದು ಅದಕ್ಕೆ ಮೇಲಧಿಕಾರಿಗಳಿಂದ ಸಹಿ ಹಾಕಿಸಿಕೊಂಡು ಮನೆಗೆ ಬರಬೇಕಾದರೆ ಒಂದು ಗಂಟೆಯಾಗುತ್ತಿತ್ತು. ಸ್ನಾನ ಮುಗಿಸಿಕೊಂಡು ಭೋಜನಾಲಯಕ್ಕೆ ಹೋಗಿ ಊಟ ತೀರಿಸಿಕೊಂಡು ಬರಲು ಮತ್ತೊಂದು ತಾಸು. ಎರಡು ಗಂಟೆಗೆ ಮನೆಗೆ ಬಂದು ಒಂದು ತಾಸು ವಿರಮಿಸಿಕೊಂಡ ತರುವಾಯ ಮತ್ತೆ ಕೆಲಸಕ್ಕೆ ಹೊರಡುವ ಸಿದ್ಧತೆಗಾರಂಭ. ಮೂರೂವರೆ ಗಂಟೆಗೆ ಪುನಃ ಫೌಜದಾರರ ಮನೆಯ ಎದುರಿಗೆ ಹೋಗಿ ಅವರು 'ಚೆಕ್'

ಮಾಡಿದ ಬಳಿಕ ನಾಲ್ಕು ಗಂಟೆಗೆ ಕೆಲಸದ ಸ್ಥಳದಲ್ಲಿ ಉಪಸ್ಥಿತರಾಗುವುದು ಅನಂತರ ರಾತ್ರಿ ಎಂಟರವರೆಗೆ ಕೆಲಸ. ಅದನ್ನು ಮುಗಿಸಿಕೊಂಡು ಕಚೇರಿಗೆ ಹೋಗಿ, ವರದಿಯನ್ನೊಪ್ಪಿಸಿ, ಭೋಜನಾಲಯಕ್ಕೆ ಬಂದು ಊಟ ತೀರಿಸಿ ಕೊಂಡು ಮನೆಗೆ ಬಂದು ಮಲಗಿಕೊಳ್ಳಬೇಕಾದರೆ ಒಂಭತ್ತು – ಒಂಭತ್ತೂವರೆ ಗಂಟೆಯಾಗಿರುತ್ತಿತ್ತು. ಹಾಸುಗೆಯ ಮೇಲೆ ಬಿದ್ದುಕೊಂಡ ತಕ್ಷಣ ಗಾಢವಾದ ನಿದ್ರೆ ಕವಿಯುತ್ತಿತ್ತು.

ಹೀಗೇ ಸುಮಾರು ಒಂದು ತಿಂಗಳು ಕೆಲಸ ಮಾಡುವಷ್ಟರಲ್ಲಿ ಬಿಸಿಲಿನ ತಾಪದಿಂದ ನಾನು ಕಂಗೆಟ್ಟು ನೌಕರಿಯನ್ನೇ ಬಿಟ್ಟು ಹೋಗುವಷ್ಟು ಬೇಸರ ಪಟ್ಟುಕೊಂಡೆ. ಆದರೆ ಹಾಗೆಲ್ಲ ನೌಕರಿ ಬಿಡುವಂತೆಯೂ ಇರಲಿಲ್ಲ. ಬಿಟ್ಟರೆ ಮುಂದೇನು? ಎಂಬ ಪ್ರಶ್ನೆ ತಲೆಯೆತ್ತಿದೊಡನೆಯೆ ನಾನು ಸುಮ್ಮನಾಗುತ್ತಿದ್ದೆ.

ಒಂದು ದಿನ ಸುಮಾರು ಹನ್ನೆರಡು ಗಂಟೆಯ ಸಮಯಕ್ಕೆ ನಾನು ನನ್ನ ಕೆಲಸದ ಸ್ಥಳದಿಂದ ಹೊರಡುತ್ತಿದ್ದ ಹಾಗೇ ಅಕಸ್ಮಾತ್ತಾಗಿ ನಮ್ಮ ಫೌಜದಾರರ ಸವಾರಿ ಆಗಮಿಸಿತು. ಕೆಲಸದ ಸ್ಥಳವನ್ನು ತ್ಯಜಿಸಿ "ಗುಮಜಿ"ಗೆ (ಪೋಲೀಸರು ಕೂಡುವುದಕ್ಕೆಂದು ರಸ್ತೆಯ ಪಕ್ಕದಲ್ಲಿರುವ ಕೋಣೆಯಂಥ ಕಟ್ಟೆಗೆಯ ಪೆಟ್ಟಗೆ) ಬರುತ್ತಿದ್ದ ನನ್ನನ್ನು ಕಂಡು ಫೌಜದಾರರು ತಮ್ಮ ಕೈಗಡಿಯಾರ ನೋಡಿ ಕೊಂಡು ಹನ್ನೆರಡಕ್ಕಿಂತ ಮೊದಲೇ ನಾನು ಕೆಲಸ ಬಿಟ್ಟು ಹೊರಟೆನೆಂದು ತಿಳಿದು ಕೊಂಚ ಕುಪಿತರಾಗಿ ಸೈಕಲಿನಿಂದಿಳಿದರು. ಇನ್ನೊಂದು ಸೈಕಲಿನ ಮೇಲೆ ಅವರನ್ನು ಹಿಂಬಾಲಿಸಿ ಹೊರಟಿದ್ದ 'ಕಂಪನಿ ಆರ್ಡರ್ಲಿ'ಯೂ ಇಳಿದು ಬಂದ.

ನಾನು 'ಸಲಾಂ' ಹೊಡೆದು ಸೆಟೆದು ನಿಂತುಕೊಂಡೆ.

"ನೋಟ್ ಬುಕ್ ತಾ;" ಎಂದರು ಫೌಜದಾರರು. ಮತ್ತೇನು ಬಂದಿತೋ ಎಂದು ಚಿಂತಿಸುತ್ತಾ ನಾನು ಟಿಪ್ಪಣಿ ಪುಸ್ತಕ ಅವರ ಕೈಗಿತ್ತೆ. ಹನ್ನೆರಡು ಗಂಟೆಯಾಗುವುದಕ್ಕೆ ಮೊದಲೇ ನಾನು ನನ್ನ ಸ್ಥಳ ಬಿಟ್ಟು ಹೊರಡು ತ್ತಿದ್ದುದಾಗಿ ಫೌಜದಾರರು ಅದರಲ್ಲಿ ಬರೆದರು. ಸುಮ್ಮನಿದ್ದರೆ ತೊಂದರೆ ತಪ್ಪದೆಂದು ತಿಳಿದು, ಇಲ್ಲಿಯೇ ಇದ್ದ ಬೀಡಿ ಅಂಗಡಿಯ ಗಡಿಯಾರದಲ್ಲಿ ಹನ್ನೆರಡು ಗಂಟೆಯಾಗಿದೆಯೆಂದು ನಾನು ಹೇಳಿದೆ. "ಪ್ರತ್ಯುತ್ತರ ಬೇಡ,"

ಎಂದು ಗದರಿಸಿದುದಲ್ಲದೆ ನಾನು ' ಡಿ. ಪಿ. ಆ್ಯಕ್ಟ್,' ನಂತೆ ಇದುವರೆಗೂ ಒಂದೂ ಖಟ್ಲೆ ಹಾಕಿಲ್ಲವೆಂದೂ ನನ್ನ ಪುಸ್ತಕದಲ್ಲಿ ಷರಾ ಬರೆದುಬಿಟ್ಟರು.

ಬಾಲದಂತೆ ಅವರ ಬೆನ್ನು ಹಿಡಿದು ಹೊರಟಿದ್ದ ' ಕಂಪನಿ ಆರ್ಡರ್ಲಿ ' ಸುಮ್ಮನಿರಲಿಲ್ಲ. " ಕಲಿತವರೆಂಬ ಜಂಬ ಈ ಹುಡುಗರಿಗೆ. ಫೌಜದಾರರಿಗೆ ವಾದಿಸುತ್ತಾರೆ," ಎಂದು ಟೀಕಿಸುತ್ತಾ ನನ್ನನ್ನು ಹರಿದು ತಿನ್ನುವ ಹಾಗೆ ದಿಟ್ಟಿಸಿ ನೋಡಿದ. ಫೌಜದಾರರು ಮತ್ತೊಂದು ಮಾತನಾಡದೆ ಸೈಕಲ್ ಏರಿ ಹೊರಟುಬಿಟ್ಟರು.

೧೦

ಲಂಚದ ರೂಪಾಯಿ!

'ಟ್ರಾಫಿಕ್ ಡ್ಯೂಟಿ'ಯ ಪೋಲೀಸರೆಲ್ಲರೂ ಕಚೇರಿಯಲ್ಲಿ ಒಟ್ಟು ಗೂಡಿದೆವು. 'ಕಂಪನಿ ಆರ್ಡರ್ಲಿ' ಅಷ್ಟರೊಳಗಾಗಿ ಕಚೇರಿಗೆ ಬಂದು ನನ್ನ ವಿಚಾರವಾಗಿ ಬಾಯಿಗೆ ಬಂದಂತೆ ಮಾತನಾಡಿದ್ದ. ನನಗೆ ಶಿಕ್ಷೆಯಾಗುವುದು ಖಂಡಿತವೆಂದೇ ಎಲ್ಲ ಪೋಲೀಸರೂ ಅಭಿಪ್ರಾಯಪಡುತ್ತಿದ್ದರು. ಆಗುವುದೆಲ್ಲಾ ಆಗಲಿ, ಎಂದುಕೊಂಡು ನಾನೂ ಸಿದ್ಧನಾಗಿದ್ದೆ.

ಪೋಲೀಸರೆಲ್ಲರೂ ಸರದಿಯ ಪ್ರಕಾರ ವರದಿಯೊಪ್ಪಿಸುವುದಕ್ಕಾರಂಭ ವಾಯಿತು. ನನ್ನ ಸರದಿ ಬರುತ್ತಲೂ ಫೌಜದಾರರ ಮುಂದೆ ಹೋಗಿ 'ಸಲಾಂ' ಹೊಡೆದು, ಟಿಪ್ಪಣಿಯ ಪುಸ್ತಕವನ್ನು ಮೇಜಿನ ಮೇಲಿಟ್ಟು, ಸೆಟೆದು ನಿಂತು ಕೊಂಡೆ.

ಫೌಜದಾರರು ನನ್ನನ್ನು ತೀಕ್ಷ್ಣದೃಷ್ಟಿಯಿಂದ ನಿಟ್ಟಿಸಿ ನೋಡುತ್ತಾ,

"ವೇಳೆ ಮುಗಿಯುವುದಕ್ಕೆ ಮೊದಲೇ ನೀನು ನಿನ್ನ ಸ್ಥಳ ಬಿಟ್ಟು ಹೊರಟಿದ್ದಿಯಲ್ಲ. ನಿನ್ನ ಸ್ಪಷ್ಟೀಕರಣವೇನು ?" ಎಂದು ಪ್ರಶ್ನಿಸಿದರು.

ನಾನು ಕೊಂಚವೂ ಅಧೈರ್ಯಪಟ್ಟುಕೊಳ್ಳದೆ ದಿಟ್ಟತನದಿಂದಲೇ ಹೇಳಿದೆ:

"ಕೆಲಸ ತಪ್ಪಿಸಬೇಕು ಅಂತ ನಾನೇನೂ ಹಾಗೆ ಮಾಡಲಿಲ್ಲ ರಾವ್ ಸಾಹೇಬರೆ. ನನ್ನ ಹತ್ತಿರ ವಾಚ್ ಅಂತೂ ಇಲ್ಲ. ಆ ಬೀಡಿ ಅಂಗಡಿಯ ಗಡಿಯಾರ ನಂಬಿಕೊಂಡೇ ನಾನು ಕೆಲಸ ಮಾಡಬೇಕಾಗುತ್ತದೆ. ಅದರಲ್ಲಿ ವೇಳೆ ಸ್ವಲ್ಪ ಹೆಚ್ಚು ಕಡಿಮೆಯಾಗುವುದೂ ಸಹಜ."

"ಇದೆಲ್ಲಾ ಬರಿಯ ನೆಪ. ನೀನು ದಿನಾಲೂ ಹೀಗೇ ಮಾಡುತ್ತಿರಬೇಕು."

ಆ ಆರೋಪಕ್ಕೆ ಉತ್ತರವೀಯುವುದು ಸಾಧ್ಯವಿರಲಿಲ್ಲ. ನಾನು ಸುಮ್ಮನೆ ನಿಂತುಕೊಂಡಿದ್ದೆ.

ಫೌಜದಾರರೇ ಮತ್ತೆ ಕೇಳಿದರು :

"ಅದು ಹೋಗಲಿ. ನಿನ್ನಿಂದ ಖಟ್ಲೆ ಹಾಕುವ ಕೆಲಸವೂ ಆಗುವದಿಲ್ಲವಲ್ಲ ?"

"ಆ ಚೌಕದೊಳಗೆ ಟ್ರಾಫಿಕ್ ಗದ್ದಲ ಬಹಳ ಅನ್ನುವದು ನಿಮಗೂ ಗೊತ್ತು ರಾವ್‌ಸಾಹೇಬರೆ. ನಾನು ಟ್ರಾಫಿಕ್ ಕಂಟ್ರೋಲ್ ಯಾವಾಗ ಮಾಡಲಿ ? ಖಟ್ಲೆ ಯಾವಾಗ ಹಾಕಲಿ ?"

"ಬೇರೆ ಪೋಲೀಸರೆಲ್ಲಾ ಹಾಕುವದಿಲ್ಲೇನು ಖಟ್ಲೆ ? ನೀನೊಬ್ಬನೇ ಹೀಗಂದರೆ ಹ್ಯಾಗೆ ? ಖಟ್ಲೆ ಹಾಕದವನು ಪೋಲೀಸನಾಗಲು ನಾಲಾಯಖ್. ಮುಂದಿನ ವಾರದೊಳಗಾಗಿ ನೀನು ಹತ್ತು ಖಟ್ಲೆಗಳನ್ನಾದರೂ ಹಾಕಲಿಕ್ಕೇಬೇಕು."

ಇನ್ನು ಅವರೊಡನೆ ವಾದ ಬೆಳಸುವುದರಲ್ಲಿ ಅರ್ಥವಿರಲಿಲ್ಲ.

"ಆಗಲಿ ಸಾಹೇಬರೆ, ಇನ್ನು ಹಾಗೇ ಮಾಡುತೇನೆ," ಎಂದು ಹೇಳಿ ಹೊರಟುಬಿಟ್ಟೆ.

ಈ ಖಟ್ಲೆಗಳ ವಿಚಾರವೂ ಬಲು ಸ್ವಾರಸ್ಯಕರವಾದುದು. ಖಟ್ಲೆ ಹಾಕಲಾರದವನು ಪೋಲೀಸನಾಗಲು ಅನರ್ಹನೆಂದು ಫೌಜದಾರರು ಹೇಳಿದುದರಲ್ಲಿ ಅಸಹಜತೆಯೇನೂ ಇರಲಿಲ್ಲ. ಒಂದು ಪೋಲೀಸ್ ಠಾಣೆಯಿಂದ ಹೆಚ್ಚು ಹೆಚ್ಚು ಖಟ್ಲೆಗಳು ನಡೆದ ಹಾಗೆ ಅದರ ಕೀರ್ತಿಯೂ ಹೆಚ್ಚುತ್ತದೆ. ಪೋಲೀಸರಿಗೂ ಹೆಸರು, ಫೌಜದಾರರಿಗೂ ಹೆಸರು.

ಇನ್ನು ಈ ಖಟ್ಲೆಗಳ ಸ್ವರೂಪವಾದರೂ ಎಂಥದು ? ಸರ್ವಸಾಮಾನ್ಯವಾಗಿ

ಇವೆಲ್ಲಾ ಚಿಲ್ಲರೆ ಪ್ರಕರಣಗಳು. ವಾಹನಾದಿಗಳು ರಸ್ತೆಯ ಎಡಭಾಗದಿಂದ ಹೋಗಬೇಕೆಂಬ ನಿಯಮುವನ್ನುಲ್ಲಂಘಿಸುವವರನ್ನೂ, ದೀಪವಿಲ್ಲದೆ ಬೈಸಿಕಲ್ಲು-ಟಾಂಗಾ ಮೊದಲಾದುವುಗಳನ್ನೋಡಿಸುವವರನ್ನೂ ಹಿಡಿದು ಮೊಕದ್ದಮೆ ಹೂಡುವುದು. ಈ ಆರೋಪಗಳನ್ನು ನ್ಯಾಯಾಲಯದಲ್ಲಿ ಸಿದ್ಧಗೊಳಿಸಲು ಸಾಕ್ಷಿಗಳೂ ಅವಶ್ಯವಷ್ಟೆ. ಪೋಲೀಸ್ ಕಚೇರಿ, ನ್ಯಾಯಾಲಯಗಳಿಗೆ ಅಲೆದಾಡಲು ಸಿದ್ಧರಾಗುವ ಜನರೂ ಕಡಮೆಯೆ. ಅಂತೆಯೆ, ಪೋಲೀಸರು ಇಂಥ ಮೊಕದ್ದಮೆಗಳಿಗಾಗಿ ಕೆಲವರು "ಕಾಯಂ ಸಾಕ್ಷಿದಾರ"ರನ್ನು ಕೈಯಲ್ಲಿಟ್ಟುಕೊಂಡಿರುವುದುಂಟು. ನಮ್ಮ ಚೌಕದಲ್ಲಿನ ಬೀಡಿಯಂಗಡಿಯವನೂ, ಹತ್ತಿರದಲ್ಲಿಯೆ ಇದ್ದ ಚಹದಂಗಡಿಯ ಒಡೆಯನೂ ಇಂಥ ಸಾಕ್ಷಿದಾರರೇ. ಈ ಸ್ಥಳದಲ್ಲಿ ನಿಂತುಕೊಳ್ಳುವ ಪೋಲೀಸರು ಎಷ್ಟೇ ಖಟ್ಲೆ ಮಾಡಿದರೂ ಅವುಗಳಲ್ಲೆಲ್ಲಾ ಈ ಇಬ್ಬರು ಮಹನೀಯರೇ ಸಾಕ್ಷಿದಾರರಾಗಿರುತ್ತಿದ್ದರು. ಅದರಿಂದಾಗಿ ಅವರಿಗೆ ಅಂಥ ತೊಂದರೆಯೂ ಇರಲಿಲ್ಲ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುವ ಪ್ರಸಂಗ ಬರುತ್ತಿದ್ದುದೇ ಅಪರೂಪವಾಗಿ. ಚಿಲ್ಲರೆ ಪ್ರಕರಣಗಳಲ್ಲಿ ಸಿಕ್ಕಿಕೊಂಡ ಆಪಾದಿತರು ತಾವಾಗಿಯೇ ತಮ್ಮ ತಪ್ಪು ಒಪ್ಪಿಕೊಂಡು ನ್ಯಾಯಾಧೀಶರು ವಿಧಿಸಿದ ದಂಡದ ಹಣ ತೆತ್ತು ಹೊರಟು ಹೋಗುತ್ತಿದ್ದರು. 'ಕಾಯಂ ಸಾಕ್ಷಿದಾರ'ರನ್ನು ಕರೆಯಿಸುವ ಪ್ರಸಂಗವೇ ಬರುತ್ತಿರಲಿಲ್ಲ.

"ಖಟ್ಲೆ ಹಾಕಿಬಿಡಿರೀ ಸರದಾರರೆ!" ಎಂದು ಬೀಡಿಯಂಗಡಿಯವನೂ ನನ್ನನ್ನು ಹುರಿದುಂಬಿಸಿದ, ನಾನೂ ಖಟ್ಲೆಯ ಬೇಟೆಗಾರಂಭಿಸಿದೆ.

ಆದರೆ, ನನ್ನ ದುರ್ದೈವವೋ, ಜನರ ಸುದೈವವೋ, ಅಂತೂ ಯಾರೂ ನನ್ನ ಕೈಗೆ ಸಿಕ್ಕಿ ಬೀಳಲಿಲ್ಲ; ಚೌಕದಲ್ಲಿ ಹಾದು ಹೋಗುವಾಗ ಬಹಳ ಎಚ್ಚರಿಕೆ ವಹಿಸಿ, ಯಾವ ನಿಯಮುವನ್ನೂ ಮುರಿಯದೆ ದಾಟ ಹೋಗುತ್ತಿದ್ದರು. ಎಲಾ! ಒಬ್ಬನೂ ಸಿಕ್ಕಲಿಲ್ಲವಲ್ಲಾ! ಎಂದು ನಾನು ಪೇಚಾಡುತ್ತಿದ್ದೆ.

ಹಾಗೆ ಎರಡು ದಿನ ಕಳೆದುವು.

ಇನ್ನು ಐದೇ ಐದು ದಿನಗಳೊಳಗಾಗಿ ನಾನು ಹತ್ತು ಖಟ್ಲೆ ಹಾಕಲೇಬೇಕಾಗಿದ್ದಿತು. ಫೌಜದಾರರಂತೂ ಸ್ಪಷ್ಟವಾಗಿ ಹೇಳಿದ್ದರು. ನಾನು ಆ ಕರ್ತವ್ಯವನ್ನು ನೆರವೇರಿಸದಿದ್ದರೆ ಅವರು ಕಟುಮಾತು ಆಡುವುದು ಖಂಡಿತ. ಶಿಕ್ಷೆ ವಿಧಿಸಿದರೂ ವಿಧಿಸಬಹುದು....

ನಾನು ತಲೆ ಕೆರೆದುಕೊಂಡೆ, ಬುದ್ಧಿಯನ್ನು ಅತ್ತಿತ್ತ ಓಡಿಸಿದೆ. ನಾನು ನಿಂತುಕೊಂಡಲ್ಲೇ ಅಪರಾಧಿಗಳು ಸಿಕ್ಕುವುದು ಕಷ್ಟಸಾಧ್ಯ. ಏನಾದರೂ ಉಪಾಯ ಹೂಡಬೇಕು....

ಚೌಕದ ಸಮೀಪದಲ್ಲಿನ ಮನೆಯೊಂದರಲ್ಲಿದ್ದ ಹೈಸ್ಕೂಲ್ ಉಪಾಧ್ಯಾಯರೊಬ್ಬರು ಸಾಯಂಕಾಲದ ಸಮಯದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರನೇಕರಿಗೆ 'ಟ್ಯೂಶನ್' ಹೇಳುತ್ತಿದ್ದ ಸಂಗತಿ ನನಗೆ ಗೊತ್ತಿದ್ದಿತು. ಆ ವಿದ್ಯಾರ್ಥಿಗಳಲ್ಲಿ ಅನೇಕರು ಬೈಸಿಕಲುಗಳನ್ನೇರಿ ಬರುತ್ತಿದ್ದುದನ್ನೂ ನಾನು ಗಮನಿಸಿದ್ದೆ. 'ಟ್ಯೂಶನ್' ಮುಗಿಸಿಕೊಂಡು ಅವರು ಮನೆಗಳಿಗೆ ಹೊರಡಬೇಕಾದರೆ ರಾತ್ರಿ ಎಂಟು ಗಂಟೆಯಾಗುತ್ತಿತ್ತು. ಸಾಮಾನ್ಯವಾಗಿ ಅವರ ಬೈಸಿಕಲುಗಳ ಮುಂದೆ ದೀಪಗಳಿರುತ್ತಿರಲಿಲ್ಲ. ಚೌಕದಲ್ಲಿ, ನನ್ನೆದುರಿಗೆ ಹಾದುಹೋಗುವಾಗ ಅವರು ಬೈಸಿಕಲುಗಳನ್ನು ಕೈಲಿ ಹಿಡಿದು, ನಡೆದುಕೊಂಡೇ ಹೋಗುತ್ತಿದ್ದರು. ನನ್ನ ದೃಷ್ಟಿಯಿಂದ ಮರೆಯಾಗುತ್ತಲೂ ಅವರು ಬೈಸಿಕಲು ಏರಿ ದೀಪವಿಲ್ಲದೆ ಹೋಗುತ್ತಿರಬಹುದೆಂದು ನನಗೆ ಅನುಮಾನ. ನನ್ನ ಖಟ್ಲೆಯ ಬೇಟೆಗೆ ಈ ಮಿಗಗಳು ಸುಲಭವಾಗಿ ಬೀಳಬಹುದೆಂದು ಭಾವಿಸಿ ಒಂದು ರಾತ್ರಿ ಬೀಡಿಯಂಗಡಿಯವನನ್ನು ಜೊತೆಗೆ ಕರೆದುಕೊಂಡು ನನ್ನ ಸ್ಥಳದಿಂದ ಕೊಂಚ ಅಂತರದಲ್ಲಿ ಇಳಿಜಾರು ಸ್ಥಳದಲ್ಲಿ ಅಡಗಿ ಕುಳಿತುಕೊಂಡೆ.

ಆ ಸನ್ನಿವೇಶವನ್ನು ಕುರಿತು ಯೋಚಿಸುತ್ತಾ, ಮನಸ್ಸಿನಲ್ಲಿಯೇ ನಗುತ್ತಿದ್ದೆ. ಭಾರಿ ಕೊಲೆಗಡುಕರನ್ನು ಹಿಡಿಯಲು ಹೊಂಚುಹಾಕಿದ ಹಾಗೆ ಆ ಕತ್ತಲಲ್ಲಿ ನಾನು ಕುಳಿತಿದ್ದೆ–ದೀಪವಿಲ್ಲದೆ ಬೈಸಿಕಲು ಹೊಡೆಯುವ ಹುಡುಗರನ್ನು ಹಿಡಿಯಲು!

ಐದು ನಿಮಿಷ ಕಳೆಯುವುದರೊಳಗಾಗಿ ಚೌಕದ ಕಡೆಯಿಂದ, ದೀಪವಿಲ್ಲದ ಒಂದು ಬೈಸಿಕಲ್ ವೇಗವಾಗಿ ಬಂದಿತು. ಇಲಿಯನ್ನು ಹಿಡಿಯಲು ಹಾರುವ ಬೆಕ್ಕಿನಂತೆ ನಾನು ಟಣ್ಣನೆ ಜಿಗಿದು ಬೈಸಿಕಲ್ ನಿಲ್ಲಿಸಿದೆ. ಮೊದಲನೆಯ ಖಟ್ಲೆ ಸಿಕ್ಕಿತು! ಕೊನೆಗೂ ಸಿಕ್ಕಿತು! ಎಂದು ಹಿಗ್ಗುತ್ತಾ ಬ್ಯಾಟ್ರಿಯ ಬೆಳಕು ಬಿಟ್ಟು ಸೈಕಲ್ ಸವಾರನ ಮುಖ ನೋಡಿದೆ. ಅವಳೊಬ್ಬಳು ವಿದ್ಯಾರ್ಥಿನಿ!

ಸರಿ – ಪೋಲೀಸರಾದ ನಮಗೆ ಹುಡುಗರು ಹುಡುಗಿಯರು ಎಂದು

ಭೇದಭಾವ ಮಾಡಲು ಅಧಿಕಾರವಿಲ್ಲ. ದೀಪವಿಲ್ಲದೆ ಸೈಕಲ್ ಹತ್ತಿದ್ದುದು ಅಪರಾಧ. ಆ ವಿದ್ಯಾರ್ಥಿನಿಯೂ ಅಪರಾಧಿನಿ.

" ನಿಮ್ಮ ಹೆಸರೇನು ?" ಎಂದು ನಾನು ವಿನಯದಿಂದಲೇ ಕೇಳಿದೆ.

ಅಕಸ್ಮಾತ್ತಾಗಿ ನನ್ನ ಕೈಗೆ ಸಿಕ್ಕಿಬಿದ್ದುದರಿಂದ ಆಕೆಗೆ ತುಂಬಾ ಭಯವಾಗಿತ್ತು. ಅದರೊಡನೆ ಅವಮಾನದ ಭಾವನೆ. ನನ್ನನ್ನು ಬೆದರಿಸಿ ಪಾರಾಗಿ ಹೋಗಬೇಕೆಂದು ಯೋಚಿಸಿದ್ದಳೋ ಏನೊ. ಉದ್ರಿಕ್ತ ಸ್ವರದಲ್ಲಿ,

" ಹೇಳುವದಿಲ್ಲ," ಎಂದಳು.

" ದೀಪವಿಲ್ಲದೆ ಸೈಕಲ್ ಹತ್ತಬಾರದೆಂಬ ಕಾಯದೆಯಿರುವದು ನಿಮಗೆ ಗೊತ್ತಿಲ್ಲವೇನು ?"

" ಗೊತ್ತು. ಎಲ್ಲಾ ಗೊತ್ತು." ಮತ್ತೂ ಒರಟಾಗಿಯೆ ಹೇಳಿದಳವಳು.

ಆ ಒರಟುತನವನ್ನು ಕಂಡು ನನಗೂ ರೇಗಿದಂತಾಯಿತು.

" ಗೊತ್ತಿದ್ದರೂ ಬೇಕೆಂತಲೇ ಅಪರಾಧ ಮಾಡುವದು ಬಹಳ ದೊಡ್ಡ ತಪ್ಪಾಗುವದು. ನಿಮ್ಮ ಹೆಸರೇನು, ಹೇಳುತ್ತೀರೋ ಇಲ್ಲೋ ?"

" ಹೇಳುವದಿಲ್ಲ. ಹೇಳುವದಿಲ್ಲ. ಹೇಳುವದಿಲ್ಲ. ನೀವು ಮಾಡುವದಾದರೂ ಏನು ?"

" ನಿಮ್ಮನ್ನು ಅರೆಸ್ಟ್ ಮಾಡಬೇಕಾಗುತ್ತದೆ."

" ನನ್ನನ್ನು ಅರೆಸ್ಟ್ ಮಾಡಲು ನಿಮ್ಮಪ್ಪ ಬರಬೇಕು ಅಪ್ಪ !" ಅವಳು ಅಣಕ ಬೆರೆತ ಧ್ವನಿಯಲ್ಲಿ ಹೇಳಿದಳು.

" ಒಳ್ಳೆಯ ಮಾತಿನಲ್ಲಿ ಹೆಸರು ಹೇಳಿದಿರೋ ನೆಟ್ಟಗಾಗುತ್ತದೆ. ಇಲ್ಲದಿದ್ದರೆ ಸುಮ್ಮನೆ ಅವಮಾನವಾಗುತ್ತದೆ ನಿಮಗೇ. ನಿಮ್ಮನ್ನು ನಾನು ಕಚೇರಿಗೆ ಕರೆದೊಯ್ಯಬೇಕಾಗುತ್ತದೆ."

ಕಚೇರಿಯ ಮಾತು ಹೊರಡುತ್ತಲೂ ಆ ಹುಡುಗಿ ಹೆದರಿಕೊಂಡಳು.

" ಬರಕೊಳ್ಳಿರಿ ಹಾಗಾದರೆ. ಹಾಳಾಗಿ ಹೋಗಲಿ. ನೀವು ಬರಕೊಂಡು ಮಾಡುವದೂ ಅಷ್ಟರಲ್ಲೇ ಇದೆ," ಎಂದು ಗೊಣಗುಟ್ಟಿ ತನ್ನ ಹೆಸರು ವಿಳಾಸಗಳನ್ನು ತಿಳಿಸಿದಳು.

" ಇನ್ನು ನೀವು ಹೋಗಬಹುದು."

" ಅದನ್ನೇನು ನೀವು ಹೇಳಬೇಕಾಗಿಲ್ಲ," ಎಂದವಳೇ ಅವಳು

ಬೈಸಿಕಲ್ಲನ್ನು ದರದರನೆ ಎಳೆಯುತ್ತಾ ಚಪ್ಪಲಿಗಳನ್ನು ನೆಲದ ಮೇಲೆ ಜೋರಾಗಿ ಅಪ್ಪಳಿಸುತ್ತಾ ಹೊರಟುಹೋದಳು.

ಖಟ್ಲೆಯೊಂದು ಸಿಕ್ಕಿತೆಂದು ನನಗೆ ಕೊಂಚ ಸಂತೋಷ. ಆ ಹುಡುಗಿ ನನ್ನೊಡನೆ ಆಚರಿಸಿದ ಬಗೆಯನ್ನು ನೆನೆದು ವ್ಯಸನ. ಅನಾಹುತಗಳನ್ನು ತಪ್ಪಿಸುವ ಸದುದ್ದೇಶದಿಂದಲೇ ಸರಕಾರ ಹಾಕಿಕೊಟ್ಟ ನಿಯಮಗಳ ಬಗ್ಗೆ ತಿಳಿದಿದ್ದರೂ ಅವುಗಳನ್ನುಲ್ಲಂಘಿಸುವುದು, ಪೋಲೀಸರ ಕೈಗೆ ಸಿಕ್ಕಿಬಿದ್ದಾಗ ತಮ್ಮ ತೂಪ್ಪನ್ನೆಪ್ಪಿಕೊಳ್ಳದೆ ಪೋಲೀಸರನ್ನೇ ಗದರಿಸಿಕೊಳ್ಳುವುದು. ಛೆ. ಛೆ! ಶಾಲೆ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಕೂಡ ಹೀಗೆ ಹೊಣೆಗೇಡಿತನದಿಂದ ವರ್ತಿಸಿದರೆ ದೇಶದ ಗತಿಯೇನು !....

ಹಾಗೆ ಯೋಚಿಸುತ್ತಾ ಮತ್ತೆ ಚೌಕಕ್ಕೆ ಬಂದು ವರದಿಯನ್ನು ಬರೆದು, ಸಾಕ್ಷಿದಾರರ ರುಜು ಹಾಕಿಸಿ ಕಚೇರಿಗೆ ಬಂದು ಫೌಜದಾರರಿಗೆ ಅದನ್ನೊಪ್ಪಿಸಿದೆ.

ನಾನು ಕಚೇರಿಗೆ ಬರುವುದರೊಳಗಾಗಿಯೆ ಆ ಹುಡುಗಿಯ ತಂದೆಯಿಂದ ಒಂದು ಚೀಟಿ ಬಂದಿತ್ತು ಫೌಜದಾರರಿಗೆ. 'ಆನರರಿ ಮ್ಯಾಜಿಸ್ಟ್ರೇಟ'ರೊಬ್ಬರ ಮಗಳಾಗಿದ್ದಳಂತೆ ಆ ಹುಡುಗಿ. ಮನೆಗೆ ಹೋದ ತಕ್ಷಣ ತನ್ನ ತಂದೆಗೆ ದೂರು ಹೇಳಿ ಪೋಲೀಸನೊಬ್ಬ ತನ್ನನ್ನು ಬಂಧಿಸುವುದಾಗಿ ಬೆದರಿಸಿದ್ದುದನ್ನು ಕುರಿತು ಫೌಜದಾರರಿಗೆ ತಕರಾರು ಪತ್ರ ಬರೆಸಿದ್ದಳು.

"ಖಟ್ಲೆ ಹಾಕು ಅಂತ ನಾ ಹೇಳಿದರೆ ನೀನು ಹೆಂಗಸರನ್ನೇ ಹಿಡೀಬೇಕೇನು! ಆ ಮ್ಯಾಜಿಸ್ಟ್ರೇಟರ ಮಗಳನ್ನು ಅರೆಸ್ಟ್ ಮಾಡುವವನಿದ್ದಿಯಾ! ಇಷ್ಟೂ ತಿಳಿಯುವದಿಲ್ಲವಲ್ಲ ನಿನಗೆ!"

"ಮ್ಯಾಜಿಸ್ಟ್ರೇಟರ ಮಗಳಾಗಲಿ, ಕೂಲಿಕಾರನ ಮಗಳಾಗಲಿ ದೀಪವಿಲ್ಲದೆ ಸೈಕಲ್ ಹೊಡೆದರೆ ಹಿಡಿಯಬೇಕಲ್ಲವೇನ್ರೀ ರಾವ್‌ಸಾಹೇಬರೆ?"

"ಅದೇನೋ ಖರೆ. ಆದರೆ ನಾವು ಅಷ್ಟು ನಿಷ್ಠುರರಾಗಲು ಬರುವದಿಲ್ಲಪ್ಪಾ. ಸ್ವಲ್ಪ ಮಂದಿಯನ್ನು ನೋಡಿಕೊಂಡು ಕೆಲಸ ಮಾಡಬೇಕಾಗುತದೆ."

ಪೋಲೀಸ್ ಕಾಯಿದೆಯ ಪ್ರಕಾರ ತಪ್ಪುಮಾಡಿದ ಆಪಾದಿತರನ್ನು ಎಚ್ಚರಿಕೆ ವಿಧಿಸಿ ಬಿಟ್ಟುಬಿಡುವ ಅಧಿಕಾರ ಫೌಜದಾರರಿಗಿರುತ್ತದೆ. ನಮ್ಮ ಫೌಜದಾರರು ಆ ಹುಡುಗಿಗೂ ಎಚ್ಚರಿಕೆ ಕೊಟ್ಟು ಬಿಟ್ಟುಬಿಟ್ಟರು. ನನ್ನನ್ನು

ಮಾತ್ರ ಹಾಗೆ ಬಿಡದೆ, ಆ ಹುಡುಗಿಯೊಡನೆ ಉದ್ಧಟತನದಿಂದ ಮಾತನಾಡಿದ ಅಪರಾಧಕ್ಕಾಗಿ 'ಡಬ್ಬಲ್‌ಗಸ್ತಿ'ಯ ಶಿಕ್ಷೆ ವಿಧಿಸಿದರು.

"ನಾನೇನು ಉದ್ಧಟತನ ಮಾಡಿಲ್ಲ ರಾವ್‌ಸಾಹೇಬರೆ. ಅವಳು ತನ್ನ ಹೆಸರು ಹೇಳಲಿಲ್ಲ ಅಂತ ಕಾಯದೆ ಪ್ರಕಾರ ಕಚೇರಿಗೆ ಬರಬೇಕಾಗುವದು ಅಂತ ಹೇಳಿದೆನಷ್ಟೆ."

ನಮ್ಮ ಫೌಜದಾರರು ನನ್ನ ವಾದವನ್ನು ಕೇಳುವ ಮನಃಸ್ಥಿತಿಯಲ್ಲಿರಲಿಲ್ಲ. ನಾನು 'ಡಬ್ಬಲ್ ಗಸ್ತಿ'ಗೆ ಹೊರಡಲೇಬೇಕಾಗಿ ಬಂತು. ಗದಿಗೆಪ್ಪ ಎಂಬ ಹಿರಿಯ ಪೋಲೀಸನನ್ನು ಕರೆದು ನನ್ನನ್ನು ಅವನ ವಶಕ್ಕೊಪ್ಪಿಸಿ 'ಗಸ್ತಿ' ತಿರುಗಿಸುವಂತೆ ಹೇಳಿದರು ಫೌಜದಾರರು. ರಾತ್ರೆ ಹನ್ನೊಂದು ಗಂಟೆಗೆ ಕಚೇರಿಯಲ್ಲಿರಲು ನನಗೆ ತಿಳಿಸಿ ಗದಿಗೆಪ್ಪ ತನ್ನ ಮನೆಗೆ ಹೋದ. ನಾನು ಭೋಜನಾಲಯಕ್ಕೆ ಹೋಗಿ ಊಟ ಮುಗಿಸುವಷ್ಟರಲ್ಲಿ ಹತ್ತೂವರೆಯಾಗಿತ್ತು. ಇನ್ನು ಕೊಠಡಿಗೆ ಹೋಗುವುದರಲ್ಲಿ ಅರ್ಥವಿಲ್ಲವೆಂದುಕೊಳ್ಳುತ್ತಾ ಕಚೇರಿಯತ್ತ ಕಾಲು ಹಾಕಿದೆ. ಹನ್ನೊಂದಕ್ಕೆ ಬರಬೇಕೆಂದು ನನಗೆ ತಿಳಿಸಿದ್ದ ಗದಿಗೆಪ್ಪ ಸ್ವತಃ ತಾನೇ ಹನ್ನೆರಡು ಗಂಟೆಗೆ ಬಂದು ಒಂದು ಮೂಲೆಯಲ್ಲಿ ಕುಳಿತುಕೊಂಡಿದ್ದ ನನ್ನನ್ನೆಬ್ಬಿಸಿ, "ನಡೆಯಪ್ಪಾ, ಹೋಗೋಣ ಗಸ್ತಿಗೆ," ಎಂದ.

ಗೊಬ್ಬೂರಿನಲ್ಲಿ 'ಗಸ್ತಿ' ಗಾರಂಭವಾಗುತ್ತಿದ್ದುದು ರಾತ್ರಿಯ ಹನ್ನೆರಡು ಗಂಟೆಗೆ. ಗಸ್ತಿಯ ಕೆಲಸಕ್ಕೆ ಅನುಕೂಲವಾಗಲೆಂದು ಎಂಟುಭಾಗ ಮಾಡಲಾಗಿತ್ತು. ಪ್ರತಿಯೊಂದು ಭಾಗಕ್ಕೆ ನಾಲ್ಕುಜನ ಪೋಲೀಸರು. ಒಬ್ಬ ಹವಲ್ದಾರ. ನಾಲ್ಕುಜನ ಪೋಲೀಸರಲ್ಲಿ ಇಬ್ಬರು ಹನ್ನೆರಡುಗಂಟೆಯಿಂದ ಎರಡೂವರೆಯವರೆಗೂ ಇನ್ನಿಬ್ಬರು ಎರಡೂವರೆಯಿಂದ ಐದರವರೆಗೂ ಸರದಿಯಂತೆ ಗಸ್ತಿ ತಿರುಗುವ ವ್ಯವಸ್ಥೆಯಿತ್ತು. ಇವರು 'ಡ್ಯೂಟೀ' ಮಾಡುತ್ತಿರುವರೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಲು ಎರಡು ಭಾಗಗಳ ಹವಲ್ದಾರರು ಎರಡೂವರೆ ತಾಸುಗಳಿಗೊಬ್ಬರಂತೆ ತಿರುಗುತ್ತಿದ್ದುದಿತ್ತು. ನನ್ನದು 'ಡಬ್ಬಲ್ ಗಸ್ತಿ'– ಎಂದರೆ ಇಡಿಯ ನಗರವನ್ನೆಲ್ಲಾ ಸುತ್ತಬೇಕು, ಹನ್ನೆರಡು ಗಂಟೆಯಿಂದ ಬೆಳಗಿನ ಐದರ ವರೆಗೆ. ನಡುವೆ ಎಲ್ಲಿಯೂ ನಿಲ್ಲುವಹಾಗಿಲ್ಲ, ವಿರಮಿಸಿಕೊಳ್ಳುವ ಹಾಗಿಲ್ಲ. ಮುನ್ನಾದಿನ ಬಿಸಲಲ್ಲಿ ನಿಂತು ಕೆಲಸಮಾಡಿಯೂ ರಾತ್ರೆ ಈ ಶಿಕ್ಷೆ. ನನ್ನ

ತಪ್ಪಾವುದೂ ಇರಲಿಲ್ಲವಾದರೂ ಶಿಕ್ಷೆ! ಖಟ್ಲೆ ಮಾಡಲೇಬೇಕಾಗಿ ಬಂದಿತ್ತು; ನಾನು ಮಾಡಲು ಯತ್ನಿಸಿದ್ದೆ. ಅದು ನನ್ನ ಮೈಮೇಲೇ ಬಂದಿತ್ತು.

ನಿದ್ರೆಗೆಟ್ಟು ಬಳಲಿದ ದೇಹವನ್ನು ಎಳೆದುಕೊಂಡು ಕಚೇರಿಗೆ ಬಂದು ಠಾಣಾ ಅಮಲ್ದಾರನಿಗೆ ವರದಿಯೊಪ್ಪಿಸಿ ಕೊಠಡಿಗೆ ಬಂದಾಗ ಗಿರಣಿಯ ಭೋಂಗಾ ಭೋರಿಡುತ್ತಿತ್ತು. ಬೆಳಗಿನ ಆರುಗಂಟೆ. ಏಳೂವರೆಯಾಗುವುದ ರೊಳಗಾಗಿ ಮತ್ತೆ ಫೌಜದಾರರ ಮನೆಯೆದುರಿಗೆ ಹೋಗಿ ನಿಂತುಕೊಳ್ಳಬೇಕು. ಎಂಟುಗಂಟೆಗೆ ಚೌಕದಲ್ಲಿ ಉಪಸ್ಥಿತನಾಗಿರಬೇಕು. ಕೊಂಚ ವಿಶ್ರಾಂತಿ ಪಡೆದ ರಾಯಿತೆಂದು ಹಾಸಿಗೆಯ ಮೇಲೆ ಬಿದ್ದುಕೊಳ್ಳುವಂತೆಯೂ ಇಲ್ಲ. ಗಾಢನಿದ್ರೆ ಯಾವರಿಸಿದರೆ 'ಡ್ಯೂಟಿ' ತಪ್ಪಬಹುದು. ಯಾವುದೇ ತಪ್ಪು ಮಾಡ ದಿದ್ದಾಗಲೂ 'ಡಬ್ಬಲ್ ಗಸ್ತಿ'ಯ ಶಿಕ್ಷೆಯಾಗುವುದು ಈ ಖಾತೆಯಲ್ಲಿ, ಇನ್ನು, 'ಡ್ಯೂಟಿ' ತಪ್ಪಿಸಿದರೆ ನೌಕರಿಯೇ ಕಳೆದುಹೋಗಬಹುದು—

ಉರಿಯುತ್ತಿರುವ ಕಣ್ಣುಗಳನ್ನೂ ನೋಯುತ್ತಿರುವ ದೇಹವನ್ನೂ ಶಾಂತ ಗೊಳಿಸಲೆಂದು ಬಚ್ಚಲಿಗಿಳಿದು ಎರಡು ಕೊಡ ನೀರು ಸುರಿದುಕೊಂಡೆ ತಲೆಯ ಮೇಲೆ. ಮತ್ತೆ ನನ್ನ ಸಮವಸ್ತ್ರ, ಗುಂಡಿ, ಚಪ್ಪಲಿ, ನಡುಪಟ್ಟಿಗಳನ್ನು ಅಚ್ಚುಕಟ್ಟಾಗಿ ಧರಿಸಿ ಫೌಜದಾರರ ಮನೆಗೆ ಹೊರಟೆ. ಅನಂತರ ಮತ್ತೆ ಅದೇ ವಾಹನ ನಿಯಂತ್ರಣ ಕಾರ್ಯ. ಸ್ವಯಂಚಾಲಕ ಯಂತ್ರವೊಂದರಂತೆ ನಾಲ್ಕು ಗಂಟೆಗಳ ಕಾಲ ಚೌಕದ ಮಧ್ಯೆ ನಿಂತು ಕೈಗಳನ್ನು ಅತ್ತಿತ್ತ ತಿರುಗಿಸುವುದು. ಅಂಥ ಬಿಸಿಲಲ್ಲಿ ನಾಲ್ಕು ಗಂಟೆಗಳ ಕಾಲ ಒಬ್ಬ ಮನುಷ್ಯನನ್ನು ನಿಲ್ಲಿಸುವುದು ಮಾನವತೆಗೆ ಹೊರತಾದ ಕೆಲಸ. ಅದೇನೋ ಸರಿ. ಆದರೆ ಹಾಗೆಂದು ನಮ್ಮ ಮೇಲಧಿಕಾರಿಗಳಿಗೆ ಹೇಳುವ ಸಾಹಸಕ್ಕೆ ಪ್ರವೃತ್ತರಾಗುವವರಾರು? ಅವರಂತೂ ಯಾವಾಗಲೂ ಗಡಿಯಾರ ನೋಡಿಕೊಂಡು ಕೆಲಸ ಮಾಡುವವರು. ಅವರೂ ಯಂತ್ರಗಳಂತೆ. ನಾವೂ ಯಂತ್ರಗಳಂತೆ. ನಾವು ಸಣ್ಣ ಯಂತ್ರ ಗಳಾದರೆ ಅವರು ದೊಡ್ಡ ಯಂತ್ರಗಳು. ನಮ್ಮಂಥ ಬಡ ಸಿಪಾಯಿಗಳು ತಮ್ಮ ಕಷ್ಟಗಳನ್ನು ನೇರವಾಗಿ ಸರಕಾರಕ್ಕೆ ತಿಳಿಸುವ ಅವಕಾಶವೂ ಇಲ್ಲ. ನಮ್ಮ ಪ್ರತಿಯೊಂದು ಅರ್ಜಿಯೂ ಮೇಲಧಿಕಾರಿಗಳ ಮೂಲಕವೇ ಸರಕಾರಕ್ಕೆ ಹೋಗಬೇಕಾದ ಸ್ಥಿತಿ. ಅಧಿಕಾರಿಗಳಾಗಿರುವವರಲ್ಲಿ ದಯಾರ್ದ್ರ ಹೃದಯ ವುಳ್ಳವರು ಬಹಳ ವಿರಳ. ಹೇಗಾದರೂ ಮಾಡಿ ಕೈಕೆಳಗಿನ ಸಿಪಾಯಿಗಳಿಂದ

ಸಾಧ್ಯವಾದಷ್ಟು ಹೆಚ್ಚು ಕೆಲಸ ಮಾಡಿಸಿಕೊಂಡು ತಮ್ಮ ಕುದುರೆಯನ್ನು ಮುಂದೋಡಿಸಿ ಮೇಲಿನ ಹುದ್ದೆಯ ಅಧಿಕಾರ ದೊರಕಿಸಲಾಶಿಸುವವರೇ ಹೆಚ್ಚು ಮಂದಿ. ಸರಿ, ಸಿಪಾಯಿಗಳಾದರೂ ಏನನ್ನು ತಾನೆ ಮಾಡಲು ಸಾಧ್ಯ? ಬಾಯಿ ಹೊಲಿದುಕೊಂಡು, ಪಾಲಿಗೆ ಬಂದುದನ್ನು ಅನುಭವಿಸುವುದೊಂದೇ ಸೂಕ್ತಮಾರ್ಗ....

ಹಾಗೆ ಯೋಚಿಸುತ್ತಾ ವಾಹನ ನಿಯಂತ್ರಣ ಕಾರ್ಯದಲ್ಲಿ ತೊಡಗಿದ್ದೆ.

ನನ್ನ ಎದುರಿನಿಂದ ಮಾಲು ಹೇರಿದ ಲಾರಿಯೊಂದು ಚೌಕವನ್ನು ಬಳಸಿ ಕೊಂಡು ಹೋಗುವುದರಲ್ಲಿತ್ತು. ಅದಕ್ಕೆ ಹಾದಿಮಾಡಿಕೊಡಲು ನಾನು ನನ್ನ ಹಿಂದಿನ ಹಾದಿಯನ್ನು ತಡೆದು ನಿಂತಿದ್ದ ಹಾಗೇ ನನ್ನ ಸೂಚನೆಯನ್ನು ಗಮನಿಸದೆ ಹಿಂದಿನಿಂದ ವೇಗವಾಗಿ ಬಂದ ಒಂದು ಕಾರು ನನ್ನ ಹತ್ತಿರವೇ ಬಂದು ಗಕ್ಕನೆ ನಿಂತುಕೊಂಡಿತು. ನಾನು ಬೆದರಿ ಹಿಂದೆ ಹೊರಳಿದೆ. ಕಾರಿನ ಮುಂದಿನ ಭಾಗಕ್ಕೂ ನನಗೂ ಕೇವಲ ಎರಡೇ ಇಂಚುಗಳಷ್ಟು ಅಂತರ ಉಳಿದಿದ್ದುದು ಕಾಣಿಸಿತು. ಆ ಕಾರು ಇನ್ನೂ ಕೊಂಚ ಮುಂದೆ ಬಂದಿದ್ದಲ್ಲಿ ನಾನು ಅದಕ್ಕೆ ಸಿಕ್ಕಿಕೊಂಡು ಸತ್ತುಹೋಗಬಹುದಾಗಿತ್ತು.

ಲಾರಿ ದಾಟಿ ಹೋಗುತ್ತಲೂ ನಾನು ಆ ಕಾರಿನತ್ತ ದೃಷ್ಟಿ ತಿರುಗಿಸಿದೆ. ಅದನ್ನು ನಡಸುತ್ತಿದ್ದಾಕೆ ಇಪ್ಪತ್ತರ ಪ್ರಾಯದ ಒಬ್ಬ ಆಂಗ್ಲೊ ಇಂಡಿಯನ್ ಯುವತಿ. ಗೌರವರ್ಣ. ಮುಖವೂ ಚೆಲುವಾದುದು. ತುಟಿಗಳಲ್ಲಿ ತುಂಟ ತನವೂ ನರ್ತಿಸುತ್ತಿತ್ತು.

"ಇದು ನಾಲ್ಕು ದಾರಿ ಕೂಡುವ ಸ್ಥಳ. ಎಲ್ಲ ಕಡೆಯಿಂದ ವಾಹನಗಳು ಬರುತ್ತವೆ. ನೀವು ಹೀಗೆ ವೇಗವಾಗಿ ಕಾರು ಹೊಡೆದರೆ ಅಪಘಾತವಾಗ ದಿರುವುದೇ ?" ಎಂದೆ ನಾನು ಇಂಗ್ಲಿಷಿನಲ್ಲಿ.

ಅವಳು ಹುಬ್ಬುಗಳನ್ನೇರಿಸಿ ಒರಟು ಧ್ವನಿಯಲ್ಲಿ ಉತ್ತರವಿತ್ತಳು :

"ನನಗೆ ಗೊತ್ತಿದೆ ರಸ್ತೆಯ ಕಾನೂನೆಲ್ಲಾ."

"ಗೊತ್ತಿದ್ದರೆ ನೀವು ಹೀಗೆ ಮಾಡುತ್ತಿರಲಿಲ್ಲ. ಕಾರು ಎರಡು ಇಂಚು ಮುಂದೆ ಬಂದಿದ್ದರೆ ನಾನು ಸತ್ತುಹೋಗುತ್ತಿದ್ದೆ."

"ಸತ್ತಿದ್ದರೆ ಅಪಘಾತದ (Accident) ಪ್ರಕರಣವಾಗುತ್ತಿತ್ತು. ನಾನೇನು

ಮಾಡಲಿ ಅದಕ್ಕೆ? ಆ ಲಾರಿಯನ್ನೇ ತಡೆದು ಮೊದಲು ನನ್ನ ಕಾರನ್ನೇ ಬಿಟ್ಟಿದ್ದರೆ ಇದೆಲ್ಲ ಯಾಕೆ ಆಗುತ್ತಿತ್ತು ?"

ನಾನು ಅವಳೊಡನೆ ಹೆಚ್ಚು ವಾದಿಸಲಿಲ್ಲ.

"ನನ್ನ ನಿಮ್ಮ ದೈವ ಒಳ್ಳೆಯದು, ಇನ್ನು ಮುಂದೆ ಹೀಗೆ ಹೊಡೆಯ ಬೇಡಿರಿ," ಎಂದಿಷ್ಟೆ ನುಡಿದು ಅವಳ ಕಾರನ್ನು ಮುಂದೆ ಬಿಟ್ಟೆ. ನನ್ನನ್ನು ದುರುಗುಟ್ಟಿ ನೋಡುತ್ತಲೇ ಆಕೆ ಕಾರನ್ನು 'ಸ್ಟಾರ್ಟ್' ಮಾಡಿದಳು. ನನ್ನೆದೆಯನ್ನು ಚೂರಿಯಂತೆ ಇರಿಯಿತು ಅವಳ ನೋಟ. ಅದೆಷ್ಟು ಸೊಕ್ಕು ಇವಳದು. ಇವಳಿಗೆ ಬುದ್ಧಿ ಕಲಿಸಬೇಕು – ಎಂದು ಮನಸ್ಸಿನಲ್ಲೇ ಗೊತ್ತು ಮಾಡಿಕೊಂಡೆ.

ಬೀಡಿಯ ಅಂಗಡಿಯವನನ್ನು ಕರೆದು ಅವಳ ಬಗ್ಗೆ ವಿಚಾರಿಸಿದೆ. ಅವನು ನಗುನಗುತ್ತಾ ಅವಳ ವಿಷಯ ವಿವರಿಸಿ ಹೇಳಿದ:

"ಅದೊಂದು ಗಂಡುಬೀರಿ. ಬ್ರಾಂಡಿ ಅಂಗಡಿಯ ಜಾನ್ಸನ್ ಸಾಹೇಬನ ಮಗಳು ಅವಳು. ಯೂರೋಪಿಯನ್ – ಎ. ಎಸ್. ಪಿ. ಇದ್ದಾರಲ್ಲಾ, ಅವರ ಪ್ರೇಯಸಿ. ಪೋಲೀಸರಾರೂ ಅವಳ ತಂಟೆಗೆ ಹೋಗುವದಿಲ್ಲ. ಅದಕ್ಕೇ ಅವಳಿಗಷ್ಟು ಗರ್ವ."

ಅದೇ ದಿನ ಸಾಯಕಾಲವೇ ಮತ್ತೆ ಆ ಹುಡುಗಿಯ ಕಾರು ತಾಸಿಗೆ ಮೂವತ್ತು ಮೈಲಿನ ವೇಗದಲ್ಲಿಯೇ ಬಂದಿತು ನನ್ನ ಚೌಕದಲ್ಲಿ. ಅಸಿಸ್ಟಂಟ್ ಪೋಲೀಸ್ ಸೂಪರಿಂಟೆಂಡೆಂಟರ ಪ್ರೇಯಸಿಯಾದ ಅವಳ ವೈರ ಕಟ್ಟಿಕೊಳ್ಳುವ ಧೈರ್ಯವಾಗಲಿಲ್ಲ ನನಗೆ. "ಹಾಳಾಗಿ ಹೋಗಲಿ. ಅಪಘಾತವಾದರೆ ಅವಳೇ ಅನುಭವಿಸುತ್ತಾಳೆ," ಎಂದುಕೊಳ್ಳುತ್ತಾ ಅವಳಿಗೆ ಹಾದಿ ಮಾಡಿಕೊಟ್ಟೆ. ಅವಳ ಕಾರು ನನ್ನ ಹತ್ತಿರ ಬಂದು ಹೊರಳುತ್ತಿದ್ದ ಹಾಗೇ ರಸ್ತೆಯ ಮಗ್ಗುಲಲ್ಲಿ ನಿಂತಿದ್ದ ಕತ್ತೆಗಳು ಬೆದರಿ ಶಂಖವಾದ್ಯ ಮಾಡುತ್ತಾ ಚೌಕದ ಮಧ್ಯಸ್ಥಳದತ್ತ ಓಡಿಬಂದುವು. ಆಂಗ್ಲೋ ಇಂಡಿಯನ್ ಹುಡುಗಿಯರ ಕಾರಿನ ಮಗ್ಗುಲು ಭಾಗದ ಹೊಡೆತ ಬಿದ್ದುದರಿಂದ ಒಂದು ಕತ್ತೆ ಮೇಲಕ್ಕೆ ಪುಟನೆಗೆದು ಹತ್ತು ಮಾರು ದೂರ ಹೋಗಿ ಬಿತ್ತು. ಆಗ ಮಾತ್ರ ನಾನು ಆಕೆಯನ್ನು ಹಾಗೇ ಬಿಡುವಂತಿರಲಿಲ್ಲ. ಮೋಟಾರುಕಾರನ್ನು ಒಂದು ಬದಿಗೆ ನಿಲ್ಲಿಸಲು ಹೇಳಿ ಅವಳ ಹೆಸರು ವಿಳಾಸ ತಿಳಿಸಲು ಕೇಳಿದೆ. ಲೈಸೆನ್ಸ್ ತೋರಿಸಲು ಹೇಳಿದೆ.

"ಮನೆಯಲ್ಲಿದೆ ಲೈಸೆನ್ಸ್," ಎಂದಳಾಕೆ.

"ಲೈಸೆನ್ಸ್ ಇಲ್ಲದೆ ಕಾರು ನಡಸಲು ಬರುವದಿಲ್ಲ – ಅದೂ ಒಂದು ಅಪರಾಧವೇ. ಇಷ್ಟು ವೇಗವಾಗಿ ಕಾರು ಹೊಡೆದದ್ದೂ ಅಪರಾಧ. ಇವೆರಡೂ ಅಪರಾಧಗಳಿಗಾಗಿ ನಾನು ನಿಮ್ಮ ಮೇಲೆ ಖಟ್ಲೆ ಹಾಕಬೇಕಾಗುತ್ತದೆ. ಲೈಸೆನ್ಸ್ ಬೇಕು. ತಂದುಕೊಡಿರಿ."

ಆಗ ಮಾತ್ರ ಅವಳ ಅಹಂಕಾರವೆಲ್ಲ ಮಾಯವಾಯಿತು—

"ದಯವಿಟ್ಟು ಇದೊಂದು ಸಾರಿ ಬಿಟ್ಟುಬಿಡಿರಿ," ಎಂದು ಅವಳು ದೀನ ವಾಣಿಯಲ್ಲಿ ಬೇಡಿಕೊಂಡಳು.

"ಸಾಧ್ಯವಿಲ್ಲ. ನಿಮಗೆ ಮುಂಜಾನೆಯೇ ಎಚ್ಚರಿಕೆ ಕೊಟ್ಟಿದ್ದೆ. ಸಂಜೆಯಷ್ಟರಲ್ಲೇ ನೀವು ಅದನ್ನು ಮರೆತುಬಿಟ್ಟರಿ. ನಿಮ್ಮ ಕಾರಿಗೆ ಸಿಕ್ಕಿದ್ದು ಕತ್ತೆಯೆಂದು ಹೆಚ್ಚಿನ ಅನಾಹುತವಾಗಲಿಲ್ಲ. ಕತ್ತೆಗೆ ಬದಲಾಗಿ ಮನುಷ್ಯ ಸಿಕ್ಕಿದ್ದರೆ ಅವನು ಆಗಿಂದಾಗ ಪ್ರಾಣಬಿಡುತ್ತಿದ್ದ. ನಿಮ್ಮನ್ನು ಬಿಡಲು ಬರುವದಿಲ್ಲ – ಲೈಸೆನ್ಸ್ ತಗೊಂಡು ಬನ್ನಿ."

"ಕಾರು ತೆಗೆದುಕೊಂಡು ಹೋಗಿ ತಂದು ತೋರಿಸುತ್ತೇನೆ," ಎಂದಳಾಕೆ.

"ಇಲ್ಲ. ಕಾರು ಬಿಡುವದಿಲ್ಲ ನಾನು. ನೀವು ಹಾಗೇ ನಡೆದುಕೊಂಡು ಹೋಗಿ ಲೈಸೆನ್ಸ್ ತನ್ನಿ."

ಅವಳು ಮುಂದೆ ಮಾತಾಡದೆ ಕಾರಿನಿಂದಿಳಿದು ಬಿರುಬಿರನೆ ನಡೆಯುತ್ತಾ ಹೊರಟುಹೋದಳು.

ಹತ್ತಿಪ್ಪತ್ತು ನಿಮಿಷ ಕಳೆದರೂ ಅವಳು ಬರಲಿಲ್ಲ. ಅವಳಿಗೆ ಬದಲು ಅವಳ ಅಣ್ಣ ಬಂದ. ಅವನು ಸಾಧುಪ್ರಾಣಿಯಂತೆ ಕಾಣುತ್ತಿದ್ದ.

"ಅವಳ ತುಂಟಾಟ ತಡೆಯುವದು ನನಗೂ ಅಸಾಧ್ಯವಾಗಿದೆ. ಇದೊಂದು ಸಲ ಅವಳನ್ನು ಕ್ಷಮಿಸಿಬಿಡಿರಿ. ಇನ್ನು ಮುಂದೆ ಮಾತ್ರ ಅವಳು ಎಂದೂ ಹೀಗೆ ಮಾಡಲಿಕ್ಕಿಲ್ಲ," ಎಂದು ಅವನು ಹೇಳಿದ.

"ಛೆ. ಅದೆಲ್ಲಾ ಸಾಧ್ಯವಿಲ್ಲ. ಲೈಸೆನ್ಸ್ ತಂದು ತೋರಿಸಿ ಕಾರು ತೆಗೆದುಕೊಂಡು ಹೋಗಬಹುದು."

"ಅವಳಿನ್ನೂ ಲೈಸೆನ್ಸ್ ತೆಗೆದುಕೊಂಡೇ ಇಲ್ಲ – ಕ್ಷಮಿಸಿರಿ," ಎಂದು

ಹೇಳುತ್ತಾ, ಹತ್ತು ರೂಪಾಯಿ ನೋಟುಗಳೆರಡನ್ನು ತೆಗೆದು ಅವನು ನನ್ನ ಕೋಟಿನ ಕಿಸೆಗೆ ಸೇರಿಸಿದ.

ಆ ಕ್ಷಣಕ್ಕೆ ನನಗೆ ತುಂಬಾ ಅವಮಾನವಾದಂತೆ ಎನಿಸಿತು. ಪೋಲೀಸರೆಲ್ಲರೂ ಲಂಚ ತಿನ್ನುವ ವಿಚಾರ ನನಗೆ ಗೊತ್ತಿದ್ದಿತಾದರೂ ಲಂಚದೊಡನೆ ನನಗೆ ಪ್ರತ್ಯಕ್ಷ ಸಂಬಂಧ ಬರುತ್ತಿದ್ದುದು ಮಾತ್ರ ಅದೇ ಮೊದಲ ಬಾರಿ. ನನಗೆ ಅವಮಾನವೆನ್ನಿಸಿತು, ನಾಚಿಕೆಯಾಯಿತು, ಕೋಪ ಬಂದಿತು – ಛೆ. ಇತರ ಪೋಲೀಸನಂತೆ ನಾನೂ ಆಗಲಾರೆ, ಲಂಚದ ಹಣ ಸ್ವೀಕರಿಸಲಾರೆ....

ಹಾಗೆ ನನ್ನಲ್ಲಿ ನಾನೇ ಹೇಳಿಕೊಳ್ಳುತ್ತಾ ಆ ನೋಟುಗಳನ್ನು ತೆಗೆದು ಬೀದಿಗೆ ಬಿಸುಟೆ,

“ಲಂಚ ಕೊಟ್ಟು ನನ್ನ ಬಾಯಿ ಮುಚ್ಚಿಸುವದು ನಿಮ್ಮಿಂದ ಸಾಧ್ಯವಿಲ್ಲ. ನಾನು ಎಲ್ಲ ಪೋಲೀಸರ ಹಾಗಲ್ಲ. ನಿಮ್ಮ ತಂಗಿಯ ಲೈಸೆನ್ಸ್ ತಂದು ತೋರಿಸುವವರೆಗೂ ಕಾರು ಬಿಡುವದಿಲ್ಲ,” ಎಂದು ಹೇಳಿದೆ.

ಆತನ ಮುಖದ ಮೇಲೆ ಅಸಹಾಯತೆಯೂ ದೈನ್ಯತೆಯೂ ಜತೆಯಾಗಿಯೆ ಕಾಣಿಸಿಕೊಂಡುವು. ಅದರೊಡನೆಯೆ ಕೊಂಚ ವಿಸ್ಮಯ – ಲಂಚದ ಹಣ ಬೇಡವೆಂದು ಹೇಳುವ ಪೋಲೀಸರಿರುವುದೂ ಸಾಧ್ಯವೇ ಎಂದು.

ಗಾಳಿಯೊಡನೆ ಹಾರುತ್ತ ನಡೆದಿದ್ದ ನೋಟುಗಳನ್ನು ಬೀಡಿಯಂಗಡಿಯವನು ಬಂದು ತೆಗೆದುಕೊಂಡು,

“ಹೋಗಲಿ ಬಿಡಿರೀ ಸರದಾರರೇ. ಇದೊಂದು ಸಾರಿ ಮಾಫ್ ಮಾಡಿಬಿಡಿರಿ,” ಎಂದು ಶಿಫಾರಸು ಮಾಡಿದ, ಲಂಚದ ಹಣದಲ್ಲಿ ಅವನಿಗೂ ಕಮಿಷನ್ ಗಿಟ್ಟುತ್ತಿದ್ದಿತಲ್ಲ !

“ನಮ್ಮ ಫೌಜದಾರಸಾಹೇಬರ ಹತ್ತರ ಬಂದು ಕೇಳಿಕೊಳ್ಳಿರಿ. ಅವರು ಬಿಟ್ಟರೆ ನನ್ನದೇನು ಅಡ್ಡಿಯಿಲ್ಲ,” ಎಂದು ನಾನು ಹೇಳಿದೆ. “ಬಹಳ ಉಪಕಾರವಾಯಿತು,” ಎಂದು ಹೇಳಿ ಅವನು ಕಾರು ತೆಗೆದುಕೊಂಡು ಹೊರಟುಹೋದ.

ಹತ್ತಿರದಲ್ಲಿಯೆ ಹಲ್ಲು ಕಿರಿಯುತ್ತ ನಿಂತುಕೊಂಡಿದ್ದ ಬೀಡಿಯಂಗಡಿಯವನನ್ನು ಕೇಳಿದೆ :

“ಆ ರೂಪಾಯಿ ನೀನ್ಯಾಕೆ ತೆಗೆದುಕೊಂಡೆ ?”

“ನೀವು ಹೊಸಬರು. ಇಲ್ಲಿಯ ಮಾಮೂಲು ನಿಮಗೇನು ಗೊತ್ತಿಲ್ಲ.

ಈ ಚೌಕದಲ್ಲಿ ನಿಲ್ಲುವ ಪೋಲೀಸರಿಗೆ ಜನರು ಕೊಡುವ ರೊಕ್ಕವೆಲ್ಲಾ ನನ್ನ ಹತ್ತಿರವೇ ಇರುತ್ತದೆ. ಯಾರಾದರೂ ಅಧಿಕಾರಿಗಳು ಬಂದು ನಿಮ್ಮನ್ನು ಶೋಧಿಸಿದರೆ ನಿಮ್ಮಲ್ಲಿ ಹಣ ಸಿಕ್ಕಬಾರದೆನ್ನುವದೇ ಇದರ ಉದ್ದೇಶ. ನೀವು ಬಂದಂದಿನಿಂದ ನನಗೂ ಒಂದು ಪೈ ಸಿಕ್ಕಿರಲಿಲ್ಲ. ಅಂಗಡಿಯ ವ್ಯಾಪಾರವಂತೂ ಅಷ್ಟರಲ್ಲೇ ಇದೆ. ಮುಂಜಾನೆಯಿಂದ ಸಂಜೆಯ ತನಕ ಕೂತರೂ ಒಂದು ರೂಪಾಯಿ ಲಾಭ ಬರುವದೂ ಕಷ್ಟ. ಏನೋ ಪೋಲೀಸರಿಂದ ಸಿಗುವ ಕಾಸಿನಿಂದ ನಾನೂ ಬದುಕಿಕೊಂಡಿದ್ದೇನೆ."

"ಅದೇನೇ ಇರಲಿ. ನಾನಂತೂ ಆ ಹಣ ಮುಟ್ಟುವದಿಲ್ಲ. ಫೌಜದಾರರನ್ನು ನೋಡಿ ಬಂದ ಮೇಲೆ ರೂಪಾಯಿ ಒಯ್ದು ಆತನಿಗೆ ಮುಟ್ಟಿಸುತ್ತೇನೆ," ಎಂದು ಹೇಳಿ ನಾನು ಕಚೇರಿಗೆ ಹೊರಟೆ. ಫೌಜದಾರರು ಅವರನ್ನು ಕ್ಷಮಿಸಿ ಬಿಟ್ಟುಬಿಟ್ಟರು. ನಾನು ಮತ್ತೆ ಚೌಕಕ್ಕೆ ಬಂದು ಬೀಡಿಯಂಗಡಿಯವನಿಂದ ರೂಪಾಯಿ ತೆಗೆದುಕೊಂಡು ಅವುಗಳನ್ನು ವಾಪಸು ಕೊಡಲು ಆ ಕಾರಿನವರ ಮನೆಗೆ ಹೋದೆ. ನಾನು ಬಂದುದರ ಉದ್ದೇಶವನ್ನು ತಿಳಿದಾಗ ಆತನಿಗೆ ಮತ್ತೂ ಆಶ್ಚರ್ಯವಾಯಿತು.

"ನೀವು ಹೀಗೆಲ್ಲಾ ಮಾಡಿದರೆ ಆ ಪೋಲೀಸ್ ಖಾತೆಯಲ್ಲಿದ್ದು ಬದುಕುವದೇ ಆಗಲಿಕ್ಕಿಲ್ಲ. ನಿಮಗೆ ಸಿಕ್ಕುವ ಇಪ್ಪತ್ತು ರೂಪಾಯಿ ಸಂಬಳದಲ್ಲಿ ಸಂಸಾರ ಹ್ಯಾಗೆ ನಡೆಸುವಿರಿ? ನಿಮ್ಮ ಮೇಲಧಿಕಾರಿಗಳಿಗೆ ಸಾವಿರ ಸಾವಿರ ಸಂಬಳ ಬರುತ್ತಿದ್ದರೂ ಅವರೂ ಲಂಚ ತಿನ್ನುವದನ್ನು ಬಿಟ್ಟಿಲ್ಲ. ನೀವೊಬ್ಬರೇ ಯಾಕೆ ಸತ್ಯನಿಷ್ಠರಾಗಿ ಉಳಿಯಬೇಕು? ನಿಮ್ಮಂಥವರು ಈ ನೌಕರಿಯಲ್ಲಿ ಬಹಳ ದಿನ ತಡೆಯುವದೂ ಸಾಧ್ಯವಿಲ್ಲ. ನಾನು ಹೇಳುವದು ಕೇಳಿ. ಸಂತೋಷದಿಂದ ಹಣ ಕೊಟ್ಟಿದ್ದೇನೆ. ಬೇಡ ಅನ್ನಬೇಡಿ. ತೆಗೆದುಕೊಂಡು ಹೋಗಿ ಅರಾಮು ಇರಿ. ಇಂದಿನಿಂದ ನಾನೂ ನೀವೂ ಗೆಳೆಯರಂತಿರೋಣ," ಎಂದು ಅವನು ಹೇಳಿದ. ಅವನ ತಂಗಿಯೂ ಹೊರಗೆ ಬಂದು, ನನ್ನನ್ನು ಕಂಡು "ಥ್ಯಾಂಕ್ಸ್," ಎಂದಳು.

ಅವಳ ಅಣ್ಣ ನನಗೆ ಹಣ ಕೊಟ್ಟ ಸಂಗತಿ ಅವಳಿಗೂ ತಿಳಿದ ಹಾಗಿರಲಿಲ್ಲ.

೧೧

ಜ್ವರ ಮತ್ತು ಆಸ್ಪತ್ರೆ

ಲಂಚವೇನೊ ಸಿಕ್ಕಿತು. ಖಟ್ಲೆ ಹಾಕುವ ಪ್ರಸಂಗ ಮಾತ್ರ ತಪ್ಪಿ ಹೋಯಿತು.

ನನ್ನ ತಲೆಯ ತುಂಬಾ ಖಟ್ಲೆಯ ಯೋಚನೆಗಳೇ. ಚೌಕದಲ್ಲಿ ನಿಂತುಕೊಂಡಿದ್ದ ಹಾಗೆಲ್ಲ ನನ್ನ ದೃಷ್ಟಿ ಯಾವಾಗಲೂ ಅತ್ತಿತ್ತ ಹೊರಳುವುದನ್ನು ಕಲಿತುಕೊಂಡಿತು.

ಆಗ ಇನ್ನೂ ಸರಕಾರಿ ಬಸ್ಸು ಬಂದಿರಲಿಲ್ಲ. ಖಾಸಗಿ ಬಸ್ಸುಗಳೇ ಓಡಾಡುತ್ತಿದ್ದುವು. ಕಾಯದೆಯ ಮೇರೆಗೆ ಗೊತ್ತುಪಡಿಸಿದುದಕ್ಕಿಂತ ಹೆಚ್ಚು ಜನರನ್ನು ಕೂಡಿಸಿಕೊಂಡು ಹೋಗುವ ಬಸ್ಸುಗಳೇ ಬಹಳವಾಗಿದ್ದುವು. ನನ್ನ ಚೌಕದಲ್ಲೂ ಅವುಗಳ ಓಡಾಟವಿತ್ತು. ಸರಿ. 'ಓವರ್‌ಲೋಡ್' ಆದ ಬಸ್ಸು ಹಿಡಿದು ಸುಲಭವಾಗಿ ಖಟ್ಲೆ ಹಾಕಬಹುದೆಂದು ಬಗೆದು ಒಂದು ದಿನ ಒಂದು ಬಸ್ಸು ತಡೆದು ನಿಲ್ಲಿಸಿ ಅದರಲ್ಲಿದ್ದ ಪ್ರಯಾಣಿಕರ ಸಂಖ್ಯೆಯನ್ನೆಣಿಸತೊಡಗಿದೆ. ಡ್ರೈವರನಿಗೆ ಆಶ್ಚರ್ಯವಾದ ಹಾಗೆ ತೋರಿತು. ಅವನು ನನ್ನನ್ನು ಕರೆದು ಸಾಯಂಕಾಲ ಭೆಟ್ಟಿಯಾಗುವುದಾಗಿ ಹೇಳಿದವನೇ ಬಸ್ಸು ಬಿಟ್ಟುಕೊಂಡು ಹೊರಟುಹೋದ. ಅವನ ವರ್ತನೆಯ ಅರ್ಥ ನನಗಾಗಲಿಲ್ಲ. ಬೀಡಿಯಂಗಡಿ

ಯವನನ್ನು ವಿಚಾರಿಸಿದಾಗ ಗುಟ್ಟು ಗೊತ್ತಾಯಿತು. ಈ ಬಸ್ಸುಗಳನ್ನು ನಿಲ್ಲಿಸಿ 'ಚಕ್' ಮಾಡುತ್ತಿದ್ದರೆ ಪ್ರತಿಯೊಂದು ಬಸ್ಸಿಗೂ ಪ್ರತಿ ಸರದಿಗೂ ನಾಲ್ಕಾಣೆ ಲಂಚ ದೊರೆಯುತ್ತಿದ್ದಿತಂತೆ.

"ಎಲ್ಲಾ ಕಡೆಗೂ ಇದೇ ಪದ್ಧತಿ. ನಿಮಗೆ ಗೊತ್ತೇ ಇರಲಿಲ್ಲವೇನು? ಹೀಗೆ ವಸೂಲಾದ ಹಣದಲ್ಲಿ ಮೇಲಧಿಕಾರಿಗಳವರೆಗೂ ಪಾಲು ಹೋಗುತದೆ," ಎಂದನಾ ಅಂಗಡಿಕಾರ.

ಸರಿ. ಅಂದಿನಿಂದ ನಾನೂ ಬಸ್ಸುಗಳನ್ನು ನಿಲ್ಲಿಸುತ್ತ ಬಂದೆ. ದಿನ ವೊಂದಕ್ಕೆ ಎರಡು ರೂಪಾಯಿಗಳಷ್ಟು ಹಣ ಬೀಡಿಯಂಗಡಿಯವನ ಹತ್ತಿರ ಜಮಾ ಆಗುತ್ತ ಬಂತು.

ಈ ವಾಹನಗಳ ಮೇಲ್ವಿಚಾರಣೆಗೆಂದು ಒಬ್ಬ ಪೋಲೀಸು ಅಮಲ್ದಾರನ ನೇಮಕವಾಗಿರುತ್ತಿತ್ತು. ಅವರಿಂದ ಅವನಿಗೆ ಸಾಕಷ್ಟು ಲಂಚ ಲಭಿಸುತ್ತಿತ್ತು. ಅವನನ್ನು ಕೇಳದೆ ನಾನು 'ಚಕ್' ಮಾಡಿದೆನಲ್ಲಾ ಎಂದು ಅವನಿಗೆ ಹೊಟ್ಟೆ ಯುರಿಯದಿರಲಿಲ್ಲ. ಇಂಥ ಸಂದರ್ಭಗಳಲ್ಲಿ ಆಗಬೇಕಾದುದೇ ಆಯಿತು. ಆತ ನನ್ನ ವಿರುದ್ಧವಾಗಿ ಫೌಜದಾರರಿಗೂ 'ಕಂಪನಿ ಆರ್ಡರ್ಲಿ'ಗೂ ಏನೇನೋ ಚಾಡಿ ಹೇಳಿದ. ಮೂರುನಾಲ್ಕು ದಿನಗಳಲ್ಲಿಯೆ ಆ ಚೌಕ ಬಿಡಿಸಿ ನನ್ನನ್ನು ಬೇರೆ ಸ್ಥಳಕ್ಕೆ ಹಾಕಿದರು. ಅದರಿಂದಾಗಿ ನನಗೆ ಅಂಥ ವ್ಯಸನವೇನೂ ಆಗಲಿಲ್ಲ. ಲಂಚದ ಕಾಸಿನ ಬಗ್ಗೆ ನನಗೆ ಅಷ್ಟೊಂದು ಆಸೆ ಇರಲೇ ಇಲ್ಲ.

ನನಗೆ ಕೊಡಲ್ಪಟ್ಟ ಹೊಸ ಸ್ಥಳದಲ್ಲಿ ಬಸ್ಸುಗಳ ಓಡಾಟವೇ ಇರಲಿಲ್ಲ.

ನಾನು ಅಲ್ಲಿಗೆ ಹೋಗಿ ಒಂದು ವಾರವಾಗಿರಬಹುದು. ಒಂದು ದಿನ ಆ ಭಾಗದ ಅಮಲ್ದಾರನು ಬಂದು ತನಗೆ ಸಲ್ಲಬೇಕಾದ 'ಮಾಮೂಲು' ಕೊಡುವಂತೆ ಕೇಳಿದ. ಅದೆಂಥ ಮಾಮೂಲು, ಏತಕ್ಕಾಗಿ ಎಂಬುದಾವುದೂ ನನಗೆ ಗೊತ್ತಿರಲಿಲ್ಲ. ಅವನೇ ವಿವರಿಸಿ ಹೇಳಿದ.

ನಾನು ನಿಂತುಕೊಳ್ಳುತ್ತಿದ್ದ ಸ್ಥಳದ ಹತ್ತಿರ ಒಂದು ಸೇಂದಿ ಅಂಗಡಿಯಿತ್ತು. ಈ ಸ್ಥಳದಲ್ಲಿ ನಿಲ್ಲುವ ಪೋಲೀಸನಿಗೆ ಪ್ರತಿದಿನವೂ ಎರಡಾಣೆ ಮಾಮೂಲು ದೊರೆಯುತ್ತಿದ್ದಿತಂತೆ ಆ ಅಂಗಡಿಯಿಂದ. ಅದರಲ್ಲಿ ಒಂದಾಣೆ ಅಮಲ್ದಾರನಿಗೆ ಸಲ್ಲುತ್ತಿತ್ತು.

ಅದನ್ನು ಕೇಳಿದಾಗ ನನಗೆ ಜುಗುಪ್ಸೆಯಾಗದಿರಲಿಲ್ಲ.

"ಸಿಂದೀ ಗಡಂಗಿಗೆ ಹೋಗಿ ಕೈಯೊಡ್ಡಿ ನಿಂತು ಎರಡಾಣೆ ತರುವದು ನನ್ನಿಂದಾಗುವದಿಲ್ಲ. ನೀವೇ ಬೇಕಾದರೆ ಹೋಗಿ ತೆಗೆದುಕೊಳ್ಳಬಹುದು," ಎಂದು ನಾನು ಹೇಳುತ್ತಲೂ ಅವನಿಗೆ ಕೊಂಚ ನಾಚಿಕೆಯಾಗದಿರಲಿಲ್ಲ.

"ನೀನೇನೋ ಒಂಟಿ ಮನುಷ್ಯ. ಲಂಚ ಬೇಡ ಅನ್ನಬಹುದು. ನಾನು ಸಂಸಾರಿಕ. ಮನೆಯಲ್ಲಿ ನಾಲ್ಕು ಮಕ್ಕಳಿದ್ದಾರೆ. ನನ್ನ ಕಷ್ಟ ನಿನಗೇನು ತಿಳಿದೀತು? ನನಗೆ ಸಿಗುವ ಇಪ್ಪತ್ತು ರೂಪಾಯಿ ಸಂಬಳದಲ್ಲಿ ಎರಡು ವೇಳೆಯ ಊಟ ಸಿಗುವದೂ ಕಷ್ಟ," ಎಂದು ಆತ ಹೇಳಿದ.

ಆದರೂ ನನ್ನ ಮನಸ್ಸು ಕರಗಲಿಲ್ಲ.

"ನೋಡು. ನೀನೀಗ ರೊಕ್ಕ ಇಸಿದುಕೊಳ್ಳುವದು ಬಿಟ್ಟರೆ ಆ ಪದ್ಧತಿಯೇ ತಪ್ಪಿಹೋಗುತ್ತದೆ. ಅಂಗಡಿಯವನಿಗೇನು, ಎರಡಾಣೆ ಉಳಿದಂತಾಗುತದೆ," ಎಂದು ಹೇಳಿದ ಅಮಲ್ದಾರ. ಆಗಲೂ ನಾನು ಆ ಕೆಲಸಕ್ಕೆ ಸಿದ್ಧನಾಗಲಿಲ್ಲ. ಅವನು ಹೆಚ್ಚು ಬಲವಂತಮಾಡುವ ಹಾಗಿರಲಿಲ್ಲ. ನನ್ನನ್ನು ಮನಸ್ಸಿನಲ್ಲಿಯೆ ಶಪಿಸಿಕೊಳ್ಳುತ್ತಾ ತಾನೇ ಸ್ವತಃ ದಿನವೂ ಸಂಜೆ ಅಲ್ಲಿಗೆ ಹೋಗಿ ಎರಡಾಣೆಯ ಮಾಮೂಲು ಪಡೆದುಕೊಳ್ಳತೊಡಗಿದ.

ಸೇಂದಿ ಅಂಗಡಿಗೆ ಹೋಗಿ ಬರುತ್ತಿದ್ದ ಜನ ರಸ್ತೆಯ ಪಕ್ಕದಲ್ಲಿ ಮೂತ್ರ-ವಿಸರ್ಜನೆಗೆ ಕೂತುಕೊಳ್ಳುತ್ತಿದ್ದುದು ವಾಡಿಕೆಯಾಗಿತ್ತು. ಖಟ್ಲೆಗಳ ಮೇಲೆ ಕಣ್ಣಿಟ್ಟುಕೊಂಡಿದ್ದ ನಾನು ದಿನವೂ ಅಂಥ ಆಪಾದಿತರನ್ನು ಹಿಡಿಯತೊಡಗಿದೆ. ಒಂದು ವಾರದೊಳಗಾಗಿ ಅಂಥ ಮೂವತ್ತು ಖಟ್ಲೆ ಹಾಕಿದೆ. ನನ್ನ ಮನಸ್ಸಿನ ದೊಂದು ಮೂಲೆಯಲ್ಲಿ ಆನಂದ, ಇನ್ನೊಂದು ಮೂಲೆಯಲ್ಲಿ ಮೋಜು. ನಮ್ಮ ಫೌಜದಾರರೂ ನನ್ನ ಮೇಲೆ "ಖುಷ್" (ಸಂತುಷ್ಟ) ಆದಂತೆ ಕಾಣಿಸಿತು.

ಒಂದು ತಿಂಗಳವರೆಗೆ ಅದೇ ಕೆಲಸ ನಡೆಯಿತು. ನನಗೆ ಬಲು ಬೇಸರಕ್ಕಿಟ್ಟುಕೊಂಡಿದ್ದಿತಾದುದರಿಂದ ಒಂದು ದಿನ ಧೈರ್ಯ ತಂದುಕೊಂಡು ನನಗೆ ಬೇರೆ ಕೆಲಸ ಕೊಡಬೇಕೆಂದು 'ಕಂಪನಿ ಆರ್ಡರ್ಲಿ'ಯನ್ನು ಕೇಳಿದೆ. ಅವನು ಸಿಟ್ಟು ಬೆಂಕಿಯಾಗಿ,

"ನಾನು ಯಾವಾಗ ಬದಲಿಸುವೆನೋ ಆವಾಗ ಹೋಗಬೇಕು. ಅಲ್ಲಿಯತನಕ ಪಿಟ್ಟೆಂತ ಮಾತಾಡದೆ ಕೆಲಸ ಮಾಡಿಕೊಂಡಿರಬೇಕು," ಎಂದು ಹೇಳಿದ, ಒರಟು ಧ್ವನಿಯಲ್ಲಿ.

ಆ ಅಸಂಸ್ಕೃತ ಒರಟು ಮನುಷ್ಯನೊಡನೆ ವಾದ ಹಾಕುವದರಲ್ಲಿ ಅರ್ಥ ವಿರಲಿಲ್ಲ. ನಾನು ಸುಮ್ಮನಾದೆ.

ಈ ಅವಧಿಯಲ್ಲಿ ಅವನು ಅನೇಕ ಪೋಲೀಸರ ಕೆಲಸ ಬದಲಿಸಿದರೂ ನನ್ನದನ್ನು ಮಾತ್ರ ಬದಲಿಸಲಿಲ್ಲ. ನನ್ನ ಸರದಿ ಬರಬೇಕಾದರೆ ಇನ್ನೂ ಎಷ್ಟು ತಿಂಗಳು ಕಳೆಯಬೇಕಾಗಿದ್ದಿತೋ ಏನೊ. ನಾಲ್ಕು ತಿಂಗಳ ಅವಧಿಯಲ್ಲಿಯೆ ನಾನು ಬಹಳ ಇಳಿದುಹೋಗಿದ್ದೆ. ಆರು ಪೌಂಡುಗಳಷ್ಟು ತೂಕ ಕಳೆದು ಕೊಂಡಿದ್ದೆ. ಈ ನಾಲ್ಕು ತಿಂಗಳುಗಳ ಅವಧಿಯಲ್ಲಿ ಒಂದು ದಿನವೂ ವಿರಾಮವಾಗಿ ಕಳೆಯಲು ಸಾಧ್ಯವಾಗಿರಲಿಲ್ಲ. ಆಗ ನಗರದ ಸಿನಿಮಾ ಮಂದಿರವೊಂದರಲ್ಲಿ ನ್ಯೂ ಥಿಯೆಟರ್ಸಿನವರ ಚಿತ್ರವೊಂದು ಪ್ರದರ್ಶಿತ ವಾಗುತ್ತಿತ್ತು. ನನ್ನ ಮೆಚ್ಚುಗೆಯ ನಟ-ಗಾಯಕ ಸೈಗಾಲ್ ಅಭಿನಯ. ಸೈಗಾಲ್ ಪಾತ್ರವಹಿಸಿದ ಒಂದು ಚಿತ್ರವನ್ನೂ ನಾನು ನೋಡದೆ ಬಿಟ್ಟಿರಲಿಲ್ಲ. ಆದರೆ, ಆ ಹೊಸ ಚಿತ್ರಕ್ಕೆ ಹೋಗಲು ಮಾತ್ರ ಅವಕಾಶ ಲಭಿಸಲಿಲ್ಲ. ಅದರಿಂದಾಗಿ ನನಗಾದ ವ್ಯಸನ ಅಷ್ಟಿಷ್ಟಲ್ಲ.

ಅದು ಮಳೆಗಾಲದ ಮಧ್ಯಭಾಗ. ಒಂದೊಂದು ದಿನ ಬೆಳಿಗ್ಗೆ ಆರಂಭವಾದ ಮಳೆ ರಾತ್ರಿಯವರೆಗೂ ಬಿಟ್ಟುಬಿಡದೆ ಸೆಳೆಯುತ್ತಿತ್ತು. ಅಂಥ ಮಳೆಯಲ್ಲಿಯೂ ಕೊಡೆ ಹಿಡಿದುಕೊಂಡು ನಾವು ನಮ್ಮ 'ಡ್ಯೂಟಿ'ಯ ಸ್ಥಳದಲ್ಲಿ ಶಿಲಾಪ್ರತಿಮೆ ಯಂತೆ ನಿಂತುಕೊಂಡಿರಬೇಕಾಗುತ್ತಿತ್ತು. ಪೋಲೀಸು ಸಿಪಾಯಿಯ ಕರ್ತವ್ಯದ ಕಠೋರತೆಯ ಅರಿವು ನನಗಾಗ ಆಗುತ್ತಿತ್ತು.

ಒಂದು ದಿನ ಮಳೆಯಲ್ಲಿ ತೋಯಿಸಿಕೊಂಡುದರಿಂದ ನನಗೆ ಶೀತವಾಗಿ ಜ್ವರವೇರಿತು. ಕ್ವಿನೈನ್ ಮಾತ್ರೆ ನುಂಗಿ ಕಾಲ ತಳ್ಳಿದೆ. ಜ್ವರವೇನೂ ತೊಲಗಲಿಲ್ಲ. ಅಂಥ ಜ್ವರವಿದ್ದಾಗಲೂ 'ಡ್ಯೂಟಿ'ಗೆ ಹೋಗಿ ಮಳೆಯಲ್ಲಿ ನಿಂತುಕೊಳ್ಳಬೇಕಾಗುತ್ತಿತ್ತು. ಒಂದು ದಿನ ಮುಂಜಾನೆ ಹಾಸಿಗೆ ಬಿಟ್ಟು ಏಳುವುದಕ್ಕೂ ಸಾಧ್ಯವಾಗಲಿಲ್ಲ. ಮೈಯಲ್ಲಿ ಭಾರಿ ಜ್ವರ. ಪೂರಾ ನಿಶ್ಶಕ್ತಿ. ಹೇಗೋ ಎದ್ದು ಕಾಲೆಳೆದುಕೊಂಡು 'ಕಂಪನಿ ಆರ್ಡರ್ಲಿ'ಯ ಮನೆಯವರೆಗೂ ಹೋಗಿ ನನ್ನ ಸ್ಥಿತಿಯನ್ನು ತಿಳಿಸಿದೆ. ಆ ಮಹಾರಾಯನಿಗೆ ಕರುಣೆ, ಕನಿಕರ, ದಯೆ ಯಾವುದೂ ಇರಲಿಲ್ಲ.

"ಡ್ಯೂಟಿಗೆ ಹೋಗುವದು ಇನ್ನರ್ಧ ತಾಸು ಅದೆ. ಈಗ ನಾನು ಬ್ಯಾರೆ

ಯಾರನ್ನು ಹುಡುಕಲಿ? ಇದೊಂದು ದಿವಸ ಹೋಗಿ ಬಾ. ನಾಳೆಗೆ ಜ್ವರ ಅದೆಯೊ ಇಲ್ಲವೋ ನೋಡಿ ದವಾಖಾನೆಗೆ ಕಳಿಸುತ್ತೇನೆ," ಎಂದು ಹೇಳಿದವನೆ ಬಾಗಿಲು ಬಡೆದುಕೊಂಡು ಒಳಗೆ ಹೋಗಿಬಿಟ್ಟ. ನಾನೂ ಮತ್ತೆ ಮಾತನಾಡದೆ ಕೋಣೆಗೆ ಬಂದು ಸಮವಸ್ತ್ರ ಧರಿಸಿ 'ಡ್ಯೂಟಿ'ಗೆ ಬಂದೆ, ನನಗಾಗಿ ಗೊತ್ತು ಪಡಿಸಿದ್ದ ಸ್ಥಳದಲ್ಲಿ ನಿಂತುಕೊಂಡೆ. ನಾನಿದ್ದುದೆಲ್ಲಿ, ಮಾಡುತ್ತಿದ್ದುದೇನು ಎಂಬುದರ ಅರಿವೂ ನನಗಾಗಿರಲಿಲ್ಲ. ಮೈಯಲ್ಲಿ ಜ್ವರ ಕುದಿಯುತ್ತಿದ್ದಾಗ ನಾನು ಅಲ್ಲಿ ನಿಂತುಕೊಂಡುದಾದರೂ ಹೇಗೆ ಎಂದು ನನಗೀಗ ಸೋಜಿಗ. ಅಂದು ಮಧ್ಯಾಹ್ನ ಊಟಕ್ಕೆ ಹೋಗಲಿಲ್ಲ. ರಾತ್ರಿ ಹತ್ತು ಗಂಟೆಗೆ ಮನೆಗೆ ಬಂದು ಮಲಗಿದೊಡನೆ ಜ್ವರ ಭಯಂಕರವಾಗಿ ಕುದಿಯತೊಡಗಿತು. ಕೋಣೆಯಲ್ಲಿದ್ದವನು ನಾನೊಬ್ಬನೇ. ಯಾರನ್ನೂ ಕರೆಯುವಂತಿರಲಿಲ್ಲ. ನನ್ನ ತಾಯಿಯನ್ನು ಜ್ಞಾಪಿಸಿಕೊಂಡೆ, ತಮ್ಮಂದಿರನ್ನು ಜ್ಞಾಪಿಸಿಕೊಂಡೆ, ಅಸಹಾಯನಾಗಿ ಕಂಬನಿಗರೆದೆ.

ಬೆಳಗಾಗುತ್ತಲೂ ಕಂಬಳಿಯಲ್ಲಿ ಮೈಮುಚ್ಚಿಕೊಂಡು ಮತ್ತೆ 'ಕಂಪನಿ ಆರ್ಡರ್ಲಿ'ಯ ಮನೆಗೆ ಹೋದೆ. ಗಡಗಡನೆ ನಡುಗುತ್ತಿದ್ದ ನನ್ನನ್ನು ಕಂಡರೂ ಅವನ ಹೃದಯ ಕರಗಲಿಲ್ಲ.

"ನಿನ್ನೆ ರಾತ್ರೀನೇ ಬಂದು ಯಾಕೆ ತಿಳಿಸಲಿಲ್ಲ ನನಗೆ?"

"ಮುಂಜಾನೆ ಬಾ ಅಂತ ನೀವು ಹೇಳಿದ್ದಿರಿ."

"ಸುಮ್ಮನೆ ಇಲ್ಲದ್ದೊಂದು ಹೇಳಬೇಡ. ಬಾಯಿ ಮುಚ್ಚಿಕೊಂಡು ಡ್ಯೂಟಿಗೆ ಹೋಗು."

"ನನ್ನಿಂದ ಶಕ್ಯವೇ ಇಲ್ಲ. ಎರಡು ದಿನದಿಂದ ಭಯಂಕರ ಜ್ವರ. ಊಟವೂ ಇಲ್ಲ. ನಡೆದಾಡುವದೂ ಸಹ ಸಾಧ್ಯವಿಲ್ಲ. ದವಾಖಾನೆಗೆ ಚೀಟಿ ಕೊಡಿರಿ."

"ಮಧ್ಯಾಹ್ನದವರೆಗಾದರೂ ಡ್ಯೂಟಿ ಮಾಡಿ ಬಾ. ಆಮೇಲೆ ಕೊಡುತ್ತೇನೆ," ಎಂದವನೆ ಅವನು ಮುನ್ನಾದಿನದಂತೆ ಬಾಗಿಲು ಮುಚ್ಚಿಕೊಂಡು ಹೊರಟುಹೋದ.

ಆ ಕಟುಕನ ಮುಂದೆ ಅತ್ತುಕೊಂಡರೂ ಅವನ ಮನಸ್ಸು ಬದಲಾಗುವುದಿಲ್ಲವೆಂದು ತಿಳಿದು ನಾನು ನೇರವಾಗಿ ಫೌಜದಾರರ ಮನೆಗೆ ಬಂದೆ.

ಅವರಿನ್ನೂ ಹಾಸಿಗೆ ಬಿಟ್ಟು ಎದ್ದಿರಲಿಲ್ಲ. ಕಂಬಳಿ ಮುಸುಕು ಬಿಗಿದುಕೊಂಡು ಅಂಗಳದಲ್ಲಿ ಕುಳಿತುಕೊಂಡಿದ್ದೆ. ಎಂಟು – ಹತ್ತು ನಿಮಿಷ ಕಳೆದ ಬಳಿಕ ಫೌಜದಾರರು ಎದ್ದು ಹೊರಗಡೆ ಬಂದವರು ನನ್ನನ್ನು ಕಂಡು, "ಯಾಕಪ್ಪಾ, ಏನಾಯಿತು ?" ಎಂದು ವಿಚಾರಿಸಿದರು. ನಾನು ಎಲ್ಲವನ್ನೂ ವಿವರಿಸುತ್ತಿದ್ದ ಹಾಗೇ 'ಕಂಪನಿ ಆರ್ಡರ್ಲಿ' ಯ ಸವಾರಿ ಅಲ್ಲಿಗೂ ಆಗಮಿಸಿತು.

"ಇವನಿಗೆ ಜಡ್ಡಾಗಿಲ್ಲ, ಏನಿಲ್ಲ. ಎಲ್ಲಾ ಸುಳ್ಳು ರಾವ್‌ಸಾಹೇಬರೆ. ಡ್ಯೂಟಿ ಬದಲಿಸಬೇಕಂತ ಇವ ನನ್ನನ್ನು ಕೇಳಿದ್ದ. ನಾನು ಬದಲಿಸಲಿಲ್ಲ ಅಂತ ಈಗ ಜಡ್ಡಿನ ಸೋಗು ಹಾಕಿದ್ದಾನೆ," ಎಂದು ಅವನು ಹೇಳುತ್ತಲೂ ನನಗೆ ಭಯಂಕರ ಕೋಪ ಬಂತು. ಆದರೆ ಆಗ ಏನನ್ನೂ ಮಾಡುವ ಹಾಗಿರಲಿಲ್ಲ.

ಫೌಜದಾರರು ನನ್ನ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದರು. ನನ್ನ ಮೊದಲಿನ ಮುಖಚರ್ಯೆಗೂ ಆಗಿನ ಮುಖಚರ್ಯೆಗೂ ಮನಸ್ಸಿನಲ್ಲಿಯೆ ತುಲನೆ ಮಾಡಿಕೊಂಡಿರಬೇಕು. ತಮ್ಮ ಮನೆಯಲ್ಲಿದ್ದ ಥರ್ಮಾಮಿಟರ್ ತಂದು ನನ್ನ ಜ್ವರವನ್ನಳೆದು ನೋಡಿದರು. ಬೆಳಗಿನ ಆ ತಂಪಿನಲ್ಲಿ ೧೦೨ ಡಿಗ್ರಿ ಗಳಷ್ಟು ಜ್ವರವಿದ್ದುದು ಗೊತ್ತಾಗುತ್ತಲೂ ಫೌಜದಾರರಿಗೆ ನನ್ನ ಮಾತು ಮನವರಿಕೆಯಾಯಿತು. 'ಕಂಪನಿ ಆರ್ಡರ್ಲಿ' ಯ ಕ್ರೂರತನವೂ ಅವರಿಗೆ ಗೊತ್ತಾಯಿತು. ನನ್ನ ಮನೆಯಲ್ಲಿ ಬೇರಾರೂ ಇಲ್ಲದಾಗ ಅಂಥ ಜ್ವರದಲ್ಲಿಯೆ ನಾನೊಬ್ಬನೆ ಬಿದ್ದುಕೊಂಡದ್ದನ್ನೂ ಡ್ಯೂಟಿಗೆ ಹೋದದ್ದನ್ನೂ ನನ್ನಿಂದ ಕೇಳಿ ತಿಳಿದುಕೊಂಡಾಗ ಫೌಜದಾರರಿಗೆ ಬಹಳ ವ್ಯಸನವಾಗಿ, 'ಕಂಪನಿ ಆರ್ಡರ್ಲಿ' ಯನ್ನು ತಿರಸ್ಕಾರದಿಂದ ದಿಟ್ಟಿಸುತ್ತಾ ನನಗೆ 'ಸಿಕ್ – ಮೆಮೊ' (ಆಸ್ಪತ್ರೆಗೆ ಸೇರಲು ಚೀಟಿ) ಕೊಟ್ಟು ಕಳಿಸಿದರು. ಅವರನ್ನು ಮನಸ್ಸಿನಲ್ಲಿಯೆ ವಂದಿಸುತ್ತ ಆಸ್ಪತ್ರೆಗೆ ಬಂದೆ. ಡಾಕ್ಟರರು ನನ್ನನ್ನು ಪರೀಕ್ಷಿಸಿ, ಅಲ್ಲಿಯೆ ಇರಲು ತಿಳಿಸಿದರು.

ಸರಿ. ಆಸ್ಪತ್ರೆಯ ಮಂಚದ ಮೇಲೆ ಬಿದ್ದುಕೊಂಡುದಾಯಿತು. ನರ್ಸ್ ಬಂದಳು, ನನ್ನ ಮೈತುಂಬಾ ರಗ್ಗು ಹೊದಿಸಿ ನನಗೆ ಔಷಧಿ ಕುಡಿಸಿದಳು.

ಜ್ವರವಿಳಿಯಲಿಲ್ಲ; ಸಾಯಂಕಾಲದೊಳಗಾಗಿ ೧೦೪ ಡಿಗ್ರಿಗಳ ವರೆಗೂ ಏರಿತು. ಮತ್ತೆ ಡಾಕ್ಟರು ಬಂದರು, ಮತ್ತೆ ನನ್ನನ್ನು ಪರೀಕ್ಷಿಸಿದರು, 'ಚಾರ್ಟ'ನ ಮೇಲೆ ಬರೆದರು.

"ಇಂಜಕ್ಶನ್ ಕೊಡಬೇಕಾಗುತ್ತದೆ. ಅದಕ್ಕೆಲ್ಲ ಖರ್ಚು ಬರುತ್ತದೆ," ಎಂದರು ಡಾಕ್ಟರ್.

"ಎಷ್ಟಾಗುತ್ತದೆ ಡಾಕ್ಟರ್ ಸಾಹೇಬ್?"

"ಮೂರು ರೂಪಾಯಿ."

ನನ್ನ ಜೇಬಿನಲ್ಲಿ ಐದಾರು ರೂಪಾಯಿಗಳಿದ್ದವು. ಮೂರು ರೂಪಾಯಿ ತೆಗೆದು ಅವರ ಕೈಗಿತ್ತೆ. ಅಂದು ರಾತ್ರೆಯಿಡೀ ಭಯಂಕರವಾಗಿ ಜ್ವರ ಬಾರಿಸುತ್ತಿತ್ತು. ಮತ್ತೆ ತಾಯಿ ತಮ್ಮಂದಿರ ನೆನಹು. ಆ ನರ್ಸ್ ಒಳ್ಳೆಯವಳಾಗಿದ್ದುದೊಂದು ನನ್ನ ಸುದೈವ. ಆಸ್ಪತ್ರೆಯ ರಗ್ಗು ಸಾಲದೆ ನಡುಗುತ್ತಿದ್ದ ನನ್ನ ಮೇಲೆ ಇನ್ನೊಂದು ರಗ್ಗು ತಂದು ಹೊದಿಸಿದಳು ಪುಣ್ಯವಂತೆ. ಹಿಂದಿನ ಜನ್ಮದಲ್ಲಿ ಇವಳೇ ನನ್ನ ತಾಯಿಯಾಗಿದ್ದಳೇನೊ ಎಂದು ಯೋಚಿಸುತ್ತಾ ನಿದ್ದೆಯಿಲ್ಲದೆ ಇರುಳನ್ನು ಕಳೆದೆ.

ಬೆಳಗಾಯಿತು. ನಿತ್ಯದ ವೇಳೆಗೆ ಡಾಕ್ಟರು ಬಂದು ನನ್ನನ್ನೂ ಪರೀಕ್ಷಿಸಿ ನೋಡಿ, ಚಾರ್ಟಿನ ಮೇಲೆ ಟಿಪ್ಪಣಿ ಬರೆದು, ಇಂಜಕ್ಶನ್ ಕೊಟ್ಟರು. ಇಂಜಕ್ಶನ್ನಿನ ಔಷಧವನ್ನು ಆಸ್ಪತ್ರೆಯಿಂದಲೇ ಒದಗಿಸಿದ್ದುದಾಗಿ ನನ್ನ 'ಚಾರ್ಟಿ'ನ ಮೇಲೆ ಬರೆದರು.

ಹಾಗೇ ಒಂದು ವಾರ ಕಳೆಯಿತು. ಜ್ವರ ಮಾತ್ರ ಇಳಿಯಲಿಲ್ಲ. ಆ ಅವಧಿಯಲ್ಲಿ ನನಗೆ ಮೂರುಬಾರಿ ಸೂಜಿಮದ್ದು ಕೊಟ್ಟು ನನ್ನಿಂದ ಪ್ರತಿಸಲವೂ ಮೂರು ರೂಪಾಯಿ ಕಿತ್ತುಕೊಂಡಿದ್ದರು. ನನ್ನಿಂದ ಅವರಿಗೆ ಒಟ್ಟು ಒಂಭತ್ತು ರೂಪಾಯಿ ಲಾಭವಾಗಿತ್ತು. ೧೯ ರೂಪಾಯಿ ಸಂಬಳದ ಬಡಪೋಲೀಸರನ್ನು ಸುಲಿಯುವ ಆ ಡಾಕ್ಟರನ್ನು ಕಂಡು ನನಗೆ ಒಳಗೇ ತಳಮಳವಾಗುತ್ತಿತ್ತು. ನಾನೊಬ್ಬ ಸರಕಾರಿ ನೌಕರ. ನನಗೇ ಇವರು ಹೀಗೆ ಮಾಡುವರೆಂದ ಬಳಿಕ ಇನ್ನುಳಿದ ಬಡವರನ್ನು ಹೀಗೆ ನಡಸಿಕೊಳ್ಳುತ್ತಿರಬಹುದು? ಇಂಥ ಡಾಕ್ಟರರ ಕೈಯಲ್ಲಿ ಅವರೆಲ್ಲ ಸತ್ತುಹೋಗುತ್ತಿರಲು ಸಾಕು....

ಆ ವೇಳೆಗಾಗಲೇ ನರ್ಸಿನೊಂದಿಗೆ ವಿಶೇಷ ಸಲಿಗೆ ಬೆಳೆದಿತ್ತು. ಮನಸ್ಸಿನಲ್ಲಿ ಕುದಿಯುತ್ತಿದ್ದ ಈ ವಿಚಾರಗಳಲ್ಲಿ-ತಡೆ ಹಿಡಿಯಲಾರದೆ ಒಂದು ದಿನ ಅವಳ ಹತ್ತಿರ ಪ್ರಸ್ತಾಪಿಸಿದೆ ಅವಳು ಗಾಬರಿಗೊಂಡು, ಅತ್ತಿತ್ತ ದೃಷ್ಟಿ ಹೊರಳಿಸುತ್ತಾ ಮೆಲ್ಲಗಿನ ಧ್ವನಿಯಲ್ಲಿ ಹೇಳಿದಳು:

" ಇಂಥಾದೆಲ್ಲ ಇಲ್ಲಿ ರೂಢಿಯಾಗಿ ಹೋಗಿದೆ. ಅದನ್ನೆಲ್ಲಾ ಬಾಯಿ ಬಿಟ್ಟು ಆಡಬಾರದು. ನಾನು ನಿಮ್ಮ ಸಂಗಡ ಇಂಥ ಸಂಗತಿ ಮಾತಾಡಿದರೆ ನನ್ನ ನೌಕರಿಗೂ ಕಲ್ಲು ಬಿದ್ದೀತು."

ನಾನು ಅಷ್ಟಕ್ಕೇ ಸುಮ್ಮನಾದೆ – ನನ್ನ ಗುಣವಾದ ಬಳಿಕ ಡಾಕ್ಟರನ್ನೇ ಕೇಳಿದರಾಯಿತೆಂದು.

ಒಂದು ದಿನ ಆಸ್ಪತ್ರೆಗೆ ಬಂದಿದ್ದ ನಮ್ಮ ಫೌಜದಾರರು ನನ್ನ ಬಳಿ ಬಂದು ಮಾತನಾಡಿಸಿದರು. ಜ್ವರವೇನೋ ಕೊಂಚ ಕಡಮೆಯಾಗಿದ್ದಿತಾದರೂ ನಾನು ಬಹಳ ನಿತ್ರಾಣನಾಗಿದ್ದೆ. ಊಟವಂತೂ ಇರಲೇ ಇಲ್ಲ. ಆಸ್ಪತ್ರೆಯ ಬ್ರೆಡ್ – ಹಾಲು ಅಷ್ಟೇ ಸಿಕ್ಕುತ್ತಿತ್ತು. ಅನ್ನವನ್ನುಣ್ಣಲು ಆರಂಭಿಸಬೇಕೆಂದು ಹೇಳಿ ಫೌಜದಾರರು ಹೊರಟುಹೋದರು. ಆದರೆ, ಭೋಜನಾಲಯದಿಂದ ನನಗೆ ಅನ್ನ ತಂದು ಕೊಡುವವರಾದರೂ ಯಾರು? ಆ ನಗರದಲ್ಲಿ ನನಗೆ ಆಪ್ತೇಷ್ಟರಿರಲಿಲ್ಲ. ಗೆಳೆಯರಾಗಿದ್ದವರೆಲ್ಲ ನನ್ನಂತೆಯೆ ಪೋಲೀಸರು. ಅವರ 'ಡ್ಯೂಟಿ'ಯ ಗದ್ದಲದಲ್ಲಿ ನನ್ನ ಕಡೆ ಲಕ್ಷ್ಯಕೊಡಲು ಅವರಿಗೂ ಅವಕಾಶ ಸಿಕ್ಕುವಂತಿರಲಿಲ್ಲ.

ನನ್ನ ಪೀಕಲಾಟವನ್ನು ನರ್ಸಿನೆದುರು ತೋಡಿಕೊಂಡೆ. ಡಾಕ್ಟರರೊಡನೆ ಮಾತನಾಡಿ ಹೊರಗಡೆ ತಿರುಗಾಡಲು ಒಪ್ಪಿಗೆ ಪಡೆಯಬೇಕೆಂದೂ ಹಾಗೇ ಭೋಜನಾಲಯಕ್ಕೆ ಹೋಗಿ ಊಟಮಾಡಿ ಬರಬಹುದೆಂದೂ ಅವಳು ಸೂಚಿಸಿದಳು. ನಾನು ಕೇಳಿದೊಡನೆಯೆ ಡಾಕ್ಟರೂ ಒಪ್ಪಿಗೆಯಿತ್ತರು. ಅನ್ನ ಸಿಗತೊಡಗಿದ ತರುವಾಯ ಸ್ವಲ್ಪ ಸ್ವಲ್ಪವಾಗಿ ಚೇತರಿಸಿಕೊಳ್ಳತೊಡಗಿದೆ. ಆಸ್ಪತ್ರೆಯಿಂದ ನನ್ನನ್ನು ಬಿಡುಗಡೆಮಾಡಿ ಎಂಟು ದಿನ ರಜೆ ಕೊಡಬೇಕೆಂದು ಡಾಕ್ಟರರನ್ನು ಕೇಳಿಕೊಂಡೆ. ಅವರು ನನ್ನನ್ನು ಬಿಡುಗಡೆ ಮಾಡಲು ಒಪ್ಪಿದರೂ ರಜೆ ಮಾತ್ರ ಸಿಗಲಾರದೆಂದು ಹೇಳಿದರು. ಅವರ ಬಗ್ಗೆ ಬಹಳ ದಿನಗಳಿಂದ ಮುನಿದುಕೊಂಡಿದ್ದ ನಾನು ಆಗ ನನ್ನ ಸಿಟ್ಟೆಲ್ಲವನ್ನೂ ಹೊರಹಾಕಿ, ಸಿವಿಲ್ ಸರ್ಜನರ ಹತ್ತಿರ ಹೋಗಿ, ಇಂಜಕ್ಶನ್ನಿಗಾಗಿ ರೂಪಾಯಿ ತಿನ್ನುವ ಹೇಸಿತನದ ಸಂಗತಿಯನ್ನೆಲ್ಲ ತಿಳಿಸಿಬಿಡುವುದಾಗಿ ಹೇಳಿದೆ. ಡಾಕ್ಟರರು ಕಿಡಿಕಿಡಿಯಾಗಿ ತಕ್ಷಣ ನನ್ನನ್ನು ಬಿಡುಗಡೆ ಮಾಡಿದರು. ರಜೆ ಮಾತ್ರ ದೊರೆಯಲಿಲ್ಲ.

ಕಚೇರಿಗೆ ಬಂದ ನನ್ನನ್ನು ಕಂಡು, " ಇನ್ನೂ ಮೈಯಲ್ಲಿ ಶಕ್ತಿ ಬಂದಿಲ್ಲ. ಈಗಲೇ ಯಾಕೆ ಒಂದೆ ದವಾಖಾನೆಯಿಂದ?" ಎಂದರು ಫೌಜದಾರರು.

ಆಸ್ಪತ್ರೆಯಲ್ಲಿ ನಡೆದುದನ್ನೆಲ್ಲ ನಾನು ವಿವರಿಸಿ ಹೇಳುತ್ತಲೂ ಅವರಿಗೆ ಕಸಿಕರ ಬಂದಿರಬೇಕು.

"ಈಗಲೇ ಡ್ಯೂಟಿಗೆ ಹೋಗಬೇಡ. ಎಂಟು ದಿವಸ ವಿಶ್ರಾಂತಿ ತೆಗೆದುಕೋ. ಮೈಯಲ್ಲಿ ಶಕ್ತಿ ಬರಲಿ. ನಡೆ ಈಗ ಮನೆಗೆ. ಗಾಳಿಯಲ್ಲಿ ಹೊರಗಡೆ ತಿರುಗಾಡಬೇಡ," ಎಂದರು ಫೌಜದಾರರು.

ನಾನು ಕೋಣೆಗೆ ಬಂದು ಇನ್ನೂ ಐದು ನಿಮಿಷ ಕಳೆದಿರಲಿಲ್ಲ – ಬಂದೇ ಬಿಟ್ಟಿತು 'ಕಂಪನಿ ಆರ್ಡರ್ಲಿ'ಯ ಸವಾರಿ. ನನಗೆ ಪೂರ್ಣ ಗುಣವಾಗಿದೆಯೇ, ಮೈಯಲ್ಲಿ ಶಕ್ತಿ ಬಂದಿದೆಯೇ ಎಂದೇನೂ ಅವನು ಕೇಳಲಿಲ್ಲ. ತಕ್ಷಣ 'ಡ್ಯೂಟಿ'ಗೆ ಹೋಗಬೇಕೆಂದು 'ಹುಕುಂ' ಮಾಡಿದ. ನಾನು ಫೌಜದಾರರ 'ಹುಕುಂ' ತಿಳಿಸಿ ಹೇಳುತ್ತಲೂ ಅವನಿಗೆ ಮುಖಭಂಗವಾದಂತಾಯಿತು. ನನ್ನ ಮೇಲೆ ಬೆಂಕಿ ಕಾರುತ್ತಾ ಹೊರಟು ಹೋದ.

ಒಂದು ವಾರ ಕಳೆದ ತರುವಾಯ ಎದ್ದು 'ಡ್ಯೂಟಿ'ಗೆ ಹೋಗಬೇಕಾಯಿತು. ಆ ದಿನ ವರದಿಯೊಪ್ಪಿಸಲು ಹೋಗಿದ್ದಾಗ ಫೌಜದಾರರು ನನ್ನನ್ನು ನೋಡಿ, ನಾನಿನ್ನೂ ಅಶಕ್ತನಾಗಿದ್ದುದನ್ನು ಗಮನಿಸಿ ನನ್ನ 'ಡ್ಯೂಟಿ' ಬದಲಿಸಲು ಆಜ್ಞೆ ವಿಧಿಸಿದರು.

೧೨

ಚಪರಾಸಿಯಾಗಿ ಗುಮಾಸ್ತೆಯಾದುದು

ಪೋಲೀಸ್ ಕಚೇರಿಯಲ್ಲಿದ್ದು 'ಪಹರೆ' (ಕಾವಲು) ಮಾಡುವ ಕೆಲಸ ನನ್ನ ಪಾಲಿಗೆ ಬಂತು. ಚೌಕದಲ್ಲಿ ನಿಲ್ಲುವ ಕೆಲಸದಷ್ಟು ತ್ರಾಸದಾಯಕವಾದು ದಲ್ಲ ಪಹರೆಯ ಕೆಲಸ. ಯಾವಾಗಲೂ ಕಚೇರಿಯಲ್ಲಿರುವುದು, ಮೇಲಿನವರು ಹೇಳಿದ ಕೆಲಸಗಳನ್ನೆಲ್ಲ ಮಾಡುವುದು. ಕಚೇರಿಯ ಗುಮಾಸ್ತೆಗಳಿಗೂ ಫೌಜ ದಾರರಿಗೂ ಚಹ ಬೇಕಾದಾಗ ಅಂಗಡಿಗೆ ಹೋಗಿ ಹೇಳಿಬರುವುದು. ಅವರಿಗೆ ಬೇಕಾಗುವ ಸಿಗರೇಟು, ಬೀಡಿ, ಎಲೆಯಡಕೆ ತಂದುಕೊಡುವುದು. ಒಟ್ಟಾರೆ ಅದು ಚಪರಾಸಿಯ ಕೆಲಸವೆಂದು ಹೇಳಬಹುದು. ಮ್ಯಾಟ್ರಿಕ್ ಪಾಸು ಮಾಡಿದ ನಾನು ಅಂಥ ಕೆಲಸ ಮಾಡಬೇಕಾಗಿ ಬಂದಿತಲ್ಲಾ ಎಂದು ವ್ಯಸನವಾಗುತ್ತಿದ್ದಿ ತಾದರೂ, ಯಾವಾಗಲೂ ಬಿಸಿಲಲ್ಲಿ ಮಳೆಯಲ್ಲಿ ನಿಂತುಕೊಳ್ಳುವ ಕಷ್ಟ ತಪ್ಪಿ ದುದಕ್ಕಾಗಿ ಸ್ವಲ್ಪ ಸಮಾಧಾನವೂ ಆಗಿತ್ತು ನನಗೆ.

ಕಚೇರಿಯ ಕಾರಕೂನರೊಂದಿಗೆ ಪರಿಚಯ ಬೆಳೆದ ಹಾಗೆ ನಾನು ಅವರ ಹತ್ತಿರ ಹೋಗಿ ಕುಳಿತು, ನನಗೂ ಏನಾದರೂ ಬರೆಯುವ ಕೆಲಸ ಕೊಡುವಂತೆ ಕೇಳಿಕೊಳ್ಳುತ್ತಿದ್ದೆ. ಅವರಾರೂ ನನ್ನ ಮಾತನ್ನು ಗಮನಿಸುತ್ತಿರಲಿಲ್ಲ. ನಾನೂ ಹಿಡಿದ ಪಟ್ಟು ಬಿಡಲಿಲ್ಲ. ಅವರು ಮಾಡುವ ಕೆಲಸವನ್ನೆಲ್ಲ ನಿರೀಕ್ಷಿಸುತ್ತ ಅವರ

ರಹಸ್ಯಗಳನ್ನೂ ತಿಳಿದುಕೊಳ್ಳತೊಡಗಿದೆ. ನಾನು ಕೆಲಸ ಕಲಿತುಕೊಂಡರೆ ತಾವು ಕಚೇರಿ ಬಿಟ್ಟು ಹೊರಡಬೇಕಾದೀತು, ಎಂಬ ಭಯವಿದ್ದ ಹಾಗಿತ್ತು ಕೆಲವರಿಗೆ. ಆದರೂ ನನ್ನ ಕಾಟಕ್ಕೆ ಬೇಸರಪಟ್ಟುಕೊಂಡು ಕಾಗದ ಪತ್ರಗಳನ್ನು ನಕಲು ಮಾಡುವ ಕೆಲಸವನ್ನು ನನಗೆ ಕೊಡತೊಡಗಿದರು. ನಾನು ಅತ್ಯುತ್ತಮವಾಗಿ ನಕಲು ತೆಗೆದುಕೊಡುತ್ತಿದ್ದೆ.

ಅದು 'ಕ್ರೈಂ ಬ್ರ್ಯಾಂಚ್', ಎಂದರೆ ಅಪರಾಧಗಳ ಶಾಖೆ. ಅದರ ಮುಖ್ಯಾಧಿಕಾರಿಗೆ "ಕ್ರೈಂ ಕಾರಕೂನ" ಎಂದು ಸಂಬೋಧಿಸಲಾಗುತ್ತದೆ. ಅವರಿಗೆ ಇನ್ನಿಬ್ಬರು ಸಹಾಯಕರಿರುತ್ತಾರೆ. ನಾನು ಕಚೇರಿಯ ಕೆಲಸಕ್ಕೆ ಸೇರಿದಾಗ ಅಲ್ಲಿದ್ದ ಕ್ರೈಂ ಕಾರಕೂನರ ಹೆಸರು ಅಹಮ್ಮದಸಾಹೇಬ್ ಎಂದಿತ್ತು. ಅವರ ಸಹಾಯಕರಾಗಿದ್ದ ಸದಾಶಿವಪ್ಪನವರು ಹವಲ್ದಾರ್ ದರ್ಜೆಯವರು. ಇಂಗ್ಲಿಷ್ ಕಾಗದ ಪತ್ರಗಳ ವ್ಯವಹಾರವನ್ನೆಲ್ಲ ಅವರೇ ನೋಡಿಕೊಳ್ಳುತ್ತಿದ್ದರು. ಟೈಪ್ ಮಾಡುವ ಕೆಲಸವೂ ಅವರ ಪಾಲಿಗೇ ಬಂದಿತ್ತು. ಕಚೇರಿಯಲ್ಲಿನ ಇತರರಿಗೆ ಟೈಪಿಂಗ್ ಬರುತ್ತಿರಲಿಲ್ಲ.

ಒಂದು ದಿನ ಸದಾಶಿವಪ್ಪನವರ ದೇಹಸ್ಥಿತಿ ಕೆಟ್ಟುಹೋಗಿ ಬಹಳ ನಿಶ್ಶಕ್ತಿಯಾಗಿತ್ತು. ಅಂಥದರಲ್ಲಿಯೆ ಅವರು ನಿಧಾನವಾಗಿ ಟೈಪ್ ಮಾಡುತ್ತ ಕುಳಿತಿದ್ದುದನ್ನು ಕಂಡು ನಾನು ಅವರ ಹತ್ತಿರ ಹೋಗಿ, "ನಾನು ಮಾಡ್ತೀನಿ ಬಿಡಿರಿ," ಎಂದು ಅಂಜುತ್ತಂಜುತ್ತಾ ಹೇಳಿದೆ.

"ನಿನಗೆ ಟೈಪಿಂಗ್ ಬರುವದೇನು?"

"ಬರುತ್ತದೆ. ನಾನೂ ಕಲಿತಿದ್ದೇನೆ. ನೀವು ಹೇಳುತ್ತಾ ಹೋಗಿರಿ. ನಾನು ಮಾಡುತ್ತೇನೆ."

ಅವರೂ ಸಂತೋಷದಿಂದ ಒಪ್ಪಿಕೊಂಡರು. ಟೈಪ್‌ರೈಟರನ್ನು ಮುಂದಿಟ್ಟುಕೊಂಡು ಅವರು ಹೇಳಿದ ಹಾಗೆ ಟೈಪ್ ಹೊಡೆದುಕೊಟ್ಟೆ. ಸದಾಶಿವಪ್ಪನವರು ಅದನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ತಪ್ಪುಗಳಿಲ್ಲದುದನ್ನು ಕಂಡು ಆನಂದಿತರಾದರು.

"ಇನ್ನು ಮುಂದೆ ನೀನೇ ಟೈಪ್ ಮಾಡು ಶಿವಣ್ಣಾ."

ನಾನು ಸಂತೋಷದಿಂದ 'ಆಗಲಿ' ಎಂದೆ. ಪೇದೆಯ ಕೆಲಸದಿಂದ ಮುಕ್ತನಾದರೆ ಸಾಕಾಗಿತ್ತು ನನಗೆ.

ಅಂದಿನಿಂದ ಅವರ ನೇತೃತ್ವದಲ್ಲಿ, ಅಪರಾಧಗಳು ಸಂಭವಿಸಿದಾಗ ಬರೆಯ ಬೇಕಾದ ಡೈರಿ ವರದಿ ಮೊದಲಾದುವುಗಳನ್ನು ತಯಾರಿಸುವುದನ್ನು ಕಲಿತು ಕೊಂಡು ಒಂದು ತಿಂಗಳಿನಲ್ಲಿಯೆ ಅವರು ಮೆಚ್ಚುವಂತೆ ಕೆಲಸಮಾಡಲು ಸಮರ್ಥನಾದೆ. ಅದೇ ಸಮಯಕ್ಕೆ ಕ್ರೈಂ ಕಾರಕೂನರ ಸಹಾಯಕರಾಗಿದ್ದ ಇನ್ನೊಬ್ಬರಿಗೆ ಬೇರೊಂದು ಕಡೆ ವರ್ಗವಾಯಿತು. ಅವರ ಸ್ಥಳಕ್ಕೆ ಇನ್ನೊಬ್ಬನು ಬೇಕಲ್ಲವೆ? ಅದಕ್ಕಾಗಿ 'ಕಂಪನಿ ಆರ್ಡರ್ಲಿ'ಗೂ ಕಾರಕೂನರಿಗೂ 'ವಶೀಲಿ' ಗಳೇ 'ವಶೀಲಿ'ಗಳು. ಆ ಶಾಖೆಯಲ್ಲಿ ಸಿಕ್ಕುತ್ತಿದ್ದ ರೊಕ್ಕದ ಆಸೆಗಾಗೇ ಅಂಥ ಸ್ಪರ್ಧೆ. 'ಕಂಪನಿ ಆರ್ಡರ್ಲಿ'ಗೆ ಪ್ರತಿತಿಂಗಳೂ ೨೫ ರೂ. ಕೊಡುವುದಕ್ಕೂ ಸಿದ್ಧರಾಗಿ ಆ ಕೆಲಸಕ್ಕೆ ಬರಲು ಹಾತೊರೆಯುತ್ತಿದ್ದ ಜನರಿಗೂ ಕೊರತೆ ಯಿರಲಿಲ್ಲ.

ನನ್ನ ಕೆಲಸವನ್ನು ನೋಡಿ ಮೆಚ್ಚಿಕೊಂಡಿದ್ದ ಸದಾಶಿವಪ್ಪನವರು ಮಾತ್ರ ಆ ಸ್ಥಳಕ್ಕೆ ನನ್ನನ್ನೇ ಶಿಫಾರಸು ಮಾಡಿದರು. 'ಕಂಪನಿ ಆರ್ಡರ್ಲಿ'ಗೆ ಈ ಸುದ್ದಿ ತಿಳಿದೊಡನೆ ಅವನು ಭಯಂಕರವಾಗಿ ರೇಗಿ ನನ್ನನ್ನು ಕಚೇರಿಯಿಂದ ಸ್ಥಳಾಂತರಿಸಿ ಮೊದಲಿನ 'ಟ್ರಾಫಿಕ್ ಕಂಟ್ರೋಲ್ ಡ್ಯೂಟಿ'ಗೆ ನಿಯಮಿಸಿದ. ಅವನ ಆಜ್ಞೆಯನ್ನು ಮೀರುವಂತಿರಲಿಲ್ಲ. ಮರುದಿನ ನಾನು ಕಚೇರಿಗೆ ಬರ ದಿರಲು ಸದಾಶಿವಪ್ಪನವರು ನನ್ನ ಬಗ್ಗೆ ವಿಚಾರಿಸಿ ಎಲ್ಲವನ್ನೂ ತಿಳಿದುಕೊಂಡು 'ಕಂಪನಿ ಆರ್ಡರ್ಲಿ'ಗಿಂತಲೂ ಹೆಚ್ಚಾಗಿ ರೇಗಿದರು. ನಮ್ಮ ಫೌಜದಾರರದು ವಿಲಕ್ಷಣ ಧೋರಣೆ. ಕಚೇರಿಯ ಕಾಗದಪತ್ರಗಳ ಕೆಲಸವನ್ನೆಲ್ಲ ಸಮರ್ಥ ರೀತಿಯಿಂದ ನೋಡಿಕೊಳ್ಳಬಲ್ಲ ಸದಾಶಿವಪ್ಪನವರೂ ಅವರಿಗೆ ಬೇಕಾದವರು. ಅಂಥ ದೊಡ್ಡ ನಗರದಲ್ಲಿ, ನೂರಕ್ಕಿಂತ ಹೆಚ್ಚು ಮಂದಿ ಪೋಲೀಸರಿಂದ ಚಾಕ ಚಕ್ಯತೆಯಿಂದ ಕೆಲಸ ತೆಗೆದುಕೊಳ್ಳಬಲ್ಲ 'ಕಂಪನಿ ಆರ್ಡರ್ಲಿ'ಯೂ ಬೇಕಾ ದವರು. ಯಾರ ಮಾತು ಕೇಳಬೇಕೆಂಬುದೇ ಅವರಿಗೆ ತಿಳಿಯದಾಯಿತು.

ಸದಾಶಿವಪ್ಪನವರಿಗೂ 'ಕಂಪನಿ ಆರ್ಡರ್ಲಿ'ಗೂ ನನ್ನ ವಿಚಾರವಾಗಿ ವಾದವಿವಾದಕ್ಕಾರಂಭವಾಗಿ ತೀರ್ಮಾನಕ್ಕಾಗಿ ಫೌಜದಾರರೆದುರಿಗೆ ಆ ವಿಷಯ ಹೋಯಿತು. ನಾನು ಮಾಡುತ್ತಿದ್ದ ಕೆಲಸವನ್ನು ಫೌಜದಾರರೂ ನೋಡಿದ್ದರು.

ನಾನು ಕಚೇರಿಯಲ್ಲಿರುವುದೇ ಒಳ್ಳೆಯದೆಂದೂ ಅವರಿಗೂ ಮನವರಿಕೆಯಾಗಿತ್ತು. ಆದರೆ ಹಾಗೆಂದು 'ಕಂಪನಿ ಆರ್ಡರ್ಲಿ'ಗೆ ಸ್ಪಷ್ಟವಾಗಿ ಹೇಳುವ ಮನಸ್ಸೂ ಇರಲಿಲ್ಲ. ಅಂತೆಯೆ ಅವರು ಕೊಂಚ ಮೋಜಿನ ಉಪಾಯವನ್ನವಲಂಬಿಸಿ, ಕನ್ನಡ–ಇಂಗ್ಲಿಷ್ ಚೆನ್ನಾಗಿ ಬರೆಯಲು ಗೊತ್ತಿದ್ದು ಟೈಪ್ ಮಾಡಬಲ್ಲ ಸಿಪಾಯಿಯೊಬ್ಬನನ್ನು ಆ ಸ್ಥಳಕ್ಕೆ ನಿಯಮಿಸಿ ನನ್ನನ್ನು ಹೊರಗಿನ 'ಡ್ಯೂಟಿ'ಗೆ ಕಳಿಸಬಹುದೆಂದು 'ಕಂಪನಿ ಆರ್ಡರ್ಲಿ'ಗೆ ಹೇಳಿದರು. ತಂಟೆ ಬಗೆಹರಿದ ಹಾಗಾಯಿತು. ಆದರೆ ಟೈಪ್ ಮಾಡಬಲ್ಲ ಸಿಪಾಯಿ ಸಿಕ್ಕಬೇಕಲ್ಲ? ಎರಡು ದಿನಗಳವರೆಗೆ ಹುಡುಕಿ ನಿರಾಶನಾಗಿ 'ಕಂಪನಿ ಆರ್ಡರ್ಲಿ' ಫೌಜದಾರರ ಹತ್ತಿರ ಬಂದು ಹೇಳಿದ:

"ಮೊದಲು ಆ ಜಾಗದಲ್ಲಿದ್ದವಗೆ ಟೈಪಿಂಗ್ ಬರುತ್ತಿರಲಿಲ್ಲ ರಾವ್ ಸಾಹೇಬ್. ಇದೆಲ್ಲಾ ಆ ಶಿವಣ್ಣನ ಕಾರಭಾರ. ಸದಾಶಿವಪ್ಪನವರಿಗೆ ವಶೀಲಿ ಹಚ್ಚಿ ಅವರು ಹಟ ಹಿಡಿಯುವಂತೆ ಮಾಡಿದ್ದಾನೆ."

ಫೌಜದಾರರು ನನ್ನನ್ನು ಕರೆದು, "ಏನಪ್ಪಾ, ನೀನು ವಶೀಲಿ ಹಚ್ಚುವ ಕಾರಭಾರ ಮಾಡುತ್ತಿದ್ದೀಯಾ?" ಎಂದು ಕೇಳಿದರು.

"ಇಲ್ಲ ರಾವ್‌ಸಾಹೇಬ್. ನಾನೇನು ಯಾರಿಗೂ ಹೇಳಿಲ್ಲ. ನನ್ನನ್ನು ಯಾವ ಕೆಲಸಕ್ಕಾದರೂ ಹಾಕಬಹುದು," ಎಂದು ನಾನು ಉತ್ತರವಿತ್ತೆ.

ಕೊನೆಗೂ 'ಕಂಪನಿ ಆರ್ಡರ್ಲಿ'ಯೇ ಸೋತುಹೋದ. ಆ ಸ್ಥಳಕ್ಕೆ ನಾನೇ ಬರಬೇಕಾಯಿತು.

ತುಂಬಾ ಉತ್ಸಾಹದಿಂದ ನಾನು ಎಲ್ಲ ಕೆಲಸವನ್ನೂ ಕಲಿತುಕೊಳ್ಳ ತೊಡಗಿದೆ. ಸದಾಶಿವಪ್ಪನವರಿರದಿದ್ದರೂ ಎಲ್ಲವನ್ನೂ ನಡಸಿಕೊಂಡು ಹೋಗು ವಷ್ಟು ಸಮರ್ಥನಾದೆ ಒಂದೆರಡು ತಿಂಗಳಲ್ಲಿಯೆ. ದಿನಗಳೆದ ಹಾಗೆ ಸದಾಶಿವಪ್ಪ ನವರೂ ಎಲ್ಲ ಹೊಣೆಯನ್ನೂ ನನಗೊಪ್ಪಿಸಿ ತಾವು ನಾಲ್ಕೈದು ಸಲ ಚಹ ತರಿಸಿ ಕುಡಿಯುತ್ತಾ ಬೀಡಿ ಸೇದುತ್ತಾ ವಿರಾಮವಾಗಿ ಕಾಲ ತಳ್ಳತೊಡಗಿದರು. ಕಾರಕೂನರಾಗಿದ್ದ ಅಹಮ್ಮದ ಸಾಹೇಬರಿಗೂ ನನ್ನ ಬಗ್ಗೆ ಪ್ರೀತಿ ಯುಂಟಾಯಿತು. ನನ್ನ ಚುರುಕುತನ ಕಂಡು ಅವರೂ ಮೆಚ್ಚಿಕೊಂಡಿದ್ದರು.

ಎರಡು ತಿಂಗಳು ಹಾಗೆ ಕಳೆದ ಬಳಿಕ ಒಂದು ದಿನ ಅಹಮ್ಮದ ಸಾಹೇಬರು

ನನ್ನನ್ನು ಬಟ್ಟೆಯಂಗಡಿಗೆ ಕರೆದೊಯ್ದು ನಾಲ್ಕಾರು ಶರ್ಟು, ಎರಡು ಕೋಟು, ನಾಲ್ಕು ಪಾಯಜಮಾಗಳಿಗಾಗುವಷ್ಟು ಬಟ್ಟೆಯನ್ನೂ ಎರಡು ಜೊತೆ ದೋತರಗಳನ್ನೂ ಕೊಡಿಸಿ ತಾವೇ ಹಣ ಕೊಟ್ಟರು.

" ನೀವ್ಯಾಕೆ ಕೊಡ್ತೀರಿ ಸಾಹೇಬರೆ? ನನಗೇನು ಇದೆಲ್ಲಾ ಬೇಕಾಗಿಲ್ಲ. ನನ್ನ ಸಂಬಳವೆಷ್ಟು...." ಎಂದು ನಾನು ಧ್ವನಿಯೆತ್ತಿದಾಗ ಅಹಮ್ಮದ ಸಾಹೇಬರು ಮುಂದೆ ಮಾತನಾಡದಂತೆ ನನ್ನನ್ನು ತಡೆದು, ತಮ್ಮ ಪರಿಚಯದ ದರ್ಜಿಯೊಬ್ಬನ ಹತ್ತಿರ ನನ್ನ ಬಟ್ಟೆ ಹೊಲಿಯಲು ಹಾಕಿದರು. ಎಲ್ಲವೂ ಮುಗಿದ ಬಳಿಕ ಕಚೇರಿಗೆ ಹಿಂದಿರುಗಿ ಬರುತ್ತಿದ್ದಾಗ,

" ನೀನು ಬಂದಾಗಿನಿಂದ ನಮ್ಮಿಂದ ಒಂದು ಪೈಯನ್ನೂ ತೆಗೆದುಕೊಂಡಿಲ್ಲ. ನಾನೂ ಸುಮ್ಮನಿದ್ದು ಬಿಟ್ಟಿದ್ದೆ....ಈ ಎರಡು ತಿಂಗಳಲ್ಲಿ ಬಂದ ಹಣದಲ್ಲಿ ಮೂರರಲ್ಲಿ ನಿನಗೊಂದು ಪಾಲು ಅಂದರೆ ನೂರು ರೂಪಾಯಿ ಸಲ್ಲಬೇಕಲ್ಲ. ನಿನಗೆ ಬಟ್ಟೆಗಳೂ ಸಾಕಷ್ಟಿಲ್ಲ. ಮೊದಲು ಅವನ್ನೇ ಕೊಡಿಸಿದರಾಯಿತೆಂದು ಕರೆದುಕೊಂಡು ಹೋಗಿದ್ದೆ," ಎಂದು ವಿವರಿಸಿ ಹೇಳಿದರು. ಕಚೇರಿಗೂ ಮನೆಗೂ ಬಹಳ ದೂರವಿದ್ದುದರಿಂದ ಕಾಲುನಡಿಗೆಯಿಂದ ಹೋಗಿ ಬರಲು ನನಗೆ ತೊಂದರೆಯಾಗಬಾರದೆಂದು ಒಂದು ಸೈಕಲನ್ನೂ ಕೊಡಿಸಿದರು. ನಿಧಾನವಾಗಿ, ದುಡ್ಡು ಕೀಳುವ ರೀತಿಯನ್ನೂ ನನಗೆ ಕಲಿಸಿಕೊಡತೊಡಗಿದರು. ಬಂಧಿಸಲ್ಪಟ್ಟ ಆಪಾದಿತನನ್ನು ಜಾಮೀನಿನ ಮೇಲೆ ಬಿಡುವಾಗ, ಸಂಶಯದಿಂದ ಜಪ್ತು ಮಾಡಿದ ಸಾಮಾನುಗಳನ್ನು ತಿರುಗಿ ಕೊಡುವಾಗ, ಚಿಕ್ಕ ಪುಟ್ಟ ಖಟ್ಲೆಗಳನ್ನು ಮುಂದುವರಿಸದೆ ಆರಂಭದಲ್ಲಿಯೆ ಬಿಟ್ಟುಬಿಡುವಾಗ, ಬಡೆದಾಟ–ಹೊಡೆದಾಟಗಳ ಪ್ರಕರಣಗಳಲ್ಲಿ ರಾಜಿ ಮಾಡಿಸುವಾಗ, ಹೀಗೇ ಅನೇಕ ಸಂದರ್ಭಗಳಲ್ಲಿ ಜನರಿಂದ ಹೇಗೆ ಕಾಸು ಕಿತ್ತುಕೊಳ್ಳಬೇಕೆಂಬುದು ನನಗೂ ಗೊತ್ತಾಗತೊಡಗಿತು. ನಾಲ್ಕು ತಿಂಗಳುಗಳ ಹಿಂದೆಯಷ್ಟೆ ಲಂಚವೆಂದರೆ ಅಸಹ್ಯಪಟ್ಟುಕೊಳ್ಳುತ್ತಿದ್ದ ನಾನೇ ಅಲ್ಪಾವಧಿಯಲ್ಲಿಯೆ ಲಂಚ ಹೊಡೆಯುವುದರಲ್ಲಿ ಪಟಾಯಿತನಾಗಿಬಿಟ್ಟೆ. ಕಚೇರಿಯಲ್ಲಿ ಮೊದಲಿನಿಂದಲೂ ನಡೆದು ಕಬದ ಪರಂಪರೆ, ವಾತಾವರಣಗಳೂ ಅದಕ್ಕೆ ಕಾರಣವಾದುವೆಂದು ಹೇಳಬೇಕು. ನಾನು ಲಂಚಕ್ಕೆ ಕೈಯೊಡ್ಡದ ಸತ್ಯ ಹರಿಶ್ಚಂದ್ರನಾಗಿದ್ದರೆ ಆ ಕಚೇರಿಯಲ್ಲಿ ಉಳಿಯುವುದೇ ಅಸಾಧ್ಯವಾಗುತ್ತಿತ್ತು. ಅಹಮ್ಮದ ಸಾಹೇಬರೂ ಸದಾಶಿವಪ್ಪ

ನವರೂ ಕಚೇರಿಯಲ್ಲಿಲ್ಲದ ವೇಳೆಯಲ್ಲಿ ಅವರಿಬ್ಬರ ಪರವಾಗಿಯೂ ನಾನೇ ಹಣ ಕೇಳಬೇಕಾಗುತ್ತಿತ್ತು. ಸರಿ. ರೋಮದಲ್ಲಿರುವಾಗ ರೋಮನ್ನರ ಹಾಗಿರುವುದು ಅವಶ್ಯವೆಂದು ನನ್ನಷ್ಟಕ್ಕೆ ನಾನೇ ಹೇಳಿಕೊಂಡು ನಾನೂ ಅವರಂತೆಯೆ ಆಗಿಬಿಟ್ಟೆ.

ಆಗ ಮಾತ್ರ 'ಕಂಪನಿ ಆರ್ಡರ್ಲಿ' ನನ್ನ ಹತ್ತಿರ ಬಂದು ನನ್ನೊಡನೆ ವಿನಯವಾಗಿ ಮಾತನಾಡಿ ನಾಲ್ಕೈದು ರೂಪಾಯಿ ಸಾಲ ಕೇಳಿ ತೆಗೆದುಕೊಳ್ಳ ಲಾರಂಭಿಸಿದ. ತೆಗೆದುಕೊಂಡ ಹಣವನ್ನು ತಿರುಗಿ ಕೊಡುವ ಅಭ್ಯಾಸ ಮಾತ್ರ ಅವನಿಗಿರಲಿಲ್ಲ. ನಾನು ಅವನಿಗೆ ಕೊಡುತ್ತಿದ್ದುದು ನನ್ನ ಸಂಬಳದ ಹಣವೇನೂ ಆಗಿರಲಿಲ್ಲ. "ಹರಾಮುದ ರೊಕ್ಕ" (ಲಂಚದ ಹಣ) ಹರಾಮುಕ್ಕೆ ಹೋಯಿ ತೆಂದುಕೊಂಡು ಸುಮ್ಮನಿರುತ್ತಿದ್ದೆ. ಅವನೊಡನೆ ಗೆಳೆತನ ಬೆಳಸುವುದಕ್ಕೆ ಮಾತ್ರ ನನ್ನ ಮನಸ್ಸು ಒಪ್ಪಲಿಲ್ಲ. ಅವನ ಅಮಾನುಷ ಸ್ವಭಾವವನ್ನು ಸ್ವಾನುಭವದಿಂದ ಅರಿತುಕೊಂಡಿದ್ದ ನನಗೆ ಅವನ ವಿಷಯವಾಗಿ ಜುಗುಪ್ಸೆ ಯಲ್ಲದೆ ಇನ್ನಾವ ಭಾವವೂ ಇರಲಿಲ್ಲ.

ಪೋಲೀಸರನ್ನು ಅವನು ಹಾಗೆ ಪೀಡಿಸಲು ಕಾರಣವೇನೆಂಬುದು ನನಗೆ ಹಿಂದಿನಿಂದ ಗೊತ್ತಾಯಿತು. ಅವರಿಂದ ಒಂದೆರಡು ರೂಪಾಯಿ ಕಿತ್ತುಕೊಳ್ಳುವ ಉದ್ದೇಶವೊಂದೇ ಅವನಿಗಿದ್ದುದು. ಅವನದು ದೊಡ್ಡ ಸಂಸಾರ. ಸಂಬಳದ ಹಣ ಸಾಲುತ್ತಿರಲಿಲ್ಲ. ಯಾರಿಂದಲಾದರೂ 'ಹರಾಮುದ ರೊಕ್ಕ' ಸಿಕ್ಕರೆ ಮಾತ್ರ ಅವನ ಪ್ರಪಂಚ ನಡೆಯಬೇಕಾದ ಪರಿಸ್ಥಿತಿ. ಕೆಲದಿನಗಳಲ್ಲಿಯೆ ಗೊಬ್ಬೂರಿನಿಂದ ವರ್ಗವಾಗಿ ಅವನು ಬೇರೊಂದು ಊರಿಗೆ ಹೋದ ಬಳಿಕ ಹಣದಾಸೆಗಾಗಿ ಕೆಲವರು ಆಪಾದಿತರನ್ನು ಮನಸ್ವಿಯಾಗಿ ಥಳಿಸಿದನಂತೆ. ಆಗ ಇವನಿಗೆ ಹಣ ಕೊಟ್ಟು ಜಾಮೀನಿನ ಮೇಲೆ ಬಿಡುಗಡೆ ಹೊಂದಿ ಹೋದ ಆ ಆಪಾದಿತರು ನೇರವಾಗಿ ಡಾಕ್ಟರೊಬ್ಬರ ಹತ್ತಿರ ಹೋಗಿ, ಇವನ ಬಡೆತದಿಂದಾದ ಗಾಯಗಳ ಬಗ್ಗೆ ಸರ್ಟಿಫಿಕೇಟ್ ಪಡೆದುಕೊಂಡು ಇವನ ವಿರುದ್ಧ ಖಟ್ಲೆ ಹಾಕಿ ದರಂತೆ. ಅದರಲ್ಲಿ ಅವನ ಮೇಲೆ ಆರೋಪ ಸಿದ್ಧವಾಗಿ ನೌಕರಿ ಹೋದುದಲ್ಲದೆ ಅವನಿಗೆ ಮೂರು ವರ್ಷಗಳ ಶಿಕ್ಷೆಯೂ ವಿಧಿಸಲ್ಪಟ್ಟಿತಂತೆ. ಆ ವಾರ್ತೆಯನ್ನು ಕೇಳಿದಾಗ ನನಗೆ ವ್ಯಸನವಾಗದಿರಲಿಲ್ಲ. ಅವನ ದೊಡ್ಡ ಸಂಸಾರವನ್ನು

ಜ್ಞಾಪಿಸಿಕೊಂಡಾಗ ತುಂಬಾ ಕಳವಳವಾಯಿತು. ಮುಂದೆ ಅವನ ಹೆಂಡಿರು ಮಕ್ಕಳ ಗತಿಯೇನು ? ಅವನು ನೌಕರಿಯಲ್ಲಿದ್ದಾಗಲೆ ತೊಂದರೆಯಲ್ಲಿದ್ದ ಅವರು, ದುಡಿಯುವ ವ್ಯಕ್ತಿ ಸೆರೆಮನೆಗೆ ಹೋದ ತರುವಾಯ ಎಷ್ಟು ಕಷ್ಟಪಡುವರೊ ! ಅವನು ನನಗೆ ಕೊಟ್ಟ ಹಿಂಸೆಯನ್ನೆಲ್ಲ ಆ ಕ್ಷಣಕ್ಕೆ ನಾನು ಮರೆತುಬಿಟ್ಟೆದ್ದೆ. ಅವನೂ ನನ್ನಂತೆ ಮಾನವಪ್ರಾಣಿಯೆಂಬುದರ ಅರಿವೊಂದೇ ಆಗ ನನಗಿದ್ದುದು.

೧೩

"ಇನಾಂ" ಸಿದ್ಧಬಸಪ್ಪ

ಅಪರಾಧಗಳನ್ನು ಶೋಧಿಸಿ ಬೆಳಕಿಗೆ ತರುವ ಕೆಲಸದಲ್ಲಿ ನಮ್ಮ ಕಚೇರಿಯ ಮೂವರು ಪೋಲೀಸರು ಆ ಜಿಲ್ಲೆಯಲ್ಲೆಲ್ಲ ಹೆಸರು ಪಡೆದಿದ್ದರು. ಅಪರಾಧಗಳನ್ನು ಪತ್ತೆ ಮಾಡಿದವರಿಗೆಲ್ಲ 'ಇನಾಂ' (ಬಹುಮಾನ) ಕೊಟ್ಟು ಪ್ರೋತ್ಸಾಹಿಸುವುದು ಪೋಲೀಸ್ ಖಾತೆಯಲ್ಲಿನದೊಂದು ಒಳ್ಳೆಯ ಪದ್ಧತಿ. ಹಾಗೆ ಇನಾಂ ದೊರಕಿಸಿದವರ ಹೆಸರುಗಳು ಜಿಲ್ಲಾ ಪೋಲೀಸ್ ಗಜೆಟ್ಟಿನಲ್ಲಿ ಪ್ರಕಟವಾಗುತ್ತವೆ. ಪ್ರತಿ ವಾರ ಹೊರಡುವ ಈ ಪತ್ರಿಕೆಯಲ್ಲಿ ನಮ್ಮ ಕಚೇರಿಯ ಸಿದ್ಧಬಸಪ್ಪ, ಕಲೀಮುದ್ದೀನ್ ಮತ್ತು ಹುಸೇನ್‌ಖಾನ್ ಈ ಮೂವರ ಹೆಸರು ಇರಲೇಬೇಕು. ಅವರಲ್ಲಿ ಸಿದ್ಧಬಸಪ್ಪನಂತೂ ಇನಾಂ ಪಡೆಯುವುದರಲ್ಲಿ ಪ್ರಸಿದ್ಧ ವ್ಯಕ್ತಿ. ಅವನಿಗೆ ದೊರೆತಷ್ಟು ಇನಾಮುಗಳು ಇಡೀ ಜಿಲ್ಲೆಯಲ್ಲಿ ಬೇರಾವ ಪೋಲೀಸನಿಗೂ ದೊರೆತಿರಲಿಲ್ಲ. ಒಂದು ಟ್ರಂಕಿನ ತುಂಬಾ ಅವನ ಇನಾಂ ಪತ್ರಿಕೆಗಳೇ ತುಂಬಿಕೊಂಡಿದ್ದುವು. ಐವತ್ತು ಅರವತ್ತು ಪತ್ರಿಕೆಗಳಿಗೆ ಕನ್ನಡಿ ಕಟ್ಟು ಹಾಕಿಸಿ ತನ್ನ ಮನೆಯ ಗೋಡೆಗಳ ಮೇಲೆ ನೇತು ಹಾಕಿ, ಬಂದವರಿಗೆಲ್ಲ ಅವುಗಳನ್ನು ಅಭಿಮಾನದಿಂದ ತೋರಿಸುವುದು ಸಿದ್ಧಬಸಪ್ಪನ ವಿಶಿಷ್ಟ ಚಟವಾಗಿತ್ತು. ಬರಬರುತ್ತಾ ಅವನ ಅಡ್ಡಹೆಸರನ್ನು ಜನರು ಮರೆತು "ಇನಾಂ

ಇನಾಂ ಸಿದ್ಧಬಸಪ್ಪ" ಎಂದು ಅವನನ್ನು ಕರೆಯುವಂತಾಗಿತ್ತು, 'ಇನಾಂ' ಎಂಬ ಶಬ್ದ ಅವನಿಗೊಂದು ಪದವಿಯಂತಾಗಿತ್ತು. "ಇನಾಂ ಸಿದ್ಧಬಸಪ್ಪಾ," ಎಂದು ತನ್ನನ್ನು ಕರೆಯುವವರನ್ನು ಕಂಡರೆ ಅವನಿಗೆ ಬಹಳ ಪ್ರೀತಿ. ಅವರಿಗೆ ಚಹ ಕುಡಿಸುತ್ತಿದ್ದ, ಬೀಡಿ ಕೊಡುತ್ತಿದ್ದ, ಸಿಗರೇಟು ಕೊಡುತ್ತಿದ್ದ, ಸಿನಿಮಾ ತೋರಿಸುತ್ತಿದ್ದ, ಮನೆಯಲ್ಲಿ ಹೋಳಿಗೆ ಮಾಡಿಸಿ ಉಣಿಸುತ್ತಿದ್ದ. ಇನಾಮುಗಳ ಬಗ್ಗೆ ಅವನಿಗಿದ್ದ ಗೀಳು ಕಂಡು ನನಗೆ ನಗುವನ್ನು ತಡೆಯಲಾಗುತ್ತಿರಲಿಲ್ಲ. ನನ್ನ ನಗುವನ್ನು ಕಂಡು ಸಿದ್ಧಬಸಪ್ಪನೂ ನಗುತ್ತಿದ್ದನಾಗಲಿ ಎಂದೂ ಕೋಪಿಸಿ ಕೊಳ್ಳುತ್ತಿರಲಿಲ್ಲ.

ನಗರವಲ್ಲಿ ರಾತ್ರಿಕಾಲದಲ್ಲಿ, ಎಲ್ಲಿಯಾದರೂ ಕಳವು, ದರೋಡೆ, ಸುಲಿಗೆ ಮೊದಲಾದುವುಗಳು ನಡೆದ ವಾರ್ತೆ ಬರುತ್ತಲೂ ನಮ್ಮ ಫೌಜದಾರರು ಸಿದ್ಧಬಸಪ್ಪ, ಕಲೀಮುದ್ದೀನ್, ಹುಸೇನ್ ಖಾನರನ್ನು ಕರೆದು ಆ ಸಂಗತಿ ತಿಳಿಸುತ್ತಿದ್ದರು. ಒಡನೆಯೆ ಆ ಮೂರು ಜನರೂ ಅಪರಾಧಿಗಳನ್ನು ಶೋಧಿಸುವ ಕಾರ್ಯಕ್ಕೆ ಧುಮುಕುತ್ತಿದ್ದರು. ಅಪರಾಧಗಳ ಸುದ್ದಿಗಳನ್ನು ತಿಳಿದುಕೊಳ್ಳಲೆಂದು ಇವರು ಮೂವರೂ ಕೆಲವರು ಸುದ್ದಿಗಾರರನ್ನು ತಯಾರು ಮಾಡಿಟ್ಟುಕೊಂಡಿದ್ದರು. ಇವರಿಗೆ ಸಿಗುವ ಲಂಚದ ಹಣದಲ್ಲಿ ಆ ಸುದ್ದಿಗಾರರಿಗೂ ಅಷ್ಟಿಷ್ಟು ಸಲ್ಲುತ್ತಿತ್ತು. ಅವರು ನಗರದಲ್ಲೆಲ್ಲ ಸುತ್ತಿ, ಚಹದಂಗಡಿಗಳಲ್ಲಿ ಕುಳಿತು, ಕ್ಷೌರದಂಗಡಿಗಳಲ್ಲಿ ಸೇರಿಕೊಂಡು, ಸಿನಿಮಾಮಂದಿರಗಳಲ್ಲಿ ನುಗ್ಗಿ, ಸಂತೆಯಲ್ಲಿ ಅಲೆದು ಅಪರಾಧಗಳ ಬಗ್ಗೆ ಮಾಹಿತಿಯನ್ನು ಕಲೆಹಾಕುತ್ತಿದ್ದರು. ಅಪರಾಧಗಳನ್ನು ಕಂಡು ಹಿಡಿಯುವುದಕ್ಕಾಗಿ ಮೇಲ್ಕಾಣಿಸಿದ ಮೂವರು ಪೋಲೀಸರಲ್ಲಿ ಬಲವಾದ ಸ್ಪರ್ಧೆಯೇ ನಡೆದ ಹಾಗಿರುತ್ತಿತ್ತು. ಒಂದು ಅಪರಾಧವನ್ನು ಬಯಲಿಗೆಳೆದವನು ಇನ್ನುಳಿದ ಇಬ್ಬರು ಪೋಲೀಸರನ್ನೂ ಕುತ್ಸಿತವಾಗಿ ಬೀಳುಗಳೆಯುತ್ತಿದ್ದ. "ಬಿಡು, ಬಿಡು. ಏನು ದೊಡ್ಡ ಕೆಲಸ ಅದು!" ಎಂದು ಇನ್ನಿಬ್ಬರು ಮೂಗು ಮುರಿಯುತ್ತಿದ್ದರು. ಅಂತೂ, ಅವರ ಪರಸ್ಪರ ಸಂಬಂಧ ಬಲು ಮೋಜಿನ ದಾಗಿತ್ತು. ಅವರವರ ಸ್ಪರ್ಧೆಯಿಂದಾಗಿ ನಮ್ಮ ಖಾತೆಗೆ ಮಾತ್ರ ಲಾಭವಿತ್ತು. ಮೂವರೂ ಅಹಮಹಮಿಕೆಯಿಂದ ಕೆಲಸ ಮಾಡುತ್ತಿದ್ದರಾದುದರಿಂದ ಯಾವ ಅಪರಾಧವೂ ಪತ್ತೆಯಾಗದಿರುತ್ತಿರಲಿಲ್ಲ.

ಇನಾಮುಗಳ ಆಸೆಗಾಗಿ ಅವರು ಆಗಾಗ ಸುಳ್ಳು ಖಟ್ಲೆಗಳನ್ನೂ

ಮಾಡುವುದಿತ್ತು. ಅಪರಾಧಗಳನ್ನು ಬಯಲಿಗೆ ತರುವ ಕೆಲಸದಲ್ಲಿ ಹೆಚ್ಚು ಪರಿಶ್ರಮ ವಹಿಸಿದವರಿಗೆ ಪೋಲೀಸ್ ಖಾತೆಯಲ್ಲಿ ಹೆಚ್ಚಿನ ಬಡ್ತಿ ಸಿಕ್ಕುತ್ತದೆ. ಸಾಧಾರಣವಾಗಿ ಆ ಬಡ್ತಿಯ ಮೇಲೆ ಎಲ್ಲರೂ ಕಣ್ಣಿಟ್ಟುಕೊಂಡಿರುತ್ತಾರೆ. ಎಂತಲೇ ಸಿದ್ಧಬಸಪ್ಪನೂ ಅವನ ಜೊತೆಗಾರರೂ ಸುಳ್ಳು ಖಟ್ಲೆ ಹಾಕಿ ಇನಾಮು ದೊರಕಿಸಲು ಹೇಸುತ್ತಿರಲಿಲ್ಲ.

ಸುಳ್ಳು ಖಟ್ಲೆಗಳೆಂದರೆ ಸಾಮಾನ್ಯವಾಗಿ "ಚಾಪ್ಟರ್ ಖಟ್ಲೆಗಳು" ಮತ್ತು ಪೋಲೀಸ್ ಕಾಯದೆಯಲ್ಲಿ ಹೇಳಲಾದ ಕೆಲವು ಚಿಕ್ಕ ಪುಟ್ಟ ಖಟ್ಲೆಗಳು.

"ಚಾಪ್ಟರ್" ಎಂಬ ಶಬ್ದವನ್ನು ಎಲ್ಲರೂ ಬಲ್ಲರು. ನಿರುದ್ಯೋಗಿಯೂ ಉಡಾಳನೂ ಆದವನನ್ನು 'ಚಾಪ್ಟರ್' ಎಂದು ಸಂಬೋಧಿಸುವುದುಂಟು. ಒಬ್ಬ ಕೆಟ್ಟ ಮನುಷ್ಯನನ್ನು ಅಂಕೆಯಲ್ಲಿಟ್ಟುಕೊಳ್ಳಲು ಕ್ರಿಮಿನಲ್ ಪ್ರೊಸೀಜರ್ ಕೋಡಿನ ಎಂಟನೆಯ ಪ್ರಕರಣದಲ್ಲಿ ಕೆಲವು ಕ್ರಮಗಳನ್ನು ವಿಧಿಸಲಾಗಿದೆ. ಜೀವನೋಪಾಯದ ಸಾಧನಗಳಿಲ್ಲದ ಮನುಷ್ಯನೊಬ್ಬ ಅಪರಾಧವೆಸಗುವ ಉದ್ದೇಶದಿಂದ ಎಲ್ಲಿಯಾದರೂ ಅಲೆಯುತ್ತಿದ್ದರೆ ಅಥವಾ ಅಡಗಿಕೊಂಡಿದ್ದರೆ ಪೋಲೀಸರು ಅವನನ್ನು ಹಿಡಿದು ಖಟ್ಲೆ ಹಾಕಬಹುದಾಗಿದೆ. ಸಿ. ಪಿ. ಸಿ. ಯ ಈ ಕಟ್ಟಳೆಯನ್ನು ಪೋಲೀಸರು ಅನೇಕ ಸಲ ದುರುಪಯೋಗಪಡಿಸುವುದುಂಟು.

ದೊಡ್ಡ ನಗರವೆನ್ನಿಸಿಕೊಂಡಿದ್ದ ಗೊಬ್ಬೂರಿಗೆ ಪರಸ್ಥಳಗಳ ನಿರುದ್ಯೋಗಿಗಳನೇಕರು ಕೆಲಸ ದೊರಕಿಸುವ ಉದ್ದೇಶದಿಂದ ಬರುವುದು ವಾಡಿಕೆಯಾಗಿತ್ತು. ಬೇರೆ ಕಡೆ ಹೊಲ ಮನೆ ಉದ್ಯೋಗವಿದ್ದವರು ಗೊಬ್ಬೂರಿಗೆ ಬಂದರೆ ಭೋಜನಾಲಯಗಳಲ್ಲಾಗಲಿ, ವಸತಿಗೃಹಗಳಲ್ಲಾಗಲಿ, ಪರಿಚಿತರ ಮನೆಗಳಲ್ಲಾಗಲಿ ವಸತಿಮಾಡುವರು ಕೆಲಸ ಹುಡುಕಲು ಬಂದ ಬಡವರೂ ನಿರುದ್ಯೋಗಿಗಳೂ ಧರ್ಮಶಾಲೆಗಳಲ್ಲಾಗಲಿ, ಅವರಿವರ ಮನೆ ಅಂಗಡಿಗಳ ಕಟ್ಟೆಗಳ ಮೇಲಾಗಲಿ ಇರುಳು ಕಳೆಯಬೇಕಾಗುವುದು. ವಾಸ್ತವವಾಗಿ ಅವರು ಉಡಾಳರೇನೂ ಅಲ್ಲ; "ಚಾಪ್ಟರ"ರೂ ಅಲ್ಲ. ಆದರೆ ಇನಾಮುಗಳ ಆಸೆಯಿಂದ ಮಾನವತೆಯನ್ನು ಮರೆತ ಸಿದ್ಧಬಸಪ್ಪನಂಥವರ ದೃಷ್ಟಿಯಲ್ಲಿ ಭಡಸಾಯಿಗಳೂ "ಚಾಪ್ಟರ"ರೇ. ಅವರನ್ನು ಹಿಡಿದು, ಅವರ ವಿರುದ್ಧವಾಗಿ ಒಂದೆರಡು ಸುಳ್ಳುಸಾಕ್ಷಿ ಸಿದ್ಧಗೊಳಿಸಿ, ಕಚೇರಿಗೆ ಸಾಗಿಸಿಕೊಂಡು ಬಂದು ಖಟ್ಲೆ ಹೂಡಿ, ಶಿಕ್ಷೆ ಮಾಡಿಸಿ ಇನಾಮು ಹೊಡೆಯುತ್ತಿದ್ದ ಸಿದ್ಧಬಸಪ್ಪ.

ಇಂಥ ನಿರ್ಗತಿಕರನ್ನು ಬಂಧಿಸಿದಾಗ ಸಿದ್ಧಬಸಪ್ಪ ಅವರಿಗೆ ಕೇಳುತ್ತಿದ್ದ ಪ್ರಶ್ನೆಗಳೂ ಸ್ವಾರಸ್ಯಕರವಾಗಿರುತ್ತಿದ್ದುವು.

"ಯಾವೂರವನೋ ನೀನು ?"

"....ಊರವನ್ರೀ."

"ಯಾತಕ್ಕ ಬಂದಿದ್ದಿ ಇಲ್ಲಿಗೆ ?"

"ಕೆಲಸ ಮಾಡಿ ಹೊಟ್ಟೆ ತುಂಬಿಸಿಕೊಳ್ಳೂದಕ್ಕ ಬಂದಿದ್ದಿನಿರಿ"

"ಕೆಲಸ ಮಾಡಾಕ ಬಂದಿದ್ದಿಯೋ, ತುಡುಗು ಮಾಡಾಕ ಬಂದಿದ್ದಿಯೋ ಬದ್ಮಾಷ್...."

"ನಾವು ಅಂಥವರಲ್ರೀ. ಜೀವಾ ಹೋಗುವ ಪರಸಂಗ ಬಂದರೂ ತುಡುಗು ಗಿಡುಗು ಮಾಡಾಕಿಲ್ಲ."

"ನಿನ್ನ ಮಾರೀ ನೋಡಿದರ ಗೊತ್ತಾಗುತೈತಿ, ನೀನು ಪಕ್ಕಾ ದರೋಡೆಖೋರ ಅನ್ನೂದು. ಚ್ಯಾಪ್ಟರ್ ಸೂಳೀಮಗನಃ! ನಡೀ ಲಾಕಪ್ಪಿಗೆ!"

ಇಂಥ ನಿರ್ಗತಿಕರ ವಿರುದ್ಧ ಸಾಕ್ಷಿ ಹೇಳಲು ಚಹದಂಗಡಿಯವರನ್ನೋ ಭೋಜನಾಲಯಗಳವರನ್ನೋ ಹಿಡಿದು ತರುತ್ತಿದ್ದ ಸಿದ್ಧಬಸಪ್ಪ, ಅವರೇ ಅವನ ಕಾಯಂ ಸಾಕ್ಷಿದಾರರು.

"ಈ ಮನುಷ್ಯ ನಮ್ಮಲ್ಲಿಗೆ ಬಂದು ತಿಂದು ರೊಕ್ಕ ಕೊಡದೆ ಹಂಗೇ ಹೊರಟಿದ್ದ. ನಾವು ತಡೆದು ನಿಲ್ಲಿಸಿದೆವು, ಅವನ ಅಂಗಿಯನ್ನು ತಪಾಸು ಮಾಡಿದಾಗ ನಮ್ಮಲ್ಲಿಂದ ಕಳವು ಮಾಡಿಕೊಂಡು ತೆಗೆದುಕೊಂಡು ನಡೆದಿದ್ದ ಸಾಮಾನು ಸಿಕ್ಕಿತು. ಅದನ್ನು ಕಸಿದುಕೊಂಡು ಹಾಳಾಗಿ ಹೋಗಲಿ ಅಂತ ಬಿಟ್ಟುಬಿಟ್ಟೆವು," ಎಂದು ಮೊದಲಾಗಿ ಸುಳ್ಳುಸಾಕ್ಷಿ ಹೇಳುತ್ತಿದ್ದರು ಈ ಪುಣ್ಯಾತ್ಮರು! ಸರಿ. ಅವನ ಅಪರಾಧ ಸಿದ್ಧವಾಗುತ್ತಿತ್ತು.

ಒಳ್ಳೆಯ ನಡತೆಗಾಗಿ ಜಾಮೀನು (ಮುಚ್ಚಳಿಕೆ) ಕೊಡುವಂತೆ ನ್ಯಾಯಾಧೀಶರು ಆ ಅಪರಾಧಿಯನ್ನು ಕೇಳುತ್ತಿದ್ದರು. ನಿರ್ಗತಿಕನಾದ ಇವನು ಜಾಮೀನು ಕೊಡುವ ಬಗೆ ಹೇಗೆ? ಅಲ್ಲಿಗೆ ಆ ಬಡಪಾಯಿಗೆ ಸೆರೆಮನೆಯೇ ಗತಿಯಾಗುತ್ತಿತ್ತು. ಜಂಬದ ಕೋಳಿಯಂತೆ ಬೀಗುತ್ತಾ ಕಚೇರಿಗೆ ಬಂದು ತನ್ನ 'ಇನಾಂ ಪತ್ರಿಕೆ' ತಯಾರಿಸಲು ನಮಗೆ ಹೇಳುತ್ತಿದ್ದ ಸಿದ್ಧಬಸಪ್ಪ. ಅವನ 'ಇನಾಂ ಪತ್ರಿಕೆ' ಮೇಲಧಿಕಾರಿಗಳ ಕಡೆ ಹೋಗುತ್ತಿತ್ತು, ಅವನಿಗೆ ಇನಾಮು

ಬರುತ್ತಿತ್ತು. ಆ ಬಡಪ್ರಾಣಿ ಸೆರೆಮನೆಗೆ ಹೋದನಲ್ಲಾ ಎಂದು ಕೊಂಚವೂ ವ್ಯಸನವಾಗುತ್ತಿರಲಿಲ್ಲ ಸಿದ್ಧಬಸಪ್ಪನಿಗೆ. ಹೃದಯವೆಂಬ ವಸ್ತುವೇ ಇಲ್ಲವೇನೋ ಎನ್ನಿಸುತ್ತಿತ್ತು ನನಗೆ. ಅಂಥ ಸಂದರ್ಭಗಳಲ್ಲಿ ಅವನ ಮುಖ ದೃಷ್ಟಿಗೆ ಬಿದ್ದೊಡನೆ ನನ್ನ ಮೈಯೆಲ್ಲಾ ಉರಿಯುತ್ತಿತ್ತು.

ಇನಾಂ ಪತ್ರಿಕೆಗಳನ್ನು ಬರೆಯುತ್ತಿದ್ದ ಕಾರಕೂನರಿಗೆ ಬೇರೂರಿಗೆ ವರ್ಗವಾದ ಬಳಿಕ ಆ ಕೆಲಸವೂ ನನ್ನ ಪಾಲಿಗೇ ಬಂದಿತು. ಈ ಇನಾಂ ಪತ್ರಿಕೆಗಳದೂ ಒಂದು ವೈಚಿತ್ರ್ಯವೆ. ಇನಾಮು ಪಡೆಯಬೇಕಾದ ವ್ಯಕ್ತಿಯನ್ನು ಅವಾಸ್ತವ ರೀತಿಯಲ್ಲಿ ಪ್ರಶಂಸಿಸಿ ಮೇಲಧಿಕಾರಿಗಳು ಮೆಚ್ಚುವ ಹಾಗೆ ಬರೆದರೆ ಮಾತ್ರ ಅವರು ಇನಾಮು ಕೊಡುತ್ತಿದ್ದರು. ನನಗಿಂತ ಮೊದಲು ಆ ಕೆಲಸ ಮಾಡುತ್ತಿದ್ದ ಕಾರಕೂನ ಬರೆದು ಕಳಿಸಿದ್ದ ಕೆಲವು ಪತ್ರಿಕೆಗಳಿಂದ ಅಧಿಕಾರಿಗಳು ಪ್ರಭಾವಿತರಾಗಿರಲಿಲ್ಲ. ಅಂಥ ಸಂದರ್ಭಗಳಲ್ಲೆಲ್ಲ ಅವನು ಸಹಜವಾಗಿಯೆ ಭಯಂಕರವಾಗಿ ರೇಗುತ್ತಿದ್ದ. ಇನಾಂ ಪತ್ರಿಕೆ ತಯಾರಿಸಿದ ಕಾರಕೂನನನ್ನು ಅವಾಚ್ಯ ಶಬ್ದಗಳಲ್ಲಿ ನಿಂದಿಸುತ್ತಿದ್ದ. "ಇವನು ನೆಟ್ಟಗೆ ಬರೆದಿದ್ದರೆ ನನಗೆ ಇನಾಂ ಸಿಕ್ಕೇ ಸಿಗುತ್ತಿತ್ತು. ಬೋಳೀಮಗನಿಗೆ ಸರಿಯಾಗಿ ಬರೆಯುವದಕ್ಕೂ ಬರುವದಿಲ್ಲ," ಎಂದು ಮೊದಲಾಗಿ ಹೀಯಾಳಿಸುತ್ತಿದ್ದ. ಅವನ ಆ ವರ್ತನೆ ಎಲ್ಲರಿಗೂ ಜುಗುಪ್ಸೆಯುಂಟುಮಾಡಿತ್ತು. ಇವನು ಯಾವ ಶೌರ್ಯವನ್ನೂ ತೋರಿಸದಿದ್ದಾಗಲೂ ಇವನನ್ನು ಹೊಗಳಿ ಬರೆಯುವುದು ಹೇಗೆ? ಸಿದ್ಧಬಸಪ್ಪ ಮಾತ್ರ ಆ ವಿಚಾರವಾಗಿ ಎಂದೂ ಯೋಚಿಸಿದವನಲ್ಲ. ತಾನು ಹಾಕಿದ ಖಟ್ಲೆಯಲ್ಲಿ ಅಪರಾಧಿಗೆ ಶಿಕ್ಷೆಯಾದರಾಯಿತು, ತಾನೊಂದು ಮಹಾಕೃತ್ಯ ಮಾಡಿದಂತಾಯಿತು, ಅದಕ್ಕಾಗಿ ತನಗೆ ಇನಾಮು ದೊರೆಯಲೇಬೇಕು ಎಂದು ಅವನ ತಿಳಿವಳಿಕೆ. ಇನಾಮು ಕೊಡುವುದೂ ಬಿಡುವುದೂ ಡಿ. ಎಸ್. ಪಿ. ಯವರ ಇಚ್ಛೆಯನ್ನವಲಂಬಿಸಿದ್ದ ವಿಷಯ. ಅವರು ಇನಾಮು ಕೊಡದಿದ್ದರೆ, ಇನಾಂ ಪತ್ರಿಕೆ ತಯಾರಿಸಿದವನದೇನು ತಪ್ಪು? ಅವನೇಕೆ ಬಯ್ಯಿಸಿಕೊಳ್ಳಬೇಕು ಸಿದ್ಧಬಸಪ್ಪನಿಂದ? ಹಾಗೆ ಯೋಚಿಸಿ ಅವನ ಅನುಚಿತ ವರ್ತನೆಯನ್ನು ಫೌಜದಾರರ ದೃಷ್ಟಿಗೆ ತರುವುದೆಂದು ನಾನು ನಿರ್ಧರಿಸಿಕೊಂಡಿದ್ದೆ.

ನ್ಯಾಯಾಲಯದಲ್ಲಿ ಒಂದು ಖಟ್ಲೆ ಮುಗಿದೊಡನೆಯೆ ನಾವು ಇನಾಂ ಪತ್ರಿಕೆ ತಯಾರಿಸಬೇಕಾಗುತ್ತಿತ್ತು. ಖಟ್ಲೆ ಮುಗಿದ ಎರಡು ತಿಂಗಳುಗಳಲ್ಲಿಯೇ

ಇನಾಂ ಪತ್ರಿಕೆಗಳು ಡಿ. ಎಸ್. ಪಿ. ಯವರ ಕೈಸೇರಬೇಕೆಂಬ ನಿಯಮವಿತ್ತು. ಆ ಕೆಲಸ ನನ್ನ ಕಡೆ ಬಂದ ಬಳಿಕ ನಾನು ಇನಾಂ ಪತ್ರಿಕೆ ಬರೆದು ಸಿದ್ಧಗೊಳಿಸುತ್ತಿದ್ದೆನಾದರೂ ಸಹಿಗಾಗಿ ಅವುಗಳನ್ನು ಫೌಜದಾರರೆದುರಿಗಿಡದೆ ನನ್ನ ಫೈಲಿನಲ್ಲೇ ಸೇರಿಸಿಬಿಡುತ್ತಿದ್ದೆ.

ಆ ವಿಚಾರ ಸಿದ್ಧಬಸಪ್ಪನಿಗೆ ಗೊತ್ತಾಗುತ್ತಲೂ ವಾಡಿಕೆಯಂತೆ ಅವನು ವಿಪರೀತವಾಗಿ ರೇಗಿ ನನ್ನ ಹತ್ತಿರ ಬಂದು,

"ನನ್ನ ಇನಾಂ ಪತ್ರಿಕೆ ಯಾಕೆ ಕಳಿಸಿಲ್ಲ ಇನ್ನೂ?" ಎಂದು ಕೇಳಿದ.

ನಾನೇನು ಅವನಿಗೆ ಹೆದರುವ ಆಸಾಮಿಯಾಗಿರಲಿಲ್ಲ.

"ಇನಾಂ ಪತ್ರಿಕೆ ಬರೆಯಲು ನನಗೆ ತಿಳಿಯುವದಿಲ್ಲ."

"ತಿಳಿಯದಿದ್ದರೆ ಇಲ್ಲ್ಯಾತಕ್ಕೆ ಇದ್ದೀರಿ? ಟ್ರಾಫಿಕ್ ಡ್ಯೂಟಿಗೆ ಹೋಗಿ ಹಾಳಾಗಬಾರದೇ?"

"ಅದನ್ನೆಲ್ಲ ಹೇಳಲು ನಿಮಗೇನು ಅಧಿಕಾರ? ಫೌಜದಾರ ಸಾಹೇಬರು ಹುಕುಂ ಮಾಡಿದರೆ ಹೋಗುತ್ತೇನೆ."

ಬಾಯಿಮಾತಿನ ಬಲದಿಂದಲೇ ಎಲ್ಲ ಪೋಲೀಸರನ್ನೂ ಬೆದರಿಸಿಕೊಳ್ಳುತ್ತಿದ್ದ ಪುಂಡನಾತ. ನಾನಾಡಿದಂಥ ಮಾತನ್ನು ಅದುವರೆಗೆ ಬೇರೆ ಯಾರೂ ಅವನೆದುರಿಗೆ ಆಡುವ ಸಾಹಸ ಮಾಡಿರಲಿಲ್ಲ.

"ಇಷ್ಟು ಸೊಕ್ಕೇನು! ನೋಡುತ್ತೀನಿ!" ಎಂದು ಕೂಗಿಕೊಂಡು, ಕಣ್ಣು ಕೆಂಪಗೆ ಮಾಡಿಕೊಂಡು ನೇರವಾಗಿ ಫೌಜದಾರರ ಹತ್ತಿರ ಹೋಗಿ ನನ್ನ ವಿರುದ್ಧ ದೂರಿಕೊಂಡ.

ಅವನ ನಡವಳಿಕೆ ಫೌಜದಾರರಿಗೂ ಸೇರಿಕೆಯಾಗುತ್ತಿರಲಿಲ್ಲ. ಅವರು ನನ್ನನ್ನು ಕರೆದು ಸಮಾಧಾನದಿಂದಲೇ ಕೇಳಿದರು:

"ಯಾಕಪ್ಪಾ ಶಿವಣ್ಣಾ. ಇವನ ಇನಾಂಪತ್ರಿಕೆ ಯಾಕೆ ತಯಾರು ಮಾಡಿಲ್ಲ?"

ಆಗ ನಾನು ಸತ್ಯಸಂಗತಿಯನ್ನೆಲ್ಲ ವಿವರಿಸಿ ಹೇಳಿದೆ.

"ಇನಾಂ ಪತ್ರಿಕೆಗಳನ್ನೇನೋ ಬರೆದಿಟ್ಟಿದ್ದೀನಿ ರಾವ್‌ಸಾಹೇಬರೆ. ಆದರೆ, ಅವುಗಳಿಗೆ ಒಂದುವೇಳೆ ಇನಾಂ ಸಿಗದಿದ್ದರೆ ಇವನು ನನ್ನನ್ನು ಬಯ್ಯಾನೆಂದು ಅವನ್ನು ಇಟ್ಟುಬಿಟ್ಟಿದ್ದೀನಿ."

ಚಾಣಾಕ್ಷರಾದ ಫೌಜದಾರರಿಗೆ ನನ್ನ ಉದ್ದೇಶದ ಅರಿವಾಗುತ್ತಲೂ ಅವರು ಸಿದ್ಧಬಸಪ್ಪನ ಕಡೆಗೆ ತಿರುಗಿ ಸ್ಪಷ್ಟವಾಗಿ ಹೇಳಿದರು :

“ನೀನು ಬಾಯಿ ಬಿಗಿಹಿಡಿಯಲು ಕಲಿತುಕೋ. ನಿನ್ನಂತೆ ಉಳಿದವರಿಗೂ ಅಭಿಮಾನ ಅನ್ನುವದು ಇರುತ್ತದೆ. ಕೆಲಸ ಮಾಡುವವರಿಗೆ ಮನಸ್ಸಿಗೆ ಬಂದಂತೆ ಬಯ್ಯುತ್ತಾ ಹೋದರೆ ಅವರೇಕೆ ನಿನ್ನ ಕೆಲಸ ಮಾಡಿಯಾರು? ಮುಂದೆ ನಿನ್ನ ಇನಾಂ ಪತ್ರಿಕೆ ನಾನು ಬರೆಯಬೇಕಾದ ಪ್ರಸಂಗ ಬಂದೀತು. ಸಮಾಧಾನದಿಂದ ನಡೆದುಕೊಂಡು ಶಿವಣ್ಣನ ಹತ್ತರ ಕೂತು ನಿನಗೆ ಬೇಕಾದ ಹಾಗೆ ಬರೆಯಿಸಿಕೋ.”

ಅಂದು ಸಿದ್ಧಬಸಪ್ಪನ ದರ್ಪ ಮುರಿದುಹೋಯಿತು. ತಾನು ಮಾಡಿದ್ದುದು ತಪ್ಪು ಎಂಬುದರ ಅರಿವೂ ಅವನಿಗಾಯಿತು. “ಇನ್ನುಮ್ಯಾಲ ಹಾಗೆ ಮಾಡುವದಿಲ್ಲ ರಾವ್‌ಸಾಹೇಬರೆ!” ಎಂದು ಫೌಜದಾರರೆದುರಿಗೆ ಹೇಳಿದುದಲ್ಲದೆ ಅಂದಿನಿಂದ ತನ್ನ ನಡವಳಿಕೆಯನ್ನು ಬದಲಾಯಿಸಿಕೊಂಡ. ಅಂದು ನಮಗಾಗಿ ಒಂದು ‘ಚಹಾಪಾರ್ಟಿ’ಯನ್ನೂ ಏರ್ಪಡಿಸಿದ ಸಿದ್ಧಬಸಪ್ಪ.

ಅವನಿಗಾದ ‘ಫಜೀತಿ’ಯ ಸಮಾಚಾರ ಹರಡುತ್ತಲೂ ನಗರದ ಪೋಲೀಸರಿಗೆಲ್ಲ ಸಂತೋಷವಾಯಿತು. ಅವನನ್ನು ಕಂಡರೆ ಯಾರಿಗೂ ಆಗುತ್ತಿರಲಿಲ್ಲ. ತನ್ನ ಸೊಕ್ಕಿನ ನಡತೆಯಿಂದಾಗಿ ಅವನು ಎಲ್ಲರನ್ನೂ ಬೇಸರುಗೊಳಿಸಿದ್ದ, ಪ್ರತಿ–ಫೌಜದಾರನಂತೆ ಅವರ ಮೇಲೆ ದರ್ಪ ಬೀರುತ್ತ ಬಂದಿದ್ದ. ಅಂದು ಅವನಿಗೆ ಮುಖಭಂಗವಾಗುತ್ತಲೂ ಅದಕ್ಕೆ ಕಾರಣನಾಗಿದ್ದ ನನ್ನ ಬಗ್ಗೆ ಪೋಲೀಸರಲ್ಲಿ ಗೌರವದ ಭಾವನೆಯುತ್ಪನ್ನವಾಯಿತು. ಅವನ ಪ್ರತಿಸ್ಪರ್ಧಿಗಳಾಗಿದ್ದವರನೇಕರು ನನ್ನ ಹತ್ತಿರ ಬರುವುದಕ್ಕಾರಂಭವಾಯಿತು. ಪೋಲೀಸ್ ಖಾತೆಯಲ್ಲಿ ಒಣಪ್ರತಿಷ್ಠೆಯ ಚೆಲ್ಲಾಟ ವಿಪರೀತ. ತಾನೆಂದರೆ ಒಬ್ಬ ಸರ್ವಾಧಿಕಾರಿ, ತನ್ನೆದುರಿಗೆ ಯಾರದೇನು ಬಿಸಾತು? ಎಂದು ಬೀಗುವ ಅಲ್ಪಮತಿಗಳೇ ಹೆಚ್ಚು ಈ ಖಾತೆಯಲ್ಲಿ. ಅಂಥ ಒಣಹೆಮ್ಮೆಯ ವ್ಯಕ್ತಿಗಳಿಗೆಲ್ಲ ಶಿರೋಮಣಿಯಂತಿದ್ದವನು ಸಿದ್ಧಬಸಪ್ಪ.

ಅಂದಿನ ಘಟನೆ ಜರಗಿದ ಬಳಿಕ ಅವನ ಚೆಲ್ಲಾಟ ದಿನದಿಂದ ದಿನಕ್ಕೆ ಸೌಮ್ಯಸ್ವರೂಪ ತಳೆಯುತ್ತ ಹೋಯಿತು. ಅದರೊಡನೆಯೆ ಅವನ ಕುತಂತ್ರಗಳೂ ಬೆಳಕಿಗೆ ಬರತೊಡಗಿದುವು.

ಒಂದು ಬಾರಿ ಅವನು ಹಳ್ಳಿಯವನೊಬ್ಬನನ್ನು ರಾತ್ರಿಕಾಲದಲ್ಲಿ ಹಿಡಿದುಕೊಂಡು ಬಂದ. ಆ ಹಳ್ಳಿಗನ ಹತ್ತಿರ ಎರಡುನೂರು ರೂಪಾಯಿಗಳಿದ್ದುವು. ರಾತ್ರಿಯ ರೈಲಿಗೆ ಬಂದಿಳಿದ ಅವನು ಸ್ಟೇಶನ್ ರಸ್ತೆಯಲ್ಲಿ ಬರುತ್ತಾ ತನ್ನ ಕಿಸೆಯಲ್ಲಿ ರೂಪಾಯಿಗಳಿವೆಯೋ ಇಲ್ಲವೋ ಎಂದು ಅನುಮಾನಪಟ್ಟುಕೊಳ್ಳುತ್ತಾ ಆಗಾಗ ಕಿಸೆ ಮುಟ್ಟಿ ನೋಡಿಕೊಳ್ಳುತ್ತಾ ಬರುತ್ತಿದ್ದ. ಅದನ್ನು ಕಂಡ ಸಿದ್ಧಬಸಪ್ಪನಿಗೆ ಅವನೊಬ್ಬ ಕಳ್ಳನೆಂದೆನ್ನಿಸಿರಬೇಕು. ಆ ಹಳ್ಳಿಗನನ್ನು ಹಿಡಿದು ಶೋಧಿಸಿ ಸಿದ್ಧಬಸಪ್ಪ ಕೇಳಿದ:

" ಇಷ್ಟೊಂದು ಹಣ ನಿನ್ನ ಹತ್ತರ ಎಲ್ಲಿಂದಾ ಬಂತೋ ?"

" ನಮ್ಮ ಧಣೇರು ಕೊಟ್ಟು ಕಳಿಸಿದ್ದಾರಪ್ಪಾ. ಎಮ್ಮೆ ಕೊಂಡು ಒಯ್ಯಲಿಕ್ಕೆ." ಗಾಬರಿಗೊಂಡು ಉತ್ತರವಿತ್ತ ಆ ಹಳ್ಳಿಗ.

ಅವನು ನಿಜವನ್ನೇ ಹೇಳಿದರೂ ಸಿದ್ಧಬಸಪ್ಪ ಗಮನಿಸಲಿಲ್ಲ.

" ತುಡುಗ ಸೂಳೀಮಗನೇ, ನನ್ನ ಮುಂದೆ ಏನಾದರೊಂದು ಹೇಳಿ ಪಾರಾಗಬೇಕಂತ ಮಾಡೀಯಾ ! ನಾನು ಯಾರಂತ ತಿಳಿದಿದ್ದೀ ! ನಿಮ್ಮಂಥಾ ಬದ್ಮಾಷರನ್ನೆಲ್ಲಾ ಹಿಂಡಲಗಿಗೆ ಕಳಿಸುವ ಸಿದಬಸಪ್ಪ ಇದ್ದೀನಿ ನಾನು ಸಿದ್ದಬಸಪ್ಪ !" ಎಂದು ಹೇಳಿ ಆ ಹಳ್ಳಿಗನ ಹತ್ತಿರವಿದ್ದ ಹಣವನ್ನು ಜಪ್ತ್ ಮಾಡಿಕೊಂಡು ಅವನ ಮೇಲೆ ಖಟ್ಲೆ ಹಾಕಿದ.

ನ್ಯಾಯಾಲಯದಲ್ಲಿಯೂ ಆ ಹಳ್ಳಿಗ, ಸಿದ್ಧಬಸಪ್ಪನೆದುರಿಗೆ ಹೇಳಿದ ಮಾತನ್ನೇ ಹೇಳಿದ. ನ್ಯಾಯಾಧೀಶರು ಅವನ ಒಡೆಯನಿಗೆ 'ಸಮನ್ಸ್' ಕಳಿಸಿದರು. ನಗರಕ್ಕೆ ಎಂದೂ ಹೋಗದಿದ್ದ ತನ್ನ ರೈತ ಹಣ ಕಳೆದುಕೊಂಡು ಗೋಳಿಗೀಡಾಗಿರುವನೊ ಏನೊ ಎಂದು ಚಿಂತಿಸುತ್ತಾ ಅವನ ಸಾಹುಕಾರ ಗೊಬ್ಬೂರಿಗೆ ಬಂದು ಎಲ್ಲಾ ಕಡೆಗೂ ರೈತನನ್ನು ಹುಡುಕಿ ನಿರಾಶನಾಗಿ ತನ್ನ ಊರಿಗೆ ಹಿಂದಿರುಗಿದಾಗ ಕೋರ್ಟಿನ 'ಸಮನ್ಸ್' ಅವನ ಕೈಗೆ ಬಂತು. ಇದೇನು ಪೀಕಲಾಟ ಎಂದುಕೊಳ್ಳುತ್ತಾ ಅವನೂ ಗಾಬರಿಗೊಂಡು ಮತ್ತೆ ನಗರಕ್ಕೆ ಧಾವಿಸಿ ಬಂದು ನ್ಯಾಯಾಲಯಕ್ಕೆ ಹೋಗಿ ನಿಜ ಸಂಗತಿಯನ್ನು ತಿಳಿಸಿದ. ಸಿದ್ಧಬಸಪ್ಪನ ದುಡುಕಿನಿಂದಾಗಿ ಆ ನಿರಪರಾಧಿ ಹಳ್ಳಿಗ ಖಟ್ಲೆ ಮುಗಿಯುವವರೆಗೆ ಜೇಲಿನಲ್ಲಿ ಕೊಳೆಯಬೇಕಾಗಿ ಬಂದುದನ್ನು ಕಂಡು ನ್ಯಾಯಾಧೀಶರಿಗೆ ಬಹಳ ಕೋಪ ಬಂದಿತು. ಆರೋಪಿಯನ್ನು ಬಿಡುಗಡೆ ಮಾಡಿ,

ತೀರ್ಪಿನಲ್ಲಿ ಸಿದ್ಧಬಸಪ್ಪನನ್ನು ಖಂಡಿಸಿ ಬರೆಯುವ ಯೋಚನೆಯಲ್ಲಿದ್ದರು. ಸಿದ್ಧಬಸಪ್ಪ ನ್ಯಾಯಾಧೀಶರ ಕಾಲು ಹಿಡಿದು ಹಾಗೆ ಬರೆಯಬಾರದೆಂದು ದೀನ ವಾಣಿಯಲ್ಲಿ ಬೇಡಿಕೊಂಡ. ನ್ಯಾಯಾಧೀಶರು ಅವನಿಗೆ ಒಳಿತಾಗಿ ಛೀ ಥೂ ಹಾಕಿದರಲ್ಲದೆ ಆ ಹಳ್ಳಿಗನ ಕಾಲು ಮುಟ್ಟಿ ಕ್ಷಮೆ ಕೇಳಿಕೊಳ್ಳುವಂತೆ ಮಾಡಿದರು.

ಅಂದಿನಿಂದ ಸುಳ್ಳು ಖಟ್ಲೆ ಹಾಕುವುದನ್ನು ಸ್ವಲ್ಪಮಟ್ಟಿಗಾದರೂ ಕಡಮೆ ಮಾಡಿದ ಸಿದ್ಧಬಸಪ್ಪ. ಆದರೂ, ನಾಯಿಯ ಬಾಲ ಡೊಂಕು ಎನ್ನುವ ಹಾಗೆ ಸಿದ್ಧಬಸಪ್ಪ ತನ್ನ ಚಾಳಿಯನ್ನು ಸಂಪೂರ್ಣವಾಗಿ ತ್ಯಜಿಸಲಿಲ್ಲ.

ಒಬ್ಬ ಬಡಮನುಷ್ಯ ನಿರುದ್ಯೋಗಿಯಾಗಿ ನಾಲ್ಕೈದು ತಿಂಗಳುಗಳಿಂದ ಸಂಪಾದನೆಯಿಲ್ಲದ ಸಂದರ್ಭದಲ್ಲಿ ಸಿಲುಕಿ, ಹೆಂಡಿರು ಮಕ್ಕಳು ಉಪವಾಸವಿರುವುದನ್ನು ನೋಡಲಾರದೆ, ಮದುವೆಯ ಕಾಲಕ್ಕೆ ಮಾವನಿಂದ ದೊರೆತಿದ್ದ ಬೆಲೆ ಬಾಳುವ ಒಂದು ಶಲ್ಲೆಯನ್ನು ಮಾರಾಟಮಾಡಲು ಬಂದಿದ್ದ. ಸಿದ್ಧಬಸಪ್ಪನ ಹದ್ದಿನ ದೃಷ್ಟಿ ಆ ಬಡವನ ಮೇಲೆ ಬಿತ್ತು. ಅದು ಕಳವಿನ ಮಾಲು ಎಂದು ತಿಳಿದು ಅವನನ್ನು ಹಿಡಿದು ಆ ಶಲ್ಲೆಯನ್ನು ಜಪ್ತಿ ಮಾಡಿದ, ಆ ಶಲ್ಲೆಯು ತನ್ನದೆಂದು ಹೇಳಲು ಹಸ್ತಕನೊಬ್ಬನನ್ನು ಸಿದ್ಧಗೊಳಿಸಿ, ಅದು ಕಳವಾಗಿ ಹೋಗಿದೆಯೆಂದು ಫಿರ್ಯಾದು ಮಾಡಿಸಿಕೊಂಡ, ಪರಿಚಿತನಾದ ಸಿಂಪಿಗನೊಬ್ಬನಿಂದ ಆ ಶಲ್ಲೆಯದ ಮೇಲೊಂದು ಚಿತ್ರ ತೆಗೆಯಿಸಿ ಅದು ಫಿರ್ಯಾದಿಯು ತೆಗೆಯಿಸಿದುದೆಂದು ಸಾಧಿಸ ಹೊರಟ. ಈ ಸುಳ್ಳು ಸಾಕ್ಷಿ ಪುರಾವೆಗಳೆಲ್ಲ ನಮ್ಮ ಮುಂದೆ ಬಂದುವು. ಅದು ಸುಳ್ಳು ಖಟ್ಲೆಯೆಂದು ನನಗೆ ಮನವರಿಕೆಯಾದೊಡನೆ ಏನಾದರೂ ಉಪಾಯ ಹೂಡಿ ಆ ಬಡವನನ್ನು ಪಾರುಮಾಡಬೇಕೆಂದು ನಾನು ನಿರ್ಧರಿಸಿಕೊಂಡೆ. ನಿಯಮಗಳ ಮೇರೆಗೆ ಖಟ್ಲೆಯ ಕಾಗದ ಪತ್ರಗಳನ್ನು ಸಿದ್ಧಗೊಳಿಸಿ ನ್ಯಾಯಾಲಯಕ್ಕೆ ಕಳಿಸಿದ್ದಾಯಿತು.

ನಾನು, ಸಿದ್ಧಬಸಪ್ಪನ ಪ್ರತಿಸ್ಪರ್ಧಿಯಾಗಿದ್ದ ಕಲೀಮುದ್ದೀನನನ್ನು ಕರೆಯಿಸಿ ನಡೆದ ಅನ್ಯಾಯವನ್ನೆಲ್ಲ ಅವನಿಗೆ ತಿಳಿಸಿದೆ. ಸಿದ್ಧಬಸಪ್ಪನ ಮುಖ ಮುರಿಯಬೇಕೆಂದು ಬಹಳ ದಿನಗಳಿಂದ ಹಾತೊರೆಯುತ್ತಿದ್ದ ಕಲೀಮುದ್ದೀನ್ ನೇರವಾಗಿ ಆ ಸಿಂಪಿಗನ ಹತ್ತಿರ ಹೋಗಿ, ಅವನನ್ನು ಹೆದರಿಸಿ ಬೆದರಿಸಿ ನಿಜ ಸಂಗತಿಯನ್ನರಿತುಕೊಂಡು, ಸುಳ್ಳು ಸಾಕ್ಷಿ ಹೇಳಿ ಆ ಬಡಪ್ರಾಣಿಯನ್ನು ಜೈಲಿಗೆ

ಕಳಿಸಿದರೆ ತಾನು ಆ ಸಿಂಪಿಗನನ್ನು ಯಾವುದಾದರೊಂದು ಖಟ್ಲೆಯಲ್ಲಿ ಸಿಲುಕಿಸಿ ಫಜೀತಿ ಮಾಡುವುದಾಗಿ ಎಚ್ಚರಿಕೆ ಕೊಟ್ಟು ಬಂದ. ಪೋಲೀಸರನ್ನು ಎದುರು ಹಾಕಿಕೊಳ್ಳುವುದೆಂದರೆ ಎಲ್ಲರಿಗೂ ಅಂಜಿಕೆ. ಈ ಉಪದ್ವ್ಯಾಪವೆಲ್ಲಾ ತನಗೇಕೆ ಎಂದು ಯೋಚಿಸಿದ ಆ ಸಿಂಪಿಗ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವಾಗ ನಿಜ ಸಂಗತಿಯನ್ನೇ–ಆ ಶಲ್ಲೆಯದ ಮೇಲೆ ಸಿದ್ಧಬಸಪ್ಪನೇ ಚಿತ್ರ ತೆಗೆಯಿಸಿಕೊಂಡು ಹೋದುದನ್ನು ತಿಳಿಸಿಬಿಟ್ಟ. ಮುಖ್ಯ ಸಾಕ್ಷಿಯೇ ಒಡೆದು ಹೋದುದರಿಂದ ಖಟ್ಲೆ ಬಿದ್ದು ಹೋಗಿ ಆ ಬಡವನ ಬಿಡುಗಡೆಯಾಯಿತು. ಆಗಲೂ ನ್ಯಾಯಾಧೀಶರು ಸಿದ್ಧಬಸಪ್ಪನಿಗೆ ಛೀಮಾರಿ ಹಾಕದಿರಲಿಲ್ಲ. ಆ ವಿಷಯ ಫೌಜದಾರರಿಗೆ ಗೊತ್ತಾಗುತ್ತಲೂ ಅವರೂ ರೇಗಿ,

"ಹೀಗೆಲ್ಲ ಮಾಡುತ್ತಾ ಹೋದರೆ ನಮ್ಮ ಪೋಲೀಸ್ ಸ್ಟೇಶನ್ನಿಗೇ ಕೆಟ್ಟ ಹೆಸರು ತಂದಿಟ್ಟೇಯ! ಇನ್ನು ಮೇಲಾದರೂ ಸುಳ್ಳು ಕೇಸು ಮಾಡುವ ಹೇಸಿ ತನಕ್ಕೆ ಬೀಳಬೇಡ," ಎಂದು ಬಯ್ದು ಬುದ್ಧಿ ಹೇಳಿದರು.

ಸಿದ್ಧಬಸಪ್ಪ ಹೀಗೆ ಸುಳ್ಳು ಖಟ್ಲೆಗಳನ್ನೇ ಹಾಕುತ್ತಿದ್ದನೆಂದೇನೂ ಅಲ್ಲ. ನಿಜವಾಗಿ ಸಂಭವಿಸಿದ ಅಪರಾಧಗಳನ್ನು ಕಂಡು ಹಿಡಿದು ಆರೋಪಿಗಳನ್ನು ಪತ್ತೆ ಮಾಡುವುದರಲ್ಲಿ ಅವನಂಥ ಜಾಣರಿನ್ನೊಬ್ಬರಿರಲಿಲ್ಲ. ಅಪರಾಧದ ಶೋಧದಲ್ಲಿ ತೊಡಗಿದಾಗ ಅವನಿಗೆ ಊಟ ನಿದ್ರೆ ವಿರಾಮ ಯಾವುದರ ಕಡೆಗೂ ಲಕ್ಷ್ಯವಿರುತ್ತಿರಲಿಲ್ಲ. ಅವನ ದೊಡ್ಡ ದೌರ್ಬಲ್ಯವೆಂದರೆ ಇನಾಮಿನ ಆಸೆ; ಅದೇ ಅವನನ್ನು ಹಾಳುಮಾಡುತ್ತಿತ್ತು.

ಒಂದು ದಿನ ಬೆಳಗು ಮುಂಜಾನೆ ನಾಲ್ಕು ಗಂಟೆಯ ವೇಳೆಗೆ ನಾನು ಮನೆಯಲ್ಲಿ ಮಲಗಿ ನಿದ್ರಿಸುತ್ತಿದ್ದಾಗ ಪೋಲೀಸನೊಬ್ಬ ಬಂದು ನನ್ನನ್ನು ಎಬ್ಬಿಸಿ ಫೌಜದಾರರು ಕರೆಯುತ್ತಿರುವರೆಂದು ಹೇಳಿದ. ನಾನು ಎದ್ದು, ಮುಖ ತೊಳೆದುಕೊಂಡು, ಸೈಕಲ್ ಏರಿ ಕಚೇರಿಗೆ ಬಂದಾಗ, ಆ ರಾತ್ರೆ ನಗರದಲ್ಲೊಂದು ಕಡೆ ದೊಡ್ಡ ದರೋಡೆಯೊಂದು ನಡೆದ ಸಂಗತಿ ಗೊತ್ತಾಯಿತು. "ಕ್ರೈಂ ಬ್ರ್ಯಾಂಚ್"ಗೆ ಸೇರಿದವರಾದ ನಾವು ಆ ಸ್ಥಳಕ್ಕೆ ಹೋಗಿ ಪಂಚನಾಮೆ (ಮಹಜರು) ಮಾಡಬೇಕಿದ್ದಿತು. ಕಾಗದಗಳನ್ನು ತೆಗೆದುಕೊಂಡು ನಾವು ಅಲ್ಲಿಗೆ ಹೋದೆವು. ಆ ನಗರದ ಪ್ರಸಿದ್ಧ ಲಿಂಗವಂತ ಮನೆತನವೊಂದಕ್ಕೆ ಸೇರಿದ್ದ ಮನೆ ಅದು. ಹಿತ್ತಿಲ ಬಾಗಿಲಕ್ಕೆ ಕನ್ನ ಬಿದ್ದಿತ್ತು. ಮನೆಯ

ಹಿಂಭಾಗದಲ್ಲಿ ಕೆಲವು ಬಟ್ಟೆಬರೆ ಬಿದ್ದುಕೊಂಡಿದ್ದುವು. ಒಳಗಡೆ, ಗೋಡೆಗಳಲ್ಲಿ ಬೀರುಗಳಿದ್ದ ಭಾಗದಲ್ಲಿ ಮಣ್ಣು ಅಗೆದು ತೆಗೆಯಲಾಗಿತ್ತು. ಒಂದು ಬೀರುವನ್ನು ಮುರಿದು ಹಾಕಲಾಗಿತ್ತು. ಎಲ್ಲವನ್ನೂ ನೋಡಿ, ಕಳ್ಳರು ಹಿತ್ತಿಲ ಬಾಗಿಲಿನಿಂದ ನುಗ್ಗಿ ಕಳವು ಮಾಡಿಕೊಂಡು ಹೋಗಿರಬೇಕೆಂದು ನಾವು ಅರ್ಥ ಮಾಡಿಕೊಂಡೆವು.

ಅಂದು ರಾತ್ರೆ ಮನೆಯಲ್ಲಿದ್ದವರು, ಮನೆಯೊಡೆಯ, ಅವನ ಹೆಂಡತಿ ಇಬ್ಬರೇ. ಅವರಿಬ್ಬರ ಕುತ್ತಿಗೆಗಳು ಹಿಸುಕಿದ ಹಾಗೆ ಕೆಂಪಾಗಿದ್ದುವಲ್ಲದೆ ಅಲ್ಲಲ್ಲಿ ಉಗುರಿನ ಕಲೆಗಳೂ ಮೂಡಿದ್ದುವು ಆವರು ತುಂಬಾ ಗಾಬರಿಗೊಂಡಿದ್ದರು. ನಾವು ಕೇಳಿದ ಪ್ರಶ್ನೆಗಳಿಗೆ ಉತ್ತರವೀಯದೆ ಒಂದೇ ಸಮನೆ "ಕಳ್ಳರು, ಕಳ್ಳರು," ಎಂದು ಬೊಬ್ಬೆಯಿಡುತ್ತಿದ್ದರು. ಕಳವಾದ ಮಾಲು ಎಷ್ಟೆಂಬುದನ್ನು ಅವರಿಂದ ತಿಳಿದುಕೊಳ್ಳದೆ ನಾವು ಫಿರ್ಯಾದು ತೆಗೆದುಕೊಳ್ಳುವಂತಿರಲಿಲ್ಲ.

ದರೋಡೆಯಾದ ಮಾಲು ಪರಸ್ಥಳಗಳಿಗೆ ಹೋಗದಂತೆ ರೈಲ್ವೆ ಸ್ಟೇಶನ್ನಿನಲ್ಲೂ ನಗರದ ಬೇರೆ ಬೇರೆ ಗಡಿಗಳಲ್ಲೂ ಪೋಲೀಸರ ಕಾವಲನ್ನಿರಿಸಲಾಯಿತು. ನಗರದ ಸುಪ್ರಸಿದ್ಧ ಕಳ್ಳರ ಮನೆಗಳಿಗೂ ಕಾವಲು ಆರಂಭವಾಯಿತು. ಪೋಲೀಸರೆಲ್ಲರೂ ನಗರದಲ್ಲಿ ಸುತ್ತತೊಡಗಿದರು. ಆ ಸಾಹುಕಾರನನ್ನೂ ಅವನ ಹೆಂಡತಿಯನ್ನೂ ಆಸ್ಪತ್ರೆಗೆ ಸಾಗಿಸಲಾಯಿತು. ನಾವು ಅಪರಾಧ ನಡೆದ ಸ್ಥಳದ ಪಂಚನಾಮೆ ಮಾಡುತ್ತಿದ್ದ ಹಾಗೆ ನಲವತ್ತು ವರ್ಷ ವಯಸ್ಸಿನ ಒಬ್ಬ ಮಹಿಳೆ ಅಲ್ಲಿಗೆ ಬಂದು ಅಂಜುತ್ತಂಜುತ್ತಾ ಏನೇನು ಕಳವಾಗಿದೆಯೆಂದು ವಿಚಾರಿಸಿದಳು. ಇನ್ನೂ ಗೊತ್ತಾಗಿಲ್ಲವೆಂದು ನಾವು ಹೇಳುತ್ತಲೂ ಅವಳು ಒಂದು ಕಡೆ ಕುಳಿತು ಗಟ್ಟಿಯಾಗಿ ಅಳತೊಡಗಿದಳು. ಅವಳು ಆ ಸಾಹುಕಾರನ ತಂಗಿ, ಹತ್ತು ವರ್ಷಗಳ ಕೆಳಗೆ ಅವಳ ಗಂಡ ತೀರಿಕೊಂಡಿದ್ದ, ೧೭ ವರ್ಷ ವಯಸ್ಸಿನ ಅವಳ ಮಗನೊಬ್ಬ ಮ್ಯಾಟ್ರಿಕ್ ವರ್ಗದಲ್ಲಿ ಓದುತ್ತಿದ್ದ, ಅವಳ ಮೈದುನನೊಬ್ಬ ಆ ನಗರದಲ್ಲಿ ವಕೀಲನಾಗಿದ್ದ, ಅವರದು ಆಗರ್ಭ ಶ್ರೀಮಂತ ಮನೆತನ. ಈ ವಿಷಯಗಳನ್ನೆಲ್ಲ ತಿಳಿಸುತ್ತಾ ಅವಳು ಬೋರಾಡಿ ಅಳತೊಡಗಿದಳು – ಅವಳ ಅಣ್ಣನಿಗೆ ಅಂಥ ಗಂಭೀರ ಸ್ವರೂಪದ ಗಾಯವೇನೂ ಆಗಿಲ್ಲವೆಂದು ನಾವು

ಹೇಳಿದ ಮೇಲೂ ಅವಳ ಅಳು ನಿಲ್ಲಲಿಲ್ಲ. ಆಸ್ಪತ್ರೆಗೆ ಹೋಗಿ ಅವನನ್ನು ನೋಡಿಕೊಂಡು ಬರಬಹುದೆಂದು ನಾವು ಹೇಳಿದೆವು. ಅವಳು ಹೋಗಲಿಲ್ಲ.

ಹಠಾತ್ತಾಗಿ ನನ್ನ ತಲೆಯಲ್ಲಿ ಹೊಸ ವಿಚಾರವೊಂದು ಮೂಡಿತು. ತನ್ನ ಅಣ್ಣನಿಗೆ ಗಾಯವಾದುದಕ್ಕಾಗಿ ಅವಳು ಅಳುತ್ತಿರಲಿಲ್ಲ, ಅವಳ ಶೋಕದ ಕಾರಣ ಬೇರೆ ಏನಾದರೂ ಇರಬೇಕು ಎಂಬ ಅನುಮಾನ ಬಲವಾಯಿತು ಆವಳನ್ನು ಒಂದು ಪಕ್ಕಕ್ಕೆ ಕರೆದೊಯ್ದು, “ ನೀವು ಯಾಕೆ ಅಳುತ್ತಿದ್ದೀರಿ? ಇವರಲ್ಲೇನಾದರೂ ರಹಸ್ಯವಿದೆಯೋ ? ಇದ್ದರೆ ಮುಚ್ಚಿಟ್ಟುಕೊಳ್ಳದೆ ಹೇಳಿರಿ,” ಎಂದು ಕೇಳಿದೆ.

ಹೇಳಲೋ ಬೇಡವೋ ಎಂದು ಅನುಮಾನಿಸುತ್ತಲೆ ಅವಳು ಎಲ್ಲವನ್ನೂ ಹೇಳತೊಡಗಿದಳು.

ಅವಳ ಗಂಡ ಕಾಲವಾದಾಗ ಅವಳ ಹತ್ತಿರ ಮೂರು ನೂರು ತೊಲೆಗಳಷ್ಟು ಬಂಗಾರದ ಒಡವೆಗಳೂ ಹತ್ತು ಸಾವಿರ ರೂಪಾಯಿ ನಗದು ಹಣವೂ ಇದ್ದಿತು. ಅದೆಲ್ಲವೂ ತನ್ನ ಮಗನಿಗೇ ದಕ್ಕಬೇಕೆಂಬ ಉದ್ದೇಶದಿಂದ, ತನ್ನ ಮೈದುನನಿಗೆ ಗೊತ್ತಾಗದಂತೆ ಅವಳು ಅದನ್ನು ತನ್ನ ಅಣ್ಣನ ಹತ್ತಿರ ಇಟ್ಟಿದ್ದಳು. ಅವಳು, ಅವಳ ಅಣ್ಣ ಇಬ್ಬರನ್ನುಳಿದು ಈ ರಹಸ್ಯ ಇನ್ನಾರಿಗೂ ಗೊತ್ತಿರಲಿಲ್ಲ. ಈ ದರೋಡೆಯಲ್ಲಿ ತನ್ನ ಒಡವೆ ಮತ್ತು ಹಣವೂ ಕಳೆದು ಹೋಗಿರಬೇಕೆಂದು ತಿಳಿದು ಅವಳು ಹಾಗೆ ಬಿಟ್ಟೂ ಬಿಡದೆ ಅಳುತ್ತಿದ್ದಳು. ಅವಳ ಗಂಡ ಸತ್ತ ಬಳಿಕ ಅವಳ ಮೈದುನ ಅವಳನ್ನೂ ಅವಳ ಮಗನನ್ನೂ ಒಳ್ಳೆಯ ರೀತಿಯಿಂದಲೆ ನೋಡಿಕೊಂಡು ಬರುತ್ತಿದ್ದನಂತೆ. “ ಇಂಥ ಒಳ್ಳೆಯ ಮೈದುನನಿಗೆ ನಾನು ದ್ರೋಹ ಬಗೆದೆನಲ್ಲಾ, ಪಾಪಿ ! ಈಗ ಎಲ್ಲಾ ಕಳಕೊಂಡು ಕೂತೆ !” ಎಂದು, ಪಶ್ಚಾತ್ತಾಪ ಬೆರೆತ ಧ್ವನಿಯಲ್ಲಿ ಅವಳು ಆಕ್ರೋಶ ಮಾಡತೊಡಗಿದಳು. ನಾವು ಪರಿಪರಿಯಾಗಿ ತಿಳಿಸಿ ಹೇಳಿ ಅವಳನ್ನು ಸಂತೈಸಿದೆವು.

ಈ ರಹಸ್ಯದ ವಿಷಯವನ್ನು ತಕ್ಷಣ ಫೌಜದಾರರಿಗೆ ತಿಳಿಸಲಾಯಿತು. ಅವರು ಇನ್ಸ್‌ಪೆಕ್ಟರರಿಗೆ ಹೇಳಿ ಕಳಿಸಿದರು. ಇನ್ಸ್‌ಪೆಕ್ಟರರೂ ಬಂದರು. ಆ ಹೆಣ್ಣುಮಗಳ ನಿಧಿಯೂ ಕಳವಾಗಿರಬೇಕೆಂದು ಎಲ್ಲರಿಗೂ ಎನಿಸಿತು.

ಆಸ್ಪತ್ರೆಯಲ್ಲಿದ್ದ ಸಾಹುಕಾರ ಮತ್ತು ಅವನ ಹೆಂಡತಿ ಇನ್ನೂ ಮಾತ ನಾಡುವ ಸ್ಥಿತಿಗೆ ಬಂದಿರಲಿಲ್ಲ.

ಅವರ ನಾಡಿಗಳನ್ನು ಪರೀಕ್ಷಿಸುತ್ತಿದ್ದ ಡಾಕ್ಟರಿಗೂ ಏನೋ ಅನುಮಾನ ಬಂದಿತು. ಅವರು ನಿಜವಾಗಿ ಬೆದರಿಕೊಂಡಿದ್ದಲ್ಲಿ ನಾಡಿಯು ಹೊಡೆತ ಹೆಚ್ಚಾಗುತ್ತಿತ್ತು. ಆದರೆ ಅವರಿಬ್ಬರ ನಾಡಿಯ ಹೊಡೆತ ಇದ್ದುದಿದ್ದ ಹಾಗೇ ಇತ್ತು; ಮುಖಗಳ ಮೇಲೆ ಮಾತ್ರ ಗಾಬರಿಯ ಚಿಹ್ನಗಳು ಕಾಣಿಸುತ್ತಿದ್ದುವು. ಗಂಟೆಗಳು ದಾಟಿದುವು. ಅಪರಾಹ್ನ ನಾಲ್ಕು ಗಂಟೆಯಾದರೂ ಅವರು ಬಾಯಿ ಬಿಡಲಿಲ್ಲ. ದರೋಡೆಯಾದ ಮಾಲು ಎಲ್ಲಿ ಬಹು ದೂರ ಹೋಗಿಬಿಡುವುದೋ ಎಂದು ನಮಗೆ ದಿಗಿಲು.

ಅವರ ವರ್ತನೆಯನ್ನು ನಿರೀಕ್ಷಿಸಿ ಸಂದೇಹಪಟ್ಟುಕೊಂಡ ಡಾಕ್ಟರು ಅಲ್ಲಿಯೆ ಇದ್ದ ಸಿದ್ಧಬಸಪ್ಪನನ್ನು ತಮ್ಮ ಕೋಣೆಗೆ ಕರೆದೊಯ್ದು ತಮ್ಮ ಸಂಶಯವನ್ನು ವಿವರಿಸಿ ಹೇಳಿದರು. ಚಾಣಾಕ್ಷನಾದ ಸಿದ್ಧಬಸಪ್ಪನಿಗೂ ಬಲು ಹೊತ್ತಿನಿಂದಲೂ ಅನುಮಾನಕ್ಕಾರಂಭವಾಗಿತ್ತು. ಡಾಕ್ಟರು ಅಷ್ಟು ಹೇಳಿ ದೊಡನೆಯೆ ಅವನು ಆ ದಂಪತಿಗಳನ್ನು ಆಸ್ಪತ್ರೆಯಿಂದ ಹೊರಡಿಸಿ ಕಚೇರಿಗೆ ಕರೆದು ತಂದ. ಪೇಟೆಯಲ್ಲಿ ಸುತ್ತಾಡಿ ಆ ಸಾಹುಕಾರನ ಬಗ್ಗೆ ವಿವರಗಳನ್ನು ತಿಳಿದುಕೊಂಡ. ಸಟ್ಟಾ ವ್ಯವಹಾರದಲ್ಲಿ ಆ ಸಾಹುಕಾರನಿಗೆ ಬಹಳ ಹಾನಿ ಯಾಗಿದ್ದಿತಂತೆ. ತಂಗಿಯ ನಿಧಿಯನ್ನು ಎತ್ತಿಹಾಕುವ ಉದ್ದೇಶದಿಂದ ಅವನೇ ಈ ಕಪಟನಾಟಕ ಹೂಡಿರಬೇಕೆಂದು ತರ್ಕ ಕಟ್ಟಿದ ಸಿದ್ಧಬಸಪ್ಪ ಕಚೇರಿಗೆ ಬಂದವನೆ ಆ ಸಾಹುಕಾರನನ್ನು ಹಿಡಿದು ಎರಡು ಏಟು ಹಾಕಿದ. ಡಾಕ್ಟರರ ಚಿಕಿತ್ಸೆಗೂ ಬಾಯಿಬಿಡದಿದ್ದ ಆ ಸಾಹುಕಾರ ಸಿದ್ಧಬಸಪ್ಪನ ಹೊಡೆತದಿಂದ ಬಾಯಿಬಿಟ್ಟು ವ್ಯಾಪಾರದಲ್ಲಿ ಹಾನಿಯಾದುದರಿಂದ ತಂಗಿಯ ನಿಧಿಯನ್ನು ದುರುಪಯೋಗಪಡಿಸಿಕೊಳ್ಳಲು ಯತ್ನಿಸಿದ್ದುದು ನಿಜವೆಂದು ಒಪ್ಪಿದನಾದರೂ ತನ್ನ ಮರ್ಯಾದೆಯನ್ನುಳಿಸಿಕೊಳ್ಳಲು ಕಳವಾದುದೂ ನಿಜವೆಂದೇ ಸಾಧಿಸಿದ. ತಂಗಿಯ ನಿಧಿಯನ್ನು ತಾನು ಒಂದು ಕಡೆ ಇಟ್ಟಿರುವುದಾಗಿಯೂ ಅದು ಕಳ್ಳರ ಕೈಗೆ ಸಿಗದೆ ಉಳಿದಿದ್ದರೆ ದೇವರು ಕಾಪಾಡ್ಡಿದಂತಾಗುವುದೆಂದೂ ಹೇಳಿದ.

ಸರಿ. ಅವನನ್ನು ಪುನಃ ಅವನ ಮನೆಗೆ ಸಾಗಿಸಿದೆವು. ಅವನು ತೋರಿಸಿದ ಬೀರುವೊಂದನ್ನು ತೆರೆದು ನೋಡಿದಾಗ ಅವನ ತಂಗಿಯ ಒಡವೆಗಳೆಲ್ಲಾ

ಅಲ್ಲಿದ್ದುದು ಕಾಣಿಸಿತು. ಹತ್ತು ಸಾವಿರ ರೂಪಾಯಿಗಳಲ್ಲಿ ಮೂರು ಸಾವಿರ ಇಲ್ಲವಾಗಿದ್ದುವು. ಆ ರೂಪಾಯಿಗಳನ್ನು ತಾನು ಉಪಯೋಗಿಸಿಕೊಂಡಿದ್ದುದನ್ನು ಅವನು ಒಪ್ಪಿಕೊಂಡ. ಅನಂತರ ಮನೆಯನ್ನೆಲ್ಲ ಶೋಧಿಸಿದ ನಾಟಕ ಮಾಡಿ ಅಡುಗೆ ಮನೆಯಲ್ಲಿನ ಕೆಲವು ಪಾತ್ರೆಗಳು ಕಳವಾಗಿವೆಯೆಂದು ಹೇಳಿದ. ಫಿರ್ಯಾದಿನಲ್ಲಿ ಅದರಂತೆ ಬರೆದುಕೊಳ್ಳಲಾಯಿತು. ಆ ಬಂಗಾರದ ಒಡವೆಗಳನ್ನೂ ನಗದು ಹಣವನ್ನೂ ಆ ಹೆಣ್ಣುಮಗಳ ಹೇಳಿಕೆಯಂತೆ ಅವಳ ಮೈದುನನಿಗೆ ಮುಟ್ಟಿಸಲಾಯಿತು.

ಪಾತ್ರೆಗಳು ಕಳವಾದ ವಿಷಯವನ್ನು ನಾವು ಯಾರೂ ನಂಬಲಿಲ್ಲ. ತಂಗಿಯ ನಿಧಿಯನ್ನು ಎತ್ತಿಹಾಕಲು ಆ ಸಾಹುಕಾರನೇ ದರೋಡೆಯ ನಾಟಕ ಮಾಡಿಸಿದ್ದುದು ಸ್ಪಷ್ಟವಾಗಿತ್ತು.

ಈ ಪ್ರಕರಣದಲ್ಲಿ ಆ ವಿಧವೆಯ ನಿಧಿಯನ್ನು ಉಳಿಸಿಕೊಟ್ಟ ಶ್ರೇಯಸ್ಸು ಆಸ್ಪತ್ರೆಯ ಡಾಕ್ಟರು ಮತ್ತು ಸಿದ್ಧಬಸಪ್ಪರದು. ಇಂಥ ತೊಡಕಿನ ಪ್ರಸಂಗಗಳಲ್ಲೆಲ್ಲ ಸಿದ್ಧಬಸಪ್ಪನ ಚಾಣಾಕ್ಷತನ ಬೆಳಕಿಗೆ ಬರುತ್ತಿತ್ತು.

ಗೊಬ್ಬೂರಿನ ಜನರು ಈಗಲೂ ಸಿದ್ಧಬಸಪ್ಪನನ್ನು ಸ್ಮರಿಸುತ್ತಾರೆ. ಅಷ್ಟು ಪ್ರಖ್ಯಾತಿ ಪಡೆದ ಹೆಸರು ಅವನದು.

೧೪

ಸಾದತಖಾನ್

ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ನಾನೂ ಕೂಡಾ ವಾರದಲ್ಲಿ ಎರಡು ದಿನ ರಾತ್ರಿಯ 'ಗಸ್ತಿ'ಗೆ ಹೋಗಬೇಕಾಗುತ್ತಿತ್ತು. ಇಬ್ಬರು ಪೋಲೀಸರು ಜೊತೆಯಾಗಿ ತಿರುಗುತ್ತಿದ್ದೆವು. ಒಂದು ರಾತ್ರೆ ಸಾದತಖಾನ್ ಎಂಬ ಪೋಲೀಸ ನನ್ನ ಜೊತೆಗೆ ಬಂದಿದ್ದ.

ರಾತ್ರೆ ಹನ್ನೆರಡರ ವೇಳೆಗೆ ಸೈಕಲ್ ಏರಿ ಹೊರಟೆವು. ಆಗತಾನೆ ಸಿನಿಮಾಗಳು ಮುಗಿದಿದ್ದುವು. ಜನ ಬೀದಿಗಳಲ್ಲಿ ಹಾದು ತಮ್ಮ ತಮ್ಮ ಮನೆಗಳಿಗೆ ಹಿಂದಿರುಗುತ್ತಿದ್ದರು. ಸೂಳೆಯರು ವಾಸವಾಗಿದ್ದ ಓಣಿಗೆ ಬಂದು ಒಂದು ಮೂಲೆಯಲ್ಲಿ ಸೈಕಲುಗಳನ್ನಿಟ್ಟು ನಾವು ಕತ್ತಲಲ್ಲಿ ಕುಳಿತುಕೊಂಡಿದ್ದೆವು. ಸಿನಿಮಾದ ಜನ ಬರುವುದರ ಸದ್ದಾದೊಡನೆ ಗಿರಾಕಿಗಳಿಲ್ಲದ ಸೂಳೆಯರು ತಮ್ಮ ಮನೆಗಳ ಕಿಟಕಿಗಳನ್ನು ತೆರೆದು ಇಣಿಕಿ ನೋಡುತ್ತಿದ್ದರು. ಅವರನ್ನೇ ಹುಡುಕುತ್ತಿದ್ದ ನಾಲ್ಕಾರು ರಸಿಕರೂ ಆ ಓಣಿಯಲ್ಲಿ ಸುಳಿಯತೊಡಗಿದರು. ಸಭ್ಯನಂತೆ ಬಟ್ಟೆಬರೆ ಮಾಡಿಕೊಂಡಿದ್ದವನೊಬ್ಬ ಒಂದು ಮನೆಯ ಮುಂದೆ ಬಂದು ನಿಂತುಕೊಂಡ. ಒಳಗಿದ್ದ ಹೆಣ್ಣು ಸನ್ನೆ ಮಾಡಿದಳು. ವ್ಯಾಪಾರದ ಚೌಕಾಸಿ ಮುಗಿದು ಅವಳು ಬಾಗಿಲು ತೆಗೆದು ಅವನನ್ನು ಒಳಗಡೆ ಬರಮಾಡಿ

ಕೊಳ್ಳುತ್ತಿದ್ದ ಹಾಗೇ ಸಾದತಖಾನ್ ಹುಲಿಯಂತೆ ಓಡಿಹೋಗಿ ಅವನನ್ನು ಹಿಡಿದುಕೊಂಡ.

"ಯಾರು ನೀನು? ಇಷ್ಟು ಹೊತ್ತಿನಲ್ಲಿ ಇಲ್ಲಿ ಯಾಕೆ ಬಂದಿದ್ದೀ? ನಮ್ಮ ಫೌಜದಾರರು ಕರೆಯುತ್ತಾರೆ. ಬಾ," ಎಂದ ಸಾದತಖಾನ್.

ಆ ಗೃಹಸ್ಥ ಬೆದರಿದ. ಆ ಕಾಲದಲ್ಲಿ ಪೋಲೀಸರೆಂದರೆ ಎಂಥವರಿಗೂ ಹೆದರಿಕೆಯೆ.

ತನ್ನ ಕಿಸೆಯಿಂದ ಸ್ವಲ್ಪ ಹಣವನ್ನು ತೆಗೆದು ಸಾದತಖಾನನಿಗೆ ಕೊಡಲು ಬಂದ ಆ ಗೃಹಸ್ಥ. ಅದನ್ನೀತ ತೆಗೆದುಕೊಳ್ಳಲಿಲ್ಲ; ಆ ಗೃಹಸ್ಥ ಮತ್ತೂ ಸ್ವಲ್ಪ ಹಣ ಕೊಟ್ಟ ಬಳಿಕ ತೆಗೆದುಕೊಂಡ. ಅವನನ್ನು ನನ್ನ ಹತ್ತಿರ ಕರೆದು ತಂದು,

"ಇವರು ರೈಲ್ವೆಯಲ್ಲಿ ಕೆಲಸ ಮಾಡುತ್ತಾರೆ ರಾವ್‌ಸಾಹೇಬ್. ಇವರಿಗೆ ೧೨೦ ರೂಪಾಯಿ ಸಂಬಳ. ಒಳ್ಳೆಯವರು. ಹೆಂಡತಿ ಸತ್ತಿದ್ದಾಳೆ. ಅದಕ್ಕೇ ಆ ಲಕ್ಷ್ಮಿಯಲ್ಲಿಗೆ ಹೋಗುತ್ತಿದ್ದಾರೆ. ಇವರೇನು ಕಳ್ಳರಲ್ಲ. ಬಿಡುತೇನೆ," ಎಂದು ಹೇಳಿ ಆ ಗೃಹಸ್ಥನ ಮೇಲೆ ದೊಡ್ಡ ಉಪಕಾರ ಮಾಡಿದ ಹಾಗೆ ಅಭಿನಯಿಸುತ್ತಾ ಅವನನ್ನು ಬಿಡುಗಡೆ ಮಾಡಿದ.

ಪಾಪ, ಆ ಗೃಹಸ್ಥ ನಮ್ಮಿಂದ ಅವಮಾನಿತನಾದವನು, ನಾವು ಆ ಓಣಿಯನ್ನು ಬಿಟ್ಟು ಹೋಗುವವರೆಗೂ ಅಲ್ಲಿಯೆ ಸುತ್ತಾಡುತ್ತಿದ್ದು ಅನಂತರ ನಿಧಾನವಾಗಿ ಲಕ್ಷ್ಮಿಯ ಮನೆ ಸೇರಿಕೊಂಡ.

"ಎಷ್ಟು ಹಾರಿಸಿದಿಯೋ ಸಾದತ್?" ಎಂದು ನಾನು ಕೇಳಿದೆ.

"ಹತ್ತು. ತಗೋ ಈ ಐದು ರೂಪಾಯಿ."

ನಾನು ತೆಗೆದುಕೊಳ್ಳಲಿಲ್ಲ. ಅವನ ಮಾತಿನಲ್ಲಿ ನನಗೆ ನಂಬಿಕೆಯುಂಟಾಗಲಿಲ್ಲ. ಇನ್ನೂ ಹೆಚ್ಚು ಹಣ ಬಂದಿರಬೇಕೆಂದು ನನಗೆನ್ನಿಸುತ್ತಿತ್ತು.

"ಎಷ್ಟು ಹೊಡೆದಿದ್ದೀ, ಖರೇ ಹೇಳು."

"ಇಲ್ಲಪ್ಪಾ. ನಾನೇನು ಸುಳ್ಳು ಹೇಳುತೀನೇನು?"

"ಲಕ್ಷ್ಮಿಯ ಮನೆಗೇ ಹೋಗಿ ಆ ಮನುಷ್ಯನನ್ನೇ ಕೇಳಿ ಬರ್ತೀನಿ", ಎನ್ನುತ್ತಾ ನಾನು ಸೈಕಲನ್ನು ಹಿಂದಿರುಗಿಸತೊಡಗಿದಾಗ ತನ್ನ ಹುಳುಕು ಹೊರ

ಬೀಳುವುದೆಂದು ಹೆದರಿದ ಸಾದತಖಾನ್, ಇಪ್ಪತ್ತು ರೂಪಾಯಿ ಸಿಕ್ಕಿದೆಯೆಂದು ಹೇಳಿ ಹತ್ತು ರೂಪಾಯಿ ನನಗೆ ಕೊಟ್ಟ.

ಸೂಳೆಯರ ಓಣಿಯಲ್ಲಿ ನನಗೆ ಲಾಭವಾದದ್ದು ಅದೇ ಪ್ರಥಮಬಾರಿ.

ನಾನು ಯೋಚಿಸತೊಡಗಿದೆ: ಈ ಜನರು ಪೋಲೀಸರಾದ ನಮಗೆ ಲಂಚ ಕೊಡುವುದಾದರೂ ಯಾಕೆ? ಸೂಳೆಗೆ ಹಣ ಕೊಟ್ಟು ಅವಳ ದೇಹದಿಂದ ಸುಖ ಪಡೆಯಬಹುದು. ಅವಳದು ಅದೇ ವ್ಯಾಪಾರ. ಆದರೆ, ಸೂಳೆಯರಲ್ಲಿಗೆ ಹೋಗುವವರು ಪೋಲೀಸರಿಗೇಕೆ ಹಣ ಕೊಡಬೇಕು? ಹಣ ಕೊಡದಿದ್ದರೂ ನಾವು ಅವನಿಗೇನನ್ನೂ ಮಾಡುವಂತಿಲ್ಲ. ಸರಕಾರದಿಂದ ರಹದಾರಿ ಪಡೆದು ಕೊಂಡು ಸೂಳೆಗಾರಿಕೆ ಮಾಡುವ ಸ್ತ್ರೀಯರವರು. ಅವರ ಹತ್ತಿರ ಯಾರೂ ಹೋಗಬಾರದೆಂದು ಕಾಯದೆಯೇನೂ ಇಲ್ಲವಲ್ಲ. ಆದರೂ ಆ ಮನುಷ್ಯ ನಮಗೆ ಹಣ ಕೊಡಲು ಕಾರಣವೇನು? ಅವನೇನು ಅಶಿಕ್ಷಿತನಲ್ಲ, ಹಳ್ಳಿಯ ಹುಂಬನೂ ಅಲ್ಲ. ನಮ್ಮಂತೆಯೆ ಅವನೂ ಒಬ್ಬ ಸರಕಾರಿ ನೌಕರ. ಇಂಥ ವನೂ ಪೋಲೀಸರಿಗೆ ಹೆದರಲು ಕಾರಣವೇನು?

ಆಗ ನನಗೆ ಹೊಳೆಯಿತು: ಅವನು ನಮಗೆ ಹಣ ಕೊಟ್ಟುದು ಟೊಳ್ಳು ಹೆದರಿಕೆಯಿಂದ. ನಾವು ಅವನನ್ನು ಬಯಲಿಗೆಳೆದು ಅವನು ಸೂಳೆಯರ ಮನೆ ಗಳಿಗೆ ಹೋಗುವವನೆಂದು ಹೇಳಿದರೆ ಜನ ಹಾಸ್ಯ ಮಾಡಲಿಕ್ಕಿಲ್ಲನೆ? ತನ್ನ ಗೌರವಕ್ಕೆ ಅದರಿಂದ ಕುಂದು ಬಂದೀತು. ಹಾಗೆ ಯೋಚಿಸಿಯೇ, ಹಣ ತೆತ್ತು ನಮ್ಮ ಬಾಯಿ ಮುಚ್ಚಿಸಿದ್ದ ಆತ.

ನಮ್ಮ ಜನಗಳಲ್ಲಿರುವ ಈ ಟೊಳ್ಳು ಗೌರವದ ಭಾವನೆಯಿಂದಲೇ ಪೋಲೀಸರಾದ ನಮಗೆ ಅನ್ಯಾಯವಾಗಿ ಹಣ ಸಿಗುವುದು. ಎಂಥ ಗೌರವಸ್ಥ ನನ್ನೂ ಹಿಡಿದು ಅವನ ಮೇಲೆ ಕೆಲವು ಸುಳ್ಳು ಅಪವಾದ ಹೊರಿಸಿ ಅವನ ಮಾನಹಾನಿಯಾಗುವಂಥ ಪ್ರಸಂಗ ತಂದರೆ ಅದರಿಂದ ಘಾರಾಗಲೆಂದು ನಾವು ಕೇಳಿದಷ್ಟು ಹಣ ಕೊಡಲು ಅವನು ಸಿದ್ಧನಾಗುತ್ತಾನೆ. ಈ ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿದ್ದ ಸಾದತಖಾನ್ ಪ್ರತಿ ರಾತ್ರಿಯಲ್ಲೂ ಸೂಳೆಯರ ಓಣಿಗಳಲ್ಲಿಯೇ ಗಸ್ತಿ ತಿರುಗುವ ಪದ್ಧತಿಯಿಟ್ಟುಕೊಂಡಿದ್ದ. ಒಂದು ದಿನವೂ ಅವನು ತನ್ನ ಮನೆಯಲ್ಲಿ ಮಲಗಿದ್ದುದನ್ನು ನಾನು ಕಂಡಿರಲಿಲ್ಲ. ಹೊರಗಡೆ ತಿರುಗುವುದರಿಂದ ಸಂಪಾದನೆಯಾಗುತ್ತಿರುವಾಗ ಅವನೇಕೆ ಮನೆಯಲ್ಲಿ ಬಿದ್ದು

ಕೊಂಡಾನು! ಅದಲ್ಲದೆ ಆಗ ಅವನ ಮನೆಯಲ್ಲಿಯೂ ಯಾರೂ ಇರಲಿಲ್ಲ. ನನ್ನಂತೆ ಅವನೂ ಅವಿವಾಹಿತನಾಗಿದ್ದ.

ಈ ನಗರಕ್ಕೆ ವರ್ಗವಾಗಿ ಬಂದ ಒಂದೇ ವರ್ಷದಲ್ಲಿ ಸಾದತಖಾನ್ ಎರಡು ಮೂರು ಸಾವಿರ ರೂಪಾಯಿ ಕೂಡಿಸಿದ್ದನೆಂದು ವದಂತಿಯಿತ್ತು.

ಸಾದತಖಾನನಿಗಾಗ ಸುಮಾರು ಇಪ್ಪತ್ತೈದರ ಪ್ರಾಯ. ಅಚ್ಚುಕಟ್ಟಾದ ದೇಹ. ಮಧ್ಯಮ ತರಗತಿಯ ಎತ್ತರ. ಲಕ್ಷಣವಾಗಿದ್ದ ಮೂಗು. ಅವನ ವೇಷಭೂಷಣಗಳಲ್ಲೂ ಒಪ್ಪ ಓರಣ ಎದ್ದು ಕಾಣುತ್ತಿತ್ತು. ಅವನ ಬಟ್ಟೆಬರೆಗಳ ಇಸ್ತ್ರಿಯ ಗೆರೆ ಅಳಿಸಿದುದನ್ನು ನಾನೆಂದೂ ನೋಡಿರಲಿಲ್ಲ. ಮೇಲಧಿಕಾರಿಗಳು ಹೇಳಿದ ಕೆಲಸಗಳನ್ನೆಲ್ಲ ವಿಧೇಯತೆಯಿಂದ ಮಾಡುತ್ತಿದ್ದ. ಅವರ ಬೂಟು ಗಳನ್ನು ಪಾಲಿಶ್ ಮಾಡಿಕೊಡುವುದಕ್ಕೂ ಹಿಂದೆಮುಂದೆ ನೋಡುತ್ತಿರಲಿಲ್ಲ. ಅವನ ನಯ, ಶಿಸ್ತಿನ ನಡತೆ, ವಿಧೇಯತೆಗಳನ್ನು ಕಂಡು ನಮ್ಮ ಫೌಜದಾರರು ಅವನನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು. ತಾನಾಗಿ ಮುಂದೆ ಬಿದ್ದು ಯಾರನ್ನೂ ಮಾತನಾಡಿಸುತ್ತಿರಲಿಲ್ಲ ಸಾದತಖಾನ್. ಇತರ ಪೋಲೀಸರೊಡನೆ ಅವನು ಬೆರೆಯುತ್ತಿರಲಿಲ್ಲ. ನನ್ನ ಜೊತೆಗೆ ಮಾತ್ರ ಸ್ನೇಹ ಬೆಳಸತೊಡಗಿದ. ಆದುವರೆಗೂ ಮುಹಮ್ಮದೀಯರ ಭೋಜನಾಲಯದಲ್ಲಿ ಊಟಮಾಡುತ್ತಿದ್ದವನು, ಅದನ್ನು ಬಿಟ್ಟು ನನ್ನ ಜೊತೆಗೇ, ಲಿಂಗವಂತರ ಖಾನಾವಳಿಗೇ ಬರತೊಡಗಿದ. ಮೊದಲು ಮೊದಲು ಅವನ ಈ ಸಲಿಗೆಯ ಅರ್ಥ ನನಗಾಗಲಿಲ್ಲ. ನನ್ನೊಡನೆಯೆ ಅವನು ಇಷ್ಟೊಂದು ಸಲಿಗೆ ಬೆಳಸಲು ಏನು ಕಾರಣ?

ಸಾದತನಿಗೆ ಸೂಳೆಯರೆಂದರೆ ಬಹಳ ಪ್ರೀತಿ. ಪ್ರತಿ ರಾತ್ರಿಯಲ್ಲೂ ಒಬ್ಬಳಲ್ಲಿ ಹೋಗುವುದನ್ನಾತ ಎಂದೂ ತಪ್ಪಿಸಿದವನಲ್ಲ. ಆದರೆ ಆ ಸಂಗತಿ ಯಾರಿಂದಲಾದರೂ ಫೌಜದಾರರಿಗೆ ಗೊತ್ತಾದರೆ ಅವರು ಅವನ ಮೇಲಿರಿಸಿದ್ದ ಪ್ರೀತಿ ಕಡಮೆಯಾಗಬಹುದೆಂಬ ಭಯ. ಆದ್ದರಿಂದಲೇ ಅವನು, ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ನನ್ನ ಸ್ನೇಹ ಕಟ್ಟಿಕೊಂಡಿರಬಹುದೆಂದು ಅವನಾಡುತ್ತಿದ್ದ ಮಾತುಗಳಿಂದ ನನಗೆ ಹೊಳೆಯತೊಡಗಿತು. ನಾನು ಮಾತ್ರ ಅವನೊಡನೆ ವಿಶೇಷ ಸಲಿಗೆ ಬೆಳಸಲು ಯತ್ನಿಸಿರಲಿಲ್ಲ. ಅವನ ಉಪದ್ವ್ಯಾಪದ ವಿಚಾರ ನನಗೇಕೆ, ಎಂದು ಸುಮ್ಮನಿದ್ದುಬಿಡುತ್ತಿದ್ದೆ. ಅಲ್ಲದೆ ನನಗಾಗ ಕಚೆಯರೀಲ್ಲಿ

ವಿಪರೀತ ಕೆಲಸವಿರುತ್ತಿತ್ತು; ಇಂಥ ವಿಷಯಗಳತ್ತ ಗಮನವೀಯಲು ಸಮಯವೂ ಸಿಕ್ಕುವಂತಿರಲಿಲ್ಲ.

ಒಂದು ರಾತ್ರೆ ಸಾದತಖಾನ್ ಒಬ್ಬ ವೇಶ್ಯೆಯ ಮನೆಗೆ ಹೋಗಿ ಬಹಳ ಗಲಾಟೆ ಮಾಡಿಬಂದ. ಗಂಗೆಯೆಂಬ ಹೆಸರಿನ ಆ ವೇಶ್ಯೆ ಚಿತ್ರದುರ್ಗದವಳು. ಸಾದತಖಾನ್ ಅವಳಲ್ಲಿಗೆ ಹೋದ ಸಮಯದಲ್ಲಿ ಇನ್ನೊಬ್ಬ ಪುರುಷ ಅವಳೊಡನೆ ಇದ್ದನಂತೆ.

"ನಾಳೆ ಬರ್‍ರಿ ನೀವು," ಎಂದು ಗಂಗೆ ಹೇಳುತ್ತಿದ್ದ ಹಾಗೆ ಸಾದತಖಾನ್ ಒಳನ್ನುಗ್ಗಿ, ಹಾಸಿಗೆಯ ಮೇಲಿದ್ದ ಆಸಾಮಿಯನ್ನು ಎಳೆದು ಅವಮಾನಗೊಳಿಸಿ ಅವನ್ನಿಂದ ಹಣ ಕೀಳಲು ಯತ್ನಿಸತೊಡಗಿದ. ಆದರೆ ಆ ಆಸಾಮಿಯೂ ಸಪ್ಪೆ ಮನುಷ್ಯನಾಗಿರಲಿಲ್ಲ. ಅವನೂ ಪ್ರತಿಭಟಿಸುತ್ತಾ ಹೊಡೆದಾಡಲು ಎದ್ದು ನಿಂತ. ತನ್ನ ಮನೆಯಲ್ಲಿ ಮಾರಾಮಾರಿಯಾದರೆ ತಾನು ಜೇಲಿಗೆ ಹೋಗಬೇಕಾಗಿ ಬರಬಹುದೆಂದು ಹೆದರಿದ ಗಂಗೆ ಸಾದತಖಾನನನ್ನು ತಡೆಯಲು ಯತ್ನಿಸಿದಳು. ಪೋಲೀಸ್ ಸಿಪಾಯಿಯ ಅಧಿಕಾರದಿಂದ ಅಂಧನಾಗಿದ್ದ ಸಾದತಖಾನ್ ರೇಗಿ ತನ್ನ ಕೈಯಲ್ಲಿದ್ದ ಹಂಟರಿನಿಂದ (ಚಬಕ) ಗಂಗೆಯನ್ನು ಹೊಡೆಯತೊಡಗಿದ. ಅದನ್ನು ಕಂಡು ಅವಳ ವಿಟಪುರುಷನೂ ಕೆರಳಿ ಚಾಕು ಹಿಡಿದು ಸಾದತನನ್ನಿರಿಯಲು ಧಾವಿಸಿದ. ಸಾದತ್ ತನ್ನ ಚಬಕವನ್ನೆತ್ತಿ ಆ ಮನುಷ್ಯನಿಗೂ ಎರಡು ಏಟುಬಿಟ್ಟ. ಆತ ಭಯಂಕರವಾಗಿ ರೇಗಿ, "ನಿನ್ನನ್ನು ತೀರಿಸೇ ಬಿಡ್ತೀನಿ," ಎಂದು ಆರ್ಭಟಿಸುತ್ತಾ ಸಾದತನ ಮೈಮೇಲೆ ಬೀಳುತ್ತಿದ್ದ ಹಾಗೆ ಗಂಗೆ ಅಡ್ಡ ಬಂದು ಅವನ ಕೈಯಲ್ಲಿದ್ದ ಚಾಕುವನ್ನು ಕಸಿದುಕೊಳ್ಳುವ ಯತ್ನದಲ್ಲಿದ್ದಾಗ ಅದು ಅವಳ ಕೈಯನ್ನೇ ಕೊರೆಯಿತು. ಅವಳಿಗೆ ದೊಡ್ಡ ಗಾಯವಾಗಿ ರಕ್ತ ಸುರಿಯತೊಡಗುತ್ತಲೂ ಸಾದತನೂ ಹೆದರಿ ಅಲ್ಲಿಂದ ಜಾರಿಕೊಂಡ.

ಗಂಗೆ ಅಲ್ಲಿಗೇ ಸುಮ್ಮನಾಗಲಿಲ್ಲ. ತನ್ನ ಪರಿಚಯದ ಇನ್ನೊಬ್ಬ ಪೋಲೀಸನಿಗೆ ಈ ಸಂಗತಿಯನ್ನೆಲ್ಲ ತಿಳಿಸಿದಳು. ಅವನು ನೇರವಾಗಿ ಫೌಜದಾರರ ಬಳಿಗೆ ಬಂದು ಅವರಿಗೆ ವರದಿಯೊಪ್ಪಿಸಿದ. ಅವರು ಸಾದತನನ್ನು ಕರೆದು ತರುವಂತೆ ಆಜ್ಞೆಯಿತ್ತು ಸಿಪಾಯಿಗಳನ್ನು ಅವನ ಮನೆಗೆ ಕಳುಹಿಸಿದರು. ಅವನು ಮನೆಯಲ್ಲಿಯೂ ಸಿಕ್ಕಲಿಲ್ಲ.

ಸಾದತಖಾನನಿಗೆ ಫೌಜದಾರರು ಖಾಸಗಿ ಸ್ವರೂಪದ ಕೆಲವು ಕೆಲಸ

ಗಳನ್ನೊಪ್ಪಿಸಿದ್ದರು. ಪ್ರತಿದಿನ ಬೆಳಗಾದೊಡನೆ 'ಬೇಕರಿ'ಗೆ ಹೋಗಿ ಬ್ರೆಡ್ ತೆಗೆದುಕೊಂಡು ಪೋಲೀಸ್‌ಖಾತೆಯ ಮೇಲಧಿಕಾರಿಗಳಾದ 'ಸಾಹೇಬರುಗಳಿಗೆ' ಮೋಟಾರುಗಳ ಮೂಲಕ ಕಳಿಸುವುದೂ ಅವುಗಳಲ್ಲೊಂದು ಕೆಲಸ. ಆ ದಿವಸ ಅವನು ಆ ಕೆಲಸವನ್ನೂ ತಪ್ಪಿಸಿದ್ದ. ನಗರದಲ್ಲೆಲ್ಲ ಅವನನ್ನು ಶೋಧಿಸಿದರೂ ಅವನ ಪತ್ತೆಯಾಗಲಿಲ್ಲ. ರಾತ್ರಿ ನಡೆದ ಘಟನೆಯ ವಿವರಗಳನ್ನು ಕೇಳಿ, ಅವನಿಗೇನು ಶಿಕ್ಷೆಯಾಗುವುದೋ ಎಂದು ಯೋಚಿಸುತ್ತಾ ನಾನು ಸ್ನಾನ ಮಾಡಿ ಕಚೇರಿಗೆ ಬಂದೆ. ಅವನು ಎಲ್ಲಿ ಅಡಗಿ ಕುಳಿತಿದ್ದನೊ ಏನೊ, ನಾನು ಕಚೇರಿಯಲ್ಲಿ ಅಡಿಯಿರಿಸುತ್ತಲೂ ಅವನೂ ನನ್ನನ್ನು ಹಿಂಬಾಲಿಸಿ ಬಂದು ಫೌಜದಾರರ ಎದುರಿಗೆ ಹೋಗಿ ಸಲಾಂ ಹೊಡೆದು ನಿಂತ. ಅವನ ಮುಖದ ಮೇಲೆ ಭೀತಿಯ ಚಿಹ್ನೆಯೇ ಇರಲಿಲ್ಲ.

"ನಿನ್ನೆ ರಾತ್ರಿ ಎಲ್ಲಿದ್ದಿಯೋ?" ಎಂದು ಫೌಜದಾರರು ಪ್ರಶ್ನಿಸಿದರು.

"ಶಿವಣ್ಣನ ಕೋಣೆಯೊಳಗೆ ಮಲಗಿಕೊಂಡಿದ್ದೆ ರಾವ್‌ಸಾಹೇಬ್," ಎಂದು ಥಟ್ಟನೆ ಉತ್ತರವಿತ್ತ ಸಾದತ್.

ನನಗೆ ಆಶ್ಚರ್ಯವಾಯಿತು, ಗಾಬರಿಯಾಯಿತು. ಎಂಥ ಭಯಂಕರ ಸುಳ್ಳು ಅದು! ಹಿಂದಿನ ರಾತ್ರಿ ಅವನು ನನ್ನ ಕೋಣೆಯಲ್ಲಿ ಕಾಲಿಟ್ಟಿರಲಿಲ್ಲ. ಇಷ್ಟು ಮಾತ್ರ ನಿಜ. ರಾತ್ರಿ ಇಬ್ಬರೂ ಜೊತೆಯಾಗಿಯೆ ಖಾನಾವಳಿಗೆ ಹೋಗಿ ಊಟ ಮಾಡಿದ್ದೆವು, ಅವನು ತನ್ನ ಕೋಣೆಗೆ ಹೋಗಿದ್ದ, ನಾನು ನನ್ನ ಕೋಣೆಗೆ ಬಂದು ಮಲಗಿಕೊಂಡಿದ್ದೆ. ಅನಂತರ ನಿತ್ಯದಂತೆ ಅವನು ತನ್ನ ಚಟ ತೀರಿಸಿಕೊಳ್ಳಲು ಸೂಳೆಯರ ಓಣಿಗೆ ಹೋಗಿ ಗದ್ದಲ ಮಾಡಿ ಬಂದಿದ್ದ.

"ಹೌದೇನು ಶಿವಣ್ಣಾ? ಇವನ ಮಾತು ಖರೇನೋ ಸುಳ್ಳೋ?" ನನ್ನನ್ನು ಕೇಳಿದರು ಫೌಜದಾರರು.

ನನಗೆ ಉಭಯಸಂಕಟಕ್ಕಿಟ್ಟುಕೊಂಡಿತು. ನಮ್ಮ ಫೌಜದಾರರ ವಿಷಯವಾಗಿ ನನ್ನಲ್ಲಿ ತುಂಬಾ ಆದರವಿತ್ತು. ಅವರೆದುರಿಗೆ ಸುಳ್ಳು ಹೇಳುವ ಇಚ್ಛೆ ನನಗಿರಲಿಲ್ಲ. ಆದರೆ, ಸಾದತಖಾನನಿಗೆ ಕಾದಿದ್ದ ಶಿಕ್ಷೆಯನ್ನು ತಪ್ಪಿಸದಿರಲೂ ಮನಸ್ಸು ಒಪ್ಪಲಿಲ್ಲ. ಹಾಳಾಗಿ ಹೋಗಲಿ, ಇವನನ್ನು ಒಂದು ಬಾರಿ ಉಳಿಸಿದ ರಾಯಿತು ಎಂದುಕೊಂಡು, ಅವನು ನನ್ನ ಕೋಣೆಯಲ್ಲಿಯೆ ಮಲಗಿದ್ದುದು ನಿಜವೆಂದು ಹೇಳಿದೆ.

ಫೌಜದಾರರಿಗೆ ನನ್ನ ಮಾತೆಂದರೆ ಬಹಳ ನಂಬಿಕೆಯಿತ್ತು. ಆಗಲೂ ಅವರು ನನ್ನ ಹೇಳಿಕೆಯನ್ನು ನಂಬಿದರು. ಗದ್ದಲ ಮಾಡಿದವನು ಸಾದತ ನಾಗಿರದೆ ಇನ್ನಾರೋ ಇರಬಹುದೆಂದು ಹೇಳಿಕೊಂಡು ಆ ಪ್ರಕರಣವನ್ನು ಅಷ್ಟಕ್ಕೇ ಮುಗಿಸಿದರು.

ಫೌಜದಾರರು ಮನೆಗೆ ಹೋದ ತರುವಾಯ ಸಾದತಖಾನ್ ನನ್ನ ಬಳಿ ಬಂದು ಚಹಕ್ಕೆ ಆಮಂತ್ರಿಸಿದ. ನಾನು ಬರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದೆ. ಅವನ ಸಹವಾಸ ಸಾಕೆನ್ನಿಸಿ ಹೋಗಿತ್ತು ನನಗೆ. ಸಾದತಖಾನ್ ನನ್ನನ್ನು ಬಿಡದೆ ಬಲವಂತಪಡಿಸಿ ಚಹದಂಗಡಿಗೆ ಕರೆದೊಯ್ದ. ಅವನಿಗೆ ಒಳಿತಾಗಿ ಛೀಮಾರಿ ಮಾಡಬೇಕೆಂದು ನಾನು ಧ್ವನಿಯೆತ್ತುವಷ್ಟರಲ್ಲಿಯೇ ಅವನೇ ಮಾತಿಗಾರಂಭಿಸಿ ರಾತ್ರಿ ನಡೆದುದೆಲ್ಲವನ್ನೂ ತಿಳಿಸಿ ತನ್ನ ತಪ್ಪನ್ನೊಪ್ಪಿಕೊಂಡು ನನ್ನ ಕ್ಷಮೆ ಕೇಳಿದ. ಇನ್ನೊಂದು ಬಾರಿ ಅಂಥ ಕೃತ್ಯಕ್ಕೆ ಕೈಹಾಕಬಾರದೆಂದು ಬುದ್ಧಿ ಹೇಳಿ, ಅವನು ಮತ್ತೆ ಹಾಗೆ ಮಾಡಿದಲ್ಲಿ ಅವನೊಡನೆ ಮಾತಾಡುವುದನ್ನೆ ನಿಲ್ಲಿಸುವುದಾಗಿ ಎಚ್ಚರಿಕೆ ಕೊಟ್ಟೆ. ಅವನು ನಗುತ್ತ ಒಪ್ಪಿಕೊಂಡ.

ಅಂದಿನಿಂದ ಸ್ವಲ್ಪ ಸಭ್ಯನಾದ ಸಾದತಖಾನ್.

ಕೆಲದಿನಗಳಲ್ಲಿಯೆ ಅವನಿಗೆ ಮದುವೆಯೂ ಆಯಿತು. ಈಗ ಅವನಿಗೆ ನಾಲ್ಕು ಮಕ್ಕಳು. ಸುಖವಾಗಿ ಸಂಸಾರ ಮಾಡಿಕೊಂಡಿದ್ದಾನೆ. ಓರೆಕೋರೆ ನಗರಕ್ಕೆ ಬಂದಾಗಲೆಲ್ಲ ನನ್ನನ್ನು ಭೇಟಿ ಮಾಡದಿರುವುದಿಲ್ಲ.

೧೫

ಜನಪ್ರಿಯ ಫೌಜದಾರರು

ನಮ್ಮ ಫೌಜದಾರರು ಕಚೇರಿಯಲ್ಲಿರುವುದಕ್ಕಿಂತ ಹೊರಗಡೆ ತಿರುಗಾಡುವುದೇ ವಿಶೇಷ. ಅದು ದೊಡ್ಡ ನಗರವಾದುದರಿಂದ ಅವರು ಹಾಗೆ ತಿರುಗಾಡುವುದು ಅವಶ್ಯವಾಗಿತ್ತು. ಎಲ್ಲಾ ಕ್ಷೇತ್ರಗಳಲ್ಲೂ ಎಲ್ಲಾ ವರ್ಗಗಳಲ್ಲೂ ಎಲ್ಲಾ ಜಾತಿ ಮತಗಳ ಜನರಲ್ಲೂ ನಮ್ಮ ಫೌಜದಾರರ ಬಗ್ಗೆ ಗೌರವದ ಭಾವನೆಯಿತ್ತು. ಆ ನಗರಕ್ಕೆ ವರ್ಗವಾಗಿ ಬಂದಂದಿನಿಂದ ತಮ್ಮ ಸರಳತೆ ಮತ್ತು ನಿಷ್ಕಪಟ ನಡತೆಗಳಿಂದಾಗಿ ಅವರು ಅಲ್ಲಿಯ ನಾಗರಿಕರೆಲ್ಲರ ಪ್ರೀತಿ ವಿಶ್ವಾಸ ಗಳಿಸಿಕೊಂಡಿದ್ದರು. ಎಂದೂ ಯಾರಿಗೂ, ಆಡಬಾರದಂಥ ಮಾತು ಆಡಿದವರಲ್ಲ ನಮ್ಮ ಫೌಜದಾರರು. ಹಿರಿಯರಿರಲಿ, ಕಿರಿಯರಿರಲಿ, ಉಳ್ಳವರಿರಲಿ, ಬಡವರಿರಲಿ ಎಲ್ಲರನ್ನೂ ಒಂದೇ ಬಗೆಯಿಂದ, ತುಂಬ ಸನ್ಮಾನದಿಂದ ನಡಸಿಕೊಳ್ಳುತ್ತಿದ್ದರು. “ಇಂಥಾ ಒಳ್ಳೆಯ ಫೌಜದಾರರನ್ನು ನಾವೆಂದೂ ಕಂಡಿಲ್ಲ,” ಎಂದು ನಾಗರಿಕರೆಲ್ಲ ಅವರನ್ನು ಕೊಂಡಾಡುತ್ತಿದ್ದರು.

ಪೋಲೀಸು ಖಾತೆಯ ಮೇಲಧಿಕಾರಿಗಳಿಗೂ ಕೂಡಾ ನಮ್ಮ ಫೌಜದಾರರ ಬಗ್ಗೆ ಬಹಳ ವಿಶ್ವಾಸ. ನಮ್ಮ ಕಚೇರಿಯ ಪರೀಕ್ಷಣೆಗೆಂದು ವರ್ಷಕ್ಕೆರಡುಬಾರಿ ಮೇಲಧಿಕಾರಿಗಳು ಬಂದು ಪ್ರತಿಸಲವೂ ಹತ್ತು ಹತ್ತು ದಿನ

ಬಿಡಾರ ಹೂಡುತ್ತಿದ್ದರು. ಸಾಹೇಬರ ಜೊತೆಗೆ ಅವರ ಸಿಬ್ಬಂದಿಯೂ. ಸಾಹೇಬರ ಚಪರಾಸಿಗಳಿಗೆ ಗೊಬ್ಬೂರಿನ ಬಿಡಾರವೆಂದರೆ ಬಹಳ ಹಿಗ್ಗು. ಅವರು ಇಲ್ಲಿದ್ದ ಹತ್ತು ದಿವಸಗಳವರೆಗೂ ಸಂಭ್ರಮದ ಮೇಜವಾನಿಯೆ ನಡೆದಂತಾಗುತ್ತಿತ್ತು. ಅಂಥ ತೃಪ್ತಿಕರವಾದ ಸರಬರಾಜು ನಮ್ಮ ಫೌಜದಾರರದು. ಈ ನಗರದಿಂದ ಹೊರಡುವ ಮೊದಲು, ತಮ್ಮ ಸಂಸಾರಗಳಿಗೆ ಅವಶ್ಯವಿರುವ ಬಟ್ಟೆ ಬರೆಗಳನ್ನೂ ಕೂಡಾ ನಮ್ಮ ಫೌಜದಾರರಿಂದ ಪಡೆದುಕೊಂಡು ಹೋಗುತ್ತಿದ್ದರು, ಸಾಹೇಬರ ಸಿಬ್ಬಂದಿಯವರು. ಹೀಗೆ ಒಂದು ಬಾರಿಯ ಸಾಹೇಬರ ಬಿಡಾರದ ಖರ್ಚು ಮೂರು ಸಾವಿರದ ಅಂಕಿಯನ್ನು ದಾಟಿ ಹೋಗುತ್ತಿತ್ತು. ಅರ್ಥಾತ್, ಅದನ್ನೆಲ್ಲ ನಮ್ಮ ಫೌಜದಾರರೇ ನೋಡಿಕೊಳ್ಳುತ್ತಿದ್ದರು.

ಇಷ್ಟು ಹಣವನ್ನು ಅವರು ಎಲ್ಲಿ ಕೂಡಿಸುತ್ತಿದ್ದರೆಂಬುದು ಮೊದಲು ನನಗೆ ತಿಳಿದಿರಲಿಲ್ಲ. ಪೋಲೀಸ್ ಅಧಿಕಾರಿಗಳಿಗೆ ಹಣ ಸಿಗಬೇಕಾದುದು ಅಪರಾಧಗಳ ಸಂಬಂಧದಲ್ಲಿ. "ಕ್ರೈಂ ಬ್ರ್ಯಾಂಚ್"ಗೆ ಸೇರಿದವರಾದ ನಾವೇ ಆ ಹಣವನ್ನೆಲ್ಲ ವಸೂಲು ಮಾಡಿಕೊಳ್ಳುತ್ತಿದ್ದೆವು. ಫೌಜದಾರರು ಎಂದೂ ನಮ್ಮಿಂದ ಒಂದು ಕಾಸನ್ನೂ ಕೇಳಿದವರಲ್ಲ. ತಮ್ಮನ್ನು ಕಾಣಲು ಬರುವ ಜನರಿಗಾಗಿ ಫೌಜದಾರರು ತರಿಸುತ್ತಿದ್ದ ಚಹದ ಲೆಕ್ಕವೇ ತಿಂಗಳಿಗೆ ನೂರು ರೂಪಾಯಿಗಳಷ್ಟು ಆಗುತ್ತಿದ್ದುದಿತ್ತು. ಆ ಲೆಕ್ಕವನ್ನು ಮಾತ್ರ ನಾವು "ಕ್ರೈಂ ಬ್ರ್ಯಾಂಚ್"ದವರು ಮುಟ್ಟಿಸುತ್ತಿದ್ದೆವು. ಆದರೆ, ಮೇಲಧಿಕಾರಿಗಳ ಬಿಡಾರಗಳ ಪ್ರಚಂಡ ಖರ್ಚಿನ ವಿಷಯ ಮಾತ್ರ ನನಗೆ ಮೊದಲು ತಿಳಿದಿರಲಿಲ್ಲ, ಕೆಲ ದಿನಗಳ ತರುವಾಯ ತಿಳಿಯಿತು – ಇಂಥ ಖರ್ಚುಗಳಿಗಾಗಿ ಬೇರೆ ಸಂಪಾದನೆಯಿದ್ದುದು. ಸಾರಿಗೆಯ ಮೋಟರುಗಳಿಂದ ಬರುತ್ತಿದ್ದ ಹಣ ಅದು.

ಆ ಭಾಗದಲ್ಲಿ ಗೊಬ್ಬೂರು ಕೇಂದ್ರ ಸ್ಥಳದಲ್ಲಿದ್ದುದರಿಂದ ಪ್ರತಿದಿನವೂ ಸುಮಾರು ೩೦೦ ಮೋಟಾರುಗಳು ಅಲ್ಲಿಂದ ಬೇರೆ ಊರುಗಳಿಗೆ ಹೋಗಿ ಬರುತ್ತಿದ್ದುವು. ನಗರದ ಗಡಿ ದಾಟಿ ಹೋಗುವಾಗ ಪ್ರತಿಯೊಂದು ಮೋಟಾರಿನಿಂದಲೂ ಪ್ರತಿನಿತ್ಯವೂ ಒಂದು ರೂಪಾಯಿಯಂತೆ ಪೋಲೀಸರಿಗೆ ಸಲ್ಲುತ್ತಿತ್ತು. ಅರ್ಥಾತ್ ಪ್ರತಿದಿನವೂ ಮೂರುನೂರು ರೂಪಾಯಿ ದೊರೆಯುತ್ತಿತ್ತು. ಈ ಹಣದಲ್ಲಿ ಶೇಕಡಾ ಇಪ್ಪತ್ತರಷ್ಟು ಫೌಜದಾರರಿಗೆ ಸಲ್ಲುತ್ತಿತ್ತು. ಅದೂ ನೇರವಾಗಿ ಅವರ ಕೈಗೆ ಬರುತ್ತಿರಲಿಲ್ಲ. 'ಮೋಟಾರ್ ಡ್ಯೂಟಿ'ಯ ಹವಲ್ದಾರ್

ಅದನ್ನು ಕೂಡಿಸಿ ತನ್ನ ಹತ್ತಿರವೆ ಇಟ್ಟುಕೊಂಡು, ಮೇಲಧಿಕಾರಿಗಳ ಬಿಡಾರದ ಖರ್ಚು, ಮತ್ತಿತರ ಖರ್ಚುಗಳನ್ನು ನೋಡಿಕೊಂಡು ಹೋಗುತ್ತಿದ್ದ. ಹಾಗೆ, ಫೌಜದಾರರ ಸಂಸಾರಕ್ಕೆ ತೊಂದರೆಯಾಗದಂತೆ, ಸರಬರಾಜುಗಳ ಖರ್ಚು ನಡೆಯುತ್ತಿತ್ತು. ಮೇಲಧಿಕಾರಿಗಳೂ ತೃಪ್ತರಾಗುತ್ತಿದ್ದರು.

ಯಾವನಾದರೊಬ್ಬ ಪೋಲೀಸನಿಂದ ಅನ್ಯಾಯ ನಡೆದಿದ್ದು ಆ ಬಗ್ಗೆ ಸಾರ್ವಜನಿಕರಿಂದ ದೂರು ಬಂದರೆ ನಮ್ಮ ಫೌಜದಾರರು ಆ ಪೋಲೀಸನನ್ನು ಕರೆಯಿಸಿ, ದೂರು ತಂದವರೊಡನೆ ಭೇಟಿ ಮಾಡಿಸಿ, ಪೋಲೀಸರ ತಪ್ಪಿದ್ದುದು ಕಂಡು ಬಂದರೆ ನೊಂದವರ ಕ್ಷಮೆ ಕೇಳಲು ವಿಧಿಸುತ್ತಿದ್ದರು. ಅವನು ಅದರಂತೆ ಮಾಡಿದರೆ ಆ ಪ್ರಕರಣ ಅಲ್ಲಿಗೇ ಕೊನೆಗೊಳ್ಳುತ್ತಿತ್ತು. ಒಂದು ವೇಳೆ ಅವನು ಹಾಗೆ ಮಾಡಲು ಒಪ್ಪದಿದ್ದಾಗ ಇತರ ಫೌಜದಾರರಂತೆ ಅವರು ಅವನ ವಿರುದ್ಧ ವರದಿ ಮಾಡಿ ಅವನಿಗೆ ತೊಂದರೆ ಕೊಡುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಆ ಪೋಲೀಸನಿಗಾಗುತ್ತಿದ್ದ ಶಿಕ್ಷೆಯೆಂದರೆ ಅಲ್ಲಿಂದ ವರ್ಗ. ಅವರು ಆ ನಗರದಲ್ಲಿದ್ದ ಅವಧಿಯಲ್ಲಿ ಅವರ ಕೈಕೆಳಗಿನ ಒಬ್ಬ ಪೋಲೀಸನಿಗೂ ಕೂಡ ನೌಕರಿ ಕಳೆದುಕೊಳ್ಳುವ ಪ್ರಸಂಗ ಬರಲಿಲ್ಲ. ಸಾರ್ವಜನಿಕರಂತೆಯೇ ಪೋಲೀಸರೂ ನಮ್ಮ ಫೌಜದಾರರನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದರು. ಅವರ ಮಾತನ್ನು ಯಾರೂ ಮೀರುತ್ತಿರಲಿಲ್ಲ.

ದುಷ್ಟರನ್ನು ದಾರಿಗೆ ತರುವುದರಲ್ಲೂ ನಮ್ಮ ಫೌಜದಾರರದು ಒಂದು ವೈಶಿಷ್ಟ್ಯವಿತ್ತು.

ಅದೇ ನಗರದ ಸರ್ವೆ ಆಫೀಸಿನಲ್ಲಿ ಒಬ್ಬ ಗುಮಾಸ್ತೆ. ಅವನಿಗೆ ಹೆಣ್ಣಿನ ಹುಚ್ಚು ವಿಪರೀತ. ಅವನೊಂದು ರಾತ್ರಿ ಒಬ್ಬ ಸೂಳೆಯ ಮನೆಯಲ್ಲಿದ್ದ ವೇಳೆಯಲ್ಲಿ ಮಲ್ಲಪ್ಪನೆಂಬ ಪೋಲೀಸನೊಬ್ಬ ಅವನನ್ನು ಬೆದರಿಸಿ ಹದಿನೈದು ರೂಪಾಯಿ ಕಿತ್ತುಕೊಂಡಿದ್ದ. ಆ ಕಾಲಕ್ಕೆ ರೂಪಾಯಿ ಕೊಟ್ಟರೂ ಆ ಗುಮಾಸ್ತೆ ಆ ಪ್ರಕರಣವನ್ನು ಅಲ್ಲಿಗೇ ಬಿಡಲಿಲ್ಲ. ನಗರದ ಶಿರಸ್ತೆದಾರರೊಡನೆ (ಕಂದಾಯ ಖಾತೆಯ ಅಧಿಕಾರಿ) ಅವನಿಗೆ ವಿಶೇಷವಾದ ಸಲಿಗೆಯಿತ್ತು. ಗುಮಾಸ್ತೆ ಅವರ ಹತ್ತಿರ ಹೋಗಿ, ತನ್ನ ಪರಿಚಯದ ಹೆಂಗಸೊಬ್ಬಾಕೆಯ ಹತ್ತಿರ ತಾನು ಮಾತನಾಡುತ್ತ ನಿಂತಿದ್ದಾಗ ಪೋಲೀಸನೊಬ್ಬ ತನ್ನನ್ನು ಹಿಡಿದು ಅವಮಾನಗೊಳಿಸಿ,

ಹದಿನೈದು ರೂಪಾಯಿ ಕೊಟ್ಟ ಬಳಿಕ ಬಿಟ್ಟನೆಂದು ಹೇಳಿದ. ಆ ಶಿರಸ್ತೆದಾರರಿಗೂ ನಮ್ಮ ಫೌಜದಾರರಿಗೂ ವಿಶೇಷವಾದ ಸ್ನೇಹ.

"ಖಾನ್‌ಸಾಹೇಬರು ಫೌಜದಾರರಿರುತ್ತಾ ಇಂಥಾ ಅನ್ಯಾಯ ಈ ಊರಲ್ಲಿ ಹ್ಯಾಗೆ ನಡೆಯುತ್ತದೆ? ಬಾ. ಅವರ ಹತ್ತರ ಹೋಗೋಣ," ಎಂದು ಹೇಳಿ ಶಿರಸ್ತೆದಾರರು ಆ ಗುಮಾಸ್ತೆಯನ್ನು ಫೌಜದಾರರ ಹತ್ತಿರ ಕರೆದುಕೊಂಡು ಬಂದರು.

ಮಲ್ಲಪ್ಪನನ್ನು ಕರೆಯಿಸಲಾಯಿತು.

"ಏನು ಮಲ್ಲಪ್ಪ, ನೀನು ಇವರನ್ನು ನೋಡಿದ್ದೀಯಾ?" ಫೌಜದಾರರು ಪ್ರಶ್ನಿಸತೊಡಗಿದರು.

"ನೋಡಿದ್ದೀನಿ ರಾವ್‌ಸಾಹೇಬ್."

"ಇವರಿಂದ ಹದಿನೈದು ರೂಪಾಯಿ ಕಸಿದುಕೊಂಡಿದ್ದೀಯಾ?"

"ಹೌದು ರಾವ್‌ಸಾಹೇಬ್." ಥಟ್ಟನೆ ಉತ್ತರವಿತ್ತ ಮಲ್ಲಪ್ಪ.

"ಯಾಕೆ? ಇವರೇನಾದರೂ ಸಾಲ ಕೊಡುವದಿತ್ತೇನು ನಿನಗೆ?"

"ಇಲ್ಲ ರಾವ್‌ಸಾಹೇಬ್. ಇವರಿಂದ ಲಂಚ ತಿನ್ನಬೇಕು ಅನ್ನುವ ಆಸೇನೂ ನನಗಿರಲಿಲ್ಲ. ಇವರು ಭಯಂಕರ ಕೆಲಸ ಮಾಡುತ್ತಿರುತ್ತಾರೆ. ಅವನ್ನು ಕೇಳಿ ಸುಮ್ಮನಿರಲಿಕ್ಕಾಗಲಿಲ್ಲ. ಒಮ್ಮೆ ಇವರ ಕಥೆಯೆಲ್ಲಾ ನಿಮಗೆ ಗೊತ್ತಾದರೆ ಚಲೋದಾಗಬಹುದು ಅಂತ ಈ ಯುಕ್ತಿ ಹಾಕಿದೆ – ನಾನು ಇವರಿಂದ ರೂಪಾಯಿ ಕಸಿದುಕೊಂಡರೆ ತಾನಾಗೇ ತಕರಾರು ಕೊಡುವದಕ್ಕೆ ನಿಮ್ಮ ಹತ್ತರ ಬರುತ್ತಾರೆ ಅಂತ."

ಕುರ್ಚಿಯಲ್ಲಿ ಸೆಟೆದು ಕುಳಿತುಕೊಂಡಿದ್ದ ಆ ಗುಮಾಸ್ತೆಯ ಮುಖ ಕಪ್ಪಾಯಿತು. ಅವನು ಅಸ್ಪಷ್ಟನಾಗಿ ಅತ್ತಿತ್ತ ಹೊರಳತೊಡಗಿದ. ಫೌಜದಾರರು ಮಾತ್ರ ಮುಖದ ಮೇಲೆ ಯಾವ ವಿಕಾರವನ್ನೂ ತೋರ್ಪಡಿಸದೆ ಶಾಂತ ಸ್ವರದಲ್ಲಿ ಕೇಳಿದರು:

"ಇವರ ಕಥೆ ಅಂದೆಯಲ್ಲ ಮಲ್ಲಪ್ಪಾ, ಏನು ಅದರ ಸಂಗತಿ?"

"ಇವರು ದಿನಾಲೂ ಒಬ್ಬ ಸೂಳೆಯ ಮನೆಗೆ ಬರುತ್ತಿರುತ್ತಾರೆ ರಾವ್‌ಸಾಹೇಬ್. ಅವಳಿಗೆ ರೊಕ್ಕದ ಆಸೆ ಹಚ್ಚಿ ಸಮೀಪದಲ್ಲಿರುವ ದೊಡ್ಡ ದೊಡ್ಡ ಮನೆತನಗಳ ಹುಡುಗಿಯರನ್ನೂ ವಿಧವೆಯರನ್ನೂ ಅವಳ ಸಹಾಯದಿಂದ

ದೊರಕಿಸಿ ಹಾಳುಮಾಡಿದ್ದಾರೆ. ಅವರ ಹೆಸರು ಕೆಡಬಾರದಂತ ನಾನು ಅವರನ್ನು ಕಚೇರಿಗೆ ಕರೆತಂದಿಲ್ಲ. ಸಾಹೇಬರು ಹುಕುಂ ಮಾಡಿದರೆ ಕರೆದುತರುತ್ತೇನಿ," ಎಂದು ಹೇಳಿ ಮುಗಿಸಿ ಮಲ್ಲಪ್ಪ ಹದಿನೈದು ರೂಪಾಯಿಗಳನ್ನು ತೆಗೆದು ಫೌಜದಾರರ ಮುಂದಿಟ್ಟು ನಿಂತುಕೊಂಡ.

ಗುಮಾಸ್ತೆ ತಗ್ಗಿಸಿದ ತಲೆಯನ್ನೆತ್ತದೆ ಕುಳಿತುಕೊಂಡಿದ್ದ. ಅವನ ಕಥೆಯನ್ನು ಕೇಳಿ ಶಿರಸ್ತೆದಾರರಿಗೂ ಬಹಳ ಅಸಹ್ಯವಾಗಿತ್ತು.

"ಏನನ್ನುತ್ತೀರಿ ನೀವು? ಮಲ್ಲಪ್ಪನ ಮಾತು ಸುಳ್ಳಿದ್ದರೆ ಹೇಳಿರಿ," ಎಂದರು ಫೌಜದಾರರು.

ಗುಮಾಸ್ತೆ ತುಟಿ ತೆರೆಯಲಿಲ್ಲ. ಬಾಯಿ ಬಿಚ್ಚಿದರೆ, ಎಲ್ಲಿ ಮಲ್ಲಪ್ಪ ಆ ಹುಡುಗಿಯರನ್ನು ಕರೆದುತರುವನೊ ಎಂದು ಅವನಿಗೆ ಭಯವಾಗಿರಬೇಕು. ಫೌಜದಾರರು ಅವನ ಮೌನವನ್ನು ಅರ್ಥಮಾಡಿಕೊಂಡು ಕಿಸೆಯಿಂದ ತಮ್ಮ ಹಣದ ಚೀಲ ತೆಗೆದರು, ಅದರಲ್ಲಿಂದ ಮೂವತ್ತೈದು ರೂಪಾಯಿ ತೆಗೆದು ಮಲ್ಲಪ್ಪನಿರಿಸಿದ್ದ ರೂಪಾಯಿಗಳೊಡನೆ ಸೇರಿಸಿದರು.

"ಈ ಐವತ್ತು ರೂಪಾಯಿ ನಿನಗೆ ಇನಾಮು ಕೊಡುತ್ತೇನಿ. ತಗೋ ಮಲ್ಲಪ್ಪ."

ಅವನು ತೆಗೆದುಕೊಳ್ಳಲಿಲ್ಲ.

ಫೌಜದಾರರು ಕುರ್ಚಿಯಿಂದೆದ್ದು ಆ ಐವತ್ತು ರೂಪಾಯಿಗಳನ್ನು ಅವನ ಕಿಸೆಗೆ ಸೇರಿಸಿದರು.

"ಇಂಥ ನೀಚನನ್ನು ಬಯಲಿಗೆಳೆದು ನೀನು ಎಷ್ಟೋ ಮುಗ್ಧ ಹುಡುಗಿಯರ ಮಾನ ಉಳಿಸಿದಿ ಮಲ್ಲಪ್ಪಾ. ನೀನು ಮಾಡಿದ ಕೆಲಸಕ್ಕೆ ಇದೇನು ದೊಡ್ಡ ಇನಾಮು ಅಲ್ಲ. ಹೋಗು, ಒಳಗೆ ಹೋಗಿ ಟೈಪ್‌ರೈಟರ್ ತಗೊಂಡು ಬಾ."

ಮಲ್ಲಪ್ಪ ಟೈಪ್‌ರೈಟರ್ ತಂದಿರಿಸಿದ. ಅದಕ್ಕೆ ಕಾಗದ ಸೇರಿಸುತ್ತಾ ಫೌಜದಾರರು ಹೇಳಿದರು:

"ಇಂಥ ದುಷ್ಟರನ್ನು ಹೀಗೇ ಬಿಡಬಾರದು. ತಾ ಮಾಡುವದು ಹೇಸಿ ಕೆಲಸ. ಮತ್ತೆ ನಮ್ಮ ಪೋಲೀಸರ ಮೇಲೇ ಆರೋಪಮಾಡಲು ಬರುತ್ತಾನೆ. ಇವನ ನೀಚ ಕೃತ್ಯಗಳನ್ನೆಲ್ಲಾ ತಿಳಿಸಿ ಇವನ ಮೇಲಧಿಕಾರಿಗಳಿಗೆ ರಿಪೋರ್ಟು ಮಾಡುತ್ತೇನೆ."

ತನ್ನ ನೌಕರಿಗೇ ಕಲ್ಲು ಬೀಳುವುದೆಂದು ತಿಳಿದು ಆ ಗುಮಾಸ್ತೆ ನಡುಗುತ್ತಾ ಎದ್ದು, ಮೇಜಿನ ಬುಡಕ್ಕೆ ಕೈಹಾಕಿ ಫೌಜದಾರರ ಕಾಲು ಹಿಡಿದು ಕೊಂಡು “ಇನ್ನು ಮೇಲೆ ನಾನು ಅಂಥಾದ್ದು ಮಾಡುವದಿಲ್ಲ ರಾವ್ ಸಾಹೇಬರೆ. ಇದೊಂದು ಸಲ ಕ್ಷಮಿಸಿರಿ. ನನ್ನ ನೌಕರಿ ಹೋಗುತ್ತದೆ,” ಎಂದು ಪ್ರಲಾಪಿಸ ತೊಡಗಿದ. ಫೌಜದಾರರು ಕಾಲು ಕೊಸರಿಕೊಂಡರೂ ಅವನು ಬಿಡದೆ ಅವರ ಬೂಟುಗಳನ್ನೇ ಹಿಡಿದುಕೊಂಡಿದ್ದ. ಅವನ ಗೋಳು ನೋಡಿ ಫೌಜದಾರರಿಗೂ ಮನಸ್ಸು ಕರಗಿತು. ಅವರು ಶಿರಸ್ತೆದಾರರನ್ನು ಕುರಿತು,

“ನನಗೇನೂ ಇವನ ಮಾತಿನ ಮೇಲೆ ನಂಬಿಕೆಯಿಲ್ಲ. ಇವನು ಇನ್ನು ಮುಂದೆ ಇಂಥಾ ಹೊಲಸು ಕೆಲಸಗಳಿಗೆ ಕೈಹಾಕುವದಿಲ್ಲವೆಂತ ನೀವು ಜವಾಬ್ದಾರಿ ಹೊತ್ತರೆ ಇವನನ್ನು ಬಿಡುತ್ತೇನೆ,” ಎಂದರು.

“ಛೆ. ಇದು ಮಾತ್ರ ನನ್ನಿಂದಾಗದ ಕೆಲಸ. ಇಂಥವನ ಪರಿಚಯವಿಟ್ಟು ಕೊಂಡದ್ದೇ ನನ್ನ ತಪ್ಪಾಯಿತು,” ಎಂದರು ಶಿರಸ್ತೆದಾರರು.

ಫೌಜದಾರರ ಬೂಟು ಬಿಟ್ಟು ಶಿರಸ್ತೆದಾರರ ಬೂಟು ಹಿಡಿದುಕೊಂಡ ಗುಮಾಸ್ತೆ.

“ದಯಮಾಡಿ ನನ್ನನ್ನುಳಿಸಿರಿ. ಪುಣ್ಯ ಕಟ್ಟಿಕೊಳ್ಳಿರಿ. ನನ್ನ ಹೊಟ್ಟೆಯ ಮೇಲೆ ಹೊಡೆಯಬೇಡಿರಿ.”

“ಹಾಳಾಗಿ ಹೋಗು. ಮೊದಲು ನನ್ನ ಕಾಲು ಬಿಡು,” ಎಂದು ಹೇಳಿ ಶಿರಸ್ತೆದಾರರು ಅವನ ಒಳ್ಳೆಯ ನಡವಳಿಕೆಯ ಬಗ್ಗೆ ಜವಾಬ್ದಾರಿ ವಹಿಸಲು ಒಪ್ಪಿಕೊಂಡರು.

ಮತ್ತೆ ಫೌಜದಾರರು ಆ ಗುಮಾಸ್ತೆಯನ್ನು ಗದರಿಸಲಿಲ್ಲ. ಅವನು ಮತ್ತೊಂದು ಬಾರಿ ಅವರ ಕಾಲು ಮುಟ್ಟಿ ನಮಸ್ಕರಿಸಿ ಹೊರಟುಹೋದ. ಆ ಮೇಲೆ ಆ ನಗರದಲ್ಲಿದ್ದಷ್ಟು ದಿನವೂ ಅವನು ಅಂಥ ಕೆಲಸಕ್ಕೆ ಕೈಹಾಕಲಿಲ್ಲ.

ದುಷ್ಟರನ್ನು ಹೀಗೆ ಸರಿಯಾದ ದಾರಿಗೆ ತರುತ್ತಿದ್ದರು ನಮ್ಮ ಫೌಜ ದಾರರು. ಮಕ್ಕಳು ಅಡ್ಡದಾರಿ ಹಿಡಿದು ಪೋಲಿ ಅಲೆಯುತ್ತಿದ್ದರೆ ಅವರ ಹಿರಿಯರು ಬಂದು ನಮ್ಮ ಫೌಜದಾರರಿಗೆ ಹೇಳಿಕೊಳ್ಳುತ್ತಿದ್ದರು. ಆ ಹುಡುಗ ರನ್ನು ಕಚೇರಿಗೆ ಬರಮಾಡಿಕೊಂಡು ಉಪಾಯಾಂತರಗಳಿಂದ ಅವರನ್ನು ಸರಿ ಪಡಿಸುತ್ತಿದ್ದರು ಫೌಜದಾರರು. ನಗರದಲ್ಲಿ ನಡೆಯುತ್ತಿದ್ದ ಸಾರ್ವಜನಿಕ ಕಾರ್ಯ

ಕಲಾಪಗಳಲ್ಲೆಲ್ಲ ನಮ್ಮ ಫೌಜದಾರರಿರಲೇಬೇಕು. ಇವರಿಲ್ಲದೆ ಯಾವ ಸಮಾರಂಭಕ್ಕೂ ಶೋಭೆ ಬರುವುದಿಲ್ಲವೆಂದು ನಾಗರಿಕರು ಹೇಳುತ್ತಿದ್ದುದಿತ್ತು.

೧೯೩೯–೪೦ ರ ಕಾಲ. ಭಾರತದ ವಿಮೋಚನೆಗಾಗಿ ಬಿರುಸಾಗಿ ಚಟುವಟಿಕೆ ನಡೆದಿದ್ದುವು. ಅವುಗಳ ಬಗ್ಗೆ ವಿವರವಾಗಿ ವರದಿ ಕಳಿಸುವುದು ನಮ್ಮ ಫೌಜದಾರರ ಅನೇಕ ಕರ್ತವ್ಯಗಳಲ್ಲೊಂದಾಗಿತ್ತು. ಬೇರೆ ನಗರಗಳಲ್ಲಿನ ಫೌಜದಾರರಿಗೆ ಈ ಚಟುವಟಿಕೆಗಳ ಗಂಧವೂ ಬಡಿಯುತ್ತಿರಲಿಲ್ಲ. ನಮ್ಮ ಫೌಜದಾರರಿಗೆ ಮಾತ್ರ ಯಾವುದೂ ತಿಳಿಯದಿರುತ್ತಿರಲಿಲ್ಲ. ಎಲ್ಲಾ ವರ್ಗಗಳಲ್ಲಿ ಇವರಿಗೆ ಸ್ವಾಗತ ಇದ್ದಿತೆಂದು ಆಗಲೆ ಹೇಳಿದ್ದೇನಷ್ಟೆ. ಕಾಂಗ್ರೆಸ್ ವರ್ತುಲಗಳಲ್ಲೂ ಇವರಿಗೆ ಪ್ರವೇಶವಿರದಿರಲಿಲ್ಲ. ನಗರದ ಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳನೇಕರು ನಮ್ಮ ಫೌಜದಾರರ ಅಂತರಂಗ ಮಿತ್ರರಾಗಿದ್ದರು. ಈ ಮಿತ್ರ ಮಂಡಲಿಯೆಲ್ಲವೂ ಫೌಜದಾರರ ಮನೆಯಲ್ಲಿ ಪ್ರತಿ ಭಾನುವಾರ ರಾತ್ರಿ ಹತ್ತು ಗಂಟೆಗೆ "ಮೇಜವಾನಿ" ಗಾಗಿ ಕೂಡುತ್ತಿತ್ತು. ಆ ಮೇಜವಾನಿಯ ವಿಶೇಷವೆಂದರೆ ಕೋಳಿಯ ಅಡುಗೆ!

ಆ ವಿಷಯ ನೆನಪಿಗೆ ಬಂದಾಗಲೆಲ್ಲ ನನಗೆ ನಗು ಬರದಿರುವುದಿಲ್ಲ. ಗಾಂಧೀಜಿಯವರ ಶಿಷ್ಯರೆಂದು ಹೇಳಿಕೊಳ್ಳುವವರೂ ಅಹಿಂಸೆ ಮತ್ತು ಜೀವ ಕಾರುಣ್ಯಗಳ ವಿಚಾರವಾಗಿ ಗಂಟೆಗಳ ಕಾಲ ಭಾಷಣ ಕುಟ್ಟುವವರೂ ಆದ ಕಾಂಗ್ರೆಸ್ ಮುಂದಾಳುಗಳೇ ತಮ್ಮ ಗಾಂಧೀ ಟೋಪಿಗಳನ್ನು ಕಂಕುಳಲ್ಲಿಟ್ಟುಕೊಂಡು ಫೌಜದಾರರ ಬಂಗಲೆಯ ಹಿತ್ತಲ ಬಾಗಿಲಿನಿಂದ ಈ ಮೇಜವಾನಿಗಾಗಿ ಬರುತ್ತಿದ್ದರು. ಕೋಳಿಯ ಪಲ್ಯವನ್ನು ಚಪ್ಪರಿಸುತ್ತಿದ್ದ ಹಾಗೆ ಹರಟೆಯೂ ಸಾಗುತ್ತಿತ್ತು. ಕಾಂಗ್ರೆಸ್ ಚಟುವಟಿಕೆಯ ಗುಟ್ಟುಗಳೂ ಹೊರಬೀಳುತ್ತಿದ್ದುವು.

ಇದು ವಿಶ್ವಾಸಘಾತದ ಮಾತೆಂದು ಕೆಲವರಿಗನ್ನಿಸಬಹುದು. ನನಗೇನೂ ಹಾಗೆನ್ನಿಸುವುದಿಲ್ಲ. ಕಾಂಗ್ರೆಸ್ ಚಟುವಟಿಕೆಗಳ ವಿಚಾರ ತಿಳಿದುಕೊಂಡು ವರದಿ ಮಾಡುವುದು ಫೌಜದಾರರ ಮುಖ್ಯ ಕರ್ತವ್ಯವಾಗಿದ್ದಿತೆಂಬುದನ್ನು ನಾನು ಕಡೆಗಣಿಸಲಾರೆ. ಪೋಲೀಸ್ ಸಬ್ ಇನಸ್ಪೆಕ್ಟರರ ಹತ್ತಿರ ತಮ್ಮ ಸಂಸ್ಥೆಯ ಗುಟ್ಟಿನ ವಿಷಯ ತಿಳಿಸುತ್ತಿದ್ದುದು ಕಾಂಗ್ರೆಸ್ಸಿಗರ ತಪ್ಪು.

ಕಾಂಗ್ರೆಸ್ ಸಂಸ್ಥೆಯ ಗುಪ್ತ ಸಭೆಯೊಂದು ಕೂಡಿದ ವಾರ್ತೆ

ಗೊತ್ತಾಗುತ್ತಲೂ ನಮ್ಮ ಫೌಜದಾರರ ಮನೆಯಲ್ಲಿ ವಿಶೇಷ ಮೇಜವಾನಿ ನಡೆದು ಎರಡು ಕೋಳಿಗಳು ಸಾಯುತ್ತಿದ್ದುವು. ಗುಪ್ತಸಭೆಯ ವಿವರಗಳೆಲ್ಲ ನಮ್ಮ ಫೌಜದಾರರಿಗೆ ಗೊತ್ತಾಗುತ್ತಿದ್ದಿತು.

ಇಂಥ ಚಾಣಾಕ್ಷ ಅಧಿಕಾರಿಗೆ ಬ್ರಿಟಿಷರ ರಾಜ್ಯದಲ್ಲಿ ಸನ್ಮಾನ ಲಭಿಸದಿದ್ದೀತೇ? ಎಲ್ಲಾ ಪೋಲೀಸ್ ಅಧಿಕಾರಿಗಳ ಬಾಯಲ್ಲಿ ನಮ್ಮ ಫೌಜದಾರರ ಮಾತೇ ಮಾತು. ಡಿ. ಎಸ್. ಪಿ. ಐ. ಜಿ. ಪಿ. ಮೊದಲಾದವರಿಗಂತೂ ನಮ್ಮ ಫೌಜದಾರರ ಬಗ್ಗೆ ಬಹಳ ಹೆಮ್ಮೆ. ಇವರೊಬ್ಬ ಮಾದರಿಯ ಫೌಜದಾರರೆಂದು ಎಲ್ಲರಿಗೂ ತೋರಿಸುತ್ತಿದ್ದರು. ಅದರಿಂದಾಗಿ ಇತರ ಫೌಜದಾರರಿಗೆ ಇವರೆಂದರೆ ಸ್ವಲ್ಪ ಮತ್ಸರವೇ ಇದ್ದಿತಾದರೂ ಅದರಿಂದ ಪ್ರಯೋಜನವೇನೂ ಇರಲಿಲ್ಲವಾದುದರಿಂದ ತೋರಿಕೆಗಾಗಿಯಾದರೂ ಇವರ ಬಗ್ಗೆ ಅಭಿಮಾನ ವ್ಯಕ್ತಗೊಳಿಸುತ್ತಿದ್ದರು.

ಕೆಲದಿನಗಳ ತರುವಾಯ ಫೌಜದಾರರಿಗೆ ಬೇರೊಂದು ಊರಿಗೆ ವರ್ಗವಾದ ಆಜ್ಞೆ ಬಂದಾಗ ಗೊಬ್ಬೂರಿನ ನಾಗರಿಕರಿಗೆಲ್ಲ ಕಡು ವಿಷಾದವಾಯಿತು. ಅವರನ್ನು ಸ್ಥಳಾಂತರಿಸದಿರಲು ಐ. ಜಿ. ಪಿ. ಯವರನ್ನು ವಿನಂತಿಸಿಕೊಳ್ಳುವ ನೂರಾರು ತಂತಿಗಳನ್ನು ಕಳಿಸಿದರು ನಾಗರಿಕರು. ಆ ನಗರದಲ್ಲಿ ಪ್ರಕಟವಾಗುವ ಸುಪ್ರಸಿದ್ಧ ದೈನಂದಿನ ಪತ್ರಿಕೆಯವರಿಂದಲೂ ಒಂದು ತಂತಿ ಹೋಗಿತ್ತು. ಆದರೂ, ಪೋಲೀಸ್ ಖಾತೆಯ ನಿಯಮಗಳ ಪ್ರಕಾರ ಅವರನ್ನು ಒಂದೇ ನಗರದಲ್ಲಿ ಹೆಚ್ಚು ದಿನ ಇಡುವಂತಿರಲಿಲ್ಲ. ಅವರು ಹೊರಡುವುದಕ್ಕೆ ಮೊದಲು ಗೊಬ್ಬರಿನ ಪ್ರತಿಯೊಂದು ಓಣಿಯೂ ಅವರಿಗಾಗಿ ಸತ್ಕಾರಕೂಟ ಏರ್ಪಡಿಸಿ ಹೂಹಾರ ಅರ್ಪಿಸಿತು. ಅವರ ಸನ್ಮಾನಾರ್ಥವಾಗಿ ನಡೆದಷ್ಟು ಸತ್ಕಾರಕೂಟಗಳು ಇದುವರೆಗೂ ಬೇರಾವ ಪೋಲೀಸ್ ಅಧಿಕಾರಿಗಾಗಿಯೂ ನಡೆದಿಲ್ಲ. ಒಬ್ಬ ಸನ್ಮಿತ್ರನನ್ನು, ಒಬ್ಬ ಸಭ್ಯ ಗೃಹಸ್ಥನನ್ನು, ಒಬ್ಬ ನಿಷ್ಠುರ ಅಧಿಕಾರಿಯನ್ನು ಕಳೆದುಕೊಂಡ ಗೊಬ್ಬೂರು ಮರಮರನೆ ಮರುಗಿತು. ಪೋಲೀಸರಿಗಂತೂ ತಮ್ಮ ತಂದೆಯನ್ನೇ ಅಗಲಿದಂತಾಗಿ ಅನೇಕರ ಕಣ್ಣಲ್ಲಿ ನೀರೂರಿತ್ತು. ಇಂದಿಗೂ ಗೊಬ್ಬೂರಿನ ಜನ ಅವರನ್ನು ಪ್ರೀತಿಯಿಂದಲೂ ಆದರದಿಂದಲೂ ಜ್ಞಾಪಿಸಿಕೊಳ್ಳುತ್ತಾರೆ.

೧೬

ಶಿಷ್ಯ ಮತ್ತು ಗುರು

ಅದು ಸಮರಕಾಲ. ಆಂತರಿಕ ರಕ್ಷಣೆಗೆಂದು 'ಸಿವಿಕ್ ಗಾರ್ಡ್ಸ್' ಎಂಬುದೊಂದು ದಳವನ್ನು ಸಂಘಟಿಸಿತ್ತು ಸರಕಾರ. ಸಾರ್ವಜನಿಕರೆಲ್ಲರೂ ಆ ದಳದಲ್ಲಿ ಸೇರಿಕೊಳ್ಳಬಹುದಾಗಿತ್ತು. ಎಲ್ಲಾ ಕಡೆಗಳಂತೆ ಗೊಬ್ಬೂರಿನಲ್ಲಿ ಅಂಥ ದಳವನ್ನು ಸ್ಥಾಪಿಸಲಾಯಿತು. ಪೋಲೀಸರ ಹಾಗೆ ಆ ದಳದವರಿಗೂ ಕವಾಯತು ಕಲಿಸಲಾಯಿತು. ಚಿಕ್ಕ ಪುಟ್ಟ ಪೋಲೀಸ್ ಕೆಲಸಗಳಿಗಾಗಿ ಅವರನ್ನುಪಯೋಗಿಸಲಾಗುತ್ತಿತ್ತು. ಸಾರ್ವಜನಿಕ ಸಭೆ, ಉತ್ಸವ, ಸಮಾರಂಭ ಗಳಿದ್ದಲ್ಲಿ ಸುವ್ಯವಸ್ಥೆಯನ್ನಿರಿಸಲೂ ರಾತ್ರಿಯ ಗಸ್ತಿಯಲ್ಲಿ ಪೋಲೀಸರಿಗೆ ಸಹಾಯ ಮಾಡಲೂ ಅವರನ್ನು ನಿಯಮಿಸಲಾಗುತ್ತಿತ್ತು. ಕೆಲವು ದಿನಗಳ ತರುವಾಯ ಕೆಲವು ಪೋಲೀಸ್ ಅಧಿಕಾರಿಗಳನ್ನು ಅವರಿಗೆ ಒಪ್ಪಿಸಿ ಕೊಡಲಾಯಿತು. ಪೋಲೀಸರೊಡನೆ ಕೂಡಿ ಕೆಲಸ ಮಾಡುತ್ತಿದ್ದ ಹಾಗೆ ಈ ಜನರು ಲಂಚ ತಿನ್ನುವ ತಂತ್ರಗಳನ್ನು ತಿಳಿದುಕೊಂಡು ಪೋಲೀಸರಿಗೂ ಗೊತ್ತಾಗದ ಹಾಗೆ ಸಾರ್ವಜನಿಕರಿಂದ ಹಣ ಕಿತ್ತು ತಿನ್ನತೊಡಗಿದರು. ಅವರಿಗೂ ಖಾಕಿ ಸಮವಸ್ತ್ರ ಗಳಿದ್ದುವು. ಸರಕಾರದ ಪ್ರಚಾರ ಬಲದಿಂದಾಗಿ ಜನರು ಈ ಮರಿ ಪೋಲೀಸರಿಗೂ ಅಂಜಿಕೊಳ್ಳತೊಡಗಿದರು. ಜನರ ಅಂಜಿಕೆಯ ದುರ್ಲಾಭ

ಪಡೆಯುತ್ತಾ ಇವರು ಸಾರ್ವಜನಿಕರಿಗೆ ಹೆಚ್ಚು ಹೆಚ್ಚಾಗಿ ಕಿರುಕುಳ ಕೊಡ ತೊಡಗಿದರು. ಈ ಉಪದ್ವ್ಯಾಪಿಗಳಿಗೆಲ್ಲ ಹಿರೇಮಣಿಯಂತಿದ್ದ ಕಾಸೀಮನನ್ನು ನಾನು ಮರೆಯಲು ಸಾಧ್ಯವಿಲ್ಲ.

ಉರ್ದು ಶಾಲೆಯಲ್ಲಿ ಉಪಾಧ್ಯಾಯನಾಗಿದ್ದವನು ಕಾಸೀಮ. ಅವನು ಗೊಬ್ಬೂರಿನವನೇ. ಅಲ್ಲಿಯೆ ಅವನ ಸ್ವಂತ ಮನೆಯೂ ಇತ್ತು. ಅವನು ಉಪಾಧ್ಯಾಯನಾಗಿದ್ದುದರಿಂದ ಪೋಲೀಸರೆಲ್ಲರೂ ಅವನನ್ನು ಗೌರವದಿಂದ ಕಾಣುತ್ತಿದ್ದರು. ಸಿವಿಕ್ ಗಾರ್ಡ್ ಆಗಿ ಸೇರಿಕೊಂಡ ಬಳಿಕ ಕಾಸೀಮ ದಿನವೂ ಒಬ್ಬಿಬ್ಬರು ಆಪಾದಿತರನ್ನು ಹಿಡಿದು ತಂದು ಕಚೇರಿಗೆ ಒಪ್ಪಿಸುತ್ತಿದ್ದ. ಸೈಕಲುಗಳನ್ನು ತಪ್ಪು ದಾರಿಯಿಂದ ಹೊಡೆದವರೂ, ದೀಪವಿಲ್ಲದೆ ಸೈಕಲು ಓಡಿಸಿದವರೂ ಇವನ ಕೈಗೆ ಸಿಕ್ಕಿ ಬೀಳುತ್ತಿದ್ದರು. ಅವರ ಮೇಲೆ ಖಟ್ಲೆ ಹಾಕಲಾಗುತ್ತಿತ್ತು. ಶಾಲೆಯ ವೇಳೆಯನ್ನು ಹೊರತುಪಡಿಸಿ ಉಳಿದ ವೇಳೆಯಲ್ಲೆಲ್ಲ ಇದೇ ಕೆಲಸಕ್ಕೆ ನಿಂತುಕೊಂಡ ಕಾಸೀಮ. ಪ್ರತಿನಿತ್ಯವೂ ಇಂಥ ಹತ್ತಿಪ್ಪತ್ತು ಪ್ರಕರಣಗಳು ಸಿಕ್ಕೇ ಸಿಗುತ್ತಿದ್ದುವು. ನಾಲ್ಕಾಣೆಯನ್ನೋ ಎಂಟಾಣೆಯನ್ನೋ ಕೊಟ್ಟವರನ್ನು ಅಲ್ಲಿಯೆ ಬಿಟ್ಟು, ಹಣ ಕೊಡಲೊಪ್ಪದವರನ್ನು ಕಚೇರಿಗೆ ಎಳೆದು ತರುತ್ತಿದ್ದ ಕಾಸೀಮ. ಅವನು ನಡಸುತ್ತಿದ್ದ ಇಂಥ ಕೃತಿಗಳಿಂದಾಗಿ ಪೋಲೀಸರು ಮತ್ತು ಸಿವಿಕ್ ಗಾರ್ಡುಗಳ ಬಗ್ಗೆ ಜನತೆಯಲ್ಲಿ ಅಸಂತೋಷ ಹರಡಿ ಅಪಪ್ರಚಾರವಾಗತೊಡಗಿತು.

ಒಂದು ದಿನ ನಾವು ಅವನನ್ನು ಕೂಡಿಸಿಕೊಂಡು ಅಂಥ ಅನ್ಯಾಯದ ಕೃತ್ಯಗಳಿಗೆ ಕೈ ಹಾಕದಂತೆ ಸೌಮ್ಯವಾಗಿ ಸೂಚಿಸಿದೆವು. ಕಾಸೀಮ ನಮ್ಮ ಬುದ್ಧಿವಾದಕ್ಕೆ ಕಿವಿಗೊಡುವವನೇ! ಅವನು ನಮ್ಮ ಮೇಲೆ ರೇಗಿ, ತನ್ನ ಕೆಲಸದಲ್ಲಿ ಪೋಲೀಸರು ಅಡ್ಡಬರುತ್ತಿರುವರೆಂದು ಕಲೆಕ್ಟರರಿಗೆ ತಿಳಿಸಿ ದಳಕ್ಕೆ ರಾಜಿನಾಮೆ ಕೊಡುವುದಾಗಿ ನಮ್ಮನ್ನೇ ಬೆದರಿಸಿಕೊಂಡ. ನಾವು ಅವನನ್ನು ಹೆಚ್ಚಾಗಿ ಗದರಿಸುವಂತೆಯೂ ಇರಲಿಲ್ಲ - ಆಗ ಕಾಲ ಬಲು ವಿಚಿತ್ರವಾಗಿತ್ತು. ದೇಶದ ಬಂಧ ವಿಮೋಚನೆಗಾಗಿ ರಭಸದ ಯತ್ನಗಳು ನಡೆದಿದ್ದುವು. ಸಾಮ್ರಾಜ್ಯವಾದಿಗಳಾದ ಬ್ರಿಟಿಷರಿಗೆ ಕಾಸೀಮನಂಥ ಹಸ್ತಕರ ಆವಶ್ಯಕತೆ ವಿಶೇಷವಾಗಿತ್ತು. ದೇಶದಲ್ಲಿ ಬಂಡಾಯುವೆದ್ದುದಾದರೆ ಅದನ್ನು ಸದೆಬಡೆಯಲು ಇಲ್ಲಿಯ ಜನರನ್ನೇ ಉಪಯೋಗಿಸುವ ತಂತ್ರ ಅವರದು; 'ಸಿವಿಕ್ ಗಾರ್ಡ್ಸ್' ದಳದ ಸಂಘಟನೆಯ

ನಿಜವಾದ ಉದ್ದೇಶವೂ ಅದೇ ಆಗಿತ್ತು. ಪೋಲೀಸರಿಗಿಂತ ಹೆಚ್ಚಾಗಿ ಈ ದಳಕ್ಕೇ ಪ್ರೋತ್ಸಾಹವೀಯುವುದು ಅಂದಿನ ಸರಕಾರದ ಧೋರಣೆಯಾಗಿತ್ತು. ಎಂತಲೇ ಕಾಸೀಮನನ್ನು ಎದುರುಗಟ್ಟಿಕೊಳ್ಳಲು ನಾವು ಹಿಂಜರಿದೆವು. ನಮ್ಮ ಹಾಗೇ ಎಲ್ಲ ಪೋಲೀಸರೂ ಸಿವಿಕ್‌ಗಾರ್ಡುಗಳನ್ನು ಕೆಣಕಲು ಹೆದರುತ್ತಿದ್ದುದರಿಂದ ಕಾಸೀಮನಂಥವರ ಹಾವಳಿ ವಿಪರೀತವಾಯಿತು. ಕಾಸೀಮನಂತೂ ಫೌಜದಾರರಿಗಿಂತ ಹೆಚ್ಚು ದರ್ಪದಿಂದ ವರ್ತಿಸತೊಡಗಿದ.

ಅದು ಹತ್ತಿಯ ಸುಗ್ಗಿಯ ಕಾಲ. ಹಳ್ಳಿಯ ಜನರು ತಮ್ಮ ಹತ್ತಿಯನ್ನು ಎತ್ತಿನ ಚಕ್ಕಡಿಗಳಲ್ಲಿ ಹೇರಿಕೊಂಡು ಗೊಬ್ಬೂರಿನ ಪೇಟೆಗೆ ತರತೊಡಗಿದ್ದರು. ಆಗ ಸೀಮೆಯೆಣ್ಣೆ ಸಿಕ್ಕುವುದು ಬಹಳ ಕಷ್ಟವಾಗಿತ್ತು. ಮನೆಯಲ್ಲಿ ದೀಪವುರಿಸು ವುದಕ್ಕೇ ಸೀಮೆಯೆಣ್ಣೆಯಿಲ್ಲದಿದ್ದಾಗ ರೈತರು ಚಕ್ಕಡಿಗಳಿಗೆ ಕಂದೀಲು ಹಚ್ಚಿ ಕೊಂಡು ಬರುವುದೆಲ್ಲಿ ಸಾಧ್ಯ? ಸರಿ. ಅವರು ದೀಪವಿಲ್ಲದೆ ಹಾಗೇ ಬರುವುದು ನಡೆದಿತ್ತು. ಸರಕಾರವೂ ದೀಪದ ನಿಯಮಗಳನ್ನು ಸಡಿಲುಗೊಳಿಸಿತ್ತು. ಪೋಲೀಸರೂ ಕೂಡ, ಚಕ್ಕಡಿಗಳವರ ಮೇಲೆ ದೀಪವಿಲ್ಲದ ತಪ್ಪಿಗಾಗಿ ಖಟ್ಲೆ ಹಾಕುತ್ತಿರಲಿಲ್ಲ. ಆದರೆ ನಮ್ಮ ಕಾಸೀಮನ ಕಾಯದೆಯಲ್ಲಿ ಮಾತ್ರ ಕೊಂಚವೂ ಬದಲಾವಣೆಯಾಗಿರಲಿಲ್ಲ. ರೈತರನ್ನು ಸುಲಿಯಲು ಅದೊಂದು ಸುವರ್ಣ ಸಂಧಿಯೇ ಲಭಿಸಿದಂತಾಗಿತ್ತು ಕಾಸೀಮನಿಗೆ. ದಿನವೂ ಸಾಯಂಕಾಲ ಮಬ್ಬುಗತ್ತಲಾಗುತ್ತಲೂ ಅವನು ನಗರದ ಗಡಿಗಳ ಬಳಿ ಹೋಗಿ ಹೊಂಚು ಹಾಕಿ ಕುಳಿತು, ದೀಪವಿಲ್ಲದ ಚಕ್ಕಡಿಗಳನ್ನು ಹಿಡಿದು ಪ್ರತಿಯೊಬ್ಬರಿಂದಲೂ ನಾಲ್ಕಾಣೆಯನ್ನೊ ಎಂಟಾಣೆಯನ್ನೊ ಕಿತ್ತುಕೊಳ್ಳುತ್ತ, ಕನಿಷ್ಠಪಕ್ಷ ಐದು ರೂಪಾಯಿಯಷ್ಟಾದರೂ ಪ್ರಾಪ್ತಿಯಾಗುವವರೆಗೆ ಆ ಸ್ಥಳ ಬಿಟ್ಟು ಕದಲು ತ್ತಿರಲಿಲ್ಲ.

ಒಂದು ರಾತ್ರೆ ಇವನ ಕೈಯಲ್ಲಿದ್ದ ಬ್ಯಾಟ್ರಿದೀಪದ ಬೆಳಕಿಗೆ ಬೆದರಿ ಒಂದು ಚಕ್ಕಡಿಯ ಎತ್ತುಗಳು ರಸ್ತೆಯನ್ನು ಬಿಟ್ಟು ಓಡಿಹೋದುವು. ಚಕ್ಕಡಿ ಚರಂಡಿಯಲ್ಲಿ ಬಿದ್ದುಕೊಂಡಿತು. ಚಕ್ಕಡಿಯೂ ಮುರಿಯಿತು, ಅದರಲ್ಲಿದ್ದ ಹತ್ತಿಯೂ ಕೆಟ್ಟುಹೋಯಿತು, ಎತ್ತುಗಳಿಗೂ ಗಾಯವಾಯಿತು, ಚಕ್ಕಡಿ ಹೊಡೆಯುತ್ತಿದ್ದವನಿಗೂ ಪೆಟ್ಟು ಬಿತ್ತು. ಒಂದರಹಿಂದೊಂದರಂತೆ ಬರುತ್ತಿದ್ದ ಚಕ್ಕಡಿಗಳೆಲ್ಲ ನಿಂತುಕೊಂಡುವು. ಚಕ್ಕಡಿಗಳವರೆಲ್ಲ ಕೆರಳಿ ತಮ್ಮ ಬಾರಕೋಲು

ಬೀಸುತ್ತಾ ಮುಂದೆ ಬಂದು ಇವನನ್ನು ಹಿಡಿದುಕೊಂಡರು. ಖಾಕಿ ಅಂಗಿ, ಚಲ್ಲಣ ಧರಿಸಿ ತಲೆಗೊಂದು ಟರ್ಕಿಟೋಪಿ ಇಟ್ಟುಕೊಂಡಿದ್ದ ಕಾಸೀಮ ಸಿವಿಕ್ ಗಾರ್ಡನೆಂಬುದು ಹಳ್ಳಿಗರಿಗೆ ಹೇಗೆ ತಿಳಿದೀತು? ಇವನ್ಯಾವನೋ ಪಟಿಂಗನೆಂದು ಬಗೆದು ಕೈಯಲ್ಲಿನ ಬಾರುಕೋಲುಗಳಿಂದ ಇವನನ್ನು ಒಳಿತಾಗಿ ಥಳಿಸಿದರು. ಇವನ ಮೈತುಂಬಾ ಬಾಸುಂಡೆಗಳೆದ್ದುವು. ಅವರಿಂದ ಹೇಗೋ ತಪ್ಪಿಸಿಕೊಂಡು ಸೈಕಲ್ ಏರಿ ನೇರವಾಗಿ ಪೋಲೀಸ್ ಕಚೇರಿಗೆ ಬಂದ ಕಾಸೀಮ. ನಮ್ಮೆದುರಿಗೆ ನಾಲ್ಕು ಸುಳ್ಳು ಹೇಳಿ ಇಬ್ಬರು ಪೋಲೀಸರನ್ನು ತನ್ನೊಡನೆ ಕಳಿಸಲು ಕೇಳಿ ಕೊಂಡ. ನಮಗೆ ಅನುಮಾನ ಬಂದುದರಿಂದ ನಾವೇ ಹೋಗಿ ನೋಡಿದೆವು. ಹಳ್ಳಿಗರು ತಮ್ಮ ಚಕ್ಕಡಿಯನ್ನು ಮೇಲಕ್ಕೆತ್ತುತ್ತಲಿದ್ದುದು ಕಾಣಿಸಿತು. ಅವರನ್ನು ವಿಚಾರಿಸಿದಾಗ ನಡೆದ ಸಂಗತಿಯೆಲ್ಲ ಗೊತ್ತಾಯಿತು. ಆ ಘಟನೆ ಯನ್ನು ನೋಡಿದ್ದ ಬೇರೆ ಚಕ್ಕಡಿಗಳವರೂ ಅದೆಲ್ಲ ನಿಜವೆಂದು ಸಾಕ್ಷಿ ಹೇಳಿದರು.

"ಇವರಂತೂ ಹೀಗನ್ನುತಾರೆ. ಏನು ಮಾಡೋಣ ಕಾಸೀಮ್?" ಎಂದು ನಾವು ಅವನನ್ನು ಕೇಳಿದೆವು.

"ಸರಕಾರಿ ನೌಕರನಾದ ನನ್ನ ಕೆಲಸಕ್ಕೆ ಇವರು ಅಡ್ಡಿ ಮಾಡಿದ್ದಾರೆ. ಇವರನ್ನು ಅರೆಸ್ಟ್ ಮಾಡಬೇಕು," ಎಂದ ಕಾಸೀಮ.

ಅವರನ್ನು ಬಂಧಿಸಲು ನಮಗೆ ಇಷ್ಟವಿರಲಿಲ್ಲ. ಸರಕಾರಿ ಕೆಲಸಕ್ಕೆ ಅಡ್ಡಿಯನ್ನುಂಟುಮಾಡುವುದು ಅಪರಾಧವೆಂಬುದೇನೊ ನಿಜವೆ. ಆದರೆ, ಕಾಸೀಮ ಇಲ್ಲಿ ನಡಸಿದ್ದ ಸರಕಾರಿ ಕೆಲಸವಾವುದೆಂಬುದು ಮೊದಲು ಗೊತ್ತಾಗ ಬೇಕು. ಅನಂತರ ಮುಂದಿನ ವಿಚಾರ. ಇವನು ಮಾಡುತ್ತಿದ್ದ ಕೆಲಸವೇನೆಂದರೆ ಬಡ ಹಳ್ಳಿಗರನ್ನು ಬೆದರಿಸಿ ಲಂಚ ತಿನ್ನುವುದು.

"ಈ ಬಡವರ ಮೇಲೆ ಆರೋಪ ಹೊರಿಸಿ ಅವರಿಗೆ ತ್ರಾಸಕೊಡುವದು ನಮ್ಮಿಂದಂತೂ ಆಗುವದಿಲ್ಲ. ನೀವೇ ಬೇಕಾದರೆ ಕಚೇರಿಯಲ್ಲಿ ಫಿರ್ಯಾದು ಕೊಡಬಹುದು," ಎಂದು ಅವನಿಗೆ ಹೇಳಿ ನಾವು ಹಿಂದಿರುಗಿದೆವು.

ಅವನ ಫಿರ್ಯಾದು ಬರಲಿಲ್ಲ. ಅಂದಿನಿಂದ ಅವನು ನಗರದ ಹೊರಗಡೆ ಹೋಗುವುದನ್ನು ನಿಲ್ಲಿಸಿಬಿಟ್ಟ. ಅವನ ಮೈಮೇಲೆ ಮೂಡಿದ ಬಾಸುಂಡೆಗಳು ಮಾಯವಾಗಲು ಎರಡು ತಿಂಗಳು ಬೇಕಾಯಿತು.

ಕಾಸೀಮನಿಗೆ ಪೋಲೀಸ್ ಕಾಯದೆಗಳನ್ನೆಲ್ಲ ತಿಳಿಸಿಕೊಡುತ್ತಿದ್ದ ಗುರು

ವೊಬ್ಬ ಲಭಿಸಿದ್ದ. ಅವನ ಹೆಸರು ರಹಮಾನ್. ಅವನೊಬ್ಬ ಪೋಲೀಸ್ ಹವಲ್ದಾರ್. ಬಲು ಮೋಜಿನ ಆಸಾಮಿ. ಇಂದು ಹವಲ್ದಾರನಾಗಿರುತ್ತಿದ್ದ ರಹಮಾನ್ ನಾಳೆ ಸಿಪಾಯಿಯಾಗುತ್ತಿದ್ದ, ಮತ್ತೊಂದು ತಿಂಗಳಿಗೆ ಮತ್ತೆ ಹವಲ್ದಾರ್, ಇನ್ನೊಂದು ತಿಂಗಳಿಗೆ ಮತ್ತೆ ಸಿಪಾಯಿ; ಅವನ ಮೂವತ್ತು ವರ್ಷಗಳ ನೌಕರಿಯಲ್ಲಿ ಹೀಗೆ ಹತ್ತಿಪ್ಪತ್ತು ಸಲ ನಡೆದುಹೋಗಿತ್ತು. ಇವನ ಮನೆಯಲ್ಲಿದ್ದವರೆಂದರೆ ಇವನ ಹೆಂಡತಿ, ಮಗಳು ಇಬ್ಬರೇ. ದೊರೆಯುವ ಸಂಬಳದಲ್ಲಿ ಹತ್ತು ಹನ್ನೆರಡು ಜನರ ಸಂಸಾರ ನಡಸುವ ಪೋಲೀಸರನೇಕ ರಿದ್ದರು. ರಹಮಾನ್ ಹವಲ್ದಾರನ ಮನೆಯಲ್ಲಿ ಮೂರು ಜನರು ಮಾತ್ರ ವಿದ್ದರೂ ಅವನ ಸಂಬಳ ಮೂರು ದಿನಗಳಿಗೂ ಸಾಲುತ್ತಿರಲಿಲ್ಲ. ಅವನ ಕಿಸೆ ಯಲ್ಲಿದ್ದ ಹಣವೆಲ್ಲ ಕುಡಿತದ ವ್ಯಸನಕ್ಕೆ ಖರ್ಚಾಗುತ್ತಿದ್ದುದೇ ಅದಕ್ಕೆ ಕಾರಣ ವಾಗಿತ್ತು.

ನಗರದಲ್ಲಿ ಇವನು ನಡಸುತ್ತಿದ್ದ ಉಪಟಳಗಳಿಂದಾಗಿ ಸಾರ್ವಜನಿಕರಿಂದ ಬಹಳವಾಗಿ ದೂರು ಬಂದಿದ್ದುದರಿಂದ ಫೌಜದಾರರು ಇವನನ್ನು ಕಚೇರಿಯಲ್ಲಿ ಠಾಣಾ ಅಮಲ್ದಾರನೆಂದು ನಿಯಮಿಸಿದ್ದರು.

ದಿನವೂ ಹೊತ್ತು ಮುಳುಗುವ ವೇಳೆಗೆ ಎರಡು ರೂಪಾಯಿ ಬೇಕೇ ಬೇಕಾಗುತ್ತಿತ್ತು ರಹಮಾನನಿಗೆ. ಆ ಎರಡು ರೂಪಾಯಿಗಳನ್ನು ಸಂಪಾದಿಸಲು ಅವನು ಎಂಥ ಕೃತ್ಯಕ್ಕೂ ಸಿದ್ಧನಾಗುತ್ತಿದ್ದ. ಅಷ್ಟು ಸಿಕ್ಕಿದ ಬಳಿಕ ಅವನಿಂದ ಬೇರೇನೂ ಅನ್ಯಾಯ ನಡೆಯುತ್ತಿರಲಿಲ್ಲ. ಕಚೇರಿಯಲ್ಲಿ ಇವನಿಗೆ ಬರೆಯ ಲೆಂದು ಒಂದು 'ಡೆಸ್ಕ್' ಕೊಡಲಾಗಿತ್ತು. ದಿನವೂ ಕಚೇರಿಗೆ ಬಂದೊಡನೆಯೆ ಅವನು ಮಾಡುತ್ತಿದ್ದ ಮೊದಲನೆಯ ಕೆಲಸವೆಂದರೆ ಆ ಪೆಟ್ಟಗೆಗೆ ನಮಸ್ಕಾರ ಮಾಡುವುದು; "ನಮ್ಮವ್ವಾ, ಲಕ್ಷ್ಮವ್ವಾ, ಎರಡು ರೂಪಾಯಿ ಸಿಗುವಂತೆ ಮಾಡವ್ವಾ," ಎಂದು ಆ ಪೆಟ್ಟಗೆಯನ್ನೇ ಪ್ರಾರ್ಥಿಸಿಕೊಳ್ಳುವುದು. ಯಾವ ದಿನವಾದರೂ ರೂಪಾಯಿ ಸಿಕ್ಕದಿದ್ದಲ್ಲಿ ಪೆಟ್ಟಗೆಯನ್ನು ಕಾಲಿನಿಂದೊದೆದು, "ನಾನೊಬ್ಬ ಹುಚ್ಚ ಸೂಳೀಮಗ. ಈ ಕಟ್ಟಗೇ ಪೆಟ್ಟಗೆಗೆ ನಮಸ್ಕಾರ ಮಾಡಿದರೆ ರೊಕ್ಕ ಸಿಗುತ್ತೈತೇನು!" ಎಂದು ತನ್ನನ್ನು ತಾನೆ ಬಯ್ದುಕೊಳ್ಳುತ್ತಾ ಮನೆಗೆ ಹೊರಡುತ್ತಿದ್ದ. ಎರಡು ರೂಪಾಯಿ ಸಿಕ್ಕಿದ ದಿನ ಮಾತ್ರ ಅದಕ್ಕೆ ಮತ್ತೊಮ್ಮೆ ನಮಸ್ಕಾರ ಮಾಡಿ ಹೋಗುತ್ತಿದ್ದ.

ಒಮ್ಮೆ ಒಂದು ಕೆಲಸಕ್ಕಾಗಿ ರಹಮಾನ್ ಹಳ್ಳಿಯೊಂದಕ್ಕೆ ಹೋಗ ಬೇಕಾಗಿ ಬಂದಿತ್ತು. ಆ ಹಳ್ಳಿಗೆ ಬಸ್ಸುಗಳಿರಲಿಲ್ಲವಾದುದರಿಂದ ಹತ್ತು ಮೈಲು ಗಳ ಹಾದಿಯನ್ನು ಕಾಲುನಡಿಗೆಯಿಂದ ಮುಗಿಸಿ ಹಳ್ಳಿಗೆ ಹೋಗಿ ಮುಟ್ಟಿದಾಗ ಇವನ ಹೊಟ್ಟೆಯಲ್ಲಿ ಕಾಗೆಗಳು ಕೂಗತೊಡಗಿದ್ದುವು. ಅದು ಸುಗ್ಗಿಯ ಕಾಲ ವಾದುದರಿಂದ ರೈತರೆಲ್ಲ ಬಾಗಿಲು ಇಕ್ಕಿಕೊಂಡು ಹೊಲಗಳಿಗೆ ಹೋಗಿದ್ದರು. ದೊಡ್ಡ ಮನೆಯೊಂದರ ಕಟ್ಟೆಯ ಮೇಲೆ ಹೋಗಿ ಕುಳಿತುಕೊಂಡ ರಹಮಾನ್. ಮನೆಯಲ್ಲಿದ್ದ ಮುದುಕಿಯೊಬ್ಬಾಕೆ ಹೊರಗಡೆ ಬಂದು ಇವನನ್ನು ಮಾತ ನಾಡಿಸಿದಳು.

"ನನಗೆ ಬಹಳ ಹಸಿವಾಗಿದೆ. ಎರಡು ರೊಟ್ಟೀ ಕೊಡೇ ಮುದುಕೀ," ಎಂದ ರಹಮಾನ್.

ಆ ಮನೆಯಲ್ಲಿ ಮುದುಕಿಯ ಆಟವೇನೂ ನಡೆಯುತ್ತಿರಲಿಲ್ಲ. ಎಲ್ಲಾ ಅವಳ ಸೊಸೆಯದೇ ಕಾರುಭಾರು. ಅವಳು ಖಾದ್ಯಪದಾರ್ಥಗಳನ್ನೆಲ್ಲ ಪೆಟ್ಟಿಗೆ ಯಲ್ಲಿ ಹಾಕಿ ಮುಚ್ಚಿ, ರೊಟ್ಟೆಯ ಬುಟ್ಟಿಯನ್ನು ನೆಲುವಿನ ಮೇಲಿಟ್ಟು ಹೊಲಕ್ಕೆ ಹೋಗಿದ್ದಳು. ಮುದುಕಿ ಈ ಸಂಗತಿಯನ್ನು ತಿಳಿಸಿ,

"ನನ್ನ ಕೈಯಾಗ ಏನೂ ಇಲ್ಲಪ್ಪಾ. ನಾನಾರೆ ಏನು ಮಾಡಲಿ?" ಎಂದು ಹಲುಬಿದಳು.

"ನೆಲುವಿನ ಮೇಲೆ ರೊಟ್ಟೆಯಿದಾವೆ ಅಂತೀಯಲ್ಲಾ, ಅವನ್ನೇ ಕೊಡು. ನಿನ್ನ ಸೊಸೆಯನ್ನ ನಾ ನೋಡಿಕೊಳ್ತೀನಿ," ಎಂದ ರಹಮಾನ್.

ಮುದುಕಿ ಅಂಜುತ್ತಂಜುತ್ತಲೇ ಹೋಗಿ ಎರಡು ರೊಟ್ಟೆಗಳನ್ನು ತೆಗೆದು, ಅವುಗಳ ಮೇಲೆ ಸ್ವಲ್ಪ ಖಾರದ ಪುಡಿಯನ್ನೂ ಒಳ್ಳೆಣ್ಣೆಯನ್ನೂ ಹಾಕಿ ತಂದು ಕೊಟ್ಟಳು. ಹಳ್ಳಿಗೆ ಬಂದ ಪೋಲೀಸ್ ಹವಲ್ದಾರನಿಗೆ ಖಾರ–ರೊಟ್ಟೆ ಕೊಡುವಳಲ್ಲಾ! ಎಂದು ರೇಗಿ ರಹಮಾನ್ ಹೇಳಿದ:

"ಖಾರ–ಎಣ್ಣೆ ತಿಂದು ನನಗೆ ರೂಢಿಯಿಲ್ಲ ಮುದುಕೀ. ಸ್ವಲ್ಪ ಬೆಣ್ಣೀನೋ ತುಪ್ಪಾನೋ ಕೊಡು."

"ಅದೆಲ್ಲಾ ಪೆಟ್ಟಿಗೆಯೊಳಗ ಐತಪ್ಪಾ," ಎಂದಳು ಮುದುಕಿ.

ರೊಟ್ಟೆಯನ್ನು ಕಟ್ಟೆಯ ಮೇಲಿಟ್ಟು, ರಹಮಾನ್ ತನ್ನ ಕಿಸೆಯಿಂದ

ಚೂರಿಯನ್ನು ತೆಗೆದು ಮಸೆಯುವ ಕಲ್ಲಿನ ಮೇಲೆ ಅದನ್ನು ಮಸೆಯತೊಡಗಿದ. ಮುದುಕಿ ಗಾಬರಿಗೊಂಡು ಕೇಳಿದಳು :

"ಏನಪಾ, ಏನು ಮಾಡುವವಾ ನೀ ?"

ಕಟ್ಟೆಯ ಹತ್ತಿರ ಎಮ್ಮೆಯ ಕರುವೊಂದು ಮಲಗಿಕೊಂಡಿತ್ತು. ಅದನ್ನು ತೋರಿಸುತ್ತಾ ರಹಮಾನ್ ಹೇಳಿದ :

"ಬೆಣ್ಣೀನೂ ಇಲ್ಲಾ ತುಪ್ಪಾನೂ ಇಲ್ಲಾ ಅಂತೀಯಲ್ಲ ನೀ. ಅದಕ್ಕೆ ಈ ಕರುವಿನ ಕಿವಿ ಕೊಯ್ದು ಸುಟ್ಟು ರೊಟ್ಟೆಯ ಕೂಡ ತಿನ್ನುತೀನಿ."

ಮುದುಕಿ ಮತ್ತೂ ಹೆದರಿ ಒಳಗಡೆ ಹೋಗಿ ಪೆಟ್ಟಿಗೆಯ ಬೀಗ ಮುರಿದು ಬೆಣ್ಣೆ ತಂದು ಕೊಟ್ಟು ಸೊಸೆಯಿಂದ ತನಗಾಗಬಹುದಾದ ಉಪಟಳದ ಬಗ್ಗೆ ಹೇಳಿಕೊಂಡಳು. ಇವನು ಬಾಯಿ ಚಪ್ಪರಿಸುತ್ತಾ ರೊಟ್ಟಿ ತಿಂದು ಮುಗಿಸಿ, "ನೀನೇನೂ ಹೆದರಬೇಡ ತಾಯಿಯಾ. ನಿನ್ನ ಸೊಸೆ ಇನ್ನು ಮ್ಯಾಲ ಎಂದೆಂದೂ ನಿನಗೆ ತ್ರಾಸ ಕೊಡದಂತೆ ಮಾಡ್ತೀನಿ," ಎಂದು ಆಶ್ವಾಸನವಿತ್ತು ಚಾವಡಿಗೆ ಹೋಗಿ, ಗೌಡರನ್ನು ಕರೆಯಿಸಿ ತಾನು ಬಂದ ಕೆಲಸ ಮುಗಿಸಿದ. ಆ ವೇಳೆಗೆ ರಾತ್ರಿಯಾಯಿತು. ಗೌಡರ ಮನೆಯಲ್ಲಿ ಊಟ ಮುಗಿಸಿಕೊಂಡು ಅವರನ್ನೂ ಓಲೇಕಾರರನ್ನೂ ಜತೆಗೆ ಕರೆದುಕೊಂಡು ಗಸ್ತಿ ತಿರುಗಲು ಹೊರಟು, ಆ ಮುದುಕಿಯ ಮನೆಯೆದುರಿಗೆ ಹಾಯ್ದು ಬರುತ್ತಿದ್ದ ಹಾಗೆ ಗಟ್ಟಿಯಾಗಿ ದನಿ ತೆಗೆದು ಶಂಖವಾದ್ಯಕ್ಕಾರಂಭಿಸಿದ ರಹಮಾನ್. ಆ ಗದ್ದಲವನ್ನು ಕೇಳಿ ಮುದುಕಿಯ ಮಗ ಬಾಗಿಲು ತೆಗೆದು ಹೊರಗಡೆ ಬರುತ್ತಲೂ ರಹಮಾನ್ ಅವನನ್ನು ಹಿಡಿದುಕೊಂಡು, "ತುಡುಗು ಮಾಡಲಿಕ್ಕೆ ಇನ್ನೊಬ್ಬರ ಮನೆಯ ಅಗಳೀ ಸರಿಸುತ್ತಿದ್ದಿಯಾ ಬದ್ಮಾಷ್ ! ನಡೀ ಚಾವಡಿಗೆ !" ಎಂದು ಹೇಳುತ್ತಾ ಆ ರೈತನನ್ನು ದರದರನೆ ಎಳೆಯುತ್ತಾ ಚಾವಡಿಗೆ ಕರೆದು ತಂದ. ಗೌಡರೂ ಓಲೇಕಾರರೂ ತಬ್ಬಿಬ್ಬಾಗಿ ನೋಡುತ್ತಿದ್ದರು. ಕೂಗಾಟವನ್ನು ಕೇಳಿ ಹಳ್ಳಿಯ ಜನರೆಲ್ಲಾ ಬಂದು ನೆರೆದರು. ಆ ರೈತನಿಗೆ ಮುಖವೆತ್ತದ ಹಾಗಾಗಿತ್ತು. ದುಡಿದು ತಿಂದು ಮರ್ಯಾದೆಯಿಂದ ಜೀವಿಸಬಯಸುತ್ತಿದ್ದವನ ಮೇಲೆ ಕಳವಿನ ಆರೋಪ ಬಂದರೆ ಅವನ ಪಾಡು ನಾಯಪಾಡು.

"ನಿನ್ನನ್ನು ಬಿಡುವದಿಲ್ಲ ತುಡುಗಾ ! ಜೇಲಿಗೆ ಕಳಿಸೇ ಬಿಡ್ತೀನಿ !" ಎಂದು ಆರ್ಭಟಿಸುತ್ತಿದ್ದ ರಹಮಾನ್. ಅವನನ್ನು ಬಿಟ್ಟುಬಿಡಬೇಕೆಂದು

ಹಳ್ಳಿಯ ಜನರೆಲ್ಲ ಬೇಡಿಕೊಂಡರು. ಅವನ ಹೆಂಡತಿ ಬಂದು ರಹಮಾನನ ಕಾಲು ಹಿಡಿದು ಕಂಬನಿಗರೆಯತೊಡಗಿದಳು. ಅವಳ ಅತ್ತೆ, ಆ ಮುದುಕಿಯೂ ಬಂದು, "ನನ್ನ ಮಗ ಅಂಥಾ ಕೆಲಸ ಎಂದೂ ಮಾಡಿಲ್ಲಪಾ. ಅವನ್ನ ಬಿಟ್ಟು ಬಿಡು," ಎಂದು ರೋದಿಸತೊಡಗಿದಳು.

"ಅಳಬ್ಯಾಡ ಮುದುಕೀ. ಸುಮ್ಮನಾಗು," ಎಂದ ರಹಮಾನ್.

"ಇವ ನಿನ್ನ ಮಗ ತುಡುಗು ಮಾಡುತ್ತಿರಲಿಕ್ಕಿಲ್ಲ. ಆದರೂ ಇವನೇನು ಸಂಭಾವಿತ ಅಲ್ಲ. ಪಕ್ಕಾ ಬದ್ಮಾಷ ಇದ್ದಾನೆ. ಇವನ ಹೆಂಡತಿಯೂ ಪಕ್ಕಾ ರಾಕ್ಷಸಿ ಇದಾಳೆ. ಯಾಕೆ ಮುದುಕೀ, ಏನಲೇ?"

ಪಾಪ! ಅವಳೇನು ಅಂದಾಳು! ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಂಡಿದ್ದಳು.

"ಇವತ್ತು ನನಗ ಬೆಣ್ಣೀ ರೊಟ್ಟಿ ಕೊಟ್ಟಿದ್ದಕ್ಕ ನಿನ್ನ ಬಯ್ದಳು ಹೌದಲ್ಲೋ ನಿನ್ನ ಸೊಸೆ?" ಎಂದ ರಹಮಾನ್.

ನೆರೆದ ಜನರೆಲ್ಲ ಬೆರಗಾಗಿ ರಹಮಾನನನ್ನೂ ಆ ರೈತನ ಹೆಂಡತಿಯನ್ನೂ ಮಿಕಿಮಿಕಿ ನೋಡುತ್ತ ನಿಂತರು. ಆ ಹೆಂಗಸು ತನ್ನ ಅತ್ತೆಗೆ ಉಪಟಳ ಕೊಡುವ ವಿಷಯ ಊರಿನವರಿಗೆಲ್ಲ ಗೊತ್ತಿದ್ದುದೇ ಆಗಿತ್ತು.

"ಮಾತಾಡು ಮುದುಕೀ. ಇವತ್ತು ಹೊಲದಿಂದ ಬಂದ ಬಳಿಕ ನಿನ್ನನ್ನು ಬಯ್ದಳೋ ಇಲ್ಲೋ ನಿನ್ನ ಸೊಸೆ?" ಏರಿಸಿದ ಧ್ವನಿಯಲ್ಲಿ ಕೇಳಿದ ರಹಮಾನ್.

ಎಲ್ಲವನ್ನೂ ಹೇಳದೆ ವಿಧಿಯಿರಲಿಲ್ಲ. ಮುದುಕಿ ನಿಧಾನವಾಗಿ ಹೇಳಿದಳು:

"ಹೌದಪ್ಪಾ. ಬಂದಮ್ಯಾಲ ಬಯ್ದಳು."

"ಬರೀ ಬಯ್ದು ಸುಮ್ಮನಾದಳೋ, ಅಥವಾ...."

"ಪೆಟ್ಟಿಗೀ ಯಾಕ ತೆಗೆದಿ ಅಂತ ಒಂದು ಒದ್ದಳಪ್ಪಾ."

"ಇವಳು ನಿನ್ನ ಒದೆಯುವಾಗ ಇವ ಎಲ್ಲಿದ್ದ ನಿನ್ನ ಮಗ?"

"ಅಲ್ಲೇ ಇದ್ದನಪ್ಪಾ."

ಆ ಗಂಡ ಹೆಂಡತಿಯರನ್ನು ಕ್ರೂರ ದೃಷ್ಟಿಯಿಂದ ದಿಟ್ಟಿಸಿ ನೋಡುತ್ತಾ ರಹಮಾನ್ ಕೇಳಿದ:

"ಇವ ನಿನ್ನ ಹೊಟ್ಟೆಯೊಳಗೆ ಹುಟ್ಟಿ ಬಂದವ ಈ ಹೆಂಗಸು ನಿನ್ನ ಒದೆಯುವಾಗ ಸುಮ್ಮನೆ ಹ್ಯಾಗಿರುತ್ತಾನೇ ಮುದುಕೀ? ಇವ ಬದ್ಮಾಷ್

ಹೌದೋ ಅಲ್ಲೋ? ಇವನ್ನ ಜೇಲಿಗೆ ಹಾಕೂದು ಚಲೋದು ಹೌದೋ ಅಲ್ಲೋ?"

"ಎಷ್ಟೇ ಆದರೂ ಅವ ನನ್ನ ಮಗನಪ್ಪಾ. ಅವಗ ಏನೂ ಮಾಡಬ್ಯಾಡ."

"ಇವನ್ನ ಹೀಗೇ ಬಿಟ್ಟರೆ ನಿನ್ನ ಒಂದು ದಿನ ಕೊಂದು ಹಾಕಿಯಾರು ಇಬ್ಬರೂ ಕೂಡಿ. ಇವರಿಬ್ಬರನ್ನು ಕೂಡೇ ಜೇಲಿಗೆ ಕಳಿಸುತೀನಿ," ಎಂದ ರಹಮಾನ್.

ಆ ರೈತ, ಅವನ ಹೆಂಡತಿ ಇಬ್ಬರೂ ರಹಮಾನನ ಕಾಲು ಹಿಡಿದು ಕೊಂಡು ತಮ್ಮದು ತಪ್ಪಾಯಿತೆಂದು ಹೇಳಿಕೊಂಡು ಇನ್ನು ಮುಂದೆ ಮುದುಕಿ ಯನ್ನು ಒಳ್ಳೆಯ ರೀತಿಯಿಂದ ನಡಸಿಕೊಳ್ಳುವುದಾಗಿ ಆಣೆಯಿಟ್ಟರು.

"ನನ್ನ ಕಾಲು ಯಾಕೆ ಹಿಡೀತೀರಿ? ಹಿಡೀರಿ ಆ ತಾಯಿಯ ಕಾಲು. ಅವಳ ಕ್ಷಮಾ ಕೇಳಿಕೊಳ್ಳಿರಿ," ಎಂದ ರಹಮಾನ್; ಅವರು ಹಾಗೆ ಮಾಡಿದ ಬಳಿಕ ಅವರನ್ನು ಬಿಟ್ಟು ಮನೆಗೆ ಹೋಗಲು ಹೇಳಿದ. ಅನಂತರ, ತಾನು ಹೂಡಿದ ಆ ನಾಟಕದ ಇತಿಹಾಸವನ್ನು ಅಲ್ಲಿ ಕೂಡಿದವರಿಗೆ ವಿವರಿಸಿ ಹೇಳಿದ. ಅವರು ಬಿದ್ದು ಬಿದ್ದು ನಕ್ಕರಲ್ಲದೆ ಅವನ ಜಾಣ್ಮೆಗೆ ತಲೆದೂಗಿದರು.

ರಹಮಾನನಿಗೆ ದಿನವೂ ಬೇಕಾಗುತ್ತಿದ್ದ ಎರಡು ರೂಪಾಯಿಗಳು ಒಂದು ದಿನ ಸಿಕ್ಕಲಿಲ್ಲ. ಅವನು ಮೋರೆಯೊಣಗಿಸಿಕೊಂಡು, ಪೆಟ್ಟಿಗೆಯನ್ನು ಕಾಲಿನಿಂದೊದೆದು ನಗರದಲ್ಲೇನಾದರೂ ಸಿಕ್ಕಬಹುದೆಂಬ ಆಸೆಯಿಂದ ಹೊರಕ್ಕೆ ಹೊರಡುವುದರಲ್ಲಿದ್ದಾಗ, ಕಚೇರಿಯೆದುರಿಗೆ ಜರತಾರಿ ರುಮಾಲು ಸುತ್ತಿಕೊಂಡು ಎಲೆಯಡಕೆ ಮೆಲ್ಲುತ್ತ ಹೊರಟಿದ್ದ ಹಳ್ಳಿಗನೊಬ್ಬನನ್ನು ಕಂಡು ಅವನನ್ನು ಕೂಗಿದ. ಹಳ್ಳಿಯವನು ಬರುತ್ತಲೂ, ಕಚೇರಿಯ ಮುಂಭಾಗದಲ್ಲಿದ್ದ ಬೆಂಚಿನ ಮೇಲೆ ಕೂಡಿಸಿ ತಾನೂ ಕುಳಿತುಕೊಂಡು, ಆ ಹಳ್ಳಿಗನ ಅಪ್ಪನದೂ ತನ್ನದೂ ಗೆಳೆತನವೆಂದು ಬುರುಡೆ ಕೊಚ್ಚಿ, ಅವನೊಡನೆ ಮಾತು ಬೆಳಸಿ, ಅವರೆಲ್ಲರ ಹೆಸರು ಗಳನ್ನು ಮರೆತಿರುವಂತೆ ನಟಿಸಿ, ಅವನಾಗಿಯೆ ತನ್ನ ಬಗೆಗೆ ವಿವರ ತಿಳಿಸು ವಂತೆ ಮಾಡಿದ.

"ಚಾ ತರಿಸ್ತೀನಿ, ಕುಡೀತೀಯಾ?" ಎಂದು ಕೇಳಿದ ರಹಮಾನ್.

"ಏನೂ ಬ್ಯಾಡ ಬಿಡಿರಿ," ಎಂದ ಆ ಹಳ್ಳಿಗ.

ಸಿಪಾಯಿಯೊಬ್ಬನನ್ನು ಕೂಗಿ ಅವನಿಂದ ಮೂರು ಕಾಸಿನ ಎಲೆ - ಅಡಕೆ

ತಂಬಾಕು ತರಿಸಿ ಹಳ್ಳಿಗನಿಗೆ ಕೊಟ್ಟು ತಿನ್ನುವಂತೆ ಹೇಳಿದ ರಹಮಾನ್. ಅವನು ತಿಂದು ರಸವನ್ನು ಉಗುಳಲೆಂದು ಎದ್ದು ಹೊರಟಾಗ ರಹಮಾನ್ ಅವನನ್ನು ತಡೆದು ಅಲ್ಲೇ ಉಗುಳಬಹುದೆಂದು ಹೇಳಿದ. ಏನನ್ನೂ ಅರಿಯದ ಆ ಬಡ ಹಳ್ಳಿಗ ಕಚೇರಿಯೆದುರಿಗೇ ಉಗುಳುತ್ತಲೂ ರಹಮಾನ್ ಅವನ ರಟ್ಟೆ ಹಿಡಿದು, "ಗೆಳೆಯನ ಮಗ ಅಂತ ಕರೆದು ಮಾತಾಡಿಸಿದರೆ ಕಚೇರಿಯ ಮುಂದೆ ಉಗುಳಿ ಹೊಲಸು ಮಾಡುತ್ತೀಯಾ? ನಡೀ ಲಾಕಪ್ಪಿಗೆ!" ಎಂದು ಹೇಳುತ್ತಾ ಅವನನ್ನು ಎಳೆಯತೊಡಗಿದ. ಹಳ್ಳಿಗ ಅಂಜಿ ಗಾಬರಿಯಾಗಿ ಐದು ರೂಪಾಯಿ ತೆಗೆದುಕೊಟ್ಟು ತಪ್ಪಿಸಿಕೊಂಡು ಹೋದ. ಸಂತೋಷದಿಂದ ನಗುತ್ತ ರಹಮಾನ್ ತನ್ನ ಪೆಟ್ಟಿಗೆಯ ಬಳಿ ಬಂದು ಅದಕ್ಕೆ ನಮಸ್ಕರಿಸಿ, "ನಿನ್ನನ್ನು ಒದ್ದದ್ದು ತಪ್ಪಾಯ್ತು ಲಕ್ಷ್ಮೀ," ಎಂದು ಹೇಳುತ್ತಾ ಹೆಂಡದಂಗಡಿಗೆ ಹೊರಟುಹೋದ. ಆಗ ಫೌಜದಾರರು ಕಚೇರಿಯಲ್ಲಿರಲಿಲ್ಲ. ರಹಮಾನ್ ಮಾಡುವುದನ್ನೆಲ್ಲ ನೋಡುತ್ತಿದ್ದ ನಾವು ಅಂದು ನಕ್ಕದ್ದೇ ನಕ್ಕದ್ದು.

ಅವನು ಮಾಡಿದ ಇನ್ನೊಂದು ಮೋಜಿನಾಟ ನನಗಿನ್ನೂ ನೆನಪಿದೆ. ಅವನೂ ಇನ್ನೊಬ್ಬ ಸಿಪಾಯಿ ಕೂಡಿ ನಗರದ ಒಂದು ಭಾಗದ ಪಟೇಲನ ಸಹಾಯದಿಂದ ೨೦೦ ರೂಪಾಯಿ ಲಂಚ ತಿಂದಿದ್ದರು. ಆ ಹಣವೆಲ್ಲ ಪೂರ್ತಿಯಾಗಿ ಕೈಗೆ ಬಂದಿರಲಿಲ್ಲವಾದುದರಿಂದ ಅದನ್ನು ವಸೂಲುಮಾಡುವ ಹೊಣೆಯನ್ನು ಪಟೇಲನಿಗೇ ವಹಿಸಿಕೊಟ್ಟು, ಇವರಿಬ್ಬರೂ ಕಛೇರಿಗೆ ಬಂದಿದ್ದರು. ಮಧ್ಯಾಹ್ನದ ವೇಳೆಯಲ್ಲಿ ಕಚೇರಿಯಲ್ಲಿ ಯಾರೂ ಇಲ್ಲದಿದ್ದಾಗ ರಹಮಾನ್ ಆ ಪೋಲೀಸನನ್ನು ಕರೆದು ಪಟೇಲನ ಹತ್ತಿರ ಹೋಗಿ ಹಣ ತೆಗೆದುಕೊಂಡು ಬರಲು ತಿಳಿಸಿದ. ಆ ಲಂಚದ ಪ್ರಕರಣದಲ್ಲಿ ಪಟೇಲನೇ ವಿಶೇಷವಾಗಿ ಶ್ರಮಿಸಿದ್ದನಾದುದರಿಂದ ಅವನು ತನಗೆಂದು ನೂರು ರೂಪಾಯಿ ಇಟ್ಟುಕೊಂಡು ಇನ್ನುಳಿದ ನೂರನ್ನು ಪೋಲೀಸನ ಕೈಯಲ್ಲಿ ಕೊಟ್ಟು ಕಳಿಸಿದ. ಅರ್ಧ ಹಣ ಕೈಬಿಟ್ಟಿತಲ್ಲಾ ಎಂದು ರಹಮಾನನಿಗೆ ತಡೆಯಲಾರದಷ್ಟು ಕೋಪ. ಏನು ಮಾಡುವುದೆಂದು ಯೋಚಿಸುತ್ತಾ ಅವನು ಒಂದೆರಡು ಗಳಿಗೆ ಮೌನವಾಗಿ ಕುಳಿತಿದ್ದ. ಅಷ್ಟರಲ್ಲಿ ಆ ಪೋಲೀಸನೂ ತನ್ನ ಪಾಲು ಕೊಡಲು ಕೇಳಿದ.

"ಆ ಗೌಡನಿಗೆ ನೂರು ರೂಪಾಯಿ ಬಿಟ್ಟು ಬಂದಿದ್ದೀ ಕತ್ತೆ! ಈಗ

ಹವಾಲ್ದಾರನಾದ ನನ್ನ ಹತ್ತರ ಪಾಲು ಕೇಳುವಿಯಾ!" ಎಂದು ಸಿಪಾಯಿಯನ್ನು ಬಯ್ದ ರಹಮಾನ್.

ಪೋಲೀಸನಿಗೆ ಯಾವುದೂ ಅರ್ಥವಾಗಲಿಲ್ಲ. ರಹಮಾನನ ಜೊತೆಗೆ ಅಲೆದುದಕ್ಕಾಗಿ ನಾಲ್ಕಾರು ರೂಪಾಯಿ ದೊರೆಯಬಹುದೆಂದು ಅವನು ಭಾವಿಸಿಕೊಂಡಿದ್ದ. ಪಾಪ! ಅವನಿಗೆ ಬಹಳ ನಿರಾಸೆಯಾಯಿತು.

ರಹಮಾನ್ ತಲೆ ಕೆರೆದುಕೊಳ್ಳುತ್ತಾ ಹೇಳಿದ:

"ಆ ಗೌಡನನ್ನು ಹೀಗೇ ಬಿಡುವದೇ! ಹೋಗಿ ಅವನಿಗೆ ಹೇಳು. ನಾವೆಲ್ಲ ಕೂಡಿ ಲಂಚ ತಿಂದದ್ದು ಫೌಜದಾರರಿಗೆ ಗೊತ್ತಾಗಿದೆ, ಅವರು ಸಿಟ್ಟಾಗಿ ನನ್ನನ್ನು ಲಾಕಪ್ಪಿನಲ್ಲಿ ಹಾಕಿದ್ದಾರೆ, ಈಗ ನಿನ್ನನ್ನು ಕರೆತರಲು ಹುಕುಂ ಮಾಡಿದ್ದಾರೆ ಅಂತ ಹೇಳು. ಮಗನ ಫಜೀತಿಯಾಗಿ ಹೋಗುತದೆ."

ಲಂಚ ತಿನ್ನುವವರ ಬಗ್ಗೆ ನಮ್ಮ ಫೌಜದಾರರಿಗೆ ಬಹಳ ಕೋಪವೆಂಬ ವಿಷಯ ಆ ಪಟೇಲನಿಗೂ ಚೆನ್ನಾಗಿ ಗೊತ್ತಿದ್ದಿತು. ಲಂಚ ಕೊಟ್ಟವರೇ ಕಚೇರಿಗೆ ಹೋಗಿ ಫೌಜದಾರರಿಗೆ ದೂರು ಕೊಟ್ಟಿರಬಹುದು, ಅದಕ್ಕೇ ಅವರು ರಹಮಾನ್ ಹವಲ್ದಾರರನ್ನು ಲಾಕಪ್ಪಿನಲ್ಲಿರಿಸಿರಬೇಕು, ಈಗ ತನ್ನನ್ನೂ ಅವರು ಜೇಲಿಗೆ ಕಳಿಸದಿರುವುದಿಲ್ಲ – ಎಂದು ಯೋಚಿಸಿ ಕೈಕಾಲು ಕಳೆದುಕೊಂಡ ಆ ಪಟೇಲ, ಲಂಚದ ನೂರು ರೂಪಾಯಿಗಳನ್ನಲ್ಲದೆ, ತಾನು ಮನೆಯಲ್ಲಿಲ್ಲವೆಂದು ಹೇಳುವುದಕ್ಕಾಗಿ ಆ ಪೋಲೀಸನಿಗೆ ಐವತ್ತು ರೂಪಾಯಿಗಳನ್ನು ಕೊಟ್ಟು ಕಳಿಸಿದ.

ಆ ಪೋಲೀಸನೇನು ಸಾಮಾನ್ಯನೇ! ಆ ಐವತ್ತು ರೂಪಾಯಿಗಳನ್ನು ಜೇಬಿಗೆ ಬಿಟ್ಟುದಲ್ಲದೆ, ಲಂಚದ ನೂರು ರೂಪಾಯಿಗಳ ಪೈಕಿ ಐವತ್ತು ರೂಪಾಯಿ ತಾನು ತೆಗೆದುಕೊಂಡಿರುವುದಾಗಿ ಹೇಳಿ ಉಳಿದ ಐವತ್ತು ರೂಪಾಯಿಗಳನ್ನು ರಹಮಾನನ ಮುಂದಿರಿಸಿದ. ಅಂಥ ವಿಚಾರಗಳಲ್ಲಿ ತುಂಬಾ ಪಳಗಿದವನಾದ ರಹಮಾನನಿಗೆ ಪೋಲೀಸನ ಕಪಟವನ್ನರಿತುಕೊಳ್ಳಲು ಹೆಚ್ಚು ಸಮಯ ಬೇಕಾಗಿರಲಿಲ್ಲ. ಅವನು ಒಂದು ಮಾತನ್ನೂ ಆಡದೆ ತನ್ನ ಕೋಟು ಟೊಪ್ಪಿಗೆ ಹಾಕಿಕೊಂಡು ಪಟೇಲನಲ್ಲಿಗೆ ಹೋಗಿ ಬರುವುದಾಗಿ ಹೇಳಿ ಹೊರಟು ನಿಂತಾಗ ಆ ಪೋಲೀಸ್, ಇನ್ನು ತನ್ನ ಹುಳುಕು ಹೊರಬೀಳುವುದೆಂದು ತಿಳಿದು ಪಟೇಲನಿಂದ ದೊರೆತ ಐವತ್ತು ರೂಪಾಯಿಗಳನ್ನೂ ತೆಗೆದು ಕೊಟ್ಟ.

ಹೀಗೆ ಎರಡು ನೂರು ರೂಪಾಯಿ ಕೈಗೆ ಬಂದ ಬಳಿಕ ಎಂಟು ದಿನಗಳ ವರೆಗೆ ರಹಮಾನನ ಪತ್ತೆಯೇ ಇರಲಿಲ್ಲ. ಅವನು ಕಚೇರಿಗೂ ಬರಲಿಲ್ಲ, ಮನೆಯಲ್ಲೂ ಸಿಕ್ಕಲಿಲ್ಲ. ಆ ಹಣವೆಲ್ಲವನ್ನೂ ಹೆಂಡದಂಗಡಿಗೆ ಹಾಕಿ ಹಾಳು ಮಾಡಿದ ಬಳಿಕ ಎಂಟನೆಯ ದಿನ ಅಳುಮೊಗದೊಡನೆ ಕಚೇರಿಗೆ ಬಂದು ಫೌಜದಾರರ ಕಾಲುಗಳ ಮೇಲೆ ಬಿದ್ದುಕೊಂಡ.

"ದಿಲ್ಲಿ ಆಗ್ರಾ ನೋಡಿಕೊಂಡು ಬರಲು ಹೋಗಿದ್ದಿಯಾ ರಹಮಾನ್ ?" ಎಂದರು ಫೌಜದಾರರು.

"ಬೂಟನಿಂದ ಹೊಡೀರಿ ರಾವ್‌ಸಾಬ್, ಈ ಬದ್ಮಾಷನ್ನ ಬೂಟನಿಂದ ಹೊಡೀರಿ," ಎನ್ನುತ್ತಾ ಚಿಕ್ಕಮಕ್ಕಳಂತೆ ರೋದಿಸತೊಡಗಿದ ರಹಮಾನ್.

ಆಗಲೆ ಅವನನ್ನು ನೌಕರಿಯಿಂದ ದೂರಗೊಳಿಸಿ ಮನೆಗೆ ಕಳಿಸಬಹುದಾಗಿತ್ತು. ಆದರೆ ದಯಾರ್ದ್ರ ಹೃದಯದ ನಮ್ಮ ಫೌಜದಾರರು ಹಾಗೆ ಮಾಡದೆ, ಅವನ ಮೂವತ್ತು ವರ್ಷಗಳ ಸೇವೆಯನ್ನೂ ನಿವೃತ್ತಿಪಡೆಯುವ ವಯಸ್ಸನ್ನೂ ಗಮನಿಸಿ, ಇನ್ನು ಮುಂದೆ ಹೀಗೆ ಮಾಡಬಾರದೆಂದು ಬುದ್ಧಿ ಹೇಳಿ ಆ ಸಲ ಕ್ಷಮಿಸಿ ಬಿಟ್ಟರು. ಹಾಗೆ ಮಾಡುವುದಿಲ್ಲವೆಂದು ಫೌಜದಾರರ ಪಾದ ಮುಟ್ಟಿ ಪ್ರತಿಜ್ಞೆ ಮಾಡಿದ ರಹಮಾನ್.

ಆದರೇನು! ನಾಯ ಬಾಲ ಡೊಂಕೇ! ರಹಮಾನನ ಚಮತ್ಕಾರಿಕ ವರ್ತನೆಯಲ್ಲೇನೂ ಬದಲಾವಣೆಯಾಗಲಿಲ್ಲ. ಆದರೆ ನಾಯಿಯಂತೆಯೆ ಬಹಳ ನಂಬಿಗೆಯ ವ್ಯಕ್ತಿ ರಹಮಾನ್. ನಮ್ಮ ಫೌಜದಾರರಿಗಾಗಿ ಅವನು ತನ್ನ ಜೀವ ಅರ್ಪಿಸಲೂ ಸಿದ್ಧವಾಗಿರುತ್ತಿದ್ದ. ಅವನ ಬುದ್ಧಿಶಕ್ತಿಯೂ ಸಾಧಾರಣವಾದುದೇನಲ್ಲ. ಅವನು ಕುಡಿತದ ವ್ಯಸನವನ್ನಂಟಿಸಿಕೊಳ್ಳದೆ, ತನ್ನ ಬುದ್ಧಿವಂತಿಕೆಯ ಸದುಪಯೋಗ ಮಾಡಿಕೊಂಡಿದ್ದಲ್ಲಿ ಪೋಲೀಸ್‌ಖಾತೆಯಲ್ಲಿ ಮೇಲಕ್ಕೇರುತ್ತ ಹೋಗಿ ಈ ವೇಳೆಗೆ ಇನ್ಸ್‌ಪೆಕ್ಟರನಾಗಬಹುದಾಗಿತ್ತು. ಆದರೆ, ಅವನ ಬುದ್ಧಿಯೆಲ್ಲವೂ ಅಲ್ಪತನದ ಕಾರ್ಯಗಳಿಗಾಗಿಯೆ ವ್ಯಯವಾಗುತ್ತಿತ್ತು. ಅದರಿಂದಾಗಿಯೆ ಅವನು ಕಡೆಯುವರೆಗೂ ಹವಲ್ದಾರನಾಗಿಯೆ ಉಳಿದ.

ಈ ದಿನ ರಹಮಾನ್ ಈ ಜಗತ್ತಿನಲ್ಲಿಲ್ಲ. ಅವನು ಕಾಲವಾದುದಕ್ಕೆ ಆಗಲೆ ನಾಲ್ಕು ವರ್ಷ ಸಂದಿವೆ.

೧೭

ನಾಟಕ; ಪ್ರಣಯ

ನನ್ನ ಪಾಲಿಗೆ ಬಂದ ಕೆಲಸವನ್ನು ನಾನು ಮನಸ್ಸುಗೊಟ್ಟು ಮಾಡುತ್ತಿದ್ದುದರಿಂದ ಅಲ್ಪಾವಧಿಯಲ್ಲಿಯೆ ಒಳ್ಳೆಯ ಕೆಲಸಗಾರನೆಂದು ಹೆಸರು ಪಡೆದೆ. ಕಚೇರಿಯ ಎಲ್ಲ ಗುಮಾಸ್ತೆಗಳೂ ಫೌಜದಾರರೂ ನನ್ನನ್ನು ಪ್ರೀತಿಯಿಂದ ಕಾಣುತ್ತಿದ್ದರು. ಲಂಚದ ಹಣವೂ ಸಾಕಷ್ಟು ಸಿಕ್ಕುತ್ತಿತ್ತು. ಪ್ರತಿ ತಿಂಗಳೂ ಐವತ್ತು ಅರವತ್ತು ರೂಪಾಯಿಗಳನ್ನು ನಮ್ಮ ತಾಯಿಗೆ ಕಳಿಸುತ್ತಿದ್ದೆ. ನನ್ನ ತಮ್ಮಂದಿರಿಬ್ಬರ ವಿದ್ಯಾಭ್ಯಾಸ ತೊಂದರೆಯಿಲ್ಲದೆ ಸಾಗುತ್ತಿತ್ತು. ಮೊದಲಿನಂಥ ಕಷ್ಟವೇನೂ ಇರಲಿಲ್ಲವಾದರೂ ಈ ಪೋಲೀಸ್ ನೌಕರಿಯಲ್ಲಿ ನನಗೆ ಕೊಂಚವೂ ತೃಪ್ತಿಯಿರಲಿಲ್ಲ. ನಾನು ಶಾಲೆಯಲ್ಲಿದ್ದಾಗಿನಿಂದಲೂ ಸಾಹಿತ್ಯ ಮತ್ತು ನಾಟಕಗಳಲ್ಲಿ ನನಗೆ ವಿಶೇಷ ಅಭಿರುಚಿಯಿತ್ತು. ನಮ್ಮ ಹೈಸ್ಕೂಲಿನ ಕೈಬರೆಹದ ಮಾಸಪತ್ರಿಕೆಯಲ್ಲಿ ನಾನು ಬರೆದ ಕೆಲವು ಕತೆ ಕವಿತೆಗಳೂ ಪ್ರಕಟವಾಗಿದ್ದುವು. ಶಾಲೆಯ ನಾಟಕಗಳಲ್ಲೂ ನಾನು ಪಾತ್ರವಹಿಸುತ್ತಿದ್ದೆ. ನನ್ನ ಧ್ವನಿಯೂ ತಕ್ಕಮಟ್ಟಿಗೆ ಚೆನ್ನಾಗಿಯೆ ಇದ್ದಿತಾದುದರಿಂದ ಗಾಯನಕಲೆಯಲ್ಲೂ ನನಗೆ ಆಸಕ್ತಿ ಬೆಳೆದು ಬಂದಿತ್ತು. ಆಗ ನಮ್ಮ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ದಿವಂಗತ ಸಾಸನೂರ ಅವರು ನನ್ನನ್ನು ಬಹಳವಾಗಿ ಪ್ರೋತ್ಸಾಹಿಸಿದ್ದರು.

ಓದುವ ಅಭಿರುಚಿಯೂ ನನಗಿತ್ತು. ಪ್ರತಿ ದಿನವೂ "ಟೈಮ್ಸ್" ಓದದಿದ್ದರೆ ನನಗೆ ನಿದ್ದೆ ಬರುತ್ತಿರಲಿಲ್ಲ. ೧೯ ರೂ. ಸಂಬಳದ ಸಿಪಾಯಿಯಾಗಿದ್ದ ನಾನು "ಟೈಮ್ಸ್" ಕೊಳ್ಳುವುದನ್ನು ಕಂಡು ನನ್ನ ಸಹೋದ್ಯೋಗಿಗಳೆಲ್ಲ ಹಾಸ್ಯ ಮಾಡುತ್ತಿದ್ದರು.

ನಾನಿನ್ನೂ ಹೈಸ್ಕೂಲಿನಲ್ಲಿದ್ದಾಗಲೇ ಪ್ರಸಿದ್ಧ ನಟರಾದ ದಿವಂಗತ ಸಿದ್ಧರಾಮಪ್ಪ ಹಂದಿಗನೂರ ಅವರೊಡನೆ ಸ್ನೇಹ ಬೆಳಸಿದ್ದೆ. ಅವರ ಒಡನಾಟದಲ್ಲಿ ನನಗೂ ನಾಟಕದ ಗೀಳು ಹಿಡಿದುಕೊಂಡಿತ್ತು. ಮ್ಯಾಟ್ರಿಕ್ ಮುಗಿಸದೆ ಬೇರೆ ಯೋಚನೆ ಮಾಡಬಾರದೆಂದು ಸಿದ್ಧರಾಮಪ್ಪನವರು ಸೂಚಿಸಿದುದರಿಂದಲೇ ನಾನು ಮ್ಯಾಟ್ರಿಕ್ ಮುಗಿಸಿದೆನೆಂದು ಹೇಳಬಹುದು. ಪೋಲೀಸು ಖಾತೆಗೆ ಸೇರಿ ಸಿಪಾಯಿಯಾದರೂ ಕೂಡ ನನ್ನ ನಾಟಕದ ಹುಚ್ಚು ಮಾಯವಾಗಲಿಲ್ಲ. ಗೊಬ್ಬೂರಿಗೆ ಯಾವ ನಾಟಕ ಕಂಪನಿ ಬಂದರೂ ಅವರೊಡನೆ ನನ್ನ ಸ್ನೇಹ ಬೆಳೆಯಿತೆಂದೇ ತಿಳಿಯಬೇಕು. ಸಿದ್ಧರಾಮಪ್ಪನವರು ಈ ಊರಿಗೆ ಬಂದಾಗಲೆಲ್ಲ ನನ್ನನ್ನು ಭೇಟಿಯಾಗದಿರುತ್ತಿರಲಿಲ್ಲ. ಅವರ ಜೊತೆಗೆ ಒಮ್ಮೆ ನಾಟಕ ನೋಡಲು ಹೋದರಾಯಿತು, ಮರುದಿವಸವೇ ನಾನೂ ಆ ಕಂಪನಿಯರಲ್ಲೊಬ್ಬನ ಹಾಗೆ ಆಗುತ್ತಿದ್ದೆ.

ಅಂಥದೊಂದು ಕನ್ನಡ ನಾಟಕ ಕಂಪನಿಯರು ಗೊಬ್ಬೂರಿಗೆ ಬಂದು 'ಬಡತನದ ಭೂತ' ಅಭಿನಯಿಸತೊಡಗಿದ್ದರು. ಅದರಲ್ಲಿ ನಾಯಕನ ಪಾತ್ರ ವಹಿಸುವ ದುರ್ಗಾದಾಸ್, ನೀಲಾ ಪಾತ್ರವಹಿಸುವ ಚೆನ್ನಬಸಪ್ಪ ಕವಲಿ, ಹಾಸ್ಯಪಾತ್ರಧಾರಿ ಶ್ರೀನಿವಾಸ ಕಲಕೋಟಿ ಇವರೆಲ್ಲ ಒಳ್ಳೆಯ ನಟರೇ. ಅವರಲ್ಲಿ ಸಾಕಷ್ಟು ಯೋಗ್ಯತೆಯಿದ್ದಿತಾದರೂ ಅಷ್ಟೇ ಅನುಭವವಿರಲಿಲ್ಲ. ಅವರ ಅಭಿನಯದಲ್ಲಿ ಕಂಡುಬಂದ ದೋಷಗಳನ್ನೂ ಕುಂದು ಕೊರತೆಗಳನ್ನೂ ನಾನು ವಿಮರ್ಶಕನಂತೆ ಅವರಿಗೆ ತಿಳಿಸುತ್ತಿದ್ದೆ. ಅವರೂ ತಿದ್ದಿಕೊಳುತ್ತಿದ್ದರು. ಹಾಗೆ ನಮ್ಮನಮ್ಮಲ್ಲಿ ಸಲಿಗೆ ಬೆಳೆದು ಸ್ನೇಹವೃದ್ಧಿಯಾಯಿತು. ಅವರು ಆಡುವ ಪ್ರತಿಯೊಂದು ನಾಟಕಕ್ಕೂ ನಾನು ಇರಲೇಬೇಕು. ಒಂದು ದಿನ ನಾನು ಹೋಗದಿದ್ದರೆ ನನ್ನನ್ನು ಕರೆದೊಯ್ಯಲು ಆಳು ಕಳಿಸುತ್ತಿದ್ದರು. ಅವರೊಡನೆ ಅಷ್ಟೊಂದು ಗಾಢ ಮೈತ್ರಿ ಬೆಳೆದಿತ್ತು.

ಅದೇ ವೇಳೆಗೆ ಉರ್ದು ನಾಟಕ ಕಂಪನಿಯೊಂದು ಅಲ್ಲಿಗೆ ಬಂದು

ತಳವೂರಿತು. ಅವರು "ಲೈಲಾಮಜನು," "ಶಿರಿನ್ ಫರ್ಹಾದ." ಮೊದಲಾದ ನಾಟಕಗಳನ್ನು ಆಡುತ್ತಿದ್ದರು. ಸ್ತ್ರೀ ಪಾತ್ರಗಳನ್ನು ಸ್ತ್ರೀಯರೇ ವಹಿಸುತ್ತಿದ್ದರು. ಪ್ರಸಿದ್ಧ ಗಾಯಕರಾದ ಅಕಬರ ಹುಸೇನರು ಮುಜನೂ ಮೊದಲಾದ ನಾಯಕರ ಪಾತ್ರ ವಹಿಸುತ್ತಿದ್ದರು. ನಾಟಕ ಕಂಪನಿಯಲ್ಲಿ ನಟಿಯರಿದ್ದರಾಯಿತು, ಗೊಬ್ಬೂರಿನ ಜನ ಆ ನಾಟಕಗಳಿಗೆ ಮುಗಿಬೀಳುತ್ತಾರೆ. ಆಗಲೂ ಹಾಗೇ ಆಯಿತು. ಕನ್ನಡ ನಾಟಕಗಳಿಗೆ ಜನರೇ ಇಲ್ಲದಂತಾಯಿತು. ಒಂದೇ ಒಂದು ತಿಂಗಳಿನೊಳಗಾಗಿ ಕನ್ನಡ ಕಂಪನಿ ದಿವಾಳಿ ತೆಗೆಯುವ ಸ್ಥಿತಿಗೆ ಬಂದಿತು.

ಉರ್ದು ಕಂಪನಿ ಅಲ್ಲಿಗೆ ಬರುತ್ತಲೂ ಅವರೊಡನೆಯೂ ನನಗೆ ಸ್ನೇಹ ಬೆಳೆದಿತ್ತು. ಕನ್ನಡ ಕಂಪನಿ ಮುಳುಗಿಹೋಗುವುದನ್ನು ತಪ್ಪಿಸಬೇಕೆಂದು ನಿರ್ಧರಿಸಿ ನಾನು ಉರ್ದು ಕಂಪನಿಯ ಒಡೆಯನನ್ನು ಕಂಡು ಕನ್ನಡ ಕಂಪನಿಯವರು ನಾಟಕವಾಡುವ ದಿನ ಉರ್ದು ಕಂಪನಿಯವರು ಆಡದೆ ಮರುದಿನ ಆಡಬೇಕೆಂದೂ, ಹಾಗೆ ಒಂದು ದಿನ ಒಬ್ಬರೂ ಇನ್ನೊಂದು ದಿನ ಇನ್ನೊಬ್ಬರೂ ನಾಟಕ ಪ್ರಯೋಗ ಮಾಡಿದರೆ ಒಳ್ಳೆಯದೆಂದೂ ಹೇಳಿದೆ. ನನ್ನ ಮಾತನ್ನು ಒಪ್ಪಿಕೊಂಡು ಅಂದಿನಿಂದ ಅದರಂತೆ ಹೊಸ ವ್ಯವಸ್ಥೆ ಮಾಡಿದರು ಉರ್ದು ಕಂಪನಿಯವರು. ಅಷ್ಟರಲ್ಲಿ ಕನ್ನಡ ಕಂಪನಿಯವರು ಎರಡು ಹೊಸ ನಾಟಕ ಕಲಿತು ಪ್ರಯೋಗಿಸತೊಡಗಿದರು. ಯಾವ ಸ್ಪರ್ಧೆಯೂ ಇಲ್ಲದಂತೆ ಎರಡೂ ಕಂಪನಿಗಳು ನಾಟಕವಾಡತೊಡಗಿದುವು. ಅವೆರಡೂ ಕಂಪನಿಗಳಿಗೆ ನಾನೇ ಮಾಲೀಕನೇನೋ ಎಂದು ಹೊರಗಿನವರಿಗೆ ಭಾವನೆಯಾಗುವಷ್ಟು ಮಟ್ಟಿಗೆ ಎರಡೂ ಕಂಪನಿಗಳವರೊಡನೆ ನನ್ನ ವಿಶ್ವಾಸ ಬೆಳೆಯಿತು. ನಾನು ನಾಟಕ ಮಂದಿರದಲ್ಲಿ ಉಪಸ್ಥಿತನಿದ್ದಾಗ ಕೊಂಚವೂ ಗದ್ದಲವಾಗುತ್ತಿರಲಿಲ್ಲ. ಪೋಲೀಸರಿರುವ ವಿಷಯ ಗೊತ್ತಾದೊಡನೆಯೆ ಗದ್ದಲ ಮಾಡುವ ಪುಂಡರು ತಣ್ಣಗಿದ್ದು ಬಿಡುತ್ತಿದ್ದರು.

ಅಧಿಕಾರಿಗಳಾಗಲಿ ಪೋಲೀಸರಾಗಲಿ ತಮ್ಮ ಕುಟುಂಬದವರೊಡನೆ ನಾಟಕಕ್ಕೆ ಉಚಿತವಾಗಿ ಬರಲು ಯತ್ನಿಸಿದಾಗ ಕಂಪನಿಗಳವರು ಮೊದಲು ನನ್ನನ್ನು ಕೇಳುತ್ತಿದ್ದರು, ಅವರನ್ನು ಬಿಡಬಹುದೆಂದು ಹೇಳಿದರೆ ಮಾತ್ರ ಬಿಡುತ್ತಿದ್ದರು. ನಾನು ಮಾತ್ರ ಯಾರಿಗೂ ಬೇಡವೆಂದು ಹೇಳಿರಲಿಲ್ಲ.

ಒಂದು ರಾತ್ರೆ ನಾನಿನ್ನೂ ನಾಟಕ ಮಂದಿರಕ್ಕೆ ಬರದಿದ್ದ ವೇಳೆಯಲ್ಲೊಂದು ಘಟನೆ ನಡೆಯಿತು. ಅಬ್ದುಲ್‌ಖಾದರ್ ಎಂಬ "ಜಮಾದಾರ"ನೊಬ್ಬ (ಹವಲ್ದಾರನಿಗಿಂತ ಮೇಲ್ದರ್ಜೆಯ ಫೌಜದಾರರಿಗಿಂತ ಕೆಳದರ್ಜೆಯ ಪೋಲೀಸ್ ಅಧಿಕಾರಿ) ತನ್ನ ಪರಿವಾರದೊಡನೆ ಉರ್ದು ಕಂಪೆನಿಗೆ ಬಂದು ತಮ್ಮನ್ನೆಲ್ಲ ನಾಟಕಕ್ಕೆ ಬಿಡಬೇಕೆಂದು ಹೇಳಿದ. ನಾನು ಬರುವವರೆಗೆ ತಡೆಯಬೇಕೆಂದು ಕಂಪನಿಯ ಒಡೆಯ ಹೇಳಿದ. ಜಮಾದಾರನೆಂದರೆ ನನಗಿಂತಲೂ ಮೇಲಿನ ಅಧಿಕಾರಿ. ತಾನು ನಾಟಕ ನೋಡಲು ಯಃಕಶ್ಚಿತ್ ಸಿಪಾಯಿಯ ಅಪ್ಪಣೆಯೇ! ಎಂದು ಯೋಚಿಸಿ ಅಬ್ದುಲ್‌ಖಾದರ್ ಬಹಳವಾಗಿ ರೇಗಿ, ನನ್ನನ್ನೂ ಕಂಪನಿಯ ಒಡೆಯನನ್ನೂ ಬಯ್ದು ಅಲ್ಲಿಂದ ಹೊರಟುಹೋದ. ನಾನು ನಾಟಕ ಮಂದಿರಕ್ಕೆ ಹೋಗುತ್ತಲೂ ಈ ವಿಷಯವೆಲ್ಲ ಗೊತ್ತಾಯಿತು. ಹೀಗಾಯಿತಲ್ಲಾ ಎಂದು ತುಂಬಾ ನೊಂದುಕೊಂಡು ಜಮಾದಾರನನ್ನೂ ಅವನ ಮನೆಯವರನ್ನೂ ಕರೆದು ತರಲು ಕುದುರೆ ಗಾಡಿಯ ಸಮೇತವಾಗಿ ಒಬ್ಬ ಮನುಷ್ಯನನ್ನು ಕಳಿಸಿಕೊಟ್ಟೆ. ಸಿಟ್ಟುಮಾಡಿಕೊಂಡಿದ್ದ ಜಮಾದಾರ ಬರಲಿಲ್ಲ.

ಮಾರನೆಯ ದಿನ ಅವನು ಫೌಜದಾರರೆದುರಿಗೆ ನನ್ನ ಬಗ್ಗೆ ಬಗೆಬಗೆಯಾಗಿ ದೂರಿಕೊಂಡ. ನಾನು ನಾಟಕ ಕಂಪನಿಯವರಿಂದ ಹಣ ತಿನ್ನುತ್ತಿರುವೆನೆಂದೂ ಒಬ್ಬ ನಟಿಯೊಡನೆ ಸಂಬಂಧವಿಟ್ಟುಕೊಂಡಿರುವೆನೆಂದೂ ಏನೇನೋ ಹೇಳಿಬಿಟ್ಟ. ಆ ಸಂಗತಿ ಇನ್ನೊಬ್ಬರಿಂದ ನನಗೆ ತಿಳಿದುಬರುತ್ತಲೂ ನಾನು ಸೈಕಲು ಹತ್ತಿಕೊಂಡು ಎರಡು ಕಂಪನಿಗಳ ಬಿಡಾರಗಳಿಗೆ ಹೋಗಿ, ಫೌಜದಾರರು ಬಂದು ನನ್ನ ಬಗ್ಗೆ ವಿಚಾರಿಸಿದರೆ ನಾನು ನಾಟಕಗಳಿಗೇ ಬರುವುದಿಲ್ಲವೆಂದೂ ನನ್ನ ಪರಿಚಯವೇ ತಮಗಿಲ್ಲವೆಂದೂ ಹೇಳಲು ಸೂಚಿಸಿ ಬಂದೆ. ಅವರೂ ಹಾಗೆ ಹೇಳಲು ಒಪ್ಪಿಕೊಂಡರು.

ಮರುದಿನದ ನಾಟಕಕ್ಕೆ ಫೌಜದಾರರು ಹೋಗಿ ನಾಟ್ಯಗೃಹದಲ್ಲಿ ನನ್ನನ್ನು ಶೋಧಿಸಿ ನೋಡಿದರು. ಮನೆಯಲ್ಲಿ ಮಲಗಿಕೊಂಡಿದ್ದ ನಾನು ಅವರಿಗೆ ಅಲ್ಲಿ ಸಿಕ್ಕುವ ಬಗೆ ಹೇಗೆ? ಒಡೆಯರನ್ನು ಕರೆಯಿಸಿ ನನ್ನ ಬಗ್ಗೆ ವಿಚಾರಿಸಿದಾಗ ನನ್ನ ಹೆಸರೂ ಸಹ ತಿಳಿಯದೆಂಬ ಉತ್ತರ ಬಂತು. ಫೌಜದಾರರಿಗೆ ಆಶ್ಚರ್ಯ; ಜಮಾದಾರ ಸುಳ್ಳು ಹೇಳಿದನೆಂದು ಅವನ ಬಗ್ಗೆ ಕೋಪ.

ಮೂರನೆಯ ದಿನ ನಾನು ಕಚೇರಿಗೆ ಬಂದೊಡನೆ ಫೌಜದಾರರು ನನ್ನನ್ನು ಕರೆದು, "ಲೈಲಾಮುಜನು ನಾಟಕ ಹೇಗೆ ಆಡುತ್ತಾರೆ?" ಎಂದು ಕೇಳಿದರು.

"ನಾನಿನ್ನೂ ನೋಡಿಲ್ಲ ರಾವ್‌ಸಾಹೇಬ್."

"ನಾನು ನೋಡಬೇಕೆಂದಿದೇನೆ. ಕಂಪನಿಯವರಿಗೆ ಹೇಳಿ ಸೀಟಿನ ವ್ಯವಸ್ಥೆ ಮಾಡು."

"ನಿಮ್ಮ ಸಂಗಡ ನಾನೂ ಬರ್ತೀನಿ ರಾವ್‌ಸಾಹೇಬ್."

"ಯಾಕೆ?"

"ನಿಮ್ಮ ಸಂಗಡ ಬಂದರೆ ನಾನೂ ಪುಕ್ಕಟೆ ನೋಡಲು ಸಿಕ್ಕೀತು."

ನಾನು ಆ ಮಾತು ಆಡುತ್ತಲೂ ಜಮಾದಾರನು ಪೂರ್ತಿಯಾಗಿ ಸುಳ್ಳಾಡಿರಬೇಕೆಂದು ಫೌಜದಾರರಿಗೆನ್ನಿಸಿರಲು ಸಾಕು. ನಾಟಕ ಕಂಪನಿಗೆ ಹೋಗಿ ಆ ದಿನ ಫೌಜದಾರರು ಬರುವುದನ್ನು ತಿಳಿಸಿ, ಅವರೊಡನೆ ನಾನು ಬಂದಾಗ ನನ್ನನ್ನು ಯಾರೂ ಗುರುತು ಹಿಡಿಯಬಾರದು, ನನಗೆ ಸಲಾಮು ಹೊಡೆಯಬಾರದು, ನನ್ನನ್ನು ಮಾತನಾಡಿಸಬಾರದು ಎಂದೆಲ್ಲ ಹೇಳಿ ಬಂದೆ. ರಾತ್ರೆ ಫೌಜದಾರರು ನಾಟಕಕ್ಕೆ ಬಂದುದೂ ಆಯಿತು. ಫೌಜದಾರರನ್ನು ಸಂತುಷ್ಟಗೊಳಿಸಲೆಂದು ಆ ದಿನ ನಟನಟಿಯರೆಲ್ಲರೂ ತಮ್ಮ ತಮ್ಮ ಪಾತ್ರಗಳನ್ನು ಪರಿಣಾಮಕಾರಕವಾಗಿ ಅಭಿನಯಿಸಿದರು. ಹಾಸ್ಯನಟಿಯಂತೂ ತನ್ನ ಅಭಿನಯ ಕೌಶಲ್ಯದಿಂದ ಫೌಜದಾರರನ್ನು ಹೊಟ್ಟೆನೋಯುವಂತೆ ನಗಿಸಿದಳು. ಮಜನೂ ಪಾತ್ರದಲ್ಲಿ ಎತ್ತಿದ ಕೈ ಅಕಬರ ಹುಸೇನ್. ಲೈಲಾ ಪಾತ್ರಧಾರಿಯದೂ ಅಷ್ಟೇ ಕೌಶಲ. ಎಲ್ಲರ ಕಣ್ಣುಗಳಿಂದಲೂ ನೀರು ಸುರಿಯಿತು. ಎರಡನೆಯ ಅಂಕ ಮುಗಿದ ಬಳಿಕ ಕಂಪನಿಯ ಒಡೆಯರು ಬಂದು ಫೌಜದಾರರನ್ನು ಒಳಗಡೆ ಕರೆದೊಯ್ದು ಚಹಾ ಕೊಟ್ಟು ಸತ್ಕರಿಸಿದರು. ಫೌಜದಾರರು ಅವರ ನಾಟಕವನ್ನು ಪ್ರಶಂಸಿಸಿ, ನಟನಟಿಯರಿಗೆಲ್ಲ ಪದಕಗಳನ್ನು ಕೊಟ್ಟು ಬಹು ಮಾನಿಸುವುದಾಗಿ ಹೇಳಿದರಲ್ಲದೆ ಮತ್ತೊಂದು ದಿನ ಬಂದು ಎಲ್ಲರಿಗೂ ಪದಕಗಳನ್ನಿತ್ತರು. ನಮ್ಮ ಫೌಜದಾರರು ನಾಟಕ ನೋಡುತ್ತಿದ್ದುದು ನನ್ನ ಅನುಭವದಲ್ಲಂತೂ ಅದೇ ಮೊದಲ ಬಾರಿ. ನಾನು ಕಂಪನಿಯವರಿಂದ ದುಡ್ಡು ಕೇಳುತ್ತಿದ್ದೆನೆಂಬ ಜಮಾದಾರನ ಮಾತನ್ನು ಸೂಕ್ಷ್ಮವಾಗಿ ಪರೀಕ್ಷಿಸಲೆಂದೇ ಅವರು ಬಂದಿದ್ದುದು. ಕಂಪನಿಯ ಒಡೆಯರನ್ನು ಆ ವಿಚಾರವಾಗಿ ಮತ್ತೊಮ್ಮೆ

ಕೇಳಿದರು. ಆಗಲೂ ಅವರು ಅಂಥದೇನೂ ಇಲ್ಲವೆನ್ನುತ್ತಲೂ ಫೌಜದಾರರ ಸಂದೇಹ ನಿವಾರಣೆಯಾಯಿತು; ಯಾವ ಪೋಲೀಸನಿಗೂ ಒಂದು ಕಾಸನ್ನೂ ಕೊಡಬಾರದೆಂದು ಹೇಳಿ ಬಂದರು.

ಒಂದು ದಿನ ಆ ಜಮಾದಾರನನ್ನು ನನ್ನ ಸಮಕ್ಷಮದಲ್ಲಿಯೆ ಕರೆದು ಚೆನ್ನಾಗಿ ಬಯ್ದು, ಇನ್ನೊಂದು ಸಲ ಹೀಗೆ ಯಾರ ಬಗೆಗಾದರೂ ಸುಳ್ಳು ಹೇಳಿ ತಮ್ಮ ಮನಸ್ಸು ಕೆಡಿಸಲು ಯತ್ನಿಸಿದರೆ ಅವನ ನೌಕರಿಗೇ ಸಂಚಕಾರ ಬರುವು ದೆಂದು ಎಚ್ಚರಿಕೆ ಕೊಟ್ಟರು. ನಾಟಕ ನೋಡುವ ಇಚ್ಛೆಯಿದ್ದರೆ ಅವನು ಹಣ ಕೊಟ್ಟು ಹೋಗಬಹುದೆಂದೂ ಪುಕ್ಕಟೆಯಾಗಿ ಹೋದದ್ದು ತಮಗೆ ಗೊತ್ತಾದರೆ ಮೇಲಧಿಕಾರಿಗಳಿಗೆ ವರದಿಮಾಡುವುದಾಗಿಯೂ ಬೆದರಿಸಿದರು. ಅಲ್ಲಿಗೆ ಅಬ್ದುಲ್‌ಖಾದರ್ ತಣ್ಣಗಾದ. ಅವನ ಅವಸ್ಥೆಯನ್ನು ಕಂಡು ನನಗೂ ವ್ಯಸನ ವಾಯಿತು – ಮಕ್ಕಳು ಮರಿಗಳೊಡನೆ ನಾಟಕಗೃಹಕ್ಕೆ ಬಂದು ಹಾಗೇ ತಿರುಗಿ ಹೋಗಿದ್ದನಲ್ಲಾ! ಎಂದು. ಫೌಜದಾರರಿಂದ ಬಯ್ಯಿಸಿಕೊಂಡದ್ದು ಬೇರೆಯೆ.

ಅವನಿಗೆ ಮೂವರು ಮಕ್ಕಳಿದ್ದರು. ಪ್ರಾಯಕ್ಕೆ ಬಂದ ಹುಡುಗಿಯ ರಿಬ್ಬರು. ಶಾಲೆಗೆ ಹೋಗುತ್ತಿದ್ದ ಹುಡುಗನೊಬ್ಬ. ಅವನ ಮನೆಯವರಿಗಾಗಿ ಒಂದು ಪಾಸು ತಂದು ನಾನೇ ಕೊಟ್ಟೆ. ಅವನು ಅದನ್ನು ಸ್ವೀಕರಿಸಲಿಲ್ಲ. ನಾನು ಅವನನ್ನು ಅಣಕಿಸುತ್ತಿರಬಹುದೆಂದು ಭಾವನೆಯಾಗಿ ಅವನಿಗಿನ್ನೂ ಸಿಟ್ಟು ಬಂತು. ನಾನು ಅವನ ಮನೆಗೆ ಹೋಗಿ ಅವನ ಹೆಂಡತಿಯ ಕೈಯಲ್ಲಿ ಪಾಸು ಕೊಟ್ಟು ಅದೇ ದಿನ ನಾಟಕಕ್ಕೆ ಬರಬೇಕೆಂದೂ, ನಾನು ಅವರಿಗಾಗಿ ಸ್ಥಳ ಕಾದಿಡುವುದಾಗಿಯೂ ಹೇಳಿದೆ. ಮನೆಗೆ ಹೋದಾಗ ಆ ವಿಷಯವನ್ನೆಲ್ಲ ತಿಳಿದು ಕೊಂಡು, ತಾನು ಮಾಡಿದ ತಪ್ಪಿಗಾಗಿ ಅವನಿಗೂ ಪಶ್ಚಾತ್ತಾಪವಾಗಿರಬೇಕು. ನಾಟಕಕ್ಕೆ ಹೊರಡುವುದೆಂದು ಅವರೆಲ್ಲ ಸಿದ್ಧತೆ ನಡಸಿರುವಷ್ಟರಲ್ಲಿಯೆ ಒಂದು ಜರೂರು ಕೆಲಸ ನಿಮಿತ್ತ ಅವನು ತಕ್ಷಣವೇ ಬೇರೊಂದು ಊರಿಗೆ ಹೊರಡ ಬೇಕೆಂದು ಆಜ್ಞೆಯಾಯಿತು. ಅಬ್ದುಲ್‌ಖಾದರ್ ನನ್ನ ಹತ್ತಿರ ಬಂದು, ತನ್ನ ತಪ್ಪನ್ನು ಮನಸ್ಸಿನಲ್ಲಿಟ್ಟುಕೊಳ್ಳಬಾರದಾಗಿ ಹೇಳಿ ತಮ್ಮ ಮನೆಯವರನ್ನೆಲ್ಲ ನಾಟಕಕ್ಕೆ ಬಿಡಿಸುವಂತೆ ತಿಳಿಸಿ ಹೊರಟುಹೋದ.

ನಾನು, ರಂಗಮಂಚದ ಮೇಲೆಯೆ ಒಂದು ಪಕ್ಕದಲ್ಲಿ ಅವರಿಗಾಗಿ ನಾಲ್ಕು ಕುರ್ಚಿ ಹಾಕಿಸಿದೆ. ಅವರ ಮನೆಯಲ್ಲಿ ಘೋಷಾ ಪದ್ಧತಿಯಿದ್ದುದರಿಂದ ಆ

ಹೆಣ್ಣು ಮಕ್ಕಳು ನಾಟಕಗೃಹಕ್ಕೆ ಬರುವಾಗ ಬುರ್ಖಾ ಹಾಕಿಕೊಂಡು ಬಂದಿದ್ದವರು ರಂಗದ ಮೇಲೆ ಬಂದು ಆಸನಗಳಲ್ಲಿ ಕುಳಿತುಕೊಂಡ ಬಳಿಕ ಬುರ್ಖಾ ತೆಗೆದಿರಿಸಿದರು. ನಾನು ಅವರಿಗೆದುರಾಗಿ ರಂಗದ ಇನ್ನೊಂದು ಪಕ್ಕದಲ್ಲಿ ವಿರಾಮ ಕುರ್ಚಿಯ ಮೇಲೊರಗಿಕೊಂಡಿದ್ದೆ. ಜಮಾದಾರರ ಹುಡುಗಿಯರು ಬುರ್ಖಾ ತೆಗೆದಿರಿಸಿದೊಡನೆಯೆ ಅವರ ಸೌಂದರ್ಯ ನನ್ನ ಕಣ್ಣು ಕುಕ್ಕಿತು. ಒಬ್ಬ ಬಡ ಜಮಾದಾರನ ಮಕ್ಕಳು ಇಷ್ಟು ಸುಂದರಿಯರೇ 'ಎಂದು ಆಶ್ಚರ್ಯವಾಯಿತು. ಇಬ್ಬರೂ ಇನ್ನೂ ಅವಿವಾಹಿತರು. ಅವರಿಬ್ಬರಲ್ಲಿ ಹಿರಿಯ ಹುಡುಗಿಯಂತೂ ಪರಮ ಸುಂದರಿ. ನಾನು ಅವಳನ್ನೇ ನೋಡುತ್ತಿದ್ದೆ. ಕಂಪನಿಯ ನಟರೆಲ್ಲರ ಕಣ್ಣು ಅವಳ ಮೇಲೆಯೆ. ಆದರೆ, ನಾನು ಕರೆದು ತಂದವರಾದುದರಿಂದ ನನಗೆ ಗೊತ್ತಾಗದಂತೆ ಕದ್ದು ನೋಡುತ್ತಿದ್ದರು ಆ ಕಿಲಾಡಿಗಳು. ಆ ಇಬ್ಬರು ಹುಡುಗಿಯರೂ ಆಗಾಗ ನನ್ನ ಕಡೆ ದೃಷ್ಟಿ ಹೊರಳಿಸುತ್ತಿದ್ದರು. ನಾನೂ ಕಳ್ಳತನದಿಂದ ಅವರನ್ನೇ ದಿಟ್ಟಿಸುತ್ತಿದ್ದೆ.

ನಾಟಕಕ್ಕಾರಂಭವಾಯಿತು. ಅದೇ 'ಲೈಲಾ ಮಜನು' ನಾಟಕ. ಅದರಲ್ಲಿಯ ಪ್ರತಿಯೊಂದು ಶಬ್ದವೂ ನನಗೆ ಕಂಠಪಾಠವಾಗಿ ಹೋಗಿತ್ತು. ಆದರೂ, ನಟನಟಿಯರ ಅಭಿನಯ ಕೌಶಲ್ಯದಿಂದಾಗಿ ಮತ್ತೆ ಮತ್ತೆ ಅದೇ ನಾಟಕವನ್ನೆ ನೋಡಿದರೂ ನನಗೇನೂ ಬೇಸರವಾಗುತ್ತಿರಲಿಲ್ಲ.

ಆದರೆ, ಆ ದಿನ ಮಾತ್ರ ನಾಟಕದಲ್ಲಿ ನನ್ನ ಮನಸ್ಸು ಕೇಂದ್ರಿತವಾಗಲಿಲ್ಲ. ಜಮಾದಾರರ ಹಿರಿಗುವರಿ ರೋಶನ್ ಮೇಲೆಯೆ ನನ್ನ ಕಣ್ಣು. ಅವಳೂ ನನ್ನನ್ನೆ ನೋಡುತ್ತಿದ್ದಳು. ಒಮ್ಮೆ ಇಬ್ಬರ ದೃಷ್ಟಿಗಳೂ ಒಂದುಗೂಡಿದುವು. ಅವಳು ಥಟ್ಟನೆ ಲಜ್ಜಿತಳಾಗಿ ತನ್ನ ನಾಲಗೆ ಕಚ್ಚಿಕೊಂಡಳು. ಮುಖದಲ್ಲೆಲ್ಲಾ ಮೋಹಕವಾದ ನಗು ಪಸರಿಸಿತು. ನಾನೂ ಮುಗುಳ್ನಗು ಬೀರಿದೆ.

ಒಂದು ತಾಸು ಕಳೆದ ಬಳಿಕ ಕಂಪನಿಯೊಡೆಯರು ನನಗಾಗಿ ಚಹಾ ಕಳಿಸಿದರು. ನಾನು ಇನ್ನೂ ನಾಲ್ಕು ಕಪ್ ಚಹಾ ತರಿಸಿ ಜಮಾದಾರರ ಮನೆಯವರಿಗೂ ಕಳಿಸಿದೆ. ಅವರೂ ಕುಡಿದರು. ಆ ಹುಡುಗ ಕರೀಮ ಎದ್ದು ನನ್ನ ಬಳಿ ಬಂದ. ಅವನಿಗಾಗಿ ಇನ್ನೊಂದು ಕುರ್ಚಿ ತರಿಸಿಕೊಟ್ಟೆ. ಅವನು ನನ್ನ ಹತ್ತಿರವೇ ಕುಳಿತುಕೊಂಡ. ಅವನ ಅಕ್ಕಂದಿರ ಹೆಸರುಗಳು ನನಗೆ ತಿಳಿದುದು ಅವನಿಂದಲೇ. ದೊಡ್ಡವಳು ರೋಶನ್. ಚಿಕ್ಕವಳು ಅಮೀನಾ.

ರೋಶನ್‌ಗೆ ಸುಮಾರು ೧೭-೧೮ ರ ಪ್ರಾಯ. ಅಮಿನಾಗೆ ೧೫. ಕರೀಮನಿಗೆ ಸುಮಾರು ೧೨ ವರ್ಷ; ಇಂಗ್ಲಿಷ್ ಎರಡನೆಯ ತರಗತಿಯಲ್ಲಿ ಓದುತ್ತಿದ್ದ.

ಒಂದೆರಡು ನಿಮಿಷ ಕಳೆದ ಬಳಿಕ ತನ್ನ ಅಕ್ಕ ರೋಶನ್ ಮೂತ್ರಾಲಯಕ್ಕೆ ಹೋಗಬೇಕಾಗಿದೆಯೆಂದು ಹೇಳಿ ಹಾದಿ ತೋರಿಸಲು ಕೇಳಿದ ಕರೀಮ. ನಾನೇ ಎದ್ದು ಅವಳನ್ನು ಕಳಿಸಲು ತಿಳಿಸಿದೆ. ರೋಶನಳೊಡನೆ ಅವನೂ ಬಂದ. ನಟಿಯರಿಗೆಂದು ಪ್ರತ್ಯೇಕವಾಗಿದ್ದ ಮೂತ್ರಾಲಯಕ್ಕೆ ಅವಳನ್ನು ಕರೆದುಕೊಂಡು ಹೊರಟೆವು. ಅಷ್ಟರಲ್ಲಿ ನಾಟಕ ಗೃಹದಲ್ಲಿಯ ಜನರು ಚಪ್ಪಾಳೆ ಹಾಕುವುದು ಕೇಳಿಸಿ ಕರೀಮನಿಗೆ ನಾಟಕದ ಕಡೆ ಲಕ್ಷ್ಯ ಹೋಗಿ ಅವನು ತನ್ನ ಸ್ಥಳಕ್ಕೋಡಿದ. ರೋಶನ್ ಮತ್ತು ನಾನು ಇಬ್ಬರೇ ಉಳಿದೆವು. ಅವಳನ್ನು ಮಾತನಾಡಿಸಬೇಕೆಂದು ನನ್ನ ಚಪಲ. 'ನಾಟಕ ಹೇಗಿದೆ?' ಎಂದು ಪ್ರಶ್ನಿಸಿದೆ. ಅವಳಿಗೆ ಕನ್ನಡ ತಿಳಿಯುತ್ತಿರಲಿಕ್ಕಿಲ್ಲವೆಂದು ಭಾವಿಸಿ ಉರ್ದುವಿನಲ್ಲಿಯೆ ಕೇಳಿದ್ದೆ. 'ಚೆನ್ನಾಗಿದೆ,' ಎಂದು ಅವಳು ಸಂಕೋಚದಿಂದ ಉತ್ತರವಿತ್ತು ಮೂತ್ರಾಲಯಕ್ಕೆ ಹೋಗಿ ತಿರುಗಿ ಬಂದಳು. ಅಷ್ಟರಲ್ಲಿ ಹಾಸ್ಯನಟಿ ಮಲಿಕಾ ಅಲ್ಲಿಗೆ ಬಂದವಳು ನಮ್ಮಿಬ್ಬರನ್ನೂ ನೋಡಿ ನಗುತ್ತಾ, "ಇವಳು ನಿಮ್ಮ ಲೈಲಾ ಏನು?" ಎಂದು ನನ್ನನ್ನು ಕೇಳಿದಳು.

ರೋಶನ್ ನಗತೊಡಗಿದಳು. ನಾನೂ ನಕ್ಕು, "ಇವಳ್ಯಾಕೆ ನನ್ನ ಲೈಲಾ ಆದಾಳು?" ಎಂದು ಹೇಳಿದೆ.

"ಹಾಗಾದರೆ ಮಾಫ್ ಮಾಡಬೇಕು," ಎಂದು ನುಡಿದು ಮೂತ್ರಾಲಯದ ಕಡೆ ಸಾಗಿದಳು ಮಲಿಕಾ.

ರೋಶನಳೊಡನೆ ಇನ್ನೂ ಕೊಂಚ ಹೊತ್ತು ಮಾತನಾಡಬೇಕೆಂದು ನನ್ನ ಆಸೆ.

"ಲೈಲಾ ಚೆನ್ನಾಗಿರುವಳೇ? ಮಜನೂ ಚೆನ್ನಾಗಿರುವನೇ?" ಎಂದು ಕೇಳಿದೆ.

"ಲೈಲಾ ಅಷ್ಟು ಹಿಡಿಸಲಿಲ್ಲ ನನಗೆ. ಮಜನೂ ಪಾತ್ರ ಮಾತ್ರ ಬಹಳ ಚೆನ್ನಾಗಿದೆ," ಎಂದಳು ರೋಶನ್.

"ನಿನ್ನ ಮಜನೂ ಜತೆಗೆ ಪ್ರೇಮಗೀತೆ ಹಾಡುವ ವಯಸ್ಸಲ್ಲವೇ ನಿನ್ನದೂ? ನಾಟಕದ ಮಜನುವಿನಲ್ಲೇ ನೀನು ನಿನ್ನ ಮಜನುವನ್ನೂ ಕಾಣು

ತ್ತಿರಬಹುದು," ಎಂದು ಹೇಳಿದಾಗ ನಾಚಿಕೆಯಿಂದ ಕೆಂಪಾಯಿತು ಅವಳ ಮೊಗ. ಅವಳ ಕೈ ಹಿಡಿಯಬೇಕು, ಅವಳನ್ನು ಬರಸೆಳೆದು ತಬ್ಬಿಕೊಂಡು ಚುಂಬಿಸಬೇಕೆಂದು ನಾನು ಬಯಸುತ್ತಿದ್ದೆ. ಆದರೆ, ಅಂದಿನ ಅಲ್ಪ ಪರಿಚಯದಲ್ಲೇ ಅಷ್ಟು ದೂರ ಹೋಗುವುದು ತರವಲ್ಲವೆಂದು ಬಗೆದು,

"ನಾಡಿದ್ದು 'ಶಿರಿನ್‌ಫರ್‌ಹಾದ್' ಇದೆ. ಬರುತ್ತೀಯಾ ?" ಎಂದು ಕೇಳಿದೆ.

"ಅಪ್ಪ ಅವ್ವ ಬಂದರೆ ಬರುತ್ತೇನೆ," ಎಂದು ಉತ್ತರವಿತ್ತು ತನ್ನ ಸ್ಥಳಕ್ಕೆ ನಡೆದಳು ರೋಶನ್. ಇವಳೊಬ್ಬಳೇ ಮೂತ್ರಾಲಯಕ್ಕೆ ಹೋಗಿದ್ದುದು ಉಳಿದವರ ಲಕ್ಷ್ಯದಲ್ಲಿ ಬಂದಿರಲಿಲ್ಲ. ಅವರೆಲ್ಲರೂ ನಾಟಕದಲ್ಲಿ ತಲ್ಲೀನರಾಗಿದ್ದರು. ರೋಶನಳೂ ನಾಟಕವನ್ನು ಆಸಕ್ತಿಯಿಂದ ನೋಡತೊಡಗಿದಳು. ನನ್ನ ಕಣ್ಣು-ಮನಸುಗಳೆರಡೂ ಅವಳ ಮೇಲೆಯೆ.

ನನ್ನದು ಕಾಮುಕರ ರೀತಿಯೆಂಬುದು ನನಗೆ ಗೊತ್ತಿದ್ದಿತು. ನನ್ನ ಬಯಕೆಯನ್ನು ಪ್ರೇಮವೆಂಬ ಹೆಸರಿನಿಂದ ಕರೆಯುವ ಧಾರ್ಷ್ಟ್ಯವನ್ನು ನಾನು ಮಾಡಲಾರೆ. ಅವಳ ಬಗ್ಗೆ ನನ್ನಲ್ಲಿ ಪ್ರೇಮ ಉತ್ಪನ್ನವಾಗಲು ಅಂಥ ಘಟನೆ ಯಾವುದೂ ನಡೆದಿರಲಿಲ್ಲ. ಅವಳ ಸೌಂದರ್ಯವೂ ಅವಳ ಮಾಟವಾದ ಶರೀರವೂ ನನ್ನ ಇಂದ್ರಿಯಗಳನ್ನು ಕೆರಳಿಸಿದ್ದುವು. ಅವಳ ಮನಸ್ಸಿನಲ್ಲಿ ಯಾವ ವಿಚಾರವಿದ್ದಿತೋ ನನಗೆ ಗೊತ್ತಿರಲಿಲ್ಲ. ಇಂಥ ಬಯಕೆಯನ್ನು 'ಪ್ರಥಮ ದೃಷ್ಟಿಯ ಪ್ರೇಮ' ವೆಂದು ಕೆಲವರು ಕರೆಯುವುದುಂಟು. ಶಕುಂತಲೆಯನ್ನು ಕಂಡಾಗ ದುಷ್ಯಂತನಿಗೂ ಅಂಥ ಪ್ರೇಮ ಉತ್ಪನ್ನವಾಯಿತಂತೆ. ಅದೆಲ್ಲ ಬರೀ ಜೊಗಳೆಯೆಂದೇ ನನ್ನ ಅಭಿಪ್ರಾಯ. ಶಕುಂತಲೆಯೊಡನೆ ದುಷ್ಯಂತನಿಗೆ ಪೂರ್ವ ಪರಿಚಯವಿರಲಿಲ್ಲ. ಅವಳ ಗುಣಗಳನ್ನೂ ಅವನು ಅರಿತುಕೊಂಡಿರಲಿಲ್ಲ. ಅವಳ ದಿವ್ಯಸೌಂದರ್ಯವೇ ಅವನ ಮನಸ್ಸನ್ನಾಕರ್ಷಿಸಿದ್ದುದು. ಅವಳನ್ನು ಕಂಡೊಡನೆಯೆ ಅವನಲ್ಲಿ ಉತ್ಪನ್ನವಾದುದು ಪ್ರೇಮವಲ್ಲ; ಕಾಮ. ಎಂತಲೇ, ಕಣ್ವಋಷಿಗಳು ಆಶ್ರಮಕ್ಕೆ ಹಿಂದಿರುಗುವವರೆಗೂ ಕಾಯದೆ ಶಕುಂತಲೆಯನ್ನೊಲಿಸಿಕೊಂಡು ಅವಳ ಸಮಾಗಮ ಸುಖ ಪಡೆದ ದುಷ್ಯಂತ. ರೋಶನಳ ಬಗೆಗೆ ನನ್ನಲ್ಲಿ ಉದಿಸಿದ್ದ ಬಯಕೆಯೂ ಅಂಥದೇ. ಅದು ಒಳ್ಳೆಯದೋ

ಕೆಟ್ಟುದೋ ನನಗೆ ತಿಳಿಯದು. ಅಂತೂ ಅವಳ ದರ್ಶನಮಾತ್ರದಿಂದಲೇ ನನ್ನಲ್ಲಿ ಸಹಜವಾಗಿ ಆ ಭಾವನೆಯುತ್ಪನ್ನವಾದುದು ಮಾತ್ರ ನಿಜ. ಅದು ತುಚ್ಛ ಕಾಮವೆಂದು ಕೆಲವರು ನನ್ನನ್ನು ದೂಷಿಸಬಹುದು. ಅದಕ್ಕೆ ನನ್ನ ಆಕ್ಷೇಪಣೆ ಯೇನೂ ಇಲ್ಲ. ಅವರು ದೂಷಿಸುವುದರಿಂದ ನನಗಾಗಬೇಕಾದುದೇನೂ ಇಲ್ಲ. ನನಗೆ ಗೊತ್ತು : ದುಷ್ಯಂತನಂಥ ರಾಜರು ಏನನ್ನು ಮಾಡಿದರೂ ನಡೆಯುತ್ತದೆ ಈ ಜಗತ್ತಿನಲ್ಲಿ. ನನ್ನಂಥ ಸಾಮಾನ್ಯ ಜನರು ಅಂಥ ಕೃತಿಯನ್ನೇ ಎಸಗಿದಾಗ ಸಮಾಜ ನಮ್ಮನ್ನು ದೂಷಿಸುತ್ತದೆ. ಗೊತ್ತು, ನನಗೆ ಚೆನ್ನಾಗಿ ಗೊತ್ತು.

ಅಲ್ಲದೆ, ನಾನು ರೋಶನಳನ್ನು ಬಯಸುತ್ತಿದ್ದ ಬಗೆಯೂ ವಿವೇಕಸಮ್ಮತ ವಾದುದಾಗಿರಲಿಲ್ಲವೆಂಬುದನ್ನು ನಾನೂ ಬಲ್ಲೆ. ನನಗೆ ಬೇಕಾಗಿದ್ದುದು ರೋಶನ್ ಅಲ್ಲ; ಅವಳ ದೇಹ. ಅವಳನ್ನು ಮದುವೆಯಾಗಲು ನಾನು ಸಿದ್ಧ ನಾಗುವಂತಿರಲಿಲ್ಲ. ಅವಳೂ ಸಿದ್ಧಳಾಗುವಂತಿರಲಿಲ್ಲ. ಅವಳ 'ಜಾತಿ' ಬೇರೆ, ನನ್ನ 'ಜಾತಿ' ಬೇರೆ. ಪ್ರೇಮಕ್ಕೆ ಜಾತಿಯ ಬಂಧನವೇನೂ ಇಲ್ಲವೆಂದು ಹೇಳುವವರೂ ಇದ್ದಾರೆ. ಆ ಮಾತು ಎಲ್ಲಾ ಸಂದರ್ಭಗಳಲ್ಲೂ ಸತ್ಯವಲ್ಲ.

ನಾಟಕದ ಮೇಲೆ ನನಗೆ ಲಕ್ಷ್ಯವಿರಲೇ ಇಲ್ಲ. ರೋಶನಳನ್ನು ದಿಟ್ಟಿಸುತ್ತಿದ್ದ ಹಾಗೆ ನನ್ನ ತಲೆ ಬಿಸಿಯಾಗತೊಡಗಿತ್ತು. ನೋಡುತ್ತ ಕುಳಿತ ಮಾತ್ರಕ್ಕೆ ಅವಳು ಲಭಿಸುವುದು ಸಾಧ್ಯವೆ?

ಅಲ್ಲಿಂದೆದ್ದು ಮನೆಗೆ ಹೋಗುವುದೇ ಒಳ್ಳೆಯದೆಂದು ಯೋಚಿಸಿ, ಕರೀಮ ನನ್ನು ಕರೆದು ನಾನು ಮನೆಗೆ ಹೋಗುವುದಾಗಿ ಹೇಳಿ, ನಾಟಕ ಮುಗಿದ ಬಳಿಕ ಅವರು ಹೋಗಬಹುದೆಂದು ತಿಳಿಸಿ ಅಲ್ಲಿಂದ ಹೊರಟೆ. ರೋಶನಳ ಮುಖದ ಮೇಲೆ ಅಸಮಾಧಾನದ ಮೋಡ ಕವಿದ ಹಾಗೆ ಕಾಣಿಸಿತು. ನಾಟಕ ಮುಗಿದ ಬಳಿಕ ಅವರನ್ನು ಟಾಂಗಾಗಳಲ್ಲಿ ಕೂಡಿಸಿ ಕಳಿಸಬೇಕೆಂದು ಕಂಪನಿಯವರಿಗೆ ತಿಳಿಸಿ, ಮನೆಗೆ ಬಂದು ಹಾಸಿಗೆ ಬಿಚ್ಚಿ ಬಿದ್ದುಕೊಂಡೆ. ನಿದ್ದೆ ಬರಲೊಲ್ಲದು. ದೀಪ ಹಾಗೇ ಉರಿಯುತ್ತಿತ್ತು. ನನ್ನ ಕಣ್ಣುಗಳು ಉರಿಯುತ್ತಿದ್ದುವು. ಬೆಳಗಿನ ಜಾವ ಮೂರು ಗಂಟೆಗೋ ನಾಲ್ಕು ಗಂಟೆಗೋ ನಿದ್ದೆ ಹತ್ತಿರಬಹುದು. ಒಂಭತ್ತು ಗಂಟೆಯ ವೇಳೆಗೆ ಕರೀಮನೇ ಬಂದು, ಬಾಗಿಲು ತಟ್ಟಿ ನನ್ನನ್ನು ಎಬ್ಬಿಸಿದ. ನಾನು ಲಗುಬಗೆಯಿಂದ ಮೊಗ ತೊಳೆದುಕೊಂಡು ಸೈಕಲ್ ಏರಿ

ಕಚೇರಿಗೆ ಬಂದೆ. ಅರ್ಧ ಗಂಟೆ ತಡವಾಗಿತ್ತು. ಅದಕ್ಕಾಗಿ ಯಾರೂ ನನ್ನನ್ನು ಆಕ್ಷೇಪಿಸುತ್ತಿರಲಿಲ್ಲವಾದರೂ ನನಗೇ ಒಳಗೊಳಗೇ ಅಳುಕು. ಹಾಗೇ ನನ್ನ ಕೆಲಸದಲ್ಲಿ ಮನಸು ತೊಡಗಿಸಿದೆ. ಆದರೆ ನಿತ್ಯದಂತೆ ಕೆಲಸ ಸುಸೂತ್ರವಾಗಿ ನಡೆಯದಾಯಿತು. ಕಣ್ಣುಗಳೆರಡೂ ಭಗಭಗನೆ ಉರಿಯುತ್ತಿದ್ದುವು.

೧೮

ರೋಶನ್ ಮತ್ತು ಅಮೀನಾ

"ಏನಾಗಿದೆ ನಿಮಗೆ ಶಿವಣ್ಣಾ ? ಮೈಯಲ್ಲಿ ನೆಟ್ಟಗಿಲ್ಲವೇನು ?" ನಮ್ಮ ಕಾರಕೂನರು ಕೇಳಿದರು.

"ಏನೋ ಬಹಳ ಆಯಾಸ."

"ಹಾಗಾದರೆ ನೆಟ್ಟಗೆ ದವಾಖಾನೆಗೆ ಹೋಗಿ ಔಷಧ ತಗೊಂಡು ಮನೆಗೆ ಹೋಗಿ ವಿಶ್ರಾಂತಿ ತಗೊಳ್ಳಿರಿ. ನಿರ್ಲಕ್ಷ್ಯ ಮಾಡುವದು ಚಲೋದಲ್ಲ."

ಮನಸ್ಸಿನಲ್ಲಿಯೇ ಅವರನ್ನು ವಂದಿಸುತ್ತಾ ನಾನು ಕಚೇರಿಯನ್ನು ತ್ಯಜಿಸಿ ಹೊರಟು ಭೋಜನಾಲಯಕ್ಕೆ ಬಂದು ಸ್ನಾನ ಮಾಡಿ ಊಟ ಮುಗಿಸಿಕೊಂಡು ನೇರವಾಗಿ ಮನೆಗೆ ಬಂದೆ.

ಅಬ್ದುಲ್‌ಖಾದರ್ ಜಮಾದಾರರ ಮನೆ, ನನ್ನ ಕೋಣೆಯ ಹಿಂದಿನ ಸಾಲಿನಲ್ಲಿತ್ತು. ಎರಡೂ ಮನೆಗಳ ಹಿತ್ತಿಲು ಒಂದೇ ಕಡೆಯಲ್ಲಿದ್ದುವು. ನನ ಕೋಣೆ ಸ್ವಲ್ಪ ಎತ್ತರದ ಸ್ಥಳದಲ್ಲಿತ್ತು. ಜಮಾದಾರರ ಮನೆಯ ಹೊರಬಾಗಿಲಲ್ಲಿ ನಿಂತವರನ್ನು ನನ್ನ ಕೋಣೆಯಲ್ಲಿ ನಿಂತು ನೋಡಲು ಸಾಧ್ಯವಿತ್ತು. ನಾನು ಮನೆಗೆ ಬಂದವನೇ ಹಿತ್ತಿಲ ಬಾಗಿಲು ತೆಗೆದೆ. ನಾನು ಅಲ್ಲಿಗೆ ಬಂದು ಒಂದೂವರೆ ವರ್ಷವಾಗಿದ್ದರೂ ಅದುವರೆಗೂ ಅವರಿವರ ಮನೆಗಳತ್ತ ಲಕ್ಷ್ಯ ಹಾಕಿರಲಿಲ್ಲ.

ಆದರೆ ಇಂದು ಮಾತ್ರ ನನ್ನ ದೃಷ್ಟಿ ಜಮಾದಾರರ ಮನೆಯಲ್ಲಿ ಪ್ರವೇಶಿಸಿ ರೋಶನಳನ್ನು ಹುಡುಕತೊಡಗಿತು. ಹಿತ್ತಲಿನಲ್ಲಿದ್ದ ಬಚ್ಚಲಿನಲ್ಲಿ ಬಟ್ಟೆ ತೊಳೆಯುತ್ತಿದ್ದ ರೋಶನ್ ನಾನು ಬಾಗಿಲು ತೆಗೆದ ಸದ್ದು ಕೇಳಿ ಎದ್ದು ನಿಂತುಕೊಂಡಳು. ನಾನು ಅವಳನ್ನೇ ದಿಟ್ಟಿಸಿ ನೋಡುತ್ತಿದ್ದುದು ಗೊತ್ತಾಗುತ್ತಲೂ ಅವಳು ಥಟ್ಟನೆ ಬಾಗಿ ಮುಖವನ್ನು ಮರೆ ಮಾಡಿದಳು. ನಾನು ಒಳಕ್ಕೆ ಬಂದೆ. ಕೋಣೆಯ ಅಡುಗೆಮನೆಗೆ ತಂತಿಯ ಜಾಳಿಗೆ ಹೆಣೆದ ಕಿಟಕಿಯೊಂದು ಇತ್ತು. ಅಲ್ಲಿ ನಿಂತು ಅವಳನ್ನು ನೋಡಲು ಯತ್ನಿಸಿದೆ. ಆದರೆ ನಮ್ಮ ಹಿತ್ತಲಿನ ಗೋಡೆ ನನ್ನ ದೃಷ್ಟಿಗೆ ಅಡ್ಡವಾಗುತ್ತಿದ್ದುದರಿಂದ ನನ್ನ ಯತ್ನ ಫಲಿಸುವಂತಿರಲಿಲ್ಲ. ನಾನು ಅವಳನ್ನು ನೋಡಬೇಕಾಗಿತ್ತು, ನಾನು ಅವಳನ್ನು ನೋಡಬಯಸುತ್ತಿದ್ದಂತೆ ಅವಳೂ ನನ್ನನ್ನು ನೋಡಬಯಸುವಳೇನೋ ಎಂದು ಪರೀಕ್ಷಿಸಬೇಕಾಗಿತ್ತು. ಒಂದು ಗಳಿಗೆ ಯೋಚಿಸಿದಾಗ ಅದಕ್ಕೊಂದು ಉಪಾಯ ಹೊಳೆಯಿತು. ಹಳೆಯ ದೋತರವನ್ನು ನೀರಿನಲ್ಲಿ ತೋಯಿಸಿ, ಅಡುಗೆಮನೆಯ ಬಾಗಿಲಿಗಡ್ಡವಾಗಿ ಒಣಗಲು ಕಟ್ಟಿ, ಅದರಲ್ಲಿದ್ದ ಛಿದ್ರವೊಂದರ ಮೂಲಕ ಅವಳನ್ನು ಈಕ್ಷಿಸುತ್ತ ನಿಂತುಕೊಂಡೆ. ಬಚ್ಚಲಿನಲ್ಲಿ ಕುಳಿತಿದ್ದ ರೋಶನ್ ಐದು ನಿಮಿಷಗಳಿಗೊಮ್ಮೆ ಎದ್ದು ನನ್ನನ್ನೇ ಹುಡುಕುತ್ತಿದ್ದುದು ಗೊತ್ತಾಗುತ್ತಲೂ ನನ್ನ ಮೈಮೇಲೆ ಹರ್ಷದ ಹೊಳೆ ಹರಿದಂತಾಯಿತು. ನಾನು ಅವಳನ್ನು ಬಯಸುತ್ತಿದ್ದಂತೆ ಅವಳೂ ನನ್ನನ್ನು ಬಯಸುತ್ತಿದ್ದುದಂತೂ ಖಚಿತವಾಗಿ ತಿಳಿದ ಹಾಗಾಯಿತು. ದೋತರದ ಮರೆಯಲ್ಲಿದ್ದವನು ಥಟ್ಟನೆ ಆಚೆಗೆ ಹೋಗಿ ಅವಳಿಗೆ ಮುಖ ತೋರಿಸಿ ನಗುತ್ತಾ ಕೈ ಬೀಸಿ ಕರೆದೆ. ಅವಳೂ ನಕ್ಕಳು. ಸಿಕ್ಕಿತು ಬೇಟೆ! ಎಂದುಕೊಂಡೆ. ಆದರೆ ನಾವಿಬ್ಬರೂ ಸಂಧಿಸುವ ಬಗೆ ಹೇಗೆ? ಆ ಸಾಲಿನಲ್ಲಿ ಹತ್ತಿಪ್ಪತ್ತು ಮನೆಗಳು. ಆ ಮನೆಗಳವರೆಲ್ಲರ ಕಣ್ಣು ತಪ್ಪಿಸಿ ಅವಳು ನನ್ನ ಕೋಣೆಗೆ ಬರುವ ಬಗೆಯೆಂತು?

ಮಧ್ಯಾಹ್ನ ಮನೆಯಲ್ಲೇ ಬಿದ್ದುಕೊಂಡಿದ್ದೆ. ಕಚೇರಿಗೆ ಹೋಗಲು ಮನಸ್ಸಾಗಲಿಲ್ಲ. ಸಾಯಂಕಾಲ ಕರೀಮ ಶಾಲೆಯಿಂದ ಬಂದೊಡನೆಯೆ ಅವನನ್ನು ಕೂಗಿದೆ. ಅವನು ಬರುತ್ತಲೂ ಅವನನ್ನು ಅಂಗಡಿಗೋಡಿಸಿ ನೀಲಗಿರಿ ಎಣ್ಣೆಯ ಸೀಸೆಯೊಂದನ್ನು ತರಿಸಿದೆ. ಸಿಡಿಯುತ್ತಿದ್ದ ತಲೆಗೆ ಎಣ್ಣೆ ಸವರಿಕೊಂಡೆ. ಕರೀಮನಿಗೆ ನಾಟಕದ ಆಸೆ. ಅವನ ತಂದೆಯಂತೂ

ಊರಿನಲ್ಲಿರಲಿಲ್ಲ. ಅವನು ಹಿಂದಿರುಗುವುದರೊಳಗಾಗಿ ಸಾಧ್ಯವಾದಷ್ಟು ನಾಟಕ ನೋಡಿಬಿಡಬೇಕೆಂದು ಕರೀಮನ ಯೋಚನೆ. ಆ ದಿನ ಕನ್ನಡ ನಾಟಕ. ಅದನ್ನು ನೋಡಬೇಕೆಂದು ಅವನ ಬಯಕೆ.

"ಇವತ್ತು ನಮ್ಮನ್ನು ಬಿಡಿಸುತ್ತೀರಾ ನಾಟಕಕ್ಕೆ ?" ಎಂದು ನನ್ನನ್ನು ಕೇಳಿದ.

"ಅದೇನು ದೊಡ್ಡ ಮಾತು! ನಿಮ್ಮ ತಾಯಿಗೆ ಕೇಳಿ ಬಾ ಮೊದಲು."

ಕರೀಮ ಮನೆಗೆ ಹೋದವನು ಬಹಳ ವೇಳೆಯಾದರೂ ಬರಲಿಲ್ಲ. ನಾನು ಕಾತರನಾಗಿ ಕಾಯುತ್ತಿದ್ದೆ. ಅವನೊಡನೆ ಆ ಹುಡುಗಿಯರೂ ಬರಬಹುದು, ರೋಶನಳೊಡನೆ ಮಾತನಾಡುವ ಸಂಧಿ ಪುನಃ ಲಭಿಸಬಹುದು....

ಎಂಟು ಗಂಟೆಯ ವೇಳೆಗೆ ಕರೀಮ ಊಟ ಮುಗಿಸಿಕೊಂಡೇ ಬಂದ.

"ಯಾಕೋ, ಒಬ್ಬನೇ ಬಂದೆ ?"

"ಊಂ. ಅವರೇನು ಬರುವದಿಲ್ಲ."

"ಯಾಕೆ ?"

"ಅವ್ವ ಬೇಡ ಅಂದಳು. ಅಕ್ಕಂದಿರೂ ಬರಲಿಕ್ಕೆ ತಯಾರಾಗಿದ್ದರು. ಕನ್ನಡ ನಾಟಕ ಏನು ನೋಡುವದು, ಇನ್ನೊಮ್ಮೆ ಉರ್ದು ನಾಟಕಕ್ಕೇ ಹೋಗಿ ಶಿರಿನ್ ಫರ್‌ಹಾದ ನೋಡಿದರಾಯಿತೆಂದಳು ಅವ್ವ."

ನಿರಾಸೆಯಿಂದಾಗಿ ನನ್ನ ಮುಖದಿಂದ ಮಾತೇ ಹೊರಡಲಿಲ್ಲ. ಎದ್ದು, ಊಟಮಾಡಿ ಬರಲೂ ಮನಸ್ಸಾಗಲಿಲ್ಲ. ಕರೀಮನನ್ನು ನಾಟಕಕ್ಕೆ ಬಿಡುವಂತೆ ಚೀಟಿ ಬರೆದು ಕೊಟ್ಟು ಕಳಿಸಿದೆ. ಗಂಟೆಗಳು ಓಡತೊಡಗಿದವು. ನನಗೆ ನಿದ್ದೆ ಬರುವುದೂ ಸಾಧ್ಯವಿರಲಿಲ್ಲ. ಹಿತ್ತಲ ಬಾಗಿಲಿನಲ್ಲಿ ನಿಂತು ರೋಶನಳಿಗಾಗಿ ಪ್ರತೀಕ್ಷೆ ಮಾಡುವುದೊಂದೇ ಕೆಲಸವಾಯಿತು. ಒಂದು ಸಲವೂ ಅವಳು ತಮ್ಮ ಹಿತ್ತಲಿಗೆ ಬರಲಿಲ್ಲ. ಕಡೆಗೊಮ್ಮೆ ಅವರ ಹಿತ್ತಲ ಬಾಗಿಲೂ ಮುಚ್ಚಿಕೊಂಡ ಬಳಿಕ ನಿಟ್ಟುಸಿರು ಬಿಡುತ್ತಾ ಬಂದು ಹಾಸಿಗೆಯ ಮೇಲುರುಳಿಕೊಂಡೆ. ಎವೆಗೆ ಎವೆ ಕೂಡಲಿಲ್ಲ. ಕಣ್ಣಗೊಂಬೆಗಳು ಗಿರಗಿರನೆ ತಿರುಗುತ್ತಿದ್ದುವು. ಹನ್ನೆರಡು ಗಂಟೆಯಾಯಿತು, ಒಂದಾಯಿತು, ಎರಡಾಯಿತು. ಜವಾದಾರರ ಹಿತ್ತಲ ಬಾಗಿಲು ಕಿರ್ರೆಂದಿತು. ನಾನು ಆತುರದಿಂದ ಎದ್ದು ಕುಳಿತುಕೊಂಡೆ.

ಬಾಗಿಲು ಮತ್ತೆ ಮುಚ್ಚಿಕೊಂಡ ಸದ್ದು ಕೇಳಬಂದಿತು. ಕರೀಮು ನಾಟಕದಿಂದ ಹಿಂದಿರುಗಿ ಬಂದಿರಬೇಕು.

ಬೆಳಗಿನಲ್ಲಿ ಎದ್ದಾಗ ನನಗೆ ಜ್ವರ ಬಂದ ಹಾಗಿತ್ತು. ಹಾಗೇ ಕಚೇರಿಗೆ ಬಂದೆ. ಕಾರಕೂನರು ನನ್ನ ಮೈಮುಟ್ಟಿ ನೋಡಿ, "ನಿನ್ನೆ ಔಷಧ ತಗೊಳ್ಳಲಿಲ್ಲೇನು?" ಎಂದರು. ಔಷಧ! ನನ್ನ ಜ್ವರವನ್ನು ಶಮನಗೊಳಿಸಲು ಅಸಾಧಾರಣ ಔಷಧವೇ ಬೇಕಾಗಿತ್ತು. ಗುಮಾಸ್ತೆಯವರೆದುರಿಗೆ ಆ ವಿಷಯವಾಗಿ ಮಾತನಾಡುವ ಹಾಗೂ ಇರಲಿಲ್ಲ.

ಅಂದು ಕಚೇರಿಯಲ್ಲಿ ಅಷ್ಟು ಕೆಲಸವೂ ಇರಲಿಲ್ಲವಾದುದರಿಂದ ಹನ್ನೊಂದು ಗಂಟೆಗೆಲ್ಲ ಹೊರಟು ಊಟ ತೀರಿಸಿಕೊಂಡು ಕೋಣೆಗೆ ಬಂದೆ, ಸ್ವಲ್ಪ ಮಲಗಿ ವಿಶ್ರಾಂತಿ ಪಡೆದೆ. ನನ್ನ ತಲೆಯಲ್ಲಿ ಒಂದೇ ವಿಚಾರ. ಇಂದು 'ಶಿರಿನ್ ಫರ್‌ಹಾದ್' ನಾಟಕ. ಅದನ್ನು ನೋಡಲು ಅವರೆಲ್ಲ ಸಿದ್ಧರಾಗುವುದು ಖಂಡಿತ.

ಸಾಯಂಕಾಲ ಕರೀಮು ಬಂದು, ನಾನು ನಿರೀಕ್ಷಿಸಿಕೊಂಡಿದ್ದ ಪ್ರಶ್ನೆಯನ್ನು ಕೇಳಿದ:

"ಶಿರಿನ್ ಫರ್‌ಹಾದ್ ನೋಡಲು ಹೋಗಬೇಕಂತಾಳೆ ಅವ್ವ. ಬಿಡಿಸುತ್ತೀರಾ?"

"ನಿಮ್ಮ ತಂದೆಯವರು ಊರಲ್ಲಿಲ್ಲವಲ್ಲ?" ನಾನು ಬೇಕೆಂತಲೇ ಮಾತನಾಡಿದೆ.

"ಇಲ್ಲದಿದ್ದರೇನಾಯಿತು? ಅವ್ವ ಬರುತ್ತಾಳಲ್ಲ!" ಎಂದ ಕರೀಮು.

ಆ ದಿನವೂ ರಂಗದ ಮೇಲೆ ಕುರ್ಚಿಗಳನ್ನು ಹಾಕಿಸಿ ಅವರಿಗಾಗಿ ಯೋಗ್ಯ ವ್ಯವಸ್ಥೆ ಮಾಡಿದುದಾಯಿತು. ಅವರೊಡನೆಯೆ ನಾನೂ ಹೋದರೆ ಜನರು ಆಡಿಕೊಳ್ಳಲು ಆಸ್ಪದವಾದೀತೆಂದು ಬಗೆದು ಅವರಿಗೊಂದು ಪಾಸು ಕೊಡಿಸಿದ್ದೆ. ಅವರು ನಾಟಕ ಗೃಹಕ್ಕೆ ಬಂದು ತಮಗಾಗಿ ಗೊತ್ತುಪಡಿಸಿದ್ದ ಸ್ಥಳದಲ್ಲಿ ಕುಳಿತುಕೊಂಡರು. ಸ್ವಲ್ಪ ಹೊತ್ತು ಬಿಟ್ಟು ನಾನೂ ಅಲ್ಲಿಗೆ ಬಂದು, ನನಗಾಗಿ ಇರಿಸಲಾಗುತ್ತಿದ್ದ ವಿರಾಮಕುರ್ಚಿಯಲ್ಲೊರಗಿಕೊಂಡೆ, ನಾಟಕಕ್ಕಾರಂಭವಾಯಿತು. ಅವರು ನಾಟಕ ನೋಡುತ್ತಿದ್ದರೆ ನಾನು ರೋಶನಳನ್ನೇ ನೋಡುತ್ತಿದ್ದೆ. ಮೊನ್ನೆಯ ಹಾಗೆ ಅವಳು ಇಂದೂ ಮೂತ್ರಾಲಯಕ್ಕೆ ಬಂದರೆ

ಅಲ್ಲಿ ಅವಳನ್ನು ಹಿಡಿದುಕೊಳ್ಳಬೇಕೆಂದು ನಾನು ಹೊಂಚು ಹಾಕುತ್ತಿದ್ದೆ. ಒಂದು ತಾಸು ಕಳೆದ ಬಳಿಕ ಅವಳು ಎದ್ದು ಮೂತ್ರಾಲಯದತ್ತ ನಡೆದಳು. ಯಾರಿಗೂ ಗೊತ್ತಾಗದಂತೆ ನಾನೂ ಎದ್ದು ಅವಳನ್ನು ಹಿಂಬಾಲಿಸಿದೆ. ಮೂತ್ರಾಲಯದ ಹತ್ತಿರ ಕತ್ತಲೆ ತುಂಬಿದ ಸ್ಥಳದಲ್ಲಿ ಅವಳನ್ನು ಹಿಡಿದು ತಬ್ಬಿಕೊಂಡು ಮುದ್ದಿಸಿದೆ. ಅವಳು ಪ್ರತಿಭಟಿಸಲಿಲ್ಲ. ಒಂದು ಗಳಿಗೆ ಕಳೆದ ಮೇಲೆ ನನ್ನ ಆಲಿಂಗನದಿಂದ ದೂರವಾಗಿ ಮೂತ್ರಾಲಯಕ್ಕೆ ಹೋಗಿ ಮರಳಿಬಂದಳು. ನಾನು ಮತ್ತೆ ಅವಳನ್ನು ಹಿಡಿದುಕೊಂಡು,

"ಮನೆಗೆ ಹೋದ ಮೇಲೆ ನನ್ನ ಕೋಣೆಗೆ ಬಾ ರೋಶನ್," ಎಂದು ಹೇಳಿದೆ.

"ಯಾರಾದರೂ ನೋಡಿದರೆ?"

"ಯಾರು ನೋಡುತ್ತಾರೆ ಅಂಥ ವೇಳೆಯಲ್ಲಿ?"

"ನಮ್ಮ ಮನೆಯವರಿಗೆ ಗೊತ್ತಾದರೆ?"

"ನಾಟಕ ನೋಡಿ ಮುಗಿಸಿದಾಗ ಅವರಿಗೆಲ್ಲಾ ಭಯಂಕರ ನಿದ್ದೆ ಬಂದಿರುತ್ತದೆ. ನೀನು ಹಿತ್ತಲ ಬಾಗಿಲು ಹಾಕದೆ ಹಾಗೇ ಬಿಡು. ನಾನೂ ನನ್ನ ಕೋಣೆಯ ಹಿತ್ತಲ ಬಾಗಿಲು ತೆಗೆದಿಡುತ್ತೇನೆ. ಅವರು ಮಲಗಿ ನಿದ್ದೆ ಮಾಡ ತೊಡಗಿದಾಗ ಮೆಲ್ಲಗೆ ಬಂದು ಬಿಡು," ಎಂದು ಉಪಾಯ ಹೇಳಿಕೊಟ್ಟೆ. ಅವಳು ತನ್ನ ಕೈ ಬಿಡಿಸಿಕೊಂಡು ಹೊರಟು ಬಿಟ್ಟಳು.

ನಾನೂ ನನ್ನ ಸ್ಥಳದ ಕಡೆ ಹೊರಟಿದ್ದ ಹಾಗೆ ಹಾಸ್ಯನಟಿ ಮಲಿಕಾ ಎದುರಾಗಿ ಬಂದಳು.

"ಅಪ್ಪಿಕೊಳ್ಳುವದು, ಮುದ್ದು ಕೊಡುವದು ಆದರಾಯಿತೇ? ಅದರಿಂದೇನು ಅಂಥ ಸುಖವೋ?" ಎಂದು ಹೇಳುತ್ತಾ ನನ್ನನ್ನು ಕಡೆಗಣ್ಣಿನಿಂದ ನೋಡುತ್ತಾ ನಗತೊಡಗಿದಳು ಮಲಿಕಾ. ರೋಶನಳನ್ನು ನಾನು ತಬ್ಬಿಕೊಂಡುದನ್ನು ಅವಳು ಕದ್ದು ನೋಡಿರಲು ಸಾಕು.

"ನಿಜವಾದ ಸುಖ ಅಂದರೇನೆಂಬುದು ನಿಮಗಿನ್ನೂ ಗೊತ್ತಿದ್ದ ಹಾಗಿಲ್ಲ. ನಾನು ಗೊತ್ತು ಮಾಡಿಕೊಡ್ತೇನೆ ಬರ್‍ರೀರಾ!" ಎಂದು ದಿಟ್ಟತನದಿಂದ ಆಹ್ವಾನಿಸಿ ನನ್ನ ಕೈ ಹಿಡಿದು ತನ್ನ ಡ್ರೆಸಿಂಗ್ ರೂಮಿನತ್ತ ಎಳೆಯತೊಡಗಿದಳು ಮಲಿಕಾ. ಅವಳನ್ನು ತಿರಸ್ಕರಿಸಿ ಹೋಗಲು ನನಗೂ ಮನಸ್ಸಾಗಲಿಲ್ಲ. ಸೂತ್ರದ ಗೊಂಬೆ

ಯಂತೆ ಅವಳ ಹಿಂದೆ ಹೊರಟೆ. ಆ ಕಂಪನಿಯಲ್ಲಿನ ಎಲ್ಲಾ ನಟಿಯರಿಗೂ ಜೊತೆಗಾರರು ಸಿಕ್ಕಿದ್ದರಾದರೂ ಮಲಿಕಾಗೆ ಮಾತ್ರ 'ಕಾಯಂ ಪ್ರಿಯಕರ'ರಾರೂ ಇರಲಿಲ್ಲ. ಆ ದೃಷ್ಟಿಯಲ್ಲಿ ಅವಳು "ಫ್ರೀ ಲಾನ್ಸರ್" ಆಗಿದ್ದಳೆನ್ನಬಹುದು. ಕೋಣೆಗೆ ಹೋಗುತ್ತಲೂ ಕದವಿಕ್ಕಿ ನನ್ನನ್ನು ತಬ್ಬಿಕೊಂಡು ಒಂದೇಸವನೆ ಚುಂಬಿಸತೊಡಗಿದಳು. ಅವಳು ಮುಖಕ್ಕೆ ಬಳಿದುಕೊಂಡಿದ್ದ ಬಣ್ಣದ ವಾಸನೆಯನ್ನು ಸಹಿಸಲಾರದೆ ನನಗೆ ವಾಂತಿಯಾಗುವಂತಾಯಿತು. ಅವಳು ಮಾತ್ರ ನನ್ನನ್ನು ಬಿಡಲಿಲ್ಲ. ಅವಳೊಡನೆ ನಾನು ಮಲಗಿಕೊಳ್ಳಲೇ ಬೇಕಾಯಿತು. ಎರಡು ದಿನಗಳಿಂದ ರೋಶನಳಿಗಾಗಿ ನಿದ್ದೆಯಿಲ್ಲದೆ ಕಂಗೆಟ್ಟದ್ದ ನಾನೇ, ಐದು ನಿಮಿಷಗಳ ಹಿಂದೆ ಅವಳನ್ನು ತಬ್ಬಿಕೊಂಡು ಮುತ್ತಿನ ಮಳೆಗರೆದಿದ್ದ ನಾನೇ ಈಗ ಈ ಚಿಲ್ಲರೆ ನಟಿ ಮಲಿಕಾಳ ಜತೆ ಮಲಗಿಕೊಂಡಿದ್ದೆ. ಆ ಸಮಯದಲ್ಲಿ ನನ್ನ ಬಗ್ಗೆ ನನಗೇ ಹೇಸಿಕೆ ಹುಟ್ಟಿತ್ತು. ನಿಜವಾದ ಪ್ರೇಮಿಯೊಬ್ಬ ತನ್ನ ಪ್ರೇಯಸಿಯಲ್ಲದ ಹೆಂಗಸಿನ ಜತೆಗೆ ಹಾಗೆ ರಮಿಸಬಹುದೇ? ಎಂತಲೇ ನಾನು ಪ್ರೇಮಿಯಲ್ಲ. ನಾನು ಕಾಮುಕ. ರೋಶನಳನ್ನು ನನ್ನ ಕೋಣೆಗೆ ಬರಹೇಳಿದುದೂ ನನ್ನ ಕಾಮತೃಪ್ತಿಗಾಗಿಯೆ. ಥೂ! ಎಂಥ ಹೊಲಸು ನಡವಳಿಕೆ!....

ಹತ್ತು ನಿಮಿಷಗಳ ತರುವಾಯ ಮುಖ ತೊಳೆದುಕೊಂಡು ಮತ್ತೆ ನನ್ನ ಸ್ಥಳಕ್ಕೆ ಬಂದು ಕುಳಿತೆ. ಎದುರಿಗೆ ಕುಳಿತಿದ್ದ ರೋಶನ್ ನನ್ನ ಕಡೆ ನೋಡಿ ಮುಗ್ಧ ನಗು ಬೀರಿದಳು. ಮಲಿಕಾಳ ಜತೆ ನಾನು ಮಲಗಿಕೊಂಡ ಸಂಗತಿ ಅವಳಿಗೆ ಹೇಗೆ ಗೊತ್ತಾಗಬೇಕು ಪಾಪ! "ನೀಚ!" ಎಂದು ನನ್ನನ್ನು ನಾನೇ ಹಳಿದುಕೊಂಡೆ. ಆದರೆ, ಮರುಗಳಿಗೆಯಲ್ಲಿ ನನಗೆನ್ನಿಸಿತು: ಈಗ ನಡೆಯುತ್ತಿರುವುದರಲ್ಲಿ ನನ್ನದಾದರೂ ಏನು ತಪ್ಪಿದೆ? ಮಲಿಕಾ ಕರೆದಳೆಂದು ನಾನು ಹೋದೆ. ರೋಶನಳೂ ನನ್ನನ್ನು ಪ್ರೋತ್ಸಾಹಿಸುತ್ತಿದ್ದಾಳೆ, ನನ್ನ ಸಂಗ ಸುಖಕ್ಕೆಂದೇ ಕಾದಿದ್ದಾಳೆ. ಅವಳೂ ನನ್ನನ್ನು ಪ್ರೀತಿಸುತ್ತಿಲ್ಲ, ನಾನೂ ಅವಳನ್ನು ಪ್ರೀತಿಸುತ್ತಿಲ್ಲ. ಇಬ್ಬರಿಗೂ ದೇಹದ ಹಸಿವು. ಅವಳ ದೇಹ ನನಗೆ ಬೇಕು, ನನ್ನ ದೇಹ ಅವಳಿಗೆ ಬೇಕು. ಅದಕ್ಕಿಂತ ಹೆಚ್ಚಿನದೇನನ್ನೂ ನಾನೂ ನಿರೀಕ್ಷಿಸುತ್ತಿಲ್ಲ, ಅವಳೂ ನಿರೀಕ್ಷಿಸುತ್ತಿಲ್ಲ. ವಾಸ್ತವ ಸ್ಥಿತಿ ಹೀಗಿರುವಾಗ ನಾನೊಬ್ಬನೆ ಏಕೆ ನೀಚನಾದೇನು? ನನ್ನನ್ನು ನಾನು ಹೀಗೆ ಹಳಿದುಕೊಳ್ಳುವ

ಆಗತ್ಯವೂ ಇಲ್ಲ. ಅವಳೂ ಯುವತಿ. ಮಾನವ ಸಹಜವಾದ ಬಯಕೆ ಅವಳಿಗೂ ಇದೆ. ಅವಳಿಗೂ ನನ್ನಂಥ ಯುವಕನೊಬ್ಬನ ಸಹವಾಸ ಬೇಕು. ಇನ್ನೂ ಲಗ್ನವಾಗಲಿಲ್ಲ. ಆಗುವುದು ಎಂದೋ ಏನೋ. ಬೇಗ ಆದೀತೆಂಬ ಭರವಸೆಯೂ ಇಲ್ಲ. ಲಗ್ನವೆಂದರೆ ಸಾಮಾನ್ಯವೇ? ಅದಕ್ಕೆಲ್ಲ ಹಣ ಬೇಕು. ಇವಳ ತಂದೆಗೆ ಸಿಗುವ ನಲವತ್ತು ರೂಪಾಯಿ ಸಂಬಳದಲ್ಲಿ ಇವರೆಲ್ಲರ ಹೊಟ್ಟೆ ಬಟ್ಟೆ ಸಾಗಬೇಕು. ಅದರದೇ ಕಷ್ಟವಾಗಿರುವಾಗ ಈ ಹುಡುಗಿಯರ ಲಗ್ನಕ್ಕಾಗಿ ಹಣ ಹೊಂದಿಸುವುದೆಲ್ಲಿ ಸಾಧ್ಯ? ಒಬ್ಬೊಬ್ಬಳ ಲಗ್ನಕ್ಕೆ ಏನಿಲ್ಲೆಂದರೂ ನಾಲ್ಕೈದು ನೂರು ರೂಪಾಯಿ ಬೇಕು. ಅದು ಕೂಡಿದಾಗ ಮದುವೆಯಾಗುವುದು. ಅದುವರೆಗೂ ಇವರು ತಡೆಯಲಾರರು. ಅಂತೆಯೇ ನನ್ನಂಥವನನ್ನು ಹುಡುಕುವುದು....

ನಮ್ಮಂಥವರ ಸ್ಥಿತಿಯೂ ಹಾಗೇ. ನಮಗೂ ಲಗ್ನವಾಗಲಿಲ್ಲ. ಬೇಗ ಆಗುವ ಹಾಗೂ ಇಲ್ಲ. ದೇಹದಲ್ಲಿನ ಯೌವನವಂತೂ ಹೆಣ್ಣಿಗಾಗಿ ಕಾದು ನಿಂತಿದೆ. ನಗರದಲ್ಲಿ ಸೂಳೆಯರಿಗೇನೂ ಕೊರತೆಯಿಲ್ಲ. ಆದರೆ ಅವರ ಹತ್ತಿರ ಹೋಗಲು ಭಯ. ಯಾವುದಾದರೂ ಕೆಟ್ಟರೋಗ ಅಂಟಿಕೊಳ್ಳಬಾರದಲ್ಲ! ಅಂತೆಯೆ, ರೋಶನಳಂಥ ಅನಾಘ್ರಾಣಿತ ಕುಸುಮಗಳನ್ನೇ ನಾವು ಹುಡುಕಿಕೊಳ್ಳಬೇಕು. ಪಾಪ, ಪುಣ್ಯ, ಶೀಲ, ಧರ್ಮ ಎಲ್ಲವೂ ನಮ್ಮಂಥವರಿಗೆ ಪುಸ್ತಕದ ಬದನೇಕಾಯಿ, ಅಷ್ಟೆ.

ಹಾಗೆ ಯೋಚಿಸುತ್ತಾ ರೋಶನಳಿಗಾಗಿ ಕಾದುಕೊಂಡಿದ್ದೆ. ನಾಟಕ ಮುಗಿಯಿತು. ಅವರನ್ನು ಟಾಂಗಾದಲ್ಲಿ ಮನೆಗೆ ಕಳಿಸಿ ನಾನು ಸೈಕಲ್ ಏರಿ ಹೊರಟೆ. ಮನೆಗೆ ಬಂದವನೇ ರೋಶನಳಿಗೆ ಹೇಳಿದಂತೆ ಹಿತ್ತಲ ಬಾಗಿಲು ತೆಗೆದಿರಿಸಿದೆ. ಹೊತ್ತು ಕಳೆದಂತೆ ಮನಸ್ಸಿನಲ್ಲಿ ಹುರುಹುರು ಹೆಚ್ಚುತ್ತಿತ್ತು. ಸ್ವಲ್ಪ ಸದ್ದಾದರೂ ರೋಶನಳೇ ಬಂದಿರಬಹುದೆಂದು ನೋಡುತ್ತಿದ್ದೆ. ಆ ರಾತ್ರಿ ದೀಪ ಆರಿಸಿಬಿಟ್ಟದ್ದೆ. ಹತ್ತಿರದಲ್ಲಿಯೇ ಬ್ಯಾಟ್ರಿಯಿತ್ತು. ಬೆಳಗಿನ ನಾಲ್ಕು ಗಂಟೆಯ ಸಮಯವಾದರೂ ಬರಲೇ ಇಲ್ಲ ರೋಶನ್. ಪಾಪ! ಅಂಜಿಕೊಂಡಿರಬೇಕು. ಅಂಥ ಅನುಭವ ಅದೇ ಮೊದಲಸಲವಾಗಿರಬಹುದು ಅವಳಿಗೆ. ತನ್ನ ಕೌಮಾರ್ಯ ಕಳೆದುಕೊಳ್ಳಲು ಗಂಡಸಿನಲ್ಲಿಗೆ ಬರಬೇಕು. ಯಾರಾದರೂ ನೋಡಬಹುದೆಂದು ಹೆದರಿಕೊಂಡಿರಬಹುದು.....

ಕೊನೆಗೊಮ್ಮೆ ಬಂದಳು ರೋಶನ್. ಅವಳ ಕೈಯಲ್ಲೊಂದು ತಂಬಿಗೆಯಿತ್ತು. ಅದು ಕೇವಲ ನೆಪಕ್ಕಾಗಿ. ಕತ್ತಲ ವೇಳೆಯಲ್ಲಿ ಸ್ತ್ರೀಯರು ಮನೆಗಳ ಹಿಂದಿನ ಚರಂಡಿಯಲ್ಲಿಯೆ ಶೌಚಕ್ಕೆ ಕೂಡುವುದು ವಾಡಿಕೆಯಾಗಿತ್ತು. ಹೆದರಿಕೆಯಿಂದ ಥರಥರ ನಡುಗುತ್ತಿದ್ದ ಅವಳ ಕೈ ಹಿಡಿದು, ಬ್ಯಾಟ್ರಿಯ, ಬೆಳಕು ಬೀರುತ್ತಾ ಅವಳನ್ನು ಹಾಸಿಗೆಗೆ ಕರೆದು ತಂದೆ. "ಅಂಜಬೇಡ ರೋಶನ್," ಎಂದು ಧೈರ್ಯ ಹೇಳಿದೆ.

"ನಾನೆಂದೂ ಇಂಥಾ ಕೆಲಸಕ್ಕೆ ಹೋಗಿಲ್ಲ," ಎಂದಳಾಕೆ.

"ಇಷ್ಟೇಕೆ ತಡಮಾಡಿದೆ ಪ್ಯಾರೀ?" ಎಂದು ಕೇಳಿದೆ, ಅವಳನ್ನು ಎದೆಗೊತ್ತಿಕೊಳ್ಳುತ್ತಾ.

"ಮನೆಯವರಿಗೆಲ್ಲಾ ಚೆನ್ನಾಗಿ ನಿದ್ದೆ ಹತ್ತಿದ ಖಾತ್ರಿಯಾಗಬೇಕಲ್ಲ. ಅಪ್ಪನಿಗೆ ಗೊತ್ತಾದರೆ ಮುಗಿದೇಹೋಯ್ತು. ನಾನೂ ಉಳಿಯುವುದಿಲ್ಲ. ನೀವೂ ಉಳಿಯಲಿಕ್ಕಿಲ್ಲ."

ಅದು ನಿಜವೇ ಆಗಿತ್ತು. ನಮ್ಮಿಬ್ಬರ ರಹಸ್ಯ ಸಂಬಂಧದ ವಿಷಯ ಜಮಾದಾರರಿಗೆ ತಿಳಿದಿದ್ದರೆ ಅವರು ನನ್ನನ್ನು ಗುಂಡಿಟ್ಟು ಕೊಲೆಮಾಡಲೂ ಹಿಂಜರಿಯುತ್ತಿರಲಿಲ್ಲ. ರೋಶನಳನ್ನೂ ಕತ್ತಿಯಿಂದ ಕತ್ತರಿಸಿಹಾಕ ಬಹುದಾಗಿತ್ತು.

ಆ ಭೀಕರ ಗಂಡಾಂತರದ ಕರಿನೆರಳು ನಮ್ಮ ಮೇಲೆ ಕವಿದು ಕೊಂಡಿದ್ದಾಗಲೂ ನಾವು ಒಬ್ಬರನ್ನೊಬ್ಬರು ಕೂಡಲು ಆತುರರಾಗಿದ್ದೆವು. ಪ್ರಾಣದ ಭೀತಿಯನ್ನೂ ಮರೆಯಿಸುವ ಆ ಮೋಹ ಅದೆಷ್ಟು ಅದ್ಭುತ ವಾದುದಾಗಿತ್ತು! ಅರಳೆಯಂತೆ ಮೃದುವಾಗಿದ್ದ ಅವಳ ದೇಹ ನನ್ನ ದೇಹ ಭಾನವನ್ನೇ ಮರೆಯಿಸಿತ್ತು.

ಐದು ಗಂಟೆಯವರೆಗೂ ನನ್ನ ಜತೆಗಿದ್ದು ಅವಳು ಹೊರಟು ಹೋದಳು. ನಾನು ಮತ್ತೆ ಮಲಗಿಕೊಂಡೆ. ಒಡನೆಯೆ, ಎರಡು ದಿನಗಳಿಂದ ದೂರವಿದ್ದ ನಿದ್ದೆ ತಾನಾಗಿಯೆ ಬಂದು ನನ್ನನ್ನು ಕೂಡಿಕೊಂಡಿತು.

ಅಂದಿನಿಂದ ಸಮಯ ಸಾಧಿಸಿ ನನ್ನ ಕೋಣೆಗೆ ಬರುವುದಕ್ಕಾರಂಭಿಸಿದಳು ರೋಶನ್. ರಾತ್ರಿ ನಾನು ಹಿತ್ತಲ ಬಾಗಿಲು ಮುಚ್ಚುತ್ತಿರಲಿಲ್ಲ. ನಾಲ್ಕಾರು

ದಿನಗಳ ಬಳಿಕ ಜಮಾದಾರರು ಬಂದರು. ತಾವು ನಾಟಕಗಳಿಗೆ ಹೋಗಿದ್ದ ಸಂಗತಿ ತಿಳಿಸಿ, ಜಮಾದಾರರ ಹೆಂಡತಿ ಗಂಡನೆದುರಿಗೆ ನನ್ನನ್ನು ಬಹಳವಾಗಿ ಹೊಗಳಿದಳು. ನಾನು ಅವರಿಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಿಕೊಟ್ಟುದನ್ನೂ, ಟಾಂಗಾ ತರಿಸಿ ಅವರನ್ನು ಕಳುಹಿಸಿ ಕೊಟ್ಟುದನ್ನೂ ವಿವರಿಸಿ ಹೇಳಿ ನಾನು ಒಂದು ಸಲವೂ ಅವರೊಡನೆ ಮಾತು ಕೂಡಾ ಆಡಲಿಲ್ಲವೆಂದೂ ನಾನು ಬಹಳ ಸಜ್ಜನನೆಂದೂ ಬಣ್ಣಿಸಿದಳು. ಜಮಾದಾರರಿಗೆ ತುಂಬಾ ಸಂತೋಷವಾಯಿತು. ಅಂದಿನಿಂದ ಅವರು ನನ್ನ ಭಕ್ತನಂತಾದರು. ಈ ಗುರುವಿನ ಮಹಿಮೆಯೆಂಥ ದೆಂಬುದು ಅವರಿಗೆ ಹೇಗೆ ಗೊತ್ತಾಗಬೇಕು.

ಒಂದೆರಡು ತಿಂಗಳ ಕಾಲ ರೋಶನಳೊಡನೆ ಹಾಗೇ ಸಂಬಂಧ ಬೆಳೆದು ಬಂದಿತು. ದಿನ ಕಳೆದ ಹಾಗೆ ಇಬ್ಬರಿಗೂ ಭಯವಾಗುತ್ತಿತ್ತು – ಅಕಸ್ಮಾತ್ತಾಗಿ ಅವಳು ಗರ್ಭವತಿಯಾದರೆ ಗತಿಯೇನೆಂದು. ನಮ್ಮ ಮಿಲನದ ಪ್ರಸಂಗ ಗಳನ್ನೂ ಕಡಮೆ ಮಾಡತೊಡಗಿದೆವು. ಹಾಗೆ ಮಾಡಲು ಇನ್ನೊಂದು ಕಾರಣವೂ ಇತ್ತು – ರೋಶನಳ ತಂಗಿ ಅಮೀನಾಳಿಗೆ ನಮ್ಮ ಗೌಪ್ಯಸಂಬಂಧದ ಸುಳಿವು ತಿಳಿದ ಹಾಗೆ ನಮಗೆ ಅನುಮಾನವಾಗಿತ್ತು. ತನ್ನ ತಂಗಿ ಯಾವಾಗಲೂ ತನ್ನನ್ನು ಕಾಯುತ್ತಿದ್ದಳೆಂದು ರೋಶನ್ ಹೇಳುತ್ತಿದ್ದಳು. ಆ ಮಲಿಕಾ ಬೇರೆ ಒಂದೇಸಮನೆ ನನ್ನ ಬೆನ್ನು ಹತ್ತಿದ್ದಳು. ನಾಲ್ಕು ದಿನಗಳಲ್ಲಿ ಒಮ್ಮೆಯಾದರೂ ನಾನು ಅವಳಲ್ಲಿಗೆ ಹೋಗಲೇ ಬೇಕಾಗುತ್ತಿತ್ತು. ನಾನೆಲ್ಲಾದರೂ ತಪ್ಪಿಸಿದರೆ ಅವಳು ಆಳನ್ನೇ ಅಟ್ಟುತ್ತಿದ್ದಳು. ಅವಳಿಂದಾಗಿ ನಾನು ತೊಡಕಿನಲ್ಲಿ ಸಿಲುಕಿ ಕೊಳ್ಳುವಂತಾಗಿತ್ತು.

ಈ ಮಧ್ಯೆ ಸದಾಶಿವಪ್ಪನವರನ್ನು ಫೌಜದಾರಿಕೆಯ ತರಬೇತಿಗೆಂದು ಆರಿಸಲಾಯಿತು. ಅವರು ನಾಸಿಕಕ್ಕೆ ಹೋದಬಳಿಕ ಪಂಚನಾಮಾ ಮೊದಲಾದ ಕಾರ್ಯಗಳನ್ನು ನೋಡಿಕೊಳ್ಳುವ ಜವಾಬ್ದಾರಿಯೂ ನನ್ನ ಮೇಲೆ ಬಿತ್ತು. ಅವನ್ನೂ ನೋಡಿಕೊಂಡು, ಕಚೇರಿಯಲ್ಲಿ ಬರೆವಣಿಗೆಯ ಕೆಲಸವನ್ನೂ ಮುಗಿಸಿಕೊಂಡು ಮನೆಗೆ ಬರುವ ವೇಳೆಗೆ ನಾನು ಸುಸ್ತಾಗಿ ಹೋಗುತ್ತಿದ್ದೆ. ನನ್ನ ಸಹಾಯಕ್ಕೆ ಇನ್ನೊಬ್ಬರನ್ನು ತೆಗೆದುಕೊಳ್ಳದೆ ಬೇರೆ ಉಪಾಯವಿರಲಿಲ್ಲ. ಆ ಸ್ಥಳಕ್ಕೆಂದು ನಾನು ಅಬ್ದುಲ್ ಖಾದರರ ಹೆಸರನ್ನು ಸೂಚಿಸಿದಾಗ ನನ್ನ

ಫೌಜದಾರರಿಗೆ ಆಶ್ಚರ್ಯವಾಗದಿರಲಿಲ್ಲ. ನನ್ನ ವಿರುದ್ಧ ಚಾಡಿ ಹೇಳಿದ್ದವನನ್ನೇ ನಾನು ಶಿಫಾರಸು ಮಾಡುವುದೇ!

"ಅವನಿಗೂ ನಿನಗೂ ಕೂಡಿ ನಡೆಯುವುದೇ ಶಿವಣ್ಣಾ ?" ಫೌಜದಾರರು ಕೇಳಿದರು.

"ಅವರೇನೋ ಒಳ್ಳೆಯವರೇ, ರಾವ್‌ಸಾಹೇಬರೇ. ಏನೋ ಸ್ವಲ್ಪ ಸಿಟ್ಟು ಬಹಳ."

"ಲಂಚಗಿಂಚ ತಿನ್ನುತ್ತಾನೋ ಏನೋ."

"ಹಾಗೇನು ತಿನ್ನಲಿಕ್ಕಿಲ್ಲ. ಸರ್ವೀಸ್ ಆದವರಿದ್ದಾರೆ. ಪೆನ್ಶನ್ ಆಗುವ ವಯಸ್ಸು. ಲಂಚ ತಿಂದು ನೌಕರಿ ಕಳಕೊಳ್ಳುವ ಧೈರ್ಯ ಬರಲಿಕ್ಕಿಲ್ಲ ಅವರಿಗೆ."

ಹಾಗೆ ನಾನು ಹೇಳುತ್ತಲೂ ಫೌಜದಾರರೂ ಒಪ್ಪಿಗೆಯಿತ್ತರು. ಗುಮಾಸ್ತೆಯವರೂ ಬೇಡವೆನ್ನಲಿಲ್ಲ. ಅಬ್ದುಲ್‌ಖಾದರರೂ ನಮ್ಮ ಜೊತೆಗೆ ಕೆಲಸಕ್ಕೆ ಬರತೊಡಗಿದರು. ಖಟ್ಲೆಗಳ ಕಾಗದ ಪತ್ರ ತಯಾರಿಸುವುದರಲ್ಲಿ ಅವರಿಗೆ ವಿಶೇಷ ಅನುಭವವಿತ್ತು. ಅವರಿಂದಾಗಿ ನಮ್ಮ "ಕ್ರೈಂ ಬ್ರಾಂಚ್"ಗೆ ಬಲ ಬಂದ ಹಾಗಾಯಿತು.

ಆ ವೇಳೆಗಾಗಲೆ ನಾನು ಲಂಚವೆಬ್ಬಿಸಲು ಹೊಂದಿಕೊಂಡಿದ್ದೆನಲ್ಲದೆ ವಿವಿಧ ತಂತ್ರಗಳನ್ನೂ ತಿಳಿದುಕೊಂಡಿದ್ದೆ. ನಮ್ಮ ಖರ್ಚಗಾಗಿ, ಷೋಕಿಗಾಗಿ ಸಾಕಾಗುವಷ್ಟು ದುಡ್ಡು ಸಿಗುತ್ತಿತ್ತು. ಆದರೆ, ಲಂಚಕ್ಕಾಗಿ ಯಾರಿಗೂ ಎಂದೂ ಉಪಟಳ ಕೊಡುತ್ತಿರಲಿಲ್ಲ, ಅಷ್ಟೆ. ಕೆಲಸಕ್ಕೆಂದು ಬಂದ ಜನರು ತಾವಾಗಿ, ಸ್ವಸಂತೋಷದಿಂದ ಕೊಟ್ಟುದನ್ನು ಸ್ವೀಕರಿಸಿ ಸುಮ್ಮನಾಗುತ್ತಿದ್ದೆವು. ನಮಗೆ ಮೂವರಿಗೂ ಪ್ರತಿಯೊಬ್ಬರಿಗೂ ಪ್ರತಿದಿನವೂ ಎರಡು ಮೂರು ರೂಪಾಯಿಗಳಾದರೂ ದೊರೆಯುತ್ತಿದ್ದುವು. ಅಬ್ದುಲ್‌ಖಾದರರು ತಾವಾಗಿ ಎಂದೂ ದುಡ್ಡು ಕೇಳುತ್ತಿರಲಿಲ್ಲ. ನಾವು ಕೊಟ್ಟರೆ ಮಾತ್ರ ತೆಗೆದುಕೊಳ್ಳುತ್ತಿದ್ದರು, ಕೊಡದಿದ್ದರೆ ಕೋಪಿಸಿಕೊಳ್ಳುತ್ತಿರಲಿಲ್ಲ.

ಹಾಗೆ ಅವರಿಗೂ ನನಗೂ ವಿಶೇಷ ಸಲಿಗೆ ಬೆಳೆದು ಪರಸ್ಪರ ಆತ್ಮೀಯತೆಯುಂಟಾಯಿತು. ಅವರು ಆಗಾಗ ನನ್ನ ಕೋಣೆಗೂ ಬಂದು, ಆ ಮಾತು ಈ ಮಾತು ಆಡುತ್ತಾ ತಮ್ಮ ಸಂಸಾರದ ತಾಪತ್ರಯಗಳನ್ನೂ ನನ್ನ ಮುಂದೆ ಹೇಳಿ

ಕೊಳ್ಳತೊಡಗಿದರು. ಒಂದು ದಿನ ಹಾಗೇ ಮಾತು ಸಾಗಿದ್ದಾಗ ಅವರ ಹೆಣ್ಣು ಮಕ್ಕಳ ಮದುವೆಯ ಪ್ರಸ್ತಾಪ ಬಂತು.

"ಹುಡುಗಿಯರು ದೊಡ್ಡವರಾದರೂ ಸರಿಯಾದ ವರ ಸಿಗದೆ ಮದುವೆಯಾಗಲಿಲ್ಲ," ಎಂದು ಅವರು ಹೇಳುತ್ತಲೂ ನಾನು,

"ನಮ್ಮ ಖಾತೆಯಲ್ಲೇ ನಿಮ್ಮ ಜನ ಬೇಕಾದಷ್ಟು ಇದ್ದಾರಲ್ಲ. ಇಬ್ಬರು ಒಳ್ಳೆಯ ಯುವಕರನ್ನು ಹುಡುಕುವದೇನು ದೊಡ್ಡ ಮಾತಲ್ಲ," ಎಂದು ಹೇಳಿದೆ.

"ಪೋಲೀಸ್ ಕೆಲಸ ಅಂದರೆ ನನಗೆ ಹೇಸಿಕೆ ಬಂದಿದೆ ಶಿವಣ್ಣಾ. ಇದರಿಂದ ಬರುವ ಸಂಬಳದಲ್ಲಿ ಸಂಸಾರ ನಡೆಯುವದು ಬಹಳ ಕಷ್ಟ. ನಾನು ಅನುಭವಿಸಿದ್ದೇ ಸಾಕು. ನನ್ನ ಮಕ್ಕಳೂ ಪೋಲೀಸರ ಕೈಹಿಡಿದು ನರಳಬಾರದು. ಬೇರೆ ನೌಕರಿಗಳಲ್ಲಿರುವ ಸುಶಿಕ್ಷಿತ ಯುವಕರಿಗೆ ಕೊಡಬೇಕೆಂದು ಆಸೆ. ಅದಕ್ಕೆಲ್ಲಾ ಹಣ ಬೇಕು."

"ನಿಮ್ಮ ಮಕ್ಕಳನ್ನು ಯಾರಾದರೂ ಸಂತೋಷದಿಂದ ಮಾಡಿಕೊಂಡಾರು. ನಾಟಕದ ದಿವಸ ಅವರನ್ನು ನೋಡಿದ್ದೇನೆ. ಅಂಥವರ ಕೈಹಿಡಿಯುವವರು ಪುಣ್ಯವಂತರು."

"ನಮ್ಮ ಹುಡುಗಿಯರು ಸುಂದರಿಯರೇನೋ ನಿಜ. ಆದರೆ ಬಡವರಾದ ನಮ್ಮ ಮನೆಯಲ್ಲಿ ಜನಿಸಿದ ಅವರನ್ನು ಹಾಗೇ ಯಾರು ಮಾಡಿಕೊಂಡಾರು! ನನ್ನ ಮನೆಯ ಮುಂದೇ ಅವರ ಮದುವೆ ಮಾಡಿಕೊಡಬೇಕಾಗುತ್ತದೆ. ಎಲ್ಲಾ ಖರ್ಚನ್ನೂ ನಾನೇ ನೋಡಿಕೊಳ್ಳಬೇಕಾಗುತ್ತದೆ. ಅಳಿಯಂದಿರಿಗೆ ಬಟ್ಟೆಬರೆ, ಬಂಗಾರ, ಪಾತ್ರೆ, ಮಂಚ, ಹಾಸಿಗೆ ಎಲ್ಲಾ ಕೊಡಬೇಕಾಗುತ್ತದೆ. ಇದಕ್ಕೆಲ್ಲಾ ಏನಿಲ್ಲೆಂದರೂ ಐದಾರು ನೂರು ರೂಪಾಯಿ ಆದರೂ ಬೇಕಾಗುತ್ತದೆ," ಎಂದು ಹೇಳಿ ಅಬ್ದುಲ್‌ಖಾದರರು ಆ ಮಾತನ್ನು ಅಲ್ಲಿಗೇ ಮುಗಿಸಿದರು.

ಅದೇ ದಿನ ನಾನು ನಮ್ಮ ಹಿರಿಯ ಕಾರಕೂನರೊಡನೆ ಮಾತನಾಡಿದೆ. ಅಬ್ದುಲ್‌ಖಾದರರ ಮಕ್ಕಳ ಲಗ್ನಕ್ಕಾಗಿ ಹಣ ಹೊಂದಿಸುವುದೆಂದು ನಿರ್ಧರಿಸಿದ್ದಾಯಿತು. ದುಡ್ಡು ಸಿಗಬಹುದಾದ ಖಟ್ಲೆಯೊಂದನ್ನು ಪೂರ್ಣ ವಿಚಾರಣೆಗೆ ಹಿಡಿದು ಅದರಲ್ಲಿ ದೊರೆತ ಹಣವನ್ನು ಇವರ ಮಕ್ಕಳ ಲಗ್ನಕ್ಕೆಂದು ತೆಗೆದಿರಿಸಬೇಕೆಂದು ಗೊತ್ತಾಯಿತು. ಆ ಸಂಗತಿ ಗೊತ್ತಾಗುತ್ತಲೂ ಜಮಾದಾರರಿಗೂ ಪರಮ ಸಂತೋಷವಾಯಿತು. ಅವರ ಮನೆಯವರಿಗುಂಟಾದ ಆನಂದವಂತೂ

ಅವರ್ಣನೀಯ. ರೋಶನಳಿಗೇನೆನ್ನಿಸಿತೊ ಏನೊ. ಜಮಾದಾರರು ನನ್ನನ್ನು ತಮ್ಮ ಮನೆಗೂ ಕರೆಯತೊಡಗಿದರು. ಬೆಳಿಗ್ಗೆ ಅವರಲ್ಲಿಯೆ ಚಹವೂ ಆಗ ತೊಡಗಿತು. ಮನೆಯಲ್ಲಿ ಘೋಷಾ ಪದ್ಧತಿಯಿದ್ದುದರಿಂದ ಮೊದಮೊದಲು ಆ ಹೆಣ್ಣುಮಕ್ಕಳು ನನ್ನೆದುರಿಗೆ ಕಾಣಿಸಿಕೊಳ್ಳುತ್ತಿರಲಿಲ್ಲ. ಕೆಲದಿನಗಳ ತರುವಾಯ ರೋಶನಳೇ ನಮಗೆ ಚಹಾ ಕೊಡತೊಡಗಿದಳು.

ಒಂದು ದಿನ ಜಮಾದಾರರು ಅಡುಗೆಮನೆಯಲ್ಲಿಯೆ ಇದ್ದರು. ನಾನು ಪಡಸಾಲೆಯಲ್ಲಿನ ಕುರ್ಚಿಯ ಮೇಲೆ ಕುಳಿತುಕೊಂಡಿದ್ದೆ. ನಿತ್ಯದಂತೆ ಚಹದ ಕಪ್ ಹಿಡಿದುಕೊಂಡು ಬಂದಳು ರೋಶನ್. ಕಪ್ ನೆಲಕ್ಕಿಟ್ಟು ಅವಳನ್ನು ಹಿಡಿದು ಮುದ್ದಿಟ್ಟೆ. ಹದಿನೈದು ದಿನಗಳಿಂದೀಚೆಗೆ ಅವಳು ನನ್ನ ಕೋಣೆಗೆ ಬರಲು ಅವಕಾಶ ಸಿಕ್ಕಿರಲಿಲ್ಲ. ಅದಕ್ಕೂ ಹಿಂದೆ ಜಮಾದಾರರು ರಾತ್ರಿಯ ಗಸ್ತಿಗೆ ಹೋಗುತ್ತಿದ್ದಾಗ ಅವಳು ಸಮಯ ಸಾಧಿಸಿ ಬರುತ್ತಿದ್ದಳು. ಈಗ ಅವರಿಗೆ ಗಸ್ತಿಯ ಡ್ಯೂಟಿ ಇರಲಿಲ್ಲ. ಅವರು ಮನೆಯಲ್ಲೇ ಇರುವಾಗ ರೋಶನ್ ಬರುವುದಾದರೂ ಹೇಗೆ ?

ಕಚೇರಿಯಲ್ಲಿ ನಮಗೆ ದಿನವೂ ದೊರೆಯುತ್ತಿದ್ದ ಲಂಚದ ಹಣವನ್ನು ದಿನವೂ ಹಂಚಿಕೊಳ್ಳದೆ ವಾರಕ್ಕೊಂದಾವರ್ತಿ ಹಂಚಿಕೊಳ್ಳುವುದೊಳ್ಳೆಯದೆಂದು ಬಗೆದು ಹಾಗೆ ಹೊಸ ವ್ಯವಸ್ಥೆ ಮಾಡಿಕೊಂಡೆವು. ಹಣವನ್ನು ಪ್ರತಿದಿನವೂ ಹಂಚಿಕೊಳ್ಳುತ್ತಿದ್ದಾಗ ಅದು ಚಿಲ್ಲರೆಯಾಗಿ ಖರ್ಚಾಗಿ ಹೋಗುತ್ತಿತ್ತು. ವಾರಕ್ಕೊಂದಾವರ್ತಿ ಹಂಚಿದರೆ ಹತ್ತಿಪ್ಪತ್ತು ರೂಪಾಯಿ ಬಂದು ಯಾವುದೊಂದು ವಸ್ತು ಕೊಳ್ಳಲು ಸಾಧ್ಯವಾಗುತ್ತಿತ್ತು. ತಮ್ಮ ಮಕ್ಕಳ ಲಗ್ನಕ್ಕೆ ಅವಶ್ಯವಿದ್ದ ಪಾತ್ರೆಗಳು, ಮಂಚಗಳು, ಹಾಸಿಗೆಗಳು ಮೊದಲಾದ ಸಾಮಾನು ಸಂಗ್ರಹಿಸತೊಡಗಿದರು ಜಮಾದಾರರು. ಅವರ ಮನೆಯಲ್ಲಿ ನನ್ನ ಸಲಿಗೆಯೂ ಹೆಚ್ಚುತ್ತ ಬಂತು. ಜಮಾದಾರರ ಹೆಂಡತಿಯೇ ನನ್ನ ಕೋಣೆಗೆ ಸಗಣಿ ಸಾರಿಸಿ ಕೊಡುತ್ತಿದ್ದರು. ನಾನು ಬಟ್ಟೆ ತೊಳೆಯುತ್ತಿದ್ದುದನ್ನು ಕಂಡರೆ ಅವುಗಳನ್ನು ಕಸಿದುಕೊಂಡು ಹೋಗಿ ತಾವೇ ಶುಭ್ರವಾಗಿ ಒಗೆದು ತಂದುಕೊಡುತ್ತಿದ್ದರು. ನಾನೂ ಅವರ ಮನೆಯವನಂತೆಯೆ ಆಗಿಬಿಟ್ಟೆ. ಜಮಾದಾರರೂ ನಾನೂ ಒಂದೇ ಕಡೆ ಕೆಲಸ ಮಾಡುತ್ತಿದ್ದೆವಾದುದರಿಂದ ನಮ್ಮಿಬ್ಬರ ಸಲಿಗೆಯನ್ನು ಯಾರೂ ಅಪಾರ್ಥಕ್ಕೊಳಗುಮಾಡಲಿಲ್ಲ.

ಅಂದು ನಾನು ರೋಶನಳನ್ನು ಅವರ ಪಡಸಾಲೆಯಲ್ಲಿ ಹಿಡಿದು ಮುದ್ದಿಟ್ಟುದನ್ನು ಅವಳ ತಂಗಿ ಅಮಿನಾ ಕದ್ದು ನೋಡಿದಳಂತೆ. ಅಕ್ಕ ಒಳಗೆ ಹೋಗುತ್ತಲೂ ಅವಳನ್ನು ಚಿವುಟಿದಳಂತೆ. ತಂಗಿಯು ಕಾಲಿಗೆ ಬಿದ್ದು, ಆ ಸಂಗತಿಯನ್ನು ತಂದೆತಾಯಿಗಳಿಗೆ ತಿಳಿಸಬಾರದೆಂದು ಬೇಡಿಕೊಂಡಳು ರೋಶನ್. ಅಮಿನಾ ಕೂಡ ಅಲ್ಲಿಗೇ ಸುಮ್ಮನಾದಳು. ಆ ವಿಷಯ ಗೊತ್ತಾಗುತ್ತಲೂ ನನಗೆ ಗಾಬರಿಯಾಗದಿರಲಿಲ್ಲ. ಅಮಿನಾ ಇನ್ನೂ ಹುಡುಗಿ. ಅವಳ ಬಾಯಲ್ಲಿ ಮಾತು ನಿಲ್ಲುವುದು ಕಠಿನವೇ ಸರಿ. ಒಂದು ಸಮಯ ಅವಳು ತಾಯಿಯೆದುರಿಗೆ ಎಲ್ಲವನ್ನೂ ಹೇಳಿಬಿಟ್ಟರೇನು ಗತಿ? ಇದನ್ನು ತಪ್ಪಿಸಲು ಉಪಾಯವೇನು? ಅಮಿನಾಳನ್ನೂ ನನ್ನ ಕಿಸೆಗೆ ಸೇರಿಸಿಕೊಂಡುಬಿಡಬೇಕು. ಅವಳೂ ಹರೆಯದ ಹುಡುಗಿ. ಅಕ್ಕನ ಪ್ರಣಯದಾಟವನ್ನು ನಿರೀಕ್ಷಿಸುತ್ತಿದ್ದ ಅವಳಲ್ಲೂ ಆ ಬಯಕೆಯುತ್ಪನ್ನವಾಗಿಬಹುದು. ಇರಲಿ ನೋಡೋಣ....

ಒಂದು ದಿನ ಜಮಾದಾರರು ಊರಲ್ಲಿರಲಿಲ್ಲ. ಅಪರಾಧವೊಂದನ್ನು ಕುರಿತು ವಿಚಾರಣೆ ನಡಸಲು ಹಳ್ಳಿಗೆ ಹೋಗಿದ್ದರು. ಆ ದಿನ ಮಧ್ಯಾಹ್ನ ನಾನು ಕೋಣೆಗೆ ಬಂದು ನನ್ನ ದೋತರನ್ನು ಹುಡುಕಿದೆ. ಅದು ಜಮಾದಾರರ ಮನೆಯಲ್ಲಿದ್ದುದು ನೆನಪಾಯಿತು. ಹಿತ್ತಲಬಾಗಿಲಲ್ಲಿ ನಿಂತು ಕರೀಮನನ್ನು ಕೂಗಿದೆ. ನನ್ನ ಕೂಗು ಕೇಳಿ ಹೊರಗೆ ಬಂದವಳು ಅಮಿನಾ.

"ನನ್ನ ದೋತರ ತಗೊಂಡು ಬಾ ಅಮಿನಾ," ಎಂದೆ.

ಅವಳು ದೋತರ ಹಿಡಿದುಕೊಂಡು ನನ್ನ ಕೋಣೆಗೆ ಬಂದೊಡನೆಯೆ ಅವಳನ್ನು ಹಿಡಿದುಕೊಂಡು,

"ಏ ಕಳ್ಳೀ, ನಿಮ್ಮಕ್ಕನನ್ನು ಯಾಕೆ ಚಿವುಟಿದೆ? ಅವಳು ನಿನ್ನ ಕಾಲು ಹಿಡಿಯಬೇಕೇನು?" ಎನ್ನುತ್ತಾ ತಮಾಷೆಗಾಗಿ ಅವಳ ಕಿವಿ ಹಿಂಡಿದೆ.

ಅವಳು ನಗುನಗುತ್ತಾ ಮಾತನಾಡಿದಳು.

"ಸಾಕು ಬಿಡಿರಿ. ನನಗೆಲ್ಲಾ ಗೊತ್ತು."

"ಏನು ಗೊತ್ತು?"

"ಎಲ್ಲಾ ಎಲ್ಲಾ ಗೊತ್ತು. ರೋಶನ್ ರಾತ್ರಿ ಇಲ್ಲಿ ಬರೋದು ನಾನು ನೋಡಿದ್ದೀನಿ."

ನನಗೆ ಮತ್ತೆ ದಿಗಿಲಾಗದಿರಲಿಲ್ಲ.

"ಅಕ್ಕ ನನ್ನ ಮುಂದೆ ಎಲ್ಲಾ ಒಪ್ಪಿಕೊಂಡಿದ್ದಾಳೆ."

"ಸರಿ. ನೀನೇನು ಮಾಡಬೇಕೆಂದು ಮಾಡಿದ್ದೀ? ಎಲ್ಲಾ ಡಂಗುರ ಹೊಡೆಯುತ್ತೀಯಾ?"

"ನಾನ್ಯಾಕೆ ಡಂಗುರ ಹೊಡೆಯಲಿ? ಎಷ್ಟಾದರೂ ನನ್ನಕ್ಕ ಅಲ್ಲವೇ ಅವಳು!"

ಆಗ ನನಗೆ ಧೈರ್ಯ ಬಂದಿತು. ಅಮೀನಾಳನ್ನು ತಬ್ಬಿಕೊಂಡು ಮುದ್ದಿಸಿದೆ. ಅವಳೂ ಅದಕ್ಕಾಗಿಯೆ ಕಾದಿದ್ದಂತೆ ತೋರಿತು. ಆಗಲೆ ಅವಳೂ ನನ್ನವಳಾದಳು.

"ಇದನ್ನೆಲ್ಲಾ ನಾನು ರೋಶನ್‌ಗೆ ಹೇಳುತ್ತೇನೆ. ನೋಡು ಆಮೇಲೆ ನಿನ್ನ ಫಜೀತಿ!" ನಾನು ತುಂಟ ನಗು ಬೀರುತ್ತಾ ಹೇಳಿದೆ.

ಅವಳು ಗಾಬರಿಗೊಂಡು ನನ್ನ ಕಾಲುಗಳನ್ನು ಹಿಡಿದುಕೊಂಡಳು.

"ಹಾಗೆ ಮಾಡಬೇಡಿರಿ ದಯಮಾಡಿ. ಅವಳಿಗೂ ನನಗೂ ಜಗಳವಾಗುತ್ತದೆ."

ನಾನು ಮುಗುಳ್ನಕ್ಕು ಅವಳ ಕೂದಲು ನೇವರಿಸಿ ಅವಳನ್ನು ಸಂತೈಸಿ ಕಳಿಸಿಕೊಟ್ಟೆ.

ಅಂದಿನಿಂದ ಅಮೀನಾ ಕೂಡ ರೋಶನಳ ಹಾಗೆ ಹಿತ್ತಲಲ್ಲಿ ನಿಂತು ನನ್ನನ್ನು ನೋಡುತ್ತಿದ್ದಳು. ಎಷ್ಟೋ ಸಲ ಇಬ್ಬರೂ ಜತೆಯಾಗಿಯೆ ಅಲ್ಲಿ ನಿಂತುಕೊಂಡಿರುತ್ತಿದ್ದುದೂ ಇತ್ತು. ಇಬ್ಬರಿಗೂ ಪರಸ್ಪರರ ಗುಟ್ಟು ಗೊತ್ತಾಗಿತ್ತು.

ಅಂಚೆಯ ಕಚೇರಿಯಲ್ಲಿ ಕಾರಕೂನನಾಗಿದ್ದ ಯುವಕನೊಬ್ಬನಿಗೆ ರೋಶನಳನ್ನು ಕೊಡುವ ಮಾತಿಗಾರಂಭವಾಯಿತು. ಅವನು ಮ್ಯಾಟ್ರಿಕ್ ಪಾಸುಮಾಡಿದ ಸುಶಿಕ್ಷಿತನಾದುದರಿಂದ ಅವನ ಬೇಡಿಕೆಗಳೂ ಬಹಳವಾಗಿದ್ದುವು. ಒಂದು ಉಲ್ಲನ್ ಸೂಟು, ರೇಶಿಮೆಯ ಶರ್ಟು, ಜರತಾರಿ ರುಮಾಲು, ಉಂಗುರ, ಕೊರಳಿಗೆ ಹಾಕುವ ಬಂಗಾರ ಚೈನು, ಮಂಚ, ಗಾದಿ, ರಗ್ಗು ಇವುಗಳಲ್ಲದೆ ಪಾತ್ರೆಗಳನ್ನೂ ಕೊಡಬೇಕಾಗುತ್ತಿತ್ತು ಅವನಿಗೆ. ಅವನು ತಮ್ಮ ಯೋಗ್ಯತೆಗೆ ಮೀರಿದ ವರನೆಂದು ಜಮಾದಾರರ ಅಭಿಪ್ರಾಯ. ಆದರೆ, ಸುಶಿಕ್ಷಿತನಾದುದರಿಂದ ಅವನನ್ನೇ ನಾವು ಪಾಸುಮಾಡಿದೆವು.

ಇನ್ನು ಅಮೀನಳಿಗೊಬ್ಬ ವರನನ್ನು ಹುಡುಕಬೇಕು. ರೋಶನಳಂತೆ

ಅವಳೂ ಕಣ್ಣು ಮೂಗಿನಿಂದ ಲಕ್ಷಣವಾಗಿದ್ದಳಾದರೂ ಮೈಬಣ್ಣ ಸ್ವಲ್ಪ ಕಪ್ಪು-ತಂದೆಯ ಹಾಗೆ. ಆದರೂ ಅಂಗಸೌಷ್ಠವದಲ್ಲಿ ರೋಶನಳಿಗಿಂತ ಇವಳೇ ಮೇಲು. ಸರಿ. ಅವಳಿಗೂ ವರ ಹುಡುಕತೊಡಗಿದೆವು.

ಅದೇ ನಗರದಲ್ಲಿ ಒಬ್ಬ ಪಾತ್ರೆಗಳ ವ್ಯಾಪಾರಿ. ಅವನಿಗೆ ಒಬ್ಬನೇ ಒಬ್ಬ ಮಗ. ಅವನಿಗೂ ಮದುವೆಯ ವಯಸ್ಸಾಗಿತ್ತು. ಅವನೇನು ಕಲಿತವನಲ್ಲ. ಏನೋ ಸ್ವಲ್ಪ ಓದಲು ಬರೆಯಲು ಕಲಿತು ವ್ಯಾಪಾರದಲ್ಲಿ ತಂದೆಗೆ ನೆರವಾಗುತ್ತಿದ್ದ. ಒಂದು ದಿನ ಊಟ ಮುಗಿಸಿಕೊಂಡು ನಾನು ಅವರ ಅಂಗಡಿಗೆ ಹೋಗಿ ಆ ವ್ಯಾಪಾರಿಯೆದುರಿಗೆ ಅವನ ಮಗನ ಮದುವೆಯ ಮಾತು ಆರಂಭಿಸಿದೆ. ವಧುವನ್ನು ಹುಡುಕುತ್ತಿರುವುದಾಗಿ ಅವನೂ ಹೇಳಿದ. ನಾನು ಜಮಾದಾರರ ಮಗಳ ಮಾತು ತೆಗೆದೆ.

"ನನ್ನ ಮಗನೇನೂ ಕಲಿತವನಲ್ಲ ಸರದಾರರೆ. ಅಲ್ಲದೆ ನಾವು ವ್ಯಾಪಾರಿಗಳು. ಪೋಲೀಸ್ ಅಧಿಕಾರಿಗಳ ಸಂಬಂಧ ಅಂದರೆ ನಮಗೆ ಸ್ವಲ್ಪ ಭಯವೇ."

"ಜಮಾದಾರರು ಬೇರೆ ಅಧಿಕಾರಿಗಳಂಥವರಲ್ಲ, ಬಹಳ ಸಾಧು ಸ್ವಭಾವದವರು. ಅವರೊಡನೆ ಸಂಬಂಧ ಬೆಳಸಲು ಯಾವ ಭಯವೂ ಇರಬೇಕಾಗಿಲ್ಲ," ಎಂದು ನಾನು ಅವನನ್ನು ಸಮಾಧಾನಗೊಳಿಸಿದೆ.

ಒಂದು ಒಳ್ಳೆಯ ದಿನ ನೋಡಿ ಅವನು ವಧುವನ್ನು ನೋಡಲು ಬಂದ. ಅಮೀನಳನ್ನು ನೋಡಿದವರಾರೂ ಅವಳು ಬೇಡವೆನ್ನುವಂತಿರಲಿಲ್ಲ. ಹುಡುಗಿಯನ್ನು ಅವನು ಒಪ್ಪಿದ. ವಿವಾಹದ ನಿಶ್ಚಯವೂ ಆಗಿಹೋಯಿತು. ಇವರ ಬೇಡಿಕೆ ಮಾತ್ರ ವಿಶೇಷವಾಗಿರಲಿಲ್ಲ. "ಅಲ್ಲಾ ಅನುಕೂಲ ಮಾಡಿದರೆ ನಮ್ಮ ವ್ಯಾಪಾರದಲ್ಲಿ ಬೇಕಾದ್ದು ಆದೀತು," ಎಂದು ಆ ವ್ಯಾಪಾರಿಯ ವಿಚಾರ. ಅಂಚೆಯ ಕಚೇರಿಯ ಕಾರಕೂನನದಾದರೋ ತದ್ವಿರುದ್ಧ ಸ್ವಭಾವ. ತಾನು ಕಲಿತವನೆಂಬ ಜಂಬ ಅವನಿಗೆ. ಎಷ್ಟು ಸಾಧ್ಯವೋ ಅಷ್ಟನ್ನೂ ಮಾವನಿಂದ ಸುಲಿಯಬೇಕೆಂದು ಅವನ ವಿಚಾರ.

ಮದುವೆಗಳೇನೋ ಗೊತ್ತಾದುವು. ಮೊದಲು ಹಣ ಬೇಕಲ್ಲವೆ? ಜಮಾದಾರರಿಗೆ ಅದರದೇ ಚಿಂತೆಯಾಯಿತು. ನಾವು ಎಷ್ಟೇ ಆಶ್ವಾಸನ ಕೊಟ್ಟರೂ ಅವರಿಗೆ ಧೈರ್ಯವಿರಲಿಲ್ಲ. ಇನ್ನು ಮೂರು ತಿಂಗಳಿಗೆ ಮದುವೆ.

ಎರಡು ಮದುವೆಗಳಿಗೆ ಸೇರಿ ಸುಮಾರು ಒಂದು ಸಾವಿರವಾದರೂ ಬೇಕಾಗ ಬಹುದೆಂದು ನಮ್ಮ ಅಂದಾಜು. ಅಷ್ಟು ಹಣ ಸಿಗಬಹುದಾದ ಖಟ್ಲೆಯನ್ನೇ ಕಾದುಕೊಂಡು ಕುಳಿತೆವು.

ಕಲಿತ ಗಂಡ ಸಿಕ್ಕುವನೆಂದು ರೋಶನಳಿಗೇನೋ ತೃಪ್ತಿಯಾಗಿತ್ತು. ಅಮಿನಾನಳಿಗೆ ಮಾತ್ರ ಸಮಾಧಾನವಿರಲಿಲ್ಲ. ಅವಳಿಗೂ ಕಲಿತ ಗಂಡನನ್ನು ಹುಡುಕಿಕೊಡಲಿಲ್ಲವೆಂದು ನನ್ನ ಮೇಲೆ ಸಿಟ್ಟು ಮಾಡಿಕೊಂಡಿದ್ದಳಾಕೆ. ಅವಳಿಗಿಂತ ರೋಶನಳೇ ನನಗೆ ಹೆಚ್ಚು ಪ್ರೀತಿಯವಳೆಂದು ಅವಳ ವಾದ.

"ನೋಡು ಅಮಿನಾ. ನಿನ್ನ ಗಂಡ ಕಲಿಯದಿದ್ದರೇನಾಯಿತು? ನೌಕರಿ ಮಾಡುವವನು ಯಾವಾಗಲೂ ಗುಲಾಮ. ನಿನ್ನ ಗಂಡ ವ್ಯಾಪಾರಿ, ತನ್ನಿಷ್ಟಕ್ಕೆ ತಾನು ಸ್ವತಂತ್ರ, ತನ್ನಿಚ್ಛೆ ಬಂದಂತೆ ಮಾಡಬಹುದು. ಸರಕಾರಿ ನೌಕರನಿ ಗಾದರೋ ಮನೆಗೆ ಬರಲಿಕ್ಕೂ ಅಧಿಕಾರಿಗಳ ಅಪ್ಪಣೆ ಬೇಕು," ಎಂದು ವಾದಿಸಿ ನಾನು ಅವಳನ್ನು ಸಮಾಧಾನಪಡಿಸಲು ಯತ್ನಿಸಿದೆ. ಆದರೂ ಅಮಿನಾ ನನ್ನ ವಾದವನ್ನೊಪ್ಪಿಕೊಳ್ಳಲಿಲ್ಲ. "ಸರಕಾರಿ ನೌಕರಿಯಂಥ ಕೆಲಸ ಇನ್ನೊಂದಿಲ್ಲ," ಎಂದೇ ಅವಳ ಅಭಿಪ್ರಾಯ.

ಒಂದು ದಿನ ನಾಟಕಕ್ಕೆ ಹೋಗಿದ್ದಾಗ ಮಲಿಕಾಳ ಜತೆಗೆ ಈ ವಿಷಯ ಪ್ರಸ್ತಾಪಿಸಿದೆ. ಅವಳು ಬಹಳ ಜಾಣೆ. "ಅಮಿನಾ ಇನ್ನೂ ಚಿಕ್ಕ ಹುಡುಗಿ. ಪ್ರಪಂಚದ ಅನುಭವವಿಲ್ಲ. ಗಂಡ ಎಂಥವನಿದ್ದರೆ ಒಳ್ಳೆಯದೆಂಬುದು ಅವಳಿಗೆ ಹ್ಯಾಗೆ ಗೊತ್ತಾದೀತು! ಕಲಿತವರ ಸ್ವಭಾವವನ್ನು ಅವಳೇನು ಬಲ್ಲಳು. ಪೋಸ್ಟಾಫೀಸಿನ ಕಾರಕೂನನಿಗಿಂತ ಈ ವ್ಯಾಪಾರಿಯೇ ಮೇಲು. ಅವನಿಗೂ ಇವಳಿಗೂ ಭೆಟ್ಟಿಮಾಡಿಸಿದರೆ ಎಲ್ಲಾ ನೆಟ್ಟಗಾದೀತು," ಎಂದು ಸೂಚಿಸಿದಳು ಮಲಿಕಾ. ನಾಟಕಗೃಹದಲ್ಲಿಯೆ ಅವರ ಭೆಟ್ಟಿಯ ಸಂದರ್ಭವನ್ನೊದಗಿಸುವು ದೆಂದೂ ನಿಶ್ಚಯವಾಯಿತು.

ಒಂದು ದಿನ ಅವರಿಬ್ಬರೂ ನಾಟಕ ನೋಡಲು ಬರುವಂತೆ ವ್ಯವಸ್ಥೆ ಮಾಡಿದೆವು. ಮಲಿಕಾಳ ಕೋಣೆಯಲ್ಲಿ ಅವಳು, ನಾನು, ಆ ವ್ಯಾಪಾರಿ ಯುವಕ, ಅಮಿನಾ ನಾಲ್ವರೇ ಕೂಡಿದೆವು – ಚಹಕ್ಕಾಗಿ. ತಾವು ವಧೂವರರೆಂಬ ವಿಚಾರ ಅವರಿಬ್ಬರಿಗೂ ಗೊತ್ತಿರಲಿಲ್ಲ. ಅಮಿನಾನಳನ್ನು ಕಂಡೊಡನೆ ಆ ಯುವಕನ ದೃಷ್ಟಿ ಅವಳಲ್ಲಿಯೆ ನೆಟ್ಟಿತ್ತು. ಅಮಿನಾ ಕೂಡ ಆಗಾಗ ಅವನನ್ನೇ ಕದ್ದು ನೋಡು

ತ್ತಿದ್ದಳು. ನಾನು ಮತ್ತು ಮಲಿಕಾ ಏನೋ ನೆಪ ತೆಗೆದು ಹೊರಗಡೆ ಜಾರಿಕೊಂಡೆವು. ಅಮಿನಾನಳಿಗೆ ಸಂಕೋಚವೆನ್ನಿಸಿ ಅವಳೂ ನಮ್ಮ ಹಿಂದೆ ಹೊರಟಳು. ಆ ಯುವಕನೂ ಎದ್ದು ನಿಂತ. ನಾವಿಬ್ಬರೂ ನಗುತ್ತಾ ಸತ್ಯ ಸಂಗತಿಯನ್ನು ಅವರಿಗೆ ತಿಳಿಸಿದೆವು. ಆಗ ಮಾತ್ರ ಅಮಿನಾನಾ ತೃಪ್ತಳಾದಂತೆ ಕಾಣಿಸಿತು.

ಸರಿ – ಇನ್ನು ವಿವಾಹ ಸಮಾರಂಭ ನೆರವೇರುವುದೊಂದೇ ಬಾಕಿಯಿತ್ತು. ಅದಕ್ಕಾಗಿ ಹಣವೊದಗಿಸಿಕೊಳ್ಳಬೇಕು. ಅದಕ್ಕೂ ಅನುಕೂಲವಾದ ಸಮಯ ಬಂದೊದಗಿತ್ತು. ಇಬ್ಬರು ಅಣ್ಣತಮ್ಮಂದಿರು ಒಂದು ಮನೆಯನ್ನು ಪಾಲು ಮಾಡಿಕೊಳ್ಳುವ ವಿಷಯದಲ್ಲಿ ಜಗಳವಾಡಿದ್ದರು. ಪ್ರಸಂಗ ವಿಕೋಪಕ್ಕೆ ಹೋಗಿ ಹೊಡೆದಾಟವಾಗುವ ಸಂಭವವೂ ಇತ್ತು. ಸೋದರರಲ್ಲೊಬ್ಬ ನಮ್ಮ ಹತ್ತಿರ ಬಂದು, ಆ ಮನೆಯನ್ನು ತನಗೇ ಕೊಡಿಸಿದರೆ ನಮಗೆ ಐದು ನೂರು ರೂಪಾಯಿ ಕೊಡುವುದಾಗಿ ಹೇಳಿದ. ಅಬ್ದುಲ್ ಖಾದರರ ಮೇಲೆ ಕೈಹಾಕಿಯಿಟ್ಟ ಅಲ್ಲಾನೇ ಇವನನ್ನು ಕಳಿಸಿರಬೇಕೆಂದು ನಮ್ಮ ಕಾರಕೂನರಿಗೆನ್ನಿಸಿತು. ತನ್ನ ಅಣ್ಣ ನಮ್ಮ ಹತ್ತಿರ ಬಂದಿದ್ದ ಸುದ್ದಿ ಗೊತ್ತಾಗುತ್ತಲೂ ತಮ್ಮನೂ ಬಂದ. ಅವನಂತೂ ಆ ಮನೆಯಲ್ಲಿ ಕಾಲಿಡುವಂತಿಲ್ಲ, ಅಣ್ಣನೂ ಅಲ್ಲಿ ಕಾಲಿಡದಂತಾಗಬೇಕು ಎಂದು ಇವನ ಹೇಳಿಕೆ. ಅಂತೂ ಅವರಿಬ್ಬರೂ ಆ ಮನೆಯ ಕಡೆ ಸುಳಿಯದಂತೆ ಮಾಡುವುದು ನಮ್ಮ ಕೆಲಸವಾಯಿತು. ಅಣ್ಣನಿಂದ ಐದು ನೂರೂ ತಮ್ಮನಿಂದ ಮೂರು ನೂರೂ ಸಿಗುವ ಹಾಗಿತ್ತು. ನ್ಯಾಯಾಲಯದಲ್ಲಿ ಆ ವ್ಯಾಜ್ಯದ ತೀರ್ಪು ಹೊರಬೀಳುವವರೆಗೆ ಮನೆಯನ್ನು ನಮ್ಮ ವಶದಲ್ಲಿರಿಸಿಕೊಂಡೆವು. ಅವರಿಬ್ಬರೂ ಅಲ್ಲಿಗೆ ಹೋಗದಂತೆ ನ್ಯಾಯಾಲಯ ನಿರ್ಬಂಧ ವಿಧಿಸಿತು. ಕೊಂಚವೂ ಶ್ರಮವಿಲ್ಲದೆ ನಮ್ಮ ಕೈಗೆ ಎಂಟುನೂರು ರೂಪಾಯಿ ಬಂದುವು. ಅವುಗಳನ್ನೆಲ್ಲ ಜಮಾದಾರರು ಸ್ವೀಕರಿಸುವಂತೆ ಮಾಡಲು ಮೂರು ದಿನ ಯತ್ನಿಸಬೇಕಾಯಿತು. "ನನ್ನ ಪಾಲಿಗೆ ಬರುವಷ್ಟೇ ಸಾಕು. ನನಗೆ ಹೆಚ್ಚು ಬೇಡ," ಎಂದು ಅವರು ವಾದಿಸುತ್ತಿದ್ದರು. "ಅಂಥ ಪ್ರಸಂಗ ಬಂದಾಗ, ನಮಗೂ ದುಡ್ಡು ಬೇಕಾದಾಗ ನಿಮ್ಮ ಪಾಲನ್ನು ನಾವೇ ತೆಗೆದುಕೊಳ್ಳುತ್ತೇವೆ," ಎಂದು ಉತ್ತರವಿತ್ತು ನಾವು ಅವರನ್ನು ಸಮಾಧಾನಗೊಳಿಸಿದೆವು. ಆ ಹಣವನ್ನು ನನ್ನ ಹತ್ತಿರವೇ ಇಟ್ಟುಕೊಂಡು ನಾನೇ ಎಲ್ಲ ವ್ಯವಸ್ಥೆ ಮಾಡಬೇಕೆಂದು ಜಮಾದಾರರು ಹೇಳಿದರು.

ನಾನು ಅವರ ಮನೆಗೆ ಹೋಗಿ ಅವರ ಹೆಂಡತಿಯನ್ನು ಕಂಡು ಲಗ್ನಕ್ಕೆ ಬೇಕಾಗುವ ಸಾಮಾನುಗಳ ಯಾದಿ ತಯಾರಿಸಿದೆ. ಅಳಿಯಂದಿರಿಗಾಗಿ ಬಟ್ಟೆ ಬರೆ ಖರೀದಿಮಾಡುವ ಕೆಲಸವೂ ನನ್ನ ಪಾಲಿಗೇ ಬಂತು. ಆ ವರ ಮಹಾಶಯರನ್ನೇ ಬಟ್ಟೆಯಂಗಡಿಗೆ ಕರೆದೊಯ್ದು ಅವರ ಮನಸ್ಸಿಗೊಪ್ಪುವ ಬಟ್ಟೆಗಳನ್ನೇ ಖರೀದಿಮಾಡಿದುದಾಯಿತು. ಅವರು ಬಯಸಿದ "ವೆಸ್ಟ್ ಎಂಡ್ ವಾಚು"ಗಳನ್ನು ಕೊಡಿಸಿದುದಾಯಿತು. ಅದರಂತೆಯೆ ಹಾಸಿಗೆ, ಪಾತ್ರೆ ಮೊದಲಾದುವುಗಳನ್ನು ಅವರೇ ಆರಿಸಿದರು. ಉಂಗುರಗಳೂ, ಬಂಗಾರದ ಚೈನುಗಳೂ ಸಿದ್ಧವಾದುವು. ಎರಡು ಮಂಚಗಳನ್ನು ಜಮಾದಾರರು ಆ ಮೊದಲೇ ಕೊಂಡಿಟ್ಟುಕೊಂಡಿದ್ದರು. ಅಳಿಯಂದಿರಿಂದ ಯಾವ ತಕರಾರೂ ಬರಬಾರದೆಂದು ಜಮಾದಾರರ ಆಶಯ. ಅವರು ಪೋಲೀಸ್ ಸಹಕಾರಿ ಸಂಘದಲ್ಲಿ ಎರಡು ನೂರು ರೂಪಾಯಿ ಸಾಲ ತೆಗೆದು ಅವುಗಳನ್ನು ನನ್ನ ಹತ್ತಿರ ಕೊಟ್ಟಿದ್ದರು. ವರೋಪಚಾರದ ವಸ್ತುಗಳಿಗಾಗಿ ನಾಲ್ಕು ನೂರು ರೂಪಾಯಿ ವೆಚ್ಚವಾಗಿ ಆರು ನೂರು ರೂಪಾಯಿ ಉಳಿದಿದ್ದುವು. ಜಮಾದಾರರ ಹೆಂಡತಿ, ರೋಶನ್, ಅಮೀನಾ ಈ ಮೂವರಿಗೂ ಸೀರೆಗಳನ್ನೂ ಕರೀಮನಿಗೊಂದು ಸೂಟನ್ನೂ ತೆಗೆದುಕೊಂಡೆವು.

ಅಷ್ಟು ಸಾಮಾನುಗಳನ್ನೂ ಸುಂದರ ವಧುವನ್ನೂ ಕೊಡುವ ಮಾವನ ವಿಚಾರವಾಗಿ ಆ ವ್ಯಾಪಾರಿ ಯುವಕನಿಗೆ ವಿಶೇಷ ಆದರವಿತ್ತು, ಅವನ ತಂದೆಗೂ ಅಷ್ಟೆ. ಅಮೀನಳಿಗಾಗಿ ಅವನೂ ಕೆಲವು ಒಡವೆಗಳನ್ನು ಮಾಡಿಸಿದ, ಸೀರೆ ಕುಬುಸಗಳನ್ನು ಖರೀದಿ ಮಾಡಿದ.

ಅಂಚೆಯ ಕಚೇರಿಯ ಕಾರಕೂನನ ತಂದೆತಾಯಿಗಳು ಬಡವರು. ಅವರೂ ಒಳ್ಳೆಯವರೇ. ಆ ಯುವಕನಿಗೆ ಮಾತ್ರ ಬಹಳ ಅಹಂಕಾರ. ವಧುವಿಗೆ ಕೊಡಲು ತಮ್ಮಲ್ಲಿ ಏನೂ ಇಲ್ಲವೆಂದು ಅವನ ತಂದೆತಾಯಿಗಳು ವ್ಯಸನಪಟ್ಟುಕೊಂಡರು. ಆ ಯುವಕನಿಗೆ ಮಾತ್ರ ಆ ಮಾತು ಸರಿಬರಲಿಲ್ಲ. ಅವರು ನಿರ್ಗತಿಕರೆಂದು ನಾವು ತಿಳಿದುಕೊಂಡೆವೇನೊ ಎಂದು ಅವನು ಕೋಪಿಸಿಕೊಂಡ. ಮುಂದೆ ರೋಶನಳನ್ನು ಅವನು ಹೇಗೆ ಬಾಳಿಸುವನೋ ಎಂದು ನಮಗೆ ಚಿಂತೆಯುಂಟಾಗದಿರಲಿಲ್ಲ.

ವಿವಾಹದ ದಿನಗಳು ಸಮೀಪಿಸಿದಂತೆ ಸಿದ್ಧತೆಗಾಗಿ ಅವರ ಮನೆ

ಸಾಲದೆನ್ನಿಸಿತು. ನನ್ನ ಕೋಣೆಯನ್ನೂ ಅವರೇ ಆಕ್ರಮಿಸಿಕೊಂಡರು. ನಾನೂ ಅವರಲ್ಲೊಬ್ಬನಂತಾದೆ. ಜಮಾದಾರರ ಆಪ್ತವರ್ಗದ ಹೆಣ್ಣುಮಕ್ಕಳಿಬ್ಬರು ತಮ್ಮ ಊರುಗಳಿಂದ ಬಂದು ಲಗ್ನದ ಸಿದ್ಧತೆಗೆ ನೆರವಾಗತೊಡಗಿದರು. ಅವರು ಬೇಡಿದ ಸಾಮಾನು ಕೊಡಿಸುವುದು ನನ್ನ ಕೆಲಸ. ಜಮಾದಾರರ ಹೆಂಡತಿಯೂ ಒಳ್ಳೆಯ ಹೆಣ್ಣುಮಗಳು. ಅವಳಿಗೆ ತಾಯಿ ತಂದೆ, ಆಪ್ತೇಷ್ಟರಾರೂ ಇರಲಿಲ್ಲ. ಬಡತನದಲ್ಲಿಯೆ ಮರ್ಯಾದೆಯಿಂದ ಸಂಸಾರ ಸಾಗಿಸಿಕೊಂಡು ಬಂದವಳು. ವಯಸ್ಕರಾಗಿದ್ದ ತನ್ನ ಇಬ್ಬರು ಕುವರಿಯರ ವಿವಾಹವೊದಗಿ ಬಂದುದರಿಂದ ಅವಳ ಆನಂದಕ್ಕೆ ಮಿತಿಯೇ ಇಲ್ಲದಂತಾಗಿತ್ತು. ಅದಕ್ಕೆಲ್ಲ ನಾನೇ ಕಾರಣ ನೆಂದು ಆ ಸರಳ ಹೃದಯದ ತಾಯಿಯ ನಂಬಿಕೆ. "ಭಾಯಿಜಾನ" (ತಮ್ಮ) ಎಂದು ನನ್ನನ್ನಾಕೆ ಸಂಬೋಧಿಸುತ್ತಿದ್ದಳು ಒಂದಾಣೆ ಬೇಕಾದರೂ ಆಕೆ ನನ್ನನ್ನು ಕೇಳುತ್ತಿದ್ದಳು. ಅದನ್ನು ನೋಡಲಾರದೆ ನಾನು, ಒಂದು ನೂರು ರೂಪಾಯಿಗಳನ್ನು ತನ್ನ ಹತ್ತಿರ ಇಟ್ಟುಕೊಂಡು, ಪದೇ ಪದೇ ನನ್ನನ್ನು ಕೇಳುವ ತೊಂದರೆ ತಪ್ಪಿಸಿಕೊಳ್ಳಬೇಕೆಂದು ಹೇಳಿದರೂ ಅವಳು ಒಪ್ಪಲಿಲ್ಲ. "ನೀನೇ ನಮ್ಮ ಖಜಾಂಚಿ," ಎಂದು ನಗುತ್ತಾ ಹೇಳಿ ಆ ಮಾತನ್ನು ಮರೆಯಿಸಿಬಿಡು ತ್ತಿದ್ದಳು.

ಅವರ ಮನೆಯಲ್ಲಿ ಜನದ ಗದ್ದಲ ವಿಶೇಷವಾಗುತ್ತಲೂ ರೋಶನ್, ಅಮಿನಾ, ಕರೀಮ ಮೂವರೂ ನನ್ನ ಕೋಣೆಗೆ ಬರತೊಡಗಿದರು. ರಾತ್ರಿಯ ಬಿಡಾರವೂ ಅಲ್ಲಿಯೆ. ಪಡಸಾಲೆಯಲ್ಲಿ ನನ್ನ ಮಂಚ ಹಾಕಿ, ಉಳಿದ ಸ್ಥಳವನ್ನೆಲ್ಲ ಅವರಿಗೇ ಬಿಟ್ಟುಕೊಟ್ಟೆ. ಕರೀಮನಿಗೆ ನಿದ್ದೆ ಹತ್ತಿದೊಡನೆ ಹುಡುಗಿಯರ ಜತೆ ಹರಟೆಗಾರಂಭವಾಗುತ್ತಿತ್ತು. ಅವರಿಬ್ಬರ ನಡುವೆ ಕುಳಿತು ಅವರನ್ನು ಚೇಷ್ಟೆ ಮಾಡುವುದೇ ನನ್ನ ಉದ್ಯೋಗ. ಅವಳ ಗಂಡನದು ಮೊಂಡ ಮೂಗು, ಇವಳ ಗಂಡನದು ಸೊಟ್ಟ ಕಣ್ಣು–ಎಂದೆಲ್ಲ ಹೇಳಿ ಅವರನ್ನು ನಗಿಸುವುದು.

ಮದುವೆಯ ದಿನವೂ ಬಂದಿತು. ನನ್ನ ಕೋಣೆಯನ್ನು ಅವರಿಗೇ ಒಪ್ಪಿಸಿಬಿಟ್ಟು ನಾನು ಗೆಳೆಯನೊಬ್ಬನ ಕೋಣೆಗೆ ಬಿಡಾರ ಸ್ಥಳಾಂತರಿಸಿದೆ. ಸಾಕಷ್ಟು ವಿಜೃಂಭಣೆಯಿಂದಲೇ ವಿವಾಹಕಾರ್ಯ ಜರಗಿತು. ಹಿಂದೂ ಜನರಿಗಾಗಿ ಪ್ರತ್ಯೇಕವಾಗಿ ಊಟದ ವ್ಯವಸ್ಥೆಯಾಗಿತ್ತು. ಮುಹಮ್ಮದೀಯರಿಗಾಗಿ ಬೇರೆಯೆ.

ನಮ್ಮ ಪರಿಚಿತರೂ ಮಿತ್ರರೂ ಆಗಮಿಸಿದ್ದರು. ಎರಡೂ ನಾಟಕ ಕಂಪನಿಯ ಒಡೆಯರೂ ನಟನಟಿಯರೂ ಬಂದಿದ್ದರು.

ಮಾರನೆಯ ದಿನವೆ ನಿಷೇಕಪ್ರಸ್ತ ಸಮಾರಂಭವೂ ನಡೆದುಹೋಯಿತು. ರೋಶನ್, ಅಮೀನಾ ಇಬ್ಬರೂ ತಮ್ಮ ಗಂಡಂದಿರೊಡನೆ ಸೇರಿದರು. ನನಗೆ ಆನಂದವೂ ಆಯಿತು, ಅಸಮಾಧಾನವೂ ಆಯಿತು.

"ನಿಮ್ಮಿಂದ ನಮ್ಮ ಕುಟುಂಬಕ್ಕಾದ ಉಪಕಾರವನ್ನು ಈ ಜನ್ಮದಲ್ಲೇ ತೀರಿಸುವದು ಸಾಧ್ಯವಿಲ್ಲ," ಎಂದು ಜಮಾದಾರರು ನನ್ನ ಬಗ್ಗೆ ಕೃತಜ್ಞತೆ ವ್ಯಕ್ತಗೊಳಿಸಿದರು.

ಆ ಮಾತು ಕೇಳಿದಾಗ ನನಗೆ ಬಹಳ ನಾಚಿಕೆಯಾಯಿತು. ನಾನು ಬಗೆದ ದ್ರೋಹದ ವಿಚಾರ ಅವರಿಗೇನು ಗೊತ್ತು, ಪಾಪ!

ರೋಶನ್, ಅಮೀನಾ ಇಬ್ಬರೂ ಗಂಡಂದಿರ ಮನೆಗಳಿಗೆ ಹೋದರು. ಕೆಲದಿನಗಳ ತರುವಾಯ ಅವರು ತವರುಮನೆಗೆ ಬಂದಾಗ ಅವರಿಬ್ಬರೂ ಸುಖವಾಗಿದ್ದುದನ್ನು ತಿಳಿದು ನನಗೆ ಹಾಯೆನ್ನಿಸಿತು,

"ಏನೋ ಅವರಿಗೂ ನನಗೂ ಋಣಾನುಬಂಧವಿದ್ದಿತೆಂದು ಕಾಣುತ್ತದೆ. ಕೆಲದಿನ ಕೂಡಿದೆವು, ಆಮೇಲೆ ಮಿತ್ರರಂತೆ ಅಗಲಿದೆವು. ದೇವರು ಅವರನ್ನು ತಣ್ಣಗಿಡಲಿ," ಎಂದು ನಾನು ಮನಃಪೂರ್ವಕವಾಗಿ ಹಾರೈಸುತ್ತಿದ್ದೆ. ಅವರು ತವರುಮನೆಯಲ್ಲಿದ್ದಾಗ, ಮೊದಲಿನಂತೆ ಅವರನ್ನು ನನ್ನ ಕೋಣೆಗೆ ಕರೆಯುವ ಗೋಜಿಗೆ ಹೋಗಲಿಲ್ಲ.

೧೯

ಓಡಿಬಂದ ಹುಡುಗಿಯರು

ಒಂದು ಸಾಯಂಕಾಲ ನಾನು ಬಸ್ ಸ್ಟಾಂಡಿನಲ್ಲಿ ಕುಳಿತುಕೊಂಡಿದ್ದಾಗ ಕಂಡಕ್ಟರನೊಬ್ಬ ಆ ಮಾತು ಈ ಮಾತು ಆಡುತ್ತಾ ಒಬ್ಬ ಡ್ರೈವರನ ಪ್ರಸ್ತಾಪವೆತ್ತಿದ.

"ಅವನು ಗೊತ್ತಿಲ್ಲವೇನ್ರಿ ನಿಮಗೆ? ಬಹಳ ಭಯಂಕರ ಮನುಷ್ಯ."

"ಯಾಕೆ? ಅಂಥಾದ್ದೇನು ಮಾಡಿದ್ದಾನೆ?"

"ನಿಮಗಾಗಲೆ ಗೊತ್ತಾಗಿರಬಹುದು ಅಂತ ನಾನು ತಿಳಿದಿದ್ದೆ. ನೀವೋ ನನ್ನನ್ನೇ ಕೇಳುತೀರಲ್ರೀ?"

"ನಿಮ್ಮಂಥವರೇ ನಮಗೆ ಹೇಳುವವರಲ್ಲವೇನು? ನಮಗಾದರೂ ಗೊತ್ತಾಗುವದು ಹೇಗೆ? ನಾವೇನು ಸರ್ವಾಂತರ್ಯಾಮಿಗಳೇ?"

ಕಂಡಕ್ಟರ್ ನಗುತ್ತಾ ಹೇಳಿದ: "ಅವನು ಇಬ್ಬರು ಹುಡುಗಿಯರನ್ನೋಡಿಸಿಕೊಂಡು ಬಂದಿದ್ದಾನೆ."

ನನ್ನಲ್ಲಿನ ಪೋಲೀಸ್ ಒಮ್ಮೆಲೆ ಜಾಗ್ರತನಾದ.

"ಇಬ್ಬರನ್ನು ಅಂದಿರಾ? ಎಲ್ಲಿಟ್ಟಿದ್ದಾನೆ?"

"ಅಲ್ಲಿ ಆ ಓಣಿಯೈತಲ್ಲಾ, ಅಲ್ಲೇ ಎಲ್ಲೋ ಇಟ್ಟಿರಬೇಕು."

ಸರಿ. ಆ ಹುಡುಗಿಯರನ್ನು ಹುಡುಕುವ ಕೆಲಸಕ್ಕಾರಂಭವಾಯಿತು. ರಾತ್ರಿಯ ಊಟವಾದ ಬಳಿಕ ಸಾದತಖಾನನೂ ನಾನೂ ಕೂಡಿ, ಅವರಿವರನ್ನು ವಿಚಾರಿಸುತ್ತಾ ಆ ಮನೆ ಹುಡುಕಿಕೊಂಡು ಹೋದೆವು. ಆ ಹುಡುಗಿಯರು ಬಾಗಿಲು ಹಾಕಿ ಮಲಗಿಕೊಂಡಿದ್ದರು. ನಾವು ಎಷ್ಟು ಕೂಗಿದರೂ ಬಾಗಿಲು ತೆಗೆಯಲಿಲ್ಲ. ಕೊನೆಗೆ ಸಾದತಖಾನನು ಒಂದು ಉಪಾಯ ಯೋಜಿಸಿ, "ನಾವು ನಿಮ್ಮ ಸಂಗಡ ಮಲಗಲು ಬಂದಿದ್ದೇವೆ. ನಿಮ್ಮ ಡ್ರೈವರನೇ ನಮ್ಮನ್ನು ಕಳಿಸಿದ್ದಾನೆ," ಎಂದು ಹೇಳಿದ.

ಬಾಗಿಲು ತೆಗೆಯಲ್ಪಟ್ಟಿತು.

ಅದೊಂದು ತೀರಾ ಚಿಕ್ಕದಾದ ಮನೆ. ನಡುಮನೆಯಲ್ಲಿ ಚಿಮಣಿದೀಪವೊಂದು ಮಿಣುಕುತ್ತಿತ್ತು. ಅದರ ಸಣ್ಣ ಬೆಳಕಿನಲ್ಲಿ ಆ ಹುಡುಗಿಯರನ್ನು ನೋಡಿದೆವು. ಒಬ್ಬಳಿಗೆ ಇಪ್ಪತ್ತು ವರ್ಷ, ಇನ್ನೊಬ್ಬಳಿಗೆ ಹದಿನೆಂಟು ವರ್ಷವಿರಬಹುದು. ಅಷ್ಟು ರೂಪವತಿಯರೂ ಅಲ್ಲ. ಕುರೂಪಿಯರೂ ಅಲ್ಲ. ಜಮಖಾನವೊಂದನ್ನು ಹಾಸಿಕೊಂಡು ಮಲಗಿಕೊಂಡಿದ್ದರು. ಅದೊಂದು ಜಮಖಾನವನ್ನುಳಿದು ಇನ್ನೇನೂ ಅಲ್ಲಿರಲಿಲ್ಲ. ಅವರನ್ನು ಹಾರಿಸಿಕೊಂಡು ಬಂದಿದ್ದ ಡ್ರೈವರ್ ಆ ದಿನ ಗೊಬ್ಬೂರಿನಲ್ಲಿರಲಿಲ್ಲ. ನಮ್ಮಿಂದ ನಾಲ್ಕೈದು ರೂಪಾಯಿ ಸಿಕ್ಕಿದರೆ ಸಿಗಲೆಂಬುದೇ ಅವರ ವಿಚಾರ. ನಮಗೇನು ಅವರ ಸಹವಾಸದಾಸೆಯಿರಲಿಲ್ಲ. ನಾವು ಅಲ್ಲಿಗೆ ಪೋಲೀಸ್ ಕೆಲಸಕ್ಕಾಗಿಯೆ ಹೋಗಿದ್ದೆವು.

"ನೀವು ಯಾರು, ಯಾವ ಊರವರು ?" ಎಂದು ಆರಂಭಿಸಿದ ಸಾದತ ಖಾನ್.

"ಅದೆಲ್ಲಾ ಯಾಕೆ ನಿಮಗೆ? ಮಲಗುವದಿದ್ದರೆ ಮಲಗಿರಿ. ಇಲ್ಲಾಂದರೆ ಹೊರಟುಹೋಗಿರಿ," ಎಂದು ಗಡುಸಾಗಿಯೆ ಉತ್ತರವಿತ್ತಳು ಹಿರಿಯ ಹುಡುಗಿ.

ಹುಡುಯರಿಗೆ ಗೊತ್ತಾಗದಂತೆ ನಾನು ಸಾದತಖಾನನನ್ನು ದಿಟ್ಟಿಸುತ್ತಾ ಕಣ್ಣು ಮಿಟುಕಿಸಿದೆ. ನಾವು ಪೋಲೀಸರೆಂದು ಹೇಳಿಬಿಟ್ಟಲ್ಲಿ ಕೆಲಸ ಕೆಡುವುದೆಂದು ಅವನಿಗೂ ಆಗಲೆ ಗೊತ್ತಾಗಿತ್ತು. ಹುಡುಗಿಯರ ಸಹವಾಸ. ನಾವು ಅವರೊಡನೆ ಉಪಾಯದಿಂದ ವರ್ತಿಸುವುದು ಅವಶ್ಯವಾಗಿತ್ತು. ಅಂದು ಅವರೊಡನೆ ಮಲಗಿಕೊಳ್ಳದೆ ಬೇರೆ ಮಾರ್ಗವಿರಲಿಲ್ಲ. ಶಿಫಾರಿಗೆ ಐದು

ರೂಪಾಯಿ ಕೊಟ್ಟು ಅಲ್ಲಿಯೆ ಮಲಗಿಕೊಂಡೆವು. ಅವರನ್ನು ರಮಿಸುತ್ತಾ ಆ ಮಾತು ಈ ಮಾತು ತೆಗೆದು ಅವರ ಕಥೆಯನ್ನೆಲ್ಲಾ ತಿಳಿದುಕೊಂಡೆವು.

ಅವರಿಬ್ಬರೂ ಅಕ್ಕತಂಗಿಯರು. ಕಾರವಾರದ ಸಮೀಪದಲ್ಲಿಯದೊಂದು ಹಳ್ಳಿ ಅವರ ಊರು.. ತಂದೆ ಪ್ರಾಥಮಿಕ ಶಾಲೆಯ ಉಪಾಧ್ಯಾಯರು. ಈ ಇಬ್ಬರು ಹುಡುಗಿಯರಲ್ಲದೆ ಅವರಿಗೆ ಇನ್ನೂ ನಾಲ್ವರು ಹೆಣ್ಣು ಮಕ್ಕಳೂ ಇಬ್ಬರು ಗಂಡು ಮಕ್ಕಳೂ ಇದ್ದರು. ಇವರೇ ದೊಡ್ಡವರು. ಲಗ್ನದ ವಯಸ್ಸಾಗಿದ್ದರೂ ವರದಕ್ಷಿಣೆ ತೆರುವ ಶಕ್ತಿ ತಂದೆಗಿರಲಿಲ್ಲವಾದುದರಿಂದ ಇವರಿಗಿನ್ನೂ ಮದುವೆಯಾಗಿರಲಿಲ್ಲ. ಮುದುಕಿಯೊಬ್ಬಳು ಮಧ್ಯಸ್ಥಿಕೆ ವಹಿಸಿ ಆ ಡ್ರೈವರನಿಗೂ ಇವರಿಗೂ ಗಂಟುಹಾಕಿದ್ದಳು.

"ಆ ಡ್ರೈವರ್ ಯಾವ ಊರವನು? ಅವನಿಗೆ ಹೆಂಡಿರು ಮಕ್ಕಳಿದ್ದಾರೇನು?" ಎಂದು ನಾನು ಕೇಳಿದೆ.

ನನ್ನ ಜೊತೆಗೆ ಮಲಗಿಕೊಂಡಿದ್ದ ಹಿರಿಯ ಹುಡುಗಿ ಹೇಳಿದಳು :

"ಏನೋ ಯಾರಿಗೆ ಗೊತ್ತಾಗಬೇಕು? ಅವನಂತೂ ನಮ್ಮಿಬ್ಬರನ್ನೂ ತಾನೇ ಮದುವೆಯಾಗುವದಾಗಿ ಹೇಳಿ ಕರಕೊಂಡುಬಂದ. ಇಲ್ಲಿ ನಮ್ಮ ಗೋಳು ಏನು ಹೇಳೋಣ. ಎರಡು ಹೊತ್ತು ಊಟಕ್ಕೂ ಗತಿಯಿಲ್ಲ."

"ಅವನು ಹಣ ಕೊಡುವದಿಲ್ಲೇನು ನಿಮಗೆ?"

"ಯಾವಾಗಾದರೊಮ್ಮೆ ಎರಡೋ ಮೂರೋ ಕೊಡ್ತಾನೆ. ಅದು ಯಾತಕ್ಕಾದೀತು ಹೇಳಿರಿ. ಹೆಚ್ಚಿಗೆ ಕೇಳಿದರೆ, ಯಾರನ್ನಾದರೂ ಹುಡುಕಿ ಕೊಳ್ಳಿರಿ ಅಂತ ಹೇಳಿ ಹೊರಟುಹೋಗ್ತಾನೆ."

ಆ ಕಥೆ ಕೇಳುತ್ತಾ ನನ್ನ ಕಣ್ಣುಗಳಲ್ಲಿ ನೀರೂರುವಂತಾಗಿತ್ತು. ಅರಿಯದ ಹುಡುಗಿಯರು ದುಡುಕಿ ಕೆಟ್ಟರು. ಇನ್ನು ಅವರ ಗತಿಯೇನು? ಇವರ ತಂದೆಯಂತೂ ಇನ್ನು ಇವರನ್ನು ಮನೆಗೆ ಸೇರಿಸಿಕೊಳ್ಳಲಿಕ್ಕಿಲ್ಲ. ಇವರನ್ನು ಮದುವೆಯಾಗುವುದಕ್ಕೂ ಯಾರೂ ಸಿದ್ಧವಾಗಲಿಕ್ಕಿಲ್ಲ ಮುಂದೆ? ಸೂಳೆಯರ ಬೀದಿಯೇ ಇವರಿಗೂ ಆಶ್ರಯಸ್ಥಾನವಾಗುವುದೇನೊ...

ಇವರನ್ನು ಓಡಿಸಿಕೊಂಡು ಬರುವಲ್ಲಿ ಆ ಡ್ರೈವರನಿಗೆ ಬೇರಾವುದೋ ದುರುದ್ದೇಶವಿರಬಹುದೆಂದು ನನಗೆನ್ನಿಸಿತು. ಹಿರಿಯ ಹುಡುಗಿಯನ್ನು ಕೆಣಕಿ ಕೇಳಿದರೂ ಹೆಚ್ಚಿನ ವಿಷಯವೇನೂ ತಿಳಿಯಲಿಲ್ಲ.

ಸುಮಾರು ಹನ್ನೊಂದು ಗಂಟೆಯ ವೇಳೆಗೆ ನಾವು ಆ ಮನೆಯಿಂದ ಹೊರಟೆವು. ಹತ್ತಿರದಲ್ಲಿಯೆ ಇದ್ದ ಒಂದು ಬೀಡಿ ಅಂಗಡಿಯವನೊಡನೆ ಹರಟುತ್ತಿದ್ದು ಬಹಳ ಎಚ್ಚರಿಕೆಯಿಂದ ಆ ಡ್ರೈವರನ ವಿಷಯ ಪ್ರಸ್ತಾಪಿಸಿದೆವು.

"ಅವನೇ! ಅವನೊಬ್ಬ ಬದ್ಮಾಷ್!" ಎಂದ ಅಂಗಡಿಕಾರ.

"ಹಾ! ಯಾಕೆ?"

"ಯಾಕೆಂದರೆ? ಎಲ್ಲೆಲ್ಲಿಂದಲೊ ಹುಡುಗಿಯರನ್ನೆಬ್ಬಿಸಿಕೊಂಡು ಬಂದು ಒಂದೆರಡು ವಾರ ಆ ಮನೆಯೊಳಗಿಟ್ಟು ಆಮ್ಯಾಲ ಎಲ್ಲಿಗೋ ಕಳಿಸಿಬಿಡ್ತಾನೆ. ಅವನದೇನೋ ಭಯಂಕರ ವ್ಯಾಪಾರವಿರಬೇಕು ಅಂತ ನನಗೆ ಸಂಶಯ."

"ಅವನು ಯಾವ ಊರನವನು? ಹೆಂಡರು ಮಕ್ಕಳಿದ್ದಾರೇನು?"

"ಇದ್ದಾರಂತೆ. ಓರೆಕೋರೆಯೊಳಗೆ. ಇವನು ಇಲ್ಲಿ ಇಂಥಾ ಕೆಲಸ ಮಾಡುತಾನೆ."

"ಇವತ್ತು ರಾತ್ರಿ ಬರಬಹುದೇನು ಅವ?"

"ಬಂದರೂ ಬರಬಹುದು. ಸಾಧಾರಣ ಹನ್ನೆರಡು ಗಂಟೆಗೆ ಬರುತಿರುತಾನೆ ಅವ."

ನಾವು ಪೋಲೀಸ್ ಠಾಣಕ್ಕೆ ಹೋಗಲಿಲ್ಲ. ಆ ರಾತ್ರೆಯೆಲ್ಲಾ ಅದೇ ಓಣಿಯಲ್ಲಿ ಕಾವಲು ಮಾಡಿದೆವು. ಮಧ್ಯರಾತ್ರಿಯ ಸಮಯಕ್ಕೆ ಆ ಡ್ರೈವರನೂ ಬಂದ. ಅವನೊಬ್ಬನೇ ಬಂದಿರಲಿಲ್ಲ. ಅವನೊಡನೆ ಇನ್ನೊಬ್ಬನಿದ್ದ. ಬೆಳಗಾಗುತ್ತಲೂ ಅವರಿಬ್ಬರೂ ಎದ್ದು ಹೊರಗಡೆ ಹೊರಟರು.

ಅಪರಾಹ್ನ ನಾವು ಮತ್ತೆ ಆ ಮನೆಗೆ ಹೋದೆವು. ಹುಡುಗಿಯರಿಬ್ಬರೂ ನಮ್ಮನ್ನು ಉತ್ಸಾಹದಿಂದ ಸ್ವಾಗತಿಸಿದರು. ನಡುಮನೆಯಲ್ಲಿ ಇನ್ನೊಂದು ಹೊಸ ಜಮಖಾನ ಹಾಸಲ್ಪಟ್ಟಿತ್ತು.

"ಇದೇನು, ಜಮಖಾನ ಯಾವಾಗ ತಂದಿರಿ?"

"ಮುಂಜಾನೆ. ನೀವು ನಿನ್ನೆ ಕೊಟ್ಟ ಐದು ರೂಪಾಯಿ ಇದಕೆ ಹೋಯಿತು."

"ಏನಡ್ಡಿಯಿಲ್ಲ. ಇದನ್ನು ತಂದದ್ದೂ ಒಳ್ಳೆಯದೇ ಆಯಿತು."

ಆ ದಿನ ನಾವು ಅವರಿಗೆ ಹತ್ತು ರೂಪಾಯಿ ಕೊಟ್ಟು, ಅಲ್ಲಿಯೇ ಮಲಗಿಕೊಂಡಿದ್ದು, ಡ್ರೈವರನ ವಿಚಾರ ಮಾತು ತೆಗೆದೆವು.

"ಅವ ಬಂದಿದ್ದನಲ್ಲಾ ನಿನ್ನೆ ನೀವು ಹೋದಮೇಲೆ. ಯಾರೋ ಒಬ್ಬ ಮುಂಬಯಿಯವನನ್ನು ಕರೆದುತಂದಿದ್ದ."

ಮುಂಬಯಿಯವನೆನ್ನುತ್ತಲೂ ನಮಗೆ ಆ ಅಪರಾಧದ ಸುಳಿವು ಹತ್ತಿದಂತಾಯಿತು.

"ಓ! ಮುಂಬಯಿಯವನೇ! ಏನು ಹೇಳಿದರು ?"

"ಅವನು ನಮ್ಮಿಬ್ಬರನ್ನೂ ಮುಂಬಯಿಗೆ ಕರೆದುಕೊಂಡು ಹೋಗುತ್ತಾನಂತೆ. ನನ್ನನ್ನು ಅವನೇ ಇಟ್ಟುಕೊಂಡು ತಂಗಿಗೆ ಇನ್ನೊಬ್ಬನನ್ನು ಗಂಟು ಹಾಕುತ್ತಾನಂತೆ. ಪ್ರತಿ ತಿಂಗಳೂ ಮೊದಲನೇ ತಾರೀಖಿಗೆ ಒಬ್ಬೊಬ್ಬರಿಗೂ ಐವತ್ತು ರೂಪಾಯಿ ಕೊಡುತ್ತಾರಂತೆ."

"ಐವತ್ತು ರೂಪಾಯಿ ಅಂದರೆ ಸಣ್ಣ ಮಾತೇ! ಅವನು ಬಹಳ ಶ್ರೀಮಂತನಿರಬೇಕಲ್ಲ!"

"ಮುಂಬಯಿಯಲ್ಲಿ ಅವರದು ಬಟ್ಟೆಯಂಗಡಿಯಿದೆಯಂತೆ. ಸಾಹುಕಾರನೇ ಇರಬೇಕು. ನಿನ್ನೇನೆ ನಮಗಿಬ್ಬರಿಗೂ ಐವತ್ತೈವತ್ತು ರೂಪಾಯಿ ಕೊಟ್ಟು ಹೋಗಿದ್ದಾನೆ."

ಅವನ ವ್ಯಾಪಾರವೆಂಥದೆಂಬುದು ಆಗ ನನಗೆ ಗೊತ್ತಾಯಿತು. ಅಜ್ಞ ಹಾಗೂ ಬಡ ಹುಡುಗಿಯರನ್ನು ಅಡ್ಡದಾರಿಗೆಳೆದು ಗೊಬ್ಬೂರಿಗೆ ಕರೆದು ತಂದು ಮುಂಬಯಿಯ ಸೂಳೆಯರ ಪೇಟೆಗೆ ಕಳಿಸಿ ಲಾಭ ಪಡೆಯುವ ಅಂಥ ವ್ಯಾಪಾರಿಗಳ ವಿಷಯ ನಮಗೆ ಗೊತ್ತಿದ್ದುದೇ ಆಗಿತ್ತು. ಇದುವರೆಗೂ ಅವರು ನಮ್ಮ ಕೈಗೆ ಸಿಕ್ಕಿಬಿದ್ದಿರಲಿಲ್ಲ. ಇವನನ್ನು ಮಾತ್ರ ಬಿಡಬಾರದೆಂದು ನಿಶ್ಚಯಿಸಿಕೊಂಡು, ಆ ಅಕ್ಕತಂಗಿಯರನ್ನು ನಾವೇ ಇಟ್ಟುಕೊಳ್ಳುವುದಾಗಿಯೂ ಅವರ ಎಲ್ಲಾ ಖರ್ಚನ್ನು ನೋಡಿಕೊಳ್ಳುವುದಾಗಿಯೂ ಹೇಳಿದೆವು.

"ನಾವು ಲಗ್ನವಾಗಬೇಕು. ಮುಂಬಯಿಯವ ಲಗ್ನವಾಗುವೆನೆಂತ ಹೇಳಿದ್ದಾನೆ."

"ಅದೇನು ದೊಡ್ಡದು ಬಿಡಿರಿ ನಾವೂ ಲಗ್ನವಾಗುತ್ತೇವೆ."

"ನಿಮ್ಮ ಮಾತು ನಂಬುವದಾದರೂ ಹ್ಯಾಗೆ ?"

"ನಂಬಿದರೆ ನಂಬಿರಿ, ಬಿಟ್ಟರೆ ಬಿಡಿರಿ. ನಾವಂತೂ ಮೋಸ ಮಾಡು ವವರಲ್ಲ. ಇನ್ನೊಂದು ತಿಂಗಳೊಳಗಾಗಿ ಮದುವೆ ಮುಗಿಸಿಬಿಡೋಣ. ಈಗ ಆ ಡ್ರೈವರಿಗೂ ಮುಂಬಯಿಯವನಿಗೂ ಏನೂ ಹೇಳಬೇಡಿರಿ."

ಆ ರಾತ್ರಿಯೂ ನಾವು ಅಲ್ಲಿಯೇ ವಸತಿ ಮಾಡಿದೆವು. ಮುಂಬಯಿ ಯವನು ಬಂದು ಹೊರಡಲು ಹೇಳಿದರೆ ಇನ್ನೊಂದು ದಿನ ತಡೆಯುವಂತೆ ಹೇಳಿ, ಅವನನ್ನು ಪೇಟೆಗೆ ಕರೆದೊಯ್ದು ತಮಗೆ ಬೇಕಾಗುವ ಸೀರೆ ಕುಬುಸ ಕೊಂಡು ಕೊಳ್ಳಬೇಕೆಂದು ಅವರಿಗೆ ಸೂಚಿಸಿದೆವು.

ಮಾರನೆಯ ದಿನ ಸಾದತಖಾನ್ ಆ ಓಣಿಯಿಂದ ಕದಲದೆ ಅಲ್ಲಿಯೆ ಸುತ್ತಾಡಿಕೊಂಡಿದ್ದವನು, ಮುಂಬಯಿಯ ಆಸಾಮಿ ಆ ಮನೆಗೆ ಬಂದಾಗ ಅವನನ್ನು ಗುರುತಿಸಿ, ಅವನು ಮತ್ತೆ ಹೊರಬಂದ ಬಳಿಕ ಅವನನ್ನು ಹಿಂಬಾಲಿಸಿ ಕೊಂಡು ಹೋಗಿ ಅವನು ಇಳಿದುಕೊಂಡಿದ್ದ ಹೋಟಲು ಯಾವುದೆಂಬುದನ್ನು ತಿಳಿದುಕೊಂಡು ಬಂದ. ಒಡನೆಯೆ ಫೌಜದಾರರಿಗೆ ಆ ವಿಷಯವನ್ನೆಲ್ಲ ವರದಿ ಮಾಡಿದೆವು. ಅವರು ಒಂದು ನಿಮಿಷವೂ ವಿಲಂಬ ಮಾಡದೆ ಅವನನ್ನು ಬಂಧಿಸಲು ಹೊರಟರು. ನಾವೂ ಅವರನ್ನು ಹಿಂಬಾಲಿಸಿದೆವು.

ಮುಂಬಯಿಯ ಗೃಹಸ್ಥ ಕೊಂಚವೂ ಗಲಾಟೆ ಮಾಡಲಿಲ್ಲ. ಅವನ ಟ್ರಂಕಿನಲ್ಲಿ ಅನೇಕ ಹುಡುಗಿಯರ ಭಾವಚಿತ್ರಗಳೂ, ವಿಳಾಸಗಳೂ ದೊರೆತುವು. ಅವನನ್ನು ಬಂಧಿಸಿ ಕಚೇರಿಗೆ ಸಾಗಿಸಲಾಯಿತು. ಆ ಹುಡುಗಿಯರನ್ನು "ಮಹಿಲಾಶ್ರಮ"ಕ್ಕೆ ಕಳುಹಿಸಲಾಯಿತು. ಆ ಡ್ರೈವರನನ್ನೂ ಬಂಧಿಸ ಲಾಯಿತು. ಕೂಡಲೆ ಹೊರಟು ಬರುವಂತೆ ಆ ಹುಡುಗಿಯರ ತಂದೆಗೆ ತಂತಿ ಕೊಡಲಾಯಿತು. ಮಾರನೆಯ ದಿನವೆ ಆ ಬಡ ಉಪಾಧ್ಯಾಯ ಕಂಬನಿಗಳ ನ್ನುದುರಿಸುತ್ತಾ ಕಚೇರಿಗೆ ಬಂದ.

ಇನ್ನೂ ಅಲ್ಪ ವಯಸ್ಕಳಾಗಿದ್ದ ಚಿಕ್ಕ ಹುಡುಗಿಯನ್ನು ಓಡಿಸಿಕೊಂಡು ಬಂದುದಕ್ಕಾಗಿಯೂ, ಆ ಅಪರಾಧದಲ್ಲಿ ನೆರವಿತ್ತುದಕ್ಕಾಗಿಯೂ ಡ್ರೈವರನ ಮೇಲೂ, ಮುದುಕಿಯ ಮೇಲೂ, ಮುಂಬಯಿಯ ಆಸಾಮಿಯ ಮೇಲೂ ಮೊಕದ್ದಮೆ ಹೂಡಲಾಯಿತು. ಹುಡುಗಿಯರು ಆಶ್ರಮದಲ್ಲಿಯೇ ಉಳಿದರು. ಅವರ ತಂದೆಯ ಸ್ಥಿತಿ ಕರುಣಾಜನಕವಾಗಿತ್ತು. ಹುಡುಗಿಯರೂ ಪಶ್ಚಾತ್ತಾಪ

ಪಟ್ಟುಕೊಂಡು ಊರಿಗೆ ಹಿಂದಿರುಗಲು ಸಿದ್ಧರಾದರು. ಖಟ್ಲೆ ಮುಗಿಯುವ ವೇಳೆಗೆ ಅವರಿಬ್ಬರಿಗೂ ಮದುವೆ ನಿಶ್ಚಯವಾಯಿತು.

ಅನಂತರ ಕೆಲದಿನಗಳಲ್ಲಿಯೆ ನನ್ನ ಮದುವೆಯೂ ನಡೆಯಿತು. – ನನ್ನ ಸಹೋದ್ಯೋಗಿ ಪೋಲೀಸನೊಬ್ಬನ ತಂಗಿಯೊಡನೆ. ಹಳ್ಳಿಯಿಂದ ನನ್ನ ತಾಯಿ ಮತ್ತು ತಮ್ಮಂದಿರೂ ಬಂದಿದ್ದರು. ನನ್ನ ಹೆಂಡತಿಯಿನ್ನೂ ಚಿಕ್ಕವಳು. ನಾನು ಆಗಲೇ ಸಂಸಾರಕ್ಕಾರಂಭಿಸುವಂತಿರಲಿಲ್ಲ.

ಮದುವೆಗಾಗಿ ಪಡೆದುಕೊಂಡಿದ್ದ ರಜೆ ಮುಗಿದು ನಾನು ಮತ್ತೆ ಕೆಲಸಕ್ಕೆ ಸೇರಿಕೊಂಡೆ. ಕೆಲದಿನಗಳಲ್ಲಿಯೆ ನನ್ನನ್ನು ಕಾಲವಾಡವೆಂಬ ಊರಿಗೆ ತಾತ್ಪೂರ್ತಿಕವಾಗಿ ವರ್ಗಾಯಿಸಲಾಯಿತು. ತಂದೆಯಂತೆ ನನ್ನಲ್ಲಿ ವಾತ್ಸಲ್ಯ ತೋರುತ್ತಿದ್ದ ನಮ್ಮ ಫೌಜದಾರರನ್ನು ಬಿಟ್ಟು ಹೋಗಲು ನನಗೆ ಕೊಂಚವೂ ಇಷ್ಟವಿರಲಿಲ್ಲ.

"ನನ್ನನ್ನು ಯಾಕೆ ಕಳಿಸುತ್ತೀರಿ ರಾವ್‌ಸಾಹೇಬರೇ? ನಿಮಗೆ ಬೇಸರ ವಾಗುವಂಥಾದ್ದು ನಾನೇನಾದರೂ ಮಾಡಿದೆನೋ?" ಎಂದು ಕೇಳಿದೆ.

"ಛೆ. ಹಾಗೇನಿಲ್ಲಪ್ಪ. ಈಗ ಠಾಣೆಯ ಫೌಜದಾರರಾಗಿರುವ ಈಶ್ವರಪ್ಪ ನವರೂ ನನಗೆ ಬೇಕಾದವರು, ನಿನಗೂ ಅವರು ಗೊತ್ತಲ್ಲ. ಜಮಾದಾರರಾಗಿದ್ದ ಅವರಿಗೆ ನಾನೇ ಶಿಫಾರಸು ಮಾಡಿ ನಾಲ್ಕು ತಿಂಗಳು ಫೌಜದಾರಿಕೆಯ ಚಾನ್ಸ್ ಕೊಡಿಸಿದ್ದೇನೆ. ಈ ನಾಲ್ಕು ತಿಂಗಳು ಅವರು ಚೆನ್ನಾಗಿ ಕೆಲಸ ಮಾಡಿದರೆ ಮುಂದೆ ಫೌಜದಾರಿಕೆ ಕಾಯಂ ಆಗುವ ಸಂಭವವಿದೆ. ಅವರಿಗೆ ಸಹಾಯ ಮಾಡಲಿಕ್ಕೆಂದೇ ನಿನ್ನನ್ನು ಆರಿಸಿದ್ದೇನೆ," ಎಂದು ಫೌಜದಾರರು ವಿವರಿಸಿ ಹೇಳಿದಾಗ ನಾನು ಕಾಲವಾಡಕ್ಕೆ ಹೋಗಲು ಒಪ್ಪಿಕೊಳ್ಳಬೇಕಾಯಿತು.

ಕಾಲವಾಡದಲ್ಲಿ

೨೦

ಸೇಂದಿ ಮತ್ತು ಸ್ತ್ರೀಯರು

ಗೊಬ್ಬೂರಿನಿಂದ ಹತ್ತು ಮೈಲಿಗಳ ಅಂತರದಲ್ಲಿರುವ ಊರು ಕಾಲವಾಡ. ಎರಡು ಮೂರು ಸಾವಿರದಷ್ಟು ಜನಸಂಖ್ಯೆಯಿರಬಹುದು. ಅಲ್ಲಿರುವವರೆಲ್ಲರೂ ರೈತರು. ಚಿಕ್ಕ ಅಂಗಡಿಗಳನ್ನಿಟ್ಟುಕೊಂಡಿದ್ದ ಏಳೆಂಟು ಜನ ವ್ಯಾಪಾರಿಗಳೂ ಇದ್ದರು. ಊರಿನ ಹೊರಗಡೆ ತುಸುದೂರದಲ್ಲಿ ಪೋಲೀಸ್ ವಠಾರವಿದ್ದಿತು.

ನಾನು ಅಲ್ಲಿಗೆ ಹೋದೊಡನೆಯೆ ಮೊದಲು ಫೌಜದಾರ ಈಶ್ವರಪ್ಪನವರನ್ನು ಕಂಡೆ. ಅವರ ಮನೆಯ ಹೊರಭಾಗದಲ್ಲೊಂದು ಕೋಣೆಯಿತ್ತು. ನನ್ನ ಟ್ರಂಕು ಹಾಸಿಗೆಗಳನ್ನು ಅಲ್ಲಿಯೆ ಇಡಲು ತಿಳಿಸಿ, ನಾನು ಅಲ್ಲಿಯೆ ಉಳಿದುಕೊಳ್ಳಬಹುದೆಂದೂ ಹೇಳಿದರು. ಆ ಊರಿನಲ್ಲಿ ಭೋಜನಾಲಯವಿರಲಿಲ್ಲ. ತಮ್ಮ ಮನೆಯಲ್ಲಿಯೆ ಊಟ ಮಾಡಬಹುದೆಂದು ಫೌಜದಾರರು ಹೇಳಿದರಾದರೂ ನನಗೇನೂ ಅದು ಒಪ್ಪಿಗೆಯಾಗುವಂತಿರಲಿಲ್ಲ. ಸರಕಾರದ ಸಂಬಳ ಪಡೆಯುತ್ತಾ ಫೌಜದಾರರಲ್ಲಿ ಕೂಳು ಗಿಟ್ಟಿಸುವುದೇ! ಸಾಧ್ಯವಾದಷ್ಟು ಬೇಗ ಒಂದು ಮನೆ ಹುಡುಕಿಕೊಂಡು ನನ್ನ ವ್ಯವಸ್ಥೆಯನ್ನು ನಾನೇ ಮಾಡಿ ಕೊಳ್ಳುವುದೆಂದು ಗಟ್ಟಿ ಮಾಡಿಕೊಂಡು, ಅದೊಂದು ದಿನ ಅಲ್ಲಿಯೇ ಊಟ ಮುಗಿಸಿದೆ.

ಈಶ್ವರಪ್ಪನವರೂ ಕಾಲವಾಡ ಪೋಲೀಸ್ ಠಾಣೆಯ ಅಧಿಕಾರ ವಹಿಸಿ

ಕೊಂಡುದಕ್ಕೆ ಬಹಳ ದಿನ ಕಳೆದಿರಲಿಲ್ಲ. ಅವರೊಡನೆ ಅವರ ಮನೆಯವರೂ ಬಂದಿದ್ದರು. ಫೌಜದಾರರ ಹೆಂಡತಿ, ಇಬ್ಬರು ಹುಡುಗಿಯರು, ಒಬ್ಬ ಹುಡುಗ. ಅಡುಗೆ ಮಾಡುವ ಆಳು. ಆ ಮೂವರು ಮಕ್ಕಳೂ ಒಂದೇದಿನದಲ್ಲಿ ನನ್ನೊಡನೆ ಸಲಿಗೆ ಬೆಳಸಿ ಆತ್ಮೀಯರಂತಾದರು. ಬಿಡುವಿನ ವೇಳೆಯಲ್ಲಿ ಅವರಿಗೆ ಪಾಠಗಳನ್ನೂ ಹೇಳಿಕೊಡುತ್ತಿದ್ದೆ. ಆದರೆ, ಫೌಜದಾರರ ಹೆಂಡತಿಯ ಮುಖವನ್ನು ಕೂಡ, ಮೂರು ದಿನಗಳಾದರೂ ನಾನು ನೋಡಲಿಲ್ಲ. ಆಕೆ, ಈಶ್ವರಪ್ಪನವರ ಮೂರನೆಯ ಹೆಂಡತಿ. ಚಿಕ್ಕ ಹುಡುಗ ಅವಳ ಮಗ. ಆ ಹುಡುಗಿಯರು ಮೊದಲನೆಯ ಹೆಂಡತಿಯ ಮಕ್ಕಳು. ಎರಡನೆಯವಳಿಂದ ಮಕ್ಕಳೇನೂ ಆಗಿರಲಿಲ್ಲ. ಈ ಮೂರನೆಯವಳ ತವರುಮನೆಯವರು ಬಹಳ ಸಿರಿವಂತರು, ಫೌಜದಾರರ ಸಂಸಾರ ನಿರ್ವಹಣೆಗಾಗಿ ಆಗಾಗ ಸಹಾಯ ಮಾಡುತ್ತಿದ್ದರೆಂದೂ ವದಂತಿಯಿತ್ತು.

ಮಧ್ಯಾಹ್ನದ ವೇಳೆ ಫೌಜದಾರರೂ ನಾನೂ ಜೊತೆಯಾಗಿಯೆ ಊಟ ಮಾಡುತ್ತಿದ್ದೆವು. ರಾತ್ರೆ ಮಾತ್ರ ನಾನೊಬ್ಬನೇ ಊಟ ಮುಗಿಸಬೇಕಾಗುತ್ತಿತ್ತು. ತಮ್ಮ ಸ್ನಾನ ಪೂಜಾದಿಗಳು ಮುಗಿದು ತಾವು ಊಟಕ್ಕೆ ಕುಳಿತುಕೊಳ್ಳಬೇಕಾದರೆ ಹನ್ನೊಂದು ಗಂಟೆಯಾಗುವುದೆಂದು ಹೇಳಿ ನನ್ನ ಊಟವನ್ನು ಎಂಟು ಗಂಟೆಗೆಲ್ಲ ಆಳಿನ ಮೂಲಕ ನನ್ನ ಕೋಣೆಗೇ ಕಳಿಸಿಕೊಡುತ್ತಿದ್ದರು. ಹನ್ನೊಂದು ಗಂಟೆಯವರೆಗೆ ಎಂಥ ಪೂಜೆ! ಎಂದು ನನಗೆ ವಿಸ್ಮಯವಾಗದಿರಲಿಲ್ಲ. ಒಂದು ದಿನ ಅಡುಗೆಯಾಳು ಚೆನ್ನನನ್ನು ಕೇಳಿನೋಡಿದೆ. ಅವನು ಬಹಳ ಘಾಟಿ. ತನಗೇನೂ ಗೊತ್ತಿಲ್ಲವೆಂದು ತಲೆಯಾಡಿಸಿಬಿಟ್ಟ.

ಒಂದು ಬೆಳಿಗ್ಗೆ ನಾನು ಎದ್ದು ಚಹಾ ಕುಡಿಯುತ್ತ ಕುಳಿತಿದ್ದ ಹಾಗೆ ಪೋಲೀಸನೊಬ್ಬ ಬಂದು, ನಮ್ಮ ಕಚೇರಿಯ ಕ್ಷೇತ್ರದಲ್ಲಿದ್ದ ಹಳ್ಳಿಯೊಂದರಲ್ಲಿ ಹದಿನೆಂಟು ವರ್ಷಗಳ ಯುವಕನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ವರದಿ ಬಂದ ಸಮಾಚಾರ ತಿಳಿಸಿದ. ನಾನು ಅವಸರದಿಂದ ಚಹ ಕುಡಿದು ಎದ್ದುಬಿಟ್ಟೆ. ಈಶ್ವರಪ್ಪನವರ ಸ್ನಾನ ಪೂಜಾದಿಗಳಿನ್ನೂ ಮುಗಿದಿರಲಿಲ್ಲ. ಬೇಗ ಬೇಗ ಆ ವಿಧಿಗಳನ್ನು ಮುಗಿಸಿ ಅವರೂ ಬಂದುಬಿಟ್ಟರು. ಆ ಹಳ್ಳಿಗೆ ಮೋಟರು ಹೋಗುತ್ತಿರಲಿಲ್ಲ. ಎತ್ತಿನ ಚಕ್ಕಡಿಯಲ್ಲಿ ಕುಳಿತು

ಹೊರಟದ್ದಾಯಿತು. ಅಡುಗೆಯಾಳು ಚೆನ್ನನೂ ತನ್ನ ಸಾಹಿತ್ಯದೊಡನೆ ನಮ್ಮ ಜೊತೆಗೆ ಹೊರಟ.

ನಡುಹಗಲಿನ ವೇಳೆಗೆ ಹಳ್ಳಿಗೆ ಬಂದು ಸೇರಿದುದಾಯಿತು. ಆ ದಿನಗಳಲ್ಲಿ ಹಳ್ಳಿಗಳಿಗೆ ಪೋಲೀಸರು ಹೋಗುವುದೆಂದರೆ ದೊರೆಗಳು ಹೋದ ಹಾಗಾಗುತ್ತಿತ್ತು. ನಾವು ಚಾವಡಿಗೆ ಬರುವಷ್ಟರಲ್ಲಿ ಹಳಬರೂ ಓಲೇಕಾರರೂ ಧಾವಿಸಿ ಬಂದು ಸಲಾಂ ಹೊಡೆದು ನಮ್ಮ ಸಾಮಾನುಗಳನ್ನು ಇಳಿಸತೊಡಗಿದರು. ಪೋಲೀಸ್ ಪಾಟೀಲರು ಏಳು ದಿನಗಳ ರಜೆಯಮೇಲಿರುವುದೂ ಇನ್ನೊಬ್ಬರು ಅಧಿಕಾರ ವಹಿಸಿಕೊಂಡಿರುವುದೂ ಗೊತ್ತಾಯಿತು. ಆ ತಾತ್ಪೂರ್ತಿಕ ಪಾಟೀಲನೂ ಬಂದು ಫೌಜದಾರರಿಗೆ ನಮಸ್ಕರಿಸಿದ. ಅವನನ್ನು ಹಿಂಬಾಲಿಸಿ ಕೊಂಡು ನಾಲ್ವರು ಜನರೂ ಬಂದಿದ್ದರು. ಅವರು ಅನಾವಶ್ಯಕವಾಗಿ ನಮ್ಮನ್ನು ಕಾಣಲು ಬಂದುದು ನನಗೆ ಸೇರಿಕೆಯಾಗಲಿಲ್ಲ. ಅವರ ಹೆಸರುಗಳನ್ನು ತಿಳಿದು ಕೊಂಡು ಅವರನ್ನು ಚಾವಡಿಯಿಂದ ಹೊರಡಿಸಿದೆ.

ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಲ್ಲಿರುವಂತೆ ಅಲ್ಲಿಯೂ ಎರಡು ಪಕ್ಷ ಗಳಿದ್ದುವು. ಗೌಡನ ವಿರುದ್ಧ ಪಕ್ಷದ ಹುದ್ದರಿಗಳ ಹೆಸರು ತಿಳಿದುಕೊಂಡು, ಅವರಲ್ಲೊಬ್ಬನ ಮನೆಗೆ ಹೋಗಿ ಅವನನ್ನು ಕಂಡೆ. ಆ ಯುವಕ ನೇಣು ಹಾಕಿ ಕೊಂಡು ಸತ್ತ ಬಗ್ಗೆ ಅವನಿಗೇನಾದರೂ ಗೊತ್ತಿದ್ದರೆ ತಿಳಿಸಬೇಕೆಂದು ಮಾತು ತೆಗೆದೆ.

ಹಳ್ಳಿಯ ಜನರು ಇಂಥ ವಿಷಯಗಳನ್ನು ಪೋಲೀಸರಿಗೆ ತಿಳಿಸಲು ಯಾವಾಗಲೂ ಹಿಂಜರಿಯುತ್ತಾರೆ. ಹಲವಾರು ತಂತ್ರಗಳನ್ನುಪಯೋಗಿಸಿ ಅವರಿಂದ ವಿಷಯ ಸಂಗ್ರಹ ಮಾಡಬೇಕಾಗುತ್ತದೆ.

"ಗೌಡ ಹ್ಯಾಗಿದ್ದಾನೆ? ಒಳ್ಳೆಯವನೋ?" ಎಂದು ನಾನು ಪ್ರಶ್ನಿಸು ತ್ತಲೂ ಆ ರೈತ ಮೂಗು ಮುರಿದು,

"ಒಳ್ಳೆಯವ....ಬಹಳ ಒಳ್ಳೆಯವ....ಅದಕ್ಕೇ ಹೊಲಸುತನ ನಡದೈತಿ ಊರಾಗ," ಎಂದು ಹೇಳಿದ.

"ಹಾಗಾದರೆ ಈ ಹುಡುಗ ಆತ್ಮಹತ್ಯೆ ಮಾಡಿಕೊಂಡದ್ದಕ್ಕೂ ಗೌಡನೇ ಕಾರಣವೇನು?"

ಆ ರೈತ ಪಿಸು ದನಿಯಲ್ಲಿ ಹೇಳತೊಡಗಿದ :

"ಇದನ್ನೆಲ್ಲಾ ನಾ ಹೇಳಿದೆ ಅಂತ ಯಾರ ಮುಂದೂ ಒಡೆಯಬಾರದು ನೋಡಿರಿ. ಹಾಂಗಿದ್ದರೆ ಮಾತ್ರ ಹೇಳುತೀನಿ. ಸತ್ತವನ ಹೆಸರು ರಾಮಪ್ಪ. ಅವನ ತಾಯಿಗೂ, ಊರೊಳಗಿನ ಪುಢಾರಿ ಭರಮಪ್ಪಗೂ ಇಪ್ಪತ್ತು ವರ್ಷ ಗಳಿಂದ ಸಂಬಂಧ ಇತ್ತು. ಅದು ಊರವರಿಗೆಲ್ಲಾ ಗೊತ್ತಿರುವ ಮಾತು. ಈ ರಾಮಪ್ಪನ ಅಕ್ಕ ಮಲ್ಲವ್ವನ ಗಂಡ ನಾಲ್ಕೈದು ವರ್ಷದ ಹಿಂದೆ ಸತ್ತುಹೋದ. ಅಂದಿನಿಂದ ಅವಳೂ ತವರಿನಲ್ಲೇ ಇದಾಳೆ. ಅವಳ ತಾಯಿಯ ಮಿಂಡನಾಗಿದ್ದ ಭರಮಪ್ಪ ಈಗ ಮಲ್ಲವ್ವನ ಬೆನ್ನು ಹತ್ತಿದಾನಂತ ಊರೊಳಗೆ ಸುದ್ದಿ. ನಾಲ್ಕೈದು ದಿನಗಳ ಹಿಂದೆ ಮಲ್ಲವ್ವನ ತಾಯಿ ಆಪ್ತರೊಬ್ಬರ ಲಗ್ನಕ್ಕಂತ ಬ್ಯಾರೆ ಊರಿಗೆ ಹೋಗಿದ್ದಳಂತೆ. ರಾಮಪ್ಪ ಯಾವಾಗಲೂ ಹೊಲದೊಳಗಿನ ಗುಡಿಸಲಲ್ಲೇ ಮಲಗುತ್ತಿದ್ದ. ಆದರೆ ಆ ದಿನ ಮೈಯಲ್ಲಿ ನೆಟ್ಟಗಿರಲಿಲ್ಲಂತ ರಾತ್ರಿ ಮನೆಗೆ ಬಂದನಂತೆ. ಅಲ್ಲಿ ತನ್ನ ಅಕ್ಕ ಭರಮಪ್ಪನ ಸಂಗಡ ಮಲಗಿದ್ದನ್ನು ನೋಡಿ ಸಹಿಸದೆ ಹಾಗೇ ಹೊಲಕ್ಕೆ ಹೋಗಿ ಉರುಲು ಹಾಕಿಕೊಂಡು ಸತ್ತಿರ ಬಹುದು ಅಂತ ಮಂದಿ ಮಾತಾಡುತಾರೆ."

"ಈ ಭರಮಪ್ಪನಿಗೂ ಗೌಡನಿಗೂ ಸಂಬಂಧ ಹ್ಯಾಗಿದೆ?"

"ಅಷ್ಟಕ್ಕಷ್ಟೇ. ಅದಕ್ಕೇ, ರಾಮಪ್ಪ ಸತ್ತ ಸುದ್ದಿ ಊರೊಳಗೆ ಹಬ್ಬುವ ಮೊದಲೇ ಗೌಡ ರಜಾ ತಗೊಂಡು ಹೋಗಿಬಿಟ್ಟಿರಬೇಕು."

ನಾನು ಈ ಸಮಾಚಾರ ಸಂಗ್ರಹಿಸಿಕೊಂಡು ಚಾವಡಿಗೆ ಬರುವುದ ರೊಳಗಾಗಿ ಫೌಜದಾರರು ರಾಮಪ್ಪನ ಮನೆಗೆ ಹೋಗಿದ್ದರು. ಸರಿ. ನಾನೂ ಅತ್ತ ಹೊರಟೆ. ಬಂದು ನೋಡಿದಾಗ, ಗೌಡರೂ ಇನ್ನಿತರರೂ ಹೊರಗಡೆ ಕುಳಿತುಕೊಂಡಿದ್ದುದು ಕಾಣಿಸಿತು.

"ಫೌಜದಾರ ಸಾಹೇಬರೆಲ್ಲಿದ್ದಾರೆ?" ಎಂದು ಗೌಡರನ್ನು ವಿಚಾರಿಸಿದೆ.

"ಒಳಗಿದ್ದಾರೆ," ಎಂದ ಗೌಡ. ಅವನ ಧ್ವನಿಯಲ್ಲಿ ಉತ್ಸಾಹವಿರಲಿಲ್ಲ.

ನಾನು ನೆಟ್ಟಗೆ ಒಳಗಡೆ ಹೋಗಿ ನೋಡಿದರೆ, ನಡುಮನೆಯಲ್ಲಿಯೆ ಫೌಜದಾರರು ಮಲ್ಲವ್ವನೊಡನೆ ಮಲಗಿಕೊಂಡಿದ್ದುದು ಕಾಣಿಸಿತು. ಸಂಕೋಚ ದಿಂದಲೂ ಲಜ್ಜೆಯಿಂದಲೂ ತಲೆ ತಗ್ಗಿಸಿಕೊಂಡು ತಕ್ಷಣ ಹಿಂದಿರುಗಿ ಗೌಡರನ್ನು ಕರೆದುಕೊಂಡು ಮತ್ತೆ ಚಾವಡಿಗೆ ಬಂದೆ. ವಿಚಾರಣೆ ಮಾಡುವುದಕ್ಕೆ ಹೋದ ಅಧಿಕಾರಿಯೇ ತನ್ನ ಕರ್ತವ್ಯವನ್ನು ಮರೆತು, ಆತ್ಮಹತ್ಯೆ ಮಾಡಿಕೊಂಡವನ

ಅಕ್ಕನೊಡನೆ ಸರಸಕೇಳಿಯಲ್ಲಿ ನಿರತರಾಗಿದ್ದುದು ಸೋಜಿಗದ ಸಂಗತಿಯೇ ಆಗಿತ್ತು.

ಆ ಕೂಡಲೆ ಶವದ ಮುಹಜರು ಕ್ರಮ ನಡೆಯಬೇಕಾಗಿತ್ತು. ಅದಕ್ಕಾಗಿ ಇಬ್ಬರು ಪಂಚರ ಆವಶ್ಯಕತೆಯಿದ್ದಿತಲ್ಲ. ನಾವು ಕರೆಯದಿದ್ದರೂ ಭರಮಪ್ಪ ತಾನಾಗಿಯೆ ಮುಂದಾಗಿ ಬಂದು ತಾನೂ ಒಬ್ಬ ಪಂಚನಾಗುವುದಾಗಿ ಹೇಳಿದ. ಅವನು ಬೇಡವೆಂದು ನಾನು ಶಾಂತಸ್ವರದಲ್ಲಿಯೆ ಹೇಳಿದೆ. ಅವನ ಮುಖ ಕಪ್ಪಿಟ್ಟುಕೊಂಡಿತು. ನಾನು ಅತ್ತ ಗಮನವೀಯದೆ ಶವವಿದ್ದ ಸ್ಥಳಕ್ಕೆ ಹೋಗಿ ಅದರ ಕೊರಳಿನ ಹಗ್ಗವನ್ನು ಕುಯ್ಯಿಸಿ ಪಂಚನಾಮೆ ಬರೆಯಿಸಿ ಫೌಜದಾರರು ಬರುವುದನ್ನು ಕಾದು ಕುಳಿತೆ. ಅವರೂ ಬಂದು ಪಂಚನಾಮೆ ಓದಿನೋಡಿ ಪಂಚರ ಸಹಿ ಹಾಕಿಸಿದರು. ಆ ವೇಳೆಗೆ ಊರಿನಿಂದ ಬಂದಿದ್ದ ರಾಮಪ್ಪನ ತಾಯಿಯ ವಶಕ್ಕೆ ಅವನ ಕಳೇಬರವನ್ನೊಪ್ಪಿಸಲಾಯಿತು.

ಚಾವಡಿಗೆ ಬಂದು ಭರಮಪ್ಪನನ್ನು ಕರೆದುಕೊಂಡು ಬರಲು ಓಲೇಕಾರನನ್ನು ಕಳಿಸಿದೆ. ಅವನ ವಿಚಾರವಾಗಿ ನಮಗೆ ಅನುಮಾನ ಬಂದಿರಬಹುದೆಂದು ಭಾವಿಸಿದ ಭರಮಪ್ಪ ಹೆದರುತ್ತ ಹೆದರುತ್ತ ಬಂದು ನಿಂತ. ಒಂದು ಕಡೆ ಕುಳಿತಿರುವಂತೆ ಅವನಿಗೆ ಹೇಳಿ ಫೌಜದಾರರನ್ನು ಕುರಿತು,

"ರಾಮಪ್ಪನ ತಾಯಿ ಅಕ್ಕ ಇಬ್ಬರ ಜವಾಬನ್ನೂ ಈಗಲೇ ತೆಗೆದುಕೊಂಡು ಬಿಡೋಣ. ಅವರು ಹೆಣ ಹುಗಿಯುತ್ತ ಕೂತರೆಂದರೆ ನಾವಿಲ್ಲಿ ವಿನಾ ಕಾರಣವಾಗಿ ವಸ್ತಿಮಾಡಬೇಕಾಗುತ್ತದೆ," ಎಂದು ಹೇಳಿದೆ.

"ವಸ್ತಿ ಆದರೆ ಆಗಲಿ. ಏನವಸರ?" ಎಂದರು ಫೌಜದಾರರು. ಮಲ್ಲವ್ವನನ್ನು ಅಷ್ಟು ಬೇಗ ಬಿಟ್ಟು ಹೊರಡಲು ಅವರಿಗೆ ಇಚ್ಛೆಯಿರಲಿಲ್ಲ ಎಂದು ತೋರುತ್ತಿತ್ತು. ಇನ್ನೇನು ಮಾಡುವುದು? ಅವರ ಆಜ್ಞೆಯನ್ನು ಮೀರುವಂತಿರಲಿಲ್ಲ.

ಚಾವಡಿಯ ಸಮೀಪದಲ್ಲೇ ಇದ್ದ ಒಂದು ಗುಡಿಗೆ ಭರಮಪ್ಪನನ್ನು ಕರೆದೊಯ್ದು ನಾನು ಅವನ ಸಮಾಚಾರ ತೆಗೆದುಕೊಳ್ಳತೊಡಗಿದೆ.

"ರಾಮಪ್ಪನ ಮನೆಯವರೊಡನೆ ನಿನಗೆ ಒಳ್ಳೆಯ ಸಂಬಂಧವಿದ್ದಿತೆಂದು ಕೇಳಿದ್ದೇನೆ. ಅವನು ಸಾಯಲು ಕಾರಣವೇನು, ನಿನಗೇನಾದರೂ ಗೊತ್ತೇ?"

ಭರಮಪ್ಪ ಒಳಗೊಳಗೇ ಹೆದರಿಕೊಂಡಿದ್ದನಾದರೂ ಅದನ್ನು ಹೊರಗೆ ವ್ಯಕ್ತಗೊಳಿಸದೆ ಹೇಳಿದ :

"ಅವನಿಗೆ ಬಹಳ ದಿನದಿಂದ ಹೊಟ್ಟೆನೋವು ಕಾಡುತ್ತಿತ್ತು. ಅದನ್ನು ತಾಳಲಾರದೆ ಉರಲು ಹಾಕಿಕೊಂಡಿರಬೇಕು."

ಭರಮಪ್ಪನ ರಹಸ್ಯ ಪ್ರಣಯ ವ್ಯವಹಾರವನ್ನೆಲ್ಲ ನಾನು ಅರಿತುಕೊಂಡ ಸಂಗತಿ ಅವನಿಗೆ ತಾನೆ ಹೇಗೆ ಗೊತ್ತಾದೀತು ?

"ರಾಮಪ್ಪನಿಗೇನೋ ಹೊಟ್ಟೆನೋವಿತ್ತು ಅನ್ನೋಣ. ಅವನ ತಾಯಿಗೂ ಅಕ್ಕನಿಗೂ ಯಾವ ನೋವಿತ್ತು ?" ಎಂದು ನಾನು ಮಾರ್ಮಿಕವಾಗಿ ಪ್ರಶ್ನಿಸಿದೆ.

ಅವನು ಒಳಗೇ ನಡುಗಿದ ಹಾಗೆ ಕಾಣಿಸಿತು. ನನ್ನ ಪ್ರಶ್ನೆಗೆ ಉತ್ತರ ನೀಯದೆ ಮೌನವಾಗಿ ಕುಳಿತುಕೊಂಡ.

"ಆ ಇಬ್ಬರು ಹೆಣ್ಣುಮಕ್ಕಳ ನೋವಿಗೆ ನೀನೇ ಔಷಧ ಕೊಡುತ್ತಿದ್ದಿಯಲ್ಲವೇನು ?"

ಅವನು ಬೆಚ್ಚಿ, ಒಂದು ಗಳಿಗೆ ನನ್ನನ್ನು ವಿಲಕ್ಷಣವಾಗಿ ದಿಟ್ಟಿಸುತ್ತಿದ್ದು ಮತ್ತೆ ತಲೆ ತಗ್ಗಿಸಿ ಕುಳಿತುಕೊಂಡ.

"ಅಂದು ರಾತ್ರಿ ನೀನು ಮಲ್ಲವ್ವನಿಗೆ ಔಷಧ ಕೊಡುತ್ತಿದ್ದಾಗ ರಾಮಪ್ಪ ಬಂದು ನೋಡಿದ. ನೀನು ಡಾಕ್ಟರನಂತೂ ಆಗಿರಲಿಲ್ಲ. ಔಷಧ ಕೊಡಲು ನಿನಗೇನು ಅಧಿಕಾರ ಅಂತ ಸಿಟ್ಟನಿಂದ ರಾಮಪ್ಪ ಉರುಲು ಹಾಕಿಕೊಂಡ. ಅವನ ಸಾವಿಗೆ ಕಾರಣನಾದವನು ನೀನೇ. ನಿನ್ನ ಕೈಗೆ ಬೇಡಿ ಹಾಕುತ್ತೇನೆ," ಎಂದು ಹೇಳಿದೆ.

ಅವನು ಪಿಟ್ಟೆಂದು ಮಾತಾಡದೆ ಜೇಬಿನಿಂದ ಐದು ನೂರು ರೂಪಾಯಿ ತೆಗೆದು ನನ್ನ ಕೈಗೆ ಕೊಟ್ಟ. ರೂಪಾಯಿ ಕೊಡುವ ಪ್ರಸಂಗ ಬರುವುದೆಂದು ಅವನಿಗೆ ಮೊದಲೇ ಅನ್ನಿಸಿರಬೇಕು. ಚಾವಡಿಗೆ ಬರುವಾಗಲೇ ಹಣ ತೆಗೆದುಕೊಂಡೇ ಬಂದಿದ್ದ ಭೂಪ.

"ನನಗೆ ರೂಪಾಯಿ ಬೇಡ. ನಿನ್ನನ್ನು ಹಾಗೇ ಬಿಡಲು ಸಾಧ್ಯವಿಲ್ಲ. ನೀನು ಏನೇನು ಮಾಡಿದ್ದೀ ಬೊಗಳು," ಎಂದು ಗದರಿಸಿದಾಗ ಅವನು ಎಲ್ಲವನ್ನೂ ಹೇಳಿ ತನ್ನ ಅಪರಾಧವನ್ನೂ ಒಪ್ಪಿಕೊಂಡು, ಐದು ನೂರು ರೂಪಾಯಿ ತೆಗೆದುಕೊಂಡು ತನ್ನನ್ನು ಬಿಟ್ಟುಬಿಡಬೇಕೆಂದು ದೈನ್ಯದಿಂದ ಬೇಡಿಕೊಂಡ.

ರೂಪಾಯಿ ಕೊಟ್ಟ ಸಂಗತಿಯನ್ನು ಫೌಜದಾರರಿಗಾಗಲಿ, ರಾಮಪ್ಪನ ಮನೆಯವರಿಗಾಗಲಿ ತಿಳಿಸಬಾರದೆಂದು ಎಚ್ಚರಿಕೆ ಕೊಟ್ಟು, ಹಣವನ್ನು ಕಿಸೆಗೆ ಸೇರಿಸಿ ಅವನ ಹೇಳಿಕೆ ಬರೆದುಕೊಂಡೆ. ಹಾಗೇ ಇನ್ನುಳಿದವರ ಹೇಳಿಕೆ ಬರೆದು ಕೊಳ್ಳುವ ಕೆಲಸವೂ ಮುಗಿಯಿತು. ನಮ್ಮ ಊಟ ಉಪಚಾರಗಳ ಖರ್ಚಿಗೆಂದು ಗೌಡನಿಗೂ ಐವತ್ತು ರೂಪಾಯಿ ಕೊಟ್ಟ ಭರಮಪ್ಪ. ತಾತ್ಪೂರ್ತಿಕ ಗೌಡ ನಾಗಿದ್ದ ಅವನಿಗೆ ಅದರಿಂದಾದ ಆನಂದ ಹೇಳತೀರದು. ಅದರಲ್ಲಿ ಹತ್ತಿಪ್ಪತ್ತು ರೂಪಾಯಿಗಳ ಉಳಿತಾಯವಾಗುವಂತಿತ್ತು. ಅವನಿಗೆ ಹಣ ಸಿಕ್ಕಲು ನಾನೇ ಕಾರಣನೆಂದು ಗೊತ್ತಾಗುತ್ತಲೂ ಅವನು ನನ್ನನ್ನು ನಾಯಿಯಂತೆ ಓಲೈಸ ತೊಡಗಿದ್ದ.

ಎಲ್ಲ ಕೆಲಸವನ್ನೂ ನಾನೇ ಮಾಡುತ್ತಿದ್ದುದರಿಂದ ಫೌಜದಾರರಿಗೆ ಯಾವ ತೊಂದರೆಯೂ ಇರಲಿಲ್ಲ. ಮಧ್ಯಾಹ್ನ ಮಲ್ಲವ್ವನ ಸಹವಾಸ ಸುಖ ಪಡೆದು ಉಲ್ಲಸದಿಂದಿದ್ದರು. ಸಾಯಂಕಾಲ ಊರ ಹೊರಗೆ ಸುತ್ತಿಕೊಂಡು ಬರಲು ಹೊರಟದ್ದಾಗ ಫೌಜದಾರರು ನಗುನಗುತ್ತಾ ಹೇಳಿದರು :

“ಅಬ್ಬ ! ಎಂಥಾ ಹೆಣ್ಣು ಆ ಮಲ್ಲಿ! ಅವಳನ್ನು ನೋಡಿದ ಕೂಡಲೆ ನನಗೆ ಮಾತೇ ನಿಂತು ಹೋದಂತಾಯ್ತು. ಅವಳನ್ನು ಹಿಡಿದು ಎಳೆದೆ. ಮೊದ ಮೊದಲು ಬಹಳ ಬೆದರಿದ್ದಳು. ಮಲಗಿಕೊಂಡು ಎದ್ದ ಬಳಿಕ ಕುಲುಕುಲು ನಗುತ್ತಿದ್ದಳು. ರಾತ್ರಿಗೂ ಅಲ್ಲಿಗೇ ಬರಲಿಕ್ಕೆ ಹೇಳಿದ್ದಾಳೆ. ಭರಮಪ್ಪನ ಮಗಳನ್ನು ಕರೆದು ತರುವಳಂತೆ ಅವಳೇ. ಅವರ ಮನೆಯೂ ಅಲ್ಲೇ ಇದೆ. ನಾನು ಹಾದು ಹೋಗುವಾಗ ಬಾಗಿಲಲ್ಲಿ ನಿಂತಿದ್ದಳು. ನನ್ನನ್ನು ನೋಡಿ ಅಂಜಿ ಒಳಗೆ ಹೋದಳು. ಸಾವಿರದಲ್ಲಿ ಒಂದು ಹುಡುಗಿ ಅದು.”

ನಾನು ಮೌನವಾಗಿ ಹೆಜ್ಜೆ ಹಾಕುತ್ತಾ ಹೊರಟಿದ್ದೆ. ಫೌಜದಾರರೇ ಮುಂದುವರಿಸಿದರು :

“ನನಗೀಗ ನಲವತ್ತೈದು ವರ್ಷ ವಯಸ್ಸಾಯ್ತು. ಇನ್ನೆಲ್ಲಿ ಪ್ರಾಯದ ಹುಡುಗಿಯರು ಸಿಕ್ಕಾರು ನನಗೆ! ಏನೋ ಈ ಮಲ್ಲಿಯಿಂದ ಸಿಗಬೇಕಷ್ಟೆ.”

“ಅವಳ ತಮ್ಮ ಸಾಯಲು ಕಾರಣವೇನು ಅಂತ ಅವಳನ್ನು ವಿಚಾರಿಸಿದಿರಾ?”

“ಅವನಿಗೆ ಹೊಟ್ಟೆ ಕಡಿತದ ಬೇನೆಯಿತ್ತಂತೆ. ಅದು ಒಮ್ಮೊಮ್ಮೆ

ಭಯಂಕರವಾಗುತ್ತಿತ್ತಂತೆ. ಅವನು ಸಾಯುವ ದಿನವೂ ಬಹಳ ನೋವಿತ್ತಂತೆ. ಹೊಲಕ್ಕೆ ಹೋಗಬಾರದೆಂದು ಮಲ್ಲವ್ವ ಹೇಳಿದರೂ ಕೇಳದೆ ಅವನು ಹಾಗೇ ಹೋಗಿದ್ದ. ಗಾಳಿಯಲ್ಲಿ ನೋವು ಮತ್ತೂ ಹೆಚ್ಚಾಗಿರಬೇಕು. ತಡೆದುಕೊಳ್ಳಲಾರದೆ ಉರುಲು ಹಾಕಿಕೊಂಡು ಸತ್ತಿದ್ದಾನೆ. ಮಲ್ಲವ್ವಗೂ ಅವಳ ತಾಯಿಗೂ ಬೇರೆ ಯಾರೂ ಇಲ್ಲ. ಸಾಕಷ್ಟು ಆಸ್ತಿಯಿದೆ. ಹೊಲ ಮನೆ ಇವೆ. ಆ ಮನೆ ಅಂತೂ ಅರಮನೆ ಇದ್ದಂತಿದೆ. ರಾಮುಪ್ಪನ ತಂದೆ ಈ ಊರಿಗೇ ಪ್ರಸಿದ್ಧ ರೈತನಂತೆ. ಹನ್ನೆರಡು ಎತ್ತಿನ ಒಕ್ಕಲುತನ ಅವನದು. ಅವನಿದ್ದಾಗ ಮನೆಯಲ್ಲಿ ಐವತ್ತು ಅರವತ್ತು ದನಕರುಗಳು ಹತ್ತು ಹನ್ನೆರಡು ಮಂದಿ ಆಳುಗಳು ಇದ್ದರಂತೆ. ಅವನು ಸತ್ತಮೇಲೆ ಸ್ವಲ್ಪ ಜಮೀನು ಲಾವಣಿಗೆ ಹಚ್ಚಿದ್ದಾರೆ. ಸ್ವಲ್ಪ ಜಮೀನು ಭರಮಪ್ಪ ಮಾಡುತ್ತಾನೆ. ರಾಮುಪ್ಪ ದೊಡ್ಡವನಾದ ಬಳಿಕ ಸ್ವಲ್ಪ ಜಮೀನು ಸ್ವತಃ ಮಾಡುತ್ತಿದ್ದ. ನಾಲ್ಕು ಎತ್ತು ಕಟ್ಟಿದ್ದ. ಅಂಥಾದ್ದರಲ್ಲಿಯೆ ಒಮ್ಮಿಂದೊಮ್ಮೆಲೆ ಸತ್ತು ಹೋದನಲ್ಲಾ ಅಂತ ಅಳುತ್ತಿದ್ದಳು ಮಲ್ಲವ್ವ."

ಆಸ್ತಿಯನ್ನೆಲ್ಲ ನುಂಗಿಬಿಡಬೇಕೆಂದು ಮಾತನಾಡಿಕೊಂಡು, ಭರಮಪ್ಪ ಮಲ್ಲವ್ವ ಇಬ್ಬರೂ ಸೇರಿ ರಾಮುಪ್ಪನ ಕೊಲೆ ಮಾಡಿಸಿದ್ದರೂ ಇರಬಹುದೆಂದು ನನಗೆನ್ನಿಸಿತು. ಅವನ ಕತ್ತು ಹಿಸುಕಿ ಕೊಂದು, ಅನಂತರ ಅವನೇ ನೇಣು ಹಾಕಿಕೊಂಡ ಹಾಗೆ ಹಗ್ಗ ಬಿಗಿದಿರಬಹುದು. ಇವರನ್ನು ಹೀಗೇ ಬಿಡಬಾರದು, ಇವರಿಂದ ಸಾಕಷ್ಟು ಹಣವನ್ನಾದರೂ ಸೆಳೆದುಕೊಳ್ಳಬೇಕು ಎಂದು ನಾನು ಮನಸ್ಸಿನಲ್ಲಿಯೆ ನಿಶ್ಚಯಿಸಿದೆ.

ರಾತ್ರಿಯ ಎಂಟು ಗಂಟೆಯಾಗುತ್ತ ಬಂದಿತ್ತು. ನಾವಿಬ್ಬರೂ ಒಂದು ಹೊಲದಲ್ಲಿ ಕುಳಿತುಕೊಂಡಿದ್ದೆವು. ಅಡುಗೆಯಾಳು ಚೆನ್ನ ಒಂದು ಚೀಲದಲ್ಲಿ ಏನನ್ನೋ ತುಂಬಿಕೊಂಡು ನಾವು ಕುಳಿತಿದ್ದಲ್ಲಿಗೆ ಬಂದ. ಇವನೇಕೆ ಇಲ್ಲಿಗೆ ಬಂದನೆಂದು ನನಗೆ ಕುತೂಹಲ.

" ಊಟಕ್ಕೆ ಕರೆಯಲು ಬಂದನೊ ಏನೊ," ಎಂದು ನಾನೆಂದೆ.

"ಹಾಗೇನಿಲ್ಲ. ದಿನಾಲು ಸಾಯಂಕಾಲ ಮೈ ತಿಕ್ಕಿಸಿಕೊಳ್ಳುವ ರೂಢಿಯಿದೆ ನನಗೆ. ಎಣ್ಣೆ ತಂದಿದ್ದಾನೆ. ನೀನು ಹೋಗಿ ಉಂಡು ಮಲಗಿಬಿಡು," ಎಂದರು ಫೌಜದಾರರು.

ನನಗೂ ಅಲ್ಲಿಂದ ಹೊರಡುವುದೇ ಬೇಕಾಗಿತ್ತು. ನೇರವಾಗಿ ಚಾವಡಿಗೆ ಬಂದೆ. ಗೌಡನನ್ನು ಒಂದು ಕಡೆ ಕರೆದೊಯ್ದು, ಮಲ್ಲವ್ವನ ಹತ್ತಿರ ಸಾಕಷ್ಟು ಹಣವಿರುವ ವಿಷಯ ತಿಳಿದುಕೊಂಡೆ. ಅವರ ಜಮೀನು ಮಾಡುತ್ತ ಬಂದಿದ್ದ ಭರಮಪ್ಪನ ಹತ್ತಿರವೇ ನಾಲ್ಕೈದು ಸಾವಿರದಷ್ಟು ನಗದು ಹಣವಿರುವ ಸಂಗತಿಯೂ ಗೊತ್ತಾಯಿತು.

"ಮಲ್ಲವ್ವನಿಂದ ಈಗ ಎಷ್ಟು ಹಾರಿಸಲು ಶಕ್ಯವಾದೀತು ಗೌಡರೇ?"

"ಒಂದು ಸಾವಿರವನ್ನಾದರೂ ಸಹಜ ಕೀಳಬಹುದು," ಎಂದ ಗೌಡ.

"ಹಾಗಾದರೆ ನೀವು ಇಲ್ಲೇ ಇರಿ. ನಾನು ಹೋಗಿ ಪ್ರಯತ್ನಿಸುತ್ತೇನೆ. ಫೌಜದಾರರು ಚಾವಡಿಗೆ ಬಂದ ಕೂಡಲೆ ನನಗೆ ಹೇಳಿ ಕಳಿಸಿರಿ," ಎಂದು ಅವನಿಗೆ ಹೇಳಿ ಮಲ್ಲವ್ವನ ಮನೆಗೆ ಬಂದೆ. ರಾಮಪ್ಪನ ದಫನಕ್ರಿಯೆ ಮುಗಿಸಿ ಬಂದು ತಾಯಿಮಕ್ಕಳಿಬ್ಬರೂ ಕಂಬನಿ ಸುರಿಸುತ್ತಾ ಕುಳಿತುಕೊಂಡಿದ್ದವರು ನನ್ನನ್ನು ಕಂಡು ಎದ್ದು ನಿಂತರು. ಮಲ್ಲವ್ವನನ್ನು ಒಂದು ಕೋಣೆಗೆ ಕರೆದೊಯ್ದು ರಾಮಪ್ಪನು ಏಕಾಏಕಿಯಾಗಿ ಸಾಯಲು ಕಾರಣವೇನೆಂದು ಕೇಳಿದೆ. ಫೌಜದಾರರ ಮುಂದೆ ಹೇಳಿದ ಮಾತನ್ನೇ ಅವಳು ನನ್ನ ಮುಂದೆಯೂ ಹೇಳಿದಳು.

"ನನಗೆಲ್ಲಾ ಗೊತ್ತಿದೆ ನಿನ್ನ ಹೊಲಸು ಕಾರಭಾರ. ಅಂದು ರಾತ್ರಿ ಭರಮಪ್ಪ ನಿನ್ನ ಸಂಗಡ ಮಲಗಿದ್ದನಂತಲ್ಲ!"

"ಅಂಥ ಹೇಸಿತನ ನಾನ್ಯಾಕೆ ಮಾಡಲಿ? ನಿಮಗೆ ಯಾರೋ ಸುಳ್ಳು ಹೇಳಿದ್ದಾರೆ ನಮ್ಮ ಭಾಗಾದಿಗಳು."

"ಯಾರೂ ಸುಳ್ಳು ಹೇಳಿಲ್ಲ. ಭರಮಪ್ಪನೇ ಒಪ್ಪಿಕೊಂಡಿದ್ದಾನೆ ನನ್ನ ಮುಂದೆ."

ಅವಳು ತಬ್ಬಿಬ್ಬಾದಳು. ಇನ್ನು, ನನ್ನೆದುರಿಗೆ ಎಲ್ಲವನ್ನೂ ಒಪ್ಪಿಕೊಳ್ಳದೆ ಅನ್ಯಮಾರ್ಗವಿರಲಿಲ್ಲ. ಅಳುತ್ತಲೇ ಒಪ್ಪಿಕೊಂಡಳು.

"ನೀನು ಭರಮಪ್ಪ ಇಬ್ಬರೂ ಮಸಲತ್ತು ಮಾಡಿ ರಾಮಪ್ಪನನ್ನು ಕುತ್ತಿಗೆ ಹಿಸುಕಿ ಕೊಂದು ಅವನು ಉರುಲು ಹಾಕಿಕೊಂಡ ನಾಟಕ ನಟಿಸಿದ್ದೀರಿ. ನಿಮ್ಮಿಬ್ಬರಿಗೂ ಜೇಲಿಗೆ ಕಳಿಸುತ್ತೇನೆ, ಫಾಸೀ ಹಾಕಿಸುತ್ತೇನೆ."

ಅವಳು ಕೈಕಾಲು ಕಳೆದುಕೊಂಡಳು. ನನ್ನ ಕಾಲುಗಳ ಮೇಲೆ ಬಿದ್ದು

ತನ್ನನ್ನು ಬಿಟ್ಟುಬಿಡಬೇಕೆಂದು ಬೇಡಿಕೊಂಡಳು. ಪೋಲೀಸರಾದ ನಾವು ಹಣ ಕಿತ್ತುಕೊಳ್ಳುವುದು ಇಂಥ ಸಂದರ್ಭಗಳಲ್ಲಿಯೆ.

"ನಿನ್ನನ್ನು ಬಿಟ್ಟರೆ ನನಗೇನು ಲಾಭ?"

"ನೀವು ಬೇಡಿದ್ದು ಕೊಡ್ತೇನೆ. ನನ್ನ ಬಿಟ್ಟುಬಿಡಿರಿ."

"ಹಾಗಾದರೆ ಸಾವಿರ ರೂಪಾಯಿ ತಂದುಕೊಡು."

ಅವಳು ಮತ್ತೊಂದು ಮಾತನಾಡದೆ ಎದ್ದುಹೋಗಿ ಹತ್ತು ಹದಿನೈದು ನಿಮಿಷಗಳ ಬಳಿಕ ಸಾವಿರ ರೂಪಾಯಿಗಳ ಸಮೇತ ಬಂದು ಅವುಗಳನ್ನು ನನ್ನ ಕೈಗೆ ಹಾಕಿದಳು.

"ಇದು ನನಗಾಯಿತು. ಫೌಜದಾರರಿಗೋ?"

"ಇದರಾಗಿಂದೇ ಕೊಡಿರಲ್ಲ!"

"ಕೊಡಬಹುದು ಅನ್ನು. ನಿನ್ನನ್ನು ಮಾತ್ರ ಬಿಡುವದಿಲ್ಲ."

ಮಲ್ಲವ್ವ ಮತ್ತೆ ಎರಡು ನೂರು ರೂಪಾಯಿ ತಂದುಕೊಟ್ಟು, ಅಷ್ಟಕ್ಕೇ ತನ್ನನ್ನು ಬಿಡಬೇಕೆಂದು ಬೇಡಿಕೊಂಡಳು.

"ನೀನು ನನಗೆ ರೂಪಾಯಿ ಕೊಟ್ಟ ಸಂಗತಿಯನ್ನು ಯಾರ ಮುಂದೂ ಹೇಳಬೇಡ. ಫೌಜದಾರರ ಎದುರಿಗೂ ಬಾಯಿಬಿಡಬಾರದು, ಹುಷಾರಿ."

"ಇಲ್ಲ. ಯಾರಿಗೂ ಹೇಳುವದಿಲ್ಲ," ಎಂದು ಅವಳು ದೇವರನ್ನು ಸ್ಮರಿಸಿ ಆಣೆ ಮಾಡಿದಳು.

"ಭರಮಪ್ಪ ನಿನ್ನ ತಾಯಿಯನ್ನೂ ಇಟ್ಟುಕೊಂಡಿದ್ದಾನಂತಲ್ಲ. ಇಬ್ಬರನ್ನೂ ಹ್ಯಾಗೆ ನೋಡಿಕೊಳ್ತಾನೆ ಅಂತ ನನಗೆ ಆಶ್ಚರ್ಯ!" ಎಂದು ನಾನು ಹೇಳುತ್ತಲೂ ಅವಳು ಮುಖಕ್ಕೆ ಸೆರಗು ಹಾಕಿಕೊಂಡು ಅಳತೊಡಗಿದಳು.

"ಏನು ಮಾಡೂದು ಹೇಳ್ರಿ. ನಮ್ಮ ಮನೆತನ ಎಲ್ಲಾ ಅವನೇ ಕೆಡಿಸಿದ. ನನ್ನ ಗಂಡ ಸತ್ತಮ್ಯಾಲ ನಾನು ಮತ್ತೊಬ್ಬನ್ನ ಮಾಡಿಕೊಂಡು ಹೋಗುತಿದ್ದಿನಿ. ಇವನೇ ಬ್ಯಾಡ ಅಂದು ನನ್ನ ಬಲಿಯಾಗ ಹಾಕಿಕೊಂಡ."

ನೂರು ಜನರು ವಾಸಿಸಬಹುದಾದಂಥ ದೊಡ್ಡ ಮನೆ ಅವರದು. ಅಂಥ ಮನೆಯಲ್ಲಿ ತಾಯಿ, ಮಗಳು, ಮಗ ಮೂವರೇ ಇರುವಾಗ ಯಾರು ಏನನ್ನಾದರೂ ಮಾಡಲು ಅನುಕೂಲವಿತ್ತು. ಮಲ್ಲವ್ವನ ತಾಯಿ ಹಿತ್ತಲ ಕಡೆಯ ಕೋಣೆಯಲ್ಲಿ ಮಲಗುತ್ತಿದ್ದಳು. ಅವಳ ಹತ್ತಿರ ಹೋಗಬೇಕಾದಾಗ

ಭರಮಪ್ಪ ಹಿತ್ತಲ ಬಾಗಿಲಿನಿಂದ ಬರುತ್ತಿದ್ದ. ಮನೆಯ ಅಟ್ಟದ ಮೇಲೆ ಮಲ್ಲವ್ವ ಮಲಗುತ್ತಿದ್ದಳು. ಅವಳ ಹತ್ತಿರ ಬರುವಾಗ ಭರಮಪ್ಪ ಮುಂದಿನ ಬಾಗಿಲಿನಿಂದ ಬರುತ್ತಿದ್ದ.

ಸರಿಯೆ. ನಾನು ಬಂದ ಕೆಲಸ ಸಫಲವಾಗಿತ್ತು. ಕಿಸೆಯಲ್ಲಿ ಹನ್ನೆರಡು ನೂರು ರೂಪಾಯಿಗಳಿದ್ದುವು. ಆ ಹೆಣ್ಣು ಮಗಳಿಂದ ಹಣ ಕಿತ್ತುಕೊಂಡೆನಲ್ಲಾ ಎಂದು ನನಗೇನೂ ವ್ಯಸನವಾಗಲಿಲ್ಲ. ಅವಳು ಮಾಡಿದ ತಪ್ಪಿಗೆ ಅದೇನು ದೊಡ್ಡ ಶಿಕ್ಷೆಯಲ್ಲವೆಂದೇ ನನಗೆನ್ನಿಸುತ್ತಿತ್ತು. ಅಲ್ಲದೆ ಅವರೇನು ದರಿದ್ರರಲ್ಲ. ಕೂಡಿಸಿಟ್ಟ ಹಣವಿತ್ತು, ನಾನು ಕಿತ್ತುಕೊಂಡಿದ್ದೆ. ನನಗೇನು ಕಳವಳವಾಗಲಿಲ್ಲ....

ತಾತ್ಪೂರ್ತಿಕ ಗೌಡ ನಿಂಗಪ್ಪ, ಬಡವ. ಅವನಿಗೆ ಮನೆಯ ಭೂಮಿಯೇನೂ ಇರಲಿಲ್ಲ. ತಕ್ಕಮಟ್ಟಿಗೆ ಓದುವುದಕ್ಕೂ ಬರೆಯುವುದಕ್ಕೂ ಕಲಿತುಕೊಂಡು ಕಾಯಂ ಗೌಡರ ಬರೆವಣಿಗೆಯ ಕೆಲಸದಲ್ಲಿ ನೆರವಾಗುತ್ತಿದ್ದ. ಅದಕ್ಕೆ ಪ್ರತಿಫಲವೆಂದು ಕಾಯಂ ಗೌಡನಿಂದ ಸ್ವಲ್ಪ ಕಾಳುಕಡ್ಡಿ ಸಿಗುತ್ತಿತ್ತು. ಕಾಯಂ ಗೌಡನಿಗೆ ಸರಕಾರದಿಂದ ಸಿಕ್ಕುತ್ತಿದ್ದ ೬೦೦ ರೂಪಾಯಿಗಳ ವಾರ್ಷಿಕ ವೇತನದಲ್ಲಿ ಈತನಿಗೆ ೧೦೦ ರೂಪಾಯಿ ಸಲ್ಲುತ್ತಿತ್ತು. ಅಷ್ಟರಲ್ಲಿ ಇವನ ಸಂಸಾರ ನಡೆಯಬೇಕು. ಈ ನಿಂಗಪ್ಪನ ಮನೆಯ ಸ್ತ್ರೀಯರೊಡನೆ ಗೌಡನ ಮನೆಯ ಪುರುಷರು ಯಾವಾಗಲೂ ಗುಪ್ತ ಸಂಬಂಧವಿರಿಸಿಕೊಂಡಿರುತ್ತಿದ್ದರು. ಹಿರಿಯರ ಕಾಲದಿಂದಲೂ ನಡೆದುಕೊಂಡು ಬಂದಿದ್ದ ಪರಿಪಾಠ ಅದು – ಹಾಗೆ ನಿಂಗಪ್ಪನ ಮನೆತನದಲ್ಲಿ ಗೌಡರ ರಕ್ತ ಬೆರೆಯುತ್ತ ಬಂದುದರಿಂದ ಇವನೂ ಸಮಯ ಸಾಧಿಸಿ ನಿಂಗಪ್ಪ ಗೌಡ ಪಾಟೀಲ ಎಂದು ತನ್ನ ಹೆಸರು ಬದಲಾಯಿಸಿಕೊಂಡಿದ್ದ. ಹಳ್ಳಿಯಲ್ಲಿನ ಜನರೂ ಇವನನ್ನು ಗೌಡನೆಂದೂ ಇವನ ಮನೆಯ ಸ್ತ್ರೀಯರನ್ನು ಗೌಡಸಾನಿಯರೆಂದೂ ಕರೆಯುತ್ತಿದ್ದರು. ಅದೊಂದು ಹೆಮ್ಮೆಯ ವಿಷಯವೆ ಆಗಿದ್ದಿತು ನಿಂಗಪ್ಪನಿಗೆ.

ಹನ್ನೆರಡು ನೂರು ರೂಪಾಯಿಗಳಲ್ಲಿನ ಒಂದು ನೂರನ್ನು ನಿಂಗಪ್ಪನಿಗೆ ಕೊಟ್ಟೆ. ಅವನೂ ಒಳ್ಳೆಯವ. ನೂರು ರೂಪಾಯಿಗಳನ್ನೆಲ್ಲ ತಾನೇ ನುಂಗದೆ, ಹಳಬರಿಗೂ, ಓಲೇಕಾರರಿಗೂ ತಲಾ ಐದೈದು ರೂಪಾಯಿಗಳಂತೆ ಒಟ್ಟು ಇಪ್ಪತ್ತೈದು ರೂಪಾಯಿ ಕೊಟ್ಟು ಉಳಿದುದನ್ನು ತನಗಾಗಿ ಇಟ್ಟುಕೊಂಡ,

ಆ ಹಣದ ವಿಚಾರವಾಗಿ ಯಾರೂ ಯಾರೆದುರಿಗೂ ಚಕಾರವೆತ್ತದಂತೆ ಸೂಚಿಸಿದ್ದಾಯಿತು. ಅವರು ತಣ್ಣಗಾದರು.

ಊಟ ತೀರಿಸಿಕೊಂಡು, ಮಲಗಲು ಗುಡಿಗೆ ಹೊರಟೆ. ದೊಡ್ಡ ಗೌಡರ ಮನೆಯಿಂದ ಹಾಸಿಗೆ ಬಂದುವು. ನಾನು ಮಲಗಿಕೊಂಡೆ.

ಸುಮಾರು ಹನ್ನೊಂದು ಗಂಟೆಯ ವೇಳೆಗೆ ಫೌಜದಾರರೂ ಅಡುಗೆಯಾಳು ಚೆನ್ನನೂ ಚಾವಡಿಗೆ ಹಿಂದಿರುಗಿ ಬಂದರು. ಕಾವಲು ಕೆಲಸಕ್ಕಾಗಿ ಇಬ್ಬರು ಓಲೇಕಾರರು ಚಾವಡಿಯಲ್ಲೂ ಇನ್ನಿಬ್ಬರು ನನ್ನ ಹತ್ತಿರ ಗುಡಿಯಲ್ಲೂ ಇದ್ದರು. ಹಣವಿರಿಸಿದ್ದ ಪೆಟ್ಟಿಗೆಯೂ ನನ್ನ ಹತ್ತಿರವೇ ಇತ್ತು.

ಫೌಜದಾರರು ಚಾವಡಿಗೆ ಬಂದು ಊಟ ಮುಗಿಸಿಕೊಂಡು ಮಲ್ಲವ್ವನ ಮನೆಗೆ ಹೋಗಿ, ಹೊರಗಿನ ಕೊಠಡಿಯಲ್ಲಿ ಭರಮಪ್ಪನ ಮಗಳ ಜತೆಯಲ್ಲಿ ಮಲಗಿರಬೇಕು. ನಾಯಿಯ ಬಗುಳುವಿಕೆಯಿಂದಾಗಿ ಮಧ್ಯರಾತ್ರಿಯ ವೇಳೆಗೆ ನನಗೆ ಎಚ್ಚರವಾಯಿತು. ಎದ್ದು, ಒಂದು ಸಿಗರೇಟು ಹೊತ್ತಿಸಿ ಸೇದುತ್ತಾ ಚಾವಡಿಗೆ ಬಂದೆ. ಅಡುಗೆಯವನೂ ಓಲೇಕಾರರೂ ಮಲಗಿ ನಿದ್ರಿಸುತ್ತಿದ್ದರು. ಅಡುಗೆಯವನ ಪೆಟ್ಟಿಗೆಯ ಮುಚ್ಚಳ ತೆಗೆದು ನೋಡಿದಾಗ ಅದರಲ್ಲಿದ್ದ ಕೈಚೀಲದಲ್ಲಿ ದೊಡ್ಡ ದೊಡ್ಡ ಮೂರು ಸೀಸೆಗಳಿದ್ದುದು ಕಂಡುಬಂದಿತು. ಒಂದು ಸೀಸೆಯನ್ನೆತ್ತಿ ಮೂಗಿಗೆ ಹಿಡಿದಾಗ ಸೇಂದಿಯ ವಾಸನೆ ಬೀಸಿ ತಲೆ ತಿರುಗುವಂತಾಯಿತು. ನಮ್ಮ ಈಶ್ವರಪ್ಪನವರ ಗುಟ್ಟು ಆಗ ಗೊತ್ತಾಯಿತು ನನಗೆ. ತಮ್ಮ ಸೇಂದಿಯ ದುರಭ್ಯಾಸ ನನಗೆ ತಿಳಿಯಬಾರದೆಂದೇ ಅವರು ರಾತ್ರಿ ಸ್ನಾನ ಪೂಜೆಗಳ ನೆಪ ಹೇಳಿ ತಾವೊಬ್ಬರೇ ಊಟ ಮಾಡುತ್ತಿದ್ದುದು! "ಒಳ್ಳೆಯ ಪೂಜೆಯೇ!" ಎಂದುಕೊಂಡು ಮನಸ್ಸಿನಲ್ಲಿಯೇ ನಗುತ್ತಾ ಪೆಟ್ಟಿಗೆಯನ್ನು ಮುಚ್ಚಿ ಗುಡಿಗೆ ಹಿಂದಿರುಗಿದೆ. ಒಬ್ಬ ಓಲೇಕಾರ ನನ್ನೆಬ್ಬಿಸಿ ಸಿಂಗಪ್ಪ ಗೌಡನನ್ನು ಕರೆಯಿಸಿದೆ. ಅವನು ಬರುತ್ತಲೂ ಅವನನ್ನೂ ಜೊತೆಗೆ ಒಬ್ಬ ಓಲೇಕಾರನನ್ನೂ ಕರೆದುಕೊಂಡು ಮಲ್ಲವ್ವನ ಮನೆಗೆ ಬಂದೆ. ಹೊರಭಾಗದ ಕೊಠಡಿಯಲ್ಲಿ ದೀಪವಿದ್ದುದು ಕಾಣುತ್ತಿತ್ತು. ಒಂದು ಕಿಂಡಿಯಲ್ಲಿಣಿಕಿ ನೋಡಿದಾಗ ಒಂದನ್ನೊಂದು ತಬ್ಬಿಕೊಂಡು ಬಿದ್ದಿದ್ದ ನಗ್ನದೇಹ

ಗಳೆರಡು ಕಾಣಿಸಿದುವು. ನಿಂಗಪ್ಪನೂ ಆ ದೃಶ್ಯವನ್ನು ಕಂಡು ಪಿಸಿಪಿಸಿ ನಗುತ್ತಾ ನಿಂತುಕೊಂಡ.

ಫೌಜದಾರರ ಜೊತೆಗೆ ಬಂದಿದ್ದ ಓಲೇಕಾರ, ಮನೆಯೆದುರಿನ ಕಟ್ಟೆಯ ಮೇಲೆ ಕಂಬಳಿ ಹಾಸಿ ನಿದ್ರಿಸುತ್ತಿದ್ದ. ಅವನನ್ನು ಎಬ್ಬಿಸುತ್ತಿದ್ದ ಹಾಗೇ ಮನೆಯ ಬಾಗಿಲು ಓರೆಯಾಯಿತು. ಒಳಗಡೆ ಮಲಗಿದ್ದ ಫೌಜದಾರರಿಗೂ ಎಚ್ಚರವಾಗಿತ್ತು. ಅವರು ಎದ್ದು ಬಟ್ಟೆ ಹಾಕಿಕೊಳ್ಳುವಷ್ಟರಲ್ಲಿ ಒಬ್ಬ ಹೆಂಗಸು ಮುಖ ಮುಚ್ಚಿಕೊಂಡು ಒಳಗಡೆ ಹೊರಟು ಹೋದಳು. ಒಂದೆರಡು ನಿಮಿಷ ಗಳಲ್ಲಿ ಭರಮಪ್ಪನೂ ಬಂದ ಒಳಗಿನಿಂದ.

"ನೀನ್ಯಾಕೆ ಭರಮಪ್ಪಾ ಈ ಮನೆಯಲ್ಲಿ?" ಎಂದು ನಾನು ಕೇಳಿದೆ.

"ಫೌಜದಾರರು ನನ್ನನ್ನು ಕರೆಯಿಸಿದ್ದರು ಜವಾಬಿಗಾಗಿ. ಇಲ್ಲೇ ಮಲಗಿ ಬಿಟ್ಟೆ," ಎಂದ ಭರಮಪ್ಪ.

ನಾನು ಮತ್ತೆ ಚಾವಡಿಗೆ ಬಂದೆ. ನಿದ್ದೆಯಂತೂ ಹಾರಿಹೋಗಿತ್ತು. ನಿಂಗಪ್ಪಗೌಡನೂ ನಾನೂ ಮಾತನಾಡುತ್ತ ಕುಳಿತೆವು. ಭರಮಪ್ಪನ ವಿಚಾರವಾಗಿ ತನಗೆ ಗೊತ್ತಿದ್ದುದೆಲ್ಲವನ್ನೂ ಅವನು ಹೇಳಿದ.

....ಭರಮಪ್ಪನ ಹೆಂಡತಿ ಹತ್ತು ಹನ್ನೆರಡು ವರ್ಷಗಳ ಹಿಂದೆಯೆ ತೀರಿ ಕೊಂಡಿದ್ದಳು. ಅವನಿಗೆ ಒಬ್ಬಳೇ ಒಬ್ಬ ಮಗಳಿದ್ದಳು. ಸುಂದರವ್ವ ಎಂದು ಅವಳ ಹೆಸರು. ಭರಮಪ್ಪ ದೊಡ್ಡ ಕೇಡಿಯಾದುದರಿಂದ ಅವನ ಮಗಳನ್ನು ಮದುವೆಯಾಗಲು ಯಾರೂ ಸಿದ್ಧವಾಗಿರಲಿಲ್ಲ. ಅವಳು ರೈತರಿಗೆ ತಕ್ಕ ಹೆಣ್ಣಲ್ಲವೆಂದು ಎಲ್ಲರೂ ಹೇಳುತ್ತಿದ್ದರು. ರಾಮಪ್ಪನಿಗೆ ಗಂಟು ಹಾಕಿ ಅವನ ಆಸ್ತಿಯನ್ನೆಲ್ಲ ಎತ್ತಿಹಾಕುವ ವಿಚಾರವೂ ಇತ್ತು ಭರಮಪ್ಪನಿಗೆ. ಮಲ್ಲವ್ವನನ್ನು ತನ್ನ ಅಂಕೆಯಲ್ಲಿರಿಸಿಕೊಂಡು ಆ ಹೊಂಚು ಸಾಧಿಸಲು ಯತ್ನಿಸಿದ್ದ. ರಾಮಪ್ಪ ಮಾತ್ರ ಒಪ್ಪಿಕೊಂಡಿರಲಿಲ್ಲ. ಸುಂದರವ್ವನಿಗೂ ತುಂಬು ಪ್ರಾಯ. ಯುವಕರನ್ನು ಕಂಡರೆ ಕುಣಿದಾಡುತ್ತಿದ್ದಳು. ಸಧ್ಯ ಪೋಲೀಸ್ ಪಾಟೀಲನಾಗಿದ್ದ ಸಂಗನ ಗೌಡ ಒಮ್ಮೆ ಸುಂದರವ್ವನನ್ನು ಬಲೆಗೆ ಹಾಕಿಕೊಂಡಿದ್ದ. ಅದು ಅವನ ತಂಗಿಯ ವಿವಾಹಕಾಲದಲ್ಲಿ. ಆಗ ಸಂಗನಗೌಡನಿಗೆ ೨೬-೨೭ ವರ್ಷ ವಯಸ್ಸು. ಭರಮಪ್ಪನಿಗೂ ಆಗಲೇ ಅನುಮಾನ ಬಂದಿರಬೇಕು. ಅಂದಿನಿಂದ ಗೌಡನಿಗೂ ಅವನಿಗೂ ಒಳಗೊಳಗೇ ಮನಸ್ತಾಪ ಬೆಳೆದುಬಂದಿತ್ತು....

ಅದನ್ನೆಲ್ಲ ಹೇಳಿ ಮುಗಿಸಿ ನಿಂಗಪ್ಪ ಮತ್ತೆ ನಗತೊಡಗಿದ.

ಬೆಳಗಿನ ಐದು ಗಂಟೆಗೆ ಫೌಜದಾರರು ಬಂದರು.

"ಯಾಕೆ ಶಿವಣ್ಣಾ, ಇನ್ನೂ ಎಚ್ಚರಿದ್ದೀಯೇನು?"

"ಇಲ್ಲ ರಾವ್ ಸಾಹೇಬರೆ. ಇದೇ ಈಗ ಎದ್ದು ಗೌಡರೊಡನೆ ಮಾತಾಡುತ್ತಾ ಕೂತಿದ್ದೆ."

ಅವರು ತಮ್ಮ ಹಾಸಿಗೆಯ ಮೇಲೆ ಬಿದ್ದುಕೊಂಡರು. ಮತ್ತೆ ಅವರು ಏಳಬೇಕಾದರೆ ಎಂಟು ಗಂಟೆಯಾಗುತ್ತಿತ್ತು. ನಾನಾಗಲೆ ಗೌಡ-ಓಲೇಕಾರರನ್ನು ಕರೆದುಕೊಂಡು ಮಲ್ಲವ್ವನ ಮನೆಗೆ ಹೋಗಿ ಅವಳ, ಅವಳ ತಾಯಿಯ ಹೇಳಿಕೆ ಬರೆದುಕೊಳ್ಳುವುದರಲ್ಲಿ ತೊಡಗಿಕೊಂಡಿದ್ದೆ. ಹೇಳಿಕೆಗಳಲ್ಲೂ ಅದೇ ಹೊಟ್ಟೆನೋವಿನ ಕಥೆ. ಅವರ ಮನೆಯ ಅಕ್ಕಪಕ್ಕದವರ ಹೇಳಿಕೆಗಳನ್ನೂ ಬರೆದುಕೊಳ್ಳಬೇಕಾಗಿತ್ತು. ಒಬ್ಬನನ್ನು ಕರೆದು ವಿಚಾರಿಸಿದೆ. ತನಗೇನೂ ತಿಳಿಯದೆಂದು ಹೇಳಿ ಅವನು ಜಾರಿಕೊಳ್ಳಲು ಯತ್ನಿಸಿದ. ಅವನನ್ನು ಸರಿಪಡಿಸುವ ಕೆಲಸವನ್ನು ಮಲ್ಲಪ್ಪನಿಗೊಪ್ಪಿಸಿ ನಾವು ಭರಮಪ್ಪನ ಮನೆಗೆ ಹೋದೆವು. ಅವನ ಮಗಳು ಸುಂದರವ್ವ ಬಾಗಿಲಲ್ಲಿಯೆ ನಿಂತುಕೊಂಡಿದ್ದಳು. ಅವಳಿಗಾಗ ಇಪ್ಪತ್ತರ ಪ್ರಾಯವಿರಬಹುದು. ತುಂಬಿದ ದೇಹ, ಅಗಲವಾದ ಮೊಗ, ಆ ಮೊಗಕ್ಕೆ ಶೋಭಿಸುವಂಥ ಮೂಗು, ಅದಕ್ಕೊಂದು ಮೂಗುಬಟ್ಟು: ಕೆಂಪು ಹರಳಿನದು. ಎದೆಯುಬ್ಬಿಸಿಕೊಂಡೇ ನಿಂತುಕೊಂಡಿದ್ದಳು ಸುಂದರವ್ವ. ಅದೂ ತುಂಬಿದ ಎದೆಯೇ. ಇನ್ನೂ ತಲೆ ಬಾಚಿಕೊಂಡಿರಲಿಲ್ಲವಾದ್ದರಿಂದ ಒಂದೆರಡು ಮುಂಗುರುಳು ಮುಖದ ಮೇಲೆ ಹಾರಾಡುತ್ತಿದ್ದುವು.

ಭರಮಪ್ಪನ ಸಂಗಡ ನಾನು ಮೊಸ್ತಿಲಲ್ಲಿ ಹೆಜ್ಜೆಯಿಡುತ್ತಲೂ ಅವಳು ಸ್ವಲ್ಪ ಸರಿದು ನಿಂತುಕೊಂಡಳು. ಫೌಜದಾರರನ್ನೇ ವಶಪಡಿಸಿಕೊಂಡ ತನಗೆ ಈ ಪೋಲೀಸನ ಅಂಜಿಕೆಯೇನು! ಎನ್ನುವ ಹಾಗಿತ್ತು ಅವಳ ಮುಖಭಾವ. ಅವಳ ಕಣ್ಣುಗಳಲ್ಲಿ ತುಂಬಿಬಂದಿದ್ದ ಅತೃಪ್ತ ಬಯಕೆಯನ್ನು ಕಂಡಾಗ, ಒಬ್ಬ ಗಂಡಸನ್ನು ನಂಬಿ ಬಾಳುವ ಹೆಣ್ಣು ಅವಳಲ್ಲವೆಂದೇ ನನಗೆನ್ನಿಸಿತು. ಬೆಳಗಿನ ವರೆಗೆ ಫೌಜದಾರರ ಜೊತೆಗೆ ಮಲಗಿದ್ದು ಬಂದಿದ್ದರೂ ಅವಳಿಗಿನ್ನೂ ಸಮಾಧಾನವಾಗಿರಲಿಲ್ಲವೆಂಬುವನ್ನು ಸಾರಿ ಹೇಳುತ್ತಿತ್ತು ಮುಖ. ನನಗಾಗಿ ಚಹಾ

ತಯಾರಿಸುವಂತೆ ಮಗಳಿಗೆ ಹೇಳಿ ನನ್ನನ್ನು ಅಲ್ಲೇ ಕೂಡಿಸಿ ಭರಮಪ್ಪ ಮತ್ತೆ ಮಲ್ಲವ್ವನ ಮನೆಗೆ ಹೊರಟು ನಿಂತ.

"ನನಗೇನು ಚಹಾ ಬೇಡ ಭರಮಪ್ಪ. ಇವೇ ಈಗ ಆಗಿದೆ," ಎಂದು ನಾನು ಹೇಳಿದೆ.

"ಆದರೇನಂತೆ ಬಿಡಿರಿ. ನಿಮಗೇನು ಪೋಲೀಸರಿಗೆ ಚಹಾ ಅಂದರೇ ಊಟ ಇದ್ದಂತೆ. ನನ್ನ ಮಗಳಿಗೂ ಚಹಾ ಮಾಡುವದೆಂದರೆ ಬಹಳ ಹುರುಪು."

"ಅವಳಿಗಿನ್ನೂ ಮದುವೆಯಾಗಲಿಲ್ಲೇನು ?" ಆಗಿಲ್ಲವೆಂಬುದನ್ನರಿತಿದ್ದರೂ ನಾನು ಬೇಕೆಂತಲೇ ಪ್ರಶ್ನಿಸಿದೆ.

"ಇಲ್ಲ. ನಿಮ್ಮಂಥಾ ಒಬ್ಬ ಪೋಲೀಸನಿಗೇ ಕೊಡಬೇಕೆಂತ ಮಾಡಿದ್ದೀನಿ," ಎಂದು ಹೇಳಿ ಮುಗುಳ್ನಗುತ್ತಾ ಭರಮಪ್ಪ ಮತ್ತೆ ಮಲ್ಲವ್ವನ ಮನೆಗೆ ಹೊರಟು ಹೋದ.

ಸುಂದರಿಯನ್ನು ನೋಡಿ ನಾನೂ ಮೋಹಿತನಾಗಿದ್ದೆ. ಎಂಥವರನ್ನೂ ಮರುಳು ಮಾಡುವ ಹೆಣ್ಣು ಆಕೆ. ನಿಂಗಪ್ಪ ಓಲೇಕಾರರು ಹೊರಗೆ ಕುಳಿತಿದ್ದರು. ಸುಂದರಿ ಅಡುಗೆಯ ಮನೆಗೆ ಹೊರಡುತ್ತಲೂ ನಾನೂ ಎದ್ದು ಅವಳನ್ನು ಹಿಂಬಾಲಿಸಿದೆ. ಅಡುಗೆಯ ಮನೆಯ ಬಾಗಿಲಲ್ಲಿ ನಿಂತು ಅವಳು ಹೊರಳಿ ನೋಡಿ,

"ಯಾಕೆ ? ಏನು ಬೇಕು ?" ಎಂದು ಕೇಳಿದಳು.

ನಾನು ಮಾತನಾಡಲಿಲ್ಲ. ಹಿಹಿ ಎಂದು ನಕ್ಕುಬಿಟ್ಟೆನಷ್ಟೆ.

ಅವಳು ಒಂದು ಗಳಿಗೆ ಮೌನವಾಗಿ ನನ್ನನ್ನು ದಿಟ್ಟಿಸುತ್ತಿದ್ದಳು. ಆ ನೋಟದಲ್ಲಿ ಆಹ್ವಾನ ಅವಿತುಕೊಂಡಿತ್ತು.

"ನಿನ್ನೆ ರಾತ್ರಿ ನಿದ್ದೆ ಹತ್ತಿತ್ತೇ ಸುಂದರಿ ?" ಎಂದು ನಾನು ಕೇಳಿದೆ.

ಅವಳು ಕೊರಳು ಕೊಂಕಿಸುತ್ತಾ,

"ಹತ್ತಿತ್ತು, ನಿಮಗ್ಯಾಕೆ ಅದೆಲ್ಲಾ ?" ಎಂದಳು.

"ಯಾಕೆ ಅಂದರೆ, ನಮ್ಮ ಫೌಜದಾರರಿಗಂತೂ ಬೆಳಗಿನ ತನಕ ನಿದ್ದೆ ಹತ್ತಲಿಲ್ಲವಂತೆ. ಅದಕ್ಕೇ ಕೇಳಿದೆ."

ಅವಳ ಮುಖದ ಮೇಲೆ ಮೂಡಿದ್ದ ಬಿಂಕವೆಲ್ಲಾ ಜರ್ರನೆ ಇಳಿದು ಹೋಯಿತು.

"ನಿನ್ನ ಸೀರೆ ಕುಬುಸಗಳನ್ನು ಆ ಕೋಣೆಯಿಂದ ತಂದೆಯೋ ಅಥವಾ ಅಲ್ಲೇ ಬಿಟ್ಟು ಬಂದೆಯೋ?" ಎಂದು ನಾನು ಕೇಳಿದೆ.

ಸುಂದರಿಯ ಕಣ್ಣುಗಳಲ್ಲಿ ಅಶ್ರುಗಳು ಕಾಣಿಸಿಕೊಂಡುವು. ನಾನು ಅವಳ ಕೈ ಹಿಡಿದು ಅವಳ ತಲೆಯನ್ನು ನೇವರಿಸಿದೆ. ಅವಳು ಶಾಂತಳಾದಳು.

"ಇದರಾಗ ನಂದೇನು ತಪ್ಪಿಲ್ಲ ನೋಡಿರಿ. ಫೌಜದಾರರು ಕರೆಸಿದ್ದಕ್ಕೆ ಅಂಜಿ ಹೋಗಬೇಕಾಯ್ತು."

"ಅವರೇನು ಮಾಡಿದರು?"

"ಥೂ! ಅದನ್ನೆಲ್ಲಾ ಏನು ಹೇಳುವದು ಬಿಡಿರಿ. ಅವ ಬಹಳ ಹೊಲಸು ಮನುಷ್ಯ. ಸಿಂದೀ ಕುಡಿದು ಗಬ್ಬು ವಾಸ ಬಡೀತಿತ್ತು. ನನಗಂತೂ ಹೇಸಿಕೆಯಾಗುತ್ತಿತ್ತು. ಆದರೇನು ಮಾಡೂದು. ತಪ್ಪಿಸಿಕೊಳ್ಳುವಂತಿರಲಿಲ್ಲ."

ಹಾಗೆ ಹೇಳುತ್ತಾ ಅವಳು ನನ್ನನ್ನು ಬಯಕೆಯ ಕಣ್ಣುಗಳಿಂದ ನೋಡ ತೊಡಗಿದಳು. ಫೌಜದಾರರು ವಯಸ್ಸಾದವರು. ಅವಳು ಹೊಸ ಹರೆಯದ ಹೆಣ್ಣು. ಅವರಿಂದ ಅವಳಿಗೆ ಕೊಂಚವೂ ತೃಪ್ತಿಯಾಗಿರಲಿಲ್ಲವೆಂದು ತೋರುತ್ತಿತ್ತು. ನಾನೂ ಹರೆಯದವ. ಎಂತಲೇ ನನ್ನನ್ನಾಕೆ ಹರಿದು ತಿನ್ನುವಂತೆ ನೋಡುತ್ತಿದ್ದುದು. ಅವಳ ದೇಹದಲ್ಲೆಲ್ಲ ಕಾವು ಉಕ್ಕೇರಿ ಹೊರ ಚಿಮ್ಮುತ್ತಿದ್ದ ಹಾಗೆ ತೋರುತ್ತಿತ್ತು. ನನಗೂ ಉದ್ರೇಕವಾಗುತ್ತಿದ್ದಿತಾದರೂ ಅದು ಸರಿಯಾದ ಸಮಯವಲ್ಲವೆಂದುಕೊಂಡು ಅಲ್ಲಿಂದ ಹೊರಟು ಬಂದೆ.

ಫೌಜದಾರರ ಬಗೆಗೆ ಕನಿಕರವೆನಿಸುತ್ತಿತ್ತು ನನಗೆ. ಅವರಿಗೆ ಹೆಣ್ಣಿನ ಹುಚ್ಚು ವಿಪರೀತ. ಅದರಲ್ಲೂ, ಸುಂದರವ್ವನಂಥ ತರುಣಿಯರೆಂದರೆ ವಿಶೇಷ ಆಸೆ. ಆದರೆ, ತರುಣಿಯರನ್ನು ತೃಪ್ತಿಗೊಳಿಸಲು ಅವಶ್ಯವಿರುವ ಶಕ್ತಿಯಿಲ್ಲ. ಅಯ್ಯೋ ಪಾಪ! ಎಂದು ಕನಿಕರ ನನಗೆ....

....ಭರಮಪ್ಪ ಬಂದ. ಮಲ್ಲವ್ವನ ನೆರೆಮನೆಯಾತ ಸುಳ್ಳು ಹೇಳಿಕೆ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದನಂತೆ. ನಾವು ಬಲವಂತ ಮಾಡು ವಂತಿರಲಿಲ್ಲ. ಸುಂದರಿಯಿಂದಲೇ ಒಂದು ಹೇಳಿಕೆ ತೆಗೆದುಕೊಂಡು ಚಹಾ ಕುಡಿದು ಚಾವಡಿಗೆ ಬಂದೆ. ಫೌಜದಾರರು ಆಗತಾನೇ ಹಾಸಿಗೆಯಿಂದೆದ್ದವರು ಮುಖ ತೊಳೆದುಕೊಳ್ಳುತ್ತಿದ್ದರು. ಚೆನ್ನ ಅಡುಗೆಯ ಸಿದ್ಧತೆಯಲ್ಲಿದ್ದ. ನಿಂಗಪ್ಪ

ಗೌಡ ಸಾಕಷ್ಟು ಬೆಣ್ಣೆಯನ್ನೂ ಹಾಲನ್ನೂ ತಂದುಕೊಟ್ಟಿದ್ದ. ಅವನಿಗೆ ೧೫೦ ರೂ ಲಾಭವಾಗಿತ್ತಲ್ಲವೆ?

"ಈ ದಿನ ನಾವು ಹೊರಟುಬಿಡೋಣವೇ ರಾವ್‌ಸಾಹೇಬ್?" ಎಂದು ಕೇಳಿದೆ.

"ಈಗಲೇ ಯಾಕೆ? ಇದೊಂದು ದಿನ ಇಲ್ಲಿಯೆ ಇರೋಣ," ಎಂದರು. ಫೌಜದಾರರು.

"ಇಲ್ಲಿಯ ಕೆಲಸ ತೀರಿರದಿದ್ದರೆ ಇರಲಿಕ್ಕೆ ಬರುತ್ತಿತ್ತು. ಸುಮ್ಮನೆ ಯಾಕೆ ಕಾಲಹರಣ? ನಾನು ಹೋಗಿಬಿಡುತ್ತೇನೆ."

"ಛೆ. ಛೆ. ಬೇಡ. ಇಲ್ಲಿ ಇನ್ನೊಂದೆರಡು ದಿನ ಇದ್ದು ಅನಂತರ ಮತ್ತೊಂದು ಹಳ್ಳಿಗೆ ವ್ಹಿಜಿಟ್ ಕೊಟ್ಟು ಹೋದರಾಯಿತು."

ಸರಿ. ಮಲ್ಲವ್ವನನ್ನೂ ಸುಂದರವ್ವನನ್ನೂ ಬಿಟ್ಟು ಹೊರಡಲು ಅವರಿಗೆ ಸಂಕಟವಾಗುತ್ತಿರಬೇಕು.....

"ನಾನು ಕಾಲವಾಡಕ್ಕೆ ಹೋಗಿಬಿಡಲೇ? ನೀವು ಆ ಮೇಲೆ ಬರಬಹುದು."

"ಬೇಡ. ಬೇಡ. ಇಬ್ಬರೂ ಕೂಡೇ ಹೋಗೋಣ."

ನಾನು ಹೆಚ್ಚು ವಾದಿಸುವಂತಿರಲಿಲ್ಲ. ಎಷ್ಟಾದರೂ ಅವರು ನನ್ನ ಮೇಲಧಿಕಾರಿಯಲ್ಲವೆ?

ಊಟಮಾಡಿ, ಮಧ್ಯಾಹ್ನ ಮಲಗಿಕೊಂಡೆ. ನಿದ್ದೆ ಬರಲಿಲ್ಲ. ಕಣ್ಣುಗಳೆದುರಿಗೆ ಸುಂದರಿಯ ಮುಖವೇ. ನಾನು ಅವಳ ಕೈ ಹಿಡಿದು ತಲೆ ನೇವರಿಸಿದಾಗ ಅವಳು ನನ್ನ ಎದೆಯ ಮೇಲೆ ತಲೆಯಿಟ್ಟು ನಿಂತುಕೊಂಡಿದ್ದುದು, ಅವಳ ಚಂಚಲ ನೇತ್ರಗಳಿಂದ ಅಶ್ರುಬಿಂದುಗಳುರುಳಿದ್ದುದು, ಹಾಸಿಗೆಗೆ ಆಹ್ವಾನಿಸುವಂತೆ ಅವಳು ನನ್ನನ್ನು ದಿಟ್ಟಿಸಿದ್ದುದು ಎಲ್ಲವೂ ಮತ್ತೆಮತ್ತೆ ನೆನಪಿಗೆ ಬರುತ್ತಿತ್ತು. ನನ್ನನ್ನು ಕೂಡಿಕೊಳ್ಳಲು ಅವಳಿಗೂ ಆತುರತೆಯಿತ್ತು. ಹಾಗಾದರೆ ನಾನೇಕೆ ಅವಳನ್ನು ಬಿಡಬೇಕು? ಅವಳನ್ನು ವಶಪಡಿಸಿಕೊಂಡರೆ ಫೌಜದಾರರಿಗೊಂದು ಪಾಠವನ್ನೂ ಕಲಿಸಿದ ಹಾಗಾಗಬಹುದು. ಅವರು ಈ ಊರಿಗೆ ಬಂದಿರುವುದು ಸರಕಾರಿ ಅಧಿಕಾರಿಯಾಗಿ, ಸರಕಾರಿ ಕೆಲಸಕ್ಕಾಗಿ – ಅದೂ ಕೂಡ ಒಂದು ಮರ್ಮರಣದ ಸಂಬಂಧದಲ್ಲಿ. ಅದನ್ನು ಸ್ವಲ್ಪವೂ

ಗಮನಿಸದೆ ಮಲ್ಲವ್ವ ಮತ್ತು ಸುಂದರಿಯರ ಸಂಗಡ ಇವರ ಕಾಮಕೇಳಿ ನಡೆದಿದೆ. ರಾತ್ರಿ ಸೇಂದಿ ಸೇವಿಸುವುದು, ಹೆಂಗಸರ ಪಕ್ಕದಲ್ಲಿ ಬಿದ್ದುಕೊಳ್ಳುವುದು. ಬೆಳಗಾಗುತ್ತಲೂ ಹೊಸದೊಂದು ಹೆಣ್ಣು ಹುಡುಕುವುದಕ್ಕಾರಂಭ. ಇವರು ಬಯಸಿದ ಹೆಣ್ಣುಗಳನ್ನು ತಂದು ಒಪ್ಪಿಸಲು ಸಿದ್ಧವಾಗಿಯೆ ಇದ್ದಾಳೆ ಮಲ್ಲವ್ವ; ಇವರು ಫೌಜದಾರರೆಂಬ ಒಂದೇ ಒಂದು ಕಾರಣದಿಂದಾಗಿ ಇವರಿಗೆ ಅಂಜಿಕೊಂಡು ಇಂಥ ಕೆಲಸ ಮಾಡುತ್ತಿದ್ದಾಳೆ. ಇದು ಅಧಿಕಾರದ ದುರುಪಯೋಗವೇ ಅಲ್ಲವೆ? ಇಂಥ ಅಯೋಗ್ಯನಿಗೆ ಬುದ್ಧಿ ಕಲಿಸಲೇಬೇಕು....

ಹಾಗೆ ಯೋಚಿಸಿ, ಮನಸ್ಸಿನಲ್ಲೇ ಒಂದು ಯೋಜನೆ ಸಿದ್ಧಪಡಿಸಿಕೊಂಡು, ಭರಮಪ್ಪ ಮನೆಯಲ್ಲಿರುವನೋ ಇಲ್ಲವೋ ಎಂಬುದನ್ನು ತಿಳಿದುಕೊಂಡು ಬರಲು ಒಬ್ಬ ಓಲೇಕಾರನನ್ನು ಕಳಿಸಿದೆ. ಐದು ನಿಮಿಷಗಳಲ್ಲಿ ಅವನು ಹಿಂದಿರುಗಿಬಂದು, ಭರಮಪ್ಪ ಹೊಲಕ್ಕೆ ಹೋಗಿರುವ ಸಂಗತಿಯನ್ನು ತಿಳಿಸಿದ.

ರಾತ್ರಿಯಿಡೀ ಜಾಗರಣೆ ಮಾಡಿದ್ದ ಫೌಜದಾರರೂ ಮಲಗಿ ನಿದ್ರಿಸುತ್ತಿದ್ದರು. ನಾನು ಮೆಲ್ಲಗೆ ಎದ್ದು ಚಾವಡಿಯಿಂದ ಹೊರಟೆ. ನನ್ನನ್ನು ಹಿಂಬಾಲಿಸಿದ ಓಲೇಕಾರನ ಕೈಗೆ ಐದು ರೂಪಾಯಿ ಹಾಕಿ,

"ಸುಂದರವ್ವನ ಜವಾಬು ಅರ್ಥ ಆಗಿದೆ. ಮುಗಿಸಿಕೊಂಡು ಬರ್ತೇನೆ. ಈ ಸುದ್ದಿ ಯಾರಿಗೂ ತಿಳಿಸಬೇಡ," ಎಂದು ಹೇಳಿದೆ. ನಮ್ಮಂಥ ಅನೇಕ ಪೋಲೀಸರನ್ನು ಕಂಡ ಅನುಭವಿಕನಾತ. ಅರ್ಥಪೂರ್ಣವಾದ ನಗು ನಕ್ಕು ಸಲಾಂ ಹೊಡೆದು ತನ್ನ ಸ್ಥಳಕ್ಕೆ ಹೋಗಿ ಕುಳಿತುಕೊಂಡ.

ನಾನು ಭರಮಪ್ಪನ ಮನೆಯಲ್ಲಿ ಅಡಿಯಿರಿಸಿದಾಗ ಸುಂದರಿ, ಪಡಸಾಲೆಯಲ್ಲಿ ಬೇಳೆ ಹಸನುಮಾಡುತ್ತಾ ಕುಳಿತಿದ್ದಳು. ಎದೆಯ ಮೇಲಿನ ಸೆರಗು ಜಾರಿ ಕೆಳಕ್ಕುರುಳಿ ಅವಳ ಸುಪುಷ್ಟ ಸ್ತನಗಳನ್ನು ಪ್ರದರ್ಶಿಸುತ್ತಿತ್ತು. ಬಿಗಿದು ಕಟ್ಟಿದ ಕುಬುಸವನ್ನೂ ಹರಿದು ಹೊರಗೆ ಬರುವವೇನೊ ಎನ್ನುವಂತೆ ತೋರುತ್ತಿದ್ದ ಆ ಸ್ತನಗಳನ್ನು ನೋಡುತ್ತಾ ಒಂದು ನಿಮಿಷ ನಾನು ಮಂತ್ರಮುಗ್ಧನಂತೆ ನಿಂತುಕೊಂಡಿದ್ದೆ. ಅವಳು ಲಜ್ಜಿತಳಾಗಿ, ಥಟ್ಟನೆ ಸೆರಗು ಹೊದೆದುಕೊಂಡು ಬೇಳೆಯ ಮೊರವನ್ನೆತ್ತಿಕೊಂಡು ಒಳಗಡೆ ನಡೆದಳು. ಮನೆಯಲ್ಲಿ ಇನ್ನಾರೂ ಇದ್ದಂತಿರಲಿಲ್ಲ. ಹಾಸಿದ್ದ ಚಾಪೆಯ ಮೇಲೆ ಕುಳಿತುಕೊಂಡು,

"ಸುಂದರೀ," ಎಂದು ಕೂಗಿದೆ.

ನನಗಾಗಿಯೆ ಕಾದು ಕುಳಿತ ಹಾಗಿತ್ತು ಸುಂದರಿ. ನಾನು ಕರೆಯುತ್ತಲೂ ನನ್ನ ಬಳಿ ಬಂದಳು – ಮುಖವನ್ನು ತಗ್ಗಿಸಿಕೊಂಡು. ಅವಳ ಕೈ ಹಿಡಿದೆಳೆದು ತೊಡೆಯ ಮೇಲೆ ಕೂಡಿಸಿಕೊಂಡೆ. ಅವಳು ದೀರ್ಘವಾಗಿ ಉಸಿರು ಬಿಡುತಾ ನನ್ನ ಎದೆಯ ಮೇಲೆ ತನ್ನ ತಲೆಯನ್ನೊರಗಿಸಿದಳು....

....

"ರಾತ್ರಿ ಮತ್ತೆ ಫೌಜದಾರರು ಕರೆಸಿದರೆ ಹೋಗುತ್ತೀಯಾ ಸುಂದರೀ?"

"ಹೋಗದಿದ್ದರೆ ಹಿಡಿದುಕೊಂಡು ಜೇಲಿಗೆ ಕಳಿಸುವರಂತಲ್ಲಾ!"

"ಯಾರು ಹೇಳಿದರು ನಿನಗೆ? ನೀನೇನು ಅಪರಾಧ ಮಾಡಿದ್ದೀ? ನಿನ್ನನ್ಯಾಕೆ ಜೇಲಿಗೆ ಕಳಿಸುತ್ತಾರೆ?"

"ಮಲ್ಲವ್ವ ಅಂದಳು. ನನಗೇನು ಗೊತ್ತಾಗಬೇಕು ಹಳ್ಳಿಯವಳಿಗೆ! ಇವತ್ತೂ ಕರೆಸಿದರೆ ಮಾತ್ರ ಬರುವದಿಲ್ಲಂತ ಹೇಳಿಬಿಡುತೀನಿ. ಏನಾದರೂ ಆದರೆ ನೀವಿದ್ದೀರಲ್ಲಾ– ನೋಡಿಕೊಳ್ಳುವುದಕ್ಕೆ!"

"ನಿನಗೆ ಯಾರೂ ಏನೂ ಮಾಡುವಂತಿಲ್ಲ ಸುಂದರೀ. ನಿನ್ನ ಮನಸ್ಸಿಲ್ಲದಿದ್ದರೂ ಅವರು ನಿನ್ನ ಎಳೆದೊಯ್ದರೆ ಅವರ ಮೇಲೇ ಫಿರ್ಯಾದು ಕೊಡಲಿಕ್ಕೆ ಬರುತ್ತದೆ. ಅವರನ್ನೇ ಜೇಲಿಗೆ ಹಾಕಿಸಲಿಕ್ಕೆ ಬರುತ್ತದೆ."

ಆಶ್ಚರ್ಯ ಆನಂದಗಳಿಂದಾಗಿ ಸುಂದರಿಯ ಮುಖ ಅಷ್ಟು ಅಗಲವಾಯಿತು. ಹಳ್ಳಿಯ ಆ ಅಶಿಕ್ಷಿತ ಹುಡುಗಿಗೆ ಕಾಯದೆ ಕಾನೂನಿನ ವಿಷಯ ಗೊತ್ತಿರುವುದಾದರೂ ಹೇಗೆ ಸಾಧ್ಯ? ತನ್ನ ದೊಡ್ಡ ದೊಡ್ಡ ಕಣ್ಣುಗಳನ್ನರಳಿಸುತ್ತಾ ಕೇಳಿದಳು:

"ಫೌಜದಾರರನ್ನೂ ಜೇಲಿಗೆ ಹಾಕಿಸಬಹುದು ಅಂತೀರಾ?"

"ಹೌದು. ಅವರನ್ನೂ ಜೇಲಿಗೆ ಹಾಕಿಸಬಹುದು. ನಿನ್ನ ಇಚ್ಛೆಯಿಲ್ಲದಿದ್ದರೂ ನಿನ್ನನ್ನು ಎಳೆದೊಯ್ದರೆ ಅವರು ಬಲಾತ್ಕಾರ ಮಾಡಿದಂತಾಗುತ್ತದೆ. ಕಾಯದೆಯ ದೃಷ್ಟಿಯಲ್ಲಿ ಅದೂ ಒಂದು ಭಯಂಕರ ಅಪರಾಧ."

"ಈಗ ನನ್ನ ಜೀವಧಾಗ ಜೀವ ಬಂತು. ಆ ಫೌಜದಾರನ ಮುಸುಡಿ ನೋಡಿದರೇ ಹೇಸಿಕೆಯಾಗುತೈತಿ. ಇವತ್ತು ನನ್ನ ಕೆಣಕಿದರೆ ಮಾಡುತೀನಿ ಅವನಿಗೆ ಮಂಗಳಾರತಿ!" ಎಂದಳು ಸುಂದರಿ, ಉತ್ಸಾಹದ ಧ್ವನಿಯಲ್ಲಿ.

ಫೌಜದಾರರ ಫಜೀತಿಯಾಗುವುದನ್ನೇ ನಾನೂ ಅಪೇಕ್ಷಿಸುತ್ತಿದ್ದೆ.

ಹಗಲು ಸವೆದು ಕತ್ತಲಾಯಿತು. ಫೌಜದಾರರ ಕಾರ್ಯಕ್ರಮ ಯಥಾ ಪ್ರಕಾರ ಸಾಗಿತ್ತು. ಮುನ್ನಾದಿನದಂತೆಯೆ ಮೂರು ಸೀಸೆ ಸೇಂದಿ ತಂದ ಚೆನ್ನ, ಮತ್ತೆ ಹೊಲದ ಕಡೆ ಹೋಗಿ ಕುಡಿದು ಬಂದುದೂ ಆಯಿತು. ಈ ರಾತ್ರಿಯಲ್ಲೂ ಸುಂದರಿಯನ್ನೊದಗಿಸಬೇಕೆಂದು ಒಬ್ಬ ಓಲೇಕಾರನ ಮೂಲಕ ಮಲ್ಲವ್ವನಿಗೆ ಹೇಳಿ ಕಳಿಸಿದ್ದರು. ಆ ಹುಡುಗಿ ಬರಲು ಒಪ್ಪುವುದಿಲ್ಲವೆಂದು ಮಲ್ಲವ್ವ ತಿಳಿಸಿದ್ದಳು. ಫೌಜದಾರರು ಸಿಟ್ಟುಬೆಂಕಿಯಾಗಿದ್ದರು. ಸೇಂದಿಯ ಅಮಲಿನಲ್ಲಿ ಗೌಡನನ್ನೂ ಓಲೇಕಾರನನ್ನೂ ಮಲ್ಲವ್ವನನ್ನೂ ಅವಾಚ್ಯ ಶಬ್ದಗಳಲ್ಲಿ ನಿಂದಿಸಿದರು. ನನ್ನನ್ನು ಕೆಣಕುವ ಧೈರ್ಯ ಮಾತ್ರ ಅವರಿಗಿರಲಿಲ್ಲ.

ರಾತ್ರಿಯೂಟ ಮುಗಿಯಿತು. ಎಲ್ಲರೂ ಮಲಗಿಕೊಂಡೆವು. ಫೌಜದಾರರು "ಗಸ್ತಿ'ಯ ನೆಪದಿಂದ ಮಲ್ಲವ್ವನಲ್ಲಿಗೆ ಹೊರಟರು. ಅಂದು ಅವಳಲ್ಲಿಯೆ ತೃಪ್ತಿಪಟ್ಟುಕೊಂಡು ತೆಪ್ಪಗಿರಬೇಕಾಯಿತು. ಸುಂದರಿ ತಮ್ಮನ್ನು ಹೀನಳೆದು ಮಾತನಾಡಿದ ವಿಚಾರವನ್ನು ಮಲ್ಲವ್ವನ ಮುಖದಿಂದ ತಿಳಿದು ತಣ್ಣಗಾಗಬೇಕಾಯಿತು. ಬೆಳಿಗ್ಗೆ ಅವರ ಮುಖದಲ್ಲಿ ಕೊಂಚವೂ ಉತ್ಸಾಹವಿರಲಿಲ್ಲ. ಸುಂದರಿಯನ್ನು ಕೆಣಕುವ ಧೈರ್ಯವೂ ಇರಲಿಲ್ಲ. ಆಗಾಗ ದೀರ್ಘವಾಗಿ ಉಸಿರುಬಿಡುತ್ತಾ ಸೋತು ಬಳಲಿದವರಂತೆ ಕುಳಿತುಕೊಂಡಿದ್ದರು. ನನಗೆ ಎಲ್ಲವೂ ಹೊಳೆದಿತ್ತು. ಒಂದು ಮಾತನ್ನೂ ಆಡದೆ ನಾನು ಮೌನವಾಗಿದ್ದೆ. ಇನ್ನೂ ಎರಡು ದಿನಗಳನ್ನು ಇಲ್ಲಿಯೆ ಕಳೆಯಬೇಕೆಂದು ಲೆಕ್ಕಹಾಕಿಕೊಂಡಿದ್ದ ಫೌಜದಾರರು ಇಂದು ಅದನ್ನು ಬದಲಿಸಿ ತಕ್ಷಣ ಕಾಲವಾಡಕ್ಕೆ ಹೊರಡಬೇಕೆಂದು ನಿರ್ಧರಿಸಿದರು. ನಾನು ಅಲ್ಲಿ ಹಣ ಕಿತ್ತುಕೊಂಡಿದ್ದ ಸಂಗತಿಯೂ ಅವರಿಗೆ ಗೊತ್ತಾಗಿರಲಿಲ್ಲ. ಹಗಲಿರುಳೂ ಹೆಣ್ಣಿನ ಯೋಚನೆಯಲ್ಲೇ ತೊಡಗಿದ್ದವನಿಗೆ ಬೇರೆ ವಿಷಯ ಗೊತ್ತಾಗುವುದಾದರೂ ಹೇಗೆ?

"ಇಂಥ ದೊಡ್ಡ ಕೇಸು ನಡೆದರೂ ಸಹ ಏನೂ ಸಿಗಲಿಲ್ಲವಲ್ಲ ಶಿವಣ್ಣಾ. ನೀನಾದರೂ ಪ್ರಯತ್ನಿಸಿದ್ದರೆ...." ಎಂದು ಅವರು ಮೆಲ್ಲಗೆ ಮಾತು ತೆಗೆದರು.

"ಏನೋ ಸ್ವಲ್ಪ ಸಿಕ್ಕಿದೆ. ನಿಮಗೆ ಹೇಳಬೇಕು ಅಂತಿದ್ದೆ. ನೀವೇ ಕೇಳಿದಿರಿ."

"ಸಿಕ್ಕಿದ ಹಣವೆಷ್ಟು?" ಎಂದೇನೂ ಅವರು ಕೇಳಲಿಲ್ಲ. ನಾನು ಮೋಸ ಮಾಡುವವನಲ್ಲವೆಂಬುದು ಅವರಿಗೆ ಗೊತ್ತು. "ಐದು ನೂರು ಬಂದಿವೆ,"

ಎಂದು ನಾನೇ ಹೇಳಿದೆ. ಅವರ ಕಳಾಹೀನ ಮುಖದಲ್ಲಿ ಕೊಂಚ ಸಂತೋಷ ಸುಳಿದಂತಾಯಿತು. ಹೆಣ್ಣುಗಳೂ ಸಿಕ್ಕಿದ್ದುವು, ಹಣವೂ ಸಿಕ್ಕಿತು! ಫೌಜದಾರರಿಗೆ ಸಮಾಧಾನವಾಗದಿರುವುದೇ ?

ಹಳ್ಳಿಯಿಂದ ಹೊರಡುವುದಕ್ಕೆ ಮೊದಲು ಮಲ್ಲವ್ವ ಸುಂದರಿ ಇಬ್ಬರನ್ನೂ ಕಂಡು ಬಂದೆ. ಫೌಜದಾರರ ಬಗ್ಗೆ ಸುಂದರಿ ಆಡಿದ್ದಂಥ ಮಾತುಗಳನ್ನೇ ಮಲ್ಲವ್ವನೂ ಆಡಿದಳು. ಅವರಿಬ್ಬರೂ ದೃಷ್ಟಿಯಲ್ಲೂ ಹಾಸ್ಯದ ವಸ್ತುವಾಗಿದ್ದರು ಫೌಜದಾರರು.

ನಾನು ಹೊರಡುವುದಾಗಿ ಹೇಳಿದಾಗ ಸುಂದರಿ ನನ್ನ ಕಾಲು ಮುಟ್ಟಿ ನಮಸ್ಕರಿಸಿದಳು. ಅವಳನ್ನು ಮೇಲಕ್ಕೆಬ್ಬಿಸುತ್ತಾ ನಾನು ಹೇಳಿದೆ :

" ನೀನು ಆದಷ್ಟು ಬೇಗ ಮದುವೆಯಾಗು ಸುಂದರೀ. ನಿಮ್ಮ ತಂದೆಗೂ ನಾನು ಹೇಳಿದ್ದೇನೆ."

ಮುಂದೆ ಎರಡು ತಿಂಗಳಲ್ಲಿಯೆ ಸುಂದರಿ ಯಾವ ಕಾರಣದಿಂದಲೋ ಬಾವಿಗೆ ಹಾರಿಕೊಂಡು ಸತ್ತುಹೋದ ವಾರ್ತೆಯನ್ನು ಕೇಳಿದಾಗ ನನಗೆ ದುಃಖ ವಾಗದಿರಲಿಲ್ಲ. ಒಂದೆರಡು ದಿನ ನನಗೆ ಅನ್ನ ರುಚಿಸಲಿಲ್ಲ. ಈಗಲೂ ಅವಳನ್ನು ನೆನಸಿಕೊಂಡಾಗ ಕರುಳಿಗೆ ಇರುವೆ ಕುಟುಕಿದಂತಾಗುತ್ತದೆ.

....ಅಷ್ಟೆ, ಅದಕ್ಕಿಂತ ಹೆಚ್ಚಿನದೇನೂ ಇಲ್ಲ. ಪೋಲೀಸರ ಜೀವನದ ದಾರಿಯಲ್ಲಿ ಇಂಥ ವ್ಯಕ್ತಿಗಳೆಷ್ಟೋ ಜನ ಭೇಟಿಯಾಗುತ್ತಾರೆ, ಕೆಲವು ದಿನ ಅವರೊಡನೆ ಸಂಬಂಧ ಬರುತ್ತದೆ.

ಅನಂತರ ನಾವು ನಮ್ಮ ದಾರಿಯಲ್ಲಿ ನಡೆದು ಹೋಗುತ್ತೇವೆ, ಆ ವ್ಯಕ್ತಿಗಳು ಅಲ್ಲಿಯೆ ಉಳಿಯುತ್ತಾರೆ, ಅಳಿದುಹೋಗುತ್ತಾರೆ. ಅವರ ಬಗ್ಗೆ ಹೆಚ್ಚು ಯೋಚಿಸುವುದಕ್ಕೂ ನಮಗೆ ಬಿಡುವಿರುವುದಿಲ್ಲ. ಅಂಥ ಯಾಂತ್ರಿಕ ಜೀವನ ನಮ್ಮದು, ಪೋಲೀಸರದು.

೨೧

ಸೆರೆಮನೆಯಲ್ಲಿನ ಸ್ತ್ರೀ

ಫೌಜದಾರ್ ಈಶ್ವರಪ್ಪನವರು ಯಾವ ಊರಿಗೆ ಹೋದರೂ ಹೆಣ್ಣಿನ ಬೇಟೆಯಾಡದಿರುತ್ತಿರಲಿಲ್ಲ. ಯಾವುದೊಂದು ಮನೆಗೆ ಪಂಚನಾಮೆ ಮಾಡುವುದಕ್ಕೆಂದೋ, ಮನೆಯವರ ಹೇಳಿಕೆ ತೆಗೆದುಕೊಳ್ಳುವುದಕ್ಕೆಂದೋ ಹೋಗಿದ್ದಾಗ ಫೌದಾರರ ದೃಷ್ಟಿ ಮೊದಲು ಹುಡುಕುತ್ತಿದ್ದುದು ಅಲ್ಲಿಯ ಹೆಂಗಸರನ್ನು. ಅವರು ತಮ್ಮ ಬಲೆಗೆ ಬೀಳುವ ಲಕ್ಷಣ ಕಾಣಿಸಿತೆಂದರೆ ನನಗೆ ಬೇರಾವುದೊಂದು ಕೆಲಸವೊಪ್ಪಿಸಿ ನನ್ನನ್ನು ಅಲ್ಲಿಂದ ಹೊರಡಿಸಿಬಿಡುತ್ತಿದ್ದರು. ಅವರ ಸ್ವಭಾವವನ್ನು ಪೂರ್ಣವಾಗಿ ಅರಿತುಕೊಂಡ ಬಳಿಕ ನಾನಾಗಿಯೆ ಅವರೊಡನೆ ಹೋಗುವುದನ್ನು ನಿಲ್ಲಿಸಿ, ಅವರೇ ಕರೆದಾಗ ಮಾತ್ರ ಹೋಗುವ ಪರಿಪಾಠವಿಟ್ಟುಕೊಂಡೆ.

ಅವರ ಮನೆಯ ಹೊರಭಾಗದಲ್ಲಿ ಸಾನಿರತೊಡಗಿದುದಕ್ಕೆ ಒಂದು ತಿಂಗಳು ಕಳೆದುಹೋಗಿತ್ತು. ಅದುವರೆಗೆ ಒಂದು ಸಲವೂ ಫೌದಾರರ ಹೆಂಡತಿಯ ಮುಖವನ್ನೂ ನಾನು ನೋಡಿರಲಿಲ್ಲ. ಸಹಜವಾಗಿಯೆ ಅವರ ವಿಚಾರವಾಗಿ ನನಗೆ ಕುತೂಹಲ. ಹಳ್ಳಿಯಲ್ಲಿ ಸಿಕ್ಕ ೧೨೦೦ ರೂಪಾಯಿಗಳ ಪೈಕಿ ಫೌಜದಾರರಿಗೆ ಐದು ನೂರು ಕೊಟ್ಟಿದ್ದೆ. ಅವುಗಳಲ್ಲಿ ಒಂದು ನೂರು ನನಗೆ ಕೊಟ್ಟಿದ್ದರು. ಇನ್ನೂ ನನ್ನ ಹತ್ತಿರ ಉಳಿದಿದ್ದ ಹಣದಲ್ಲಿ ಏಳೆಂಟು ನೂರು

ರೂಪಾಯಿಗಳನ್ನಾದರೂ ಅವರ ಹೆಂಡತಿಯ ಕೈಯಲ್ಲಿ ಕೊಡಬೇಕೆಂದು ನಾನು ಯೋಚಿಸಿಕೊಂಡಿದ್ದೆ. ಫೌಜದಾರರ ಕೈಯಲ್ಲಿ ಕೊಟ್ಟರೆ ಕೆಲದಿನಗಳಲ್ಲಿಯೆ ಆ ರೂಪಾಯಿಗಳೆಲ್ಲ ಹಾಳಾಗುವವು. ಅವರ ಫೌಜದಾರಿಕೆಯೂ ಶಾಶ್ವತವಲ್ಲ. ಅವರು ಪುನಃ ಜಮಾದಾರರಾದರೆ ಆಗ ಈ ಹಣ ಉಪಯೋಗವಾಗಬಹುದು. ಅಂತೆಯೆ, ಅವರ ಹೆಂಡತಿಯ ಕೈಯಲ್ಲಿ ಹಣ ಕೊಡಬೇಕೆಂದು ನನ್ನ ವಿಚಾರ. ಆದರೆ, ಅವರನ್ನು ಕಾಣುವ ಬಗೆ ಹೇಗೆ?

ಹಳ್ಳಿಯಲ್ಲಿ ನಾನು ಅಷ್ಟು ಹಣ ಸುಲಿದಿದ್ದ ಸಂಗತಿ ಫೌಜದಾರರಿಗೆ ಗೊತ್ತಿರಲಿಲ್ಲ. ಆ ಹಣವನ್ನೆಲ್ಲ ನಾನೇ ನುಂಗಿಬಿಡಲೂ ಬರುತ್ತಿತ್ತು. ನಾನೇನು ಸತ್ಯ ಹರಿಶ್ಚಂದ್ರನ ಮೊಮ್ಮಗನಲ್ಲ. ಆದರೆ, ನನ್ನ ಹಿತಕ್ಕಾಗಿಯೆ ನಾನು ಅವರರಿಗೆ ಮೋಸಮಾಡುವಂತಿರಲಿಲ್ಲ. ಮುಲ್ಲಪ್ಪನಿಂದ ನಾನು ಹನ್ನೆರಡು ನೂರು ರೂಪಾಯಿ ತೆಗೆದುಕೊಂಡ ಸಂಗತಿ ಆಗ ಫೌಜದಾರರಿಗೆ ಗೊತ್ತಿರಲಿಲ್ಲವಾದರೂ ಅವರು ಮತ್ತೊಂದು ಬಾರಿ ಆ ಊರಿಗೆ ಹೋದಾಗ ಗೊತ್ತಾಗುವ ಸಂಭವವಿತ್ತು. ನಾನು ಅವರನ್ನು ವಂಚಿಸಿದ ವಿಷಯ ತಿಳಿದಾಗ ಅವರು ಕೋಪಿಸಿಕೊಳ್ಳದಿರು ವುದಿಲ್ಲ. ಸಾಮಾನ್ಯ ಪೋಲೀಸನೊಬ್ಬ ಫೌಜದಾರನೊಬ್ಬನ ದ್ವೇಷ ಕಟ್ಟಿ ಕೊಳ್ಳುವುದೆಂದರೆ ಹಾವಿನೊಡನೆ ಸರಸವಾಡಿದಂತೆ. ನಾವು ಅಯೋಗ್ಯರೆಂದೋ, ಆಲಸಿಗಳೆಂದೋ ಅವರು ಮೇಲಧಿಕಾರಿಗಳಿಗೆ ವರದಿ ಮಾಡಿದರೆ ಅಲ್ಲಿಗೆ 'ನಮ್ಮ ಅಭಿವೃದ್ಧಿಗೆ ಕಲ್ಲು ಬಿದ್ದಹಾಗೇ. ಅಂತೆಯೆ, ನಾನು ಅವರನ್ನು ವಂಚಿಸು ವಂತಿರಲಿಲ್ಲ.

ಫೌಜದಾರರ ಆರ್ಥಿಕಸ್ಥಿತಿಯೂ ಸಮರ್ಪಕವಾಗಿರಲಿಲ್ಲವೆಂಬುದನ್ನು ನಾನೇ ನೋಡುತ್ತಿದ್ದೆ. ಫೌಜದಾರಿಕೆಯ ಸಡಗರಕ್ಕೆ ತಕ್ಕ ಹಾಗೆ ತಮ್ಮ ಜೀವನದ ಮಟ್ಟವನ್ನು ಎತ್ತರಿಸ ಬಯಸಿ ಅವರು ನಾಲ್ಕೈದು ನೂರು ರೂಪಾಯಿ ಸಾಲ ಮಾಡಿಕೊಂಡಿದ್ದರು. ಅವರ ಮಕ್ಕಳಿಗೆ ಸರಿಯಾದ ಬಟ್ಟೆಗಳೂ ಇರಲಿಲ್ಲ. ಫೌಜದಾರರ ಮಾವ ಶ್ರೀಮಂತರಾಗಿದ್ದುದೇನೋ ನಿಜವೆ. ಅವರಾದರೂ ಎಷ್ಟೆಂದು ಸಹಾಯ ಮಾಡಿಯಾರು? ಅದಕ್ಕೂ ಒಂದು ಮಿತಿಯಿಲ್ಲವೆ? ಫೌಜದಾರರ ಸಂಸಾರ ಅಷ್ಟೇನೂ ಸುಲಲಿತವಾಗಿ ನಡೆದಿರಲಿಲ್ಲ. ಅಂಥ ಸಂಸಾರವನ್ನು ವಂಚಿಸಲು ನನ್ನ ಮನಸ್ಸಾಕ್ಷಿ ಒಪ್ಪಲಿಲ್ಲ. ಮನೆಯೊಡತಿಯ ಕೈಯಲ್ಲಿ ಹಣ ಕೊಟ್ಟರೆ ಆಕೆ ಅದರ ಸದುಪಯೋಗ ಪಡೆಯಬಹುದೆಂದು

ಯೋಚಿಸಿ ಅವರನ್ನು ಕಾಣಲು ಯತ್ನಿಸಿದೆನಾದರೂ ಫೌಜದಾರರು ಮನೆಯಲ್ಲಿರುವಾಗ ಆಕೆ ಅಡುಗೆಮನೆಯಿಂದೀಚೆಗೇ ಬರುತ್ತಿರಲಿಲ್ಲವಾದುದರಿಂದ ನನ್ನ ಯತ್ನಕ್ಕೆ ಯಶಸ್ಸು ದೊರೆಯಲಿಲ್ಲ. ಭೆಟ್ಟಿಯಾದಾಗ ಕೊಟ್ಟರಾಯಿತೆಂದುಕೊಂಡು ಎರಡು ದಿನಗಳ ರಜೆ ಪಡೆದುಕೊಂಡು ಗೊಬ್ಬೂರಿಗೆ ಬಂದೆ. ನಮ್ಮ ತಾಯಿಗೆ ನೂರು ರೂಪಾಯಿಗಳನ್ನು ಮನಿಯಾರ್ಡರ್ ಮೂಲಕ ಕಳಿಸಿ, ಪೋಲೀಸ್ ಕಚೇರಿಗೆ ಹೋಗಿ ದೊಡ್ಡ ಫೌಜದಾರರನ್ನು ಕಂಡೆ. ನನ್ನನ್ನು ನೋಡಿ ಅವರಿಗೆ ಸಂತೋಷವಾಯಿತು, ಅವರನ್ನು ನೋಡಿ ನನಗೆ ಸಂತೋಷವಾಯಿತು.

"ಏನಪಾ ಶಿವಣ್ಣಾ, ಹ್ಯಾಗೆ ನಡೆದಿದೆ? ಅರಾಮು ಇದೀಯಾ?"

"ಇದೀನಿ ರಾವ್‌ಸಾಹೇಬರೆ. ಮನಸಿಗೆ ಮಾತ್ರ ಸಮಾಧಾನವಿಲ್ಲ."

"ಹಾ, ಹಾ? ಯಾಕೆ ಯಾಕೆ? ಏನಾಯಿತು?"

"ಈಶ್ವರಪ್ಪನವರು ವಿಚಿತ್ರ ಮನುಷ್ಯರು. ಅವರಿಗೂ ನನಗೂ ಕೂಡಿ ನಡೆಯುವಂತೆಯೇ ಇಲ್ಲ," ಎಂದು ಆರಂಭಿಸಿ, ಅವರ ಸೇಂದಿ ಸಮಾರಾಧನೆ, ಹೆಂಗಸರ ಬೇಟೆಗಳ ಬಗೆಗೆ ವಿವರವಾಗಿ ಹೇಳಿದೆ.

"ಆದಷ್ಟು ಬೇಗ ನನ್ನನ್ನು ಅಲ್ಲಿಂದ ಕರೆಯಿಸಿಕೊಂಡು ಬಿಡಿರಿ ರಾವ್ ಸಾಹೇಬರೆ. ನನಗೆ ಸಾಕಾಗಿಹೋಗಿದೆ."

"ಪೋಲೀಸ್ ಖಾತೆಯಲ್ಲಿ 'ಸಾಕಾಗಿ ಹೋಗಿದೆ' ಎಂಬ ಶಬ್ದಕ್ಕೆ ಆಸ್ಪದವೇ ಇಲ್ಲ ಶಿವಣ್ಣಾ. ವಾತಾವರಣ ಎಂಥಾದ್ದು ಇದ್ದರೂ ಕಣ್ಣು ಕಿವಿ ಮನಸ್ಸು ಎಲ್ಲಾ ಮುಚ್ಚಿಕೊಂಡು ಡ್ಯೂಟಿ ಮಾಡುತ್ತಿರಬೇಕು. ಈಶ್ವರಪ್ಪ ಹಾದಿ ತಪ್ಪಿದ್ದಾರೆ. ಇದೇ ಚೆಲ್ಲಾಟ ಬಹಳ ದಿವಸ ನಡೆಯುವದಿಲ್ಲ. ಅವರ ತಪ್ಪು ಅವರಿಗೇ ಗೊತ್ತಾದೀತು. ನೀನು ಮಾತ್ರ ಆತುರಪಡಬಾರದು," ಎಂದು ಹಿತವಾದ ಹೇಳಿದರು ದೊಡ್ಡ ಫೌಜದಾರರು.

"ಹ್ಯಾಗೂ ಬಂದಿದ್ದೀ. ಇಲ್ಲಿ ಆಫೀಸಿನಲ್ಲಿ ಬಹಳ ಕೆಲಸ ಹಾಗೇ ಬಿದ್ದಿದೆ. ಅದನ್ನು ಮುಗಿಸಿಕೊಟ್ಟು ಹೋಗು," ಎಂದು ನಗುತ್ತಾ ಆಜ್ಞೆ ವಿಧಿಸಿದರು.

ಅವರು ಎಷ್ಟು ಕೆಲಸ ಒಪ್ಪಿಸಿದರೂ ನನಗೆ ಬೇಸರವೆನ್ನಿಸುತ್ತಿರಲಿಲ್ಲ. ಎರಡು ದಿನ ಕುಳಿತು ಆ ಕೆಲಸ ಮಾಡಿ ಮುಗಿಸಿ, ದೊಡ್ಡ ಫೌಜದಾರರ ಅಪ್ಪಣೆ ಪಡೆದು ಕಾಲವಾಡಕ್ಕೆ ಹಿಂದಿರುಗಿ ಬಂದೆ. ನಾನು ಗೊಬ್ಬೂರಿಗೆ ಹೋದ

ದಿನವೇ ಈಶ್ವರಪ್ಪನವರು ಹಳ್ಳಿಯೊಂದಕ್ಕೆ ಹೋಗಬೇಕಾಗಿ ಬಂದಿದ್ದಿತು. ನಾನು ಕಾಲವಾಡಕ್ಕೆ ಬಂದೊಡನೆಯೆ ಆ ಹಳ್ಳಿಗೆ ಹೊರಡಬೇಕೆಂದು ತಿಳಿಸಿ ಹೋಗಿದ್ದರು. ಫೌಜದಾರರ ಮನೆಯಲ್ಲಿ ಅಡುಗೆಯ ಚೆನ್ನನೂ ಇರಲಿಲ್ಲ. ಮನೆಗೆ ಬೇಕಾದ ಸಾಮಾನು ತರಲು ಗೊಬ್ಬೂರಿಗೆ ಹೋಗಿದ್ದವನು ಇನ್ನೂ ಬಂದಿರಲಿಲ್ಲವೆಂದು ತಿಳಿಯಿತು.

ನಾನು ಅಲ್ಲಿಗೆ ಬಂದು ಮುಟ್ಟದಾಗ ಸಂಜೆಯಾಗುತ್ತ ಬಂದಿತ್ತು. ತಕ್ಷಣವೇ ಹಳ್ಳಿಗೆ ಹೊರಡುವಂತಿರಲಿಲ್ಲ. ಮರುದಿನ ಬೆಳಿಗ್ಗೆ ಹೊರಟು ಬಿಡುವುದೆಂದು ಯೋಚಿಸುತ್ತಾ ಫೌಜದಾರರ ಮನೆಗೆ ಬಂದೆ. ನನ್ನ ಆಗಮನದ ವಾರ್ತೆಯನ್ನು ಹುಡುಗರು ತಿಳಿಸುತ್ತಲೂ ಫೌಜದಾರರ ಹೆಂಡತಿ ಹೊರಗಡೆ ಬಂದರು. ಅವರನ್ನು ನಾನು ಕಂಡದ್ದು ಅದೇ ಮೊದಲಬಾರಿ. ಆಕೆ ಬಹಳ ರೂಪವತಿಯಾಗಿದ್ದಳು. ಕೊರಳಲ್ಲಿ ಒಂದು ಚಿನ್ನದ ಹಾರ. ಕೈಗಳಲ್ಲಿ ಚಿನ್ನದ ಬಳೆಗಳು. ನಿಲುವು, ಮೈಬಣ್ಣ, ಮೈಕಟ್ಟು ಎಲ್ಲಾ ಅತ್ಯುತ್ತಮವಾದುದು. ಪರಮ ಸುಂದರಿಯಾದ ಅಂಥ ಹೆಂಡತಿ ಮನೆಯಲ್ಲಿದ್ದರೂ ಹೊರಗಡೆ ಹೆಂಗಸರಿಗಾಗಿ ಬಾಯಿ ಬಾಯಿ ಬಿಡುತ್ತಿರುವರಲ್ಲಾ ಈಶ್ವರಪ್ಪನವರು! ಇವಳ ಮುಂದೆ ಆ ಮಲ್ಲವ್ವ ಸುಂದರವ್ವ ಎಲ್ಲರನ್ನೂ ನಿವಾಳಿಸಿ ಒಗೆಯಬಹುದು. ಹೀಗಿದ್ದರೂ ಈಶ್ವರಪ್ಪನವರ ಲಕ್ಷ್ಯ ಬೇರೆಯವರ ಮೇಲೇಕೆ? ಆ ರಹಸ್ಯವನ್ನರಿತುಕೊಳ್ಳಲು ನನಗೆ ಕುತೂಹಲ.

"ಯಾವಾಗ ಬಂದಿರಿ?" ಎಂದು ಕೇಳಿದಳಾಕೆ. ರೂಪದಂತೆ ಅವಳ ಧ್ವನಿಯೂ ಮೋಹಕವಾಗಿತ್ತು.

"ಇದೇ ಈಗ ಬಂದೆ."

"ಕೂಡ್ರಿ. ಚಹಾ ಮಾಡಿಕೊಡ್ತೇನೆ."

"ಏನೂ ಬೇಡ. ನಿಮುಗ್ಯಾಕೆ ತ್ರಾಸ ಸುಮ್ಮನೆ?" ಎಂದು ಹೇಳಿ ಅಲ್ಲಿ ನಿಲ್ಲದೆ ನನಗಾಗಿ ಕೊಡಲ್ಪಟ್ಟದ್ದ ಕೋಣೆಗೆ ಬಂದೆ. ಅವಳ ಕೈಯಲ್ಲಿ ಕೊಡುವುದೆಂದುಕೊಂಡಿದ್ದ ಹಣವನ್ನು ಈಗಲೇ ಕೊಟ್ಟುಬಿಡುವುದೆಂದು ನಿರ್ಧರಿಸಿ ನೋಟುಗಳ ಕಟ್ಟನ್ನು ಹಿಡಿದುಕೊಂಡು ನಡುಮನೆಗೆ ಬಂದೆ. ಆ ಹಣವನ್ನು ನೋಡಿ ಅವಳು ಬೆಚ್ಚಿಬಿದ್ದು,

"ಇದೇನು?" ಎಂದು ಕೇಳಿದಳು.

ಆ ಹಣದ ಇತಿಹಾಸವನ್ನು ಸ್ವಲ್ಪದರಲ್ಲಿಯೆ ವಿವರಿಸಿ ಹೇಳಿ ನೋಟುಗಳ ಕಟ್ಟನ್ನು ಮುಂದೆ ನೀಡಿದೆ. ಅದನ್ನು ತೆಗೆದುಕೊಳ್ಳುವಾಗ ಅವಳ ಕೈ ಕಂಪಿಸುತ್ತಿತ್ತು.

"ಈ ರೂಪಾಯಿಗಳನ್ನು ನಿಮಗೆ ಸರಿಕಂಡ ಹಾಗೆ ಉಪಯೋಗಿಸ ಬಹುದು. ಸದ್ಯಕ್ಕೆ ಫೌಜದಾರರಿಗೆ ಮಾತ್ರ ಈ ಬಗ್ಗೆ ತಿಳಿಸಬೇಡಿರಿ. ನಿಮಗೆ ಗೊತ್ತಿದೆಯೊ ಇಲ್ಲೋ, ಅವರ ಕೈಯಲ್ಲಿ ಹಣ ಉಳಿಯುವದಿಲ್ಲ."

"ನನಗೂ ಗೊತ್ತಿದೆ," ಎಂದು ಅವಳು ಗಂಭೀರವಾದ ಧ್ವನಿಯಲ್ಲಿಯೆ ಹೇಳಿದಳಾದರೂ ಅವಳ ಕಣ್ಣಂಚಿನಲ್ಲಿ ನೀರು ಕಾಣಿಸಿಕೊಳ್ಳತೊಡಗಿದ್ದುದು ನನ್ನ ಗಮನಕ್ಕೆ ಬರದಿರಲಿಲ್ಲ.

"ಏನು ಮಾಡುವದು ಹೇಳಿರಿ. ಈ ಕೆಟ್ಟ ಚಟ ಅವರಿಗೆ ಯಾವಾಗ ಅಂಟಿಕೊಂಡಿತೋ ಏನೊ. ಹಳ್ಳಿಯಲ್ಲೆಲ್ಲಾ ಕುಡಿದು ಕೂಗಾಡಿ ಬಹಳ ಅಸಹ್ಯವಾಗುವಂತೆ ಮಾಡಿದರು."

ಅದುವರೆಗೂ ನಿಂತುಕೊಂಡೇ ಇದ್ದ ಆಕೆ ಒಮ್ಮೆಲೆ ಕುಳಿತುಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅಳುವಿನ ಜೊತೆಗೇ ಅವಳ ಅವಿತಿದ್ದ ಸಂಕಟವೂ ಮೆಲ್ಲಮೆಲ್ಲನೆ ಹೊರಬರತೊಡಗಿತು. ಐದು ನಿಮಿಷಗಳ ತರುವಾಯ ಕೊಂಚ ಶಾಂತಳಾಗಿ ನನ್ನೆದುರಿಗೆ ತನ್ನ ಅಳಲನ್ನೆಲ್ಲ ತೋಡಿಕೊಳ್ಳಲಾರಂಭಿಸಿದಳು.

"ಇವರು ಇಂಥವರೆನ್ನುವದು ನನ್ನ ತಂದೆಗೇನೂ ಗೊತ್ತಿರಲಿಲ್ಲ. ಇವರ ಅಧಿಕಾರವನ್ನು ನೋಡಿ ಮರುಳಾಗಿ ನನ್ನನ್ನು ಮಾಡಿಕೊಟ್ಟರು. ಅಂದಿನಿಂದ ಕಣ್ಣೀರಲ್ಲಿ ಕೈ ತೊಳಕೊಳ್ಳುವದೇ ಆಗಿದೆ ನನ್ನ ಬಾಳು. ನಾನೂ ಶ್ರೀಮಂತರ ಮನೆಯಲ್ಲಿ ಹುಟ್ಟಿ ಬೆಳೆದಾಕೆ. ಇವರ ಕೈಹಿಡಿದು ಸುಖವಾಗಿರಬೇಕೆಂತಲೇ ಮನಸ್ಸಿತ್ತು– ಇವರಿಗೆ ವಯಸ್ಸಾಗಿದೆಯೆಂತ ನನಗೇನು ದುಃಖವಿರಲಿಲ್ಲ. ಎಷ್ಟು ಮಂದಿ ವಯಸ್ಸಾದವರನ್ನು ಲಗ್ನವಾಗುವದಿಲ್ಲ? ಇವರು ನನ್ನೊಡನೆ ಸ್ವಲ್ಪ ವಾದರೂ ಚಲೋ ರೀತಿಯಿಂದ ನಡಕೊಂಡಿದ್ದರೆ ನಾನೂ ಆನಂದದಿಂದ ಇರಲು ಬರುತ್ತಿತ್ತು. ಆದರೆ....ಆದರೆ...."

ಕೊಂಚ ತಡೆದು, ಒಂದು ಗಳಿಗೆ ಸುಮ್ಮನಿದ್ದು ಅನಂತರ ಅವಳು ಮತ್ತೆ ಮುಂದುವರಿಸಿದಳು :

"ನನ್ನ ಸಂಕಟ ಏನೆಂತ ಹೇಳಲಿ ? ಯಾರ ಮುಂದೆ ಹೇಳಲಿ ? ಹೇಳಲು ಇಲ್ಲಿ ಇರುವವರಾದರೂ ಯಾರು ? ನೀವು ಇಲ್ಲಿಗೆ ಬಂದು ಅಷ್ಟು ದಿನವಾದು ವಲ್ಲಾ, ಇದುವರೆಗೆ ನನ್ನ ಮೋರೆ ಆದರೂ ನೋಡಿದ್ದೀರಾ ?"

"ನಿಮ್ಮ ಮನೆಯಲ್ಲಿ ಘೋಷಾ ಪದ್ಧತಿಯಿದ್ದರೂ ಇದ್ದೀತು ಅಂತ ನಾನು ಅಂದುಕೊಳ್ಳುತ್ತಿದ್ದೆ," ಎಂದೆ ನಾನು, ತಮಾಷೆಗಾಗಿ - ಆ ಸಮಯ ತಮಾಷೆಗೆ ಯೋಗ್ಯವಾದುದಾಗಿರಲಿಲ್ಲವಾದರೂ.

"ಘೋಷಾ ಪದ್ಧತಿಯಿರಲು ನಾವೇನು ಮುಸಲ್ಮಾನರೇ ! ತವರುಮನೆ ಯಲ್ಲಿದ್ದಾಗ ಹ್ಯಾಗೆ ನಕ್ಕು ನಲಿಯುತ್ತಾ ಹಕ್ಕಿಯ ಹಾಗೆ ಸುಖವಾಗಿದ್ದೆ, ಇವರನ್ನು ಲಗ್ನವಾದದ್ದು ಸಶ್ರಮ ಶಿಕ್ಷೆ ಹೊಂದಿದಂತಾಯಿತು, ಇವರ ಮನೆ ಯೊಂದು ಜೇಲಿನಂತಾಯಿತು. ನಾನು ಯಾವಾಗಲೂ ಅಡಿಗೇಮನೆಯಲ್ಲಿರ ಬೇಕು, ಯಾರಿಗೂ ಮುಖ ತೋರಿಸಬಾರದು, ಯಾರ ಸಂಗಡಲೂ ಮಾತಾಡ ಬಾರದು. ನಾನು ಸ್ವಲ್ಪ ನಡುಮನೆಗೆ ಬಂದು ನಿಂತರಾಯಿತು, ಯಾವ ಗೆಣೆಯನನ್ನು ನೋಡುತ್ತಾ ನಿಂತೀಯೇ ಅಂತ ಒದರುವದು. ವಯಸ್ಸಾದ ಗಂಡಸರು ನನ್ನಂಥ ಹುಡುಗಿಯರನ್ನ ಲಗ್ನಮಾಡಿಕೊಂಡರೆ ಇದೇ ಹಣೇ ಬರಹವೊ ಏನೊ. ನಿಜವಾಗಿ ನಾನೇನು ಕೆಟ್ಟ ಹೆಂಗಸಲ್ಲ. ಇವರನ್ನು ಬಿಟ್ಟು ಬೇರೆ ಯಾರನ್ನೂ ಕನಸು ಮನಸಿನಲ್ಲೂ ನೆನೆಸಿದಾಕೆಯಲ್ಲ. ನನ್ನಂಥವಳಿಗೂ ಈ ಗತಿ. ಇದಕ್ಕಿಂತ ಹೆಚ್ಚಿನ ನರಕ ಎಲ್ಲಿದ್ದೀತು ಹೇಳಿರಿ. ನನಗೂ ಜೀವ ರೋಸಿಹೋಗಿದೆ. ಇದೊಂದು ಮಗುವಿಲ್ಲದಿದ್ದರೆ ಇಷ್ಟು ಹೊತ್ತಿಗೆ ಬಾವಿ ಬಿದ್ದು ಹಾಳಾಗಿ ಹೋಗುತ್ತಿದ್ದೆ. ಆದರೆ....ಆದರೆ...."

ಮತ್ತೆ ಅವಳು ತಡೆದು ನಿಂತಳು. ಮೊದಲನೆಯ ಭೆಟ್ಟಿಯ ಕಾಲಕ್ಕೇ ನನ್ನಂಥ ಅಪರಿಚಿತನೆದುರಿಗೆ ಅಂತರಂಗದ ಮಾತುಗಳನ್ನೆಲ್ಲ ಆಡುತ್ತಿದ್ದುದಕ್ಕಾಗಿ ಅವಳಿಗೇ ಸೋಜಿಗವೆನ್ನಿಸಿರಬೇಕು. ಅವಳ ಮುಖದ ಮೇಲೆ ಗೊಂದಲದ ಭಾವ ಕಾಣಿಸಿಕೊಂಡು ಮರೆಯಾಯಿತು. ಮುಂದೆ ಹೇಳುವುದೇ ಬೇಡವೇ ಎಂದು ಯೋಚಿಸುತ್ತಿರಬೇಕು. ಅವಳ ಆಗಿನ ಮನಃಸ್ಥಿತಿಯನ್ನು ನಾನು ಪೂರ್ತಿ ಯಾಗಿ ಅರ್ಥಮಾಡಿಕೊಂಡಿದ್ದೆ. ಜನಸಂಪರ್ಕವಿಲ್ಲದ ನಡುಗಡ್ಡೆಯೊಂದರಲ್ಲಿ ಹಲವು ವರ್ಷಗಳನ್ನು ಕಳೆದವರು ಪುನಃ ಮನುಷ್ಯರನ್ನು ಕಂಡಾಗ ಆವರೊಡನೆ ರಭಸದಿಂದ ಮಾತನಾಡುವಂತೆ ಅವಳು ನನ್ನೊಡನೆ ಮಾತನಾಡುತ್ತಿದ್ದಳು.

ಅವಳ ನೊಂದ ಮನಸ್ಸು, ಬೆಂದ ಹೃದಯಗಳು ಸಹಾನುಭೂತಿಗಾಗಿ ಹಾತೊರೆಯುತ್ತಿದ್ದವು.

"ಬಾವಿಗೀವಿಯ ಮಾತು ನೀವು ಆಡಬಾರದು," ಎಂದೆ ನಾನು.

"ಆಡಬಾರದು, ನಿಜ, ಆಡಬಾರದು. ನನಗೇನು ಬದುಕುವದು ಬೇಡಾಗಿಲ್ಲ. ಆದರೆ ಯಾವ ಸುಖಕ್ಕಾಗಿ ಜೀವ ಹಿಡಿದಿರಲಿ, ಹೇಳಿರಿ. ನಾನು ಸುಖದಿಂದಲೇ ಇರಬಹುದು ಅಂತ ನನ್ನ ತಂದೆತಾಯಿ ತಿಳಿದಿದ್ದಾರೆ. ಪಾಪ, ಸರಳ ಮಂದಿ. ನಾನೂ ನನ್ನ ಸಂಕಟವನ್ನೆಲ್ಲ ಅವರಿಗೆ ತಿಳಿಸಿಲ್ಲ. ಮಲಮಕ್ಕಳಿದ್ದರೂ ಇವರನ್ನು ಲಗ್ನವಾಗಲು ಒಪ್ಪಿದೆ. ಈ ಹೆಣ್ಣು ಹುಡುಗಿಯರೇನು, ಮದುವೆಯಾಗಿ ಹೋಗುವವರು. ಅವರು ಮಲಮಕ್ಕಳೆಂದು ನಾನು ಎಂದೂ ತಿಳಿದುಕೊಂಡಿಲ್ಲ. ನನ್ನ ಈ ಮಗುವಿನ ಹಾಗೇ ಅವರನ್ನೂ ಪ್ರೀತಿಯಿಂದ ನಡಸಿಕೊಂಡು ಬಂದಿದ್ದೇನೆ. ಇಷ್ಟಿದ್ದರೂ ಅವರಿಗೆ ಮಾತ್ರ ನಾನೆಂದರೆ ಆಗುವ ಹಾಗಿಲ್ಲ. ನನ್ನನ್ನು ಸರಿಯಾಗಿ ನೋಡಿಕೊಂಡು ಹೋಗಲಾರದವರು ನನ್ನನ್ಯಾಕೆ ಲಗ್ನವಾದರೋ! ಈಗ ನಾನು ಇವರನ್ನು ಬಿಡಲು ಶಕ್ಯವೇ? ಯಾವ ಗಂಡಸಿನ ಮುಖ ನೋಡದಿದ್ದರೂ ನನ್ನನ್ನು ಹೀಗೆ ಅವಮಾನಗೊಳಿಸುತ್ತಿದ್ದಾರೆ. ನಾನು ನಿಜವಾಗಿ ಯಾರನ್ನಾದರೂ ನೋಡಿಕೊಂಡರೆ ಏನು ಮಾಡುವರೋ! ನನ್ನ ತಂದೆತಾಯಿಗಳ ಮರ್ಯಾದೆ ಹಾಳುಮಾಡಬಾರದೆಂತ ಈ ಕಟುಕನನ್ನೇ ನಂಬಿ ಅವನ ಮನೆಯ ನಾಯಿಯಾಗಿ ಬಾಳಿದ್ದೇನೆ. ಅವನೆಷ್ಟೇ ಬೈದರೂ ಸುಮ್ಮನಿದ್ದೇನೆ. ನಾವಿಬ್ಬರೂ ಮಾತಾಡಿದ್ದನ್ನು ಅವರಿಗೆ ಹೇಳಬೇಡಿರಿ," ಎಂದು ನುಡಿದು ಅವಳು ಸುಮ್ಮನಾದಳು.

ಏನನ್ನಾದರೂ ಆಡಬೇಕೆಂದರೆ ನನ್ನ ನಾಲಿಗೆಯೇ ಏಳಲಿಲ್ಲ. ನಾನು ಏನು ಹೇಳಿದರೂ ಅವಳಿಗೆ ಸಮಾಧಾನವಾಗುವಂತಿರಲಿಲ್ಲ; ಪ್ರತಿಯಾಗಿ ನನ್ನ ಸಾಂತ್ವನಪರ ಮಾತುಗಳಿಂದ ಅವಳು ಇನ್ನೂ ನೊಂದುಕೊಳ್ಳುವ ಸಂಭವವಿತ್ತು.

"ಫೌಜದಾರರು ನನ್ನ ದಾರಿ ಕಾಯುತ್ತಿರುವರೋ ಏನೋ. ಹಳ್ಳಿಗೆ ಹೊರಡುತ್ತೇನೆ," ಎಂದು ಹೇಳಿ ನಾನು ಅಲ್ಲಿಂದೆದ್ದು ಬಿಟ್ಟೆ.

“ ಛೆ. ಈಗೆಲ್ಲಿ ಹೋಗುತೀರಿ ? ಸಂಜೆಯಾಯಿತು. ನಾಳೆ ಮುಂಜಾನೆ ಹೋದರಾಯಿತು,” ಎಂದಳಾಕೆ.

ನನಗೇಕೋ ಭಯವಾಗತೊಡಗಿತು. ಅವಳ ಮನಸ್ಸು ಹೃದಯ ಗಳೆರಡನ್ನೂ ನಾನು ಅರ್ಥಮಾಡಿಕೊಂಡಿದ್ದೆ. ನಾವಿಬ್ಬರೂ ಮಾತನಾಡಿದುದನ್ನು ಫೌಜದಾರರಿಗೆ ಹೇಳಬಾರದೆಂದು ಕೆಲವು ನಿಮಿಷಗಳಿಗೆ ಮೊದಲು ಸೂಚಿಸಿದ್ದ ಅವಳೇ ರಾತ್ರಿಯ ವೇಳೆಯಲ್ಲಿ ಹಳ್ಳಿಗೆ ಹೋಗಬಾರದೆಂದೂ ಹೇಳುತ್ತಿದ್ದಳು. ಅವಳ ಆಶಯವೇನಿರಬಹುದು ?

೨೨

ಮಾನವ ಪ್ರಾಣಿ!

ನನ್ನ ಮನಸ್ಸಿನಲ್ಲಿ ನಡೆದಿದ್ದ ತುಮುಲದ ಕಲ್ಪನೆ ಅವಳಿಗೂ ಬಂದಿತೇನೊ. ಅಡುಗೆಯ ಮನೆಯತ್ತ ನಡೆದಿದ್ದವಳು ಹೊರಳಿ ನಿಂತು ಹೇಳಿದಳು :

"ನೀವು ಈ ದಿವಸ ಬಂದದ್ದು ಅವರಿಗೆ ಗೊತ್ತಾಗದಿದ್ದರಾಯಿತು. ಅವರಿಗೇನೂ ಸಂಶಯ ಬರುವದಿಲ್ಲ."

ಆದರೂ ನನ್ನ ಮನಸ್ಸಿನಲ್ಲಿನ ಕಳವಳ ಪೂರ್ತಿಯಾಗಿ ಮಾಯವಾಗಲಿಲ್ಲ. ರಾತ್ರಿ ಅಲ್ಲಿಯೆ ಇದ್ದು ಬೆಳಿಗ್ಗೆ ಹೊರಡುವುದೆಂದು ನಾನು ಆ ಮೊದಲೇ ನಿರ್ಧರಿಸಿದ್ದೆನಾದರೂ ಈಗ ಮನಸ್ಸು ಹೊಯ್ದಾಡತೊಡಗಿತ್ತು. ಹಾಗೇ ಕಚೇರಿಗೆ ಬಂದೆ. ಭಯದ ಅಗತ್ಯವೇನೂ ಇಲ್ಲ; ಇಂದು ಇಲ್ಲೇ ಇದ್ದು ಬಿಡುವುದು ಎಂದು ಹೇಳತೊಡಗಿತು ಮನಸು. ರಾತ್ರಿಯಲ್ಲೇ ಫೌಜದಾರರು ಬಂದುಬಿಟ್ಟರೆ? ನಾನು ಕೊಠಡಿಯಲ್ಲಿರುವುದನ್ನು ಕಂಡು ಅನುಮಾನಪಟ್ಟು ಕೊಂಡರೆ? ಸರಿ. ಒಂದಿಲ್ಲೊಂದು ದಿನ ಅಂಥ ಪ್ರಸಂಗ ಬರತಕ್ಕದ್ದೇ ಅಲ್ಲವೆ? ನಾನು ರಾತ್ರೆ ಬಹಳ ಹೊತ್ತಾದ ಬಳಿಕ ಇಲ್ಲಿಗೆ ಬಂದುದರಿಂದ ಇಲ್ಲೇ ವಸತಿ ಮಾಡಬೇಕಾದುದು ಅನಿವಾರ್ಯವಾಯಿತೆಂದು ಹೇಳಲು ಬಂದೀತು. ಇಷ್ಟರ ಮೇಲೆ ಅವರು ತಾನೆ ನನಗೇನು ಮಾಡುವ ಹಾಗಿದ್ದಾರೆ? ಈ ಕೊಠಡಿ

ಯಲ್ಲಿರುವಂತೆ ನನಗೆ ಹೇಳಿದವರೂ ಅವರೇ ಅಲ್ಲವೆ ? ಅವರ ಫೌಜದಾರಿಕೆ ಕಾಯಂ ಉಳಿಯಲು ನೆರವಾಗಲೆಂದೇ ನಾನಿಲ್ಲಿಗೆ ಬಂದುದಲ್ಲವೆ ? ಅವರಿಗಾಗಿ ನಾನು ದುಡಿದದ್ದು ಕಡಮೆಯೆ ? ಒಂದೇ ಒಂದು ದಿನದಲ್ಲಿ ಹನ್ನೆರಡು ನೂರು ರೂಪಾಯಿ ದೊರಕಿಸಿದ್ದೆ. ಹೆಣ್ಣುಗಳೊಂದಿಗೆ ಚಕ್ಕಂದವಾಡುತ್ತಾ ಅವರು ಕುಳಿತಿದ್ದರು, ನಾನು ಆ ಆತ್ಮಹತ್ಯೆಯ ಪ್ರಕರಣವನ್ನೆಲ್ಲ ಮುಗಿಸಿದ್ದೆ. ಅದೇನು ಸಾಧಾರಣ ವಿಷಯವೆ ? ನಾನಿಂದು ಇಲ್ಲಿ ವಸತಿ ಮಾಡಿದ ಬಗ್ಗೆ ಅವರೇನಾದರೂ ಅಂದರೆ ನೆಟ್ಟಗೆ ಗೊಬ್ಬೂರಿಗೆ ಹೋಗಿ ದೊಡ್ಡ ಫೌಜದಾರರಿಗೆ ಎಲ್ಲ ಸಂಗತಿಗಳನ್ನು ತಿಳಿಸಿ ಅಲ್ಲಿಯೆ ಇದ್ದುಬಿಟ್ಟರಾಯಿತು....

ಹಾಗೆ ಧೈರ್ಯ ತಂದುಕೊಂಡು ಕಚೇರಿಗೆ ಬಂದು, ನಾನಿಂದು ಇಲ್ಲಿಗೆ ಬಂದುದನ್ನು ಈಶ್ವರಪ್ಪನವರಿಗೆ ಹೇಳಬಾರದೆಂದು ಎಲ್ಲಾ ಪೋಲೀಸರಿಗೂ ತಿಳಿಸಿದೆ. ಅವರನ್ನು ಕಂಡರೆ ಯಾರಿಗೂ ಸೇರಿಕೆಯಾಗುತ್ತಿರಲಿಲ್ಲ. ಒಂದು ತಿಂಗಳಿನಲ್ಲಿಯೆ ಅವರು ಎಲ್ಲರನ್ನೂ ಬೇಸರುಗೊಳಿಸಿದ್ದರು. ಪೋಲೀಸರಾದ ನಾವೆಲ್ಲರೂ ಒಂದಾಗಿದ್ದೆವು. ನನ್ನ ವಿರುದ್ಧವಾಗಿ ಯಾರೂ ಏನನ್ನೂ ಹೇಳುವಂತಿರಲಿಲ್ಲ.

ರಾತ್ರಿ ಒಂಭತ್ತರ ಸುಮಾರಿಗೆ ಮನೆಗೆ ಹೋದೆ. ಮಕ್ಕಳೆಲ್ಲಾ ಉಂಡು ಮಲಗಿದ್ದರು. ಅಡುಗೆಯ ಚೆನ್ನ ಬಂದಿರಲಿಲ್ಲ.

“ ಸಿನಿಮಾ ಗಿನಿಮಾ ನೋಡುವದಕ್ಕೆ ಹೋಗಿ ಗೊಬ್ಬೂರಲ್ಲೇ ನಿಂತುಬಿಟ್ಟರಬೇಕು ಅವ. ಊಟಕ್ಕೇಳಿರಿ,” ಎಂದಳು ಮನೆಯೊಡತಿ.

ಕೈ ಕಾಲು ಮುಖ ತೊಳೆದುಕೊಂಡು ಊಟಕ್ಕೆ ಕುಳಿತುಕೊಂಡೆ. ಅಂದು ನನಗೆಂದೇ ಸೇವಿಗೆ ಪಾಯಸ ಸಿದ್ಧವಾಗಿತ್ತು. ಜತೆಗೆ ಸಂಡಿಗೆ, ಹಪ್ಪಳ, ಉಪ್ಪಿನಕಾಯಿ. ಮಧ್ಯೆ ಮಧ್ಯೆ ಬಳುವಂತ ಮಾಡುತ್ತಾ ಸ್ವಲ್ಪ ಅತಿಯಾಗುವಂತೆಯೆ ಬಡಿಸಿದಳು.

“ ನಾನು ಕಚೇರಿಗೆ ಹೋಗುತ್ತೇನೆ – ಮಲಗಿಕೊಳ್ಳಲಿಕ್ಕೆ – ನೀವು ಬಾಗಿಲು ಭದ್ರವಾಗಿ ಮುಚ್ಚಿಕೊಂಡು ಮಲಗಿರಿ,” ಎಂದು ನಾನು ಹೇಳುತ್ತಲೂ ಅವಳು ಸ್ವಲ್ಪವೂ ಸಂಕೋಚಪಟ್ಟುಕೊಳ್ಳದೆ,

“ ಕಚೇರಿಗ್ಯಾಕೆ ಹೋಗುತ್ತೀರಿ ? ನೀವೇನು ನಮಗೆ ಹೊಸಬರೇನು ?

ಯಾವಾಗಲೂ ಮಲಗುವಂತೆ ನಿಮ್ಮ ಕೋಣೆಯಲ್ಲೇ ಮಲಗಿರಿ. ಯಾರಿಗೂ ಅಂಜಬೇಕಾಗಿಲ್ಲ," ಎಂದಳು.

ಅವಳ ದಿಟ್ಟತನವನ್ನು ಕಂಡು ನನಗೆ ವಿಸ್ಮಯವಾಗದಿರಲಿಲ್ಲ. ಊಟಕ್ಕಿಡುವಾಗ ಅವಳು ತೋರಿದ ಆತ್ಮೀಯತೆ, ವಿಶ್ವಾಸ, ಸಲಿಗೆ, ನೆಟ್ಟ ನೋಟದಿಂದ ನನ್ನನ್ನೇ ನೋಡುತ್ತಿದ್ದುದು....ಈಗ ಅಲ್ಲಿಯೆ ಮಲಗಿಕೊಳ್ಳುವಂತೆ ಹೇಳಿದುದು. ನಾನು ಮನಸ್ಸಿನಲ್ಲಿಯೆ ಒಂದು ಚಿತ್ರವನ್ನು ಕಲ್ಪಿಸಿಕೊಂಡೆ. ನನ್ನ ಎದೆ ಡವಡವನೆ ಬಡಿದುಕೊಳ್ಳತೊಡಗಿತು. ಆ ಹಳ್ಳಿಯ ಹುಡುಗಿ ಸುಂದರಿಯ ಹಾಗೇ ಇವಳೂ ಅತೃಪ್ತ ಹೆಣ್ಣು. ಅರೆ ಗಾಯಗೊಂಡ ಹುಲಿ. ರಾತ್ರಿ ಅವಳು ನನ್ನ ಕೊಠಡಿಗೆ ನುಗ್ಗಿಬಿಡಲಿಕ್ಕಿಲ್ಲವೆಂದು ಹೇಗೆ ಹೇಳಲು ಸಾಧ್ಯ? ಅವಳಾಗಿ ಬಂದರೆ ಬೇಡವೆಂದು ಕಳಿಸುವಂಥ ವಿವೇಕಾನಂದನೂ ನಾನಲ್ಲ. ವಿವೇಕಾನಂದರ ಬಗ್ಗೆ ನನಗೇನೋ ಆದರವುಂಟು; ಅವರಂತೆ ವಿರುದ್ಧವಾಗಿ ಆಚರಿಸುವ ನೈತಿಕ ಚಾರಿತ್ರ್ಯವಿಲ್ಲ, ಅಷ್ಟೆ. ನಾನೂ ಯುವಕ. ಯುವತಿಯೊಬ್ಬಳು ಒಲಿದು ಬಂದಾಗ ಅವಳನ್ನು ನಿರಾಕರಿಸುವ ಸಜ್ಜನಿಕೆ ನನ್ನಲ್ಲಿಲ್ಲ. ರೋಶನ್....ಅಮಿನಾ....ಸುಂದರಿ....ಅವರೆಲ್ಲರ ಸಹವಾಸದಲ್ಲೂ ಹಾಗೇ ಆಯಿತು. ಈಗ ಇವಳ ಸಹವಾಸ....

ನನ್ನ ಮನಸ್ಸು ಮತ್ತೆ ಹೊಯ್ದಾಡತೊಡಗಿತು. ಇವಳು ನಮ್ಮ ಫೌಜದಾರರ ಹೆಂಡತಿ. ರೋಶನ್, ಅಮಿನಾ, ಸುಂದರಿಯರಿಗೆ ಗಂಡಂದಿರಿರಲಿಲ್ಲ. ಇವಳಿಗೆ ಗಂಡನಿದ್ದಾನೆ. ಅವನು ನನ್ನ ಮೇಲಧಿಕಾರಿ. ಅಂಥವನ ಹೆಂಡತಿಯೊಡನೆ ಸಂಬಂಧ ಬೆಳಸುವುದೆಂದರೆ ನೀಚತನದ ಪರಮಾವಧಿಯಲ್ಲವೆ?....

....ಇದರಲ್ಲೇನು ಬಂತು ನೀಚತನ? ರೋಶನ್, ಅಮಿನಾ, ಸುಂದರಿಯರ ಜೊತೆಗೆ ಮಲಗಿಕೊಂಡದ್ದು ನೀಚತನವಲ್ಲವೋ? ಅವರಿಗೆ ಗಂಡಂದಿರಿರಲಿಲ್ಲವಾದರೇನಾಯಿತು? ಅವರೇನು ಸೂಳೆಯರಾಗಿರಲಿಲ್ಲವಲ್ಲ? ಅವರೊಡನೆ ನಾನು ಮಾಡಿದ್ದೂ ವ್ಯಭಿಚಾರವೇ; ಇವಳೊಡನೆ ಮಾಡುವುದೂ ವ್ಯಭಿಚಾರವೇ. ಇವಳು ನನ್ನ ಮೇಲಧಿಕಾರಿಯ ಹೆಂಡತಿಯಾದರೇನಾಯಿತು? ತಾನಾಗಿ ಕರೆಯುವ ಹೆಣ್ಣು ಯಾರ ಹೆಂಡತಿಯಾದರೇನಂತೆ! ಅದೊಂದು ಹೆಣ್ಣು ಎಂಬುದೊಂದೇ ಸತ್ಯ, ಮಿಕ್ಕುದೆಲ್ಲಾ ಮಿಥ್ಯೆ. ಈಗ ನಾನು ವಿವೇಕಾನಂದರ

ಮರಿಯ ಸೋಗು ಹಾಕಿ, ಇವಳನ್ನು ನಿರಾಕರಿಸಿ, ಕೊಠಡಿಯಲ್ಲಿ ಮಲಗದೆ ಕಚೇರಿಗೇ ಹೋದೆನೆಂದಿಟ್ಟುಕೊಳ್ಳೋಣ. ಅಲ್ಲಿಗೆ ಇವಳ ಪಾವಿತ್ರ್ಯ ಕೊನೆಯ ವರೆಗೂ ಉಳಿಯುವುದೆಂಬ ಭರವಸೆ ಸಿಕ್ಕಂತಾಯಿತೇ? ಅತೃಪ್ತ ಹೆಣ್ಣು ಹೀಗೇ ಇನ್ನೆಷ್ಟು ದಿನ ತಡೆದುಕೊಂಡಾಳು. ಇಂದಿಲ್ಲ ನಾಳೆ ಇವಳು ಇನ್ನೊಬ್ಬ ಗಂಡಸನ್ನು ನೋಡಿಕೊಳ್ಳುವುದು ಖಂಡಿತ. ನಾನಿಲ್ಲವಾದರೆ ಇನ್ನೊಬ್ಬ. ಈ ಪ್ರಪಂಚದಲ್ಲಿ ಗಂಡಸರಿಗೇನು ಕೊರತೆ? ನಮ್ಮ ಪ್ರೇಮವನ್ನೇನೂ ಬಯಸುವು ದಿಲ್ಲ ಈಕೆ; ಗಂಡನಿಂದ ದೊರೆಯದ ಶರೀರಸುಖವನ್ನು ಮಾತ್ರ ಬಯಸುತ್ತಾಳೆ. ಇವಳ ಪಾಲಿಗೆ ಪ್ರೇಮವೆಂಬುದು ಎಂದೋ ಇಲ್ಲದಂತಾಗಿ ಹೋಗಿದೆ. ಏನೋ ಹೇಗೋ ಬದುಕುತ್ತಿದ್ದಾಳೆ. ಹೇಗಾದರೂ ಮಾಡಿ ಸಿಕ್ಕಿದಷ್ಟು ಸುಖವನ್ನು ಹೆಕ್ಕಿಕೊಳ್ಳಲು ಬಯಸುತ್ತಿದ್ದಾಳೆ. ಈ ಬಯಕೆ ಅನುಚಿತವಾದುದೆಂದು ನಾನು ಹೇಳಲಾರೆ. ಇವಳು ತಪ್ಪು ಮಾಡುತ್ತಿರುವಳೆಂದೂ ನಾನು ಹೇಳಲಾರೆ. ಗಂಡ ಎಂಥ ಪಾಪಿಯಾಗಿದ್ದರೂ ಹೆಂಡತಿ ಮಾತ್ರ ಪರಮ ಪವಿತ್ರಳೂ ಪತಿವ್ರತೆಯೂ ಆಗಿರಬೇಕೆನ್ನುವುದು ಸ್ವಾರ್ಥಿಗಳೂ ನಿರ್ಲಜ್ಜರೂ ಅನಾಗರಿಕರೂ ಆದ ಪುರುಷರ ಮಾತು. ಪಾತಿವ್ರತ್ಯದ ಈ ಪುರಾಣ ಕಲ್ಪನೆ ಇಂದು ಹಾಸ್ಯಾಸ್ಪದವಾಗಿ ಪರಿಣಮಿಸಿದೆ. ಇವಳಂಥ ಸ್ಥಿತಿಯಲ್ಲಿರುವ ಸ್ತ್ರೀಯರೆಲ್ಲ ಇವಳಂತೆಯೇ ವರ್ತಿಸಬೇಕಾಗುತ್ತದೆ. ಇವಳೂ ಒಬ್ಬಳು ಮಾನವ ಪ್ರಾಣಿಯಲ್ಲವೆ? ಸುಖ ಬೇಡವೇ ಇವಳಿಗೂ? ಬೇಡವೆಂದು ಹೇಳುವಾತ ಮಾನವನಲ್ಲ, ದಾನವ; ಪಿಶಾಚ....

ಹಾಗೆ ಯೋಚಿಸುತ್ತಾ ನಾನು ಕೊಠಡಿಗೆ ಬಂದು ಹಾಸಿಗೆಯನ್ನುರುಳಿಸಿ ಬಿದ್ದುಕೊಂಡೆ. ಹತ್ತು ನಿಮಿಷಗಳ ತರುವಾಯ ಅವಳು ಊಟಮುಗಿಸಿಕೊಂಡು ಬಂದಳು – ನನ್ನ ಕೊಠಡಿಯ ಬಾಗಿಲು ತೆರೆದೇ ಇತ್ತು.

“ನೀವೇನಾದರೂ ಹೊರಗೆ ಹೋಗುವದಿದೆಯೇನು?” ಎಂದು ಕೇಳಿದಳಾಕೆ.

“ಇಲ್ಲ.”

“ಹಾಗಾದರೆ ಹೊರಬಾಗಿಲು ಇಕ್ಕಿಬಿಡಲಾ?” ಎಂದು ಕೇಳುತ್ತಾ ಅದನ್ನು ಮುಚ್ಚಿ, ಅಗಳಿ ಹಾಕಿ ಬಂದು, ನನ್ನ ಕೊಠಡಿಯೆದುರಿನ ಕಟ್ಟೆಯ ಮೇಲೆ ಕುಳಿತುಕೊಂಡಳು.

"ನಿದ್ದೆ ಬಂತೇನು ನಿಮಗೆ?"

"ಇಲ್ಲ," ಎನ್ನುತ್ತಾ ನಾನು ಹಾಸಿಗೆಯ ಮೇಲೆದ್ದು ಗೋಡೆಗೊರಗಿ ಕುಳಿತುಕೊಂಡೆ.

ಅವಳು ಮತ್ತೆ ಆರಂಭಿಸಿದಳು ತನ್ನ ಕಥೆಯನ್ನು.

....ಅವನ ವ್ಯಭಿಚಾರದ ಪ್ರಕರಣಗಳನ್ನೆಲ್ಲ ಅವಳೂ ಬಲ್ಲವಳಾಗಿದ್ದಳು. ಅಡುಗೆಯ ಚೆನ್ನನಿಂದ ಅವಳಿಗೆ ಎಲ್ಲವೂ ತಿಳಿಯುತ್ತಿತ್ತು. ಇವಳ ಕಣ್ಣೆದುರಿನಲ್ಲಿಯೆ ಅವನು ಎಷ್ಟೋ ಹೆಂಗಸರನ್ನು ಬರಮಾಡಿಕೊಂಡಿದ್ದ. ಈ ಊರಿಗೆ ಬಂದ ಹೊಸದರಲ್ಲಿ ಅವರೀಗ ಇರುವ ಈ ಮನೆಯ ಒಡೆಯರೂ ನೆರೆಯಲ್ಲಿಯೆ ವಾಸವಾಗಿದ್ದರು. ಅವರಿಗೊಬ್ಬಳು ಬೆಳೆದ ಹುಡುಗಿ. ಮದುವೆಯಾಗಿದ್ದಿತಾದರೂ ಕಾರಣಾಂತರಗಳಿಂದಾಗಿ ತಂದೆಯ ಮನೆಯಲ್ಲಿಯೆ ಇದ್ದಳು. ಅಡುಗೆಯಾಳಿನ ಮಧ್ಯಸ್ಥಿಕೆಯಿಂದ ಅವಳನ್ನು ಬಲೆಗೆ ಬೀಳಿಸಿಕೊಳ್ಳುವ ಯತ್ನ ನಡೆಸಿದ್ದರು ಫೌಜದಾರರು. ಹೆಂಡತಿಯ ಕಣ್ಣೆದುರಲ್ಲೇ ಈ ಹೊಲಸು ವ್ಯವಹಾರ ನಡಸಲು ಅವರಿಗೆ ಕೊಂಚವೂ ಸಂಕೋಚವಾಗಿರಲಿಲ್ಲ....

"ಥೂ! ಏನು ಬಾಳ್ವೆ ಇದು ನಮ್ಮದು! ಗಂಡನಾದವ ಇಂಥಾ ಹಲ್ಕಾ ಕೆಲಸ ಮಾಡುತ್ತಿರುವಾಗ ಅದನ್ನೆಲ್ಲಾ ನೋಡುತ್ತ ನನ್ನ ಮನಸ್ಸಿಗೆ ಏನನ್ನಿಸಬೇಡ! ನಿಮಗೆ ಅರ್ಥವಾಗುವದೋ ಇಲ್ಲೋ?"

"ಅರ್ಥವಾಗದೇ?"

"ಈಗ ನೀವು ಕೊಟ್ಟ ರೂಪಾಯಿಗಳನ್ನೂ ನಾನು ಹಾಗೇ ಇಟ್ಟುಕೊಳ್ಳುವಂತಿಲ್ಲ. ನಾಲ್ಕು ದಿನಗಳ ಮಟ್ಟಿಗೆ ತವರುಮನೆಗೆ ಹೋಗಿ ಈ ರೂಪಾಯಿಗಳಿಂದ ಒಡವೆಗಳನ್ನು ತರಿಸಿ, ನನ್ನ ತಂದೆಯವರು ಮಕ್ಕಳ ಮೈಮೇಲಿಟ್ಟರೆಂದು ಹೇಳಬಹುದು. ಇಲ್ಲವಾದರೆ ಸುಮ್ಮನೆ ಫಜೀತಿ. ಆಂ? ಏನಂತೀರಿ?"

"ಬರೋಬರಿ."

ಅವಳು ಆಕಳಿಸಿದಳು, ಮೈಮುರಿದುಕೊಂಡಳು. "ಹಾಳು ನಿದ್ದೆಯೇ ಬರಲೊಲ್ಲದು."

"ಯಾಕೆ?" ನಾನು ಬೇಕೆಂತಲೇ ಕೇಳಿದೆ.

"ಅದೇನು ಹೇಳಬೇಕು! ಇಷ್ಟು ಹೇಳಿದರೂ ತಿಳಿಯಲಿಲ್ಲವೇನು?"

"ಇಲ್ಲ."

"ನೀವು ತಿಳಕೊಂಡಿದ್ದೀರಿ. ಆದರೂ ಇಲ್ಲ ಅಂತ ಸುಳ್ಳು ಹೇಳುತ್ತೀರಿ. ನಾನು ಹೆಣ್ಣು ಸ್ಪಷ್ಟವಾಗಿ ತಿಳಿಸುವಂತಿಲ್ಲ. ನನ್ನ ಗಂಡ ಸಾವಿರ ಹೆಂಗಸರೊಡನೆ ಮಲಗಿದರೂ ಯಾರೂ ಏನೂ ಅನ್ನುವದಿಲ್ಲ.' ನಾನು ಒಬ್ಬ ಗಂಡಸನನ್ನು ನೋಡಿಕೊಂಡರೂ ವ್ಯಭಿಚಾರಿಯಾಗುತ್ತೇನೆ. ಅಲ್ಲವೇನು? ನಿಮಗೂ ಹಾಗೇ ಅನ್ನಿಸುತ್ತದೆ, ಹೌದೋ ಅಲ್ಲೋ? ಗಂಡಸರ ಜಾತಿಯೆಲ್ಲಾ ಹಾಗೇ."

ನಾನು ಮೌನವಾಗಿದ್ದೆ. ಮಾತನಾಡುವುದಾದರೂ ಏನನ್ನು?

ಮತ್ತೆ ಅವಳೇ ಹೇಳತೊಡಗಿದಳು:

"ನಿಮ್ಮ ಬಾಯಲ್ಲಿ ಮಾತೇ ಬರಲೊಲ್ಲದಲ್ಲ! ಏನಾಯಿತು ನಿಮಗೆ? ಒಂದು ತಿಂಗಳಾಗುತಾ ಬಂತು ಗಂಡನೆಂದುಕೊಳ್ಳುವವ ನನ್ನ ಮುಟ್ಟಿಲ್ಲ. ಹಳ್ಳಿಗಳಿಗೆ ಹೋಗಿ ಅಲ್ಲಿಯ ಹೆಣ್ಣುಗಳಲ್ಲಿ ಚಪಲ ತೀರಿಸಿಕೊಂಡು ಬರ್‍ತಾನೆ. ಇಲ್ಲಿ ನನ್ನ ಪಕ್ಕದಲ್ಲಿ ಮಲಗಿದ್ದಾಗ ಸುಖನಿದ್ದೆ ಅವನಿಗೆ. ನಾನು ತೊಂದರೆ ಕೊಟ್ಟರೆ ರಾತ್ರಿಯಲ್ಲೇ ಒದರಾಡುತ್ತಾನೆ. ನನ್ನ ಮನಸ್ಸಿಗೆ ಪೆಟ್ಟು ಹತ್ತುವಂತೆ ಮಾತಾಡಿದ ಬಳಿಕ ನನಗೇ ಅವನ ಸಹವಾಸ ಅಸಹ್ಯವಾಗುತ್ತದೆ. ನಾನೇನು ಮಾಡಲಿ? ನೀವು ಅವನ ನಂಬಿಗಸ್ಥರು. ನನಗೂ ನಂಬಿಕೆಯೆನ್ನಿಸಿ ನಿಮ್ಮ ಮುಂದೆ ಎಲ್ಲಾ ದುಃಖ ತೋಡಿಕೊಂಡೆ. ಇದುವರೆಗೆ ನನ್ನ ಸಂಕಟ ಬೇರೆ ಯಾರಿಗೂ ಗೊತ್ತಿರಲಿಲ್ಲ. ಅಡುಗೆಯ ಹುಡುಗನೊಬ್ಬನಿಗೆ ಗೊತ್ತು. ನಾನೇನು ಅವನೊಡನೆ ಮಲಗಿಕೊಳ್ಳಲೇ? ಅವನೇನು ಆಗಬಹುದು. ಆದರೆ, ಅವನನ್ನು ಹಾಗೆ ನಂಬುವಂತಿಲ್ಲ. ಇವತ್ತು ನಮ್ಮಲ್ಲಿದ್ದರೆ ನಾಳೆ ಇನ್ನೊಬ್ಬರಲ್ಲಿ ಇರುವವನಾತ. ನಮ್ಮ ಗುಟ್ಟುಗಳನ್ನು ಬೇರೆ ಕಡೆ ಹೇಳಿಬಿಟ್ಟರೆ ನಮ್ಮ ಮರ್ಯಾದೆಗೆ ಕುಂದು ಬಂದೀತೆಂದು ಅಂಜಿ ಅವನ ಸಹವಾಸಕ್ಕೆ ಹೋಗಿಲ್ಲ. ನಾನು ನಾಚಿಕೆಗೆಟ್ಟವಳು ಅಂತನಿಸುವದೇನು ನಿಮಗೆ? ನಿಜ ಹೇಳುತ್ತೇನೆ. ನಾನು ತವರುಮನೆಯಲ್ಲಿದ್ದಾಗ ಮೈನೆರೆದು ನಾಲ್ಕು ವರ್ಷವಾಗಿದ್ದರೂ ಒಮ್ಮೆಯೂ ಕಾಮುಕ ವಿಚಾರ ಬಂದಿರಲಿಲ್ಲ. ನನಗಿಂತಲೂ ಚಿಕ್ಕವರಾದ ನನ್ನ ಗೆಳತಿಯರು ಲಗ್ನವಾಗಿ ಗಂಡನ ಮನೆಗೆ ಹೋಗಿ ತಿರುಗಿ ಬಂದಾಗ ತಮ್ಮ ಪ್ರಣಯ ಪ್ರಸಂಗಗಳ ಬಗ್ಗೆ ಹೇಳುತ್ತಿದ್ದರು. ಆಗ ನಾನೂ ಅಂದುಕೊಳ್ಳುತ್ತಿದ್ದೆ: ನನ್ನದೂ ಲಗ್ನವಾಗುವದು, ನಾನೂ ಆನಂದದಿಂದ ಕಾಲ ಕಳೆಯಬಹುದು ಅಂತ.

ಅಷ್ಟಲ್ಲದೆ ನಾನು ಒಂದು ಸಲವೂ ಪರಪುರುಷರ ಸಂಗಡ ಮಾತಾಡಿರಲಿಲ್ಲ ಕೂಡಾ. ಏನು, ನಿಮಗೆ ನಂಬಿಕೆಯಾಗುವದೋ ಇಲ್ಲೋ ನಾ ಹೇಳುವದು ?"

"ಯಾಕಾಗಬಾರದು ? ಅದಕ್ಕೆ ನಿಮ್ಮ ಮನೆಯ ವಾತಾವರಣ ಚೆನ್ನಾಗಿದ್ದದ್ದೂ ಒಂದು ಕಾರಣವಾಗಿರಬೇಕು."

"ನಿಜ ಹೇಳಿದಿರಿ. ಅದೂ ಒಂದು ಮುಖ್ಯ ಕಾರಣ. ನನ್ನ ತಂದೆ ಬಹಳ ಸಾತ್ವಿಕರು, ಬಹಳ ಒಳ್ಳೆಯವರು. ನನ್ನ ತಾಯಿ ಮೊದಲೇ ತೀರಿಕೊಂಡಿದ್ದಳು. ನಾವು ಒಟ್ಟು ನಾಲ್ಕು ಜನರು. ಒಬ್ಬ ಅಣ್ಣ. ನಾನು ನಡುವಿನಾಕೆ, ಇನ್ನಿಬ್ಬರು ಚಿಕ್ಕ ತಂಗಿಯರು. ನಮ್ಮ ಮೂವರ ಲಗ್ನವನ್ನೂ ಒಂದೇ ಕಾಲಕ್ಕೆ ಮುಗಿಸಿದ ನಮ್ಮ ಅಣ್ಣ. ನಮ್ಮ ಮೇಲೆ ಅವನಿಗೆ ಬಹಳ ಪ್ರೀತಿ. ನಮ್ಮ ಲಗ್ನವಾಗಿ ನಾವು ಗಂಡನ ಮನೆಗೆ ಹೋದ ಮೇಲೆಯೆ ಅವನು ಲಗ್ನವಾದ. ತನ್ನ ಹೆಂಡತಿ ಬಂದು ನಮಗೆ ತೊಂದರೆ ಕೊಟ್ಟಾಳು ಅಂತಲೇ ನಾವು ತವರುಮನೆಯಲ್ಲಿರುವ ತನಕ ಮದುವೆಯಾಗಲಿಲ್ಲ ಆತ. ಅಷ್ಟು ಒಳ್ಳೆಯವ ನನ್ನ ಅಣ್ಣ. ನಮ್ಮನ್ನು ಗಂಡನ ಮನೆಗೆ ಕಳಿಸುವ ದಿನವಂತೂ ಹೆಣ್ಣುಮಕ್ಕಳಂತೆ ಕಣ್ಣೀರು ಸುರಿಸಿದ್ದ. ತಾಯಿಯಿಲ್ಲದ ಹೆಣ್ಣುಮಕ್ಕಳಂತೆ ಸ್ವೇಚ್ಛೆಯಿಂದ ಬೆಳೆದು ಕೆಟ್ಟುಹೋಗಿದ್ದಾರೆ ಅಂತ ಯಾರಾದರೂ ಅಂದರೆ ಅಣ್ಣನಿಗೆ ಪ್ರಾಣವೇ ಹೋದಹಾಗಾಗುತ್ತಿತ್ತು. ಅದಕ್ಕೇ ನಾವೂ ಅವನಿಗೆ ತಕ್ಕ ಹಾಗೆ ಮರ್ಯಾದೆಯಿಂದ ಬಾಳಲು ಕಲಿತಿದ್ದೆವು. ನನ್ನ ತಂಗಿಯರಿಬ್ಬರೂ ಸುಖಿಗಳಾಗಿದ್ದಾರೆ. ನಾವು ಮೂವರೂ ಕೂಡಿದಾಗ ಸಹಜವಾಗಿ ನನ್ನನ್ನು ಕೇಳುತ್ತಾರೆ – ಸುಖವಾಗಿದೀಯಾ ಅಂತ. ನಾನಿನ್ನೇನು ಹೇಳಲಿ ? ಹೂಂ ! ಅನ್ನುತ್ತೇನೆ. ನಮ್ಮಣ್ಣ ಇಲ್ಲಿಗೆ ಯಾವಾಗಾದರೊಮ್ಮೆ ಬಂದಾಗ ಒಂದೇ ದಿನ ಇರುತ್ತಾನೆ. ಅದೊಂದು ದಿನ ನನ್ನ ಮೇಲೆ ಎಂದೂ ಇಲ್ಲದ ಪ್ರೀತಿಯ ನಟನೆ ಮಾಡುತ್ತಾರೆ ಇವರು. ನಾವು ಗಂಡ ಹೆಂಡಿರು ಬಹಳ ಪ್ರೀತಿಯಿಂದಲೇ ಇರಬೇಕೆಂದು ತಿಳಿದ ಅಣ್ಣನಿಗೆ ಆನಂದವಾಗುತ್ತದೆ. ಪಾಪ ! ಅವನಿಗೇನು ಗೊತ್ತು ಒಳಗಿನ ಹೂರಣವೆಂಥಾದ್ದು ಅಂತ ! ನಾನೂ ಅವನಿಗೇನನ್ನೂ ಹೇಳಲು ಹೋಗುವದಿಲ್ಲ. ಅವನು ಬಂದದ್ದೇ ಒಂದು ಸ್ವರ್ಗಸುಖ ಇದ್ದಹಾಗೆ. ಅವನು ಊರಿಗೆ ಹೋದ ಮೇಲೆ ಮತ್ತೆ ಇದೇ ನರಕ. ಮಾತಾಡಿರಿ.

ನೀನೇನಾದರೂ ನನಗೆ ಸಮಾಧಾನ ಹೇಳಬಹುದು ಅಂತಲೇ ನಾನು ಇಷ್ಟು ಹೊತ್ತು ತೊಂದರೆ ಕೊಟ್ಟದ್ದು...."

ಅವಳು ಮತ್ತೆ ಆಕಳಿಸಿದಳು, ತಲೆ ತೂಗಿಸಿದಳು. ಬೆನ್ನು ಮುರಿದು ಕೊಂಡಳು, ಚಿಟಕೆ ಹೊಡೆದಳು. ನಾನು ಅವಳ ಚಲನವಲನಗಳನ್ನೆಲ್ಲ ಕೌತುಕದಿಂದ ದಿಟ್ಟಿಸುತ್ತಿದ್ದೆ. ಅವಳು ಅಲ್ಲಿಂದೆದ್ದು ತನ್ನ ಹಾಸಿಗೆಗೆ ಹೋಗುವ ಚಿಹ್ನೆ ಕಾಣಲಿಲ್ಲ. ರಾತ್ರಿ ಹೆಚ್ಚುತ್ತಿತ್ತು. ಮನೆಯ ಬಾಗಿಲು ಮುಚ್ಚಿದ್ದುವು. ನಮ್ಮಿಬ್ಬರನ್ನು ಬಿಟ್ಟರೆ ಅಲ್ಲಿ ಇನ್ನಾರೂ ಇಲ್ಲ. ಆ ಚಿಕ್ಕಮಕ್ಕಳಂತೂ ನಿದ್ರಾಧೀನರಾಗಿದ್ದರು. ಇವಳಂತೂ ಹಸಿದ ಹುಲಿಯಂತಾಗಿದ್ದಳು. ನನ್ನನ್ನು ಸರಸಕ್ಕೆ ಕರೆಯುತ್ತಿರುವಳೇ? ನನಗೆ ಅನುಮಾನ. ಹಾಗೇನೂ ಇರಲಾರದು. ಒಳ್ಳೆಯ ಮನೆತನದ ಹೆಣ್ಣು. ತಿಳಿವಳಿಕೆಯಿದೆ. ವಿವೇಕವಿದೆ. ಗಂಡನನ್ನು ದ್ವೇಷಿಸುವಳಾದರೂ ಅವನ ಬಗ್ಗೆ ಭಕ್ತಿಯೂ ಇದೆಯೇನೊ. ಕ್ಷಣಿಕ ಸುಖಕ್ಕಾಗಿ ಕಾಲು ಜಾರುವ ಹೆಂಗಸಿನ ಹಾಗಿರಲಾರಳು ಈಕೆ. ಹೌದೇ? ಏನೋ ಯಾರಿಗೆ ಗೊತ್ತು! ಸ್ತ್ರೀಪುರುಷರು ಲಗ್ನವಾಗುವುದಾದರೂ ಏತಕ್ಕಾಗಿ? ಅವರು ಕೊನೆಯವರೆಗೂ ಬ್ರಹ್ಮಚಾರಿಗಳಾಗಿ ಇರಬಾರದೇಕೆ? ನಿಸರ್ಗ ಸಹಜವಾದ ಕ್ರಿಯೆಗಳೆಲ್ಲ ನಡೆಯಲೇಬೇಕಲ್ಲವೆ? ನಡೆಯತ್ತಲೇ ಬಂದಿವೆ. ನಿಸರ್ಗದ ವಿರುದ್ಧ ಯಾವಾಗಲೂ ತಲೆಯೆತ್ತಿ ನಿಲ್ಲುವದು ಸಾಧ್ಯವಿಲ್ಲ. ಮಾಯಾ ಮಚ್ಛಿಂದ್ರನಾಥ, ವಿಶ್ವಾಮಿತ್ರ....ಒಂದೇ ಎರಡೇ! ಎಷ್ಟೆಂದು ಉದಾಹರಣೆಗಳು ಕಾಮದ ಶಕ್ತಿಯನ್ನು ತೋರಿಸಲು. ಪಾಪ! ಇವಳಾದರೂ ಹೇಗೆ ತಡೆದು ಕೊಳ್ಳಬಲ್ಲಳು ನಿಸರ್ಗದ ಬಯಕೆಯನ್ನು! ಅದನ್ನು ತೀರಿಸಿಕೊಳ್ಳಲೆಂದೇ ಈ ನಾಟಕವನ್ನೆಲ್ಲ ಹೂಡಿರಬೇಕು....

....ನಾಟಕ? ಯಾರಿಗೆ ಗೊತ್ತು! ಇದೇನೂ ನಾಟಕವಾಗಿರಲಿಕ್ಕಿಲ್ಲ. ಇವಳು ದುಃಖತಪ್ತಳಾದ ಹೆಣ್ಣು. ಸರಳತನದಿಂದಲೇ ನನ್ನೆದುರಿಗೆ ತನ್ನ ದುಃಖ ತೋಡಿಕೊಂಡು ಹೃದಯ ಹಗುರಗೊಳಿಳಿಸಿಕೊಳ್ಳುತ್ತಿರಬಹುದು. ಕಾಮುಕ ವಿಚಾರ ಅವಳಿಗಿರಲಿಕ್ಕಿಲ್ಲ. ನಾನೇ ಕಾಮುಕ. ಅವಳನ್ನು ಕಂಡು ನನಗೆ ಆಸೆಯಾಗಿದೆ. ಸ್ವಲ್ಪ ಧೈರ್ಯದಿಂದ ಯತ್ನಿಸಿದಲ್ಲಿ ಅವಳು ನನ್ನ ವಶಳಾಗಲು ಸಾಧ್ಯವಿದೆ. ಎಂತಲೇ ಅವಳಲ್ಲೂ ಕಾಮವನ್ನಾರೋಪಿಸಿ ನನ್ನ ವಿವೇಕವನ್ನು ನಾನೇ ವಂಚಿಸಿಕೊಳ್ಳುತ್ತಿದ್ದೇನೆ.

ಹಾಗೇ ಯೋಚಿಸುತ್ತಾ ನಾನು ಮಾತಿಗಾರಂಭಿಸಿದೆ :

" ನೀವು ಹೇಳಿದ್ದು ಅರ್ಥವಾಯಿತು. ಆದರೆ ಅದಕ್ಕೆ ಉಪಾಯವೇನು ?"

" ನನ್ನ ಗಂಡ ನನಗೆ ಬೇಕು. ಅವನನ್ನು ಬಿಟ್ಟು ಗಯ್ಯಾಳಿ ಅನ್ನಿಸಿಕೊಳ್ಳಲಾರೆ. ಇನ್ನೊಬ್ಬನನ್ನೂ ಲಗ್ನವಾಗಲಾರೆ. ಆಗಲೂ ನನಗೆ ಕೆಟ್ಟ ಹೆಸರು – ಮೊದಲನೇ ಗಂಡನನ್ನೂ ಮಗುವನ್ನೂ ಬಿಟ್ಟವಳು ಅಂತ. ಅದಕ್ಕೇ ನಾನು ಇವನೊಡನೆ ಸಂಬಂಧ ಮುರಿಯುವಂತಿಲ್ಲ. ಇವನು ನನ್ನ ಸಂಗಡ ಪ್ರೀತಿಯಿಂದಿದ್ದರೆ ಸಾಕು. ನನಗಿನ್ನೇನೂ ಬೇಡ. ಆದರೆ ಮಿತಿಮೀರಿದ ವ್ಯಭಿಚಾರದಿಂದ ಅವನು ದಿನದಿಂದ ದಿನಕ್ಕೆ ಅಶಕ್ತನಾಗುತ್ತಿದಾನೆ. ನನ್ನದು ಹಾಗಿಲ್ಲ – ನನಗೀಗ ಇಪ್ಪತ್ತು ವರ್ಷವಷ್ಟೆ. ದಿನದಿಂದ ದಿನಕ್ಕೆ ನಾನು ಅವನಿಗಿಂತ ಹೆಚ್ಚು ಬೆಳೆಯುತ್ತಿದೇನೆ. ಇದಕ್ಕೆ ಉಪಾಯವಿದ್ದಂತೆ ನನಗೇನು ಅನಿಸುವದಿಲ್ಲ."

" ಉಪಾಯವೇನೋ ಇದೆ...."

" ಏನು ?"

" ಆಗಲೆ ನೀವೆಂದಿರಲ್ಲಾ, ನಿಮ್ಮ ಗಂಡ ನಿಮ್ಮನ್ನು ಪ್ರೀತಿಸುತ್ತಾ ಹೋದರೆ ಸಾಕು. ನೀವು ಅಷ್ಟಕ್ಕೇ ತೃಪ್ತರಾಗಿರಬಹುದು."

ಅವಳು ದೀರ್ಘವಾಗಿ ಆಕಳಿಸುತ್ತ ಹೇಳಿದಳು :

" ಏನು ತೃಪ್ತಿಯೋ ! ನೀರಡಿಕೆಯಾದವರಿಗೆ ಚಮಚದ ನೀರಿನಿಂದ ತೃಪ್ತಿಯಾಗುವುದೇನು ?"

" ಅದು ನಿಜವೆ...."

" ಹಾಗಾದರೆ ?"

" ಇಲ್ಲೇ ಬರುವದು ಬಿಕ್ಕಟ್ಟು. ನಿಮ್ಮ ಗಂಡನಿಂದ ನಿಮಗೆ ತೃಪ್ತಿಯಾಗುವಂತಿಲ್ಲ ಅನ್ನುವದಂತೂ ನಿಜ. ಅವರ ನಿಮ್ಮ ವಯಸ್ಸು ನೋಡಿದರೆ ಸಾಕು, ಯಾರಿಗಾದರೂ ಈ ಮಾತು ಹೊಳೆದೀತು. ಅವರು ನಿಮ್ಮನ್ನು ಪ್ರೀತಿಯಿಂದ ನೋಡಿದರೆ ನೋಡಬಹುದು – ತಂದೆ ತನ್ನ ಮಗಳನ್ನು ನೋಡುವ ಹಾಗೆ. ಅಂಥ ಪ್ರೀತಿಯಿಂದ ನಿಮಗೇನೂ ತೃಪ್ತಿಯಾಗಲಾರದ. ನಿಮಗೆ ತೃಪ್ತಿಯಾಗುವುದು ಪ್ರಿಯಕರನ ಪ್ರೇಮದಿಂದ. ಇದಕ್ಕಿಂತ ಹೆಚ್ಚಿಗೆ ನನಗೇನೂ ತಿಳಿಯುವದಿಲ್ಲ. ಸ್ವಲ್ಪ ಹೊತ್ತಿನ ಹಿಂದೆ ನೀವೇ ಹೇಳಿದಿರಿ – ಅವರು ನಿಮ್ಮನ್ನು

ಪ್ರೀತಿಯಿಂದ ನೋಡಿಕೊಂಡರೆ ಸಾಕು ಅಂತ. ಈಗ ನೀವೇ ಅವರ ವಿರುದ್ಧ ಮಾತಾಡುತ್ತೀರಿ."

"ನನಗೆ ಯಾವದೂ ತೋಚದಂತಾಗಿದೆ. ಏನೂ ಹೊಳೆಯದಂತಾಗಿದೆ. ನಾನೇನು ಆಡುತ್ತಿರುವೆನೆಂಬುದೇ ನನಗೆ ತಿಳಿಯದಂತಾಗಿದೆ. ನಾನೇನು ನಿಮ್ಮಂತೆ ಓದಿದವಳಲ್ಲ. ಹುಚ್ಚಿಯ ಹಾಗೆ ಮಾತಾಡುತ್ತಿರಬಹುದು. ಹನ್ನೆರಡು ಗಂಟೆಯಾಯಿತು. ನನಗೂ ನಿದ್ದೆಯಿಲ್ಲ. ನಿಮಗೂ ಇಲ್ಲ. ನಿಮಗೇನು ನಿಮ್ಮವಳ ನೆನಪಾಗಿದೆಯೋ ಏನು ?"

ನಾನು ತಬ್ಬಿಬ್ಬಾಗಿ ಉತ್ತರವಿತ್ತೆ :

"ನನ್ನ ಹೆಂಡತಿ ಇನ್ನೂ ಸಣ್ಣವಳು. ಅವಳೊಂದಿಗೆ ಸಂಸಾರ ಹೂಡಲು ಇನ್ನೊಂದು ವರ್ಷವಾದರೂ ಬೇಕು. ನನಗೂ ನಿದ್ದೆ ಹಾರಿಹೋಯಿತು."

"ಹಾಗಾದರೆ...." ಎಂದು ಒಯ್ಯಾರದಿಂದ ನುಡಿದವಳೆ ಅವಳು ಮೇಲೆಕ್ಕೆದ್ದಳು. ನಾನು ಹುಚ್ಚನಂತೆ ಅವಳನ್ನು ಹಿಂಬಾಲಿಸಿದೆ. ಅವಳ ಶಯನಗೃಹಕ್ಕೆ ಬಂದುದೂ ಆಯಿತು. ನನ್ನ ಕಾಲುಗಳಲ್ಲಿನ ನರಗಳೆಲ್ಲ ಸತ್ತಂತೆ ತೋರುತ್ತಿತ್ತು. ಎಷ್ಟು ದಿಟ್ಟ ಹೆಣ್ಣು ಇವಳು! ಮನೆ ಬಿಟ್ಟು ಹೊರಗೆ ಮುಖ ತೋರಿಸದಿದ್ದವಳೇ ಈಗ ನನ್ನನ್ನು ಶಯನಗೃಹಕ್ಕೆ ಕರೆದು ತಂದಿದ್ದಾಳೆ. ನನಗೆ ಆಶ್ಚರ್ಯ, ವಿಸ್ಮಯ, ದಿಗಿಲು, ಪುಲಕ. ಅವಳು ಶಯನಗೃಹದ ಬಾಗಿಲು ತೆಗೆದಳು. ಆ ಕೊಠಡಿಯನ್ನು ಕಂಡು ನಾನು ಬೆರಗಾಗಿ ನಿಂತುಕೊಂಡೆ.

"ನೋಡಿರಿ ಈ ಶೃಂಗಾರ! ಇದು ನಮ್ಮ ಪಲ್ಲಂಗ!"

ನಾನು ನೋಡುತ್ತಿದ್ದೆ, ಎವೆ ಪಿಳುಕಿಸದೆ ನೋಡುತ್ತಿದ್ದೆ. ಅಲ್ಲಿದ್ದುದು ದೊಡ್ಡ ಮಂಚ. ಅದರ ಮೇಲೆ ದಪ್ಪಗಿನ ಹಾಸಿಗೆ. ದುಂಡನೆಯ ದಿಂಬುಗಳು. ಕೊಠಡಿಯಲ್ಲೆಲ್ಲ ಸುಗಂಧ ಘಮಘಮಿಸುತ್ತಿತ್ತು. ಗೋಡೆಗಳ ಮೇಲೆ ನಗ್ನ ಸ್ತ್ರೀಯರ ವರ್ಣಚಿತ್ರಗಳು – ಚಿತ್ರವಿಚಿತ್ರ ಭಾವ ಭಂಗಿಗಳಲ್ಲಿ, ದೇಹದ ಅವಯವಗಳನ್ನು ಬೇರೆ ಬೇರೆಯಾಗಿ ಎತ್ತಿ ತೋರಿಸುತ್ತಿದ್ದುವು. ಸ್ತ್ರೀ ಪುರುಷರ ಸಮಾಗಮ ಚುಂಬನ ಆಲಿಂಗನಗಳ ಚಿತ್ರಗಳು. ಎಂಥ ಸಂಯಮಿಯನ್ನೂ ಉದ್ರೇಕಗೊಳಿಸುವಂಥ ಚಿತ್ರಗಳು.

ಅವಳು ಮಂಚದ ಮೇಲೆ ಕುಳಿತುಕೊಂಡಳು. ನಾನು ಮೂಕನಂತೆ ನಿಂತುಕೊಂಡಿದ್ದೆ. ಇವಳು ನನ್ನನ್ನೇಕೆ ಇಲ್ಲಿಗೆ ಕರೆದು ತಂದಳು? ತನ್ನ ಗಂಡನ

ಚರಿತ್ರೆ, ತನ್ನ ಅಸಹಾಯಕ ಸ್ಥಿತಿ ನನಗೆ ತಿಳಿಯಲೆಂಬ ಉದ್ದೇಶವೋ ? ಅಥವಾ ನಿಜಕ್ಕೂ ನನ್ನನ್ನು ಇವಳು ಬಯಸುವಳೋ ?

"ಫೌಜದಾರರು ಬಹಳ ರಸಿಕರು !" ಎಂದೆ ನಾನು, ನಿಧಾನವಾಗಿ.

"ಹೌದು. ಬಹಳ ರಸಿಕರು ! ಅವರ ರಸಿಕತನಕ್ಕೆ ಸಾಕ್ಷಿ ಇವೆಯಲ್ಲ ಗೋಡೆಗಳ ಮೇಲೆಲ್ಲಾ !"

"ಇಷ್ಟು ರಸಿಕರಾಗಿದ್ದೂ ನಿಮ್ಮನ್ನು ಸುಖದಲ್ಲಿಡಲು ಶಕ್ಯವಿಲ್ಲವೇ ಅವರಿಗೆ ?"

"ಅವರ ರಸಿಕತನವೆಲ್ಲಾ ಹೊರಗೇ ಹಾಳಾಗಿ ಹೋಗುವದೆಂದಮೇಲೆ ಅದರಿಂದ ನನಗೇನು ಉಪಯೋಗವಾದೀತು ? ಎಂದಾದರೊಮ್ಮೆ, ನಾನು ಹೆಂಡತಿ ಅಂತ ನನ್ನನ್ನು ಮಾತಾಡಿಸಿದರೆ ಸಾಕೇ ? ಇದಕ್ಕೆಲ್ಲಾ ಕಾರಣ ಅಂದರೆ ಅವರ ಅಂಜಿಕೆ. ಅವರು ವಯಸ್ಸಾದವರು, ನಾನು ಹರೆಯದಾಕೆ ಅಂತ...."

"ಹೊರಗೂ ಯುವತಿಯರೇ ಸಿಗುವರಲ್ಲ ಅವರಿಗೆ ?"

"ಆದರೇನು ! ಅವರಿಗೂ ನನಗೂ ಭೇದವಿಲ್ಲವೇನು ! ಅವರೇನು ಇವರ ಕೂಡ ಯಾವಾಗಲೂ ಇರುವವರೇನು ? ಅವರೆಲ್ಲಾ ಇವರ ಫೌಜದಾರಿಕೆಯ ದರ್ಪಕ್ಕಂಜಿಕೊಂಡೋ ಇವರ ದುಡ್ಡಿಗಾಸೆ ಮಾಡಿಕೊಂಡೋ ಬರುವವರು. ನನ್ನ ಮಾತು ಹಾಗಲ್ಲ. ಇವರ ಅಧಿಕಾರವಾಗಲಿ ಹಣವಾಗಲಿ ನನಗೆ ಬೇಕಾಗಿಲ್ಲ, ಇವರೇ ಬೇಕು. ಅದಕ್ಕೇ ಅಂಜಿಕೆ ಅವರಿಗೆ. ಆ ಅಂಜಿಕೆ ಬೆಳೆದ ಹಾಗೆ ನಾನು ಬೇಡವಾಗುತ್ತೇನೆ. ಅವರಿಗೆ ಬೇಸರವಾದಷ್ಟೂ ನನ್ನ ಆಸೆ ಹೆಚ್ಚಾಗುತ್ತದೆ."

"ಅದಕ್ಕೆ ಪರಿಹಾರವಿಲ್ಲ."

"ಇಲ್ಲವೇಕೆ ? ಇದೆ," ಎಂದು ಹೇಳಿದವಳೆ ಅವಳು ದೀಪವನ್ನಾರಿಸಿ ಬಿಟ್ಟಳು.

೨೩

ಕಫನಿಯ ಕಳ್ಳ

ಬೆಳಿಗ್ಗೆ ಎದ್ದವನೇ ಹಳ್ಳಿಗೆ ಹೊರಟು ಸುಮಾರು ಹನ್ನೊಂದರ ವೇಳೆಗೆ ಅಲ್ಲಿಗೆ ಬಂದು ಮುಟ್ಟಿದೆ. ಆ ಹಳ್ಳಿಯಲ್ಲಿ ನಡೆದ ಹೊಡೆದಾಟದ ಪ್ರಕರಣವೊಂದರ ವಿಚಾರಣೆಗೆಂದು ಫೌಜದಾರರು ಹೋಗಿದ್ದರು. ಅವರು ಹಳ್ಳಿಯಲ್ಲಿ ಕಾಲಿರಿಸುವುದೊಂದೇ ತಡ, ಹೊಡೆದಾಟದಲ್ಲಿ ಭಾಗವಹಿಸಿದವರೆಲ್ಲರೂ ಓಡಿ ಹೋಗಿದ್ದರು. ಮೂರು ದಿನ ಕಳೆದರೂ ಬಂದಿರಲಿಲ್ಲ. ಅಪರಾಧಿಗಳ ಮನೆಗಳಲ್ಲಿ ಗಂಡಸರೇ ಇಲ್ಲದಿದ್ದಾಗ ನಮ್ಮ ಫೌಜದಾರರ ಚೆಲ್ಲಾಟಕ್ಕೆ ತಡೆಯನ್ನುಂಟುಮಾಡುವವರಾರು? ಅವರ ಸಮಯ ಬಲು ಮೋಜಿನಿಂದ ಕಳೆಯುತ್ತಿತ್ತು. ನನ್ನನ್ನು ನೋಡುತ್ತಲೂ,

"ಯಾವಾಗ ಬಂದೆ ಕಾಲವಾಡಕ್ಕೆ?" ಎಂದು ಕೇಳಿದರು. ಎಲ್ಲಕ್ಕೂ ಮೊದಲು ಅವರು ಆ ಪ್ರಶ್ನೆಯನ್ನೇ ಕೇಳಬಹುದೆಂದು ನನಗೂ ಅನ್ನಿಸಿತ್ತು.

"ಇಂದೇ ಮುಂಜಾನೆ ಬಂದೆ."

"ಇಲ್ಲೂ ಏನೂ ಕೆಲಸವಾಗಲಿಲ್ಲ. ಆರೋಪಿಗಳೆಲ್ಲಾ ಫರಾರಿಯಾಗಿದ್ದಾರೆ."

"ಹಾಗಾದರೆ ಸುಮ್ಮನೆ ಕೂತು ಮಾಡುವದೇನು? ಹೊರಟುಬಿಡೋಣ."

ಅದೇಕೋ ಏನೋ ಫೌಜದಾರರೂ ತಕ್ಷಣ ಹೊರಡಲು ಸಿದ್ಧವಾದರು.

ನಾವು ಕಾಲವಾಡಕ್ಕೆ ಹಿಂದಿರುಗುವುದರೊಳಗಾಗಿ ಕಫನೀಧಾರಿ ಸ್ವಾಮಿಯೊಬ್ಬ ಬಂದು ಫೌಜದಾರರ ಮನೆಯಲ್ಲಿ ಬಿಡಾರ ಹೂಡಿದ್ದ. ಅವನಿಗೂ ಫೌಜದಾರರಷ್ಟೇ ವಯಸ್ಸು. ಮುಖದ ಮೇಲೆ ರಸಿಕತೆಯ ಚಿಹ್ನೆಗಳೂ ಕಾಣಿಸುತ್ತಿದ್ದುವು. ಇವನೂ ಒಬ್ಬ ಕಳ್ಳಸ್ವಾಮಿಯೇ ಇರಬೇಕೆಂದು ನಾನಾಗಲೆ ತಿಳಿದುಕೊಂಡೆ. ಫೌಜದಾರರ ಮನೆಯಲ್ಲಿಯೆ ಅವನ ಊಟೋಪಚಾರ ನಡೆಯತೊಡಗಿತು. ನಾನು ಅವರ ಮನೆಗೆ ಹೋಗುವುದನ್ನೇ ಕಡಿಮೆ ಮಾಡುತ್ತ ಬಂದೆ. ಊಟದ ಸಮಯಕ್ಕೆ ಹೋಗಿ ಊಟ ಮಾಡುತ್ತಿದ್ದೆ. ಮಿಕ್ಕ ವೇಳೆಯನ್ನೆಲ್ಲ ಕಚೇರಿಯಲ್ಲಿಯೆ ಕಳೆಯುತ್ತಿದ್ದೆ.

ಫೌಜದಾರರು ಮಾಡಬೇಕಾದ ಕೆಲಸದ ಬಗೆಗೂ ಕೆಲವೊಂದು ನಿಯಮಗಳಿವೆ. ತಮ್ಮ ಕ್ಷೇತ್ರದಲ್ಲಿನ ಕೆಲವು ಹಳ್ಳಿಗಳಿಗಾದರೂ ಅವರು ಪ್ರತಿ ತಿಂಗಳೂ ಭೆಟ್ಟಿ ಕೊಟ್ಟು, ಅಲ್ಲಿ ವಸತಿ ಮಾಡಬೇಕಾಗುತ್ತದೆ. ಅದಕ್ಕೊಂದು ಕಾರ್ಯಕ್ರಮ ಪಟ್ಟಿಯನ್ನೂ ಸಿದ್ಧಗೊಳಿಸಿಡಬೇಕಾಗುತ್ತದೆ. ಒಂದು ತಿಂಗಳಲ್ಲಿ ಯಾವುದೇ ಕಾರಣದಿಂದ ಸಂಚಾರ ನಿಂತುಹೋದಲ್ಲಿ ಮುಂದಿನ ತಿಂಗಳು ಅದನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ. ಈಶ್ವರಪ್ಪನವರು ಕಾಲವಾಡಕ್ಕೆ ಬಂದಂದಿನಿಂದ ಆ ಕಾರ್ಯಕ್ರಮದ ಕಡೆಗೆ ಗಮನವಿತ್ತಿರಲಿಲ್ಲ. ಸಮಯಾಭಾವವೂ ಅದಕ್ಕೆ ಕಾರಣವಾಗಿದ್ದಿತೆನ್ನಬೇಕು. ಅವರಿಗೆ ಸದ್ಯಕ್ಕಂತೂ ಬೇರೆ ಕೆಲಸಗಳಿರಲಿಲ್ಲ. ಅಂತೆಯೆ, ಹಳ್ಳಿಗಳನ್ನು ಸುತ್ತುವ ಕಾರ್ಯಕ್ರಮ ಕೈಗೆತ್ತಿಕೊಳ್ಳಬೇಕೆಂದು ಗೊತ್ತಾಯಿತು.

"ನೀನು ಬರ್ತೀಯಾ ಶಿವಣ್ಣಾ ?" ಎಂದು ಕೇಳಿದರು ಫೌಜದಾರರು.

ಆಗ ಕೊಂಚ ದೇಹಾಲಸ್ಯವಾದ ಹಾಗಿತ್ತು ನನಗೆ.

"ಹಳ್ಳಿಗಳಲ್ಲಿ ಅಂಥಾ ವಿಶೇಷ ಕೆಲಸವೇನೂ ಇರುವದಿಲ್ಲ. ನಾನೂ ಯಾತಕ್ಕೆ ಬರಲಿ ಸುಮ್ಮನೆ? ಅಲ್ಲದೆ, ನನ್ನ ಮೈಯಲ್ಲೂ ನೆಟ್ಟಗಿಲ್ಲ."

ನನ್ನಿಂದ ಅವರೂ ಅಂಥ ಉತ್ತರವನ್ನೇ ಅಪೇಕ್ಷಿಸಿದ್ದಂತೆ ತೋರಿತು. ಕಫನೀಧಾರಿ ಸ್ವಾಮಿಯೂ ಅವರ ಜೊತೆಗೆ ಹಳ್ಳಿಗಳಿಗೆ ಹೊರಡುವವನಿದ್ದ.

"ಇವರಿಗೆ ಸ್ವಲ್ಪ ಕಾಳುಕಡ್ಡಿ ಕೂಡಿಸಿ ಕೊಡಬೇಕಾಗಿದೆ, ರೈತರಿಂದ. ಇವರದೂ ನನ್ನದೂ ಬಹಳ ವರ್ಷಗಳ ಪರಿಚಯ," ಎಂದರು ಫೌಜದಾರರು.

" ಇವರು ಯಾವ ಊರವರು ರಾವ್‌ಸಾಹೇಬರೆ ?"

" ಹೈದರಾಬಾದ ಸಂಸ್ಥಾನದಲ್ಲಿ ಒಂದು ಊರಲ್ಲಿ ಇವರ ಮಠವಿದೆ. ಅದಕ್ಕೆ ಆಸ್ತಿ ಗೀಸ್ತಿ ಏನೂ ಇಲ್ಲ. ಭಿಕ್ಷೆಯಿಂದಲೇ ದಾಸೋಹ ನಡಸುತ್ತಾರೆ. ನನ್ನ ಹತ್ತಿರವೂ ಆಗಾಗ ಬರುತ್ತಿರುತ್ತಾರೆ. ನಾನೂ ಬಡವ. ನಾನೊಬ್ಬನೇ ಏನು ಕೊಡಲು ಶಕ್ಯ ? ಅದಕ್ಕೇ ಹಳ್ಳಿಗಳಿಗೆ ಕರೆದೊಯ್ದು ಅಷ್ಟಿಷ್ಟು ಕಾಳನ್ನೂ ಹಣವನ್ನೂ ಕೂಡಿಸಿಕೊಡುವುದು."

" ನಾನೂ ಒಂದೆರಡು ದಿನದ ಮಟ್ಟಿಗೆ ಗೊಬ್ಬೂರಿಗೆ ಹೋಗಿಬರುತ್ತೇನೆ."

" ಬೇಡ. ಬೇಡ. ಹಾಗೆ ಮೇಲಿಂದ ಮೇಲೆ ಹೋದರೆ ದೊಡ್ಡ ಫೌಜದಾರರೇನೆಂದಾರು ? ನೀನಿಲ್ಲೇ ಇದ್ದು ನಮ್ಮಲ್ಲೇ ಊಟ ಮಾಡುತ್ತಾ ಆಫೀಸ್ ಕೆಲಸ ನೋಡಿಕೊಂಡಿರು. ಹುಡುಗಿಯರಿದಾರಲ್ಲ. ಏನಾದರೂ ಬೇಕಾದರೆ ಅವರನ್ನು ಕರೆದು ಇಸಕೊಳ್ಳಬಹುದು," ಎಂದರು.

ಅವರು, ಸ್ವಾಮಿ, ಅಡುಗೆಯಾಳು, ಅಪ್ಪಣ್ಣನೆಂಬ ಒಬ್ಬ ಪೋಲೀಸ್ ಸಿಪಾಯಿ ಇಷ್ಟು ಜನ ಹೊರಡುವುದೆಂದು ಗೊತ್ತಾಯಿತು. ಅವರು ಹೊರಡುವ ದಿನವೇ ಅವರ ಮೊದಲನೆಯ ಹೆಂಡತಿಯ ಅಣ್ಣ ಬಂದಿಳಿದು ತನ್ನ ತಂಗಿಯ ಮಕ್ಕಳನ್ನು ಒಂದು ತಿಂಗಳ ಮಟ್ಟಿಗೆ ಕಳಿಸಿಕೊಡುವಂತೆ ಕೇಳಿಕೊಂಡ. ಅವರನ್ನೆಲ್ಲ ಬಸ್ಸು ಹತ್ತಿಸಿ ಕಳಿಸುವ ಕೆಲಸವೂ ನನ್ನ ಪಾಲಿಗೆ ಬಂತು. ಫೌಜದಾರರು ತಮ್ಮ ಪರಿವಾರದೊಡನೆ ಹಳ್ಳಿಗೆ ತೆರಳಿದರು. ಸಾಯಂಕಾಲದ ಬಸ್ಸಿಗೆ ಫೌಜದಾರರ ಬೀಗನೂ ಹುಡುಗಿಯರನ್ನು ಕರೆದುಕೊಂಡು ಹೊರಟುಹೋದ.

ಅಂದು ಕಾಲವಾಡದಲ್ಲಿನ ಪರಿಚಿತರೊಬ್ಬರು ನನ್ನನ್ನು ಊಟಕ್ಕೆ ಬರ ಹೇಳಿದ್ದರಾದುದರಿಂದ ಆ ವಿಷಯವನ್ನು ಫೌಜದಾರರ ಹೆಂಡತಿಗೆ ತಿಳಿಸಿ ಕಚೇರಿಯಲ್ಲಿ ಕೆಲಸ ಮಾಡುತ್ತ ಕುಳಿತುಕೊಂಡೆ. ಫೌಜದಾರರು ಸಂಚಾರ ಹೋದಾಗಲೆಲ್ಲ ಅವರ ಮನೆಯ ಕಾವಲು ಕೆಲಸಕ್ಕಾಗಿ ಒಬ್ಬ ಸಿಪಾಯಿಯನ್ನು ಕಳಿಸುವ ಪರಿಪಾಠವಿತ್ತು. ಮನೆಯ ಮುಂದಿನ ಕಟ್ಟೆಯ ಮೇಲೆ ಆ ಸಿಪಾಯಿ ಮಲಗುತ್ತಿದ್ದ. ಆ ದಿನ ಮಾತ್ರ ಸಿಪಾಯಿಗಳಾರೂ ಇರಲಿಲ್ಲ. ಎಲ್ಲರೂ ಬೇರೆ ಬೇರೆ ಹಳ್ಳಿಗಳಿಗೆ ಹೋಗಿದ್ದರು. ಜಮಾದಾರ, ಕಾರಕೂನ, ಬಾರನೀಸಿ, (ಸಹಾಯಕ ಕಾರಕೂನ) ನಾನು ನಾಲ್ವರೆ ಇದ್ದೆವು. ಕಾರಕೂನರಿಗೆ ಪೀಕಲಾಟಕ್ಕಿಟ್ಟುಕೊಂಡಿತ್ತು. ನಾನೂ ಸಹ ಸಿಪಾಯಿಯೆ ಆಗಿದ್ದೆನಾದರೂ

ಮ್ಯಾಟ್ರಿಕ್ ಪಾಸುಮಾಡಿದವನಾದುದರಿಂದ ಅಂಥ ಕೆಲಸಕ್ಕೆ ನನ್ನನ್ನು ನಿಯಮಿಸಲು ಕಾರಕೂನರಿಗೆ ಸಂಕೋಚ, ಮೇಲಾಗಿ, ಅದು ನಾವು ಮಾಡಬೇಕಾದ ಸರಕಾರಿ ಕೆಲಸವೂ ಅಲ್ಲ. ನಮ್ಮ ನಮ್ಮ ತಿಳಿವಳಿಕೆಗೆ ಸಂಬಂಧಪಟ್ಟ ಮಾತು, ಅಷ್ಟೆ. ಫೌಜದಾರರ ಮನೆಯಲ್ಲಿ ಗಂಡಸರಿಲ್ಲದ ವೇಳೆಯಲ್ಲಿ ಮನೆಯನ್ನು ನೋಡಿಕೊಳ್ಳುವ ಭಾರ ನಮ್ಮಲ್ಲೊಬ್ಬರದು. ಕಾರಕೂನರು ಗೊಣಗುಟ್ಟುತ್ತಲೇ ಇದ್ದವರು ಕೊನೆಗೆ ನನ್ನ ಅಭಿಪ್ರಾಯ ಕೇಳಿದರು.

"ಸಿಪಾಯಿಗಳಂತೂ ಇಲ್ಲ. ಮತ್ತೇನು ಮಾಡುವದು! ನಾನಂತೂ ಇದ್ದೇ ಇದೇನಲ್ಲ. ಹೊರಗಿನ ಕೋಣೆಯಲ್ಲೇ ಮಲಗಿಕೊಂಡಿರುತ್ತೇನೆ," ಎಂದು ಹೇಳಿ ಮುಗಿಸಿದೆ. ಅವರಿಗೂ ಅಷ್ಟೇ ಬೇಕಾಗಿತ್ತು. ತಮ್ಮ ತಲೆಯಮೇಲಿನ ಭಾರವಿಳಿಯಿತೆಂದುಕೊಂಡರು.

ಊಟ ಮುಗಿಸಿಕೊಂಡು ಸ್ವಲ್ಪ ತಡವಾಗಿಯೆ ಮನೆಗೆ ಬಂದೆ. ಫೌಜದಾರರ ಹೆಂಡತಿ ಮಲಗಿಕೊಂಡಿರಬಹುದೆಂದು ಭಾವಿಸಿದ್ದ ನನಗೆ ಆಶ್ಚರ್ಯವನ್ನುಂಟುಮಾಡುವಂತೆ ಇವಳು ಕಟ್ಟೆಯ ಮೇಲೆ ಕುಳಿತುಕೊಂಡಿದ್ದಳು. ಮಗು ಮಾತ್ರ ನಿದ್ರೆಹೋಗಿತ್ತು. ನಾನು ಹೋದೊಡನೆಯೆ ನನ್ನ ಕೊಠಡಿಗಾಗಿ ದೀಪವನ್ನೂ ಕುಡಿಯುವ ನೀರಿನ ತಂಬಿಗೆಯನ್ನೂ ತಂದುಕೊಟ್ಟಳು. ಅನಂತರ ನಗುನಗುತ್ತಾ,

"ಅವರು ಹೋಗುವಾಗ ಏನು ಹೇಳಿದರು ಗೊತ್ತೇನು ನಿಮಗೆ? ಒಂದು ತಾಟನಲ್ಲಿ ನಿಮಗೆ ಊಟ ಬಡಿಸಿ ಕೋಣೆಯಲ್ಲಿಡಬೇಕು, ನೀವು ಬಂದ ಕೂಡಲೆ ನಾನು ಬಾಗಿಲು ಮುಚ್ಚಿಕೊಂಡು ಮಲಗಿಬಿಡಬೇಕು....ಹ್ಯಾಗಿದೆ ಸೂಚನೆ? ಒಳ್ಳೆ ಮಜಾನೆ ಇದೆಯಲ್ಲವೇ?"

"ಅವರು ಹೇಳಿದ ಹಾಗೇ ಮಾಡಬಹುದು. ಊಟ ಇಡದಿದ್ದರೂ ನಾನೇನು ಉಪವಾಸ ಸಾಯುವದಿಲ್ಲ. ಇಡೀ ಊರೇ ನನ್ನದಾಗಿ ಹೋಗಿದೆ. ನಾನು ಕೇಳಿದರೆ ಸಾಕು, ಅಮೃತವೂ ಸಿಕ್ಕೀತು."

"ಓಹೋ! ಅಮೃತವೂ ಸಿಕ್ಕುವದೋ! ಚಲೋ ಮಾತು ಕಲಿತೀರಿ ನೀವೂ!" ಎಂದು ಹೇಳುತ್ತಾ ಗಟ್ಟಿಯಾಗಿ ನಗತೊಡಗಿದಳು.

"ಯಾಕೆ, ಬಹಳ ನಗ್ತೀರಿ?"

" ನಗೆ ಬರದಿದ್ದೀತೇ ? ಅಮೃತ ಅಂತೆ ಅಮೃತ! ಊರಲ್ಲಿ ಮತ್ತೆ ಯಾರಾದರೂ ಇದಾರೇನೋ ಗೆಳತಿಯರು !"

" ಛೆ. ನಾನು ಅಷ್ಟು ಪ್ರಚಂಡ ರಸಿಕನೇನೂ ಅಲ್ಲ. ಏನೋ ವೊನ್ನೆ ನಿಮ್ಮ ಸಂಗದಲ್ಲಿ ಕಾಲು ಜಾರಿದೆನಷ್ಟೆ."

" ನಿಮ್ಮ ಬ್ರಹ್ಮಚರ್ಯ ಹಾಳಾಯಿತು ಅಂತ ಕೆಟ್ಟೆನಿಸುವದೋ ಏನು ?"

" ನಿಮಗೆ ಅನಿಸುವದಿಲ್ಲವೆ ?"

" ಅನಿಸುತ್ತದೆ. ಆದರೇನು ಮಾಡುವದು ! ಇದೆಲ್ಲಾ ನಮ್ಮ ಕೈಯೊಳಗಿನ ಮಾತೇನು ? ಏನೋ ಹೀಗೆ ಪ್ರಸಂಗ ಬರುತ್ತವೆ. ನನಗೂ ಬಂತು. ಒಮ್ಮೆ ಕೆಟ್ಟು ಹೋದದ್ದಂತೂ ಆಯಿತಲ್ಲ. ಇನ್ನು ಅದಕ್ಕೇನೂ ಮಹತ್ವವಿಲ್ಲ."

" ಹಾಗಾದರೆ ಮಲಗಿಕೊಂಡುಬಿಡಿರಿ ನಿಶ್ಚಿಂತವಾಗಿ."

" ನೀವು ?"

" ನಾನಿಲ್ಲೇ ಇರುತ್ತೇನೆ. ನೀವು ಬೇಡ ಅಂದರ ಇಂದು ನಿಮ್ಮ ಮನೆ ಕಾಯುವ ಕೆಲಸ ನನ್ನದು. ಹೊರಗೆ ಕಟ್ಟಿಯ ಮೇಲೆ ಮಲಗಿಕೊಳ್ಳುತ್ತೇನೆ. ನಾಳೆ ಬೇರೆ ಕೋಣೆ ನೋಡಿಕೊಳ್ಳುತ್ತೇನೆ."

" ನಿಮಗೆ ಯಾಕೋ ಸಿಟ್ಟು ಬಂದ ಹಾಗೆ ಕಾಣುತ್ತದೆ."

" ಸಿಟ್ಟ್ಯಾಕೆ ಬರಬೇಕು ? ನೀವು ಫೌಜದಾರರ ಹೆಂಡತಿ. ಗಂಡನಾದವ ತನ್ನ ಹೆಂಡತಿಯ ಶೀಲದ ಬಗ್ಗೆ ಚಿಂತಿಸುವದು ಸಹಜ. ಹಾಗೇ ಅವರೂ ನಿಮಗೆ ಹೇಳಿದ್ದಾರೆ. ಅವರಾಡಿದ್ದನ್ನು ನೀವೂ ನನ್ನ ಮುಂದೆ ಆಡಿದಿರಿ. ಇದರಲ್ಲಿ ಸಿಟ್ಟೇನು ?"

" ನೀವು ನಮ್ಮಿಬ್ಬರ ಮೇಲೂ ಸಿಟ್ಟಾದ ಹಾಗೆ ಕಾಣುತ್ತದೆ. ನಿಮ್ಮ ಮೇಲೆ ಅವರಿಗೆ ಪೂರಾ ನಂಬಿಕೆಯಿಲ್ಲ ಅಂತ ಅವರ ಮೇಲೆ, ನಾನದನ್ನು ಅಂದೆನಂತ ನನ್ನ ಮೇಲೆ. ಆದರೆ ನಿಮಗೂ ಅದೆಲ್ಲ ಗೊತ್ತಿದ್ದರೆ ಒಳ್ಳೆಯದು. ನಾಳೆ ಅವರು ಬಂದು ಎಲ್ಲಿ ಊಟಕ್ಕೆ ಕೂತಿದ್ದಿರಿ ಅಂತ ನಿಮ್ಮನ್ನು ಕೇಳಿದರೆ ನೀವು ಅಡಿಗೇಮನೆಯಲ್ಲಿ ಕೂತಿದ್ದೆನೆಂತ ಹೇಳಿಬಿಟ್ಟರೆಂತ ತಿಳಿಯೋಣ – ಆಗ ನನ್ನ ಫಜೀತಿಯಾಗುವದೋ ಇಲ್ಲೋ ?"

" ಹೂಂ. ನಿಮ್ಮ ಮಾತೂ ನಿಜ."

" ಅದಕ್ಕೇ ಹೇಳುವದು, ಸಿಟ್ಟುಮಾಡಿಕೋಬ್ಯಾಡಿರೀ ಅಂತ !"

ನನಗೆ ನಗು ಉಕ್ಕಿಬಂದಿತು. ಅವಳೂ ನಗುತ್ತಾ ನನ್ನನ್ನು ಓರೆಗಣ್ಣಿನಿಂದ ನೋಡುತ್ತಾ ಶಯನಗೃಹಕ್ಕೆ ನಡೆದಳು. ನಾಯಿಯ ಹಾಗೆ ನಾನೂ ಅವಳ ಹಿಂದೆ ಹೊರಟೆ. ಇದೇ ಕೊನೆಯ ಬಾರಿ, ಇನ್ನುಮೇಲೆ ಇವಳ ಸಹವಾಸ ಬೇಡ, ಎಂದು ಹೇಳಿಕೊಳ್ಳುತ್ತಿದ್ದೆ ಮನಸ್ಸಿನಲ್ಲಿ.

ಆದರೂ, ಅದೇನೂ ಕೊನೆಯ ಸಲವಾಗಲಿಲ್ಲ.

ಆಗಾಗ, ಸಮಯ ಸಂದರ್ಭ ಸಿಕ್ಕಿದಾಗಲೆಲ್ಲ ನಾವು ಒಂದುಗೂಡುತ್ತಿದ್ದೆವು. ಸಾಧ್ಯವಾದಷ್ಟು ದಕ್ಷತೆಯಿಂದಲೇ ಇರುತ್ತಿದ್ದೆವು. ಇವಳಂತೆಯೆ ಪರಪುರುಷರೊಡನೆ ಸಂಬಂಧವಿಟ್ಟುಕೊಂಡ ಅನೇಕ ಸ್ತ್ರೀಯರ ಚರಿತ್ರೆಗಳನ್ನು ನಾನು ಕೇಳಿ ತಿಳಿದಿದ್ದೆ. ಆ ಸ್ತ್ರೀಯರು ಕಾಲುಜಾರಿದ ಸಂಗತಿ ಅವರ ಗಂಡಂದಿರಿಗೆ ಗೊತ್ತಾದರೂ ತಮ್ಮ ಮಾನಮರ್ಯಾದೆಗಳನ್ನು ತಾವೇ ಕಳೆದುಕೊಳ್ಳಬಾರದೆಂಬ ಯೋಚನೆಯಿಂದ ಸುಮ್ಮನಿದ್ದುಬಿಡುತ್ತಿದ್ದರು. ಹಾಗೇ ಫೌಜದಾರರ ಹೆಂಡತಿಯ ಕಥೆ– ಎಂದುಕೊಂಡು ನಾನು ನಿಶ್ಚಿಂತನಾಗಿದ್ದೆ.

ಫೌಜದಾರರು ಸಂಚಾರದಿಂದ ಮರಳಿದ ಸಮಯದಲ್ಲಿ ನಾನು ಕಚೇರಿಯಲ್ಲಿದ್ದೆ. ಅವರು ನೇರವಾಗಿ ಕಚೇರಿಗೇ ಬಂದರು.

"ಏನು ಶಿವಣ್ಣಾ, ಎಲ್ಲಾ ನೆಟ್ಟಗಿದೆಯಷ್ಟೆ ?"

"ನೆಟ್ಟಗಿದೆ ರಾವ್‌ಸಾಹೇಬರೆ."

"ನಮ್ಮ ಮನೆಯಲ್ಲಿಯೂ ಎಲ್ಲಾ ಚೆನ್ನಾಗಿದ್ದಾರಷ್ಟೆ ?"

"ಹುಡುಗ ಕ್ಷೇಮವಾಗಿದ್ದಾನೆ."

"ಬಾಯಿಯವರು ?"

"ಅವರ ಬಗ್ಗೆ ಮಾತ್ರ ಕೇಳಬೇಡಿರಿ. ನನಗೇನೂ ಗೊತ್ತಿಲ್ಲ." ಅವಳ ಬಗ್ಗೆ ಅಸಮಾಧಾನ ವ್ಯಕ್ತವಾಗುವಂತೆ ನಾನು ಮಾತನಾಡಿದೆ.

"ಊಟ ಗೀಟ ಎಲ್ಲಾ ವ್ಯವಸ್ಥೆ ಸರಿಯಾಗಿದೆಯೋ ಇಲ್ಲೋ ?"

"ಇದೆ. ಕೋಣೆಗೆ ತಾಟು ಬರುತ್ತದೆ. ಏನೂ ತೊಂದರೆಯಿಲ್ಲ."

ಅವರಿಗೆ ಸಮಾಧಾನವಾದಂತೆ ತೋರಿತು.

"ಮನೆಗೆ ಹೋಗೋಣ ನಡೆಯಪ್ಪಾ. ಸ್ವಲ್ಪ ಚಹಾ ತಗೊಂಡು ಬಂದರಾಯಿತು."

"ಇದೇ ಈಗ ಚಹಾ ಆಗಿದೆ. ನೀವು ಹೋಗಿ ಬರ್ರಿ," ಎಂದು ಉತ್ತರ

ವಿತ್ತು ನಾನು ಕೆಲಸದಲ್ಲಿ ಮನಸ್ಸು ತೊಡಗಿಸಿದೆ. ಅವರು ಹೊರಟುಹೋದರು. ಮನುಷ್ಯ ಮನುಷ್ಯನನ್ನು ವಂಚಿಸುವುದು ಎಷ್ಟು ಸುಲಭ! ಎಂದು ನನಗೆ ಒಳಗೊಳಗೇ ವಿಸ್ಮಯ.

ಫೌಜದಾರರ ಜೊತೆಗೆ ಹೋಗಿದ್ದ ಕಫನಿಯ ಸ್ವಾಮಿ ಹಳ್ಳಿಯಲ್ಲೇ ಉಳಿದುಕೊಂಡಿದ್ದನೆಂದು ಪೋಲೀಸ್ ಸಿಪಾಯಿ ಅಪ್ಪಣ್ಣನಿಂದ ಗೊತ್ತಾಯಿತು.

"ಅವನಿಗೆಷ್ಟು ಚಂದಾ ಕೂಡಿತು ಅಪ್ಪಣ್ಣಾ?" ಎಂದು ನಾನು ಕುತೂಹಲದಿಂದ ವಿಚಾರಿಸಿದೆ.

"ಹನ್ನೆರಡು ಚೀಲ ಜೋಳ, ಮೂರು ಚೀಲ ಗೋದಿ, ಸುಮಾರು ನಾಲ್ಕು ನೂರು ರೂಪಾಯಿಗಳ ವರೆಗೂ ಕೂಡಿಸಿಕೊಟ್ಟರು ಸಾಹೇಬರು."

"ಆ ಜೋಳ ಗೋದಿಯೆಲ್ಲಾ ಎಲ್ಲಿದೆ?"

"ಆ ಸ್ವಾಮಿಯೇ ಎರಡು ಚಕ್ಕಡಿ ತೆಗೆದುಕೊಂಡು ಗೊಬ್ಬೂರಿಗೆ ಹೋಗಿ ಅವನ್ನಿಟ್ಟು ತಿರುಗಿ ಹಳ್ಳಿಗೆ ಬಂದ."

"ಗೊಬ್ಬೂರಿನಲ್ಲಿಟ್ಟನೇ? ಯಾರ ಮನೆಯಲ್ಲಿ?"

"ನನಗೂ ಗೊತ್ತಿಲ್ಲ. ಚಕ್ಕಡಿಯವರಿಗೆ ಗೊತ್ತಿರಬಹುದು. ಕೇಳೋಣ."

"ಆ ಸ್ವಾಮಿಯ ನಡತೆ ಹ್ಯಾಗಿದೆ ಅಪ್ಪಣ್ಣಾ?"

"ಅವನು ಪಕ್ಕಾಕಳ್ಳನಿರಬೇಕೆಂತ ನನಗನ್ನಿಸುತದೆ," ಎಂದು ಹೇಳಿ ಅಪ್ಪಣ್ಣ ನನ್ನ ಅನುಮಾನ ಬಲಪಡಿಸಿದ.

ಹಳ್ಳಿಯಿಂದ ಚಕ್ಕಡಿಯವನನ್ನು ಕರೆಸಿಕೊಂಡು ಗೊಬ್ಬೂರಿನಲ್ಲಿನ ಸ್ವಾಮಿಯ ಮನೆ ಪತ್ತೆ ಮಾಡುವುದೆಂದು ನಿರ್ಧರಿಸಿದೆವು.

ಫೌಜದಾರರ ಪತ್ನಿಯ ಅಜ್ಜಿಗೆ ಕಾಯಿಲೆಯಾಗಿದ್ದುದರಿಂದ ಅವರನ್ನು ನಾಲ್ಕು ದಿನಗಳ ಮಟ್ಟಿಗೆ ಕಳಿಸಿಕೊಡಬೇಕೆಂದು ಪತ್ರ ಬಂತು. ಸ್ವಯಂ ಫೌಜದಾರರೇ ಹೆಂಡತಿಯನ್ನು ಕಳಿಸಿ ಬರಲು, ಒಂದು ದಿನದ ರಜೆ ತೆಗೆದುಕೊಂಡು ಹೊರಟರು. ಅದೇ ದಿನವೆ ನಾವು ಚಕ್ಕಡಿಯವನನ್ನು ಕರೆಸಿಕೊಂಡು ಗೊಬ್ಬೂರಿಗೆ ಬಂದು ಆ ಸ್ವಾಮಿಯ ಮನೆಯನ್ನು ನೋಡಿದೆವು. ಸ್ಟೇಶನ್ನಿನ ಹತ್ತಿರ, ಹಳೆಯ ಕಾಟನ್ ಮಾರ್ಕೆಟಿನ ಹಿಂಭಾಗದಲ್ಲಿತ್ತು ಆ ಮನೆ. ಚಕ್ಕಡಿಯವನಿಗೆ ನಾಲ್ಕು ರೂಪಾಯಿ ಕೊಟ್ಟು ಅವನು ನಮಗೆ ಮನೆ ತೋರಿಸಿದ ಸಂಗತಿಯನ್ನು ಯಾರಿಗೂ ತಿಳಿಸಬಾರದೆಂದು ಎಚ್ಚರಿಕೆ ಕೊಟ್ಟು ಕಳಿಸಿದೆವು.

ಆ ಸ್ವಾಮಿ ಅಪ್ಪಣ್ಣನನ್ನೂ ನನ್ನನ್ನೂ, ಇಬ್ಬರನ್ನೂ ನೋಡಿದ್ದನಾದುದರಿಂದ ನಾವು ಒಮ್ಮೆಲೆ ಆ ಮನೆಯಲ್ಲಿ ನುಗ್ಗುವ ಹಾಗಿರಲಿಲ್ಲ. ಸಮೀಪದಲ್ಲಿಯೆ ವಾಸವಾಗಿದ್ದ ಪರಿಚಿತರೊಬ್ಬರನ್ನು ಕಂಡು ಆ ಮನೆಯ ವಿಷಯ ತಿಳಿದು ಕೊಂಡೆವು.

....ಆ ಕಫನಿಯ ಸ್ವಾಮಿಯ ಮನೆಯಲ್ಲಿ ಇಬ್ಬರು ವೇಶ್ಯೆಯರಿದ್ದರು. ಹಳ್ಳಿಗಳಿಗೆ ಹೋಗುವಾಗ ಮಾತ್ರ ಕಾವಿ ಧರಿಸುತ್ತಿದ್ದ ಈ ಸ್ವಾಮಿ. ಗೊಬ್ಬೂರಿ ನಲ್ಲಿರುವಾಗ ನಮ್ಮಂತೆಯೇ ಉಡುಗೆ ತೊಡುಗೆ. ಅವನು ಊರಲ್ಲಿಲ್ಲದಾಗ ಯಾರು ಬೇಕಾದರೂ ಹಣ ತೆತ್ತು ಆ ಹೆಂಗಸರ ಹತ್ತಿರ ಹೋಗಬಹುದಾಗಿತ್ತು.

"ಹಾಗಾದರೆ ಅದನ್ನು ಪರೀಕ್ಷೆ ಮಾಡೇ ಬಿಡೋಣ. ಯಾಕೋ ಅಪ್ಪಣ್ಣಾ?"

"ಹೂಂ," ಎಂದ ಅಪ್ಪಣ.

ಮೊದಲು ನಮ್ಮ ಪರಿಚಿತ ಮನುಷ್ಯನನ್ನೆ ಅಲ್ಲಿಗೆ ಕಳಿಸಿದೆವು. ಅವನು ಹೋಗಿ ನಾವು ಮೂರು ಮಂದಿ ಇರುವುದಾಗಿ ಹೇಳಿ ಇನ್ನೊಬ್ಬಳ ವ್ಯವಸ್ಥೆ ಮಾಡುವಂತೆ ತಿಳಿಸಿ ಬಂದ. ಒಂದು ಗಂಟೆ ಬಿಟ್ಟು ಅಲ್ಲಿಗೆ ಹೋದೆವು. ಮನೆ ಯಲ್ಲಿದ್ದ ಇಬ್ಬರು ಹೆಂಗಸರಿಗೂ ಸಾಧಾರಣ ಒಂದೇ ವಯಸ್ಸು. ಇಪ್ಪತ್ತೈದೋ ಇಪ್ಪತ್ತಾರೋ ಇರಬಹುದು. ಕಣ್ಣು ಮೂಗುಗಳಿಂದ ಲಕ್ಷಣವಾಗಿದ್ದರು. ವೇಶ್ಯೆಯರ ಚಿಹ್ನೆಗಳೂ ಕಾಣುತ್ತಿದ್ದುವು.

ಆ ವೇಳೆಗೆ ಮೂರನೆಯವಳು ಬಂದಳು. ನಮ್ಮನ್ನು ಕಂಡು,

"ಯಾ ವೂ ರ ವ ರು ಮಾಮಾಗೋಳು?" ಎಂದು ಕೇಳುತ್ತಾ ಹಲ್ಲು ಕಿರಿದಳು.

"ಮುಂಬಯಿಯವರು," ಎಂದು ಅಪ್ಪಣ್ಣ ತಾನೂ ಹಲ್ಲು ಕಿರಿದ.

"ಒಂದು ಸಿಗರೇಟು ಆದ್ರೂ ಕೊಡೋ ಮಾವಾ," ಎಂದಳಾಕೆ.

ಅವಳಿಗೊಂದು ಸಿಗರೇಟು ಕೊಟ್ಟು ನಾನೂ ಒಂದನ್ನು ಹೊತ್ತಿಸಿ ಹೊಗೆಯೆಳೆಯುತ್ತಾ ಮನೆಯಲ್ಲೆಲ್ಲ ದೃಷ್ಟಿ ತೂರಿದೆ. ಕಾಳು ತುಂಬಿದ ನಾಲ್ಕು ಚೀಲಗಳಷ್ಟೆ ಅಲ್ಲಿ ಉಳಿದಿದ್ದುದು.

"ಇವು ಯಾತರ ಚೀಲ?"

"ಜೋಳ ಗೋದಿ ಇದಾವೆ" ಉತ್ತರವಿತ್ತವಳು ಕಫನಿಯ ಕಳ್ಳನ ಪ್ರೇಯಸಿ.

"ಕೊಂಡು ತಂದಿರುವಿರೇನು?"

"ನಮ್ಮ ಯಜಮಾನರು ತಂದಿದ್ದಾರೆ."

"ನಿಮ್ಮ ಯಜಮಾನರೇನು ಮಾಡುತ್ತಾರೆ?" ಎಂದು ನಾನು ಎರಡನೆ ಯವಳನ್ನು ಪ್ರಶ್ನಿಸಿದೆ.

"ಅವರು ಕೆಲಸದ ಮೇಲೆ ಬೇರೆ ಊರಲ್ಲಿ ಇರ್ತಾರೆ." ಅವಳೇ ನಮ್ಮ ಫೌಜದಾರರ ಪ್ರೇಯಸಿ.

ನಮ್ಮ ಸಂಶೋಧನ ಕೊನೆಗಂಡಂತಾಯಿತು. ಆ ವೇಶ್ಯೆಯರ ಸಹವಾಸ ನಮಗೇನೂ ಬೇಕಿರಲಿಲ್ಲ. ಅವರಿಗೆ ಕೊಡುವ ದುಡ್ಡಿನ ಬಗ್ಗೆ ಮಾತು ತೆಗೆದು, ಧಾರಣೆ ಹೆಚ್ಚೆಂದು ಆಕ್ಷೇಪವೆತ್ತಿ ಅಲ್ಲಿಂದ ಹೊರಟು ಬಿಟ್ಟೆವು.

"ಸೂಳೀಮಕ್ಕಳು ಸುಮ್ಮನೆ ಇಷ್ಟೊತ್ತು ಹರಟೀ ಬಡಿದು ಕೈಕೊಟ್ಟು ಹೊರಟರು," ಎಂದಳು ಒಬ್ಬಳು.

"ಚಿಲ್ಲರೆ ಮಂದಿ," ಎಂದಳು ಇನ್ನೊಬ್ಬಳು.

"ನನ್ನ ಇಷ್ಟು ದೂರ ಕರೆಸಿಕೊಂಡು ಚಹಾಕ್ಕ ಕೂಡ ಕೊಡದೆ ಹಾಗೇ ಹೊರಟುಬಿಟ್ಟರು ನನ್ನ....ಮಕ್ಕಳು!" ಎಂದಳು ಮೂರನೆಯವಳು.

ನಾವು ನಗುತ್ತಾ ಮುಂದೆ ಸಾಗಿದೆವು.

ಈ ಕಫನಿಯ ಕಳ್ಳ ತಾನು ದೊಡ್ಡ ಸ್ವಾಮಿಯೆಂದು ಹೇಳಿಕೊಂಡು ನಮ್ಮ ಫೌಜದಾರರ ಸಹಾಯದಿಂದ ಹಳ್ಳಿಯ ಜನರನ್ನು ವಂಚಿಸಿ ಹಣವನ್ನೂ ಧಾನ್ಯವನ್ನೂ ಎತ್ತಿಕೊಂಡು ಬರುತ್ತಿದ್ದ. ಇಲ್ಲಿ ಈ ಸೂಳೆಯರ ಸಹವಾಸದಲ್ಲಿರುವ ಈ ವೇಷಧಾರಿಯ ಕಾಲುಗಳ ಮೇಲೆ ಬೀಳುತ್ತಿದ್ದರು ಹಳ್ಳಿಯ ಜನ. ಗೊಬ್ಬೂರಿಗೆ ಬಂದಾಗ ಇದೊಂದು ಹೆಣ್ಣಿನ ಅನುಕೂಲತೆಯಾಗುವದೆಂಬ ದುರಾಸೆಗೊಳಗಾಗಿ ಫೌಜದಾರರು ಈ ಕಳ್ಳನಿಗೆ ಸಹಾಯ ಮಾಡುತ್ತಿದ್ದರು. ಅದನ್ನೆಲ್ಲ ಪ್ರತ್ಯಕ್ಷ ಕಂಡು ನನಗೆ ಫೌಜದ್ಹಾರರ ಬಗ್ಗೆ ಜುಗುಪ್ಸೆ ಹುಟ್ಟಿಕೊಂಡಿತ್ತು. ಆದರೇನು ಮಾಡುವುದು. ಸರಕಾರಿ ನೌಕರಿ. ಅಂಥ ವ್ಯಕ್ತಿಯ ಕೈಕೆಳಗೇ ದುಡಿಯ ಬೇಕಾಗಿ ಬಂದಿತ್ತು.

ಅದೇ ರಾತ್ರಿಯೆ ನಾವು ಕಾಲವಾಡಕ್ಕೆ ಹಿಂದಿರುಗಿ ಬಂದೆವು. ಫೌಜ

ದಾರರು ಮಾರನೆಯ ದಿನ ಬಂದಿರು. ನಾವು ಗೊಬ್ಬೂರಿಗೆ ಹೋದ ಸಂಗತಿಯೆ ಅವರಿಗೆ ಗೊತ್ತಾಗಲಿಲ್ಲ.

ನಾಲ್ಕು ದಿನಗಳ ತರುವಾಯ ಫೌಜದಾರರು ಮತ್ತೆ ಹಳ್ಳಿಗಳ ಸಂಚಾರಕ್ಕೆ ಹೊರಟರು. ಅವರು ಹೊರಡುವ ವೇಳೆಗೆ ಸರಿಯಾಗಿ ಕಫನಿಯವನೂ ಬಂದಿಳಿದ.

"ಈ ಸಾರಿ ನೀನೂ ಬಾ ಶಿವಣ್ಣಾ," ಎಂದರು ಫೌಜದಾರರು.

ಅವರೊಡನೆ ಹೋಗುವದು ನನಗೆ ಕೊಂಚವೂ ಇಚ್ಛೆಯಿರಲಿಲ್ಲ. ಕಫನಿಯವನನ್ನು ಕಂಡ ಬಳಿಕ ಖಂಡಿತ ಹೋಗಕೂಡದೆಂದು ನಿರ್ಧರಿಸಿದ್ದೆ.

"ನಾನೇನು ಬರುವದಿಲ್ಲ ರಾವ್‌ಸಾಹೇಬರೆ," ಎಂದು ಸ್ಪಷ್ಟವಾಗಿ ಹೇಳಿದೆ.

ಅವರಿಗೆ ಕೋಪ ಬರದಿರಲಿಲ್ಲ. ನನ್ನ ಮುಂದೆ ಏನನ್ನೂ ಆಡದಿದ್ದರೂ ಅಪ್ಪಣ್ಣನೆದುರಿಗೆ ಯದ್ವಾತದ್ವಾ ಕೂಗಾಡಿದರು. "ನಾನು ಕರೆದರೂ ಬರುವದಿಲ್ಲ ಅನ್ನುತ್ತಾನೆ. ಇವನಿಗೆ, ಈ ಸಿಪಾಯಿಗೆ ಇಷ್ಟು ಸೊಕ್ಕು! ಇರಲಿ, ನೋಡುತ್ತೇನೆ. ನಮ್ಮವ, ಜಾಣ ಅಂತ ಸಲಿಗೆ ಕೊಟ್ಟರೆ ಇವನು ನನ್ನ ಹುಕುಮನ್ನೇ ಮೀರುತ್ತಾನಲ್ಲ! ನಾಳೇ ಡಿ.ಎಸ್.ಪಿ.ಯವರಿಗೆ ರಿಪೋರ್ಟು ಮಾಡುತ್ತೇನೆ," ಇತ್ಯಾದಿ. ಇತ್ಯಾದಿ.

ಅಪ್ಪಣ್ಣ ಗಾಬರಿಗೊಂಡು ನನ್ನನ್ನು ಕರೆಯಲು ಕಚೇರಿಗೆ ಬಂದ.

"ನೀನು ಬಂದು ಅವರಿಗೆ ಭೆಟ್ಟಿಯಾದರೂ ಆಗಪ್ಪಾ. ಅವರಿಗೆ ಭಯಂಕರ ಸಿಟ್ಟು ಬಂದಿದೆ."

ನೋಡೋಣ – ಎಂದುಕೊಂಡು ನಾನು ಮನೆಗೆ ಬಂದೆ.

"ಬರುತೀಯೋ ಇಲ್ಲೋ?" ಎಂದು ಫೌಜದಾರರು ಕೇಳಿದರು – ದರ್ಪಪೂರಿತ ಸ್ವರದಲ್ಲಿ.

"ಇಲ್ಲ. ಬರುವದಿಲ್ಲ."

"ಕಾರಣವೇನು?"

"ಕಾರಣ ಕೇಳಬೇಡಿರಿ."

"ರಿಪೋರ್ಟ್ ಮಾಡಬೇಕಾದೀತು ನಾನು.

"ಮಾಡಬಹುದು. ನಾನೂ ಡಿ. ಎಸ್. ಪಿ. ಯವರನ್ನು ಕಂಡು ನೀವು

ಹಳ್ಳಿಗಳಲ್ಲಿ ಮಾಡುವ ಹೊಲಸುತನವನ್ನೆಲ್ಲಾ ತಿಳಿಸಿಬಿಡುತ್ತೇನೆ. ನಿಮ್ಮ ಸಂಗಡ ತಿರುಗುವದೂ ಕೂಡಾ ಅಸಹ್ಯವಾಗಿದೆ ನನಗೆ. ಅದಕ್ಕಾಗೇ ನೀವು ಕರೆದಾಗ ನಾನು ಹೋಗಲಿಲ್ಲ ಅಂತ ಹೇಳುತ್ತೇನೆ."

ಆಗ ಫೌಜದಾರರ ಸಿಟ್ಟು ಇಳಿಯಿತು, ವಿವೇಕೋದಯವಾಯಿತು. ಡಿ. ಎಸ್. ಪಿ. ಯವರ ಹತ್ತಿರ ಹೋಗಲು ನಾನೇನು ಹಿಂಜರಿಯುವವನಲ್ಲ ವೆಂಬುದು ಅವರಿಗೂ ಗೊತ್ತಿದ್ದಿತು. ನಾನು ದೊಡ್ಡ ಫೌಜದಾರರ ಶಿಷ್ಯಮಣಿ ಯಾಗಿದ್ದುದನ್ನೂ ಡಿ. ಎಸ್. ಪಿ. ಯವರ ಕೃಪಾದೃಷ್ಟಿಗೂ ಪಾತ್ರನಾಗಿದ್ದುದನ್ನೂ ನೆನೆಸಿಕೊಂಡು, ಧ್ವನಿಯನ್ನು ಬದಲಿಸಿ ನನ್ನನ್ನು ಸಾಂತ್ವನಗೊಳಿಸಲು ಯತ್ನಿಸ ತೊಡಗಿದರು :

"ಯಾಕೆ? ನಿನ್ನ ಮೈಯಲ್ಲಿ ನೆಟ್ಟಗಿಲ್ಲವೋ ಏನು? ಮೊದಲೇ ಯಾಕೆ ಹೇಳಲಿಲ್ಲ?"

"ನನಗೇನೂ ಆಗಿಲ್ಲ. ಆದರೂ ನಾನಿಂದು ಬರುವದಿಲ್ಲ. ಬೇಕಾದರೆ ಅದಕ್ಕೆ ಕಾರಣವನ್ನು ಇನ್ನೊಮ್ಮೆ ಹೇಳುತ್ತೇನೆ," ಎಂದವನೇ ಅಲ್ಲಿ ನಿಲ್ಲದೆ ಕಚೇರಿಗೆ ಬಂದುಬಿಟ್ಟೆ.

ಅಂದಿನ ಪಯಣವನ್ನು ನಿಲ್ಲಿಸಿ ಫೌಜದಾರರು ಆ ದಿನ ಅಲ್ಲಿಯೆ ಉಳಿದು ಕೊಂಡರು. ಸಾಯಂಕಾಲ ಮತ್ತೆ ನನ್ನನ್ನು ಮನೆಗೆ ಬರಹೇಳಿ ಅಪ್ಪಣ್ಣನನ್ನು ಕಳಿಸಿಕೊಟ್ಟರು. ನಾನು ಹೋಗಲಿಲ್ಲ. ಆರು ಗಂಟೆಗೆ ಕೆಲಸ ಮುಗಿಸಿ ಊರೊಳಗೆ ಹೋಗಿ ಕೊಠಡಿಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಫೌಜ ದಾರರ ಮನೆಯಲ್ಲಿದ್ದ ನನ್ನ ಸಾಮಾನುಗಳನ್ನು ತರಿಸಿ ಅಲ್ಲಿ ಹಾಕಿದೆ. ಊರಿನ ಗೌಡ ಶಂಕರಗೌಡರಿಗೂ ನನಗೂ ಬಹಳ ವಿಶ್ವಾಸ ಬೆಳೆದಿತ್ತು. ಅವರ ಮನೆಯಿಂದ ಒಂದು ಕಂದೀಲು ತರಿಸಿದೆ – ನೀರು ತುಂಬುವ ಕೊಡ, ತಂಬಿಗೆ ಗಳನ್ನು ಅವರೇ ಕಳಿಸಿಕೊಟ್ಟರು. ರಾತ್ರಿಯೂಟಕ್ಕೆ ತಮ್ಮ ಮನೆಗೇ ಬರ ಬೇಕೆಂದು ಹೇಳಿದರು.

ರಾತ್ರಿ ಎಂಟೂವರೆ ಗಂಟೆಗೆ ಎಲ್ಲಾ ಪೋಲೀಸರ 'ಹಾಜರ' ನಡೆಯುವಾಗ ನಾನೂ ಉಪಸ್ಥಿತನಿದ್ದೆ.

"ಮಧ್ಯಾಹ್ನದಿಂದ ಎಲ್ಲಿದ್ದೀ ಶಿವಣ್ಣಾ?" ಎಂದು ಪ್ರಶ್ನಿಸಿದರು ಫೌಜದಾರರು.

"ಆರು ಗಂಟೆಯವರೆಗೆ ಇಲ್ಲೇ ಇದ್ದೆ. ಆಮೇಲೆ ಊರಲ್ಲಿ ಹೋಗಿ ಕೋಣೆ ಹಿಡಿದು ಬಂದೆ."

"ಊಟ?"

"ಇದೊಂದು ಹೊತ್ತು ಫಲಾಹಾರದ ಮೇಲೇ ಮುಗಿಸುತ್ತೇನೆ. ನಾಳೆಯಿಂದ ಯಾರನ್ನಾದರೂ ಹುಡುಗಿ ಹಣ ಕೊಟ್ಟು ಊಟ ಮಾಡುತ್ತೇನೆ."

ಗೌಡರ ಮನೆಗೆ ಊಟಕ್ಕೆ ಹೋಗುವ ವಿಚಾರವಾಗಿ ನಾನು ಫೌಜದಾರರೆದುರಿಗೆ ಪ್ರಸ್ತಾಪಿಸಲಿಲ್ಲ. ನನ್ನ ಬಗ್ಗೆ ಕೋಪಿಸಿಕೊಂಡಿದ್ದ ಈ ಆಸಾಮಿ ಆ ಗೌಡರಿಗೂ ಕಿರುಕುಳವನ್ನುಂಟುಮಾಡಲು ಹೇಸುವವರಲ್ಲ....

ಫೌಜದಾರರಿಗೂ ನನಗೂ ಮನಸ್ತಾಪ ಬೆಳೆದ ವಿಷಯ ಎಲ್ಲಾ ಪೋಲೀಸರಿಗೂ ಅವರಿಂದ ಊರವರಿಗೂ ಗೊತ್ತಾಗಿ ಹೋಯಿತು. ಪೋಲೀಸರಿಗೆಲ್ಲ ಅದರಿಂದ ಸಂತೋಷವೇ ಆಯಿತು. ಅವರಲ್ಲೊಬ್ಬರಿಗೂ ಫೌಜದಾರರ ಬಗ್ಗೆ ಸದಭಿಪ್ರಾಯವಿರಲಿಲ್ಲ. ಫೌಜದಾರರ ಒರಟುತನ, ಹೊಲಸು ಮಾತು, ಹೇಯ ವರ್ತನೆಗಳಿಂದಾಗಿ ಎಲ್ಲ ಪೋಲೀಸರೂ ಅವರನ್ನು ತಿರಸ್ಕರಿಸುವಂತಾಗಿತ್ತು.

'ಹಾಜರಿ' ಮುಗಿದೊಡನೆಯೆ ನಾನು ನಿಯಮದಂತೆ ಫೌಜದಾರರಿಗೆ 'ಸಲಾಂ' ಹೊಡೆದು ನನ್ನ ಹೊಸ ಕೊಠಡಿಗೆ ಹೊರಟುಬಿಟ್ಟೆ.

ಫೌಜದಾರರೂ ನನ್ನ ಹಿಂದೆಯೆ ಬಂದರು, ನನ್ನ ಕೈ ಹಿಡಿದು,

"ನನ್ನ ಮೇಲೆ ಸಿಟ್ಟೇನು ಶಿವಣ್ಣಾ? ಮನೆಗೆ ಬರುವದಿಲ್ಲವೇನು?" ಎಂದರು.

"ಬರುವದಿಲ್ಲ."

ಅವರಿಗೆ ನಿರಾಸೆಯಾಗಿರಲು ಸಾಕು. ನನ್ನ ಕೈ ಬಿಟ್ಟು ಮೌನವಾಗಿ ಮನೆಗೆ ಹೋದರು.

ನಾನು ನನ್ನ ಹೊಸ ಕೊಠಡಿಯ ಕಡೆ ನಡೆದಿದ್ದ ಹಾಗೆ ಅಡುಗೆಯಾಳು ಚೆನ್ನ ಓಡೋಡುತ್ತಾ ಬಂದು ನನ್ನನ್ನು ಕೂಗಿದ.

"ಏನಪ್ಪಾ, ನೀನ್ಯಾಕೆ ಬಂದೆ?"

"ಏನ್ರೀ, ನೀವು ಬ್ಯಾರೆಕಡೆ ಹೋದಿರಂತಲ್ಲ. ಹೀಗ್ಯಾಕೆ ಮಾಡಿದಿರಿ? ನಮ್ಮನ್ನೆಲ್ಲಾ ಬಿಟ್ಟು ಹೊರಟರೇನು?"

"ನಾನೇನು ದೂರ ಹೋಗುತ್ತೇನೆಯೆ? ಇಲ್ಲೇ ಸಮೀಪದಲ್ಲೇ ಇರುತ್ತೇನಲ್ಲಾ!"

"ಏನೋ ಬಿಡಿರಿ. ನೀವು ಹೋದರೆ ನನಗಂತೂ ಜೀವ ರಮಿಸುವದಿಲ್ಲ." ಎಂದ ಚೆನ್ನ. ಒಂದು ಒಂದೂವರೆ ತಿಂಗಳಿನ ಅವಧಿಯಲ್ಲಿ ಅವನೂ ನನಗೆ ಆತ್ಮೀಯನಂತಾಗಿದ್ದ. ಲಂಚದ ಹಣದಲ್ಲಿ ಅವನಿಗೂ ಆಗಾಗ ಹತ್ತಿಪ್ಪತ್ತು ರೂಪಾಯಿ ಕೊಟ್ಟಿದ್ದೆ. ನಾನು ಬಟ್ಟೆ ಕೊಳ್ಳುವಾಗ ಅವನಿಗೂ ಕೊಡಿಸಿದ್ದೆ. ಎಂತಲೇ ಅವನು ನನ್ನನ್ನು ಅಷ್ಟು ಪ್ರೀತಿಸುತ್ತಿದ್ದುದು.

"ಮನೆಗೆ ಹೋಗು ಚೆನ್ನಾ. ಫೌಜದಾರರೂ ಇದೇ ಈಗ ಹೋದರು."

"ಅವರ ಊಟ ಮುಗಿದಿದೆ ಆಗಲೆ. ಈಗ ನಾನೇನು ಅಲ್ಲಿ ಇರಬೇಕಾಗಿಲ್ಲ," ಎಂದು ಹೇಳಿ ಅವನೂ ನನ್ನ ಜೊತೆಗೆ ಕೊರಡಿಗೆ ಬಂದ.

"ನೀವೂ ಹಳ್ಳಿಗೆ ಬರಬೇಕಂತ ಫೌಜದಾರರು ಇಷ್ಟು ಹಟ ಹಿಡಿಯಲಿಕ್ಕೆ ಕಾರಣ ಏನು ಗೊತ್ತಿದೆಯೋ ನಿಮಗೆ?" ಎಂದ ಚೆನ್ನ.

"ಇಲ್ಲ. ಏನು ಅಂಥಾ ಕಾರಣ?"

"ಬಹಳ ಮಜಾ ಇದೆ. ಬಹಳ ಅಂದರೆ ಬಹಳ!"

"ಅಂದರೆ?"

"ಅಂದರೆ....ಹೆಂಗಸಿನ ಕಾರಣ!" ಎಂದು ಹೇಳುತ್ತಾ ಗಹಗಹಿಸಿ ನಗತೊಡಗಿದ ಚೆನ್ನ.

೨೪

ಫೌಜದಾರರ ಯತ್ನ ಫಲಿಸಲಿಲ್ಲ

"ಮತ್ತಾವ ಹೆಂಗಸು ಚೆನ್ನಾ ?" ಎಂದು ನಾನು ಪ್ರಶ್ನಿಸುತ್ತಲೂ ಅವನು ಖಿಖಿಖ್ಖಿ ಎಂದು ನಗುತ್ತಾ, ಬೀಡಿಯೊಂದನ್ನು ಹೊತ್ತಿಸಿ ಹೊಗೆಯೆಳೆಯುತ್ತಾ ಹೇಳಿದ:

"ನಾವಿರುವ ಮನೆಯ ಮಾಲೀಕರ ಮಗಳು ಸುಮಿತ್ರಾ ನಿಮಗೆ ಗೊತ್ತಿಲ್ಲವೇನ್ರೀ ?"

ಗೊತ್ತು. ನನಗೂ ಅವಳು ಗೊತ್ತು. ದೊಡ್ಡ ಮನೆಯನ್ನು ಫೌಜದಾರರಿಗೆ ಬಾಡಿಗೆಗೆ ಕೊಟ್ಟು, ಪಕ್ಕದ ಚಿಕ್ಕ ಮನೆಯಲ್ಲಿ ಅವರು ವಾಸವಾಗಿದ್ದರು. ಮನೆಯಲ್ಲಿದ್ದವರು ಮೂವರೇ: ಸುಮಿತ್ರಾ, ಅವಳ ತಂದೆ ಉಜ್ಜಪ್ಪ ಮತ್ತು ತಾಯಿ. ಉಜ್ಜಪ್ಪನವರದೊಂದು ಪುಟ್ಟ ಅಂಗಡಿಯಿತ್ತು. ಅದಕ್ಕೆ ಅಂಥ ಲಾಭವೇನೂ ಇರಲಿಲ್ಲ. ಲಾಭದಾಸೆಯಿಂದಾಗಿಯೆ ಆವರು ದೊಡ್ಡದೊಂದು ವ್ಯಾಪಾರಕ್ಕೆ ಕೈಹಾಕಿ, ಸುಮಿತ್ರೆಯ ಗಂಡನ ಮನೆಯವರು ಅವಳ ಮೈಮೇಲಿರಿಸಿದ ಚಿನ್ನದೊಡವೆಗಳನ್ನು ಆಧಾರವಿರಿಸಿ ಹಣವೊದಗಿಸಿಕೊಂಡಿದ್ದರು; ಆ ವ್ಯಾಪಾರ ಯಶಸ್ವಿಯಾಗದೆ ಹಣವೆಲ್ಲಾ ಮುಳುಗಿಹೋಗಿತ್ತು. ಸುಮಿತ್ರೆಯ ಒಡವೆಗಳನ್ನು ಬಿಡಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ.

ಒಡವೆಗಳನ್ನು ತಂದರೆ ಮಾತ್ರ ಅವಳನ್ನು ಮನೆಗೆ ಸೇರಿಸಿಕೊಳ್ಳುವುದಾಗಿ ಅವಳ ಗಂಡನ ಮನೆಯವರು ಸ್ಪಷ್ಟಪಡಿಸಿದ್ದರು. ನಾಲ್ಕು ವರ್ಷಗಳ ಹಿಂದಿನ ಕಥೆಯದು. ಅಂದಿನಿಂದಲೂ ಆ ಹುಡುಗಿ ತಂದೆಯ ಮನೆಯಲ್ಲೇ ಉಳಿದುಕೊಂಡಿದ್ದಳು. ಅವಳ ಗಂಡ ಇನ್ನೊಬ್ಬಳನ್ನು ಮದುವೆಯಾಗಿದ್ದ.

ನನಗೆ ಈ ವಿಷಯವೂ ಗೊತ್ತಿದ್ದಿತು. ಅವಳ ತಂದೆ ಉಜ್ಜಪ್ಪನವರೊಡನೆ ಸಾಕಷ್ಟು ಪರಿಚಯವೂ ಬೆಳೆದಿತ್ತು. ಆಗಾಗ ನಾನು ಅವರ ಮನೆಗೂ ಹೋಗುತ್ತಿದ್ದೆ.

ಫೌಜದಾರರು ಸುಮಿತ್ರಳನ್ನು ಕೆಡಿಸಲು ಯತ್ನಿಸುತ್ತಿದ್ದುದನ್ನೂ ನಾನು ಬಲ್ಲವನಾಗಿದ್ದೆ.

"ಈಗ ಮತ್ತೆ ಹೊಂಚು ಹಾಕುತ್ತಿದ್ದಾರೇನು ಚೆನ್ನಾ ?"

"ಹೊಂಚು ಗಿಂಚು ಎಲ್ಲಾ ಮುಗಿದು ಹೋಳಿಗೆ ತುಪ್ಪದಾಗ ಬೀಳುವ ಹೊತ್ತು ಬಂದಿದೆ. ಅವಳು ಇವರ ಹತ್ತರ ಬರುವದಕ್ಕೂ ಒಪ್ಪಿದ್ದಾಳೆ. ಆದರೆ ನೀವೊಬ್ಬರು ಇದೀರಲ್ಲಾ– ಅವರಿಗೆ ಮೂಲವಾಗಿ !"

"ಅಂದರೆ ?"

"ನೀವು ಹೊರಗಿನ ಕೋಣೆಯೊಳಗ ಇರುತೀರಲ್ಲರೀ ! ಅಪ್ಪ ಅವ್ವ ಅಕ್ಕಪಕ್ಕದವರು ಎಲ್ಲಾ ಮಲಗಿದಮ್ಯಾಲ ಅವಳು ಬರುವಾಕಿ– ನಮ್ಮ ರಾವ್ ಸಾಬರ ಹತ್ತರ. ನಿಮ್ಮ ಕೋಣೆಯ ಮುಂದೇ ಹಾದುಬರಬೇಕಲ್ಲ ! ಕಾಲ ಸಪ್ಪಳದಿಂದ ನಿಮಗೆ ಎಚ್ಚರಾತು ಅಂದರೆ ಮುಗಿದೇಹೋಯಿತಲ್ಲ. ಅದಕ್ಕೇ ಅವರು ಹಳ್ಳಿಗೆ ಕರೆದದ್ದು ನಿಮ್ಮನ್ನು. ಅಲ್ಲಿ ನಿಮ್ಮನ್ನ ಬಿಟ್ಟು ಏನಾರ ಒಂದು ನೆವ ಹೇಳಿ ಇಲ್ಲಿಗೆ ಬಂದು ಸುಮಿತ್ರೆಯ ಸಂಗಡ ಮಜಾ ಮಾಡುವವರಿದ್ದರು ನಮ್ಮ ಸಾಹೇಬರು...."

"ಇಷ್ಟೆಲ್ಲಾ ಒಳಗಿನ ಹೊಡೆತವಿತ್ತೇನು ! ನನಗೇನೂ ಗೊತ್ತಾಗಲಿಲ್ಲ. ಈಗ ನಾನಂತೂ ಆ ಕೋಣೆಯನ್ನೇ ಬಿಟ್ಟು ಬಂದೆನಲ್ಲ– ಇವತ್ತು ರಾತ್ರಿಯೇ ಅವರ ಮಜಾ ನಡೆಯುವದೋ ಏನು ?"

"ಇಂಥಾ ಸಂಧಿಯನ್ನ ಬಿಟ್ಟಾರೇನ್ರೀ ಅವರು ?"

"ಈ ಸುದ್ದಿಯನ್ನು ತಿಳಿಸಿ ಬಹಳ ಚಲೋ ಮಾಡಿದೆ ಚೆನ್ನಾ– ನೀನು ಮನೆಗೆ ನಡೆ. ನಾನು ಊಟ ತೀರಿಸಿಕೊಂಡು ಬರ್ತೇನೆ," ಎಂದು ಹೇಳಿ

ಅವನನ್ನು ಕಳುಹಿಸಿಕೊಟ್ಟು ನೇರವಾಗಿ ಗೌಡರಲ್ಲಿಗೆ ಬಂದೆ. ಸುಮಿತ್ರೆಯ ತಂದೆ ಉಜ್ಜಪ್ಪನವರನ್ನು ಕರೆದುಕೊಂಡು ಬರಲು ಒಬ್ಬ ಹಳಬನನ್ನು ಕಳುಹಿಸಿದೆ.

ನಾವು ಊಟ ಮುಗಿಸುತ್ತಿದ್ದ ಹಾಗೇ ಉಜ್ಜಪ್ಪನವರು ಬಂದರು. ಅವರಿಗಾಗ ಸುಮಾರು ಐವತ್ತು ವರ್ಷ ವಯಸ್ಸು. ಮನುಷ್ಯ ಬಹಳ ಶಾಂತ ಪ್ರಕೃತಿಯವರು.

“ಏನು ಶಿವಣ್ಣನವರೆ, ಹೇಳದೆ ಕೇಳದೆ ಬಂದುಬಿಟ್ಟರಲ್ಲರೀ?” ಎಂದು ಅವರು ಆಕ್ಷೇಪಿಸಿದರು.

“ಅವಸರದಲ್ಲಿ ನಿಮ್ಮನ್ನು ನೋಡುವದಕ್ಕಾಗಲಿಲ್ಲ. ಅದಕ್ಕೇ ಈಗ ಕರೆಯಿಸಿದ್ದು. ಏಳಿರಿ, ಊಟ ಮಾಡೇಳಿರಿ.”

“ಇದೇ ಈಗ ಆಯಿತು. ಅಲ್ಲರೀ, ನನಗೆ ಹೇಳಿದ್ದರೆ ನಾವೊಂದು ಕೋಣೆ ಕೊಡುತ್ತಿರಲಿಲ್ಲವೇನು ನಿಮಗೆ? ನಮ್ಮಲ್ಲೊಂದು ಖಾಲೀ ಕೋಣೆ ಯಿದೆ. ನಿಮಗೆ ಅನುಕೂಲವಾಗುತ್ತಿತ್ತು.”

“ನಾನೇನು ದೂರವಿಲ್ಲವಲ್ಲ. ಹೋಗಲಿ ಬಿಡಿರಿ. ಎಲ್ಲಾ ಒಂದೇ.”

ಆ ಮಾತು ಈ ಮಾತು ಮುಗಿದ ತರುವಾಯ ಆ ರಾತ್ರೆ ಅವರು ತಮ್ಮ ಮನೆಯ ಹೊರಗಡೆ ಮಲಗಿಕೊಳ್ಳಬೇಕೆಂದು ಉಪಾಯವಾಗಿ ಸೂಚಿಸಿದೆ. ಸಹಜವಾಗಿಯೆ ಅವರಿಗೆ ಗಾಬರಿಯಾಯಿತು.

“ಯಾಕೆ? ಯಾರಾದರೂ ಕನ್ನ ಹಾಕುವವರಿದ್ದಾರೋ ಏನು?”

“ಅಂಥಾದ್ದೇನೂ ಇಲ್ಲ.”

“ಹಾಗಾದರೆ?”

“ರಾತ್ರೆ ಗಸ್ತಿಗೆ ಬಂದಾಗ ನಾನೆಲ್ಲಾ ತಿಳಿಸುತ್ತೇನೆ. ಈಗ ನಾನು ಹೇಳುವ ಹಾಗೆ ಹೊರಗೇ ಮಲಗಿಕೊಂಡುಬಿಡಿರಿ.”

ಅವರು ಹಾಗೇ ಮಾಡಿದರು. ಸುಮಿತ್ರಾ ಫೌಜದಾರರಲ್ಲಿಗೆ ಹೋಗುವುದು ತಪ್ಪಿಹೋಯಿತು. ಫೌಜದಾರರು ರಾತ್ರೆ ಎರಡು ಮೂರು ಬಾರಿ ಎದ್ದು ಹೊರಗಡೆ ಬಂದಿದ್ದರಂತೆ, ಕೆಮ್ಮಿದ್ದರಂತೆ. ಅವಳು ಮನೆ ಬಿಟ್ಟು ಬರುವಂತಿರ ಲಿಲ್ಲ. ಬೆಳಿಗ್ಗೆ, ಕಚೇರಿಯಲ್ಲಿ ಫೌಜದಾರರು ಸಿಕ್ಕಿದಾಗ ರಾತ್ರೆಯಿಡೀ ನಿದ್ದೆ

ಯಿಲ್ಲದೆ ಅವರ ಕಣ್ಣುಗಳೆರಡೂ ಕೆಂಡದಂತಾಗಿದ್ದುದು ಕಾಣಿಸಿತು. ನಾನು ಒಳಗೊಳಗೇ ನಗುತ್ತಿದ್ದೆ.

ಮಧ್ಯಾಹ್ನ ಚೆನ್ನ ಮತ್ತೆ ನನ್ನ ಕೊಠಡಿಗೆ ಬಂದು ಕುಳಿತ. ಅಂದೂ ನಾನು ಗೌಡರ ಮನೆಯಲ್ಲಿಯೆ ಊಟ ಮಾಡಬೇಕಾಯಿತು. ಊಟ ತೀರಿಸಿ ಕೊಂಡು ಬಂದು ಚೆನ್ನನ ಜೊತೆಗೆ ಹರಟುತ್ತಾ ಕುಳಿತೆ. ರಾತ್ರೆ ನಡೆದುದನ್ನೆಲ್ಲಾ ಆತ ವರದಿಯೊಪ್ಪಿಸಿದ. ಫೌಜದಾರರು ಅನೇಕ ಬಾರಿ ನನ್ನ ನೆನಪು ತೆಗೆದಿದ್ದ ರಂತೆ.

"ನೀನೂ ಯಾಕೆ ಲಗ್ನವಾಗಬಾರದು ಚೆನ್ನಾ?" ಎಂದು ನಾನು ತಮಾಷೆಗಾಗಿ ಕೇಳಿದೆ. "ನೀನೇನು ಸಣ್ಣವನೇ? ನಿನಗೂ ಲಗ್ನದ ವಯಸ್ಸಾಗಲಿಲ್ಲವೇ?"

ಲಗ್ನ ಎಂಬ ಶಬ್ದ ಕೇಳುತ್ತಲೂ ಅವನಿಗೆ ಸ್ಫೂರ್ತಿ ಬಂದ ಹಾಗಾಯಿತು.

"ವಯಸ್ಸಾಯಿತು, ಎಲ್ಲಾ ಆಯಿತು. ಆದರೆ ಬೇಕು ಅಂದ ಮಾತ್ರಕ್ಕೆ ನಮ್ಮಂಥ ಬಡವರ ಲಗ್ನ ಹ್ಯಾಗಾಗುತದೆ ಹೇಳಿರಿ. ಲಗ್ನ ಅಂದರೆ ಮೊದಲು ರೊಕ್ಕ ಬೇಕು."

"ನೀನು ಕೇಳಿದರೆ ಫೌಜದಾರರು ಕೊಡಲಿಕ್ಕಿಲ್ಲವೇ?"

ಚೆನ್ನ ಗಟ್ಟಿಯಾಗಿ ನಗತೊಡಗಿದ.

"ಛೆ, ಬಿಡಿರಿ. ನೀವೂ ಚಲೋ ಮಾತೇ ಹೇಳ್ತೀರಿ. ಅವರೆಲ್ಲಿಂದ ಕೊಡುತಾರೆ ರೊಕ್ಕಾ? ನನ್ನ ಸಂಬಳದ ರೊಕ್ಕವನ್ನೇ ಕೊಟ್ಟಿಲ್ಲ ಇನ್ನೂ."

"ನೀನು ಇವರ ಹತ್ತರ ಕೆಲಸಕ್ಕೆ ನಿಂತು ಎಷ್ಟು ವರ್ಷವಾಯಿತು?"

"ಒಂದೂವರೆ ವರ್ಷ ಆಗುತಾ ಬಂತು. ಎರಡುಮೂರು ನೂರು ರೂಪಾಯಿ ಇನ್ನೂ ಕೊಡುವದಿದೆ ಅವರ್ಹು, ಇನ್ನೆರಡು ವರ್ಷ ದುಡಿದೆನಂದರೆ ಐದು ನೂರು ಆದೀತು."

"ಅದನ್ನೇ ಉಪಯೋಗ ಮಾಡಿಕೊಂಡು ಲಗ್ನವಾಗಬಹುದಲ್ಲ ಚೆನ್ನಾ?"

"ಲಗ್ನಕ್ಕೇ ಎಲ್ಲಾ ಖರ್ಚು ಮಾಡಿದರೆ ಮುಂದೆ ಸಂಸಾರ ನಡಸುವದು ಹ್ಯಾಗೆ?"

"ಯಾಕೆ? ಫೌಜದಾರರು ನಿಮಗಿಬ್ಬರಿಗೂ ಹೊಟ್ಟೆಗೆ ಹಾಕುವರಲ್ಲ.

ನಿನ್ನ ಹೆಂಡತಿಯೂ ಅವರಲ್ಲೇ ದುಡಿಯಬಹುದು. ನೀವಿಬ್ಬರೂ ಸುಖವಾಗಿರಬಹುದು."

ಚೆನ್ನ ಮತ್ತೆ ನಗತೊಡಗಿದ. "ಹೂಂ! ಸುಖವಾಗಿರಬಹುದು. ಫೌಜದಾರರ ಸ್ವಭಾವ ನಿಮಗೆ ತಿಳಿಯದೇನ್ರೀ? ನನ್ನ ಲಗ್ನವಾದ ಮೇಲೆ ನಾನೇನು ಅವರ ಹತ್ತಿರ ಇರುವದಿಲ್ಲ. ನನ್ನ ಹೆಂಡತಿಯನ್ನೂ ಅವರೇ ನೋಡಿಕೊಳ್ಳತೊಡಗಿದರೆ ನಾನು ಲಗ್ನವಾಗಿ ಉಪಯೋಗವಾದರೂ ಏನು? ಅದಕ್ಕೇ ಒಂದು ಖಾನಾವಳಿ ತೆಗೆದು ದುಡಿದು ತಿಂದು ಸಂಸಾರ ಮಾಡಬೇಕಂತ ವಿಚಾರ ಮಾಡಿದ್ದೀನಿ."

ಅದುವರೆಗೆ ನಾನು ಅವನಿಗೆ ಆಗಾಗ ಕೊಟ್ಟ ದುಡ್ಡು ಸೇರಿ ನೂರಾರು ರೂಪಾಯಿ ಕೂಡಿತ್ತು. ಅದರಿಂದ ಅವನು ಬಂಗಾರ ಕೊಂಡುಕೊಂಡಿದ್ದ. ಒಂದು ಪೈಯನ್ನು ಅವನು ವ್ಯರ್ಥವಾಗಿ ಖರ್ಚು ಮಾಡುತ್ತಿರಲಿಲ್ಲ. ಬೀಡಿಗಳನ್ನು ಕೂಡ ಬೇರೆಯವರಿಂದ ಕೇಳಿ ಪಡೆದುಕೊಂಡು ಸೇದುತ್ತಿದ್ದನಾಗಲಿ ತಾನೇ ದುಡ್ಡು ತೆತ್ತು ಕೊಳ್ಳುತ್ತಿರಲಿಲ್ಲ.

"ಉಜ್ಜಪ್ಪನವರದೂ ನಿನ್ನದೂ ಹ್ಯಾಗಿದೆ ಚೆನ್ನಾ?" ಎಂದು ಕೇಳಿದೆ.

"ಅವರು ಬಹಳ ಚಲೋ ಮನುಷ್ಯರು. ಅವರ ಹೆಂಡತಿಯೂ ಹಾಗೇ. ಮಗಳ ಚಾಳಿ ಮಾತ್ರ ನೆಟ್ಟಗಿಲ್ಲ."

"ಅವಳು ಒಳ್ಳೆಯವಳೇ ಇರಬೇಕಪ್ಪಾ. ನಾಲ್ಕು ವರ್ಷದಿಂದ ಗಂಡನ ಸಹವಾಸವಿಲ್ಲ. ಹರಯದವಳು. ಅವಳಿಗೂ ಗಂಡಸರ ಸಹವಾಸ ಬೇಕಲ್ಲಾ? ಅದಕ್ಕೆ ಹೀಗಾಗಿದ್ದಾಳು."

"ಹೂಂ. ನೀವು ಹೇಳುವದೂ ಖರೆ. ಸುಮಿತ್ರವ್ವ ಹಾಗೆ ಸಿಕ್ಕಸಿಕ್ಕವರನ್ನು ಹುಡುಕುವಂಥವಳೂ ಅಲ್ಲ. ಏನೋ ನಮ್ಮ ಸಾಹೇಬರ ಬಲೆಗೆ ಬಿದ್ದಿದ್ದಳು. ಅದೂ ತಪ್ಪಿ ಹೋಯಿತಲ್ಲ. ನೀವೇನಾದರೂ ತಂತ್ರ ಮಾಡಿದಿರೋ ಏನು?"

ನಾನು ಮಾಡಿದ ತಂತ್ರದ ವಿಚಾರವಾಗಿ ಚೆನ್ನನೆದುರಿಗೆ ಪ್ರಸ್ತಾಪಿಸಲಿಲ್ಲ. ಆ ಮಾತನ್ನೇ ಮರೆಯಿಸಿ,

"ಸುಮಿತ್ರೆಯನ್ನು ನೋಡಿ ನನಗೂ ಆಸೆಯಾಗಿದೆ ಚೆನ್ನಾ. ಅವಳನ್ನು ನನಗೆ ದೊರಕಿಸಿಕೊಡುತ್ತೀಯಾ?" ಎಂದು ಕೇಳಿದೆ.

ಅವನು ನಗುತ್ತಾ, "ಬಿಡಿ ಬಿಡಿರೀ. ನೀವೂ ನಮ್ಮ ಸಾಹೇಬರ ಹಾಗೆ ಮಾಡುವವರೇನು?" ಎಂದ.

"ಅವರ ಹಾಗೇನೂ ಅಲ್ಲ. ಅವರ ಮನೆಯಲ್ಲಿ ಹೆಂಡತಿಯಿದ್ದಾರೆ. ಆದರೂ ಆವರು ಇಂಥ ಕೆಲಸ ಮಾಡುತ್ತಾರೆ. ಮನೆಯಲ್ಲಿ ಒಬ್ಬ ಹೆಂಡತಿಯಿರುತ್ತಾ ನಾನು ಬೇರೆ ಹೆಣ್ಣಿನ ಆಸೆ ಮಾಡಲಿಕ್ಕಿಲ್ಲ. ಈಗ ಮಾತ್ರ ನನಗೆ ಯಾರೂ ಇಲ್ಲ. ಅದಕ್ಕಾಗಿ....ನೋಡು ಚೆನ್ನಾ, ಫೌಜದಾರರ ಬಲೆಗೆ ಅವಳು ಬೀಳುವಂತೆ ಮಾಡಿದವನೂ ನೀನೇ ಅಲ್ಲವೇನು? ಈಗ ನನಗೂ ಅವಳು ಸಿಗುವಂತೆ ಮಾಡು. ನಿನಗೆ ಒಂದು ನೂರು ರೂಪಾಯಿ ಕೊಡುತ್ತೇನೆ."

ನೂರು ರೂಪಾಯಿ ಎನ್ನುತ್ತಲೂ ಅವನು ಕಣ್ಣುಗೊಂಬೆಗಳನ್ನರಳಿಸಿ ನನ್ನನ್ನೇ ಮಿಕಿಮಿಕಿ ನೋಡತೊಡಗಿದ.

"ಆದರೆ....ಫೌಜದಾರ ಸಾಹೇಬರಿಗೆ ಕೊಡಿಸುವದಾಗಿ ಹೇಳಿದೀನಲ್ಲರೀ. ಈಗ ನಿಮಗೆ ಅಂದರೆ ಪಂಚಾಯಿತೀನೇ...."

"ಫೌಜದಾರರ ಹತ್ತರ ಹೋಗುವದಕ್ಕೆ ಅವಳಿಗೂ ಮನಸ್ಸಿರಲಿಕ್ಕಿಲ್ಲ. ನಾನಿನ್ನೂ ಹರಯದವ. ನಾನು ಕರೆದದ್ದು ಗೊತ್ತಾದರೆ ಅವಳೂ ಸಂತೋಷದಿಂದ ಬರಬಹುದು. ನೋಡು ನಿನಗಂತೂ ನೂರು ರೂಪಾಯಿ ಗ್ಯಾರಂಟಿ. ಮತ್ತಿಷ್ಟು ಬಂಗಾರ ಕೊಳ್ಳಬಹುದು ನೀನು. ಆದಷ್ಟು ಬೇಗ ನೀನೂ ಮದುವೆಯಾಗಲು ಸಾಧ್ಯವಾಗಬಹುದು."

"ನೋಡೋಣ. ನಾನೂ ಪ್ರಯತ್ನಮಾಡುತ್ತೇನಿ," ಎಂದ ಚೆನ್ನ.

ಸಾಯಂಕಾಲ ಫೌಜದಾರರು ಮತ್ತೆ ನನ್ನನ್ನು ಕೇಳಿದರು:

"ಅಂತೂ ನೀನು ನನ್ನ ಸಂಗಡ ಹೊರಡುವದಿಲ್ಲ ಅನ್ನು."

ನನ್ನದು ಅದೇ ಉತ್ತರ: "ಇಲ್ಲ."

ಸ್ವಾಮಿ, ಅಪ್ಪಣ್ಣ, ಫೌಜದಾರರು ಮೂವರೇ ಹೊರಡುವುದೆಂದು ಗೊತ್ತಾಯಿತು.

ಅಪ್ಪಣ್ಣನನ್ನು ಒಂದು ಕಡೆಗೆ ಕರೆದೊಯ್ದು ನಾನು ಹೇಳಿದೆ:

"ಸಾಹೇಬರ ಚಟಗಳ ಸಂಗತಿ ನಿನಗೂ ಗೊತ್ತಿದೆ. ಬಹಳ ಹುಷಾರಾಗಿರು. ಹಳ್ಳಿಯ ಜನರಾರಾದರೂ ಕಂಪ್ಲೇಂಟ್ ಕೊಟ್ಟರೆ ನಿನ

ನೌಕರಿಗೆ ಧಕ್ಕೆ ಬಂದೀತು. ಅಂಥ ಪೇಚು ಬಂದಾಗ ನಿನ್ನನ್ನೇ ಅದರಲ್ಲಿ ಸಿಕ್ಕಿಸಿ ತಾವು ಪಾರಾಗಲು ಹೇಸುವವರಲ್ಲ ನಮ್ಮ ಸಾಹೇಬರು."

"ಹೌದಪ್ಪಾ. ನೀನು ಅನ್ನುವದೂ ಖರೆ. ಹುಷಾರಾಗೇ ಇರಬೇಕು ಇವರ ಸಂಗಡ ಇರುವಾಗ. ನಾನಂತೂ ನಿಶ್ಚಯ ಮಾಡಿಬಿಟ್ಟೇನಿ. ಹೆಣ್ಣು ಗಿಣ್ಣು ತಂದುಕೊಡು ಅಂತ ಇವರು ಕಾಡಿಸಿದರೆ ಅಂಥಾದೆಲ್ಲಾ ನನ್ನಿಂದಾಗುವ ದಿಲ್ಲಂತ ಸ್ಪಷ್ಟ ಹೇಳಿಬಿಡುವದು. ಅವರು ಸಿಟ್ಟಾದರೂ ಚಿಂತೆಯಿಲ್ಲ."

"ದಿನಾಲು ಮೂರು ಬಾಟ್ಲಿ ಸೇಂದಿ ತಂದುಕೊಡಬೇಕಾಗುವದಲ್ಲ?"

"ಅದನ್ನೇನೋ ಮಾಡೇನು ಅನ್ನು. ಸೆರೆ ಸೇಂದಿ ಕುಡಿಯುವದಕ್ಕೆ ಕಾಯ್ದೆಯ ಅಡ್ಡಿಯೇನೂ ಇಲ್ಲ."

ಅಪ್ಪಣ್ಣನದೂ ಒಂದು ವಿಶಿಷ್ಟ ವ್ಯಕ್ತಿತ್ವವೇ. ಅವನಿಗಾಗಲೆ ಮೂವತ್ತು ವರ್ಷ ವಯಸ್ಸಾಗಿದ್ದಿತಾದರೂ ವಿವಾಹದ ಯೋಚನೆಯನ್ನೇ ತಲೆಗೆ ಸೇರಿಸದೆ ಅವನು ಬ್ರಹ್ಮಚಾರಿಯಾಗಿಯೆ ಉಳಿದಿದ್ದ. ಬೇರೆ ಅನೇಕರ ಹಾಗೆ "ಢೋಂಗೀ ಬ್ರಹ್ಮಚಾರಿ"ಯಾಗಿರಲಿಲ್ಲ ಅಪ್ಪಣ್ಣ. ಅವನ ಕಟ್ಟುನಿಟ್ಟುಗಳೂ ಬಹಳ. ಅವನು ಊಟವನ್ನೂ ಮಾಡುತ್ತಿರಲಿಲ್ಲ. ಪ್ರತಿ ನಿತ್ಯ ಮೂರು ಬಾರಿ, ಬೆಳಿಗ್ಗೆ ಮತ್ತು ಮಧ್ಯಾಹ್ನ ಮತ್ತು ಸಾಯಂಕಾಲ ಒಂದೊಂದು ತಂಬಿಗೆಯಷ್ಟು ಶುದ್ಧ ಹಾಲು ಕುಡಿಯುತ್ತಿದ್ದುದೆಷ್ಟೋ ಅಷ್ಟೆ. ಎರಡು ಹೊತ್ತು ತಪ್ಪದೆ ವ್ಯಾಯಾಮ ಮಾಡುತ್ತಿದ್ದ. ಹಣ್ಣುಹಂಪಲು ಸೇವಿಸುತ್ತಿದ್ದ. ರೊಟ್ಟಿ, ಅನ್ನ, ಪಲ್ಯ, ಖಾರ ಮೊದಲಾದುವನ್ನು ಬಿಟ್ಟು ಆರೇಳು ವರ್ಷಗಳಾಗಿದ್ದುವು. ಬಾಸುಂದಿ, ಪುರಿ, ಹೋಳಿಗೆ ಯಾವುದನ್ನೂ ಅವನು ಮುಟ್ಟುತ್ತಿರಲಿಲ್ಲ. ಪೋಲೀಸರಿಗೆಲ್ಲ ಅಪ್ಪಣ್ಣನೆಂದರೆ ಒಂದು ಹಾಸ್ಯದ ವಸ್ತು. ಅವನ ಕಠೋರ ಬ್ರಹ್ಮಚರ್ಯವನ್ನು ಹಾಸ್ಯ ಮಾಡುವವರೂ ಕೂಡಾ ಅವನನ್ನು ಮನಃಪೂರ್ವಕವಾಗಿ ಪ್ರೀತಿಸು ತ್ತಿದ್ದರು. ಅವನು ನಂಬುಗೆಯ ಮನುಷ್ಯ. ಯಾರನ್ನೂ ವಂಚಿಸುವವನಲ್ಲ, ಯಾರನ್ನೂ ದ್ವೇಷಿಸುವವನಲ್ಲ. ಅವನಿಗಂಟಿಕೊಂಡಿದ್ದ ಒಂದೇ ಒಂದು ಚಟ ವೆಂದರೆ ಬುಲ್‌ಬುಲ್ ತರಂಗ್ ಬಾರಿಸುವುದು. ಅದನ್ನು ನುಡಿಸುತ್ತಾ ಕುಳಿತು ಕೊಂಡನೆಂದರೆ ಪ್ರಪಂಚವನ್ನೆಲ್ಲಾ ಮರೆತುಬಿಡುತ್ತಿದ್ದ. ಅವನ ಕೊಠಡಿ ಯೊಂದು ಸಂಗೀತಶಾಲೆಯಂತೆ ಕಾಣುತ್ತಿತ್ತು. ಹಾರ್ಮೋನಿಯಂ, ತಬಲ,

ಕೊಳಲು ಎಲ್ಲವನ್ನೂ ಶೇಖರಿಸಿದ್ದ. ‘ಡ್ಯೂಟಿ’ ಮುಗಿದ ತರುವಾಯ ತಂಪು ಹೊತ್ತಿನಲ್ಲಿ ನಾಲ್ಕೈದು ಜನ ಪೋಲೀಸರು ಅಲ್ಲಿ ಕೂಡುತ್ತಿದ್ದರು. ಅದೊಂದು ಬಗೆಯ “ಕ್ಲಬ್” ಇದ್ದಂತೆಯೇ ಇತ್ತು. ನಾನೂ ಆಗಾಗ ಹೋಗುತ್ತಿದ್ದೆ. ಒಬ್ಬ ಹಾರ್ಮೋನಿಯಂ ನುಡಿಸುತ್ತಿದ್ದ, ಇನ್ನೊಬ್ಬ ತಬಲ ಮಿಡಿಯುತ್ತಿದ್ದ, ಮತ್ತೊಬ್ಬ ಕೊಳಲು ನುಡಿಸುತ್ತಿದ್ದ, ಅಪ್ಪಣ್ಣ ಬುಲ್‌ಬುಲ್ ತರಂಗ್ ಬಾರಿಸುತ್ತಿದ್ದ, ನಾನು ಹಾಡುತ್ತಿದ್ದೆ. ನಾಟಕ ಮತ್ತು ಸಿನಿಮಾಗಳಲ್ಲಿಯ ಜನಪ್ರಿಯ ಹಾಡುಗಳು ಅವು.

ಅಪ್ಪಣ್ಣ ಸುಖಪುರುಷ. ಅಂಥವನು ತಲೆಹಿಡುಕನಾಗುವುದು ಸಾಧ್ಯವೆ?

“ಛೆ. ಅಂಥ ಕೆಲಸ ನನ್ನಿಂದಾಗುವದು ಎಂದೆಂದೂ ಶಕ್ಯವಿಲ್ಲ,” ಎಂದ ಅಪ್ಪಣ್ಣ.

೨೫

ನಾನು 'ಫೌಜದಾರ'ನಾದದ್ದು!

ಅಪ್ಪಣ್ಣ ಮತ್ತು ಸ್ವಾಮಿಯ ಜೊತೆಗೆ ಫೌಜದಾರರ ಸವಾರಿ ಕಟ್ಟನಕೆರೆ ಹಳ್ಳಿಗೆ ಹೊರಟಿತು. ಅಲ್ಲಿ ಅವರಿಗೆ ಯಾವ ಹೆಣ್ಣೂ ಸಿಕ್ಕಲಿಲ್ಲ. ಸ್ವಾಮಿಗಾಗಿ ನಾಲ್ಕೈದು ಚೀಲಗಳಷ್ಟು ಧಾನ್ಯವನ್ನೂ ಸ್ವಲ್ಪ ಹಣವನ್ನೂ ಕೂಡಿಸಿ ಅವನೊಡನೆ ತಾವೂ ಗೊಬ್ಬೂರಿಗೆ ಹೋದರು ಫೌಜದಾರರು. ಅವರು ಹಿಂದಿರುಗಿ ಬರುವವರೆಗೆ ಅಪ್ಪಣ್ಣನೊಬ್ಬನೇ ಕಟ್ಟನಕೆರೆಯಲ್ಲುಳಿಯ ಬೇಕಾಯಿತು.

ಪ್ರತಿದಿನವೂ ಕಾಲವಾಡ ಪೋಲೀಸ್ ಕಚೇರಿಗೆ ಬರುವ ಅಂಚೆಯನ್ನೂ, ಫೌಜದಾರರ ಸಹಿಯಾಗಬೇಕಾದ ಮಹತ್ವದ ಕಾಗದಪತ್ರಗಳನ್ನೂ ಒಬ್ಬ ಓಲೇಕಾರನ ಮೂಲಕ ಫೌಜದಾರರ ಬಿಡಾರವಿದ್ದ ಹಳ್ಳಿಗೆ ಕಳಿಸಿಕೊಡುವುದು ವಾಡಿಕೆಯಾಗಿತ್ತು. ಫೌಜದಾರರು ಗೊಬ್ಬೂರಿಗೆ ಹೊರಟುಹೋಗಿದ್ದುದರಿಂದ ಅಂದಿನ ಅಂಚೆ ಕಟ್ಟನಕೆರೆಯಲ್ಲಿಯೆ ಬಿದ್ದುಕೊಂಡಿತು. ಅಪ್ಪಣ್ಣನಿಂದ ಆ ಸಮಾಚಾರ ತಿಳಿಯುತ್ತಲೂ ನಾನು ಸೈಕಲಿನ ಮೇಲೆ ಕಟ್ಟನಕೆರೆಗೆ ಹೋಗಿ ಬರುವುದೆಂದು ಗೊತ್ತುಮಾಡಿಕೊಂಡೆ.

ಅದೇ ದಿನ ಮಹತ್ವದ ಘಟನೆಯೊಂದು ಜರಗಿತು.

ಕಾಂಗ್ರೆಸ್ಸು ವೈಯಕ್ತಿಕ ಸತ್ಯಾಗ್ರಹ ಹೂಡಿದ್ದ ಕಾಲವದು. ಸತ್ಯಾಗ್ರಹ ಮಾಡುವ ದೇಶಭಕ್ತರು ಸತ್ಯಾಗ್ರಹದ ಸ್ಥಳ, ತಾರೀಖು, ಸಮಯಗಳನ್ನು ತಿಳಿಸಿ ಮೊದಲೇ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತಿದ್ದರು. ಜಿಲ್ಲಾಧಿಕಾರಿಗಳು ಆ ಭಾಗದ ಪೋಲೀಸ್ ಅಧಿಕಾರಿಗಳಿಗೆ ವಾರಂಟ್ ಕಳುಹಿಸಿ ಸತ್ಯಾಗ್ರಹಿಗಳನ್ನು ಬಂಧಿಸಲು ಆಜ್ಞೆಯಿಯಾಯುತ್ತಿದ್ದರು.

ಅಂಥ ಸತ್ಯಾಗ್ರಹವೊಂದು ಅದೇ ದಿನ ಸಾಯಂಕಾಲ ಆರು ಗಂಟೆಗೆ ಕಟ್ಟನಕೆರೆಯಲ್ಲಿ ನಡೆಯುವುದಿತ್ತು. ಬಳ್ಳಾರಿ ಜಿಲ್ಲೆಯ ದೇಶಭಕ್ತರೊಬ್ಬರು ಸತ್ಯಾಗ್ರಹ ಮಾಡುವವರಿದ್ದರು. ಅವರನ್ನು ಬಂಧಿಸುವ ಆಜ್ಞೆಯೂ ಅದೇ ದಿನ ನಮ್ಮ ಕೈಸೇರಿತು. ನಾನು ಗೊಂದಲದಲ್ಲಿ ಸಿಲುಕಿಕೊಂಡೆ. ಜಿಲ್ಲಾಧಿಕಾರಿಗಳ ಆಜ್ಞೆಯ ಪ್ರಕಾರ ಸತ್ಯಾಗ್ರಹಿಗಳನ್ನು ಬಂಧಿಸುವ ಅಧಿಕಾರವಿದ್ದುದು ಫೌಜದಾರರಿಗೆ ಮಾತ್ರ. ಇಂದು ಅವರೇ ಇಲ್ಲವಲ್ಲ ಕಟ್ಟನಕೆರೆಯಲ್ಲಿ!

"ನೀವ್ಯಾಕೆ ಚಿಂತೆ ಮಾಡ್ತೀರಿ ಬಿಡಿರೀ," ಎಂದರು ಕಾರಕೂನರು.

"ಇಂದು ಆ ಸತ್ಯಾಗ್ರಹಿಯ ಅರೆಸ್ಟ್ ಆಗದಿದ್ದರೆ ನೌಕರಿಯೇ ಹೋಗುತ್ತದಲ್ಲ!"

"ಹೋದರೆ ಹೋಗಲೇಳಿರಿ. ನಮಗೇನಂತೆ, ನಿಮಗೇನಂತೆ! ಅಂಥವರಿಗೆ ಹಾಗೇ ಆದರೆ ಬುದ್ಧಿ ಬಂದೀತು. ನಾಲ್ಕು ತಿಂಗಳ ಕಾಲ ಟೆಂಪರರಿ ಫೌಜದಾರಿಕೆ ಸಿಕ್ಕಷ್ಟಕ್ಕೇ ಕೊಂಬು ಬಂದಿವೆ ಮಗನಿಗೆ. ಈಗ ಗೊತ್ತಾಗುತ್ತದೆ ಅವನಿಗೆ ಮೆಣಸಿನಕಾಯಿ!" ಎಂದರು ಕಾರಕೂನರು.

"ಹೌದು. ಹೌದು. ಅವನಿಗೆ ಹಾಗೇ ಆಗಬೇಕು," ಎಂದು ಇತರ ಪೋಲೀಸರೂ ದನಿಗೂಡಿಸಿದರು.

ಅವರೆಲ್ಲರಂತೆ ನಾನೂ ಯೋಚಿಸಿ ಅಲ್ಲಿಯೆ ಕುಳಿತುಕೊಂಡು ಬಿಡಲು ಮನಸ್ಸೊಪ್ಪಲಿಲ್ಲ. ಫೌಜದಾರರಲ್ಲಿ ಹಲವು ದುರ್ಗುಣಗಳಿದ್ದುವು, ಅವುಗಳ ವಿಚಾರವಾಗಿ ನನಗೆ ಬೇಸರವೂ ಉಂಟಾಗಿತ್ತು. ಅದೆಲ್ಲವೂ ನಿಜವಾಗಿದ್ದರೂ ಆ ಸಮಯದಲ್ಲಿ ಅವರನ್ನು ದ್ವೇಷಿಸುವ ಬುದ್ಧಿ ಮಾತ್ರ ನನ್ನಲ್ಲಿ ತಲೆದೋರಲಿಲ್ಲ. ಎಲ್ಲರೂ ತಪ್ಪು ಮಾಡುತ್ತಾರೆ. ನಾನೂ ಮಾಡುತ್ತೇನೆ. ಹಾಗೇ ಫೌಜದಾರರ ಮಾತು. ಅವರ ದುಷ್ಕೃತ್ಯಗಳ ವಿಚಾರ ಮುಂದೆ ಮಾಡಿದರಾಯಿತು. ಸದ್ಯ ಈ ಪ್ರಸಂಗದಿಂದ ಅವರನ್ನು ಉಳಿಸುವುದೊಂದೇ ಮಹತ್ವದ ವಿಷಯ.

ಹಾಗೆ ಯೋಚಿಸುತ್ತಾ ಫೌಜದಾರರ ಮನೆಗೆ ಹೋಗಿ, ಅವರ ಹೆಂಡತಿಗೂ ಆ ವಿಚಾರ ತಿಳಿಸಿದೆ. ಗಂಡನ ನೌಕರಿ ಹೋಗುವ ಪ್ರಸಂಗವೆನ್ನುತ್ತಲೂ ಅವಳು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅವರನ್ನು ಉಳಿಸಿಕೊಳ್ಳುವ ಹೊಣೆ ನನ್ನದೆಂದು ಹೇಳಿ ಆಕೆಯನ್ನು ಸಂತೈಸಿದೆ. ಅದೊಂದು ದಿನದ ಮಟ್ಟಿಗೆ ನಾನೇ 'ಫೌಜದಾರ'ನಾಗುವುದೆಂದು ನಿರ್ಧರಿಸಿ, ಅವರ ಸಮವಸ್ತ್ರ ಕೇಳಿ ತೆಗೆದು ಕೊಂಡು ಚೀಲದಲ್ಲಿಟ್ಟಿ, ನನ್ನ ಖಾಕೀ ಪ್ಯಾಂಟು ಶರ್ಟು ತೊಟ್ಟು, ಫೌಜದಾರರ ಹ್ಯಾಟನ್ನು ತಲೆಗಿಟ್ಟುಕೊಂಡು, ವಾರಂಟ್ ಕಾಗದ ಕಿಸೆಗೆ ಬಿಟ್ಟುಕೊಂಡು ಸೈಕಲ್ ಏರಿ ಕಟ್ಟನಕೆರೆಗೆ ಸಾಗಿದೆ. ಸಾಧ್ಯವಾದಷ್ಟೂ ವೇಗವಾಗಿ ಸೈಕಲ್ ಓಡಿಸಿ ಮೂರು ಗಂಟೆಯ ವೇಳೆಗೆ ಹಳ್ಳಿಗೆ ಬಂದು ಮುಟ್ಟಿದೆ.

ಊರ ಗೌಡರೊಡನೆ ಹರಟೆ ಕೊಚ್ಚುತ್ತಾ ಚಾವಡಿಯಲ್ಲಿ ಸುಖವಾಗಿ ಕಾಲ ಕಳೆಯುತ್ತಿದ್ದ ಅಪ್ಪಣ್ಣ, ತೇಕುತ್ತ ತೇಕುತ್ತ ಸೈಕಲಿನಿಂದಿಳಿದ ನನ್ನನ್ನು ಕಂಡು ಏನೋ ವಿಶೇಷವಿರಬೇಕೆಂದು ಭಾವಿಸಿ,

"ಏನು, ಏನವಸರ?" ಎಂದು ಕೇಳಿದ ಒಂದೇ ಉಸಿರಿನಲ್ಲಿ.

ಅವನನ್ನು ಒಂದು ಪಕ್ಕಕ್ಕೆ ಕರೆದೊಯ್ದು ವಿಷಯವನ್ನೆಲ್ಲಾ ತಿಳಿಸಿದೆ. ಅವನ ಮುಖವೂ ಕಪ್ಪಿಟ್ಟಿತು.

"ಈಗಿಂದೀಗ ಸೈಕಲ್ ಹತ್ತಿಕೊಂಡು ಗೊಬ್ಬೂರಿಗೆ ಹೋಗಿ ಫೌಜದಾರ ರನ್ನು ಕರೆದುಕೊಂಡು ಬಾ ಹೋಗು. ಸ್ಪೆಶಲ್ ಕಾರು ತೆಗೆದುಕೊಂಡಾದರೂ ಬರಹೇಳು. ಅವರು ಬರುವತನಕ ನಾನು ನೋಡಿಕೊಳ್ಳುತ್ತೇನೆ," ಎಂದು ಹೇಳಿ ನಾನು 'ಫೌಜದಾರ್' ಸೋಗು ಹಾಕುವ ಯೋಜನೆಯನ್ನೂ ತಿಳಿಸಿದೆ.

ಚಾವಡಿಗೆ ಬಂದೊಡನೆಯೆ ಅಪ್ಪಣ್ಣ ಗೌಡರನ್ನು ಕುರಿತು,

"ಇವರು ನಮ್ಮ ಹೊಸ ಫೌಜದಾರ ಸಾಹೇಬರು. ಈಶ್ವರಪ್ಪ ರಾವ್ ಸಾಹೇಬರಿಗೆ ಒಮ್ಮಿಂದೊಮ್ಮೆಲೆ ವರ್ಗವಾಗಿದೆ. ನಾನು ಕೂಡಲೆ ಗೊಬ್ಬೂರಿಗೆ ಬರಬೇಕಂತ ಹೇಳಿ ಕಳಿಸಿದ್ದಾರೆ – ಹೋಗುತ್ತೀನಿ," ಎಂದು ಹೇಳಿದ.

ಗೌಡರು ನನಗೆ ನಮಸ್ಕಾರ ಮಾಡಿದರು. ಓಲೇಕಾರರೂ ಹಳಬರೂ ಮೈ ಬಗ್ಗಿಸಿ 'ಸಲಾಂ' ಹೊಡೆದರು. "ಹೊಸ ಫೌಜದಾರರಿ"ಗಾಗಿ ಚಹ ಫಲಾಹಾರದ ವ್ಯವಸ್ಥೆಯಾಯಿತು. ನನ್ನ ಮನಸ್ಸಿನದೊಂದು ಭಾಗದಲ್ಲಿ ಮೋಜು; ಇನ್ನೊಂದು ಭಾಗದಲ್ಲಿ ಕಳವಳ.

ಅಪ್ಪಣ್ಣ ಸೈಕಲ್ ಹತ್ತಿ ಹೊರಟುಹೋದ.

ಅಂದು ಸಂಜೆ ನಡೆಯಲಿದ್ದ ಸತ್ಯಾಗ್ರಹದ ಬಗ್ಗೆ ಆ ವೇಳೆಗಾಗಲೇ ಹಳ್ಳಿಯಲ್ಲಿ ಪ್ರಚಾರವಾಗಿತ್ತು. ಸತ್ಯಾಗ್ರಹಿಯೂ ಅವರ ಜೊತೆಗಾರರೂ ಹಳ್ಳಿಗೆ ಬಂದು ಒಂದು ಮನೆಯಲ್ಲಿ ವಿರಮಿಸಿಕೊಳ್ಳುತ್ತಿದ್ದರು.

ಐದೂವರೆ ಗಂಟೆಗೇ ಸಭೆಗಾರಂಭವಾಯಿತು.

ನಾನು ಫೌಜದಾರರ ಸಮವಸ್ತ್ರ ಧರಿಸಿ, ಎಡಗಡೆಯ ಕಂಕುಳಲ್ಲಿ ಬೆತ್ತ ವನ್ನಿರಿಸಿ, ಬಲಗೈಯಲ್ಲಿ ಹ್ಯಾಟು ಹಿಡಿದು ಸತ್ಯಾಗ್ರಹಿಯನ್ನು ಬಂಧಿಸಿ ತರಲು ಸಿದ್ಧನಾಗಿ ಹೊರಟೆ. ಗೌಡರೂ ಓಲೇಕಾರರೂ ನನ್ನ ಮುಂದೆ ನಡೆದರು – ಫೌಜದಾರರು ಬಂದರೆಂದು ಸುದ್ದಿ ಹರಡುತ್ತಾ.

ಆ ಸತ್ಯಾಗ್ರಹಿ ದೀರ್ಘ ಉಪನ್ಯಾಸವೀಯುವ ಗೊಡವೆಗೆ ಹೋಗದೆ, ಮಹಾಸಮರವನ್ನು ವಿರೋಧಿಸಿ ನಾಲ್ಕು ಮಾತುಗಳಲ್ಲಿಯೆ ಮುಗಿಸಿಬಿಟ್ಟರು. ನಾನು 'ವಾರಂಟ್' ತೋರಿಸಿದೆ. ಅವರು ಮೌನವಾಗಿ ನನ್ನ ಹಿಂದೆ ಬಂದರು. ಅವರೊಡನೆ ಸಭೆಗೆ ಬಂದಿದ್ದ ಆ ತಾಲೂಕಿನ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಿಗೆ ನನ್ನ "ಫೌಜದಾರಿ ವೇಷ" ಕಂಡು ವಿಸ್ಮಯವಾದ ಹಾಗಿದ್ದಿತು. ಅವರು ನನ್ನ ಪರಿಚಿತರು. ಮೊನ್ನೆ ಮೊನ್ನೆ ಸಿಪಾಯಿಯಾಗಿದ್ದ ನಾನು ಇಷ್ಟು ಬೇಗ ಫೌಜದಾರನಾದುದು ಹೇಗೆ ಎಂಬ ಸಮಸ್ಯೆ ಅವರನ್ನು ಕಾಡುತ್ತಿತ್ತು.

ಚಾವಡಿಗೆ ಬರುತ್ತಲೂ ಅವರು ನನ್ನನ್ನು ಕೇಳಿದರು :

"ನೀವು ಯಾವಾಗ ಫೌಜದಾರರಾದಿರಿ ಶಿವಣ್ಣನವರೇ ?"

ನಾನು ಮುಗುಳ್ನಕ್ಕು, "ನಿಮ್ಮ, ಚಳವಳಿಯ ಪುಣ್ಯದಿಂದ ನಾನಿಷ್ಟು ಬೇಗ ಫೌಜದಾರನಾಗಲು ಸಾಧ್ಯವಾಯಿತು," ಎಂದೆ.

ಆ ಮಾತನ್ನು ಅವರು ನಂಬಿದ ಹಾಗೇ ತೋರಿತು ; ಅಲ್ಲಿಗೇ ಆ ವಿಷಯ ಮುಗಿಸಿಬಿಟ್ಟರು.

ಚಹ ಬಂದಿತು – ಎಲ್ಲರಿಗೂ.

ಚಹ ಸೇವಿಸಿದೊಡನೆ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರು ಸತ್ಯಾಗ್ರಹಿ ಯನ್ನು ಬೀಳ್ಕೊಂಡು, ತಮ್ಮ ಊರಿಗೆ ಹೊರಟುಹೋದರು.

ಸತ್ಯಾಗ್ರಹಿಯ ಭಾಷಣ ಕೇಳಿದವರಿಬ್ಬರ ಹೇಳಿಕೆಗಳನ್ನು ಬರೆದು ಕೊಳ್ಳುವ ಶಾಸ್ತ್ರ ಮುಗಿಸಿ, ಬಂಧಿತರನ್ನು ಕಾಲವಾಡಕ್ಕೆ ಕರೆದೊಯ್ಯುವ ಸಿದ್ಧತೆ

ಗಾರಂಭಿಸಿದೆ. ಫೌಜದಾರರ ದಾರಿ ಕಾಯುತ್ತಾ ಅಲ್ಲಿಯೆ ಕುಳಿತುಕೊಳ್ಳು ವಂತಿರಲಿಲ್ಲ. ಆ ರಾತ್ರೆಯೇ ಅವರು ಬರಬಹುದೆಂಬ ಭರವಸೆಯೂ ಇರಲಿಲ್ಲ.

"ಕತ್ತಲಾಗುತ್ತಾ ಬಂತು. ಈಗ ಕೈದಿಯನ್ನೊಯ್ಯುವದು ಬೇಡರೀ ರಾವಸಾಹೇಬರೆ. ನಾಳೆ ಮುಂಜಾನೆ ಹೋಗುವಿರಂತೆ," ಎಂದ ಗೌಡ.

ಹಾಗೆ ಮಾಡುವುದೇ ಸರಿಯೆನ್ನಿಸಿತು ನನಗೂ.

ಅಂದು ಗೌಡ ನನಗಾಗಿ ಹೋಳಿಗೆ ಮಾಡಿಸಿದ್ದ. ಹೊಸ ಫೌಜದಾರರ 'ಮರ್ಜಿ' ಕಾದುಕೊಳ್ಳಬೇಕಲ್ಲವೆ! ನಾನು ಒಳಗೊಳಗೇ ನಗುತ್ತಾ ಹೋಳಿಗೆ ಯೂಟ ಹೊಡೆದೆ. ಸತ್ಯಾಗ್ರಹಿಗೂ ಹೋಳಿಗೆ ಸಿಕ್ಕಿತು.

"ಜೇಲಿಗೆ ಕಳಿಸುವ ಮೊದಲು ಹೋಳಿಗೆ ಹಾಕಿದಿರಿ. ಉಪಕಾರ ವಾಯಿತು," ಎಂದು ಅವರೂ ನಗುತ್ತ ನುಡಿದರು.

"ನನ್ನದೇನು ಉಪಕಾರ! ಎಲ್ಲಾ ನಮ್ಮ ಗೌಡರದು!" ಎಂದು ನಾನು ಹೇಳಿದಾಗ ಗೌಡನ ಮುಖ ಅಗಲವಾಯಿತು. 'ಫೌಜದಾರರು' ಸಂತುಷ್ಟ ರಾದರು, ಇನ್ನು ತನಗಾವ ಭಯವೂ ಇಲ್ಲವೆಂದು ಅವನೆಂದುಕೊಂಡಿರಬೇಕು.

ಚಾವಡಿಯ ಕೋಣೆಯೊಂದರಲ್ಲಿ ಸತ್ಯಾಗ್ರಹಿಯ ನಿದ್ರೆಗೆ ಅನುಕೂಲ ಮಾಡಲಾಯಿತು. ನನಗಾಗಿ ಗೌಡರ ಮನೆಯಿಂದ ಹಾಸಿಗೆ ಬಂತು.

ಫೌಜದಾರರು ಬರಲಿಲ್ಲ.

ಮಾರನೆಯ ದಿನ ಗೊತ್ತಾಯಿತು ಅಪ್ಪಣ್ಣನಿಂದ: ಅವನು ಸ್ವಾಮಿಯ ಮನೆಗೆ ಹೋದ ಸಮಯದಲ್ಲಿ ಫೌಜದಾರರು ಚೆನ್ನಾಗಿ ಸೇಂದಿ ಕುಡಿದು ತಮ್ಮ ಪ್ರೇಯಸಿಯೊಡನೆ ಚಕ್ಕಂದ ನಡಸಿದ್ದರು. ಅಪ್ಪಣ್ಣನ ಮೂಲಕ ವಿಷಯವೆಲ್ಲ ಗೊತ್ತಾಗುತ್ತಲೂ ಅವರ ಕೈಕಾಲುಗಳಲ್ಲಿನ ಶಕ್ತಿಯೆಲ್ಲ ಮಾಯವಾದಂತಾಗಿತ್ತು. ಸೇಂದಿಯ ಅಮಲಿನಲ್ಲಿ ತೂಗಾಡುತ್ತಾ ಎದ್ದು ಹೊರಟಿದ್ದರು. ಒಂದು ಗಂಟೆಯ ಕಾಲ ಯತ್ನಿಸಿದಾಗ ಬಾಡಿಗೆಯ ಕಾರು ದೊರೆತಿತ್ತು. ಕಟ್ಟನಕೆರೆಗೆ ಅವರು ಬಂದು ಸೇರಿದಾಗ ರಾತ್ರಿ ಹನ್ನೆರಡು ಗಂಟೆ. ಇಲ್ಲಿಗೆ ಬರುವುದರೊಳಗಾಗಿ ಅವರ ಅಮಲು ಇಳಿದುಹೋಗಿತ್ತು. ಎಳೆಯ ಮಕ್ಕಳಂತೆ ಗಾಬರಿ ಗೊಂಡಿದ್ದರು. ಫೌಜದಾರರಿರಲಿಲ್ಲವೆಂದು ಸತ್ಯಾಗ್ರಹಿ ಹಾಗೇ ಹೊರಟು ಹೋಗಿರಬಹುದು, ತಮ್ಮ ನೌಕರಿಗೆ ಸಂಚಕಾರ ಬರುವುದು....

ನನ್ನನ್ನು ಕೂಗಿ ಎಬ್ಬಿಸಿ ಅವರು ಕೇಳಿದರು:

"ಸತ್ಯಾಗ್ರಹಿ ಏನಾದ?"

ಅವರ ಅವಸ್ಥೆಯನ್ನು ಕಂಡು ನನಗೆ ಮರುಕ ಬರುತ್ತಿದ್ದಿತಾದರೂ ಇನ್ನು ಕೊಂಚ ಹೊತ್ತು ಮೋಜು ನೋಡುವುದೆಂದು ಯೋಚಿಸಿ,

"ಸತ್ಯಾಗ್ರಹಿಯೆ? ಅವನು ಬಂದ, ಭಾಷಣ ಮಾಡಿದ, ಹೊರಟು ಹೋದ. ಅವನನ್ನು ಅರೆಸ್ಟ್ ಮಾಡುವ ಅಧಿಕಾರ ನನಗಂತೂ ಇರಲಿಲ್ಲವಲ್ಲ. ಅದಕ್ಕೆ ನಾನೂ ಸುಮ್ಮನಾದೆ," ಎಂದು ಹೇಳಿದೆ.

ಚಾವಡಿಯ ಕಟ್ಟೆಯ ಮೇಲೆ ಕುಸಿದು ಕುಳಿತರು ಫೌಜದಾರರು. ಅವರ ಮುಖವೆಲ್ಲಾ ಬಿಳಿಚಿಕೊಂಡಿತು. ಒಮ್ಮೆಲೆ ಹೃದಯಕ್ರಿಯೆ ನಿಂತು ಹೋದಂತಾಯಿತು ಅವರಿಗೆ.

ಒಂದು ನಿಮಿಷ ಹಾಗೆ ಕುಳಿತಿದ್ದು ಅನಂತರ ಥಟ್ಟನೆದ್ದು ಹೇಳಿದರು,

"ಈಗ ಅವನು ಹಾಗೇ ಹೋದನೆಂದರೆ ನನ್ನ ನೌಕರಿ ಉಳಿಯದು. ಇವತ್ತು ರಾತ್ರಿಯೇ ಅವನು ಎಲ್ಲಿದ್ದರೂ ಹುಡುಕಿ ಹಿಡಿದು ತರಬೇಕು."

"ಇಂಥಾ ಭಯಂಕರ ಕತ್ತಲಲ್ಲಿ ಅವನನ್ನು ಎಲ್ಲಿ ಅಂತ ಹುಡುಕುತ್ತೀರಿ?"

"ಅವನು ಯಾವ ಊರಿಗೆ ಹೋದ? ಯಾರಿಗೂ ಗೊತ್ತಿಲ್ಲೇನು? ಏಳು, ಅವನನ್ನು ತಪಾಸು ಮಾಡೋಣ."

"ಇಂಥಾ ರಾತ್ರಿಯಲ್ಲಿ ನಾನೇನು ಬರುವದಿಲ್ಲ. ನೀವು ಬೇಕಾದರೆ ಹೋಗಿರಿ." ನಾನು ಕೋಪವನ್ನು ನಟಿಸುತ್ತಾ ಉತ್ತರವಿತ್ತೆ.

ಅವರೊಬ್ಬರೇ ಹೊರಡುವ ಹಾಗೂ ಇರಲಿಲ್ಲ. ಸತ್ಯಾಗ್ರಹಿಯನ್ನು ಹುಡುಕಿ ತರಬಲ್ಲ ಜಾಣತನವೂ ತನ್ನಲ್ಲಿಲ್ಲವೆಂಬುದನ್ನು ಚೆನ್ನಾಗಿ ತಿಳಿದಿದ್ದ ಅವರು ತಬ್ಬಿಬ್ಬಾದರು. ಅವರ ಕಣ್ಣುಗಳಲ್ಲಿ ಎರಡು ಹನಿಗಳೂ ಕಾಣಿಸಿ ಕೊಂಡುವು.

ನನಗೆ ಒಳಗೊಳಗೇ ನಗು. ನಡೆದ ಸಂಗತಿಯನ್ನೆಲ್ಲ ನಾನು ಆಗಲೆ ಅವರಿಗೆ ತಿಳಿಸಿದ್ದಲ್ಲಿ ಅವರು ಎಲ್ಲಿಗಾದರೂ ಹೋಗಿ ತಮ್ಮ ಜೀವ ತ್ಯಜಿಸಬಹು ದೆಂದೂ ನನಗೆನ್ನಿಸಿತು.

"ಇಷ್ಟ್ಯಾಕೆ ಚಿಂತಿಸುತ್ತೀರಿ ರಾವ್‌ಸಾಹೇಬರೆ. ಸ್ವಲ್ಪ ಕೂಡ್ರಿ. ಗೊಬ್ಬೂರಿನಿಂದ ದಣಿದು ಬಂದಿದ್ದೀರಿ. ಸ್ವಲ್ಪ ಅರಾಮು ತೆಗೆದುಕೊಳ್ಳಿರಿ. ಆಮೇಲೆ ಹೋದೀರಂತೆ!" ಎಂದು ನಗುತ್ತಲೇ ಹೇಳಿದೆ.

ನನ್ನ ನಗುವನ್ನು ಕಂಡು ಸಹಜವಾಗಿಯೆ ಅವರಿಗೆ ಕೋಪವೇರಿತು.

“ ನನಗೆ ಹೀಗಾಯಿತು ಅಂತ ನಿನಗೆ ಆನಂದ ಹೌದಲ್ಲೋ ? ಇರಲಿರಲಿ. ಮೊದಲು ಸತ್ಯಾಗ್ರಹಿಯನ್ನು ಹುಡುಕಿ ಆಮೇಲೆ ನಿನ್ನನ್ನು ನೋಡಿಕೊಳ್ತೀನೆ,” ಎಂದು ನುಡಿದವರೆ ಅವರು ಚಾವಡಿಯನ್ನು ಬಿಟ್ಟು ಹೊರಟರು.

“ ನೀವು ಇಪ್ಪತ್ತು ಊರು ತಿರುಗಿದರೂ ಆ ಸತ್ಯಾಗ್ರಹಿ ನಿಮಗೆ ಸಿಕ್ಕುವದಿಲ್ಲ.”

ಫೌಜದಾರರು ತಡೆದು ನಿಂತು, ನನ್ನತ್ತ ತಿರುಗಿ,

“ ಏನು ? ಏನಂದದ್ದು ನೀನು ?” ಎಂದು ಕೇಳಿದರು.

“ ಸತ್ಯಾಗ್ರಹಿ ನಿಮ್ಮ ಕೈಗೆ ಸಿಗುವದು ಸಾಧ್ಯವಿಲ್ಲ ಅಂತ.”

“ ನಾನು ಅಷ್ಟು ಕೈಲಾಗದವ ಅಂತ ತಿಳಿದೀಯೇನು ?”

“ ಹಾಗೇನೂ ಅಲ್ಲ. ನೀವು ಪ್ರಚಂಡರೇ ಇದ್ದೀರಿ. ನನಗೂ ಗೊತ್ತೇ ಇದೆಯಲ್ಲ !” ನಾನು ನಗುತ್ತಾ ಹೇಳಿದೆ: “ ಆದರೆ, ಸತ್ಯಾಗ್ರಹಿ ಇಲ್ಲೇ ಮಲಗಿ ಕೊಂಡಿರುವಾಗ ಹೊರಗಡೆ ಹ್ಯಾಗೆ ಸಿಕ್ಕಾನು ನಿಮಗೆ ?”

“ ಹಾ ?” ಎಂದು ಉದ್ಗಾರ ತೆಗೆದು ಅವರು ನನ್ನ ಹತ್ತಿರ ಬಂದರು, ಕುಳಿತುಕೊಂಡರು.

“ ಸತ್ಯಾಗ್ರಹಿ ಇಲ್ಲೇ ಇದಾನೇನು ? ನನ್ನ ಜೀವದಲ್ಲಿ ಜೀವವಿಲ್ಲದಾಗಿದೆ. ಚೇಷ್ಟೆ ಮಾಡಬೇಡ ಶಿವಣ್ಣಾ. ಖರೇ ಏನು ಹೇಳು.”

“ ಖರೇ ಅಂದರೂ ಅವನು ಇಲ್ಲೇ ಇದ್ದಾನೆ. ಆ ಕೋಣೆಯಲ್ಲಿ ನಿದ್ದೆ ಮಾಡುತ್ತಿದ್ದಾನೆ.”

“ ಅಂದರೆ....ಅಂದರೆ....”

“ ನಿಮ್ಮ ಪುಣ್ಯದಿಂದಾಗಿ ನಾನೂ ಒಂದು ದಿನ ಫೌಜದಾರನಾದಂತಾಯಿತು,” ಎಂದು ಆರಂಭಿಸಿ ಸತ್ಯಾಗ್ರಹಿಯನ್ನು ಬಂಧಿಸಿದ ಕಥೆಯನ್ನೆಲ್ಲಾ ವಿವರಿಸಿ ಹೇಳಿದೆ.

ಫೌಜದಾರರ ಕೊರಳ ನರಗಳುಬ್ಬಿ ಬಂದಿದ್ದುವು; ನನ್ನ ಕೈಗಳೆರಡನ್ನೂ ಹಿಡಿದು ಅದುಮುತ್ತಾ ಕಂಪಿಸುವ ಧ್ವನಿಯಲ್ಲಿ ಹೇಳಿದರು :

“ ಇವತ್ತು ನೀನು ನನ್ನ ನೌಕರಿ ಉಳಿಸಿದಿ ಶಿವಣ್ಣಾ. ನನ್ನ ಮರ್ಯಾದೆ

ಉಳಿಸಿದಿ. ನನ್ನ ಹೆಂಡಿರು ಮಕ್ಕಳು ಗೋಳಾಡುವದನ್ನು ತಪ್ಪಿಸಿದಿ. ನಿನ್ನ ಉಪಕಾರವನ್ನು ಹ್ಯಾಗೆ ತೀರಿಸುವದು...."

ಮುಂದೆ ಅವರ ಬಾಯಿಂದ ಮಾತು ಹೊರಡದಂತಾಯಿತು. ನನ್ನನ್ನು ಅನುಚಿತರೀತಿಯಿಂದ ನಡಸಿಕೊಂಡಿದ್ದನ್ನು ನೆನೆದು ಅವರು ಪಶ್ಚಾತ್ತಾಪ ಪಟ್ಟುಕೊಂಡಿರಬೇಕು.

ಬೆಳಗಾಗುತ್ತಲೂ ಗೌಡ ಬಂದ. ಫೌಜದಾರರನ್ನು ಕಂಡು, ನನ್ನ 'ಫೌಜದಾರಿಕೆ'ಯ ನಾಟಕದ ವಿಷಯ ಅರಿತುಕೊಂಡು ಅವನೂ ಚಕಿತನಾದ. ಸತ್ಯಾಗ್ರಹಿಗೂ ಆ ಗುಟ್ಟು ಗೊತ್ತಾಗಿರಲು ಸಾಕು, ಆದರೆ ಆ ವಿಚಾರವಾಗಿ ಅವರೇನನ್ನೂ ಆಡಲಿಲ್ಲ. ಅವರು ನಿಷ್ಠುರ ಗಾಂಧೀವಾದಿ. ಹದಿನಾರಾಣೆ ಸಜ್ಜನರು. ಈ ವಿಷಯ ತಮಗೆ ಸಂಬಂಧವಿಲ್ಲದುದೆಂದು ಭಾವಿಸಿದ ಅವರು ಆ ಬಗ್ಗೆ ಕೊಂಚವೂ ಆಸಕ್ತಿ ವಹಿಸಲಿಲ್ಲ.

ಅವರನ್ನು ಕಾಲವಾಡಕ್ಕೆ ಕರೆದೊಯ್ಯಲು ಎತ್ತಿನ ಚಕ್ಕಡಿ ಸಿದ್ಧವಾಗಿ ಬಂತು. ಅದರ ಬಾಡಿಗೆ ಹಣ ಸರಕಾರದಿಂದ ದೊರೆಯುತ್ತಿತ್ತು. ಸತ್ಯಾಗ್ರಹಿಗಳನ್ನು ಗೌರವಾದರಗಳಿಂದ ಕಂಡು, ಅವರು ಬಯಸಿದ ಅನುಕೂಲತೆಗಳನ್ನೆಲ್ಲ ಒದಗಿಸಿಕೊಡಬೇಕೆಂಬ ಆಜ್ಞೆಯೂ ಇತ್ತು. ಚಕ್ಕಡಿಯ ಜೊತೆಗೆ ನಾನೇ ಹೊರಟುನಿಂತೆ. ಅಪ್ಪಣ್ಣನನ್ನು ಕಳುಹಿಸಿ ನನ್ನನ್ನು ಅಲ್ಲಿಯೆ ಇಟ್ಟುಕೊಳ್ಳಬೇಕೆಂದು ಫೌಜದಾರರ ವಿಚಾರ. ಅವರ ಆಜ್ಞೆಗಾಗಿ ಕಾಯದೆ ನಾನು ಚಕ್ಕಡಿಯಲ್ಲಿ ಕುಳಿತುಬಿಟ್ಟದ್ದೆ. ಹಳ್ಳಿಯ ಜನರೆಲ್ಲ ನೆರೆದ ಸಮಯದಲ್ಲಿ ನನ್ನ ಜೊತೆಗೆ ವಾದ ಬೆಳೆಸಲಿಷ್ಟಪಡದೆ ಫೌಜದಾರರು ಸುಮ್ಮನಾದರು. ನಾನು ಸತ್ಯಾಗ್ರಹಿಯೊಡನೆ ಕಾಲವಾಡಕ್ಕೆ ಬಂದು ಅವರನ್ನು ಗೊಬ್ಬೂರಿಗೆ ಕಳಿಸಿಕೊಟ್ಟೆ.

ಫೌಜದಾರರು ಗಂಡಾಂತರದಿಂದ ಪಾರಾದ ವಿಷಯ ತಿಳಿಯುತ್ತಲೂ ಪೋಲೀಸರೆಲ್ಲ ನನ್ನನ್ನು ಬಯ್ದರು.

"ನಿಮಗೆ ಬುದ್ಧಿಯಿಲ್ಲ. ಅಂಥಾ ರಾಕ್ಷಸನನ್ನುಳಿಸಿಬಿಟ್ಟರಿ. ಅವನೇನು ನಿಮ್ಮ ಉಪಕಾರ ಮನಸ್ಸಿನಲ್ಲಿಟ್ಟುಕೊಳ್ಳುವನೆಂತ ತಿಳಿದೀರೇನು? ಹಾಲು ಹಾಕಿದವರ ಕೈ ಕಚ್ಚುವ ಹಾವಿನಜಾತಿಯವ ಇವನೂ."

೨೬

ಗೌಡಸಾನಿಯಲ್ಲಿ ಫೌಜದಾರರಿಗೆ ಮೇಜವಾನಿ !

ಕಟ್ಟನಕೆರೆಯಲ್ಲಿ ನಮ್ಮ ಫೌಜದಾರರು ಒಬ್ಬ ಪಾಳೆಯಗಾರನಂತೆ ಸುಖವಾಗಿ ಕಾಲ ಕಳೆಯತೊಡಗಿದರು.

ಫೌಜದಾರರ ಹಾಗೇ ಆ ಹಳ್ಳಿಯ ಗೌಡನೂ ಬಹಳ ರಸಿಕ. ಗೌಡನಾದವನಿಗೊಬ್ಬಳು ಉಪಪತ್ನಿಯಿರದಿದ್ದರೆ ಅವನ ಯೋಗ್ಯತೆಗೆ ಅದೊಂದು ಕುಂದು ಎಂತಲೇ ಅವನ ಭಾವನೆ. ಅಂತೆಯೇ, ಒಬ್ಬ ಹೆಂಗಸನ್ನು ವಶಪಡಿಸಿಕೊಂಡು, ಅವಳು ತನ್ನ ಗಂಡನನ್ನು ತ್ಯಜಿಸುವಂತೆ ಮಾಡಿ, ಅವಳಿಗೊಂದು ಬೇರೆ ಮನೆ ಮಾಡಿಕೊಟ್ಟು ಆ ಊರಿನಲ್ಲಿಯೆ ಇಟ್ಟುಕೊಂಡಿದ್ದ. ಗೌಡನಿಗೆ ಐವತ್ತು ವರ್ಷ ವಯಸ್ಸು, ಅವಳಿಗೆ ಇಪ್ಪತ್ತೈದೋ ಮೂವತ್ತೋ ಇರಬಹುದು. ಹಳ್ಳಿಯವರ ದೃಷ್ಟಿಯಲ್ಲಿ ಚೆಲುವೆಯಾಗಿ ಕಾಣುವ ಹಾಗೇ ಅವಳ ರೂಪು. ಹಳ್ಳಿಗೆ ಯಾರಾದರೂ "ದೊಡ್ಡವರು" ಬಂದಾಗಲೆಲ್ಲ, ಅವರೂ 'ರಸಿಕ'ರಾಗಿದ್ದುದು ಗೊತ್ತಾಗುತ್ತಲೂ ಈ "ಸಣ್ಣ ಗೌಡಸಾನಿ"ಯಲ್ಲಿ ಮೇಜವಾನಿ ನಡೆಯುತ್ತಿತ್ತು. ಬಾಟಲುಗಳೂ ಕೋಳಿಗಳೂ ಧ್ವಂಸವಾಗುತ್ತಿದ್ದುವು. 'ದೊಡ್ಡವರ' ಬಿಡಾರ ಅಲ್ಲಿರುವಷ್ಟು ದಿನವೂ ಗೌಡರ ಪ್ರೇಯಸಿ ಆ 'ದೊಡ್ಡವರ' ಪ್ರೇಯಸಿಯೂ ಆಗಿ ಅವರನ್ನು ಸಂತುಷ್ಟಗೊಳಿಸುತ್ತಿದ್ದಳು.

ನಮ್ಮ ಫೌಜದಾರರೂ ಮಹಾರಸಿಕರೆಂಬ ಸಮಾಚಾರ ಆ ಗೌಡನಿಗೂ ಗೊತ್ತೇ ಇದ್ದಿತು. ಸರಿ. ಫೌಜದಾರರ ಪ್ರೀತ್ಯರ್ಥವಾಗಿ 'ಗೌಡಸಾನಿ'ಯಲ್ಲಿ ಸಮಾರಾಧನೆಯ ಏರ್ಪಾಟಾಯಿತು. ಹಳ್ಳಿಯಲ್ಲಿ ತಮ್ಮ ಹೆಸರು ಕೆಡುವುದೆಂದು ಫೌಜದಾರರು ಮೊದಲು ಹಿಂಜರಿದರಾದರೂ ರಾತ್ರಿಯ ವಿಶಿಷ್ಟ ವ್ಯವಸ್ಥೆಯ ನೆನಪಾಗುತ್ತಲೂ ಅಲ್ಲಿಗೆ ಹೋಗಲು ಸಿದ್ಧರಾದರು. ಅದೆಲ್ಲ ವಿಷಯವನ್ನೂ ಗೋಪ್ಯವಾಗಿಡಬೇಕೆಂದು ಗೌಡನಿಗೆ ಕಟ್ಟಪ್ಪಣೆ ವಿಧಿಸಿ ಚಿಕ್ಕ ಗೌಡಸಾನಿಯ ಮನೆಗೆ ಹೋದರು. ಅವಳೂ ತುಂಬಾ ರಸಿಕ ಹೆಣ್ಣು. ಫೌಜದಾರರು ಬರುವುದಕ್ಕೆ ಮೊದಲೇ ಸೆರೆಯನ್ನೂ ಗ್ಲಾಸನ್ನೂ ತರಿಸಿ ಇಟ್ಟದ್ದಳು. ಅವಳ ಜಾಣ್ಮೆಯನ್ನು ಮೆಚ್ಚಿಕೊಂಡು ಫೌಜದಾರರು ಗೌಡರನ್ನು ಕುರಿತು,

"ಏನಡ್ಡಿಯಿಲ್ಲ. ಬಹಳ ಹುಷಾರ ಇದ್ದಾಳೆ. ಎಲ್ಲಿಂದ ದೊರಕಿಸಿದಿರಿ ಇಂಥಾ ರತ್ನವನ್ನು?" ಎಂದು ಕೇಳಿದರು.

ಫೌಜದಾರರು ತನ್ನನ್ನು ರತ್ನವೆಂದು ಕರೆದರಲ್ಲಾ! ಎಂದು ಹಿಗ್ಗು ಗೌಡಸಾನಿಗೆ. ಗ್ಲಾಸುಗಳಿಗೆ ಸೆರೆಯನ್ನು ಬಗ್ಗಿಸುತ್ತಿದ್ದ ಹಾಗೆ ಅವಳು ಕೊರಳು ಕೊಂಕಿಸಿ ಫೌಜದಾರರನ್ನು ಓರೆನೋಟದಿಂದ ದಿಟ್ಟಿಸತೊಡಗಿದಳು. ಫೌಜ ದಾರರಿಗೆ ಹುಚ್ಚು ಹಿಡಿದ ಹಾಗಾಯಿತು.

ಒಂದು ಬಾಟಲು ಬರಿದಾಗುತ್ತಲೂ, "ಇಷ್ಟು ಸಾಕೀಗ. ಮೊದಲು ಊಟವಾಗಲಿ," ಎಂದಳು ಗೌಡಸಾನಿ.

"ಹೌದೇನು ರಾವಸಾಹೇಬರೆ. ಹೊತ್ತಾಯಿತು. ಮೊದಲು ಊಟ ವಾಗಲಿ," ಎಂದು ಗೌಡನೂ ದನಿಗೂಡಿಸಿದ.

ಫೌಜದಾರರು ಎದ್ದರು. ಅವರಿಗೆ ಊಟಕ್ಕೆ ಕೂಡಿಸಿ ಗೌಡ ತನ್ನ ಮನೆಗೆ ಹೊರಟುನಿಂತ.

ಫೌಜದಾರರು ವಿಸ್ಮಿತರಾಗಿ,

"ಯಾಕೆ? ನೀವು ಉಣ್ಣುವದಿಲ್ಲವೇನು?" ಎಂದು ಕೇಳಿದರು.

ಅವನು ಕೈ ಹಿಸುಕಿಕೊಂಡ, ಹಿ ಹಿ ಎಂದು ಹಲ್ಲು ಕಿರಿದ, ಹೇಳಿದ:

"ನೀವು ತಗೊಳ್ರಿ ರಾವಸಾಹೇಬರೆ. ನೀವು ತಗೊಳ್ರಿ. ನಾನು ನಾಳೆ ಮುಂಜಾನೆ ಬಂದು ಭೆಟ್ಟಿಯಾಗುತೀನಿ."

ಗೌಡ ಶುದ್ಧ ಲಿಂಗವಂತನಲ್ಲವೆ ! ಅವನಿಗೆ ಕೋಳಿಯ ಊಟ ನಿಷಿದ್ಧ ವೆನ್ನಿಸಿತ್ತು. ಸೆರೆ ಮಾತ್ರ ನಡೆಯುತ್ತಿತ್ತು. ಅದೇನು ಊಟವಲ್ಲವಲ್ಲ !

ಈಶ್ವರಪ್ಪನವರೂ ಲಿಂಗವಂತರೇ ! ಅವರಿಗೆ ಮಾತ್ರ ಯಾವುದೂ ನಿಷಿದ್ಧವಾಗಿರಲಿಲ್ಲ.

ಅಂದು ಫೌಜದಾರರು ಊಟ ಮಾಡಿದರೋ ಇಲ್ಲವೋ ತಿಳಿಯದು ; ಗೌಡಸಾನಿಯನ್ನು ಮಾತ್ರ ತೆಕ್ಕೆಯಲ್ಲಿಟ್ಟುಕೊಂಡಿದ್ದರು.

ಗೌಡ – ಗೌಡಸಾನಿಯರಲ್ಲಿ ಆ ವಿಚಾರವಾಗಿ ಪರಸ್ಪರ ಸಹಾಯಕ ಒಪ್ಪಂದವೊಂದು ನಡೆದ ಹಾಗಿತ್ತು. ಗೌಡರ ಮೇಲಿನ ಅಧಿಕಾರಿಗಳು ಬಂದು ಚಪಲ ವ್ಯಕ್ತಗೊಳಿಸಿದಾಗ ಗೌಡಸಾನಿ ಅವರ ಸೇವೆಗೆ ಸಿದ್ಧಳಾಗಬೇಕಾಗುತ್ತಿತ್ತು. ಇಂಥ ಅಧಿಕಾರಿಗಳಿಗೆ ಹಳ್ಳಿಗಳಲ್ಲಿ ಹೆಣ್ಣು ಸಿಗದಿದ್ದರೆ ಅವರು ಗೌಡರ ಬಗ್ಗೆ ಸಿಟ್ಟುಮಾಡಿಕೊಂಡು ಅವರ ವಿರುದ್ಧ ಷರಾ ಬರೆದು ತೊಂದರೆ ಕೊಡುತ್ತಿದ್ದರು. ಆ ತೊಂದರೆ ತಪ್ಪಿಸಿಕೊಳ್ಳಲು ಗೌಡಸಾನಿಯಿಂದ ತುಂಬಾ ಸಹಾಯವಾಗುತ್ತಿತ್ತು ಗೌಡನಿಗೆ. ಅವಳ ಮೂಲಕ ಆ ಅಧಿಕಾರಿಗಳ ಜುಟ್ಟನ್ನೇ ತನ್ನ ಕೈಯಲ್ಲಿಟ್ಟುಕೊಳ್ಳಲು ಅವನು ಸಮರ್ಥನಾಗಿದ್ದ. ಹಳ್ಳಿಯಲ್ಲಿ ಎಂಥ ಬಡಿದಾಟ ಹೊಡೆದಾಟ ನಡೆಯಲಿ, ತಲೆಗಳು ಬೀಳಲಿ, ಅಧಿಕಾರಿಗಳ ಸಹಾಯದಿಂದ ಆ ಪ್ರಕರಣಗಳನ್ನೆಲ್ಲ ಅಲ್ಲಿಯೇ ಮುಗಿಸಿಬಿಡುತ್ತಿದ್ದ ಗೌಡ, ಎಲ್ಲಾ ಪ್ರಕರಣಗಳಲ್ಲೂ ಯಥೇಚ್ಛವಾಗಿ ಲಂಚ ಗಿಟ್ಟಿಸುತ್ತಿದ್ದ. ಸ್ವಯಂ ಗೌಡಸಾನಿಯೇ ಇಂಥ ಅನೇಕ ಪ್ರಕರಣಗಳನ್ನು ಮುಗಿಸಿಬಿಟ್ಟಿದ್ದಳು ; ತನ್ನ ಮುಪ್ಪಿನ ಕಾಲಕ್ಕೆಂದು ಸಾಕಷ್ಟು ಹಣವನ್ನೂ ಕೂಡಿಸಿಟ್ಟುಕೊಂಡಿದ್ದಳು.

ನಮ್ಮ ಫೌಜದಾರರನ್ನೂ ಹೀಗೇ, ಗೌಡಸಾನಿಯ ಸಹವಾಸಕ್ಕೆ ತೊಡಗಿಸಿ ಗೌಡ ನಾಲ್ಕಾರು ಪ್ರಕರಣಗಳಲ್ಲಿ ಐದಾರು ನೂರು ರೂಪಾಯಿ ಎತ್ತಿದ. ಆ ಹಣದಲ್ಲಿ ಸ್ವಲ್ಪ ಭಾಗ ಫೌಜದಾರರ ಸರಬರಾಯಿಗಾಗಿ ವೆಚ್ಚವಾಯಿತು.

ಅಪ್ಪಣ್ಣನಿಗೆ ಹಣದಾಸೆಯೇ ಇರಲಿಲ್ಲ. ಅವನಿಗೆ ಬೇಕಾದುದು ದಿನವೊಂದಕ್ಕೆ ಮೂರು ತಂಬಿಗೆ ಹಾಲು. ಎರಡಾಣೆಗೊಂದು ತಂಬಿಗೆ ಹಾಲು ಸಿಗುತ್ತಿತ್ತು ಕಟ್ಟನಕೆರೆಯಲ್ಲಿ. ಆರಾಣೆ ಚೆಲ್ಲಿ ಹಾಲು ಕೊಂಡು ಕುಡಿದು, ಯಾರ ಹಂಗೂ ಇಲ್ಲದೆ ರಾಜನಂತೆ ಸುಖವಾಗಿರುತ್ತಿದ್ದ ಅಪ್ಪಣ್ಣ. ಫೌಜದಾರರ

ವರ್ತನೆಯನ್ನು ಆತ ಲಕ್ಷ್ಯಕ್ಕೇ ತಂದುಕೊಳ್ಳುತ್ತಿರಲಿಲ್ಲ. 'ಅವರು ಎಲ್ಲಾದರೂ ಹಾಳಾಗಿ ಹೋದರೂ ನನಗೇನು!' ಎಂದುಕೊಂಡು ತನ್ನ ಪಾಡಿಗೆ ತಾನು ಸ್ವಸ್ಥವಾಗಿರುತ್ತಿದ್ದ.

ಫೌಜದಾರರು ಹಗಲುಹೊತ್ತು ಬೇರೆ ಹಳ್ಳಿಗಳಿಗೆ ಹೋಗಿ ಸಂಜೆಯಾಗುವುದರೊಳಗಾಗಿ ಕಟ್ಟನಕೆರೆಗೆ ಹಿಂದಿರುಗಿ ಬರುತ್ತಿದ್ದರು. ಅವರ ದಿನಚರಿಯ ಪುಸ್ತಕದಲ್ಲಿ ಪ್ರತಿನಿತ್ಯವೂ ಬೇರೆ ಬೇರೆ ಹಳ್ಳಿಗಳಲ್ಲಿ ಬಿಡಾರ ಮಾಡುತ್ತಿದ್ದ ಹಾಗೆ ಉಲ್ಲೇಖವಾಗುತ್ತಿದ್ದಿತಾದರೂ ಅವರ ಇರುಳು ಕಳೆಯುತ್ತಿದ್ದುದು ಮಾತ್ರ ಆ ಗೌಡಸಾನಿಯಲ್ಲಿಯೆ. ಆರೇಳು ದಿನ ಕಳೆದುಹೋದರೂ ಅವರು ಕಟ್ಟನಕೆರೆಯನ್ನು ಬಿಟ್ಟು ಹೊರಡುವ ಲಕ್ಷಣ ಕಾಣಿಸಲಿಲ್ಲ.

ಇದೆಲ್ಲವೂ ನನಗೆ ಗೊತ್ತಾದುದು ಅಪ್ಪಣ್ಣನಿಂದ. ಅವನಿಂದ ಪ್ರತಿ ದಿನವೂ ವಿವರವಾದ ವರದಿ ಬರುತ್ತಿತ್ತು ನನಗೆ.

ಗೌಡಸಾನಿಯ ಮನೆಯಲ್ಲಿ ನಡೆಯುತ್ತಿದ್ದ ಕೋಳಿಯೂಟದ ಕಥೆ ಕೇಳಿ ನಮ್ಮ ಪೋಲೀಸರೆಲ್ಲರೂ ಕೇಕೆಹಾಕಿ ನಗುತ್ತಿದ್ದರು.

ಈ ದಿನಗಳಲ್ಲಿ ನಾನು ಫೌಜದಾರರ ಮನೆಗೆ ಒಂದು ಬಾರಿಯೂ ಹೋಗಲಿಲ್ಲ. ಅವರ ಹೆಂಡತಿಯೂ ತಾನಾಗಿಯೇ ನನ್ನನ್ನು ಕರೆಯಿಸುವಂತಿರಲಿಲ್ಲ.

ಅವಳ ನನ್ನ ಸಂಬಂಧ ಅಲ್ಲಿಗೇ ಕೊನೆಗಂಡಹಾಗಾಗಿತ್ತು.

ನನ್ನ ವಿಚಾರವಾಗಿ ಅವಳು ಏನು ಯೋಚನೆ ಮಾಡುತ್ತಿದ್ದಳೋ?

ಯಾರು ಬಲ್ಲರು!

೨೭

ಸುಮಿತ್ರಾ

ಕಾಲವಾಡದಲ್ಲಿ ನನಗೆ ಕೆಲಸವೇನೂ ಇರಲಿಲ್ಲ. ಕಚೇರಿಗೆ ಹೋಗಿ ಕುಳಿತು ಕಾರಕೂನರೊಡನೆ ಹರಟುತ್ತಿದ್ದೆ. ಅದೂ ಬೇಸರವಾದಾಗ ಎದ್ದು ಕೊಠಡಿಗೆ ಬಂದು ಸಿಗರೇಟು ಎಳೆಯುತ್ತಾ 'ಟೈಮ್ಸ್' ಓದುತ್ತಾ ಬಿದ್ದುಕೊಳ್ಳುತ್ತಿದ್ದೆ. 'ಸೋಮಾರಿಯ ಮನಸ್ಸೆಂದರೆ ಸೈತಾನನ ಕಾರಖಾನೆ' ಎಂಬ ಗಾದೆಯ ಮಾತಿದೆಯಲ್ಲ ಇಂಗ್ಲಿಷಿನಲ್ಲಿ. ಅದು ನೂರಕ್ಕೆ ನೂರರಷ್ಟು ನಿಜ. ನನ್ನ ಮನಸ್ಸೂ ಆಗ ಸೈತಾನನ ರಂಗಮಂಚದಂತಾಗಿತ್ತು. ಬೇಸರವನ್ನು ಹೋಗಲಾಡಿಸಲು ಯಾರದಾದರೂ ಜೊತೆ ಬೇಕೆನ್ನಿಸುತ್ತಿತ್ತು. ಜೊತೆಯೆಂದರೆ ಅಂಥಿಂಥ ಜೊತೆಯಲ್ಲ – ಹೆಣ್ಣಿನ ಜೊತೆ....

ಉಜ್ಜಪ್ಪನವರ ಕುಮಾರಿ ಸುಮಿತ್ರೆಯನ್ನು ನನಗೆ ದೊರಕಿಸಿಕೊಟ್ಟರೆ ಒಂದುನೂರು ರೂಪಾಯಿ ಕೊಡುವುದಾಗಿ ಫೌಜದಾರರ ಅಡುಗೆಯಾಳು ಚೆನ್ನನಿಗೆ ನಾನು ಹೇಳಿದ್ದೆನಷ್ಟೆ. ಅಂದಿನಿಂದ ಅವನೂ ಆ ಯತ್ನದಲ್ಲೇ ತೊಡಗಿಕೊಂಡಿದ್ದ. ನಾನು ಅವಳನ್ನು ಬಯಸುತ್ತಿದ್ದುದು ತಿಳಿದು ಬಂದಾಗ ಅವಳಿಗೂ ನನ್ನತ್ತ ಮನಸ್ಸು ತಿರುಗಿತೋ ಏನೋ. ನಾನಿನ್ನೂ ಯುವಕ. ನನಗೂ ಅವಳಿಗೂ ಒಳ್ಳೆಯ ಜೊತೆಯಾಗುವಂತಿತ್ತು. ನನ್ನನ್ನು ಕಾಣಲು ಒಪ್ಪಿ

ಕೊಂಡಳು ಸುಮಿತ್ರಾ. ಅವರ ಮನೆಗೂ ನನ್ನ ಕೊಠಡಿಗೂ ಅಷ್ಟು ದೂರ ವೇನೂ ಇರಲಿಲ್ಲ.

"ಇಲ್ಲಿಗೇ ಕರಕೊಂಡು ಬಂದುಬಿಡುತ್ತೀಯಾ?" ಎಂದು ಚೆನ್ನನಿಗೆ ಸೂಚಿಸಿದೆ.

"ನಾನಾಗಲೇ ಹೇಳಿದ್ದೀನಿ ಅವಳಿಗೆ. ಇಲ್ಲೇ ಅವಳ ಗೆಳತಿಯ ಮನೆಯೊಂದು ಅದೆಯಂತೆ. ಅವಳನ್ನು ಭೆಟ್ಟಿಯಾಗಲು ಬರುವ ನೆವ ಮಾಡಿ ಕೊಂಡು ಇಲ್ಲಿಗೆ ಬರುತಾಳೆ," ಎಂದ ಚೆನ್ನ.

"ನನ್ನ ರೂಪಾಯಿ ಯಾವಾಗ ಕೊಡುತೀರಿ?"

"ನಾನೇನು ಓಡಿಹೋಗುತ್ತೇನೇನು ಅವಳನ್ನು ಕಟ್ಟಿಕೊಂಡು? ಒಂದೆರಡು ದಿವಸ ತಡೆ," ಎಂದು ನಾನು ಅವನನ್ನು ಗದರಿಸಿಕೊಂಡೆ.

ಒಂದು ದಿನ ಉಜ್ಜಪ್ಪನವರು ಗೊಬ್ಬೂರಿಗೆ ಹೋದ ಸಂಧಿಯನ್ನು ಸಾಧಿಸಿ, ಗೆಳತಿಯನ್ನು ಕಂಡುಬರುವುದಾಗಿ ತನ್ನ ತಾಯಿಗೆ ಹೇಳಿ ಸುಮಿತ್ರಾ ನನ್ನ ಕೊಠಡಿಗೆ ಬಂದಳು. ಅದೇ ಆಗ ಕತ್ತಲೆ ಪಸರಿಸುತ್ತಿತ್ತು. ಕಾಲವಾಡದ ಬೀದಿಗಳಲ್ಲಿ ದೀಪದ ಏರ್ಪಾಟೂ ಇರಲಿಲ್ಲ. ಕತ್ತಲೆಯಲ್ಲಿ ನಡೆದು ಬಂದ ಸುಮಿತ್ರಳನ್ನು ಯಾರೂ ಗುರುತಿಸುವಂತಿರಲಿಲ್ಲ.

ನಾನೇನು ಅವಳಿಗೆ ಅಪರಿಚಿತನಾಗಿರಲಿಲ್ಲ. ಎಷ್ಟೋ ಸಾರಿ ಅವರ ಮನೆಗೆ ಹೋಗಿದ್ದಾಗ ಅವಳನ್ನೂ ಮಾತನಾಡಿಸಿದ್ದುದಿತ್ತು. ಅವಳೂ ನನ್ನೊಡನೆ ಸಂಕೋಚವಿಲ್ಲದೆ ಮಾತನಾಡುತ್ತಿದ್ದಳು. ಆದರೆ ಅಂದಿನಂತೆ ಏಕಾಂತದಲ್ಲಿ ನಾವು ಆ ಮೊದಲು ಸಂಧಿಸಿರಲಿಲ್ಲ. ಇಬ್ಬರಿಗೂ ಸ್ವಲ್ಪ ಹೆದರಿಕೆಯೇ. ಅವಳ ಎದೆಯಂತೂ ಡವಡವನೆ ಬಡೆದುಕೊಳ್ಳುತ್ತಿತ್ತು.

"ಯಾರಾದರೂ ನೋಡಿದರೇನು ಗತಿ!" ಅಂಜಿಕೆಯಿಂದ ನಡುಗುವ ಧ್ವನಿಯಲ್ಲಿ ಅವಳೆಂದಳು.

"ಯಾರೂ ನೋಡುವದಿಲ್ಲ, ಏನಿಲ್ಲ. ಅಂಜಬೇಡ," ಎಂದು ನಾನು ಅವಳಲ್ಲಿ ಧೈರ್ಯ ತುಂಬಲೆತ್ನಿಸಿದೆ.

"ನಿಮ್ಮ ಕೋಣೆಗೆ ಯಾರಾದರೂ ಬಂದರೆ?"

"ಬಾಗಿಲು ಹಾಕಿದ್ದಾಗ ಯಾರೂ ನನ್ನನ್ನೆಬ್ಬಿಸುವ ಗೋಜಿಗೆ ಹೋಗು

ವದಿಲ್ಲ. ಮಲಗಿರಬಹುದೆಂದು ತಿಳಿದು ಹೋಗಿಬಿಡುತ್ತಾರೆ. ಚಿಂತೆ ಮಾಡ ಬೇಡ," ಎಂದು ಹೇಳುತ್ತಾ ಅವಳ ತಲೆಗೂದಲ ಮೇಲೆ ಕೈಯಾಡಿಸಿದೆ.

ಒಂದು ಗಂಟೆಯಷ್ಟು ಹೊತ್ತು ನನ್ನೊಡನಿದ್ದಳು ಸುಮಿತ್ರಾ. ತನ್ನ ದಾರುಣ ಕಥೆಯನ್ನೆಲ್ಲಾ ಬಣ್ಣಿಸಿ ಹೇಳಿದಳು.

"ನಿಜವಾಗಿ ನನ್ನ ಗಂಡ ಒಳ್ಳೆಯವರೇ. ತಪ್ಪಾದದ್ದು ನಮ್ಮಿಂದಲೇ."

"ಸರಿ. ಅವರು ಒಳ್ಳೆಯವರೇ ಇರಬಹುದು. ಆದರೆ ಒಂದು ಸಣ್ಣ ತಪ್ಪಿಗಾಗಿ ನಿನ್ನಂಥ ಹೆಂಡತಿಯನ್ನು ಇಲ್ಲೇ ಬಿಟ್ಟು ಇನ್ನೊಬ್ಬಳನ್ನು ಮದುವೆ ಯಾದದ್ದು ಒಳ್ಳೆಯತನ ಅಂತ ನನಗೇನೂ ಅನಿಸುವದಿಲ್ಲ."

"ನನಗಾದರೂ ಎಲ್ಲಿ ಅನಿಸುತ್ತದೆ? ಅದೊಂದು ದೊಡ್ಡ ತಪ್ಪು ಮಾಡಿದ ರವರು. ಅವರಿಗೆ ನನಗಿಂತಲೂ ಬಂಗಾರವೇ ಹೆಚ್ಚಾಯಿತು."

"ಅದೂ ಸಹಜವೇ. ಈಗಿನ ಕಾಲದಲ್ಲಿ ಮನುಷ್ಯನಿಗಿಂತ ಬಂಗಾರಕ್ಕೇ ಹೆಚ್ಚು ಬೆಲೆ ಎಲ್ಲಾ ಕಡೆಗೂ."

"ನಮ್ಮ ತಂದೆಯವರೂ ನನ್ನ ಒಡವೆಗಳನ್ನು ಮುಟ್ಟದಿದ್ದಿದ್ದರೆ ನೆಟ್ಟ ಗಾಗುತ್ತಿತ್ತು. ವ್ಯಾಪಾರದಲ್ಲಿ ಲಾಭವಾದೀತು, ಬಿಡಿಸಿಕೊಂಡು ಬಂದ ರಾಯಿತು ಅಂತ ಅವನ್ನು ಒತ್ತೆಯಿಟ್ಟು ಸಾಲ ತಂದರು. ಲಾಭವೂ ಆಗಲಿಲ್ಲ, ಒಡವೆಗಳೂ ಬರಲಿಲ್ಲ. ಎಲ್ಲಾ ಹೋಯಿತು."

"ಮನೆಯ ಜಮೀನಿರಬೇಕಲ್ಲ ಸುಮಿತ್ರಾ?"

"ಇವೆ. ಅವೂ ನಮ್ಮ ಕೈಯಲ್ಲಿಲ್ಲ. ಒಬ್ಬ ರೈತನ ಕೈಯಲ್ಲಿವೆ. ಅವನೂ ಬಹಳ ತಂಟಿಕೋರ. ತಂದೆಯವರು ಅವನ ಹತ್ತರವೂ ಎರಡು ಸಾವಿರ ಸಾಲ ಮಾಡಿಕೊಂಡಿದ್ದಾರೆ– ವ್ಯಾಪಾರಕ್ಕಾಗಿ. ಅದರ ಬಡ್ಡಿ ಕೊಡುವದಕ್ಕೆ ಕೂಡಾ ಆಗಲಿಲ್ಲ."

"ಆ ರೈತ ನಿಮಗೆ ಪಾಳೆ ಕೊಡುವದಿಲ್ಲವೇನು?"

"ಎಲ್ಲಿಯ ಪಾಳೆ ಬಿಡಿರಿ. ಏನೋ ಸ್ವಲ್ಪ ಕಾಳು ಕೊಡುತಾನೆ. ಜಮೀನಿನ ಸ್ವಲ್ಪ ಭಾಗ ಮಾರಿ ನನ್ನ ಒಡವೆಗಳನ್ನು ಬಿಡಿಸಿ ತಂದು ನನ್ನನ್ನು ಗಂಡನ ಮನೆಗೆ ಕಳಿಸಬೇಕೆಂತ ಅಪ್ಪ ವಿಚಾರ ಮಾಡಿದ್ದರು. ಅದೂ ಆಗಲಿಲ್ಲ. ಜಮೀನುಗಳೆಲ್ಲಾ ಆ ರೈತನಲ್ಲಿ ಒತ್ತೆ ಇವೆಯಲ್ಲ. ತನ್ನ ಅಸಲು ಬಡ್ಡಿ ಮುಟ್ಟು

ದವರೆಗೂ ಹೊಲ ಬಿಡುವದಿಲ್ಲ, ಮಾರುವದಕ್ಕೂ ಕೊಡುವದಿಲ್ಲ ಅಂತ ಹಟ ಹಿಡಿದ. ಕೊಳ್ಳುವವರೂ ಆ ರೈತನಿಗೆ ಅಂಜಿ ಸುಮ್ಮನಾದರು. ಯಾರಾದರೂ ನಮ್ಮಿಂದ ಹೊಲ ಕೊಂಡರೆ ಅವರನ್ನು ತೀರಿಸಿಬಿಡುತೀನಿ ಅಂತ ಅವ ಹೆದರಿಕೆ ಹಾಕಿದ್ದಾನೆ. ಮೊದಲು ಏನಾದರೂಮಾಡಿ ಆ ರೈತನನ್ನು ತಣ್ಣಗೆ ಮಾಡ ಬೇಕಾಗಿದೆ. ಅದಕ್ಕೇ ನಮ್ಮ ಅವ್ವ ಫೌಜದಾರರ ಹೆಂಡತಿಯ ಹತ್ತರ ಇದನ್ನೆಲ್ಲಾ ಹೇಳಿಕೊಂಡು ಫೌಜದಾರರ ಸಹಾಯ ಕೇಳಿದ್ದಳು."

"ಸಹಾಯ ಮಾಡುತ್ತೀನಂತ ಹೇಳಿ ಅವರು ನಿನ್ನ ಮೇಲೆ ಬಲೆ ಬೀಸು ತ್ತಿದ್ದರು, ಹೌದಲ್ಲೋ ?"

ಸುಮಿತ್ರಾ ಒಂದೆರಡು ನಿಮಿಷ ಮೌನವಾಗಿದ್ದಳು.

"ನನಗೆ ಬಹಳ ಆಶೆ ತೋರಿಸಿದರು. ಅದೇನು ಸುಳ್ಳಲ್ಲ. ಆದರೂ ನಾನೇನೂ ಅವರಿಗೆ ಮರುಳಾಗಲಿಲ್ಲ. ಅವರ ಮಾರಿ ನೋಡಿದರೆ ಹೇಸಿಕೆ ಯಾಗುತದೆ, ನನಗೆ."

ಕೆಲದಿನಗಳ ಹಿಂದಿನ ಒಂದು ರಾತ್ರಿ ಅವಳು ಫೌಜದಾರರ ಬಳಿ ಹೋಗುವ ಏರ್ಪಾಟು ನಡೆದ ವಿಚಾರವಾಗಿ ನಾನು ಅವಳೆದುರಿಗೆ ಪ್ರಸ್ತಾ ಪಿಸಲಿಲ್ಲ. ಸುಮ್ಮನೆ ಯಾಕೆ ನೋಯಿಸುವುದು ಅವಳ ಮನಸ್ಸನ್ನು ?

"ನಿಮ್ಮ ಮುಂದೆ ಖರೆ ಹೇಳುತೀನಿ. ಏನಾದರೂ ಮಾಡಿ ಗಂಡನ ಮನೆಗೆ ಹೋಗಿಬಿಡಬೇಕಂತ ನಾ ಗಟ್ಟಿ ಮಾಡೀನಿ. ಸವತಿಯ ಚಿಂತೆಯೇನೂ ನನಗಿಲ್ಲ. ಅವಳು ಒಂದೆರಡು ಬಯ್ದರೂ ಬಯ್ಸಿಕೊಂಡು ಒದ್ದರೂ ಒದೆಸಿ ಕೊಂಡು ಇರಬಲ್ಲೆ. ನೀವಾದರೂ ಏನಾದರೂ ಹಂಚಿಕೆ ಹುಡುಕಿ ನನ್ನ ಆಸೆಯನ್ನು ನಡಸಿಕೊಡಬೇಕು. ನಿಮಗೆ ಫೌಜದಾರರು ಗೌಡರು ಊರವರು ಎಲ್ಲರ ಮೇಲೂ ವರ್ಚಸ್ಸು ಇದೆಯಲ್ಲ; ನನಗಾಗಿ ಪ್ರಯತ್ನಮಾಡಿರಿ. ನಮ್ಮ ತಂದೆಯವರ ಒಂದು ಹೊಲ ಮಾರಾಟವಾದರೆ ಸಾಕು. ಆ ರೈತನನ್ನು ನೀವು ಒಪ್ಪಿಸಿದರೆ ಅದು ಸುಲಭವಾಗುತ್ತದೆ. ಅದಕ್ಕಾಗೇ ನಾನು ನಿಮ್ಮ ಕಾಲು ಹಿಡಿದು ಕೇಳಿಕೊಳ್ಳಲೆಂಪು ಇಲ್ಲಿಯವರೆಗೂ ಬಂದದ್ದು."

"ನಿಜವಾಗಿ ಅದಕ್ಕಾಗೇ ಬಂದಿದ್ದೀಯಾ? ಬೇರೇನೂ ಉದ್ದೇಶ ವಿರಲಿಲ್ಲವೋ ?"

"ದೇವರಾಣೆ ಮಾಡಿ ಹೇಳುತ್ತೀನಿ. ಇನ್ನೇನೂ ಇರಲಿಲ್ಲ."

“ಅಂದರೆ....ಅಂದರೆ....” ನಾನು ಉಗುಳು ನುಂಗಿದೆ. ನನ್ನ ಹೇಯ ವರ್ತನೆಯ ಬಗ್ಗೆ ನನಗೇ ನಾಚಿಕೆಯಾಗಿತ್ತು. ನನ್ನ ಸಂಗಸುಖ ಬಯಸಿ ಅವಳೇನೂ ಬಂದಿರಲಿಲ್ಲ; ನಾನು ಒಳ್ಳೆಯವನೆಂದು ತಿಳಿದು, ನನ್ನಿಂದ ಸಹಾಯ ಪಡೆಯಲೆಂದು ಬಂದಿದ್ದಳು. ಅಂಥವಳನ್ನು ಕಾಮುಕನಾದ ನಾನು ಬಯಸುತ್ತಿದ್ದೆ. ಥೂ! ಥೂ! ಎಂಥ ಅಧಃಪತನ ನನ್ನದು....

“ನಾನು ನಿನ್ನನ್ನು ತಪ್ಪಾಗಿ ತಿಳಿದುಕೊಂಡಿದ್ದೆ ಸುಮಿತ್ರಾ. ನನ್ನನ್ನು ಕ್ಷಮಿಸು,” ಎಂದು ಹೇಳಿ ಅವಳನ್ನು ತಕ್ಷಣ ಅಲ್ಲಿಂದ ಹೊರಡಿಸಿ ಮನೆಗೆ ಕಳುಹಿಸಿದೆ.

ಮರುದಿನ ಬೆಳಿಗ್ಗೆ ಅವರ ಮನೆಗೆ ಹೋಗಿ ಸುಮಿತ್ರೆಯ ತಾಯಿಯನ್ನು ಕಂಡೆ. ಉಜ್ಜಪ್ಪನವರಿನ್ನೂ ಊರಿಗೆ ಬಂದಿರಲಿಲ್ಲ.

ಆ ಮಾತು ಈ ಮಾತು ಆಡುತ್ತಾ ಜಮೀನುಗಳ ಪ್ರಸ್ತಾಪವೆತ್ತಿದೆ. ಸುಮಿತ್ರೆಯ ತಾಯಿ ಹೇಳಿದಳು:

“ಒಂದು ಹೊಲವನ್ನು ಎಂಟುಸಾವಿರ ರೂಪಾಯಿಗೆ ಒಬ್ಬರು ಕೇಳುತ್ತಿದ್ದಾರೆ. ಮೊದಲು ಆ ರೈತನಿಗೆ ಮೂರು ಸಾವಿರ ಕೊಟ್ಟು ಬಿಟ್ಟು ಪಾವತಿ ತಗೊಂಡರಾಯಿತು, ಹೊಲ ಮಾರಲು ಬರುತ್ತದೆ. ಉಳಿದ ಐದು ಸಾವಿರ ರೂಪಾಯಿಗಳಲ್ಲಿ ಸುಮಿತ್ರೆಯ ಒಡವೆ ಬಿಡಿಸಿ ತಂದು ಅವಳನ್ನು ಗಂಡನ ಮನೆಗೆ ಕಳಿಸಬಹುದು. ಆದರೆ, ಮೊದಲು ಮೂರು ಸಾವಿರ ರೂಪಾಯಿ ಬೇಕಲ್ಲಾ? ಅವನ್ನು ತರುವುದು ಎಲ್ಲಿಂದ ಅಂತ ಸುಮ್ಮನಿದ್ದೀರಿ.”

“ದೇವರಿದ್ದಾನೆ. ನೀವೇನೂ ಚಿಂತೆ ಮಾಡಬೇಡಿರಿ,” ಎಂದು ಅವರನ್ನು ಸಮಾಧಾನಗೊಳಿಸಿ ನೇರವಾಗಿ ಗೌಡರ ಮನೆಗೆ ಬಂದೆ. ಕಾಲವಾಡದಲೆಲ್ಲ ದೊಡ್ಡ ಧನಿಕರೆಂದರೆ ಅವರೇ. ನನ್ನ ಬೆಗ್ಗೆ ಅವರಲ್ಲಿ ತುಂಬಾ ವಿಶ್ವಾಸ. ನಾನೊಂದು ಮಾತು ಕೇಳಿದರೆ ಹತ್ತು ಸಾವಿರ ರೂಪಾಯಿ ಕೊಡುವುದಕ್ಕೂ ಸಿದ್ಧರಾಗುವ ಹಾಗಿದ್ದರು. ಅವರಿಗೆ ಹಣದ ಕೊರತೆಯೂ ಇರಲಿಲ್ಲ. ಇನ್ನೂರು ಕೂರಿಗೆ ಜಮೀನು. ಗೋದಿ, ಹತ್ತಿ, ಸೇಂಗಾ, ಕುಸುಬಿ, ಜೋಳ ಎಲ್ಲವನ್ನೂ ಬೆಳೆಯುತ್ತಿದ್ದರು. ವರ್ಷವೊಂದಕ್ಕೆ ಇಪ್ಪತ್ತು – ಇಪ್ಪತ್ತೈದು ಸಾವಿರದ ಉತ್ಪನ್ನ ಅವರದು. ಅಂಥ ಕುಳ ಹತ್ತುಸಾವಿರ ಕೊಡುವುದೆಂದರೇನು ದೊಡ್ಡ ವಿಷಯವಲ್ಲ.

ಒಂದು ತಿಂಗಳಿನ ಮಟ್ಟಿಗೆ ಮೂರು ಸಾವಿರ ರೂಪಾಯಿ ಕೈಗಡ ಕೊಡ ಬೇಕೆಂದು ನಾನು ಕೇಳುವುದೇ ತಡ, ಗೌಡರು ಮುಗುಳ್ನಗುತ್ತಾ,

"ಅದಕ್ಕೇನ್ರೀ! ಇನ್ನೂ ಮೂರು ಸಾವಿರ ಬೇಕಾದರೂ ತಗೊಳ್ಳಿ. ಎಲ್ಲಾ ನಿಮ್ಮದೇ," ಎಂದರು.

ಒಂದು ನಿಮಿಷ ನನ್ನ ಬಾಯಿಯಿಂದ ಮಾತೇ ಹೊರಡಲಿಲ್ಲ.

ಅವರು ಸಲಿಗೆಯ ಧ್ವನಿಯಲ್ಲಿ ಕೇಳಿದರು:

"ಏನು, ಒಮ್ಮಿಂದೊಮ್ಮೆಲೆ ಬೇಕಾಯಿತು? ಹೀಗೆ ಕೇಳುತೀನಿ ಅಂತ ಏನೂ ತಿಳಕೊಳ್ಳಬೇಡಿರಿ ಮತ್ತೆ. ಸುಮ್ಮನೆ ಕೇಳಿದೆ."

ನಿಜವಾದ ಕಾರಣವನ್ನು ನಾನು ತಿಳಿಸಲಿಲ್ಲ.

"ನಮ್ಮೂರಲ್ಲಿ ಎಂಟು ಸಾವಿರಕ್ಕೊಂದು ಚಲೋ ಹೊಲ ಸಿಗುವಂತಿದೆ. ನನ್ನ ಹತ್ತರ ಈಗ ಐದು ಸಾವಿರ ಮಾತ್ರ ಇದೆ. ಈಗ ನಾನು ಬಿಟ್ಟರೆ ಬೇರೆಯವರಿಗೆ ಹೋಗುತ್ತದೆ. ಅದಕ್ಕೇ ನಿಮ್ಮ ಹತ್ತರ ಹಣ ಕೇಳಿದ್ದು. ಖರೀದಿಗೆ ನಾನೂ ನೀವೂ ಕೂಡೇ ಹೋಗೋಣ. ಖರೀದಿ ಪತ್ರವಾದ ದಿನವೇ ನಿಮಗೇ ಅದನ್ನು ಆಧಾರ ಬರಕೊಡುತ್ತೇನೆ."

ನನ್ನ ಮಾತಿನಿಂದಾಗಿ ಗೌಡರಿಗೆ ಕೊಂಚ ಕೋಪ ಬಂದಂತೆ ಕಾಣಿಸಿತು.

"ನೀವು ನನ್ನ ನಂಬಿಕೆಯ ಗೆಳೆಯರು ಅಂತ ರೂಪಾಯಿ ಕೊಡಲು ತಯಾರಾಗಿದ್ದೇನೆ. ಅವನ್ನು ನೀವು ತಿರುಗಿ ಕೊಡದಿದ್ದರೂ ಚಿಂತೆಯಿಲ್ಲ. ಆಧಾರ ಗೀಧಾರ ಅಂತ ಮಾತಾಡಿ ನನ್ನ ಅವಮಾನ ಮಾಡಬಾರದು ನೀವು."

"ಸಿಟ್ಟಾಗಬೇಡಿರಿ ಗೌಡರೇ. ನಿಮ್ಮ ದೊಡ್ಡ ಗುಣ ಗೊತ್ತಿಲ್ಲವೇನು? ಸುಮ್ಮನೆ ಮಾತಿಗಂದೆ. ಏನೂ ತಿಳಕೊಳ್ಳಬೇಡಿರಿ."

ಒಂದೆರಡು ನಿಮಿಷ ಮೌನ.

ಮತ್ತೆ ನಾನೇ ಮಾತನಾಡಿದೆ:

"ಉಜ್ಜಪ್ಪನವರ ಹೊಲವಿದೆಯಲ್ಲಾ, ಕೆರೆಯ ಕೆಳಗಿನದು, ಅದಕ್ಕೆ ಎಷ್ಟಾದೀತು ಬೆಲೆ?"

"ಸುಮಾರು ಹತ್ತು ಸಾವಿರವಾದೀತು. ಯಾಕೆ?"

"ಅದನ್ನೇ ತಗೊಳ್ಳಿರಿ ಅಂತ ಗಂಟುಬಿದ್ದಾರೆ ಉಜ್ಜಪ್ಪನವರು."

"ಛೆ. ಛೆ. ಅದಕ್ಕೆ ಮಾತ್ರ ಕೈಹಾಕಬೇಡಿರಿ. ಆ ಹೊಲ ಕೊಳ್ಳುವ

ವಿಚಾರ ಮಾಡುವದೆಂದರೆ ಹಾವಿನ ಹುತ್ತಕ್ಕೆ ಕೈಹಾಕಿದ ಹಾಗೆ. ಆ ರೈತ ಭಯಂಕರ ಮನುಷ್ಯ. ಖೂನಿ ಮಾಡುವದಕ್ಕೂ ಹೇಸುವವನಲ್ಲ ಅವ. ನಾನೇ ಆ ಹೊಲ ಖರೀದಿ ಮಾಡಬೇಕೆಂತ ವಿಚಾರವಿತ್ತು. ಅವನ ಸಹವಾಸ ಬೇಡ ಅಂತಲೇ ಬಿಟ್ಟುಬಿಟ್ಟೆ."

"ನೋಡೋಣ. ನಾನು ಅವನನ್ನು ಕರೆಯಿಸಿಕೊಳ್ಳುತ್ತೇನೆ. ಅವನ ಅಂಜಿಕೆಯೇನೂ ಬೇಡ. ಪ್ರಸಂಗ ಬಂದರೆ ನನಗೆ ಇನ್ನೂ ಐದು ಸಾವಿರ ಕೊಡಲಿಕ್ಕೆ ನೀವು ತಯಾರಿರಬೇಕು."

"ನಿಮಗೆ ಬೇಕಾದಷ್ಟು ತಗೊಳ್ಳಿರಿ. ಕೀಲೀ ಕೈ ನಿಮ್ಮ ಕೈಗೇ ಕೊಟ್ಟು ಬಿಡುತೇನೆ" ಗೌಡರು ನಗುತ್ತಾ ಹೇಳಿದರು.

ಸಾಯಂಕಾಲ ಉಜ್ಜಪ್ಪನವರನ್ನು ಕಂಡು,

"ಆ ಹೊಲವನ್ನು ನಾನೇ ಕೊಳ್ಳಬೇಕೆಂದು ಮಾಡಿದ್ದೇನೆ. ಕೊಡುತ್ತೀರಾ ?" ಎಂದು ಕೇಳಿದಾಗ ಅವರು ಆನಂದಭರಿತರಾಗಿ,

"ದೇವರು ನಮ್ಮ ಮೇಲೆ ಕೃಪೆ ಮಾಡಿದಂತೆ ಕಾಣುತದೆ. ಬೇಡ ಅನ್ನುತೇನೆಯೇ ನಾನು ? ಅವಶ್ಯವಾಗಿ ತಗೊಳ್ಳಿರಿ. ನೀವೇ ತಗೊಳ್ಳುವದಾದರೆ ಏಳು ಸಾವಿರಕ್ಕೇ ಕೊಟ್ಟುಬಿಡುತೇನೆ," ಎಂದರು.

ಅವರ ಒಲುಮೆಯ ಒತ್ತಾಯದಿಂದಾಗಿ ಅಂದು ರಾತ್ರೆ ನಾನು ಅವರಲ್ಲಿಯೆ ಊಟಕ್ಕೇಳಬೇಕಾಯಿತು. ಸುಮಿತ್ರೆಯಂತೂ ಹಕ್ಕಿಯಂತೆ ಓಡಾಡುತ್ತಿದ್ದಳು, ಮನೆಯಲ್ಲಿ. ಹೊಲ ಮಾರಾಟವಾಗುವುದು, ಹಣ ಕೈಗೆ ಬರುವುದು, ತಾನು ಗಂಡನ ಮನೆಗೆ ಹೋಗಲು ಸಾಧ್ಯವಾಗುವುದು. ಸ್ವರ್ಗವೇ ಅವಳ ಕೈಗೆ ನಿಲುಕಿದಂತಾಗಿತ್ತು.

ಮಾರನೆಯ ದಿನ ಆ ರೈತನನ್ನು ಕಚೇರಿಗೆ ಬರಮಾಡಿಕೊಂಡು, ಮೊದಲು ಕ್ಷೇಮ ಸಮಾಚಾರದ ಮಾತು ತೆಗೆದು, ನಿಧಾನವಾಗಿ ಹೊಲದ ವಿಚಾರಕ್ಕೆ ಬಂದೆ.

"ನೀನೇ ಕೊಂಡುಕೊಂಡುಬಿಡಬಹುದಲ್ಲ ಆ ಹೊಲವನ್ನು ?"

"ಅದು ನನಗೆ ಬೇಕಾಗಿಲ್ಲ," ಅವನು ಕೊಂಚ ಒರಟಾಗಿಯೇ ಉತ್ತರವಿತ್ತ.

"ಇದೆಂಥಾ ಮಾತು ನಿನ್ನದು ! ನೀನೂ ಅದನ್ನು ಕೊಳ್ಳುವಂತಿಲ್ಲ. ಬೇರೆಯವರಿಗೂ ಕೊಳ್ಳಲು ಬಿಡುವಂತಿಲ್ಲ. ಹೀಗೆ ಮಾಡಿದರೆ ಹ್ಯಾಗೆ ?"

"ಕೊಳ್ಳಬೇಕು ಅಂದರೆ ರೂಪಾಯಿ ಬೇಕಲ್ಲರೀ! ನನ್ನ ಹತ್ತಿರ ಏನೂ ಇಲ್ಲ. ಇದ್ದದ್ದೆಲ್ಲಾ ಉಜ್ಜಪ್ಪನವರಿಗೇ ಕೊಟ್ಟುಬಿಟ್ಟೆ."

"ಸರಿ. ಆ ಹೊಲ ಮಾರಿ ನಿನ್ನ ರೂಪಾಯಿ ನಿನಗೆ ಮುಟ್ಟಿಸುತ್ತಾರಲ್ಲ ಅವರು. ನೀನ್ಯಾಕೆ ಬೇಡ ಅನ್ನಬೇಕು?"

"ಇಷ್ಟು ವರ್ಷ ಬೆವರಿಳಿಸಿ ದುಡಿದು ಆ ಹೊಲವನ್ನ ಬಂಗಾರದ ಹಾಗೆ ಮಾಡಿದ್ದೀನಿ. ಈಗ ಅದನ್ನು ಬಿಡು ಅಂದರೆ ಹ್ಯಾಗೆ ಬಿಡಲಿ? ಅದು ನನ್ನ ಕೈ ಬಿಟ್ಟರೆ ಮುಂದೆ ನನ್ನ ಬಾಳ್ವೆ ನಡೆಯುವದು ಹ್ಯಾಗೆ?" ಎಂದು ಅವನು ವಾದಿಸಿದ.

"ಬರೀ ನಿನ್ನ ಬಾಳ್ವೆಯೊಂದರ ವಿಚಾರವೇ ನಿನಗೆ. ಬೇರೆಯವರ ಬಾಳ್ವೆ ಹಾಳಾದರೂ ನಿನಗೇನು ದುಃಖವಿಲ್ಲ. ಪಾಪ, ಆ ಸುಮಿತ್ರೆಯ ಬಾಳ್ವೆ ಏನಾಗಿದೆ ಸ್ವಲ್ಪ ಯೋಚಿಸು. ಅವಳು ನಿನ್ನ ಮಗಳೇ ಆಗಿದ್ದರೆ ಹೀಗೆ ಮಾಡುತ್ತಿದ್ದಿಯಾ?"

"ಹಿಮಗಡ್ಡೆಯಂತಿದ್ದ ಅವನ ಮನಸ್ಸು ಕೊಂಚ ಕರಗಿದ ಹಾಗೆ ತೋರಿತು. ನಾನು ಮುಂದುವರಿಸಿದೆ:

"ಈಗ ಈ ಹೊಲದ ಮಾರಾಟಕ್ಕೆ ನೀನು ಒಪ್ಪಿಬಿಡಬೇಕು. ಉಜ್ಜಪ್ಪನವರಿಗೆ ನೀನು ಕೊಟ್ಟ ಹಣವನ್ನು ಬಡ್ಡಿಯ ಸಹಿತ ಈಗಿಂದೀಗ ಕೊಡಿಸುತ್ತೇನೆ."

ಅವನು ಯೋಚನೆಗೊಳಗಾದ. "ನೀವು ಹೇಳುತ್ತೀರಿ ಅಂದ ಮೇಲೆ ವಿಚಾರ ಮಾಡಬೇಕಾಯ್ತು. ನನ್ನ ರೂಪಾಯಿ ಕೊಡುವದಾದರೆ ಅಡ್ಡಿಯಿಲ್ಲ."

"ಆಯಿತಲ್ಲ. ಅವನ್ನು ಕೊಡಿಸಿಬಿಡುತ್ತೇನೆ. ಅವರ ಇನ್ನುಳಿದ ಜಮೀನು ನೀನೇ ಮಾಡುತ್ತಾ ಇರು. ಅವರ ಪಾಲನ್ನೂ ಅವರಿಗೆ ಮುಟ್ಟಿಸುತ್ತಿರು. ಈ ಹೊಲ ಕೊಂಡವರಿಗೂ ನಾನು ಹೇಳುತ್ತೇನೆ – ಅದನ್ನೂ ನಿನಗೇ ಉಳಲು ಕೊಡಬೇಕು ಅಂತ. ಅವರೂ ಒಪ್ಪಬಹುದು."

ಹೊಲ ತನ್ನ ಕೈ ಬಿಡುವುದಿಲ್ಲವೆಂಧು ಗೊತ್ತಾಗುತ್ತಲೂ ಅವನು ಸಂತೋಷದಿಂದ ಒಪ್ಪಿಕೊಂಡ.

"ಹಾಗೇ ಮಾಡಿಬಿಡಿರಿ. ನನ್ನದೇನೂ ತಕರಾರಿಲ್ಲ."

ಅದೇ ದಿನವೆ ಗೌಡರಿಂದ ಮೂರು ಸಾವಿರ ರೂಪಾಯಿ ತಂದು ಜಮೀನಿನ ಆಧಾರ ಪತ್ರವನ್ನು ವಾಪಸು ಪಡೆದು ಆ ರೈತನಿಗೆ ಮೂರು ಸಾವಿರ ರೂಪಾಯಿ ಕೊಡಮಾಡಿದೆ. ಅವನೂ ಔದಾರ್ಯ ತೋರ್ಪಡಿಸಿ, ಬಡ್ಡಿಯ ಹಣ ಸ್ವೀಕರಿಸದೆ

ಕೇವಲ ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡ. ಆಧಾರ ಪತ್ರದ ದಾಖಲೆ ರದ್ದು ಪಡಿಸುವ ಏರ್ಪಾಟು ಮಾಡಿ ಆ ಪತ್ರವನ್ನು ಹರಿದು ಹಾಕಿದೆವು. ಹೊಲ ಮತ್ತೆ ಉಜ್ಜಪ್ಪನವರದಾಯಿತು.

"ಎಂಟು ಸಾವಿರ ರೂಪಾಯಿಗಳಿಗೆ ಈ ಹೊಲ ನೀವೇ ತೆಗೆದುಕೊಂಡು ಬಿಡಿರಿ ಗೌಡರೇ," ಎಂದು ನಾನು ಹೇಳಿದಾಗ ಅವರಿಗೆ ವಿಸ್ಮಯವಾಗದಿರಲಿಲ್ಲ.

"ಅಂದರೆ? ನೀವು ಹೇಳುವದಾದರೂ ಏನು?"

"ತಿಳಿಯಲಿಲ್ಲವೇನು? ನೀವು ಕೊಟ್ಟ ಮೂರು ಸಾವಿರ ರೂಪಾಯಿ ಉಪಯೋಗಿಸಿಕೊಂಡು ರೈತನಿಂದ ಹೊಲ ಬಿಡಿಸಿಕೊಟ್ಟದ್ದಂತೂ ಆಯಿತಲ್ಲ. ಈಗ ಅದನ್ನು ನಿಮಗೇ ಮಾರಿ ಹಣ ಪಡೆಯಬೇಕಾಗಿದೆ."

"ಅಂದರೆ! ನೀವು ಅದನ್ನು ಕೊಳ್ಳುವದಿಲ್ಲ ಅನ್ನಿರಿ."

ನಾನು ನಗುನಗುತ್ತಾ ಹೇಳಿದೆ:

"ನನ್ನ ಊರೆಲ್ಲಿ, ಮನೆಯೆಲ್ಲಿ, ಗೌಡರೇ! ಏನೋ ನಾಲ್ಕು ತಿಂಗಳ ನೌಕರಿಗೆಂತ ಇಲ್ಲಿಗೆ ಬಂದವನು ಇಲ್ಲಿ ಹೊಲ ತೆಗೆದುಕೊಂಡೇನು ಮಾಡಲಿ? ನಿಮ್ಮ ಸಹಾಯದಿಂದ ಉಜ್ಜಪ್ಪನವರ ತೊಂದರೆ ತಪ್ಪಿಸಬೇಕು ಅಂತ ವಿಚಾರ ಮಾಡಿ ಇಷ್ಟೆಲ್ಲಾ ಪ್ರಯತ್ನಪಟ್ಟದ್ದು. ಆ ಹೊಲವನ್ನು ಹತ್ತು ಸಾವಿರಕ್ಕೆ ತೆಗೆದುಕೊಳ್ಳಬಹುದು ಅಂತ ನೀವೇ ಅನ್ನುತ್ತಿದ್ದಿರಲ್ಲ. ನಾನು ಎಂಟು ಸಾವಿರಕ್ಕೆ ಕೊಡಿಸುತ್ತೇನೆ. ತೆಗೆದುಕೊಂಡುಬಿಡಿರಿ."

ಅವರು ನಿರಾಕರಿಸುವಂತಿರಲಿಲ್ಲ.

ಅಂದೇ ಆ ಹೊಲ ಗೌಡರ ಹೆಸರಿಗಾಯಿತು. ಅವರಿಂದ ಮತ್ತೆ ಐದು ಸಾವಿರ ರೂಪಾಯಿ ಪಡೆದುದಾಯಿತು.

ಅಂತೂ ಉಜ್ಜಪ್ಪನವರ ಹತ್ತಿರ ಆರು ಸಾವಿರ ರೂಪಾಯಿ ಶೇಖರ ವಾದಂತಾಯಿತು.

ಆ ಹೊಲವನ್ನು ಗೌಡರು ಅದೇ ರೈತನಿಗೇ ಕೃಷಿ ಮಾಡಲು ಕೊಟ್ಟು ಅವನಿಂದ ಹೊಸ ಲಾವಣಿ ಪತ್ರ ಬರೆಸಿಕೊಂಡರು.

ಎಲ್ಲವನ್ನೂ ಮುಗಿಸಿ ನಾನು ಸುಮಿತ್ರೆಯ ಮನೆಗೆ ಹೋಗುತ್ತಲೂ ಅವಳು ಬಂದು ನನ್ನ ಅಡಿಗೆರಗಿದಳು.

ನನಗೆ ನಾಚಿಕೆಯಾಯಿತು.

“ಏಳು ಸುಮಿತ್ರಾ, ಏಳು. ನನ್ನಂಥವನ ಕಾಲಿಗೆ ಬೀಳುವದೇ!”

ಎದ್ದು ನಿಂತಳು ಸುಮಿತ್ರಾ. ಅವಳ ಕಣ್ಣುಗಳಲ್ಲಿ ಹರ್ಷಾಶ್ರುಗಳು ತುಂಬಿಬಂದಿದ್ದುವು.

೨೮

ಫೌಜದಾರರೊಡನೆ ಚಕಮಕಿ

ಸುಮಿತ್ರೆಯ ಒಡವೆಗಳೂ ಅವಳ ಕೈಸೇರಿದುವು. ಇನ್ನೊಂದು ವಾರದೊಳಗಾಗಿ ಅವಳನ್ನು ಅವಳ ಆಭರಣಗಳ ಸಮೇತ ಕಳಿಸಿ ಕೊಡುವುದಾಗಿ ಅವಳ ಮಾವನಿಗೆ ಕಾಗದ ಹಾಕಿದರು ಉಜ್ಜಪ್ಪನವರು.

ಅವಳನ್ನು ಗಂಡನ ಮನೆಗೆ ಕಳುಹಿಸುವ ಸಿದ್ಧತೆ ನಡೆದಿದ್ದಾಗಲೇ ಫೌಜದಾರರ ಸವಾರಿ ಆಗಮಿಸಿತು. ಬಂದೊಡನೆಯೆ ನಡೆದಿದ್ದುದೆಲ್ಲವನ್ನೂ ತಿಳಿದುಕೊಂಡು ಕಿಡಿಕಿಡಿಯಾದರು. ಸುಮಿತ್ರೆಯನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದಲೇ ನಾನು ಅವಳ ತಂದೆಗೆ ಸಹಾಯ ಮಾಡಿರಬೇಕೆಂದು ಭಾವಿಸಿ ನನ್ನ ಬಗ್ಗೆ ಉರಿಯತೊಡಗಿದರು.

ಅದೇ ದಿನ ಅಡುಗೆಯ ಚೆನ್ನನ ಮೂಲಕ ಸುಮಿತ್ರೆಗೆ ಹೇಳಿಕಳಿಸಿದರು – ಆ ರಾತ್ರೆ ಬರಬೇಕೆಂದು. ಅವಳು ಮಾತನಾಡಲಿಲ್ಲ; ಮೂಲೆಯಲ್ಲಿದ್ದ ತನ್ನ ಚಪ್ಪಲಿಯನ್ನೆತ್ತಿ ಚೆನ್ನನಿಗೆ ತೋರಿಸಿದಳು. ಅವನು ಗಾಬರಿಗೊಂಡು ಫೌಜದಾರರಲ್ಲಿಗೆ ಬಂದು ಅವಳು ಚಪ್ಪಲಿ ತೋರಿಸಿದ ವಿಚಾರವನ್ನು ತಿಳಿಸಿದ. ಅದೂ ಕೂಡಾ ನನ್ನ ಕಾರಸ್ಥಾನವೇ ಆಗಿರಬಹುದೆಂದು ಭಾವಿಸಿಕೊಂಡರು ಫೌಜ

ದಾರರು. ಪೋಲೀಸ್ ಅಧಿಕಾರಿಯೊಬ್ಬನ ಆಜ್ಞೆಗೆ ಚಪ್ಪಲಿಯ ಉತ್ತರ ಕೊಡುವುದೆಂದರೆ ಸಾಮಾನ್ಯವಾದ ಮಾತೇ!

ಸಾಯಂಕಾಲ ನನ್ನನ್ನು ಮನೆಗೆ ಬರಮಾಡಿಕೊಂಡು ದರ್ಪಪೂರಿತ ಧ್ವನಿಯಿಂದ ಕೇಳಿದರು:

"ನೀನೇನು ಇಲ್ಲಿ ಸಿಪಾಯಿ ಕೆಲಸ ಮಾಡುವುದಕ್ಕೆ ಬಂದಿದ್ದೀಯೋ ಇಲ್ಲಾ ಅವರಿವರ ಉಸಾಬರಿ ಮಾಡಲಿಕ್ಕೆ ಬಂದಿದ್ದೀಯೋ?"

ನಾನು ಮನಸ್ಸಿನಲ್ಲಿಯೆ ನಗುತ್ತಾ,

"ಅದೇನು ಅಂಥಾ ಉಸಾಬರಿ ಮಾಡಿದ್ದು ನಾನು?" ಎಂದು ಕೇಳಿದೆ.

"ಉಜ್ಜಪ್ಪನವರ ಜಮೀನು ಮಾರಾಟ ಮಾಡಿಸಿದಿಯಂತಲ್ಲ?"

"ಹೌದು."

"ಈ ಉಪದ್ವ್ಯಾಪವೆಲ್ಲಾ ನಿನಗ್ಯಾತಕ್ಕೆ ಬೇಕಾಗಿತ್ತು?"

"ಇದರಲ್ಲಿ ಉಪದ್ವ್ಯಾಪವೇನಿದೆ?"

"ಈ ಗೊಂದಲವಾದರೂ ಯಾಕೆ ಬೇಕಾಗಿತ್ತು ನಿನಗೆ?"

"ಅವರು ನನ್ನ ಸ್ನೇಹಿತರು. ನನಗೆ ಬೇಕಾದವರು. ಇದು ಖಾಸಗೀ ವಿಷಯವಾಗುತ್ತದೆ."

"ನಿನಗೆ ಅವರ ಮಗಳ ಬಗ್ಗೆ ಅಷ್ಟು ಸಲಿಗೆ ಯಾಕೆ?"

"ನನಗೆ ಗೊತ್ತಿಲ್ಲ."

"ನಿನಗೂ ಅವಳಿಗೂ ಸಂಬಂಧವಿದೆ ಅಲ್ಲವೇನು?"

ಅದುವರೆಗೂ ಶಾಂತವಾಗಿದ್ದ ನನಗೆ ಆಗ ಮಾತ್ರ ಸಿಟ್ಟು ತಡೆಯುಲಾಗಲಿಲ್ಲ.

"ನೀವು ತಿಳಿದುಕೊಂಡಿರುವಂಥಾ ಸಂಬಂಧವೇನೂ ಇಲ್ಲ. ಸಲಿಗೆಯಿರುವದೇನೂ ಸುಳ್ಳಲ್ಲ. ಅವಳ ಬಗ್ಗೆ ನನ್ನಲ್ಲಿ ಮರುಕ ಬಂದು ಅವಳು ಗಂಡನ ಮನೆಗೆ ಹೋಗುವಂತಾಗಲೆಂದು ಇಷ್ಟೆಲ್ಲಾ ಯತ್ನ ಮಾಡಿದ್ದೇನೆ. ನಿಮ್ಮ ಹಾಗೆ ಅವರ ಅಸಹಾಯಕತೆಯ ದುರುಪಯೋಗಮಾಡಿಕೊಳ್ಳುವ ದುಷ್ಟತನಕ್ಕೆ ನಾನೇನೂ ಕೈ ಹಾಕಿಲ್ಲ."

"ಇಂಥಾ ಸೋಗು ನನ್ನ ಮುಂದೆ ನಡೆಯುವದಿಲ್ಲ. ತಿಳಿದುಕೊಂಡು ಬಿಡು. ಅವಳನ್ನು ಕೆಡಿಸುವ ವಿಚಾರದಿಂದಲೇ ನೀನು ಇಷ್ಟೆಲ್ಲಾ ಖಟಪಟ

ಮಾಡಿದ್ದು ಖಂಡಿತ. ನಿನ್ನಂಥವರಿಂದಲೇ ನಮ್ಮ ಪೋಲೀಸ್ ಖಾತೆಯು ಹೆಸರು ಕೆಡುವದು. ನನಗೆ ನಿನ್ನ ಸಹಾಯದ ಅಗತ್ಯವೇನೂ ಇಲ್ಲ. ನಿನ್ನನ್ನು ವರ್ಗ ಮಾಡಬೇಕೆಂದು ಈಗಿಂದೀಗ ರಿಪೋರ್ಟು ಮಾಡುತ್ತೇನೆ."

"ಮಾಡಬಹುದು. ನನಗೂ ಸಾಕಾಗಿ ಹೋಗಿದೆ ನಿಮ್ಮ ಸಹವಾಸ. ನನ್ನಂಥವನಿಂದ ಪೋಲೀಸ್ ಖಾತೆಯು ಹೆಸರು ಕೆಡುತ್ತದೆ, ನಿಮ್ಮಂಥವರಿಂದ ಉದ್ಧಾರವಾಗುತ್ತದೆ, ಅಲ್ಲವೇನು? ನಿಮ್ಮ ಈ ಢೋಂಗೀ ಮಾತು ನನ್ನ ಮುಂದೆ ನಡೆಯುವದಿಲ್ಲ. ದಿನಾಲು ರಾತ್ರಿ ಮೂರು ಬಾಟ್ಲಿ ಸೇಂದಿ ಬೀಳ ದಿದ್ದರೆ ನಿದ್ದೆ ಬರುವದಿಲ್ಲ ನಿಮಗೆ. ನಿಮ್ಮ ಸೇಂದಿಯ ಕಥೆ ಈ ತಾಲ್ಲೂಕಿ ನಲ್ಲೆಲ್ಲಾ ಡಂಗುರವಾಗಿ ಹೋಗಿದೆ. ಹಳ್ಳಿಯ ಹೆಂಗಸರನ್ನು ನೀವು ಕೆಡಿಸುವ ಸುದ್ದಿಯೂ ಎಲ್ಲಾ ಕಡೆಗೂ ಗೊತ್ತಾಗಿದೆ. ಮಲ್ಲವ್ವ, ಸುಂದರವ್ವ, ಆ ನಿಮ್ಮ ಕಫನೀಸ್ವಾಮಿ, ಅವನ ಮನೆಯೊಳಗಿನ ಸೂಳೆಯರು, ಹಳ್ಳಿ ಹಳ್ಳಿ ತಿರುಗಿ ನಿಮ್ಮ ಅಧಿಕಾರದ ದುರುಪಯೋಗಮಾಡಿ ಆ ಕಳ್ಳಸ್ವಾಮಿಗೆ ಚಂದಾ ಕೂಡಿಸಿ ಕೊಟ್ಟು ಸೂಳೆಯರನ್ನು ಸಾಕುವದು, ಅಲ್ಲಿ ಹೋಗಿ ನೀವು ಬಿದ್ದುಕೊಂಡಾಗ ನಿಮ್ಮ ನೌಕರಿ ಉಳಿಸಲು ನಾನು ಫೌಜದಾರನಾಗುವದು, ನಿಮ್ಮ ಆ ಗೌಡ ಸಾನಿ, ಅವಳ ಮನೆಯ ಕೋಳಿಯೂಟ, ಕುಡಿತ, ಅವಳ ಮನೆಯಲ್ಲಿ ಆರಾರು ದಿವಸ ಬಿದ್ದಿರುವದು, ಒಂದೇ ಎರಡೇ....ನಿಮ್ಮ ಪರಾಕ್ರಮವನ್ನು ನೋಡಿ ನೋಡಿ ಎರಡೇ ತಿಂಗಳಲ್ಲಿ ಬೇಜಾರು ಬಂದು ಹೋಗಿದೆ ನನಗೆ. ಈಗ ಈ ಹುಡುಗಿ ಸುಮಿತ್ರೆ ಬೇಕಾಗಿದ್ದಾಳೆ ನಿಮಗೆ. ಅವಳು ಗಂಡನ ಮನೆಗೆ ಹೋಗದೆ ಇಲ್ಲೇ ಇದ್ದಿದ್ದರೆ ನಿಮ್ಮ ಕೈಗೆ ಸಿಗುತ್ತಿದ್ದಳಲ್ಲವೇನು? ಅವಳು ಹೊರಡುವ ಹಾಗೆ ನಾನು ಮಾಡಿಕೊಟ್ಟದ್ದಕ್ಕೆ ನನ್ನ ಮೇಲೆ ಸಿಟ್ಟು ಬೆಂಕಿ ಯಾಗಿದ್ದೀರಿ. ಆವಶ್ಯವಾಗಿ ರಿಪೋರ್ಟ್ ಮಾಡಿರಿ. ನಾನು ಸಂತೋಷದಿಂದ ಹೋಗಿಬಿಡುತ್ತೇನೆ."

ಅಷ್ಟು ಹೇಳಿದವನು ಅಲ್ಲಿ ನಿಲ್ಲದೆ ಕಚೇರಿಗೆ ಬಂದುಬಿಟ್ಟೆ. ಅವರು ದಂಗು ಬಡೆದವರಂತೆ ಕುಳಿತಿದ್ದರು. ಅವರ ಗುಟ್ಟುಗಳೆಲ್ಲ ನನಗೆ ಗೊತ್ತಾದು ದಾದರೂ ಹೇಗೆ ಎಂಬುದೇ ಅವರಿಗೆ ಸಮಸ್ಯೆಯಾದ ಹಾಗಿತ್ತು. ಈ ವಿಷಯ ಗಳನ್ನೆಲ್ಲ ನನಗೆ ಹೇಳಿದವರಾರು? ಅಡುಗೆಯವನೇ? ಗೌಡಸಾನಿಯ ಸಂಬಂಧದ ವಿಚಾರ ಅವನಿಗೂ ಗೊತ್ತಿರಲಿಲ್ಲವಲ್ಲ. ಹಾಗಾದರೆ ಅಪ್ಪಣ್ಣ ಹೇಳಿ

ದನೇ? ಸುಂದರಿ ಮತ್ತು ಮಲ್ಲವ್ವರ ಸಮಾಚಾರ ಅವನಿಗೇನು ಗೊತ್ತು? ಸ್ವಾಮಿ ಮತ್ತು ಆ ಸೂಳೆಯರ ಬಗ್ಗೆ ಯಾರು ಹೇಳಿರಬಹುದು? ಆ ವಿಷಯ ವಂತೂ ಯಾರಿಗೂ ತಿಳಿದಿರಲಿಲ್ಲವಲ್ಲ! ಈ ಸಿಪಾಯಿ ಎಂಥ ಭಯಂಕರ ಮನುಷ್ಯನಿರುವನಲ್ಲ! ಇವನಿಗೆ ಇನ್ನೂ ಏನೇನು ಗೊತ್ತಾಗಿದೆಯೋ ಯಾರು ಬಲ್ಲರು....

—ಹಾಗೆ ಯೋಚಿಸುತ್ತಿದ್ದ ಹಾಗಿತ್ತು ಫೌಜದಾರರು. ಅವರಿಗೆ ಯಾವುದೂ ಬಗೆಹರಿಯದ ಹಾಗಾಗಿರಬಹುದು. ನನ್ನ ವಿರುದ್ಧ ವರದಿ ಮಾಡುವ ಧೈರ್ಯವೂ ಇರಲಿಲ್ಲ. ಅವರ ಹುಳುಕುಗಳೆಲ್ಲವನ್ನೂ ನಾನು ಬಯಲಿಗೆಳೆಯುವ ಸಂಭವವಿತ್ತು. ಮೇಲಧಿಕಾರಿಗಳು ಅವರ ಬಗ್ಗೆ ವಿಚಾರಣೆ ಗಾರಂಭಿಸಿದರೆ ಸಂಬಂಧಪಟ್ಟವರೆಲ್ಲರೂ ಸತ್ಯ ಸಂಗತಿಗಳನ್ನು ತಿಳಿಸಿಬಿಡುವ ಸಂಭವವೂ ಇತ್ತು. ಅಂತೂ, ನನ್ನೊಡನೆ ಯಾವ ರೀತಿ ವರ್ತಿಸಬೇಕೆಂಬುದು ಅವರ ಬುದ್ಧಿಗೆ ನಿಲುಕದ ವಿಷಯವಾಯಿತು.

ಕಚೇರಿಗೆ ಬರುತ್ತಲೂ ಕಾರಕೂನರು, ಸಿಪಾಯಿಗಳು ಎಲ್ಲರಿಗೂ, ಫೌಜದಾರರೊಡನೆ ನಡೆದ ವಾದವಿವಾದದ ವಿಚಾರ ವಿವರಿಸಿ ಹೇಳಿದೆ. ಫೌಜದಾರರ ಬಗ್ಗೆ ಎಲ್ಲರಿಗೂ ಮೊದಲೇ ಬೇಸರವಾಗಿತ್ತು. ಬೇರೆ ವಿಧಿಯಿರಲಿಲ್ಲ ವಾದುದರಿಂದ ಎಲ್ಲವನ್ನೂ ಸಹಿಸಿಕೊಂಡಿದ್ದರು.

"ಅವರೇನಾದರೂ ನಿಮ್ಮ ವಿರುದ್ಧ ರಿಪೋರ್ಟು ಮಾಡಿದರೆ ಅವರ ವಿರುದ್ಧ ನಾವು ಹೇಳುತ್ತೇವೆ," ಎಂದರು ಕಾರಕೂನರು.

"ನಿಮ್ಮ ವಿರುದ್ಧ ಅವರು ಹೋದರೆ ಸಾಕು, ಅವರೇ ಹಾಳಾಗಿ ಹೋಗು ತ್ತಾರೆ," ಎಂದರು ಪೋಲೀಸರು.

ಆ ಸಂಗತಿ ತಿಳಿದಾಗ ಗೌಡರೂ ಭಯಂಕರವಾಗಿ ರೇಗಿ,

"ನಿಮ್ಮ ಕೂದಲೆಳೆಗೆ ಧಕ್ಕೆಯಾದರೆ ಆ ಫೌಜದಾರನ ಕಣ್ಣು ಕೀಳಿಸಿ ಬಿಡ್ತೀನಿ," ಎಂದರು. ಆಡಿದಂತೆಯೇ ಮಾಡಿ ತೋರಿಸುವ ಜನ ಅದು. ನಾನೇ ಅವರನ್ನು ಶಾಂತಗೊಳಿಸಬೇಕಾಯಿತು.

ಅಂದಿನಿಂದ ಎಲ್ಲ ಪೋಲೀಸರೂ ಫೌಜದಾರರೊಡನೆ ಬಿಗುವಿನಿಂದಲೇ ವ್ಯವಹರಿಸತೊಡಗಿದರು. ತಮ್ಮ 'ಡ್ಯೂಟಿ'ಯನ್ನು ಮಾತ್ರ ಯಾರೂ ತಪ್ಪಿಸು ತ್ತಿರಲಿಲ್ಲ. ಫೌಜದಾರರ ಮನೆಯ ಕೆಲಸಗಳಿಗೆ ಮಾತ್ರ ಯಾರ ನೆರವೂ

ದೊರೆಯದಾಯಿತು. ಊರ ಜನರೂ ಕೂಡ ಫೌಜದಾರರನ್ನು ಕಂಡರೆ ಮುಖ ತಿರುಗಿಸಿಕೊಂಡು, ಮಾತನಾಡದೆ ಹೋಗತೊಡಗಿದರು. ಫೌಜದಾರರಿಗೆ ಸಾರ್ವತ್ರಿಕ ಬಹಿಷ್ಕಾರ ಬಿದ್ದ ಹಾಗೇ ಆಯಿತು. ಒಂದು ತಿಂಗಳಿನವರೆಗೆ ಯಾವ ಪೋಲೀಸನೂ ಒಂದು ಪೈ ಲಂಚವನ್ನೂ ಸಹ ಸ್ವೀಕರಿಸಬಾರದೆಂದು ನಾವೆಲ್ಲರೂ ಸೇರಿ ಮಾತನಾಡಿ ಗಟ್ಟಿಮಾಡಿಕೊಂಡೆವು.

ಹಾಗೆ ಒಂದು ವಾರ ನಡೆಯಿತು. ಫೌಜದಾರರ ದರ್ಪ ಅರ್ಧಕ್ಕರ್ಧ ಮಾಯವಾಗಿ ಹೋಯಿತು. ಇನ್ನು ಕೆಲವು ದಿನ ಹೀಗೇ ನಡೆದರೆ ತಾವು ಅಲ್ಲಿ ಬಾಳುವೆ ಮಾಡುವುದೂ ಅಸಾಧ್ಯವಾಗಬಹುದೆಂದು ಅನಿಸುತ್ತಲೂ ಅವರು ನನ್ನ ಜೊತೆಗೆ ಸಂಧಾನ ಮಾಡಿಕೊಳ್ಳಲು ಹವಣಿಸತೊಡಗಿದರು. ನಾನು ಅವರ ಕಡೆಗೆ ಗಮನ ಕೊಡುತ್ತಿರಲೇ ಇಲ್ಲ. ಕಚೇರಿಯಲ್ಲಿನ ಕೆಲಸ ಮುಗಿಯುತ್ತಲೂ ನೇರವಾಗಿ ನನ್ನ ಕೊಠಡಿಗೆ ಹೋಗಿ ಬಿಡುತ್ತಿದ್ದೆ.

ಯಾವಳಿಗಾಗಿ ಫೌಜದಾರರು ಇಂಥ ಪ್ರಸಂಗ ಬರಮಾಡಿಕೊಂಡಿದ್ದರೋ ಆ ಸುಮಿತ್ರಾ ಕೂಡ ಅವರ ಹಿಡಿತದಿಂದ ಪೂರ್ತಿಯಾಗಿ ಬಿಡುಗಡೆ ಹೊಂದಿ ತನ್ನ ಗಂಡನ ಮನೆಗೆ ಹೊರಡಲು ಸಿದ್ಧತೆ ನಡಸುತ್ತಿದ್ದುದನ್ನು ಕಂಡು ಅವರ ತಳಮಳ ವಿಪರೀತವಾಗಿತ್ತು.

ಉಜ್ಜಪ್ಪನವರು ಬರೆದ ಕಾಗದಕ್ಕೆ ಸುಮಿತ್ರೆಯ ಮಾವನಿಂದ ಉತ್ತರ ಬಂದಿತ್ತು. ಅವಳನ್ನು ಅವಶ್ಯವಾಗಿ ಕರೆದುಕೊಂಡು ಬರಬೇಕೆಂದೂ ಅವಳ ಆಭರಣಗಳನ್ನು ಮಾತ್ರ ಮರೆಯದೆ ತರಬೇಕೆಂದೂ ಅವರು ಬರೆದಿದ್ದರು. ಮೊದಲನೆಯ ಬಾರಿ ಪತಿಗೃಹಕ್ಕೆ ಹೋಗುವ ನವವಧುವಿನಂತಾಗಿತ್ತು ಸುಮಿತ್ರೆಯ ಸ್ಥಿತಿ. ಅವಳ ತಾಯಿತಂದೆಗಳ ಆನಂದ ಉತ್ಸಾಹಗಳಂತೂ ಅವರ್ಣನೀಯವಾಗಿದ್ದುವು.

ಅಂದು ಸುಮಿತ್ರಾ ಹೊರಡುವ ದಿನ. ಉಜ್ಜಪ್ಪನವರೇ ಬಂದು ನನ್ನನ್ನು ಮನೆಗೆ ಕರೆದೊಯ್ದರು. ಸುಮಿತ್ರಾ ತನ್ನ ಆಭರಣಗಳನ್ನೆಲ್ಲ ಧರಿಸಿಕೊಂಡು, ಹೊಸ ಪೀತಾಂಬರವನ್ನುಟ್ಟು ಲಕ್ಷ್ಮಿಯ ಹಾಗೆ ಶೋಭಿಸುತ್ತಿದ್ದಳು. ನಾನು ಮನೆಯಲ್ಲಿ ಪ್ರವೇಶಿಸುತ್ತಲೂ ಅವಳು ನೇರವಾಗಿ ನನ್ನ ಬಳಿ ಬಂದು ನನ್ನ ಕಾಲು ಮುಟ್ಟಿ ನಮಸ್ಕರಿಸಿದಳು.

“ ಹೋಗಿ ಬರುತ್ತೇನೆ ಅಣ್ಣಾ !”

ಸಂತೋಷದಿಂದ ನನಗೂ ಎದೆ ತುಂಬಿ ಬಂದಿತ್ತು. ಆ ಸಂದರ್ಭದಲ್ಲಿ ಅವಳನ್ನು ನಾನು ನನ್ನ ಒಡ ಹುಟ್ಟಿದ ಸೋದರಿಯಂತೆಯೇ ಭಾವಿಸಿ ಅವಳ ಜೀವನ ಸುಖದಾಯಕವಾಗಲೆಂದು ಹೃತ್ಪೂರ್ವಕವಾಗಿ ಹರಸಿದೆ.

"ನೀವೂ ಬರಬೇಕು ಇವಳನ್ನು ಕಳಿಸಲಿಕ್ಕೆ," ಎಂದರು ಉಜ್ಜಪ್ಪನವರು.

"ಬರ್ರಿ ಅಣ್ಣಾ. ಏಳೆಂಟು ದಿನ ಇರುವಿರಂತೆ," ಎಂದು ಸುಮಿತ್ರೆಯೂ ಒತ್ತಾಯಪೂರ್ವಕವಾಗಿ ಹೇಳಿದಳು.

ನಾನು ಹೊರಡು ವಂತಿರಲಿಲ್ಲ.

"ನಾನು ಗಂಡನ ಮನೆ ಕಾಣಲು ನೀನೇ ಕಾರಣರು ಅಣ್ಣಾ. ನಿಮ್ಮ ಉಪಕಾರ ಹ್ಯಾಗೆ ತೀರಿಸಲಿ?"

"ನೀನು ಸುಖವಾಗಿ ಸಂಸಾರ ಮಾಡಿಕೊಂಡಿದ್ದರೆ ಸಾಕು. ನನಗೆ ಅದೇ ಸಂತೋಷ."

"ಅಲ್ಲಿ ಏನಾಗುವದೋ ಯಾರಿಗೆ ಗೊತ್ತು. ಈಗೇನೊ ನನ್ನನ್ನು ಕರೆದು ಕೊಂಡು ಬರಬೇಕೆಂದು ಅವರು ಬರೆದಿದ್ದಾರೆ. ನಾನು ಹೋದ ಬಳಿಕ ಆಭರಣ ಗಳನ್ನು ಕಸಿದುಕೊಂಡು ನನ್ನನ್ನು ಅಟ್ಟಿಬಿಟ್ಟರೆ?"

"ಹಾಗೇನೂ ಆಗಲಾರದು. ಅವರು ಅಷ್ಟು ಕೆಟ್ಟವರೆಂದು ನಾವ್ಯಾಕೆ ತಿಳಿಯಬೇಕು? ಅವರ ಮನಸ್ಸಿನಲ್ಲಿ ಅಂಥಾದ್ದೇನಾದರೂ ಇದ್ದಿದ್ದರೆ ನಿನ್ನನ್ನು ಕರೆದು ತರದೆ ಆಭರಣಗಳನ್ನು ಮಾತ್ರ ತಂದು ಒಪ್ಪಿಸಬೇಕೆಂದು ಪತ್ರ ಬರೆಯು ತ್ತಿದ್ದರು."

ನನ್ನ ಮಾತಿನಿಂದಾಗಿ ಅವಳ ಮನಸ್ಸಿನ ದುಗುಡ ದೂರವಾಯಿತು. ಹೃದಯದಲ್ಲಿ ಹರ್ಷವನ್ನು ತುಂಬಿಕೊಂಡೇ ಅವಳು ಬಸ್ಸು ಹತ್ತಿದಳು.

೨೯

ಫೌಜದಾರರು ಶರಣು ಬಂದರು!

ಸುಮಿತ್ರಾ ಹೊರಟುಹೋದ ದಿನವಿಡೀ ಫೌಜದಾರರು ಕಚೇರಿಗೆ ಕಾಲಿಡಲಿಲ್ಲ. ಅವರು ವಿರಹವ್ಯಥೆಯಿಂದ ಸಂತಪ್ತರಾಗಿರಬಹುದೆಂದು ಕಾರಕೂನರು ಹಾಸ್ಯಮಾಡಿದರು. ಪೋಲೀಸರೆಲ್ಲ ನಕ್ಕರು. ನನಗೆ ಮಾತ್ರ ನಗು ಬರಲಿಲ್ಲ.

ಅದೇ ದಿನ ಸಾಯಂಕಾಲವೇ ಫೌಜದಾರರು ನಮಗೆ ಶರಣು ಬರಬೇಕಾದ ಪ್ರಸಂಗವೊದಗಿ ಬಂತು.

ಒಂದು ವಿಲಕ್ಷಣವಾದ ಫಿರ್ಯಾದು ಅಂದು ನಮ್ಮ ಕಚೇರಿಗೆ ಬಂತು. ಆ ಊರಲ್ಲಿನದೇ ಆದುದೊಂದು ಮುಸಲ್ಮಾನರ ಮನೆತನ, ನಾಲ್ಕು ಜನ ಅಣ್ಣ ತಮ್ಮಂದಿರು, ತಂದೆತಾಯಿ, ತುಂಬಿದ ಮನೆ. ಏಕತ್ರ ಕುಟುಂಬ. ಹಿರಿಯ ಮಗನ ಮದುವೆಯಾಗಿ ಅವನ ಹೆಂಡತಿ ಮನೆಗೆ ಬಂದಿದ್ದಳು. ಮನೆಯಲ್ಲಿ ಬಹಳ ಜನರಿದ್ದುದರಿಂದ ಆ ದಂಪತಿಗಳು ಏಕಾಂತದಲ್ಲಿ ಸಂಧಿಸಿ ಸರಸವಾಡಲು ಅವಕಾಶ ಲಭಿಸುತ್ತಿರಲಿಲ್ಲ. ಅದಕ್ಕಾಗಿ ಹಿರಿಯವನ ಹೆಂಡತಿ ತಾವಿಬ್ಬರೂ ಬೇರೆಯಾಗಬೇಕೆಂದು ಗಂಡನಿಗೆ ಬೋಧಿಸುತ್ತ ಬಂದಿದ್ದಳು. ಬರಬರುತ್ತಾ ಪ್ರತಿ ದಿನವೂ ಅತ್ತೆ ಸೊಸೆಯರಲ್ಲಿ ಕಲಹವಾಗತೊಡಗಿತ್ತು. ಹಿರಿಯಮಗ ತನ್ನ

ತಾಯಿಯ ಪಕ್ಷ ವಹಿಸಿ ಹೆಂಡತಿಯನ್ನು ಥಳಿಸತೊಡಗಿದ್ದ. ಈ ಕಾಟಕ್ಕೆ ಬೇಸರಗೊಂಡ ಆ ಸೊಸೆ ಒಂದು ದಿನ ಹೊಲಕ್ಕೆ ಹೋದವಳು ಮನೆಗೆ ಮರಳಲಿಲ್ಲ. ಇವರು ಎರಡು ಮೂರು ದಿನ ಸುಮ್ಮನಿದ್ದರು. ಅವಳ ತವರು ಮನೆಯವರಿಗೆ ಹೇಳಿ ಕಳಿಸಿದರು. ಆ ಹುಡುಗಿ ಅಲ್ಲಿಗೂ ಹೋಗಿಲ್ಲವೆಂದು ತಿಳಿಯಿತು. ತನ್ನ ಮಗಳ ಕೊಲೆಯಾಗಿರಬೇಕೆಂದು ಫಿರ್ಯಾದು ತಂದಿದ್ದ, ಆ ಹುಡುಗಿಯ ತಂದೆ.

ನಾವು ಫೌಜದಾರರನ್ನು ಬರಮಾಡಿಕೊಂಡೆವು. ವಿಷಯವನ್ನೆಲ್ಲ ತಿಳಿದು ಕೊಂಡು ಅವರು ತಲೆ ಕೆರೆದುಕೊಂಡರು, ಛಾವಣಿಯನ್ನು ದಿಟ್ಟಿಸುತ್ತಾ ಹತ್ತು ನಿಮಿಷ ಯೋಚಿಸಿದರು.

"ಹುಡುಗಿಯ ಕೊಲೆ ಆಗಿದೆಯೇನು?" ಎಂದು ಕೇಳಿದರು, ಅವರ ತಂದೆಯನ್ನು.

"ಆಗಿದ್ದೀತು ಅಂತನಿಸುತದೆ ರಾವ್‌ಸಾಬರೆ."

ಕೊಲೆಯಾದದ್ದು ನಿಶ್ಚಿತವಾಗಿ ತಿಳಿದಿಲ್ಲ. ಕೇವಲ ಅನುಮಾನವಿದೆ. ಫಿರ್ಯಾದು ತೆಗೆದುಕೊಳ್ಳುವುದಾದರೂ ಹೇಗೆ?

ಫೌಜದಾರರಿಗೆ ಆ ವಿಚಾರ ಬಗೆಹರಿಯಲಿಲ್ಲ. ತಮ್ಮ ಸೋಲನ್ನೊಪ್ಪಿ ಕೊಂಡು ಅವರು ನಮ್ಮನ್ನು ಕೇಳಲೇಬೇಕಾಗಿ ಬಂದಿತು.

"ನನಗೇನೂ ತಿಳಿಯುವದಿಲ್ಲ," ಎಂದರು ಕಾರಕೂನರು.

"ನನಗೂ ತಿಳಿಯುವದಿಲ್ಲ," ಎಂದ ಸಹ–ಕಾರಕೂನ.

ದೈನ್ಯ ತುಂಬಿದ ದೃಷ್ಟಿಯಿಂದ ನನ್ನನ್ನೇ ನಿಟ್ಟಿಸಿ ನೋಡುತ್ತಿದ್ದರು ಫೌಜದಾರರು. ಅವರ ಅಸಹಾಯತೆಯನ್ನು ಗುರುತಿಸಿದಾಗ ನನಗೆ ಅಯ್ಯೋ ಪಾಪ! ಎನ್ನಿಸಿತು. ಮನುಷ್ಯ ಮೆತ್ತಗಿದ್ದಾನೆ, ಚೆನ್ನಾಗಿ ಪ್ರಾಯಶ್ಚಿತ್ತ ವಾದಂತಾಯಿತು, ಅಸಹಕಾರ ಚಳವಳಿಯನ್ನು ಮುಂದುವರಿಸುವುದು ಒಳ್ಳೆಯದಲ್ಲ–ಎಂದುಕೊಂಡು ಆ ಸಮಸ್ಯೆಗೆ ಪರಿಹಾರವನ್ನು ಸೂಚಿಸಿದೆ.

ಹುಡುಗಿಯ ತಂದೆಯನ್ನು ಕಚೇರಿಯ ಹೊರಗಡೆ ಕೂಡಿಸಿ, ಅವರ ಗಂಡನನ್ನು ಕರೆಯಿಸಿದೆವು. ಅವನ ಹೆಂಡತಿ ಮಾಯವಾದ ಬಗ್ಗೆ ಅವನಿಂದ ಫಿರ್ಯಾದು ಬರೆಯಿಸಿ ಅದನ್ನು ದಾಖಲು ಮಾಡಿಕೊಂಡೆವು. ಅವಳ ರೂಪು, ಆಕಾರಗಳ ವಿವರಗಳನ್ನು ಎಲ್ಲ ಊರುಗಳಿಗೂ ಕಳುಹಿಸಿಕೊಟ್ಟು ಅವಳನ್ನು

ಶೋಧಿಸುವ ಎತ್ತುಗಡೆ ಮಾಡಿದೆವು. ಅವಳ ತಂದೆಯನ್ನೂ ಒಳಗಡೆ ಕರೆದು ಅವನ ಹೇಳಿಕೆಯನ್ನೂ ಬರೆದುಕೊಂಡೆವು. ಅವನ ಅಳಿಯನನ್ನು ನಾವು ಹಾಗೇ ಬಿಟ್ಟುದನ್ನು ನೋಡಿದ ಆ ಮುದುಕನಿಗೆ ನಮ್ಮ ಬಗ್ಗೆ ಬಲವಾದ ಸಂಶಯ ಬಂದಿತು. ಅವನ ಅಳಿಯನಿಂದ ಹಣ ತಿಂದು ಈ ಪ್ರಕರಣವನ್ನು ಮುಚ್ಚಿ ಬಿಡಲು ನಾವು ಯತ್ನಿಸುತ್ತಿರಬಹುದೆಂದು ಭಾವಿಸಿದ ಆ ಮುದುಕ ಸುಮ್ಮನೆ ಕುಳಿತುಕೊಳ್ಳದೆ, ತನ್ನ ಮಗಳ ಕೊಲೆಯಾಗಿರುವುದಾಗಿ ಡಿ. ಎಸ್. ಪಿ. ಯವರಿಗೆ ಅರ್ಜಿ ಹಾಕಿಬಿಟ್ಟ. ಅವರು ನಮ್ಮ ಫೌಜದಾರರ ಸ್ಪಷ್ಟೀಕರಣ ಕೇಳಿದರು. ಮುದುಕನ ಅಳಿಯನಿಂದ ಲಂಚ ತಿಂದು, ಇವರು ಕೊಲೆಯ ಪ್ರಕರಣವನ್ನು ಅಡಗಿಸಿರುವರೆಂದೇ ಮೇಲಧಿಕಾರಿಗಳೆಲ್ಲರೂ ಭಾವಿಸಿಕೊಂಡಿದ್ದರು. ನಮ್ಮ ಫೌಜದಾರರ ಫಜೀತಿ ಹೇಳತೀರದು. ಅವರ ದರ್ಪ, ದುರಭಿಮಾನ, ಅಹಂಕಾರ ಎಲ್ಲವೂ ಇಳಿದುಹೋಗಿ ಅವರು ಕುರಿಮರಿಯ ಹಾಗೆ ಆಚರಿಸತೊಡಗಿದರು.

"ಈ ಪ್ರಸಂಗದಿಂದ ಹ್ಯಾಗೆ ಪಾರಾಗುವದು ಶಿವಣ್ಣಾ, ಏನಾದರೂ ಹಂಚಿಕೆ ಹುಡುಕು," ಎಂದು ಒಂದೇಸಮನೆ ನನ್ನ ಬೆನ್ನು ಹತ್ತಿದರು.

ನಾನು, ಆ ಹುಡುಗಿಯ ಗಂಡನನ್ನು ಕರೆಯಿಸಿ,

"ನಿನ್ನ ಮಾವ ಡಿ. ಎಸ್. ಪಿ. ಸಾಹೇಬರಿಗೇ ಫಿರ್ಯಾದು ಕೊಟ್ಟಿದ್ದಾನೆ. ಈಗ ನೀನು ಉಳಿದುಕೊಳ್ಳುವ ಮನಸ್ಸಿದ್ದರೆ ನೀನೇ ಏನಾದರೂ ಮಾಡಿ ಅವಳನ್ನು ಪತ್ತೆ ಮಾಡಬೇಕು," ಎಂದು ಹೇಳಿದೆ.

"ನಾನೇನು ಮಾಡಲಿ ?" ಎಂದು ಅವನು ಗೋಳಾಡಿದ.

"ಇಪ್ಪತ್ತು ಜನರನ್ನು ಕರೆದುಕೊಂಡು ಬಾ. ಒಬ್ಬೊಬ್ಬರನ್ನು ಒಂದೊಂದು ಊರಿಗೆ ಕಳಿಸು. ಎರಡು ದಿನಗಳಲ್ಲಿ ಅವಳು ಸಿಕ್ಕರೆ ಸರಿ. ಇಲ್ಲದಿದ್ದರೆ ನೀನು ಉಳಿಯುವದಿಲ್ಲ."

ಆತ ಹಾಗೇ ಮಾಡುವುದಾಗಿ ಹೇಳಿ ಹೊರಟುಹೋದ.

ಫೌಜದಾರರು ಊಟ ನಿದ್ರೆಗಳನ್ನು ತೊರೆದು ಕಾದು ಕುಳಿತರು. ಅವರ ಅದೃಷ್ಟ ಒಳ್ಳೆಯದಿದ್ದಿತೆಂದು ತೋರುತ್ತದೆ. ಮಾರನೆಯ ದಿನ ಸಾಯಂಕಾಲವೇ

ಒಬ್ಬ ಮನುಷ್ಯ ಆ ಹುಡುಗಿಯನ್ನು ಕರೆದುಕೊಂಡು ಬಂದು ನಮ್ಮ ಮುಂದೆ ನಿಲ್ಲಿಸಿದ.

ತಮ್ಮ ದೇವರನ್ನು ಕೊಂಡಾಡುತ್ತಾ ಫೌಜದಾರರು ಮನೆ ಬಿಟ್ಟು ಬಂದು ತಮ್ಮ ಕುರ್ಚಿಯ ಮೇಲೆ ಕುಳಿತರು. ಗಂಡನ ಮನೆಯಲ್ಲಿ ತನಗೆ ತುಂಬಾ ತೊಂದರೆಯಾದುದರಿಂದ ತಾನು ಮನೆ ಬಿಟ್ಟು ಹೋಗಿದ್ದುದಾಗಿ ಆ ಹುಡುಗಿ ಹೇಳಿಕೆ ಕೊಟ್ಟಳು. ಅವಳು ಜೀವದಿಂದಿರುವ ಬಗ್ಗೆ ಎಲ್ಲರಿಂದಲೂ ಹೇಳಿಕೆ ಪಡೆದುಕೊಂಡು ಡಿ. ಎಸ್. ಪಿ. ಯವರಿಗೆ ವರದಿಯೊಪ್ಪಿಸಲಾಯಿತು. ಫೌಜದಾರರೂ ಉಳಿದುಕೊಂಡರು. ಇವರು ಕೊಲೆಯ ಪ್ರಕರಣವೊಂದನ್ನು ಬಚ್ಚಿಟ್ಟಿರುವರೆಂದು ಭಾವಿಸಿದ್ದವರಲ್ಲಿ ಇವರ ಬಗ್ಗೆ ಗೌರವದ ಭಾವನೆಯುದಯಿಸಿತು. ಕೊಲೆಯ ಫಿರ್ಯಾದು ದಾಖಲು ಮಾಡಿಕೊಳ್ಳದಿದ್ದುದೇ ಸರಿಯೆಂದು ಡಿ. ಎಸ್. ಪಿ. ಯವರೂ ಅಭಿಪ್ರಾಯಪಟ್ಟರು – ನಮ್ಮ ಫೌಜದಾರರಿಗೆ ಸ್ವರ್ಗ ಸಮಿಾಪಿಸಿದ ಹಾಗಾಗಿತ್ತು. ಅದಕ್ಕೆಲ್ಲ ನನ್ನ ಬುದ್ಧಿವಂತಿಕೆಯೇ ಕಾರಣವೆನ್ನುವುದನ್ನು ಅವರು ಮರೆಯಲಿಲ್ಲ. ಒಂದು ತಾಸಿನ ವರೆಗೂ ನನ್ನನ್ನೂ ನನ್ನ ಬುದ್ಧಿಕೌಶಲ್ಯವನ್ನೂ ಪ್ರಶಂಸಿಸಿದರು. ನಾನು ಮಾತ್ರ ಒಂದು ಮಾತನ್ನೂ ಆಡಲಿಲ್ಲ. ಅವರ ಸಹವಾಸವೇ ಬೇಡವೆನ್ನಿಸಿತ್ತು ನನಗೆ. ಅವರು ನನ್ನನ್ನು ಊಟಕ್ಕೆ ಆಮಂತ್ರಿಸಿದರು. ನಾನು ಹೋಗಲಿಲ್ಲ. ತಮ್ಮ ಹುಡುಗ ನನ್ನನ್ನು ನೆನೆಸಿಕೊಳ್ಳುತ್ತಿರುವನೆಂದೂ ಅವನನ್ನು ನೋಡುವುದಕ್ಕಾದರೂ ಮನೆಗೆ ಬಂದು ಹೋಗಬೇಕೆಂದೂ ಹೇಳಿದರು. ಆಗ ಮಾತ್ರ ನಾನು ನಿರಾಕರಿಸಲಿಲ್ಲ. ಮನೆಗೆ ಹೋಗಿ ಆ ಹುಡುಗನನ್ನು ಮಾತನಾಡಿಸುತ್ತ ಸ್ವಲ್ಪ ಹೊತ್ತು ಕುಳಿತುಕೊಂಡೆ.

"ಏಳು. ಇಲ್ಲೇ ಊಟ ಮಾಡೋಣ," ಎಂದರು ಫೌಜದಾರರು.

"ಬೇಡ. ನಾನು ಹೋಗುತ್ತೇನೆ," ಎಂದು ಹೇಳಿದವನೆ ಅಲ್ಲಿ ನಿಲ್ಲದೆ ನನ್ನ ಕೊಠಡಿಗೆ ಬಂದೆ.

ಮರು ದಿನ ಬೆಳಿಗ್ಗೆ ಚೆನ್ನ ನನ್ನನ್ನು ಕರೆಯಲು ಬಂದ.

"ಯಾತಕ್ಕೆ ಕರೆದಿದ್ದಾರೆ ಚೆನ್ನ?"

"ಏನೋ ಬರೆಯುವದಿರಬೇಕು."

ಬರೆವಣಿಗೆಯ ಕೆಲಸವನ್ನು ತಪ್ಪಿಸುವಂತಿರಲಿಲ್ಲ. ಅವರ ದಿನಚರಿಯನ್ನು ಬರೆದುಕೊಟ್ಟುದಾಯಿತು.

“ನಾಳೆ ಹಳ್ಳಿಗೆ ಹೊರಡಬೇಕಲ್ಲಾ!” ಎಂದು ಅವರು ಮೆಲ್ಲಗೆ ಮಾತು ತೆಗೆದರು. “ನೀನೂ ಬರಬೇಕು,” ಎಂದೇನೂ ಅವರು ಹೇಳಲಿಲ್ಲ.

ಅವರ ಮಾತಿನ ಧಾಟಿಯನ್ನು ಗುರುತಿಸಿಕೊಂಡು ನಾನೂ ಸುಮ್ಮನಾದೆ. “ನಾನೂ ಬರಲೇನು ?” ಎಂದು ಕೇಳಲಿಲ್ಲ.

ಹಳ್ಳಿಗೆ ಹೋಗುವುದರಿಂದ ಸಿಪಾಯಿಗಳಾದ ನಮಗೂ ಲಾಭವಿರುತ್ತಿತ್ತು. ದಿನ ಭತ್ತೆಯಲ್ಲದೆ ಮೇಲೆ ಅಷ್ಟಿಷ್ಟು ಲಂಚವೂ ಸಿಕ್ಕುತ್ತಿತ್ತು. ಯಾವುದಾದರೊಂದು ದೊಡ್ಡ ಪ್ರಕರಣ ಸಿಕ್ಕಿದಾಗ ಸಾವಿರಾರು ರೂಪಾಯಿ ಲಾಭ ಬರುತ್ತಿತ್ತು. ನನಗೆ ಲಾಭದ ಬಗ್ಗೆ ಲೋಭವಿರಲಿಲ್ಲವೆಂದೇನೂ ಅಲ್ಲ. ಆದರೆ ಈ ಮಹಾಶಯರ ಜೊತೆಗೆ ಪ್ರಯಾಣ ಹೊರಡುವುದೆಂದರೆ ಮಾತ್ರ ಮೈಮೇಲೆ ಮುಳ್ಳು ಬಂದಂತಾಗುತ್ತಿತ್ತು.

ಓಡಿಹೋದ ಹುಡುಗಿಯ ಪ್ರಕರಣದಲ್ಲಿ ಅವಳ ಗಂಡನಿಂದ ಫೌಜದಾರರು ಎರಡು ನೂರು ರೂಪಾಯಿಗಳನ್ನು ತೆಗೆದುಕೊಂಡಿದ್ದರು. ಆ ಸಂಗತಿಯನ್ನು ನಾನೂ ಬಲ್ಲವನಾಗಿದ್ದೆ. ಆ ಹಣವನ್ನೆಲ್ಲ ತಾವೊಬ್ಬರೇ ತಿಂದು ಹಾಕಲು ಸಂಕೋಚವಾಗಿರಬೇಕು ಅವರಿಗೆ. ನಲವತ್ತು ರೂಪಾಯಿಗಳನ್ನು ನನಗೆ ಕೊಡ ಮಾಡಿದರು. ನಾನು ಸ್ವೀಕರಿಸಲಿಲ್ಲ.

“ಆ ಕೇಸಿನಲ್ಲಿ ನಾನೇನೂ ಕಷ್ಟಪಟ್ಟಿಲ್ಲವಲ್ಲ. ನನಗೇನೂ ಬೇಡ, ನನಗೆ ದುಡ್ಡಿನ ಅಡಚಣೆಯೂ ಇಲ್ಲ.”

“ನಿನಗೆ ಬೇಕಾದಾಗ ತೆಗೆದುಕೊಳ್ಳಬಹುದು,” ಎಂದು ಹೇಳಿ ಆ ರೂಪಾಯಿಗಳನ್ನು ಅವರು ತಮ್ಮ ಹತ್ತಿರವೆ ಇಟ್ಟುಕೊಂಡರು.

ನಾನು ಊಟಕ್ಕೆಂದು ಕೊಠಡಿಗೆ ಹೊರಟೆ.

ಆಗ ಮಾತ್ರ ಅವರು ನನ್ನನ್ನು ಬಿಡಲಿಲ್ಲ.

“ಹೀಗ್ಯಾಕೆ ಮಾಡುತ್ತೀ ಶಿವಣ್ಣಾ? ನನ್ನ ಮೇಲಿನ ಸಿಟ್ಟು ಇನ್ನೂ ಹೋಗಲಿಲ್ಲವೇನು ನಿನಗೆ?”

ಎದ್ದು ಹೊರಟಿದ್ದ ನನ್ನ ಕೈ ಹಿಡಿದು ಕೂಡಿಸಿ ಅವರು ಮುಂದುವರಿಸಿದರು:

“ಏನೇನೋ ಆಯಿತು. ಎಲ್ಲಾ ಮರೆತು ಬಿಡಪ್ಪಾ. ನಾನು ನೀನು ಅಣ್ಣ ತಮ್ಮಂದಿರಿದ್ದಂತೆ. ದೊಡ್ಡ ಫೌಜದಾರರಿಗೆ ಹೇಳಿ ನಾನೇ ಇಲ್ಲಿಗೆ ನಿನ್ನನ್ನು

ಕರೆಯಿಸಿಕೊಂಡಿದ್ದೇನೆ. ನಿನ್ನನ್ನು ತಮ್ಮನಂತೆ ನೋಡಿಕೊಳ್ಳುವೆನೆಂತ ಅವರಿಗೆ ವಚನ ಕೊಟ್ಟಿದ್ದೇನೆ. ನೀನು ಹೀಗೆ ಮಾಡಿದರೆ ಹ್ಯಾಗೆ?"

"ಹೋಗಲಿ ಬಿಡಿರೀ ಶಿವಣ್ಣ. ಎಷ್ಟದು ಸಿಟ್ಟು?" ಎಂದು ಚೆನ್ನನೂ ದನಿಗೂಡಿಸಿದ.

ಫೌಜದಾರರ ಮಗನೂ ಓಡಿಬಂದು ನನ್ನನ್ನೆಳೆಯತೊಡಗಿದ. ನಾನಿದ್ದಾಗ ಎಂದೂ ಹೊರಗಡೆ ಮುಖ ತೋರಿಸದಿದ್ದ ಫೌಜದಾರರ ಹೆಂಡತಿಯೂ ಒಳ ಬಾಗಿಲಲ್ಲಿ ಬಂದು ನಿಂತು, "ಊಟ ಮುಗಿಸಿಕೊಂಡು ಹೋಗಿರಪ್ಪಾ," ಎಂದು ಹೇಳಿದಳು.

ಸರಿ. ನಾನು ಊಟಕ್ಕೆ ನಿಂತುಕೊಳ್ಳಲೇ ಬೇಕಾಯಿತು. ಹೆಂಡತಿ ಬಂದು ಕರೆದುದಕ್ಕೆ ಫೌಜದಾರರೇನೆಂದುಕೊಂಡರೋ ಎಂದು ನನಗೆ ದಿಗಿಲಾಗದಿರಲಿಲ್ಲ.

ಮಧ್ಯಾಹ್ನ ಕೊಠಡಿಯಲ್ಲಿ ವಿರಮಿಸಿಕೊಳ್ಳುತ್ತಿದ್ದಾಗ ಉಜ್ಜಪ್ಪನವರು ಬಂದು ಕುಳಿತರು. ಅವರನ್ನು ನೋಡಿದೊಡನೆ ಸುಮಿತ್ರೆಯ ರೂಪು ಕಣ್ಣೆದುರಿಗೆ ಕಟ್ಟಿದಂತಾಯಿತು.

"ಯಾವಾಗ ಬಂದಿರಿ? ಸುಮಿತ್ರೆ ಕ್ಷೇಮವೆ?"

"ಇಂದೇ ಬಂದೆ. ಎಲ್ಲಾ ಕ್ಷೇಮದಿಂದಿದ್ದಾರೆ. ಸುಮಿತ್ರಾ ನಿಮಗೆ ನಮಸ್ಕಾರ ಹೇಳಿದ್ದಾಳೆ."

"ನಮಸ್ಕಾರವಿರಲಿ. ಅಲ್ಲಿ ಏನೇನಾಯಿತು?" ನಾನು ಆತುರತೆಯಿಂದ ಕೇಳಿದೆ.

"ದೇವರ ದಯದಿಂದ ಎಲ್ಲಾ ಅನುಕೂಲವಾಗೇ ಆಯಿತು. ನಮ್ಮಣ್ಣ ವರು ಪ್ರೀತಿಯಿಂದಲೇ ಬರಮಾಡಿಕೊಂಡರು. ಸೊಸೆಯ ಮೈಮೇಲಿನ ಆಭರಣ ನೋಡಿ ಸಮಾಧಾನಪಟ್ಟುಕೊಂಡರು. ಅವಳ ಗಂಡ ಮಾವ ಇಬ್ಬರೂ ಮನೆಯಲ್ಲೇ ಇದ್ದರು ನಾವು ಹೋದಾಗ. ಸುಮಿತ್ರೆಯ ಸವತಿಗೆ ಮಾತ್ರ ಮೂರು ವರ್ಷಗಳಿಂದ ಮೈಯಲ್ಲಿ ನೆಟ್ಟಗಿಲ್ಲವಂತೆ. ಅವಳು ಹಾಸಿಗೆ ಹಿಡಿದು ಬಿದ್ದಿದ್ದಾಳೆ, ಪಾಪ. ಅವಳ ಉಪಚಾರಕ್ಕಾಗಿ ಎಷ್ಟು ರೂಪಾಯಿ ಖರ್ಚು ಮಾಡಿದರೂ, ಎಷ್ಟು ಔಷಧ ಕೊಡಿಸಿದರೂ ನೆಟ್ಟಗಾಗಲಿಲ್ಲವಂತೆ. ಇದ್ದೊಬ್ಬ ಮಗನ ಸಂಸಾರ ಹೀಗಾಯಿತಲ್ಲಾ ಅಂತ ಆ ತಂದೆತಾಯಿಗಳಿಬ್ಬರೂ ಹಳಹಳಿ

ಸುತ್ತಿದ್ದರು. ಸುಮಿತ್ರೆಯ ಸವತಿಯೂ ಒಳ್ಳೆಯ ಹೆಣ್ಣು ಮಗಳೇ. ಸುಮಿತ್ರೆಯನ್ನು ಕರೆಸಬೇಕು ಅಂತ ಅವಳೇ ಹೇಳಿದ್ದಳಂತೆ ತನ್ನ ಗಂಡನಿಗೆ. ಅವನ ತಂದೆತಾಯಿಗಳು ಮಾತ್ರ ಆ ಬಂಗಾರದ ಆಸೆಗಾಗಿ ಸುಮ್ಮನಿದ್ದುಬಿಟ್ಟದ್ದರು. ಇತ್ತಿತ್ತಲಾಗಿ ಸುಮಿತ್ರೆ ಆಭರಣವಿಲ್ಲದೆ ಹೋಗಿದ್ದರೂ ಮನೆಯಲ್ಲಿ ಕರೆದುಕೊಳ್ಳುತ್ತಿದ್ದರಂತೆ."

"ಅಂತೂ ಅವರ ಮನಸ್ಸು ಬದಲಾಗಿದೆ ಅಂದಂತಾಯಿತು."

"ಹೌದು. ಸುಮಿತ್ರೆಯನ್ನು ನೋಡಿ ಎಲ್ಲರಿಗೂ ಬಹಳ ಸಂತೋಷವಾಯಿತು. ಎಷ್ಟೋ ದಿನದಿಂದ ಅವರ ವ್ಯಾಪಾರವೂ ನೆಟ್ಟಗೆ ನಡೆದಿರಲಿಲ್ಲ. ನಮ್ಮ ಅಳಿಯಂದಿರ ತಂದೆತಾಯಿಗಳಿಬ್ಬರೂ ಮುಪ್ಪಿನವರು. ಆಳುಗಳಿಂದ ಸರಿಯಾಗಿ ಕೆಲಸವಾಗುತ್ತಿರಲಿಲ್ಲ. ನಮ್ಮ ಅಳಿಯಂದಿರೊಬ್ಬರೇ ಅಂಗಡಿ ಮನೆ ಎರಡನ್ನೂ ನೋಡಿಕೊಳ್ಳಲಿಕ್ಕಾಗದೆ ಬಹಳ ಅವ್ಯವಸ್ಥೆಯಾಗಿತ್ತು. ಸುಮಿತ್ರೆ ಹೋಗುತ್ತಲೂ ಮನೆಯ ಜವಾಬ್ದಾರಿಯೆಲ್ಲಾ ಅವಳು ನೋಡಿಕೊಳ್ಳ ಹತ್ತಿದಳು. ಗಂಡ ಅಂಗಡಿಯ ಕಡೆ ಲಕ್ಷ್ಯ ಕೊಡತೊಡಗಿದ. ಎಲ್ಲಾ ಸುಧಾರಿಸಿತು. ಒಂದು ವಾರ ನನ್ನನ್ನವರು ಬಿಡಲೇ ಇಲ್ಲ. ಅಂತೂ ಬೀಗರಿಗೂ ನಮಗೂ ಮತ್ತೆ ನೆಟ್ಟಗಾಯಿತು. ಇದಕ್ಕೆಲ್ಲಾ ನೀವೇ ಕಾರಣರು...."

ನನಗೆ ಬಲು ಸಂಕೋಚವೆನ್ನಿಸಿತು.

"ನಾನೇನು ಮಾಡಿದೆ ಉಜ್ಜಪ್ಪನವರೆ? ನನ್ನನ್ನು ಯಾಕೆ ಹೊಗಳುತ್ತೀರಿ ಸುಮ್ಮನೆ!"

"ಸುಮಿತ್ರಾ ಅಂತೂ ನಿಮ್ಮನ್ನು ದೇವರೆಂತ ತಿಳಿದಿದ್ದಾಳೆ."

ಆ ಮಾತು ಕೇಳುತ್ತಲೂ ನಾಚಿಕೆಯಿಂದಾಗಿ ಕೊಠಡಿಯಿಂದ ಓಡಿ ಹೋಗುವ ಹಾಗಾಯಿತು ನನಗೆ.

ಆ ಮುಗ್ಧ ಹುಡುಗಿಯನ್ನು ಕಾಮುಕ ದೃಷ್ಟಿಯಿಂದ ನೋಡಿದ ಈ ಪರಮಪಾಪಿಯೆಲ್ಲಿ! ದೇವರೆಲ್ಲಿ!

ಎಂಥ ಮರುಳರು ಈ ಪ್ರಪಂಚದ ಜನರು!

೩೦

ಹಳ್ಳಿಯಲ್ಲಿ ಒಂದು ಪ್ರಕರಣ

ಮೂರನೆಯ ದಿನ ನಾನಿನ್ನೂ ಹಾಸಿಗೆಯಿಂದ ಎದ್ದಿರಲಿಲ್ಲ. ಬಾಗಿಲ ಮೇಲೆ ಸದ್ದಾಯಿತು. ಎದ್ದು ಬಾಗಿಲು ತೆರೆದು ನೋಡಿದರೆ ಅಪ್ಪಣ್ಣನ ಹಸನ್ಮುಖ ಕಾಣಿಸಿತು.

"ಇನ್ನೂ ಮಲಗಿದ್ದೀಯೇನು ? ಏಳು, ಏಳು. ಫೌಜದಾರರು ಕರೆಯುತ್ತಿದ್ದಾರೆ," ಎಂದ ಅಪ್ಪಣ್ಣ.

"ಯಾಕೆ ? ಮತ್ತೇನಾದರೂ ಕೇಸು ಬಂದಿದೆಯೋ ?"

"ಕೇಸಿಲ್ಲ, ಏನಿಲ್ಲ, ಹಳ್ಳಿಗೆ ಹೋಗಬೇಕಲ್ಲ. ಚಕ್ಕಡಿ ತಯಾರಾಗಿ ಬಂದಿದೆ...."

ಅವಸರದಿಂದ ಮುಖ ತೊಳೆದುಕೊಂಡು ಹೊರಟುಬಿಟ್ಟೆ.

"ಸ್ವಾಮಿ ಬಂದಾನೇನು ಅಪ್ಪಣ್ಣ ?"

"ಇಲ್ಲ. ಅವನ ಪ್ರೇಯಸಿ ಅವನನ್ನು ಬಿಟ್ಟಿರಲಿಕ್ಕಿಲ್ಲ," ಎಂದು ನಗುತ್ತಾ ನುಡಿದ ಅಪ್ಪಣ್ಣ.

ಫೌಜದಾರರು, ಅಡುಗೆಯಾಳು, ಅಪ್ಪಣ್ಣ, ನಾನು ಹೀಗೆ ನಾಲ್ಕು ಜನರು ಚಕ್ಕಡಿ ಏರಿ ಕುಳಿತೆವು. ಹತ್ತು ಮೈಲುಗಳ ಹಾದಿ. ಹನ್ನೆರಡು

ಗಂಟೆಯಾಗುವುದರೊಳಗಾಗಿ ಹಳ್ಳಿಗೆ ತಲುಪಿದುದೂ ಆಯಿತು. ಅಪ್ಪಣ್ಣ ಕೊಂಚ ಮುಂಚಿತವಾಗಿ ಹೋಗಿ ಚಾವಡಿಯನ್ನುಡುಗಿಸಿ ಸ್ವಚ್ಛವಾಗಿಸಿದ್ದ. ಗೌಡರೂ ಓಲೇಕಾರರೂ ಬಂದರು. ಸ್ವಾಗತ, ಸತ್ಕಾರ ಎಲ್ಲವೂ ಯಥಾ ಪ್ರಕಾರ ನಡೆಯಿತು. ಚೆನ್ನ ಅಡುಗೆಯ ಸಿದ್ಧತೆಗೆ ತೊಡಗಿದ.

ನಾವು ಚಹ ಕುಡಿಯುತ್ತಾ ಕುಳಿತಿದ್ದ ಹಾಗೇ ಮುದುಕನೊಬ್ಬ ಚಾವಡಿಗೆ ಬಂದು ಫೌಜದಾರರೆದುರಿಗೆ ಬಾಗಿ ನಮಸ್ಕರಿಸಿ ಹೇಳಿದ:

"ಶರಣು ಬಂದೀನ್ರೀ ದೇವ್ರೂ."

"ಏನೋ, ಯಾರು ನೀನು?"

ಅಲ್ಲಿಯೆ ನಿಂತುಕೊಂಡಿದ್ದ ಗೌಡ ನಡುವೆ ಬಾಯಿ ಹಾಕಿ, ಅವನು ನೆರೆಯ ಊರಿನ ರೈತನೆಂದು ವಿವರಿಸಿ ಹೇಳಿದ.

"ಯಾಕೆ ಬಂದಿದ್ದೀ?" ಎಂದರು ಫೌಜದಾರರು.

"ನನ್ನ ಮಗಳು ಸಾಯಲಿಕ್ಕೆ ಹತ್ತಿದಾಳ ದೇವ್ರೂ. ಏನಾರ ಮಾಡಿ ಅವಳನ್ನ ಉಳಿಸಿರಿ."

ಫೌಜದಾರರ ಕುತೂಹಲ ಕೆರಳಿತು. ನಾವೂ ಆಸಕ್ತಿಯಿಂದ ಕಿವಿಗೊಟ್ಟು ಕುಳಿತೆವು.

"ನನ್ನ ಮಗಳನ್ನ ಒಂದು ಖೋಲಿಯೊಳಗ ಹಾಕಿ ಕೀಲೀ ಹಾಕಿದ್ದಾನ್ರೀ ನನ್ನ ಅಳಿಯ. ಮೂರು ದಿವಸವಾತು. ಅವಳಿಗೆ ಊಟಕ್ಕೂ ಕೊಟ್ಟಿಲ್ಲ. ಅವಳು ಬದುಕಿದಾಳೋ ಸತ್ತಿದಾಳೋ ಯಾರು ಬಲ್ಲರು!"

"ಮೂರು ದಿವಸವಾಯಿತೆನ್ನುತ್ತೀ. ಇಲ್ಲಿಯವರೆಗೆ ಏನು ಕತ್ತೆ ಕಾಯುತ್ತಿದ್ದಿಯೇನು? ಗೌಡರಿಗೇಕೆ ದೂರು ಕೊಡಲಿಲ್ಲ?"

"ಗೌಡಗೂ ನನ್ನ ಅಳಿಯಗೂ ಚಲೋ ಸಂಬಂಧ ಐತಿ. ಅವ ನನ್ನ ತಕರಾರು ಕಿವೀಮ್ಯಾಲ ಹಾಕ್ಕೊಳ್ಳಲಿಲ್ಲ."

"ಅದಿರಲಿ. ನಿನ್ನ ಅಳಿಯ ಹೀಗೆ ಮಾಡಲಿಕ್ಕೆ ಕಾರಣವೇನು?"

"ಹೆಂಡತಿಯ ವ್ಯಾಲ ಸುಳ್ಳು ಸುಳ್ಳೇ ಸಂಶಯ ಇಟ್ಟುಕೊಂಡಿದಾನೆ. ನನ್ನ ಅಳಿಯನ ನಡತೆ ಚಲೋದಿಲ್ಲ. ಉಡಾಳರ ಸಂಗತೀಗೆ ಬಿದ್ದು ರೊಕ್ಕ ಎಲ್ಲಾ ಹಾಳು ಮಾಡಿಕೊಂಡಿದಾನೆ. ಇಸ್ಪೀಟು ಆಡುತಾನೆ. ಸೂಳೆಯರ ಸಂಗ ಮಾಡುತಾನೆ. ತಳವಾಳ ರಂಗಿ ಅಂತ ಒಬ್ಬ ಸೂಳೆ ಅದಾಳೆ ನಮ್ಮೂರಾಗ.

ಅವಳ ಸಹವಾಸಾ ಮಾಡಿ ಸಾವಿರಾರು ರೂಪಾಯಿ ಕಳಕೊಂಡಿದಾನೆ. ಹೆಂಡತಿ ಬ್ಯಾಡವಾಗಿದಾಳೆ. ಅದಕ್ಕೇ ದಿನಾ ಇಬ್ಬರಿಗೂ ಜಗಳವಾಗುತಿತ್ತು. ಮೊನ್ನೆ ಭಯಂಕರ ಬಡಿದು ಖೋಲಿಯೊಳಗ ಹಾಕಿಬಿಟ್ಟದಾನೆ. ಆ ಕಟುಕ ನನ್ನ ಮಗಳನ್ನ ಕೊಂದೇಬಿಟ್ಟರಬೇಕು ಅಂತನಿಸುತೈತಿ ನನಗೆ."

ಚಾವಡಿಯಲ್ಲಿದ್ದ ಹಳ್ಳಿಯ ಜನರನ್ನೆಲ್ಲ ಹೊರಗಡೆ ಕಳಿಸಿ, ಮುದುಕನ ಹತ್ತಿರ ಹಣವಿದೆಯೋ ಹೇಗೆಂದು ವಿಚಾರಿಸಲಾಯಿತು.

"ನೋಡು. ಇದು ಬಹಾಳ ದೊಡ್ಡ ಕೆಲಸ. ನಿನ್ನ ಅಳಿಯನ ಮಗ್ಗಲು ಮುರೀತೇನೆ. ಐದು ನೂರು ರೂಪಾಯಿ ಕೊಡಬೇಕಾಗುತದೆ," ಎಂದರು ಫೌಜದಾರರು.

ಎರಡು ನೂರು ರೂಪಾಯಿ ಕೊಡಲು ಸಿದ್ಧನಿರುವುದಾಗಿ ಅವನು ಹೇಳಿದ.

ಒಂದು ತಾಸಿನ ವರೆಗೂ ಚೌಕಾಸಿ ನಡೆದು ಕೊನೆಗೆ ಇನ್ನೂರೈವತ್ತು ರೂಪಾಯಿಯೆಂದು ನಿಷ್ಕರ್ಷೆಯಾಯಿತು.

ಅವನು ಒಂದುಕಾಸನ್ನೂ ಕೊಡದಿದ್ದರೂ ನಾವು ನಮ್ಮ ಕರ್ತವ್ಯ ಮಾಡಲೇ ಬೇಕಾಗಿತ್ತು. ಆ ಹೆಂಗಸನ್ನು ಅನ್ಯಾಯವಾಗಿ ಬಂಧನದಲ್ಲಿಟ್ಟ ಅಪರಾಧ ನಡೆದಿದ್ದಿತಲ್ಲವೆ? ಮುದುಕನಿಂದ ಫಿರ್ಯಾದು ತೆಗೆದುಕೊಂಡು ನಾವು ಅವನ ಅಳಿಯನನ್ನು ಬಂಧಿಸಲು ಬರುತ್ತಿತ್ತು. ಆದರೆ, ಹಳ್ಳಿಯ ಅಶಿಕ್ಷಿತ ಜನರಿಗೆ ಕಾಯದೆಯ ಜ್ಞಾನವೆಲ್ಲಿಯದು? ಹಳ್ಳಿಯಲ್ಲಿ ಪ್ರಚಲಿತವಿರುವ ಅಲಿಖಿತ ಕಾಯದೆಯಂತೆ ಗಂಡನಾದವನು ಹೆಂಡತಿಯನ್ನು ಬೇಕಾದಂತೆ ನಡಸಿಕೊಳ್ಳ ಬಹುದು, ಅವಳನ್ನು ಹೊಡೆಯಬಹುದು, ಕೋಣೆಯಲ್ಲಿ ಹಾಕಿ ಬಂಧನದಲ್ಲಿಡ ಬಹುದು, ಇಷ್ಟಪಟ್ಟರೆ ಪ್ರಾಣವನ್ನೂ ತೆಗೆಯಬಹುದು! ಪೋಲೀಸರಾಗಲಿ ಸರಕಾರವಾಗಲಿ ಆ ಗಂಡನಿಗೇನನ್ನೂ ಮಾಡುವಂತಿಲ್ಲವೆಂದೇ ಹಳ್ಳಿಗರ ಸಾಮಾನ್ಯ ಕಲ್ಪನೆ. ಎಂತಲೇ ಅವರು ಇಂಥ ಸಂದರ್ಭಗಳಲ್ಲಿ ಪೋಲೀಸರ ನೆರವು ಪಡೆಯಲು ಬಂದಾಗಲೆಲ್ಲ ನಮಗೆ ಹಣ ಕೊಡಲು ಸಿದ್ಧರಾಗುವುದು. ಹಳ್ಳಿಗರ ಮೂಢತನದಿಂದಾಗಿಯೆ ಅವರಿಗೆ ಹಾನಿ, ನಮಗೆ ಲಾಭ.

"ನೀನು ಮೊದಲು ಊರಿಗೆ ಹೋಗು. ನಮ್ಮ ಹತ್ತರ ಬಂದ ಸುದ್ದಿಯನ್ನು ಯಾರಿಗೂ ತಿಳಿಸಬೇಡ. ನಾವು ಬರುವುದನ್ನು ಕಾಯುತ್ತಾ ಇರು. ಬಂದಕೂಡಲೆ ನಿನ್ನ ಅಳಿಯನ ಮನೆ ತೋರಿಸಿಬಿಡು," ಎಂದು

ಸೂಚನೆಯಿತ್ತು ಅವನನ್ನು ಕಳಿಸಿಕೊಟ್ಟು ನಾವು ಚಕ್ಕಡಿ ತರಿಸಿ ಹೊರಟೆವು. ಅಲ್ಲಿಂದ ಆ ಮುದುಕನ ಊರಿಗೆ ಆರು ಮೈಲುಗಳ ದಾರಿ. ಚಕ್ಕಡಿಗೆ ಗೌಡರ ಎತ್ತುಗಳನ್ನು ಹೂಡಲಾಗಿತ್ತು. ದೊಡ್ಡ ದೊಡ್ಡ ಎತ್ತುಗಳು. ಒಂದೂವರೆ ತಾಸಿನೊಳಗಾಗಿ ಆ ಹಳ್ಳಿಯ ಹತ್ತಿರ ಬಂದೆವು. ಅಗಸೆಯಲ್ಲಿಯೆ ಕಾದುಕೊಂಡಿದ್ದ ಮುದುಕ ತನ್ನ ಅಳಿಯನ ಮನೆ ತೋರಿಸಿ ಹೊರಟು ಹೋದ." ಪೋಲೀಸರು ಬಂದರು, ಫೌಜದಾರರು ಬಂದರು," ಎಂದು ಊರಲ್ಲೆಲ್ಲ ಸುದ್ದಿ ಹರಡಿತು. ಗೌಡನೂ ಧಾವಿಸಿ ಬಂದ. ನೇರವಾಗಿ ಆ ಮುದುಕನ ಅಳಿಯನ ಮನೆಗೆ ಹೋದೆವು. ಆ ಅಳಿಯನನ್ನೂ ಕರೆಯಿಸಿದೆವು.

ಫೌದಾರರು ಅವನಿಗೊಂದು ಒದೆತ ಕೊಟ್ಟು,

"ಹೆಂಡತಿಯನ್ನು ಯಾವ ಖೋಲಿಯಲ್ಲಿಟ್ಟದ್ದೀ? ತೋರಿಸು," ಎಂದು ಗದರಿಸಿದರು. ಒಂದು ಒದೆತಕ್ಕೇ ಅವನು ಸುಸ್ತಾಗಿಹೋಗಿ ಕೊಠಡಿಯ ಬೀಗ ತೆಗೆದ.

ಮೂಲೆಯಲ್ಲಿ ಶವದಂತೆ ಬಿದ್ದುಕೊಂಡಿದ್ದ ಆಕೃತಿಯೊಂದು ಕಾಣಿಸಿತು. ಅವಳ ಮೂಳೆಗಳೆಲ್ಲ ಮುರಿದು ಹೋಗುವಂತೆ ಹೊಡೆತ ಬಿದ್ದಿದ್ದುವು. ಮೂರು ದಿನಗಳಿಂದ ಆಹಾರವಿರಲಿಲ್ಲವಾದುದರಿಂದ ಅಲುಗಾಡುವುದಕ್ಕೂ ತ್ರಾಣವುಳಿದಿರಲಿಲ್ಲ ಅವಳ ದೇಹದಲ್ಲಿ. ಅವಳ ತಂದೆಯನ್ನು ಬರಮಾಡಿಕೊಂಡು ಅವಳನ್ನು ಮನೆಗೆ ಕರೆದೊಯ್ದು ಸ್ನಾನ ಮಾಡಿಸಿ, ಊಟ ಮಾಡಿಸಿ, ನಾವು ಕರೆಸಿದಾಗ ಕರೆದುಕೊಂಡು ಬರುವಂತೆ ತಿಳಿಸಿದೆವು.

ತಂದೆಯನ್ನು ಕಾಣುತ್ತಲೂ ದುಃಖ ಉಕ್ಕೇರಿ ಬಂದು ಅವನನ್ನು ತಬ್ಬಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು ಆ ಹೆಣ್ಣುಮಗಳು. ಆ ದೃಶ್ಯವನ್ನು ಕಂಡು ನಮಗೂ ಕಳವಳವಾಗದಿರಲಿಲ್ಲ. ಅವಳ ಗಂಡನಿಗೂ ಪಶ್ಚಾತ್ತಾಪವಾದಂತೆ ತೋರುತ್ತಿತ್ತು. ಅವನ ಕಣ್ಣುಗಳಲ್ಲಿಯೂ ಕಂಬನಿಗಳು ಕಾಣಿಸಿಕೊಂಡಿದ್ದುವು.

ಇನ್ನೆರಡು ದಿನ ಅವಳು ಹಾಗೇ ಅಲ್ಲಿಯೆ ಬಿದ್ದುಕೊಂಡಿದ್ದಲ್ಲಿ ಅವಳು ಸತ್ತುಹೋಗಬಹುದಾಗಿತ್ತು. ಫೌಜದಾರರು ಗೌಡನನ್ನು ಮನಸ್ಸಿಯಾಗಿ ಬಯ್ದರು.

"ಇಂಥಾ ಪ್ರಕರಣ ನಡೆದಿದ್ದರೂ ನೀನೇನೂ ಮಾಡದೆ ಸುಮ್ಮನಿದ್ದೀಯಲ್ಲ. ನಿನ್ನನ್ನು ಈಗಿಂದೀಗ ಸಸ್ಪೆಂಡ್ ಮಾಡಿಸುತ್ತೇನೆ."

"ಗಂಡ ಹೆಂಡರ ಜಗಳ ಅಂತ ನಾನು ಸುಮ್ಮನಿದ್ದೆ ದೇವ್ರೂ," ಎಂದು ಗೌಡ ಗೋಗರೆಯತೊಡಗಿದ.

"ನನಗೆಲ್ಲಾ ಗೊತ್ತಿದೆ. ನೀನೂ ಇವನೂ ಒಂದೇ ಪಾರ್ಟಿಯವರು. ಇವನಿಂದ ನೀನೂ ಲಂಚ ತಿಂದಿರಬೇಕು. ನಿಮ್ಮಿಬ್ಬರನ್ನೂ ಜೇಲಿಗೆ ಹಾಕಿಸುತ್ತೇನೆ."

ಹುಡುಗಿಯ ಗಂಡ, ಶಿವಪ್ಪ ಫೌಜದಾರರ ಕಾಲುಗಳ ಮೇಲೆ ಬಿದ್ದು,

"ಸಿಟ್ಟು ಬಂದು ಹೀಂಗ ಮಾಡಿದಿನ್ರಿ ದೇವ್ರೂ," ಎಂದ.

"ಸಿಟ್ಟು ಬಂದರೆ ಹೆಂಡತಿಯನ್ನು ಕೊಂದುಬಿಡುವವನೇನು?"

"ಅವಳು ಒಬ್ಬನ್ನ ಇಟ್ಟುಕೊಂಡಿದಾಳ್ರೀ. ಅದಕ್ಕ ಸಿಟ್ಟು ತಡೀಲಿಕ್ಕಾಗಲಿಲ್ಲ."

"ಅವಳು ವ್ಯಭಿಚಾರ ಮಾಡಿದ್ದರೆ ಸೋಡಚೀಟೀ ಕೊಟ್ಟು ಬಿಟ್ಟುಬಿಡಬೇಕು. ಹೊಡೆದು ಬಡೆದು ಮಾಡಲು ನಿನಗೇನು ಅಧಿಕಾರ? ಅನ್ನ ನೀರು ಕೊಡದೆ ಖೋಲಿಯಲ್ಲಿ ಹಾಕಿ ಕೊಲ್ಲಲು ಏನು ಅಧಿಕಾರ? ಈ ಅಪರಾಧಕ್ಕಾಗಿ ನಿನಗೆ ಏಳು ವರ್ಷ ಶಿಕ್ಷೆಯಾಗುತದೆ. ಅಪ್ಪಣ್ಣಾ, ಇವನಿಗೆ ಬೇಡಿ ಹಾಕು," ಎಂದರು ಫೌಜದಾರರು.

"ಬ್ಯಾಡರೀ ರಾವಸಾಬರೆ, ಇದೊಂದು ಸಾರಿ ನನ್ನ ಬಿಟ್ಟುಬಿಡಿರಿ. ಬೇಡಿ ಗೀಡಿ ಹಾಕಬ್ಯಾಡ್ರಿ," ಎನ್ನುತ್ತಾ ಶಿವಪ್ಪ ಫೌಜದಾರರ ಕಾಲು ಹಿಡಿದು ಕೊಂಡ.

ಅಪ್ಪಣ್ಣ ಬೇಡಿಗಳನ್ನು ತಂದ. ಶಿವಪ್ಪ ಎಷ್ಟು ಗೋಗರೆದರೂ ಅವನ ಕೈಗೆ ಬೇಡಿ ತೊಡಿಸಲಾಯಿತು.

ಪೋಲೀಸರಿಗೆ ಲಂಚ ಸುಲಭವಾಗಿ ದೊರೆಯಲು ಸಹಾಯಕವಾಗುವ ವಸ್ತುಗಳೆಂದರೆ ಈ ಬೇಡಿಗಳು. ಅವುಗಳನ್ನು ಹಾಕಿಸಿಕೊಳ್ಳುವುದೆಂದರೆ ಮಾನಮರ್ಯಾದೆಗಳನ್ನೆಲ್ಲ ಕಳೆದುಕೊಂಡ ಹಾಗೆ. ಅಂತೆಯೇ, ಅವುಗಳಿಂದ ತಪ್ಪಿಸಿಕೊಳ್ಳಲೆಂದು ಪೋಲೀಸರಿಗೆ ಸಾವಿರಾರು ರೂಪಾಯಿ ಕೊಡುವವರೂ ಉಂಟು. ಬೇಡಿ ಹಾಕುವುದನ್ನು ತಪ್ಪಿಸಲೂ ಲಂಚ; ಹಾಕಿದ ಬೇಡಿಗಳನ್ನು ತೆಗೆಯಿಸಲೂ ಲಂಚ. ಬೇಡಿಗಳನ್ನು ನಾವು ಹೊರದೆಗೆದ ಬಳಿಕ ಹಣವಿಲ್ಲದೆ

ಹಾಗೇ ಅವುಗಳನ್ನು ಚೀಲದಲ್ಲಿ ಹಾಕುವ ಹಾಗಿಲ್ಲ. ಹೀಗಿದೆ ಬೇಡಿಗಳ ಮಹಿಮೆ!

ಶಿವಪ್ಪನನ್ನು ಒಂದು ಕಡೆ ಕೂಡಿಸಿ ನಾವು ಕೊಂಚ ವಿರಮಿಸಿಕೊಂಡ ತರುವಾಯ ಅವನ ಹೆಂಡತಿ ಚೆನ್ನವ್ವನನ್ನು ಕರೆಯಿಸಿದೆವು. ಅವಳ ವಿಚಾರಣೆ ಗಾರಂಭವಾಯಿತು.

"ಏನು ಚೆನ್ನವ್ವಾ, ನೀನೇನು ಹೇಳುತ್ತೀ?"

ಸ್ನಾನ ಊಟ ಮುಗಿಸಿಕೊಂಡು ಬಂದಿದ್ದುದರಿಂದ ಆ ವೇಳೆಗಾಗಲೆ ಅವಳ ಮೈಯಲ್ಲಿ ಶಕ್ತಿ ಸಂಚರಿಸುತ್ತಿತ್ತು. ತಲೆ ತಗ್ಗಿಸಿಕೊಂಡು ಕುಳಿತು, ಮುಖದ ತುಂಬಾ ಸೆರಗು ಹೊದೆದುಕೊಂಡು ಅವಳು ಕುಗ್ಗಿದ ಧ್ವನಿಯಲ್ಲಿ ಹೇಳಿದಳು:

"ನಾನೇನು ಹೇಳಲಿ ದೇವ್ರೂ. ಎಲ್ಲಾ ನನ್ನ ಹಣೇಬರಾ."

"ನಿನ್ನ ಮೇಲೆ ಸಂಶಯವಿದೆಯಲ್ಲಾ ನಿನ್ನ ಗಂಡನಿಗೆ!"

"ದೇವರಾಣೆ ಮಾಡಿ ಖರೇ ಹೇಳ್ತೀನ್ರಿ. ನಾನೇನೂ ಅಂಥಾಕಿಯಲ್ಲ. ಅವನೇ ಏನೇನೋ ತಿಳಕೊಂಡು ನನ್ನ ಕಾಡಿಸಾಕ ಹತ್ತಿದಾನೆ. ಎಂಟು ದಿವಸದ ಕೆಳಗೆ ತವರುಮನಿಗೆ ಹೋದಾಗ ನಮ್ಮ ಅವ್ವನ ಬಂಗಾರದ ಒಡವೀ ಇಟ್ಟು ಕೊಂಡು ಬಂದಿದ್ದಿನಿ – ಮತ್ತೆ ಹೋದಾಗ ಕೊಟ್ಟರಾತು ಅಂತ. ಇವ ಅವನ್ನ ಕೇಳಿದ – ಒತ್ತೇ ಇಟ್ಟು ವ್ಯಾಪಾರ ಮಾಡುತ್ತೀನಿ ಅಂತ. ನಾನೇನು ಕೊಡಲಿಲ್ಲ. ಅವ ರಂಗಿ ಅಂತ ಒಬ್ಬಾಕೀನ್ನ ಇಟ್ಟುಕೊಂಡಿದಾನೆ. ಆಕೀಗೆ ಕೊಡೂದಕ್ಕಂತ ನನ್ನ ಒಡವೀ ಕೇಳುತಿದ್ದ. ನಾನು ತವರುಮನಿಗೆ ಹೋಗಿ ಅವನ್ನ ಕೊಟ್ಟು ಬರಬೇಕು ಅಂದರೆ ಇವ ನನ್ನ ಮನಿಯ ಹೊರಗೇ ಬಿಡಲಿಲ್ಲ. ಮೊನ್ನೆ ಬಡದು ಹೊಡದು ಒಡವೀ ಕಸಕೊಂಡು, ನನ್ನ ಖೋಲಿಯೊಳಗ ಒಗದು ಹೋಗಿಬಿಟ್ಟ."

"ನಿನ್ನ ಒಡವೆಗಳನ್ನು ಅವನು ರಂಗಿಗೇ ಕೊಟ್ಟಿರಬಹುದು ಅನ್ನುತ್ತೀಯಾ ಚೆನ್ನವ್ವ?"

"ಅವಳನ್ನು ಬಿಟ್ಟು ಇನ್ನೆಲ್ಲಿಗೂ ಹೋಗಿಲ್ಲರೀ ಅವು."

"ನಿನ್ನ ಗಂಡನನ್ನು ಜೇಲಿಗೆ ಕಳಿಸೋಣವೇನು ಚೆನ್ನವ್ವಾ?"

"ನಿಮುಗ ಹೇಳೂದಕ್ಕೆ ನಾನೆಷ್ಟರಾಕಿರಿ? ನನ್ನ ಒಡವೀ ವಸ್ತು ನನಗ

ಸಿಕ್ಕರ ಸಾಕು. ಇವನ ಸಂಗಡ ಬಾಳ್ವೆ ಮಾಡೂದು ನನಗೂ ಸಾಕಾಗ್ಯೆತಿ. ಸೋಡಚೀಟೀ ತಗೊಂಡು ಬ್ಯಾರೆಯವನ್ನ ಮಾಡಿಕ್ಕೊಂಡು ಹೋಗಿಬಿಡ್ತೀನಿ."

ಅವಳು ಹೇಳುವುದನ್ನೆಲ್ಲ ನಾನು ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ. ಅವಳು ಇಪ್ಪತ್ತೈದರ ಪ್ರಾಯದ ಹೆಣ್ಣು. ಇನ್ನೂ ಮಕ್ಕಳಾಗಿರಲಿಲ್ಲವಾದುದರಿಂದ ದೇಹ ಪ್ರಮಾಣಬದ್ಧವಾಗಿತ್ತು. ಬಿಸಲಲ್ಲಿ ದುಡಿದು ದೇಹ ಕಪ್ಪಾಗಿದ್ದಿತಾದರೂ ಎದೆಯ ಕೆಳಗಿನ ಭಾಗ ಮಾತ್ರ ಗೌರವರ್ಣದ್ದಾಗಿತ್ತು. ಎದೆಯೂ ಸಾಕಷ್ಟು ಪುಷ್ಟವಾದದ್ದು. ಕಣ್ಣು ಮೂಗು ತುಟಿಗಳೂ ರೇಖಾಬದ್ಧವಾಗಿದ್ದುವು. ಅಂಥ ಯುವತಿಯನ್ನು ಕಂಡಾಗ ನಮ್ಮ ಫೌಜದಾರರ ಮನಸ್ಸಿನಲ್ಲಿ ಬಯಕೆ ಕೆರಳದಿರುತ್ತದೆಯೆ ? ನಮ್ಮ ಪ್ರಶ್ನೆಗಳಿಗೆ ಅವಳು ಉತ್ತರವೀಯುತ್ತಿದ್ದಾಗಲೆಲ್ಲ ಅವರ ದೃಷ್ಟಿ ಅವಳ ಮೇಲೆ ಹರಿದಾಡುತ್ತಿತ್ತು. ಬ್ರಹ್ಮಚಾರಿ ಅಪ್ಪಣ್ಣನೂ ಅವಳನ್ನು ಆಗಾಗ ಕದ್ದು ನೋಡುತ್ತಿದ್ದುದನ್ನು ಗಮನಿಸಿದಾಗ ನನಗೆ ಮೋಜೆನ್ನಿಸದಿರಲಿಲ್ಲ. ಹಾಗೆ ಅವನೆಂದೂ ಹೆಂಗಸರನ್ನು ನೋಡಿದವನಲ್ಲ. ಈ ಹಳ್ಳಿಯ ಹೆಣ್ಣು ಅಪ್ಪಣ್ಣನಂಥ ನೈಷ್ಠಿಕ ಬಹ್ಮಚಾರಿಯನ್ನೂ ಆಕರ್ಷಿಸಿಕೊಂಡಿದ್ದಳು.

ಚೆನ್ನವ್ವನಿಗೆ ಪ್ರಶ್ನೆ ಕೇಳುವುದೆಲ್ಲ ಮುಗಿಯುತ್ತಲೂ ಅವಳು ಮನೆಗೆ ಹೋಗಬಹುದೆಂದು ನಾನು ಹೇಳಿದೆ. ಅಷ್ಟರಲ್ಲಿ ಫೌಜದಾರರು ಧ್ವನಿಯೆತ್ತಿ,

"ಮನೆಗೆ ಹೋಗಬೇಡ. ಇಲ್ಲೇ ಕೂತಿರು ಹೊರಗಡೆ," ಎಂದರು.

ನನಗೆ ಅರ್ಥವಾಯಿತು. ಅಪ್ಪಣ್ಣನಿಗೂ ಅರ್ಥವಾಯಿತು. ಆದರೆ, ಫೌಜದಾರರ ಆಜ್ಞೆಯ ವಿರುದ್ಧವಾಗಿ ನಾವೇನನ್ನೂ ಮಾಡುವಂತಿರಲಿಲ್ಲ.

ರಂಗಿಯ ಯೋಗಕ್ಷೇಮ ವಿಚಾರಿಸಿಕೊಂಡು ಬರುವುದಾಗಿ ಹೇಳಿ, ನಾನು ಒಬ್ಬ ಓಲೇಕಾರನನ್ನು ಜೊತೆಗೆ ಕರೆದುಕೊಂಡು ಅವಳ ಮನೆಗೆ ಹೊರಟೆ. ತಳವಾರರ ಓಣಿಯಲ್ಲಿ ಅವಳ ಮನೆಯಿತ್ತು. ಓಲೇಕಾರನೂ ತಳವಾರರನೇ ಆಗಿದ್ದ. ಅವನ ಮುಖದಿಂದ ಅವಳ ವಿಷಯವೆಲ್ಲವೂ ತಿಳಿದು ಬಂದಿತು.

೩೧

ತಳವಾರ ರಂಗಿ

....ರಂಗಿಯ ತಾಯಿಯೂ ಸೂಳೆಯಾಗಿದ್ದವಳೇ. ಅವಳು ಕಸಬಿಗಾರಂಭಿಸಿದ ಹೊಸದರಲ್ಲಿ ಹಳ್ಳಿಗೆ ಬಂದಿದ್ದ ಪಾರ್ಸಿ ಅಧಿಕಾರಿಯೊಬ್ಬ ಅವಳ ರೂಪಕ್ಕೆ ಮೋಹಿತನಾಗಿ ಅವಳನ್ನಿಟ್ಟುಕೊಂಡಿದ್ದ. ಅವನಿಂದ ಹುಟ್ಟಿದವಳು ರಂಗಿ. ಇವಳು ಜನಿಸಿದ ನಾಲ್ಕೈದು ವರ್ಷಗಳ ತರುವಾಯ ಅವನು ತೀರಿಕೊಂಡಿದ್ದ. ರಂಗಿಯ ತಾಯಿ ಮತ್ತೆ ಊರು ಸೇರಿಕೊಂಡಿದ್ದಳು. ಅವನ ಆಸ್ತಿಯಲ್ಲಿನ ಕೆಲವು ಭಾಗವೂ ಇವರಿಗೆ ದೊರೆತಿತ್ತು. ರಂಗಿಯ ತಾಯಿ ಹೊಸ ಮನೆ ಕಟ್ಟಿಸಿದ್ದಳಲ್ಲದೆ ಸ್ವಲ್ಪ ಜಮೀನನ್ನೂ ಕೊಂಡುಕೊಂಡಿದ್ದಳು. ರಂಗಿ ಬೆಳೆದು ದೊಡ್ಡವಳಾಗಿ ವ್ಯವಹಾರಕ್ಕಾರಂಭಿಸಿದ ಮರುವರ್ಷವೆ ಅವಳ ತಾಯಿ ತೀರಿಕೊಂಡಿದ್ದಳು. ಕಸಬಿನ ತಂತ್ರಗಳನ್ನೆಲ್ಲ ಚೆನ್ನಾಗಿ ತಿಳಿದುಕೊಂಡಿದ್ದ ರಂಗಿ ಹಳ್ಳಿಯಲ್ಲಿನ ಶ್ರೀಮಂತರನ್ನು ಸುಲಿದು ಹಣ ಮಾಡಿಕೊಂಡಿದ್ದಳು....

ಓಲೇಕಾರ ಹೇಳುತ್ತಿದ್ದ:

"ನಮ್ಮಂಥ ದರಿದ್ರರು ಅವಳ ಹತ್ತರ ಹೋಗುವಹಾಂಗಿಲ್ಲರೀ. ಸಾಹುಕಾರರಲ್ಲದವರನ್ನ ಅವಳು ಮನಿಯಾಗ ಕರಕೊಳ್ಳುವದಿಲ್ಲ. ಹತ್ತು ಹಳ್ಳಿಗಳ ಸಾಹುಕಾರರ ಹುಡುಗರೆಲ್ಲಾ ಬರುತಿರುತಾರ ಅವಳ ಹತ್ತರ. ಈ ನಾಡಿಗೆಲ್ಲ

ರಂಗಿಯ ಕೀರ್ತಿ ಬಹಳ. ವಾರಕ್ಕೊಂದು ಸಾರಿ ಪಟ್ಟಣಕ್ಕೂ ಹೋಗುತಾಳೆ. ಅಲ್ಲೂ ಯಾರದಾದರೂ ತಲೆ ಬೋಳಿಸಿ ಸಿನಿಮ್ಮಾ ಗಿನಿಮಾ ನೋಡಿಕೊಂಡು ಮಜಾ ಮಾಡಿಕೊಂಡು ಬರುತಾಳೆ."

"ಮನೆಯಲ್ಲಿ ಅವಳೊಬ್ಬಳೇ ಇದಾಳೇನು?"

"ಒಂದು ಮುದುಕಿಯನ್ನಿಟ್ಟುಕೊಂಡಿದಾಳೆ ಅಡಿಗೆ ಮಾಡುವದಕ್ಕ. ಆ ಮುದುಕೀನೂ ರೊಕ್ಕಾ ಮಾಡಿಕೊಂಡೈತಿ ಕೈಯಾಗ."

"ಈ ಹಳ್ಳಿಯೊಳಗೆ ಇವರು ಮನೆಯಲ್ಲಿ ಹಣ ಹ್ಯಾಗೆ ಇಡುತ್ತಾರೆ? ಕಳವಾಗುವದಿಲ್ಲೇನು?"

"ಮನಿಯೊಳಗ ಹೆಚ್ಚು ರೊಕ್ಕಾ ಇಡೂದಿಲ್ಲರಿ. ಬಹಳ ಬೆರಿಕಿ ಅದಾಳೆ ನಮ್ಮ ರಂಗಿ. ಎಲ್ಲಾ ಪಟ್ಟಣದಾಗಿನ ಬ್ಯಾಂಕಿನಾಗಿಟ್ಟಿದ್ದಾಳೆ."

"ಒಡವೆ? ಬಂಗಾರ?"

"ಅವೂ ಇಲ್ಲಿದ್ದರೆ ಕಳವಾದಾವು ಅಂತ ನೆವಕ್ಕ ಬ್ಯಾಂಕಿನಾಗ ನೂರಿನ್ನೂರು ಸಾಲಾ ಮಾಡಿ ಅವನ್ನೆಲ್ಲಾ ಒತ್ತೆ ಇಟ್ಟದಾಳೆ – ಅಲ್ಲಿದ್ದರೆ ಜೋಪಾನವಾಗಿರುತಾವೆ ಅಂತ."

"ಇದೆಲ್ಲಾ ಎಲ್ಲಿ ಗೊತ್ತಾಯಿತು ಇವಳಿಗೆ? ಓದಲಿಕ್ಕೆ ಬರೆಯಲಿಕ್ಕೆ ಬರುತ್ತದೇನು?"

"ಹೂಂ. ಸ್ವಲ್ಪ ಸ್ವಲ್ಪ ಬರುತೈತಿ. ನಮ್ಮೂರ ಸಾಲಿಯೊಳಗ ಎರಡು ಯತ್ತೆ ತನಕ ಕಲಿತಿದಾಳೆ."

ರಂಗಿಗೆ ಹೆಚ್ಚು ವಯಸ್ಸೂ ಆಗಿರಲಿಲ್ಲ. ಇಪ್ಪತ್ತೆರಡೋ ಇಪ್ಪತ್ತು ಮೂರೋ ಇರಬಹುದು. ಅವಳು ಅಪ್ರತಿಮ ಸುಂದರಿ. ಸಿನಿಮಾ – ನಾಟಕಗಳಲ್ಲಿ ಕಾಣಬರುವಂಥ ಹೆಣ್ಣು. ತನ್ನ ಶರೀರವನ್ನು ಚೆನ್ನಾಗಿಟ್ಟುಕೊಳ್ಳುವುದನ್ನೂ ಅವಳು ಕಲಿತುಕೊಂಡಿದ್ದಳು. ಪಟ್ಟಣಕ್ಕೆ ಹೋದಾಗಲೆಲ್ಲ ಡಾಕ್ಟರರ ಹತ್ತಿರ ಹೋಗಿ ದೇಹಪರೀಕ್ಷೆ ಮಾಡಿಸಿ, ರೋಗವಿದ್ದರೆ ಔಷಧ ತೆಗೆದುಕೊಂಡು ಬರುತ್ತಿದ್ದಳು. ಹಳ್ಳಿಯಲ್ಲಿನ ಇನ್ನಿತರ ವೇಶ್ಯೆಯರಾರೂ ರಂಗಿಯಷ್ಟು ಎಚ್ಚರಿಕೆ ವಹಿಸುತ್ತಿರಲಿಲ್ಲ.

"ಅವಳು ಪಟ್ಟಣಕ್ಕೆ ಹೋದಾಗ ಅವಳ ಮನೆಯ ಕಾವಲು ಮಾಡುವ ಕೆಲಸ ನನ್ನದೇ. ನನಗೂ ಆಗಾಗ ಒಂದೆರಡು ರೂಪಾಯಿ ಕೊಡುತಿರುತಾಳೆ

ರಂಗಿ. ಅವಳೇನೂ ಜೀನಹಂಕಳಲ್ಲ – ದೊಡ್ಡ ಮನಸಿನಾಕಿ. ಯಾರನ್ನ ಕರಕೊಳ್ಳಬೇಕಾದರೂ ಮೊದಲು ಅವರ ಸ್ಥಿತಿಗತಿ ತಿಳಕೊಳ್ಳುತಾಳೆ. ಹಿರೇರ ಕೈಯಾಗ ಇರುವ ಹುಡುಗರನ್ನ ಎಂದೂ ಕರಕೊಳ್ಳುವದಿಲ್ಲ. ಮುದುಕನಿದ್ದರೂ ಅಡ್ಡಿಯಿಲ್ಲ, ಅವನೇ ಮನೆಯ ಮಾಲಿಕನಾಗಿದ್ದರೆ ಮಾತ್ರ ರಂಗಿ ಅವನ್ನ ಕರಕೊಂಡಾಳು. ಸುತ್ತುಮುತ್ತಿನ ಹಳ್ಳಿಗಳ ಸಾಹುಕಾರ ಹೆಂಗಸರಿಗೆಲ್ಲಾ ಬಹಳ ಸಿಟ್ಟು ರಂಗಿಯ ಮ್ಯಾಲ – ಅವರ ಗಂಡಂದಿರೋ ಮಕ್ಕಳೋ ಅಣ್ಣ ತಮ್ಮಂದಿರೋ ರಂಗಿಯ ಮನೀ ತುಂಬುತಾರೆ ಅಂತ," ಎಂದು ಹೇಳಿದ ಓಲೇಕಾರ.

"ನೀನೂ ಅವಳಿಗೆ ಮರುಳಾಗಿದೀಯೋ ಏನು ?" ನಾನು ಚೇಷ್ಟೆಗೆಂದು ಕೇಳಿದೆ.

"ಅವಳು ನನಗೆ ತಂಗಿಯಾಗಬೇಕ್ರೀ," ಎಂದ ಓಲೇಕಾರ.

ನಾನು ಪೋಲೀಸನೆಂದು ಗೊತ್ತಾಗುತ್ತಲೂ ನನ್ನನ್ನು ತುಂಬಾ ಆದರ ದಿಂದ ಬರಮಾಡಿಕೊಂಡಳು ರಂಗಿ. ಸಡಗರದಿಂದ ಕುರ್ಚಿಯನ್ನು ತಂದಿರಿಸಿ,

"ಕೂಡ್ರಿ," ಎಂದಳು. "ಚಹಾ ಮಾಡುತೀನಿ," ಎಂದಳು.

ಅವಳ ಶಿಷ್ಟಾಚಾರವನ್ನು ಕಂಡು ನನಗೆ ವಿಸ್ಮಯವಾಗದಿರಲಿಲ್ಲ. ಹಳ್ಳಿಯ ಹೆಣ್ಣಿನಂತೆ ಕಾಣುತ್ತಿರಲಿಲ್ಲ ರಂಗಿ. ಅವಳ ವೇಷಭೂಷಣ, ನಡವಳಿಕೆ, ಮಾತಿನ ರೀತಿ ಎಲ್ಲವೂ ಪಟ್ಟಣದವರ ಹಾಗೇ ಇತ್ತು.

"ಚಹಾ ಬೇಡ"ವೆಂದು ಸೌಮ್ಯವಾಗಿಯೆ ಹೇಳಿ ನಾನು ಬಂದ ಕೆಲಸಕ್ಕೆ ತೊಡಗಿದೆ. ಅವಳ ಹೆಸರು ದೆಸೆಗಳನ್ನು ವಿಚಾರಿಸಿದುದಾಯಿತು.

"ಚೆನ್ನವ್ವನ ತಂದೆ ಅವಳಿಗೆ ಕೊಟ್ಟ ಒಡವೆಗಳು ಕೆಲವು ಕಳವಾಗಿವೆ. ಶಿವಪ್ಪನನ್ನು ಬಂಧಿಸಿದ್ದೇವೆ. ಆ ಒಡವೆಗಳನ್ನು ತಾನು ಕದ್ದು ನಿನಗೆ ಕೊಟ್ಟಿರುವನೆಂದು ಅವನು ಹೇಳುತ್ತಾನೆ. ಕಳವಿನ ಮಾಲನ್ನು ನೀನು ನಿನ್ನ ಹತ್ತರ ಇಟ್ಟುಕೊಂಡದ್ದು ದೊಡ್ಡ ಅಪರಾಧ. ಅದಕ್ಕಾಗಿ ನಿನ್ನನ್ನೂ ಬಂಧಿಸಿ ಕೊಂಡು ಹೋಗಲು ಬಂದಿದ್ದೇನೆ."

ನಾನು ಒಂದೊಂದೇ ಮಾತನ್ನಾಡಿದ ಹಾಗೆ ಅವಳ ಮುಖ ಕ್ರಮ ಕ್ರಮವಾಗಿ ಕಳಾಹೀನವಾಗುತ್ತಿತ್ತು. ಬಂಧನದ ಬೆದರಿಕೆ ಹಾಕಿದೊಡನೆ ಎಂಥವರೂ ಅಂಜುತ್ತಾರೆ. ಇನ್ನು ರಂಗಿಯಂಥವಳು ಅಂಜದಿರುವುದು ಸಾಧ್ಯವೆ ?

"ಶಿವಪ್ಪನ ಕೈಗೆ ಬೇಡಿ ಹಾಕಿ ಕೂಡಿಸಿದ್ದಾರೆ ರಂಗೀ," ಎಂದು ಓಲೇಕಾರ ಹೇಳುತ್ತಲೂ ಅವಳು ಇನ್ನಿಷ್ಟು ಹೆದರಿದಳು.

"ಅವನು ಅವನ್ನು ಕಳವು ಮಾಡಿ ತಂದದ್ದು ನನಗೇನು ಗೊತ್ತಿರಲಿಲ್ಲರೀ. ಗೊತ್ತಿದ್ದರೆ ನಾನು ತಗೊಳ್ಳುತಿರಲಿಲ್ಲ. ಅವಳ ಒಡವೆ ನನಗ್ಯಾತಕ್ಕೆ? ತಗೊಂಡು ಹೋಗಿರಿ."

"ನಾವು ಹಾಗೆಲ್ಲಾ ತಗೊಳ್ಳಲು ಬರುವದಿಲ್ಲ. ಮೊದಲು ನಾವು ಅವನ್ನು ಜಪ್ತ್ ಮಾಡಬೇಕಾಗುತ್ತದೆ. ನಿನ್ನನ್ನೂ ಹಿಡಿದು ಜೇಲಿಗೆ ಕಳಿಸಬೇಕಾಗುತ್ತದೆ."

ರಂಗಿಯ ಮುಖ ಕಪ್ಪಿಟ್ಟಿತು. ಅವಳು ಥರಥರನೆ ನಡುಗತೊಡಗಿದಳು. "ಎಂಥಾ ವ್ಯಾಳೇ ತಂದಿಟ್ಟೆ ಆ ಶಿವ್ಯಾ!" ಎಂದು ಶಪಿಸತೊಡಗಿದಳು. ಒಡವೆಗಳನ್ನು ತಂದು ನನ್ನ ಮುಂದಿದ್ದು,

"ತಿಳೀದೇ ತಪ್ಪು ಮಾಡಿದ್ದೀನಿ. ಇದೊಂದು ಸಾರಿ ಮಾಫ್ ಮಾಡಿಬಿಡಿರಿ." ಎಂದು ಹಲುಬತೊಡಗಿದಳು.

ನಾನು ಆಭರಣಗಳನ್ನು ಮುಟ್ಟಲಿಲ್ಲ.

"ಇಬ್ಬರು ಪಂಚರನ್ನು ಕರೆದುಕೊಂಡು ಬಾ," ಎಂದು ಓಲೇಕಾರನಿಗೆ ಸೂಚನೆಯಿತ್ತೆ. ರಂಗಿ ಥಟ್ಟನೆ ಮುಂದೆ ಬಂದು ನನ್ನ ಕಾಲು ಹಿಡಿದುಕೊಂಡಳು. ಎಷ್ಟು ಹೇಳಿದರೂ ಬಿಡದಾದಳು. ಪಂಚನಾಮೆಯಾಗಿಬಿಟ್ಟರೆ ತಾನು ಖಂಡಿತವಾಗಿಯೂ ಸೆರೆಮನೆ ಸೇರಬೇಕಾಗಿ ಬರುವುದೆಂದು ಅವಳು ಭಾವಿಸಿಕೊಂಡಿದ್ದಳೇನೊ. ಪಂಚರನ್ನು ಕರೆದು ತರಲು ಓಲೇಕಾರನೂ ಹಿಂದೆ ಮುಂದೆ ನೋಡುತ್ತಲಿದ್ದ. ನಾನು ಗದರಿಸುತ್ತಲೂ ಅವನು ಹೋದ.

"ನನ್ನ ಕಾಲು ಬಿಡು ರಂಗೀ. ನಾನಾದರೂ ಏನು ಮಾಡಲಿ? ನನ್ನ ಡ್ಯೂಟಿ ನಾನು ಮಾಡುವವ," ಎಂದು ಹೇಳಿ ನೋಡಿದೆ. ಅವಳ ಬಿಡಲಿಲ್ಲ.

"ಬೇಕಾದರೆ ನಮ್ಮ ಫೌಜದಾರರನ್ನು ಕೇಳಿಕೋ. ಅವರು ಬಿಟ್ಟರೆ ನನ್ನದೇನು ಅಡ್ಡಿಯಿಲ್ಲ."

"ಅಲ್ಲಿಯವರೆಗೂ ನನ್ನ ಒಯ್ಯಬ್ಯಾಡಿರಿ. ನನ್ನ ಮಾನಾ ಕಳಿಯಬ್ಯಾಡಿರಿ ಊರ ಮಂದಿಯ ಮುಂದೆ."

"ತುಡುಗಿನ ಮಾಲು ಇಟ್ಟುಕೊಂಡಿದ್ದೀ. ಮಾನಾ ಉಳಿಯಬೇಕೆಂದರೆ ಹ್ಯಾಗೆ ಉಳಿದೀತು?"

"ನೋಡಿರಿ. ಏನಾದರೂ ಮಾಡಿ ಬಿಟ್ಟುಬಿಡಿರಿ. ನೂರಿನ್ನೂರು ರೂಪಾಯಿ ಕೊಡುತೀನಿ," ಎಂದು ಹಣದ ಪ್ರಸ್ತಾಪವೆತ್ತಿದಳು ರಂಗಿ.

ಶ್ರೀಮಂತರನ್ನೆಲ್ಲ ಸುಲಿದು ಸಾವಿರಾರು ರೂಪಾಯಿ ಕೂಡಿಸಿದ್ದ ರಂಗಿಯಿಂದ ಒಂದು ಸಾವಿರದಷ್ಟು ಹಣವನ್ನಾದರೂ ಕಿತ್ತುಕೊಳ್ಳಬೇಕೆಂದು ನಾನು ಯೋಚಿಸಿಕೊಂಡಿದ್ದೆ.

"ಎರಡು ನೂರು ಅಂದರೆ ಯಾರಾದರೂ ನಕ್ಕಾರು. ನಿನ್ನ ಸಂಗಡ ನಮ್ಮ ಕಿಮ್ಮತ್ತೂ ಹೋದೀತು. ಒಂದು ಸಾವಿರ ಕೊಡುವದಾದರೆ ಬಿಡುತೀನಿ."

"ಅಯ್ಯೋ, ಸರದಾರರೆ, ನನ್ನ ಹತ್ತರ ಅಷ್ಟು ರೂಪಾಯಿ ಎಲ್ಲಿಂದ ಬರಬೇಕ್ರೀ? ನಾ ಬಡವಿ. ಏನೋ ನಿಮ್ಮಂಥ ನಾಕು ಮಂದಿಯ ದಯದಿಂದ ಹೊಟ್ಟೆ ಹೊರಕೊಳ್ಳುತಾ ಇದೀನಿ."

"ನಿನ್ನ ಬಣ್ಣದ ಮಾತೆಲ್ಲಾ ನಮ್ಮ ಮುಂದೆ, ಪೋಲೀಸರ ಮುಂದೆ ನಡೆಯುವದಿಲ್ಲ ರಂಗೀ. ನೀನು ಬ್ಯಾಂಕಿನಲ್ಲಿ ಹಣ, ಬಂಗಾರ ಇಟ್ಟದ್ದು ಕೂಡಾ ನಮಗೆ ಗೊತ್ತು. ಬಡಿವಾರ ಮಾಡಬೇಡ, ಸಾವಿರ ಕೊಟ್ಟರೆ ಬಿಡುವ ಮಾತು. ಇಲ್ಲದಿದ್ದರಿಲ್ಲ. ಏ ತಳವಾರಾ...."

ಹೊರಗಡೆ ನಿಂತುಕೊಂಡಿದ್ದ ಓಲೇಕಾರ ಓಡಿ ಬಂದ.

"ಇನ್ನೂ ಪಂಚರನ್ನು ಕರೆದುತರಲಿಲ್ಲವೇನೋ?" ಎಂದು ನಾನು ಅವನನ್ನು ಗದರಿಸಿದ ಹಾಗೆ ನಟಿಸಿದೆ.

"ಹೋಗಲಿ ಬಿಡಿರೀ ಸರದಾರರೇ. ಪಾಪ, ಹೆಣ್ಣು ಮಗಳು, ಬಿಟ್ಟು ಬಿಡಿರಿ," ಎಂದು ಅವನೂ ಶಿಫಾರಸು ಮಾಡಿದ.

ರಂಗಿ ಐದುನೂರು ರೂಪಾಯಿಗಳನ್ನು ತಂದು ನನ್ನ ಮುಂದಿಟ್ಟು, ಅಷ್ಟಕ್ಕೇ ಮುಗಿಸಬೇಕೆಂದು ಬೇಡಿಕೊಂಡಳು. ಐದುನೂರೆಂದರೆ ಕಡಮೆಯೇನೂ ಅಲ್ಲವಲ್ಲಾ ಎಂದು ನಾನೂ ಸುಮ್ಮನಾದೆ. ಆಭರಣಗಳನ್ನು ಓಲೇಕಾರನ ಕೈಯಲ್ಲಿ ಕೊಟ್ಟು, ರೂಪಾಯಿಗಳನ್ನು ಕಿಸೆಗೆ ಸೇರಿಸಿದೆ. ಆ ಹಣವನ್ನು ಬ್ಯಾಂಕಿಗೆ ಕಟ್ಟಲು ಮರುದಿವಸ ಪಟ್ಟಣಕ್ಕೆ ಹೋಗುವವಳಿದ್ದಳಂತೆ ರಂಗಿ. ಅದು ಅವಳ ಬ್ಯಾಂಕಿಗೆ ಜಮೆಯಾಗದೆ ನನ್ನ ಬ್ಯಾಂಕಿಗೆ ಜಮೆಯಾಯಿತು!

"ನಮ್ಮ ಫೌಜದಾರರೇನು ನಿನ್ನನ್ನು ಇಷ್ಟಕ್ಕೇ ಬಿಡಲಿಕ್ಕಿಲ್ಲ. ನನಗೆ

ಹಣ ಕೊಟ್ಟದ್ದನ್ನು ನೀನು ಅವರ ಮುಂದೆ ಹೇಳಬಾರದು. ರಾತ್ರಿ ಅವರು ಬಂದರೆ ಕರಕೊಳ್ಳಬೇಕು. ಆಗಲೂ ಹಣದ ಸುದ್ದಿ ಎತ್ತಬಾರದು. ತಿಳಿಯಿತೇ? ನೀನೇನಾದರೂ ಆ ಮಾತು ತೆಗೆದದ್ದು ನನಗೆ ಗೊತ್ತಾಯಿತೆಂದರೆ ನಿನ್ನ ಅವತಾರವೇ ಮುಗಿಯಿತೆಂದು ತಿಳಿದುಕೋ. ನಿನ್ನನ್ನು ಜೇಲಿಗೆ ಕಳಿಸದೆ ಬಿಡುವದಿಲ್ಲ." ಎಂದು ಅವಳಿಗೆ ಎಚ್ಚರಿಕೆ ಕೊಟ್ಟು ಚಾವಡಿಗೆ ಹೊರಟೆ. ಹಾದಿಯಲ್ಲಿ ಓಲೇಕಾರನಿಗೆ ಇಪ್ಪತ್ತು ರೂಪಾಯಿ ಕೊಟ್ಟೆ. ಅವನಿಗಾದ ಆನಂದ ಹೇಳತೀರದು. ಅಲ್ಲಿಗೆ ಬಂದು ಹೋಗಿದ್ದ ಅಧಿಕಾರಿಗಳಲ್ಲಿ ಯಾರೊಬ್ಬರೂ, ಎಂದೂ, ಅವನಿಗೆ ನಾಲ್ಕು ಆಣೆಗಳಿಗಿಂತ ಹೆಚ್ಚು ದುಡ್ಡು ಕೊಟ್ಟಿರಲಿಲ್ಲ. ಇಪ್ಪತ್ತು ರೂಪಾಯಿಗಳೆಂದರೆ ಅವನ ಆರು ತಿಂಗಳಿನ ಸಂಬಳದಷ್ಟು. ಓಲೇಕಾರ ಹಿಗ್ಗಿ, ನಂಬುಗೆಯ ನಾಯಿಯಂತೆ ನಡೆದುಕೊಳ್ಳತೊಡಗಿದ.

ಚಾವಡಿಗೆ ಬಂದು, ಚೆನ್ನವ್ವನ ತಂದೆಯನ್ನು ಕರೆಯಿಸಿ ಒಡವೆಗಳನ್ನು ಅವನಿಗೊಪ್ಪಿಸಿದೆ. ಮುದುಕ ನಡುಗುವ ಕೈಗಳಿಂದ ಅವುಗಳನ್ನು ತೆಗೆದುಕೊಂಡು ಕೃತಜ್ಞತೆಯ ಕಂಬನಿ ಸುರಿಸಿದ.

ನಾನು ರಂಗಿಯ ಮನೆಗೆ ಹೋದ ಸಮಯದಲ್ಲಿ ಫೌಜದಾರರು ಚೆನ್ನವ್ವನನ್ನು ಮತ್ತೆ ಕರೆಯಿಸಿ ಅಂದು ರಾತ್ರಿ ಅವಳಲ್ಲಿಗೆ ಬರುವುದಾಗಿ ಹೇಳಿದ್ದರಂತೆ. ಅಪ್ಪಣ್ಣನಿಂದ ಎಲ್ಲವೂ ಗೊತ್ತಾಯಿತು ನನಗೆ.

"ನಾನು ನಿಮ್ಮ ಮಗಳ ಹಾಗೆ ಇದ್ದೀನಿ. ನೀವು ಏನು ಬೇಕಾದ್ದು ಮಾಡಬಹುದು ಅಂದಳು ಚೆನ್ನವ್ವ. ಫೌಜದಾರರು ನಿರಾಶರಾಗಿದ್ದಾರೆ," ಎಂದ ಅಪ್ಪಣ್ಣ.

ನಾವಿಬ್ಬರೂ ಮಾತನಾಡುತ್ತ ಸಮೀಪದಲ್ಲಿದ್ದ ಹೊಲದ ಕಡೆ ಹೋದೆವು. ಚೆನ್ನವ್ವನನ್ನು ಕಂಡು ತಾನೂ ಮರುಳಾಗಿರುವುದಾಗಿ ಅಪ್ಪಣ್ಣ ಹೇಳುತ್ತಿದ್ದ.

"ನಿನಗೇನು ಹುಚ್ಚು ಹಿಡಿಯಿತೋ ಬಾಲ ಬ್ರಹ್ಮಚಾರಿಗೆ!" ಎಂದು ನಾನು ಅವನನ್ನು ಹಾಸ್ಯ ಮಾಡಿದೆ.

ಅಪ್ಪಣ್ಣನಿಗೆ ನಗು ಬರಲಿಲ್ಲ. ತುಂಬಾ ಗಂಭೀರವಾದ ಧ್ವನಿಯಲ್ಲಿಯೆ ಅವನು ಹೇಳಿದ:

"ನಿಜವಾಗಿ ನನಗೆ ಅವಳ ಮೇಲೆ ಮನಸ್ಸಾಗಿದೆ ಶಿವಣ್ಣಾ. ಇದೇನು ಮಾಯೆಯೋ ನನಗೇ ತಿಳಿಯದು. ಇಷ್ಟು ವರ್ಷ ಎಂಥಾ ಸುರಸುಂದರಿಯನ್ನು

ಕಂಡರೂ ನನಗೇನೂ ಅನ್ನಿಸಿರಲಿಲ್ಲ. ಈ ಹಳ್ಳಿಯ ಹೆಂಗಸನ್ನು ನೋಡಿದೊಡನೆ ಹೀಗೇಕಾಯಿತೋ ನನಗೇ ತಿಳಿಯದು. ಇದು ದೈವದಾಟವೇ ಇರಬಹುದು."

"ದೈವದಾಟವಲ್ಲ, ಮದನನಾಟ. ಆದರೆ ಹುಷಾರಿ ಅಪ್ಪಣ್ಣಾ. ಫೌಜದಾರರು ಅವಳನ್ನೇನೂ ಬಿಡುವಂತೆ ಕಾಣುವದಿಲ್ಲ."

"ಅದೂ ನಿಜವೇ. ಏನಾದರೂ ಮಾಡಿ ಅವಳನ್ನು ಅವರಿಂದ ಪಾರು ಮಾಡಬೇಕಪ್ಪಾ. ನಾನು ಈಗಾಗಲೆ ಅವಳೊಡನೆ ಮಾತಾಡಿದ್ದೇನೆ. ಅವಳೂ ಒಪ್ಪಿದ್ದಾಳೆ."

ನನಗೆ ವಿಪರೀತ ಆಶ್ಚರ್ಯ. ಚೆನ್ನವ್ವ ಒಪ್ಪಿದಳೇ! ಅಪ್ಪಣ್ಣನ ಜೊತೆಗೆ ಮಲಗಲು ಒಪ್ಪಿದಳೇ! ಇದೇನು ಚಮತ್ಕಾರ! ಇವನಲ್ಲಿ ಅವಳು ಕಂಡುದೇನು! ಅವಳಲ್ಲಿ ಇವನು ಕಂಡುದೇನು! ಎಲ್ಲಾ ಅದ್ಭುತವೇ ಆಗಿತ್ತು.

"ಅವಳನ್ನು ನೀನು ಪ್ರೀತಿಸುತ್ತೀಯಾ ಅಪ್ಪಣ್ಣಾ ?"

"ಪ್ರೀತಿ ? ಏನೋ ನನಗೆ ತಿಳಿಯದು. ನನಗೆ ಅವಳು ಬೇಕು. ಅವಳು ಸಿಗದಿದ್ದರೆ ನನಗೆ ನಿದ್ದೆ ಬರುವಂತಿಲ್ಲ, ಅನ್ನ ರುಚಿಸುವಂತಿಲ್ಲ, ಇಷ್ಟು ನಿಜ. ಇದಕ್ಕೇ ಪ್ರೀತಿ ಅನ್ನುತಾರೋ ಏನು ?"

"ಅದು ಪ್ರೀತಿಯಲ್ಲವೋ ಕತ್ತೆ! ಅದು ಕಾಮ!"

"ಕಾಮವೋ ಪ್ರೇಮವೋ! ಅದನ್ನೆಲ್ಲಾ ತೆಗೆದುಕೊಂಡೇನು ಮಾಡುವದು ಬಿಡು! ಈಗ ಅವಳನ್ನು ನನ್ನ ಜೊತೆ ಕೂಡಿಸುವ ಹಂಚಿಕೆ ಹಾಕು."

"ನೀವು ಕೂಡುವದಾದರೂ ಎಲ್ಲಿ? ಅವಳ ಮನೆಗೇ ಹೋಗುತ್ತೀಯಾ ?"

"ಮನೆಗೆ ಹ್ಯಾಗೆ ಹೋಗುವದೋ ? ಅವಳಪ್ಪ ಸುಮ್ಮನಿದ್ದಾನೇನು ? ಅದಕ್ಕೆ ಈ ರಾತ್ರೆ ತನ್ನನ್ನು ಚಾವಡಿಯಲ್ಲೇ ಇಟ್ಟುಕೊಳ್ಳಬೇಕೆಂದು ಅವಳೇ ಹೇಳಿದಳು. ಅಲ್ಲಿಯೇ ಅನುಕೂಲವಾದರೆ ಆದೀತು ಅಂತ ಅವಳ ಅಭಿಪ್ರಾಯ."

"ಮೂರು ದಿವಸ ಅನ್ನ ನೀರಿಲ್ಲದೆ ಬಿದ್ದಿದ್ದ ಈ ಹೆಣ್ಣು ಈ ರಾತ್ರಿಯೇ ಇಂಥಾ ಕೆಲಸಕ್ಕೆ ತಯಾರಾದಳಲ್ಲ ಅಪ್ಪಣ್ಣಾ! ಅವಳಿಗೇನಾದರೂ ತಲೆ ಗಿಲೆ ಕೆಟ್ಟದೆಯೋ ಏನು!"

"ತಲೆ ಯಾಕೆ ಕೆಟ್ಟೀತು ? ಗಂಡನೆಂದರೆ ಅವಳಿಗೆ ವಾಕರಿಕೆಯಾಗುವ ಹಾಗೆ ಆಗಿದೆ. ಅವನಿಂದಾಗಿ ಮೂರು ದಿನ ಅನುಭವಿಸಿದ ಸಂಕಟವನ್ನೆಲ್ಲಾ ಮರೆಯಲಿಕ್ಕೆ ಅಂತ ಅವಳು ಇದಕ್ಕೆ ತಯಾರಾಗಿರಬೇಕು."

" ಸರಿ. ನೀನೂ ಒಬ್ಬ ಫ್ರೈಡನ ಮರಿಯೇ !" ಎಂದು ನಾನು ಹಾಸ್ಯ ಮಾಡಿದೆ.

ನಾನು ಇಂಗ್ಲಿಷು ಓದಿಕೊಂಡವನು. ಫ್ರೈಡ್, ಜಂಗ್, ಆಡ್ಲರ್ ಮೊದಲಾದವರ ವಿಷಯ ಬಲ್ಲವನು. ಪಾಪ, ಅಪ್ಪಣ್ಣನಿಗೆ ಅವರ ವಿಚಾರ ಹೇಗೆ ತಿಳಿಯಲು ಸಾಧ್ಯ ?

" ಇವನಾವ ಫ್ರೈಡಪ್ಪಾ ?" ಎಂದ ಅಪ್ಪಣ್ಣ.

" ಹೋಗಲಿಬಿಡು. ಆ ವಿಷಯ ಬೇಡ."

" ಏನಾದರೂ ಹಂಚಿಕೆ ಹುಡುಕು ಶಿವಣ್ಣಾ."

ನಾನು ಹಂಚಿಕೆ ಹುಡುಕಿದೆ.

ಅಪ್ಪಣ್ಣನು ಫೌಜದಾರರನ್ನು ರಂಗಿಯ ಮನೆಗೆ ಕರೆದೊಯ್ದು ಅಲ್ಲಿ ಬಿಡುವುದು, ಅವರು ಕಂಠಪೂರ್ತಿ ಕುಡಿದು ಅಮಲೇರಿ ಬೀಳುವಂತೆ ಮಾಡುವುದು, ನಾನು ಗಸ್ತಿಯ ನೆಪದಿಂದ ಗೌಡನನ್ನೂ ಓಲೇಕಾರರನ್ನೂ ಚಾವಡಿ ಬಿಡಿಸಿ ಕರೆದೊಯ್ಯುವುದು, ಶಿವಪ್ಪನನ್ನು ಒಂದು ಕೊಠಡಿಯಲ್ಲಿ ತಳ್ಳುವುದು, ಯಾರೂ ಇಲ್ಲವಾದಾಗ ಅಪ್ಪಣ್ಣ ತನ್ನ ಪ್ರೇಯಸಿಯನ್ನು ಸಂಧಿಸುವುದು....

" ಹ್ಯಾಗಿದೆಯೋ ಹಂಚಿಕೆ ?"

" ಫಸ್ಟ್‌ಕ್ಲಾಸ್," ಎಂದು ಉದ್ಗಾರ ತೆಗೆದು ನನ್ನ ಕೈ ಕುಲುಕಿದ ಅಪ್ಪಣ್ಣ.

ಸಂಜೆಯಾಗುವುದರೊಳಗಾಗಿ ಮೂರು ಬಾಟಲಿಗಳ ತುಂಬಾ ಸೇಂದಿ ತುಂಬಿಕೊಂಡು ಬಂದ ಅಪ್ಪಣ್ಣ. ಅವನು ರಂಗಿಯ ವರ್ಣನೆಗೆ ತೊಡಗುತ್ತಲೂ ಫೌಜದಾರರು ಆತುರತೆಯಿಂದ ಎದ್ದು ಹೊರಟರು.

ಅವರನ್ನು ರಂಗಿಯೂ ಅತ್ಯಂತ ಉತ್ಸಾಹದಿಂದ ಬರಮಾಡಿಕೊಂಡಳು. ಫೌಜದಾರರಂಥ ದೊಡ್ಡ ಅಧಿಕಾರಿಗಳು ತನ್ನನ್ನು ಬಯಸಿಬಂದುದೇ ಒಂದು ಹೆಮ್ಮೆಯ ವಿಷಯವಾಗಿತ್ತು ರಂಗಿಗೆ. ಸಿನಿಮಾ ನಟಿಯರನ್ನೂ ನಾಚಿಸುವ ಹಾಗೆ ಅಲಂಕೃತಳಾಗಿದ್ದ ಅವಳನ್ನು ಕಂಡು ಫೌಜದಾರರಿಗೂ ಪರಮಾನಂದ ವಾಯಿತು. ಆ ದಿನ ತನ್ನ ಮನೆಯನ್ನೂ ಅವಳು ಸಿಂಗರಿಸಿದ್ದಳು. ಮನೆತುಂಬಾ ಅತ್ತರಿನ ಪರಿಮಳ ಘಮಘಮಿಸುತ್ತಿತ್ತು. ಮಂಚದ ಮೇಲೆ ಗುಲಾಬಿಹೂವಿನ

ಪತಳಿಗಳನ್ನು ಹರಡಿದಳು. ದೇವಲೋಕದ ರಂಭೆಯ ಮನೆಯಲ್ಲಿಯೆ ತಾವಿದ್ದ ಹಾಗೆ ಭಾಸವಾಯಿತು ಫೌಜದಾರರಿಗೆ.

"ಭೇಷ್! ಅಪ್ಪಣ್ಣಾ! ಭೇಷ್!" ಎಂದು ಅವನನ್ನು ಹೊಗಳಿ, "ಗಸ್ತೀ ಮುಗಿಸಿ ಹೋಗುವಾಗ ನನ್ನನ್ನು ಎಬ್ಬಿಸು," ಎಂದು ಹೇಳಿದರು. ಅಪ್ಪಣ್ಣ ನಗುತ್ತಾ ಹೊರಟುಬಂದ.

ಅಂದು ರಾತ್ರಿ ಅಪ್ಪಣ್ಣನ ಬ್ರಹ್ಮಚರ್ಯವ್ರತ ಕೊನೆಗಂಡಿತು.

ನಾನು ಓಲೇಕಾರರ ಜೊತೆಗೆ ಆ ಓಣಿ ಈ ಓಣಿ ಅಲೆಯುತ್ತಿದ್ದೆ. ನಮ್ಮನ್ನು ಕಂಡು ನಾಯಿಗಳು ಬಗುಳಿ ಮೈಮೇಲೆ ಬರುತ್ತಿದ್ದುವು.

ಅತ್ತ ರಂಗಿಯೊಡನೆ ಫೌಜದಾರರ ಸಮಯ ತುಂಬಾ ರಂಜಕವಾಗಿ ಕಳೆದಿತ್ತು. ಅವಳ ಸಹವಾಸದ ಅಮಲಿನಲ್ಲಿ ಅವರು ಪ್ರಪಂಚವನ್ನೆಲ್ಲ ಮರೆತು ಹೋಗಿದ್ದರು.. ಆಭರಣಗಳ ಬಗೆಗೂ ಅವಳನ್ನು ವಿಚಾರಿಸಿರಲಿಲ್ಲ. ಪಟ್ಟಣಕ್ಕೆ ಹೋಗಿದ್ದಾಗ ಅವಳು ಉಳಿದುಕೊಳ್ಳುವ ಸ್ಥಳವಾವುದೆಂದು ಕೇಳಿ ತಿಳಿದುಕೊಂಡು ತಾವು ಅಲ್ಲಿಗೂ ಬರುವುದಾಗಿ ಹೇಳಿದ್ದರು. ತಾನು ಫೌಜದಾರರ ಸೂಳೆಯೆಂಬುದು ಇತರ ಸೂಳೆಯರಿಗೆ ತಿಳಿದರೆ ಅವರಲ್ಲಿ ತನ್ನ ಪ್ರತಿಷ್ಠೆ ಹೆಚ್ಚುವುದೆಂದು ಭಾವಿಸಿ ರಂಗಿಯೂ ಸಂತುಷ್ಟಳಾಗಿದ್ದಳು. ನನಗೆ ಕೊಟ್ಟ ಹಣದ ಸುದ್ದಿಯನ್ನೂ ಅವಳು ಫೌಜದಾರರಿಗೆ ತಿಳಿಸುವ ಗೊಡವೆಗೆ ಹೋಗಿರಲಿಲ್ಲ.

ಅವಳಿಂದ ಬಂದ ಹಣದಲ್ಲಿನ ಐವತ್ತು ರೂಪಾಯಿಗಳನ್ನು ಗೌಡ ಓಲೇಕಾರರಲ್ಲಿ ಹಂಚಿದೆ. ಆ ವಿಚಾರವೂ ಫೌಜದಾರರಿಗೆ ಗೊತ್ತಾಗಲಿಲ್ಲ.

ಚೆನ್ನವ್ವನ ತಂದೆಯಿಂದ ದೊರೆತ ಇನ್ನೂರಾಐವತ್ತು ರೂಪಾಯಿಗಳಲ್ಲಿ ಅಪ್ಪಣ್ಣನಿಗೆ ಐವತ್ತು ಕೊಟ್ಟು, ನಾನು ಐವತ್ತು ತೆಗೆದುಕೊಂಡು, ಉಳಿದ ನೂರೈವತ್ತು ರೂಪಾಯಿಗಳನ್ನು ತಮಗೆ ಕೊಡಬೇಕೆಂದು ಫೌಜದಾರರು ಹೇಳಿದರು. ಆ ಪ್ರಕಾರ ಅಷ್ಟು ಹಣವನ್ನು ಅವರ ಕೈಯಲ್ಲಿಟ್ಟು ಉಳಿದುದನ್ನೆಲ್ಲಾ ಜೇಬಿನಲ್ಲೇ ಇಟ್ಟುಕೊಂಡೆ. ಅದನ್ನೆಲ್ಲ ನಾನೇ ತಿಂದುಬಿಡುವ ವಿಚಾರವೇನೂ ನನಗಿರಲಿಲ್ಲ; ಫೌಜದಾರರಿಗೆ ಕೊಟ್ಟರೆ ಅವರು ಹಾಳುಮಾಡುವರೆಂಬುದು ಗೊತ್ತಿದ್ದುದರಿಂದ ಪ್ರಸಂಗ ಬಂದಾಗ ಕೊಟ್ಟರಾಯಿತೆಂದು ಯೋಚಿಸಿ ನನ್ನಲ್ಲಿಯೆ ಇಟ್ಟುಕೊಂಡಿದ್ದೆ.

ಇನ್ನು ಮುಂದೆ ತಾನು ಯಾವ ಹೆಂಗಸಿನ ಹತ್ತಿರವೂ ಹೋಗದೆ ಚೆನ್ನವ್ವನ ಜೊತೆಗೆ ಒಳ್ಳೆಯ ರೀತಿಯಿಂದ ಸಂಸಾರ ಮಾಡುವುದಾಗಿ ಶಿವಪ್ಪ ಒಪ್ಪಿಕೊಂಡು ಹಾಗೆ ಬರೆದುಕೊಟ್ಟ ಬಳಿಕ ಅವನನ್ನು ಬಿಡುಗಡೆ ಮಾಡಿದೆವು. ಗಂಡ ಹೆಂಡರಿಬ್ಬರೂ ಜೊತೆಯಾಗಿಯೆ ಮನೆಗೆ ಹೋದರು.

ಆ ಹಳ್ಳಿಯಲ್ಲಿನ ನಮ್ಮ ಕೆಲಸ ಮುಗಿದುಹೋಯಿತು. ಫೌಜದಾರರಿಗೆ ಮಾತ್ರ ಅಲ್ಲಿಂದ ಹೊರಡುವ ಮನಸ್ಸಿರಲಿಲ್ಲ. ತಳವಾರ ರಂಗಿಯಂಥ ಹೆಣ್ಣನ್ನು ಅವರು ಅಷ್ಟು ಬೇಗ ಬಿಟ್ಟು ಹೊರಡುವುದು ಸಾಧ್ಯವೆ?

"ನಾಳೆ ಹೋಗೋಣ ಶಿವಣ್ಣಾ," ಎಂದರವರು.

"ಆಗಲಿ ರಾವ್‌ಸಾಹೇಬರೆ," ಎಂದೆ ನಾನು. ನನಗೇನು, ಯಾವ ಸ್ಥಳದಲ್ಲಿದ್ದರೂ ಎಲ್ಲಾ ಒಂದೇ. ಊಟ, ತಿಂಡಿ, ಚಹಾ ಆದರಾಯಿತು. ಪೋಲೀಸರಾದ ನಮಗೆ ಎಲ್ಲಿಯೂ ಈ ಮೂರು ವಸ್ತುಗಳ ಕೊರತೆಯಾಗುತ್ತಿರಲಿಲ್ಲ. ಸೇವೆಗಾಗಿ ಸದಾ ಸಿದ್ಧರಾಗಿರುವ ಗೌಡ–ಓಲೇಕಾರರು. ಇನ್ನೇನು ಬೇಕು?

ಫೌಜದಾರರಿಗೆ ರಂಗಿ. ಅಪ್ಪಣ್ಣನಿಗೆ ಚೆನ್ನವ್ವ.

ನಾನೊಬ್ಬನೇ ಏಕಾಕಿಯಾಗಿದ್ದೆ.

೩೨

ಉಜ್ಜಪ್ಪನವರ ವ್ಯಾಪಾರ

ಒಂದು ದಿನ ನಾನು ಕಚೇರಿಯಲ್ಲಿ ಕುಳಿತಿದ್ದಾಗ ಉಜ್ಜಪ್ಪನವರು ಕೈಯಲ್ಲಿ ಕಾಗದವೊಂದನ್ನು ಹಿಡಿದುಕೊಂಡು ಬಂದರು. ಮುಖದ ಮೇಲೆ ಪ್ರಸನ್ನತೆ ಲಾಸ್ಯವಾಡುತ್ತಿತ್ತು. ಅದು ಸುಮಿತ್ರೆಯ ಕಾಗದವಾಗಿರಬಹುದೆಂದು ನಾನು ತಕ್ಷಣ ಊಹಿಸಿಕೊಂಡೆ.

"ಬರ್ರಿ ಉಜ್ಜಪ್ಪನವರೇ, ಬಹಳ ದಿನವಾಯಿತಲ್ಲ ಭೆಟ್ಟಿಯಾಗಿ! ವ್ಯಾಪಾರ ಹ್ಯಾಗೆ ನಡೆದಿದೆ?"

"ನಿಮ್ಮ ದಯದಿಂದ ಚೆನ್ನಾಗೇ ನಡೆದಿದೆ. ಸುಮಿತ್ರೆಯೂ ಬರೆದಿದ್ದಾಳೆ. ಅವಳೂ ಅರಾಮಾಗಿದ್ದಾಳಂತೆ," ಎಂದು ಅವಳ ಕಾಗದ ನನ್ನ ಕೈಗೆ ಕೊಟ್ಟರು.

ಒಂದೆರಡು ದಿನಗಳ ಮಟ್ಟಿಗಾದರೂ ನನ್ನನ್ನು ಕರೆದುಕೊಂಡು ಶಿವಮೊಗ್ಗೆಗೆ ಬರಬೇಕೆಂದು ಅವಳು ಒತ್ತಾಯಪೂರ್ವಕವಾಗಿ ಬರೆದಿದ್ದಳು.

"ನೀವು ಹೋಗಿಬರ್ರಿತೀರಾ ಶಿವಣ್ಣನವರೆ?" ಎಂದರು ಉಜ್ಜಪ್ಪನವರು.

"ಸರಿ! ಗುರುತಿಲ್ಲ, ಪರಿಚಯವಿಲ್ಲ. ಅಲ್ಲಿಗೆ ನಾನು ಹ್ಯಾಗೆ ಹೋಗುವದು?"

“ಸುಮಿತ್ರೆಗೆ ಗುರುತಿದೆಯಲ್ಲ! ನಿಮ್ಮ ಬಗ್ಗೆ ಅವಳು ತನ್ನ ಗಂಡನಿಗೂ ಹೇಳಿದ್ದಾಳಂತೆ – ನಿಮ್ಮ ಸಹಾಯದಿಂದಲೇ ಎಲ್ಲಾ ನೆಟ್ಟಗಾದದ್ದು ಅಂತ.”

“ಆಯಿತು! ಅವಳು ಹೇಳಿದಳು. ನಾನು ಹೋದೆ! ಏನೋ, ನೀವೂ ಹೋಗುವದಿದ್ದರೆ ಮಾತ್ರ ಬಂದೇನು.”

“ಅಂಗಡಿಯನ್ನು ಯಾರ ಮೇಲೆ ಬಿಡಲಿ ಶಿವಣ್ಣಾ ?”

“ಒಂದೆರಡು ದಿವಸ ನಿಮ್ಮ ಮನೆಯವರೇ ನೋಡಿಕೊಂಡಾರು.”

ಉಜ್ಜಪ್ಪನವರು ತಕ್ಷಣ ಒಪ್ಪಲಿಲ್ಲ. ಅವರ ಅಂಗಡಿಯಲ್ಲಿ ವ್ಯಾಪಾರ ಬಲು ಬಿರುಸಾಗಿ ಸಾಗಿತ್ತು. ಹೊಲ ಮಾರಿ ಬಂದ ಹಣದಲ್ಲಿ ಉಳಿದ ಒಂದು ಸಾವಿರ ರೂಪಾಯಿಗಳನ್ನು ಅಂಗಡಿಗೆ ಹಾಕಿ ಹೊಸ ಮಾಲು ತಂದು ವ್ಯಾಪಾರ ವನ್ನು ಬೆಳಸಿದ್ದರು. ಅದು ಸಮರಕಾಲ. ಇಂದು ತಂದ ಮಾಲಿಗೆ ಮರುದಿನ ದೊಳಗಾಗಿ ಬೆಲೆ ಏರುತ್ತಿತ್ತು. ಸುತ್ತಲಿನ ಹತ್ತು ಹನ್ನೆರಡು ಹಳ್ಳಿಗಳ ಜನರು ಅವರಲ್ಲಿ ಸಾಮಾನು ತೆದುಕೊಳ್ಳತೊಡಗಿದ್ದರು. ಉಜ್ಜಪ್ಪನವರಿಗೂ ಹುರುಪು ಬಂದಂತಾಗಿ ವ್ಯಾಪಾರದಲ್ಲಿಯೆ ತಮ್ಮ ಲಕ್ಷ್ಯವನ್ನೆಲ್ಲಾ ತೊಡಗಿಸಿದ್ದರು. ಶಿವಮೊಗ್ಗೆಗೆ ಹೋಗಿ ಬರುವುದೆಂದರೆ ಒಂದು ವಾರವಾದರೂ ಆಗುವುದು. ಅಷ್ಟು ದಿನ ವ್ಯಾಪಾರ ಹಾಳಾಗುವದಲ್ಲಾ ಎಂದು ಅವರ ಚಿಂತೆ. ಅದರೊಡನೆಯೆ ಮಗಳನ್ನು ಕಂಡು ಬರಬೇಕೆಂಬ ಹಂಬಲವೂ ಇದ್ದಿತು.

ಅಂಗಡಿಯನ್ನು ತಾನು ನೋಡಿಕೊಳ್ಳುವುದಾಗಿ ಅವರ ಹೆಂಡತಿಯೂ ಹೇಳಿದರು. ಆಗ ಮಾತ್ರ ಉಜ್ಜಪ್ಪನವರು ಶಿವಮೊಗ್ಗೆಗೆ ಹೊರಡಲು ನಿರ್ಧರಿಸಿದರು. ನಾನೂ ಏಳು ದಿನಗಳ ರಜೆ ಪಡೆದು ಅವರೊಡನೆ ಹೊರಟೆ. ಶಿವಮೊಗ್ಗೆಗೆ ಹೋಗುವ ವಿಚಾರವನ್ನು ಮಾತ್ರ ಯಾರಿಗೂ ತಿಳಿಸಲಿಲ್ಲ.

“ಎಲ್ಲಿಗೆ ಹೋಗಬೇಕು ಶಿವಣ್ಣಾ ?” ಎಂದು ಕೇಳಿದರು ಫೌಜದಾರರು.

“ನಮ್ಮೂರಿಗೆ ಹೋಗಿ ಬಹಳ ದಿನವಾಯಿತು. ಹೋಗಿ ಎಲ್ಲರನ್ನೂ ನೋಡಿಕೊಂಡು ಬರ್ತೇನೆ,” ಎಂದು ಹೇಳಿದೆ.

ಅವರು ಆ ವಿಚಾರ ಬೆಳಸಲಿಲ್ಲ.

ಕತ್ತಲೆ ಪಸರಿಸುತ್ತಿದ್ದ ಹಾಗೇ ನಮ್ಮ ಬಸ್ಸು ಶಿವಮೊಗ್ಗೆಯನ್ನು ಸೇರಿತು. ನಮ್ಮಿಬ್ಬರನ್ನೂ ನೋಡಿ ಸುಮಿತ್ರೆಗೆ ಪರಮಾಶ್ಚರ್ಯ.

"ಏನು, ವಿಮಾನದಿಂದಿಳಿದಿರೇನು?" ಎಂದು ಕೇಳಿದಳು, ನಗುತ್ತಾ. "ಒಂದು ಸುದ್ದಿಯನ್ನೂ ತಿಳಿಸದೆ ಬಂದು ಬಿಟ್ಟರಲ್ಲಾ!"

ಅವಳ ಗಂಡ ಷಣ್ಮುಖಪ್ಪ ಅಂಗಡಿಯಿಂದ ಬಂದಿರಲಿಲ್ಲ. ಉಳಿದವರೆಲ್ಲ ಮನೆಯಲ್ಲೇ ಇದ್ದವರು ನಮ್ಮಿಬ್ಬರನ್ನೂ ಆದರದಿಂದ ಮಾತನಾಡಿಸಿದರು.

"ನಾನು ಸರಕಾರಿ ಕೆಲಸಕ್ಕೆ ಬಂದಿದ್ದೆ. ಇವರೂ ಜೊತೆಗೆ ಬಂದರು. ನಾನಿನ್ನು ಪೋಲೀಸ್ ಕಚೇರಿಗೆ ಹೋಗುತ್ತೇನೆ," ಎಂದು ನಾನು ಹೇಳುತ್ತಿದ್ದ ಹಾಗೇ ಸುಮಿತ್ರೆಯ ಮಾವ, "ನಿಮ್ಮ ಬಗ್ಗೆ ನಮ್ಮ ಸೊಸೆ ಎಲ್ಲಾ ಹೇಳಿದ್ದಾಳೆ. ನೀವೂ ನಮ್ಮವರೇ ಇದ್ದ ಹಾಗಿದ್ದೀರಿ. ಇಲ್ಲಿ ನಿಮ್ಮದೇ ಮನೆಯಿರುತ್ತಾ ಆಫೀಸಿಗೇಕೆ ಹೋಗುತ್ತೀರಿ? ದಯವಿಟ್ಟು ಇದ್ದುಬಿಡಿ," ಎಂದು ನಯವಾಗಿ, ಮೈಸೂರಿನ ಮೋಹಕ ಭಾಷೆಯಲ್ಲಿ ಹೇಳಿದರು.

ಹತ್ತು ಗಂಟೆಯ ಹೊತ್ತಿಗೆ ಸುಮಿತ್ರೆಯ ಗಂಡ ಷಣ್ಮುಖಪ್ಪನೂ ಬಂದ. ನನ್ನನ್ನು ಕಂಡು ಅವನಿಗೂ ಹರ್ಷವಾಯಿತು.

"ಪೋಲೀಸಿನವರಲ್ಲೂ ತಮ್ಮಂಥ ಒಳ್ಳೆಯ ಜನರಿರುವರೆಂದು ನಾನು ತಿಳಿದಿರಲಿಲ್ಲ. ತಾವು ಅಪವಾದವಿದ್ದ ಹಾಗಿದ್ದೀರಿ," ಎಂದನಾತ.

ಎಲ್ಲರೂ ಊಟಕ್ಕೆ ಕುಳಿತುಕೊಂಡೆವು. ಸುಮಿತ್ರೆಯೇ ಬಡಿಸಲು ನಿಂತಳು. ಸೊಗಸಾದ ರುಚಿಕರವಾದ ಭೋಜನವಾಯಿತು.

ಹಜಾರಕ್ಕೆ ಬಂದು ಹರಟುತ್ತಾ ಕುಳಿತುಕೊಂಡೆವು.

ಹೊತ್ತಾಯಿತೆಂದು ಹೇಳಿ ಮುದುಕರಿಬ್ಬರೂ ಎದ್ದು ಮಲಗಿಕೊಳ್ಳಲು ಹೋದರು. ಷಣ್ಮುಖಪ್ಪ ನಾನು ಇಬ್ಬರೇ ಉಳಿದೆವು. ಸುಮಾರು ಮೂವತ್ತರ ಯುವಕನಾತ. ಕುಳ್ಳನೆಯ ದಪ್ಪನೆಯ ಆಳು. ಸುಮಿತ್ರೆಯಂಥ ರೂಪವತಿಗೆ ಅನುರೂಪ ವರನಲ್ಲವೆಂದೇ ನನಗೆನ್ನಿಸಿತು. ನನ್ನ ಸ್ವಾರ್ಥಬುದ್ಧಿಗೆ ಹಾಗೆ ಹೊಳೆದಿರಲು ಸಾಕು. ಅವನ ಮಾತೆಲ್ಲ ವ್ಯಾಪಾರಕ್ಕೆ ಸಂಬಂಧಪಟ್ಟದ್ದು. ಅವರದು ಕಿರಾಣಿ – ಸ್ಟೇಶನರಿ ಅಂಗಡಿ. ಯುದ್ಧದ ಸಮಯವಾದುದರಿಂದ ಮೂಲೆಯಲ್ಲಿ ಬಿದ್ದಿದ್ದ ವಸ್ತುಗಳೂ ಮಾರಾಟವಾಗುತ್ತಿದ್ದುವು. ವ್ಯಾಪಾರ ತುಂಬಾ ಊರ್ಜಿತಾವಸ್ಥೆಗೇರಿತ್ತು.

"ಇವತ್ತೇ ಹದಿನೈದು ನೂರು ರೂಪಾಯಿ ಲಾಭವಾಯಿತು ನೋಡಿ," ಎಂದು ಅವರು ಹೇಳಿದಾಗ ನನಗೆ ಆಶ್ಚರ್ಯವಾಗದಿರಲಿಲ್ಲ.

"ಒಂದು ದಿನಕ್ಕೆ ಹದಿನೈದುನೂರು ರೂಪಾಯಿ! ಅಬ್ಬ!"

"ಅಂದರೆ ಅದು ಹೀಗಾಯಿತು ನೋಡಿ. ಬಲುದಿನಗಳ ಹಿಂದೆ ನಾವು ಸೀಮೆಯೆಣ್ಣೆ ಸ್ಟಾಕ್ ಮಾಡಿಟ್ಟುಕೊಂಡಿದ್ದೆವು. ಈಗ ಅದಕ್ಕೂ ಚಿನ್ನದಂಥ ಬೆಲೆಯಾಗಿದೆಯಲ್ಲ. ಇವತ್ತು ಒಂದು ಗಿರಾಕಿ ಬಂತು, ಐದುನೂರು ಡಬ್ಬ ಎಣ್ಣೆ ಮಾರಿ ಹೋಯಿತು. ಅದರಿಂದ ಬಂದ ಲಾಭ ಇದು."

ಹಾಗೆ ಮಾತನಾಡುತ್ತಾ ಷಣ್ಮುಖಪ್ಪ ತನ್ನ ತಂದೆ ತಾಯಿಗಳ ಕೃಪಣ ತನವನ್ನೂ ಕುರಿತು ಹೇಳಿದ. ಅವರಿಂದಾಗಿಯೆ ತಾನು ಸುಮಿತ್ರೆಯನ್ನು ತವರು ಮನೆಯಲ್ಲಿ ಬಿಡಬೇಕಾಯಿತು, ಇನ್ನೊಬ್ಬಳನ್ನು ಮದುವೆಯಾಗಬೇಕಾಯಿತು, ಎರಡನೆಯ ಮದುವೆಯಿಂದ ತನಗೂ ಸುಖವಾಗಲಿಲ್ಲ, ಎರಡನೆಯ ಹೆಂಡತಿಗೂ ಸುಖವಾಗಲಿಲ್ಲ, ಯಾರಿಗೂ ನೆಮ್ಮದಿ ಲಭಿಸಲಿಲ್ಲ. ಆ ಮಾತು ಆಡುವಾಗ ಅವನ ಧ್ವನಿಯಲ್ಲಿ ಪಶ್ಚಾತ್ತಾಪ ವ್ಯಕ್ತವಾಗುತ್ತಿತ್ತು.

ನಾನು ನಿಧಾನವಾಗಿ ಉಜ್ಜಪ್ಪನವರ ವ್ಯಾಪಾರದ ಪ್ರಸ್ತಾಪವೆತ್ತಿ, ಬೆಲೆಗಳ ಏರಿಕೆಯ ಈ ಕಾಲದಲ್ಲಿ ಅವರಿಗೆ ಮೂರು ನಾಲ್ಕು ಸಾವಿರ ರೂಪಾಯಿ ಗಳ ಬಂಡವಲು ಸಿಕ್ಕಿದರೆ ಅವರು ನಾಲ್ಕೈದುಪಟ್ಟು ಲಾಭ ಮಾಡಿಕೊಳ್ಳಬಹು ದೆಂದು ಅಭಿಪ್ರಾಯಪಟ್ಟೆ.

"ಉಜ್ಜಪ್ಪನವರು ವ್ಯಾಪಾರದಲ್ಲಿ ಜಾಣರೇ. ಆದರೆ, ಏನೋ ಒಂದು ಸಲ ಕೈ ಸುಟ್ಟುಕೊಂಡರು. ಈಗ ಮಾತ್ರ ಮತ್ತೆ ಹುರುಪಿನಿಂದ ಗಳಿಸಲು ದುಡಿಯುತ್ತಿದ್ದಾರೆ. ಅವರಿಗೆ ಯಾರದಾದರೂ ಸಹಾಯ ಬೇಕಾಗಿದೆ," ಎಂದು ಅವನಿಗೆ ಸೂಕ್ಷ್ಮವಾಗಿ ಸೂಚಿಸಿದೆ. ಮನಸ್ಸು ಮಾಡಿದರೆ ಷಣ್ಮುಖಪ್ಪನೇ ಬಂಡವಲು ಒದಗಿಸಿ ನೆರವಾಗಬಹುದೆಂಬ ಆಸೆ ನನಗಿತ್ತು.

"ಹೌದು. ಅದೂ ಯೋಚಿಸಬೇಕಾದ ವಿಷಯವೇ," ಎಂದ ಷಣ್ಮುಖಪ್ಪ. "ನಾನೇ ಸಹಾಯಮಾಡಬಹುದಾಗಿತ್ತು, ಆದರೆ ಮಾವನವರು ತುಂಬಾ ಅಭಿಮಾನಿಗಳು. ನನ್ನಿಂದ ಹಣ ಸ್ವೀಕರಿಸಲಾರರು. ಇದಕ್ಕೇನು ಪಾಯವೋ ನೀವೇ ಹೇಳಿ."

ಒಂದು ನಿಮಿಷ ಬಿಟ್ಟು ಮತ್ತೆ ಅವನೇ ಹೇಳಿದ:

"ಸ್ವಾಮಿ, ಒಂದು ಕೆಲಸಮಾಡಿ. ನಾನು ಹಣ ಕೊಟ್ಟೆ ಅಂತ ಅವರಿ ಗನ್ನಿಸಲೇಬಾರದು. ಹಣವನ್ನು ನಿಮ್ಮ ಕೈಲಿ ಕೊಟ್ಟಿರುತೀನಿ. ಆ ವಿಷಯ

ಅವರಿಗೆ ತಿಳಿಸದೆ ನಿಮ್ಮದೇ ಹಣ ಕೊಟ್ಟ ಹಾಗೆ ನೀವು ಅದನ್ನು ಕೊಡಿ. ಅವರ ವ್ಯಾಪಾರ ಕುದುರಿ ಸಾಕಷ್ಟು ಲಾಭ ಬಂದ ತರುವಾಯ ಅವರು ಹಣ ವಾಪಸು ಕೊಟ್ಟಾಗ ನೀವೇ ಅದನ್ನು ನನಗೆ ಕಳಿಸಬಹುದು. ಹೇಗಿದೆ ವಿಚಾರ?"

"ವಂಡರ್‌ಫುಲ್!" ಎಂದು ನಾನು ಸಮ್ಮತಿ ಸೂಚಿಸಿದೆ.

ಎರಡು ದಿನ ಶಿವಮೊಗ್ಗೆಯಲ್ಲಿದ್ದು ನಾವು ಊರಿಗೆ ಹೊರಡುವಾಗ ಷಣ್ಮುಖಪ್ಪ ಮೂರು ಸಾವಿರ ರೂಪಾಯಿ ತಂದು ನನ್ನ ಕೈಲಿರಿಸಿದ. ಅವನು ಬೇಡವೆಂದರೂ ಕೇಳದೆ ನಾನು ಆ ಹಣಕ್ಕೊಂದು ರಸೀತಿ ಕೊಟ್ಟೆ.

ಸುಮಿತ್ರೆಯೂ ಒಂದೆರಡು ದಿನಗಳ ಮಟ್ಟಿಗೆ ತವರುಮನೆಗೆಂದು ಹೊರಟಳು.

ಊರಿಗೆ ಬಂದ ಬಳಿಕ ಅಂಗಡಿಯನ್ನು ಬೆಳಸುವ ಬಗ್ಗೆ ಉಜ್ಜಪ್ಪನವರೊಡನೆ ಪ್ರಸ್ತಾಪಿಸಿದೆ.

"ಬೆಳಸಬೇಕು. ಹಣವೇ ಇಲ್ಲವಲ್ಲಾ?"

"ಇಲ್ಲ ಅಂತ ಕೂತರೆ ಆಗುವದೇ ಉಜ್ಜಪ್ಪನವರೇ?"

"ಮತ್ತೇನು ಮಾಡಬೇಕು ಹೇಳಿರಿ. ಸಾಲ ತೆಗೆಯಲು ಧೈರ್ಯವಿಲ್ಲ."

"ಯಾಕೆ ತೆಗೆಯಬಾರದು? ಈಗ ಮೊದಲಿನ ಹಾಗಲ್ಲ ವ್ಯಾಪಾರ. ಒಂದು ಸಾವಿರ ಹಾಕಿದರೆ ಹತ್ತು ಸಾವಿರ ಗಳಿಸಬಹುದು."

"ಹೌದು. ಅದೂ ನಿಜ."

"ನೀವು ಬೇರೆಯವರ ಹತ್ತಿರ ಸಾಲ ತೆಗೆಯುವದೂ ಬೇಡ. ನಾನೇ ಕೊಡುತ್ತೇನೆ. ತೆಗೆದುಕೊಳ್ಳಬೇಕು. ನನ್ನ ಹತ್ತಿರ ಮೂರು ಸಾವಿರ ಇದೆ. ನನಗೂ ಈಗ ಅವುಗಳ ಅಗತ್ಯವೇನೂ ಇಲ್ಲ. ಸುಮ್ಮನೆ ಯಾಕೆ ಕೊಳೆಯಿಸಬೇಕು ಅದನ್ನು. ನಿಮಗಾದರೂ ಉಪಯೋಗವಾಗಲಿ."

ಅವರಿಗೆ ಆಶ್ಚರ್ಯವಾಗದಿರಲಿಲ್ಲ. ಒಂದು ಗಳಿಗೆ ಸುಮ್ಮನಿದ್ದು ಅವರೆಂದರು:

"ನನಗೆ ಸಹಾಯಮಾಡಲು ತಯಾರಾದದ್ದು ನಿಮ್ಮ ದೊಡ್ಡ ಮನಸ್ಸು. ತೆಗೆದುಕೊಳ್ಳಲಿಕ್ಕೆ ನನಗೇ ಸಂಕೋಚ. ನಾನು ಹಣ ಹಿಂದಕ್ಕೆ ಕೊಡುವದು ತಡವಾದೀತು."

"ತಡವಾದರೂ ಏನಂತೆ. ನನಗೂ ಅವಸರವಿಲ್ಲ. ಒಂದು ವರ್ಷವಾದರೂ ಚಿಂತೆಯಿಲ್ಲ."

ಅದೇ ದಿನ ಅವರಿಗೆ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟೆ. ಅವುಗಳನ್ನು ಸ್ವೀಕರಿಸುವಾಗ ಅವರ ಕೈ ನಡುಗುತ್ತಿತ್ತು. ಅವರ ಕಣ್ಣುಗಳಲ್ಲಿ ಕೃತಜ್ಞತಾಭಾವ ತುಂಬಿಬಂದಿತ್ತು. ಸುಮಿತ್ರೆಗೂ ಆಶ್ಚರ್ಯ – ಸಂತಸ.

ಎರಡು ಚಕ್ಕಡಿಗಳನ್ನು ತೆಗೆದುಕೊಂಡು ಉಜ್ಜಪ್ಪನವರು ಅಂದೇ ಗೊಬ್ಬೂರಿಗೆ ಹೋಗಿ, ಹಿಂದಿನ ಬಾಕಿಯನ್ನೆಲ್ಲಾ ಮುಟ್ಟಿಸಿ, ಹೊಸದಾಗಿ ಮೂರು ಸಾವಿರ ರೂಪಾಯಿಗಳ ಮಾಲು ಕೊಂಡು ಬಂದರು. ಅವರು ಖರೀದಿ ಮಾಡಿದ ಮಾಲು ತರಲು ಎರಡು ಚಕ್ಕಡಿ ಸಾಲದೆ ಹೋದುದರಿಂದ ಇನ್ನೆರಡನ್ನು ಬಾಡಿಗೆಗೆ ಹಿಡಿದು ಊರಿಗೆ ಬಂದರು. ಅವರ ಮಳಿಗೆಯೂ ಚಿಕ್ಕದಾಗಿದ್ದುದರಿಂದ ಅದರಲ್ಲಿ ಎಲ್ಲ ಮಾಲು ಹಿಡಿಸಲಿಲ್ಲ. ಮನೆಯಲ್ಲಿಯೂ ಅಷ್ಟು ಸಾಮಾನು ಇಟ್ಟರು. ಮರುದಿವಸ ಗೋಡೆಯೊಂದನ್ನುರುಳಿಸಿ ಅಂಗಡಿಯ ಸ್ಥಳವನ್ನು ವಿಸ್ತರಿಸಿದರು. ಗೊಬ್ಬೂರಿನಿಂದ ಪ್ರತಿದಿನವೂ ಮಾಲಿನ ಧಾರಣೆ ತಿಳಿಯುವ ವ್ಯವಸ್ಥೆ ಮಾಡಿಕೊಂಡರು. ಬೆಳಗಿನ ಟಪಾಲು ನೋಡಿಕೊಂಡು ವ್ಯಾಪಾರಕ್ಕಾರಂಭಿಸುತ್ತಿದ್ದರು. ಸುತ್ತಮುತ್ತಲಿನ ಹಳ್ಳಿಯ ಜನರಿಗೆ ಗೊಬ್ಬೂರಿನ ಧಾರಣೆಯಿಂದಲೇ ಮಾಲು ಕೊಡುವುದಾಗಿ ಸಾರಿದರು. ಆ ಧಾರಣೆಯಿಂದ ಮಾರಿದರೂ ಸಾಕಷ್ಟು ಲಾಭ ಬರುವ ಹಾಗಿತ್ತು. ಅಂದಿನಿಂದ ಅವರ ವ್ಯಾಪಾರ ಭರಭರಾಟೆಯಿಂದ ಸಾಗತೊಡಗಿತು. ಚಿಕ್ಕಪುಟ್ಟ ಅಂಗಡಿಗಳವರು ಕೂಡಾ ಉಜ್ಜಪ್ಪನವರಲ್ಲಿಗೇ ಬಂದು ತಮ್ಮ ಅಂಗಡಿಗಳಿಗೆ ಅವಶ್ಯವಿದ್ದ ಎಣ್ಣೆ, ಕಡಲೆಯ ಹಿಟ್ಟು, ಸಕ್ಕರೆ, ಚಹಾ ಪುಡಿ ಇತ್ಯಾದಿ ವಸ್ತುಗಳನ್ನು ಕೊಳ್ಳತೊಡಗಿದರು. ಒಂದೇ ಒಂದು ತಿಂಗಳಿನೊಳಗಾಗಿ ಉಜ್ಜಪ್ಪನವರ ಅಂಗಡಿಯೂ ನಗರದ ದೊಡ್ಡ ಅಂಗಡಿಗಳಂತೆಯೇ ಪ್ರಖ್ಯಾತಿ ಪಡೆಯಿತು. ಬೆಳೆಯುತ್ತಿದ್ದ ವ್ಯಾಪಾರದ ಲೆಕ್ಕಪತ್ರವಿರಿಸಲು ಒಬ್ಬ ಗುಮಾಸ್ತೆಯ ಆವಶ್ಯಕತೆಯೂ ಕಂಡುಬಂದಿತು.

ನಮ್ಮ ಓಲೇಕಾರನ ಮಗನೊಬ್ಬ ಕನ್ನಡ ಏಳರವರೆಗೆ ಕಲಿತು ಮುಂದೆ ಓದಲು ಅನುಕೂಲವಿಲ್ಲದೆ ಮನೆಯಲ್ಲಿ ಕುಳಿತುಕೊಂಡಿದ್ದ. ಅವನನ್ನು

ಉಜ್ಜಪ್ಪನವರ ಅಂಗಡಿಯಲ್ಲಿ ಸೇರಿಸಿ ಲೆಕ್ಕಪತ್ರವಿಡುವ ಕೆಲಸವೊಪ್ಪಿಸ ಲಾಯಿತು.

ಅದೊಂದು ತಿಂಗಳಿನಲ್ಲಿಯೆ ಅವರಿಗೆ ಐದಾರು ನೂರು ರೂಪಾಯಿ ಗಳಷ್ಟು ಲಾಭವಾಯಿತು. ಸಮಯ ನೋಡಿಕೊಂಡು ನನ್ನ ಹತ್ತಿರ ಉಳಿದಿದ್ದ ಒಂದು ಸಾವಿರವನ್ನೂ ಅವರಿಗೆ ಕೊಟ್ಟೆ. ಅದರಿಂದ ಅವರು ಒಳ್ಳೆಣ್ಣೆಯನ್ನೂ ಸಕ್ಕರೆಯನ್ನೂ ಕೊಂಡು ಸಂಗ್ರಹಿಸಿದರು. ನಿಯಂತ್ರಣಗಳ ಕಾಲವೂ ಸಮೀಪಿಸುತ್ತಿತ್ತು. ಒಂದಕ್ಕೆ ನಾಲ್ಕರಂತೆ ಬೆಲೆ ಏರುತ್ತಿತ್ತು. ಅವರ ಲಾಭ ವನ್ನು ನಿರೀಕ್ಷಿಸಿದ ಹಾಗೆ ನನಗೆ ಆಶ್ಚರ್ಯವಾಗುವುದರ ಜೊತೆಗೆ, ೧೯ ರೂಪಾಯಿ ಸಂಬಳದ ನನ್ನ ಕೆಲಸವನ್ನು ಕುರಿತು ಯೋಚಿಸಿದಾಗ ವ್ಯಸನವೂ ಆಗುತ್ತಿತ್ತು. ನಾನೂ ಇವರ ಹಾಗೆ ವ್ಯಾಪಾರಕ್ಕೆ ನಿಂತುಬಿಡುವುದೆಂದೂ ಹಲವು ಬಾರಿ ಯೋಚಿಸಿದೆ. ಆದರೆ, ನೌಕರಿಯನ್ನು ಬಿಟ್ಟುಬಿಡಲೂ ಧೈರ್ಯ ಸಾಲದು.

ಎಂಟು ದಿನಗಳವರೆಗೆ ತವರುಮನೆಯಲ್ಲಿದ್ದು ಸುಮಿತ್ರೆ ಶಿವಮೊಗ್ಗೆಗೆ ತೆರಳಿದ್ದಳು.

ನಾನೂ ಆ ಊರು ಬಿಟ್ಟು ಹೊರಡುವ ದಿನಗಳು ಸಮೀಪಿಸುತ್ತಿದ್ದುವು. ಫೌಜದಾರರಿಗೆ ಮಾತ್ರ ನನ್ನನ್ನು ಬಿಡುವ ಮನಸ್ಸಿರಲಿಲ್ಲ.

ಇನ್ನೊಂದು ವಾರದಲ್ಲಿ ನಾನು ಹೊರಡಬೇಕಾಗಿತ್ತು. ನನಗೆ ಕೊಡ ಬೇಕಾಗಿದ್ದ ಹಣವನ್ನು ಮುಟ್ಟಿಸಲೆಂದು ಉಜ್ಜಪ್ಪನವರು ವ್ಯವಸ್ಥೆ ಮಾಡಿ ಕೊಳ್ಳುತ್ತಿದ್ದರು. ಎರಡು ಸಾವಿರ ರೂಪಾಯಿಗಳನ್ನು ಕೂಡಿಸಿ ತಮ್ಮ ಹೆಂಡತಿಯ ಹತ್ತಿರ ಕೊಟ್ಟು, ಇನ್ನೊಂದು ಸಾವಿರವನ್ನೂ ಜೊತೆಮಾಡಿಕೊಳ್ಳಲು ಯತ್ನಿಸುತ್ತಿದ್ದರು.

ಅವರಿಂದ ಬಂದ ಎರಡು ಸಾವಿರ ರೂಪಾಯಿಗಳನ್ನು ಷಣ್ಮುಖಪ್ಪನಿಗೆ ಕಳಿಸಿಕೊಟ್ಟು ಇನ್ನೊಂದು ಸಾವಿರವನ್ನು ಆರೇಳು ತಿಂಗಳಲ್ಲಿ ಕಳಿಸುವುದಾಗಿ ಕಾಗದ ಬರೆದು ಹಾಕಿದೆ.

ನಾನು ಕಾಲವಾಡವನ್ನು ಬಿಟ್ಟು ಹೊರಡುವ ದಿನವೂ ಸಮೀಪಿಸಿತು. ಉಜ್ಜಪ್ಪನವರಿಗೂ ಅವರ ಪತ್ನಿಗೂ ಸಹಿಸಲಾಗದಷ್ಟು ದುಃಖ. ಗೌಡರಿಗೂ ತುಂಬಾ ವ್ಯಸನ. ನಮ್ಮ ಕಚೇರಿಯ ಕಾರಕೂನರು, ಪೋಲೀಸರು ಎಲ್ಲರಿಗೂ ಕಳವಳ.

ಗೌಡರು, ಅಪ್ಪಣ್ಣ, ಕಾರಕೂನರು ಸೇರಿ ಮಾತನಾಡಿಕೊಂಡು ನನ್ನನ್ನು ಬೀಳ್ಕೊಡಲು ಒಂದು ಸಮಾರಂಭವನ್ನೇರ್ಪಡಿಸಿದರು. ಒಬ್ಬ ಸಾಮಾನ್ಯ ಸಿಪಾಯಿಗಾಗಿ ಇಂಥ ಸಡಗರವೇಕೆ ಎಂದು ನಾನು ಆಕ್ಷೇಪಿಸಿದರೂ ಅವರು ಕೇಳಲಿಲ್ಲ. ಗೊಬ್ಬೂರಿನಿಂದ ಛಾಯಾಗ್ರಾಹಕನನ್ನೂ ಕರೆಯಿಸಿ ಸಮುದಾಯ ಚಿತ್ರವನ್ನೂ ತೆಗೆಯಿಸುವ ಏರ್ಪಾಟು ಮಾಡಿದರು. ಆ ಸಮಾರಂಭಕ್ಕೆ ಫೌಜದಾರರನ್ನೇ ಅಧ್ಯಕ್ಷರನ್ನಾಗಿ ಮಾಡುವುದೆಂದು ಗೊತ್ತುಮಾಡಿಕೊಂಡರು.

ಆ ದಿನ ರಾತ್ರಿಯ ಊಟಕ್ಕೆ ಹತ್ತಿಪ್ಪತ್ತು ಜನರಿಂದ ಆಮಂತ್ರಣ ಬಂದಿತ್ತು. ಯಾರ ಮನೆಗೆ ಹೋಗಬೇಕೆಂಬುದೇ ತಿಳಿಯದೆ ನಾನು ಗೊಂದಲ ದಲ್ಲಿ ಸಿಲುಕಿಕೊಳ್ಳುವಂತಾಗಿತ್ತು. ಉಜ್ಜಪ್ಪನವರಂತೂ ನನ್ನನ್ನು ಬಿಡುವುದೇ ಇಲ್ಲವೆಂದು ಹೇಳಿದ್ದರು. ಗೌಡರು ಆಣೆಯಿಟ್ಟು ಕರೆದಿದ್ದರು. ನನಗೆ ಒಳ್ಳೆಯ ಪೀಕಲಾಟವೆ.

....ನಾನು ಹೊರಡಬೇಕಾಗಿದ್ದ ದಿನವೂ ಉದಯಿಸಿತು. ಬೆಳಗಿನ ಹತ್ತು ಗಂಟೆಗೆ ವಿದಾಯ ಸಮಾರಂಭ. ಗೌಡರ ಮನೆಯಲ್ಲಿ ಸುಮಾರು ನೂರು ಜನರಿಗೆ ಚಹಾ ಪಾರ್ಟಿ. ಹಾರತುರಾಯಿ ಬಂದಿದ್ದುವು, ಛಾಯಾಗ್ರಾಹಕ ಬಂದಿದ್ದ. ಚಹವಾಯಿತು, ಚಿತ್ರಗ್ರಹಣ ಕಾರ್ಯವೂ ಮುಗಿಯಿತು. ನಾನು ನಡುವೆ ಕುಳಿತುಕೊಂಡಿದ್ದೆ. ನನ್ನ ಎಡಮಗ್ಗುಲಲ್ಲಿ ಗೌಡರೂ ಬಲಮಗ್ಗುಲಲ್ಲಿ ಫೌಜದಾರರೂ ಮಂಡಿಸಿದ್ದರು. ಗೌಡರು ಮತ್ತು ಫೌಜದಾರರ ಹತ್ತಿರ ಉಜ್ಜಪ್ಪ ಮತ್ತು ಅಪ್ಪಣ್ಣರು.

ವಿದಾಯಕೂಟವೆಂದಮೇಲೆ ಭಾಷಣಗಳೂ ಅನಿವಾರ್ಯವಷ್ಟೆ. ಮೊದಲು ಗೌಡರೆದ್ದು, ತಮ್ಮ ಊರಿಗೆ ಅನೇಕ ಪೋಲೀಸರೂ ಫೌಜದಾರರೂ ಬಂದು ಹೋಗಿದ್ದರೂ ಇದುವರೆಗೂ ಇಂಥ ಸಮಾರಂಭ ಜರಗಿರಲಿಲ್ಲವೆಂದು ತಿಳಿಸಿ ನನ್ನ ಸದ್ಗುಣಗಳನ್ನು (!) ಪ್ರಶಂಸಿಸಿ, ಎಲ್ಲ ಪೋಲೀಸರೂ ಅಧಿಕಾರಿಗಳೂ ನನ್ನಂತೆಯೇ ಕೆಲಸ ಮಾಡಿದಲ್ಲಿ ಜನರ ಕಲ್ಯಾಣವಾಗುವುದೆಂದು (!) ಹೇಳಿ ಮುಗಿಸಿದರು.

ಉಜ್ಜಪ್ಪನವರೂ ಮಾತನಾಡಲು ಎದ್ದು, ನನ್ನಿಂದಲೇ ಅವರ ಮನೆತನ ಮುಂದೆ ಬರುವಂತಾಯಿತೆಂದು ಹೇಳುತ್ತಿದ್ದ ಹಾಗೇ ಗಂಟಲು ಬಿಗಿದು ಬಂದು,

ಕಣ್ಣುಗಳಲ್ಲಿ ಕಂಬನಿ ತುಂಬಿ, ಮುಂದೆ ಮಾತೇ ಬಾರದೆ ಕುಳಿತುಕೊಂಡು ಬಿಟ್ಟರು.

ನಾನು ಉತ್ತರ ಕೊಡಬೇಕಲ್ಲವೆ ? ನನಗೂ ದುಃಖ ಒತ್ತರಿಸಿ ಬರುತ್ತಿತ್ತು. "ನಾನಿಲ್ಲಿ ಆರು ತಿಂಗಳ ಕಾಲ ಇದ್ದರೂ ಆರು ದಿವಸ ಇದ್ದ ಹಾಗೆ ಭಾಸವಾಗುತ್ತದೆ. ಅದಕ್ಕೆ ಕಾರಣ – ಫೌಜದಾರರು, ಕಾರಕೂನರು, ಸಹೋದ್ಯೋಗಿ ಪೋಲೀಸರು, ಗೌಡರು, ಉಜ್ಜಪ್ಪ ಮತ್ತಿತ್ತರ ಜನರ ಪ್ರೇಮ...." ಎಂದು ನಾಲ್ಕು ಮಾತುಗಳಲ್ಲಿಯೆ ಮುಗಿಸಿದೆ.

ಕೊನೆಯದಾಗಿ, ಸಭಾಧ್ಯಕ್ಷರಾದ ಫೌಜದಾರರ ಭಾಷಣ.

ಅವರು ಠೀವಿಯಿಂದ ಎದ್ದುನಿಂತು, ನನ್ನ ಬುದ್ಧಿಶಕ್ತಿ, ಜಾಣತನ, ಕಾರ್ಯದಕ್ಷತೆ, ಇತ್ಯಾದಿ ಇತ್ಯಾದಿ ಸದ್ಗುಣಗಳನ್ನು (?) ಹೊಗಳಿ, ನಾನು ಅವರ ಬಲಗೈಯಂತೆ ಇದ್ದು ಕೆಲಸಮಾಡಿದುದಾಗಿ ಹೇಳಿ, ಮಾತನ್ನು ಮುಗಿಸುತ್ತಾ ನಾಟಕೀಯವಾಗಿ ಸಭಿಕರನ್ನು ದಿಟ್ಟಿಸುತ್ತಾ,

"ಇಂಥ ಉತ್ತಮ ಕೆಲಸಗಾರನನ್ನು ಕರೆದುಕೊಳ್ಳಲು ನನಗೂ ಮನಸ್ಸಿಲ್ಲ. ಇವರನ್ನು ಇನ್ನೂ ಆರು ತಿಂಗಳ ಮಟ್ಟಿಗೆ ಇಲ್ಲೇ ಇರಿಸಿಕೊಳ್ಳಬೇಕೆಂದು ನೀವೆಲ್ಲರೂ ಒತ್ತಾಯಪಡಿಸುವದಾದರೆ ನಾನು ಹಾಗೆ ವ್ಯವಸ್ಥೆ ಮಾಡಬಹುದು. ನಿಮ್ಮ ಅಭಿಪ್ರಾಯವೇನು ?" ಎಂದು ಕೇಳಿದರು.

"ಇಲ್ಲಿಯೇ ಇರುವ ಹಾಗೆ ಮಾಡಿರಿ ಸಾಹೇಬರೇ," ಎಂದರು ಎಲ್ಲರೂ.

ಫೌಜದಾರರು ತಮ್ಮ ಕಿಸೆಯಿಂದ ಒಂದು ಕಾಗದ ತೆಗೆದು ಸಭೆಗೆ ತೋರಿಸುತ್ತಾ ಹೇಳಿದರು :

"ಇದೋ, ಡಿ. ಎಸ್. ಪಿ. ಸಾಹೇಬರ ಹುಕುಂ : ಶಿವಣ್ಣ ಇಲ್ಲೇ ಇರಬೇಕು ಅಂತ ಅವರು ಆಗಲೇ ಆಜ್ಞೆ ಮಾಡಿದ್ದರು."

ಎಲ್ಲರಿಗೂ ಪರಮಾಶ್ಚರ್ಯ, ಪರಮಾನಂದ. ಎಷ್ಟೋ ದಿನಗಳ ಹಿಂದೆಯೇ ಆ ಆಜ್ಞೆ ಬಂದಿರಬೇಕು, ಫೌಜದಾರರಿಗೆ ನನ್ನನ್ನು ಬಿಡಲು ಇಚ್ಛೆಯಿರಲಿಲ್ಲ, ಅವರೇ ಡಿ. ಎಸ್. ಪಿ. ಯವರ ಹತ್ತಿರ ಹೋಗಿ ಹೇಳಿಕೊಂಡು ನನ್ನನ್ನು ಇಲ್ಲೇ ಇರಿಸಿಕೊಂಡಿರಬೇಕು, ನಾನು ಹೊರಡಬೇಕಾಗಿದ್ದ ದಿನವೇ ಆ ಸಂಗತಿಯನ್ನು ತಿಳಿಸಿ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುವುದೆಂದು

ಕಾದುಕೊಂಡಿರಬೇಕು. ಫೌಜದಾರರ ಆ ನಾಟಕೀಯ ಪ್ರವೃತ್ತಿಯನ್ನು ಕಂಡು ಅಂದು ಎಲ್ಲರಿಗೂ ಮೋಜೆನ್ನಿಸಿತು.

ಹಾಗೆ, ಆ ವಿದಾಯ ಸಮಾರಂಭ ಸಂತೋಷಕೂಟವಾಗಿ ಪರಿಣಮಿಸಿತು.

"ಇಂದು ನಮ್ಮಲ್ಲೇ ಊಟ," ಎಂದರು ಗೌಡರು.

"ಛೆ! ನಮ್ಮಲ್ಲಿ!" ಎಂದರು ಉಜ್ಜಪ್ಪನವರು.

"ನಾನೇ ಕರೆದುಕೊಂಡು ಹೋಗುತ್ತೇನೆ," ಎಂದರು ಫೌಜದಾರರು.

"ನಮ್ಮಲ್ಲಿಗೇ ಬರಲಿ ಬಿಡಿರಿ," ಎಂದರು ಕಾರಕೂನರು.

"ಸರಿ! ಹಬ್ಬದ ದಿನ ಜಂಗಮರು ಮಾಡುವ ಹಾಗೆ ಇವರೆಲ್ಲರ ಮನೆಯಲ್ಲೂ ಒಂದೊಂದು ಊಟ ಗಿಟ್ಟಿಸಿಬಿಡಪ್ಪಾ. ನೀನೇ ಭಾಗ್ಯಶಾಲಿ!" ಎಂದು ಅಪ್ಪಣ್ಣ ಚೇಷ್ಟೆ ಮಾಡಿದ.

"ನಿನಗೇನೂ ಇಂಥ ಪೀಕಲಾಟವಿಲ್ಲ ನೋಡೋ ಅಪ್ಪಣ್ಣಾ. ಬರೀ ಹಾಲು ಕುಡಿಯುವ ಸುಖಪುರುಷ ನೀನು! ನಿನ್ನ ಹಾಗೆ ಶಿವಣ್ಣನವರೂ ಆಗಲಿ ಅಂತ ನಿನ್ನ ವಿಚಾರವೋ ಏನು!" ಎಂದು ಗೌಡರೂ ನಗುತ್ತ ನುಡಿದರು.

"ಅಪ್ಪಣ್ಣನೂ ಗೃಹಸ್ಥಾಶ್ರಮಿಯಾಗುವ ವಿಚಾರದಲ್ಲಿದ್ದಾನೆ!" ಎಂದರು ಫೌಜದಾರರು. ಎಲ್ಲರಿಗೂ ಅದು ಹೊಸ ಸುದ್ದಿಯಾಗಿತ್ತು.

"ಹೌದೇನೋ ಅಪ್ಪಣ್ಣಾ? ನಿಜವೇನೋ?"

ನವವಧುವಿನಂತೆ ಸಂಕೋಚಪಟ್ಟುಕೊಳ್ಳುತ್ತ ಅಪ್ಪಣ್ಣ ಹೇಳಿದ:

"ಹೌದು."

———o———

ಮುಂದಿನ ಪ್ರಕಟನೆಗಳು

ರಾಗಿಣಿ

ಶ್ರೀ 'ಭಾರತೀಪ್ರಿಯ'ರ ಕಾದಂಬರಿ

★

ಬಂಗಾರದ ಜಿಂಕೆಯ ಹಿಂದೆ

('ನಾನು ಪೋಲೀಸನಾಗಿದ್ದೆ' – ಕಾದಂಬರಿಯ ಎರಡನೆಯ ಭಾಗ)

ಶ್ರೀ ಬಸವರಾಜ ಕಟ್ಟೀಮನಿಯವರ ಕಾದಂಬರಿ

★

ಪ್ರೋಲಿ ಪಟಾಲಂ

ಶ್ರೀ ದೇವುಡುರವರ ಕಾದಂಬರಿ

★

ಬಣ್ಣದ ನೂಲಿಂಗ

ಶ್ರೀ ಕುಮಾರ ವೆಂಕಣ್ಣನವರ ಕಾದಂಬರಿ

★

ಗ್ಯಾಲಿಯ ಗುಲಾಮ

ಶ್ರೀ ತ. ರಾ. ಸು. ರವರ ಕಾದಂಬರಿ

★

ಕಾಂಚನ-ಗಂಗಾ

('ಕಾಮಿನಿ – ಕಾಂಚನ'ದ ಎರಡನೆಯ ಭಾಗ)

ಶ್ರೀ ಅ. ನ. ಕೃರವರ ಕಾದಂಬರಿ

" ನೀ ನನ್ನ ಮುಟ್ಟಬೇಡ "

ಪತ್ರಿಕಾಭಿಪ್ರಾಯಗಳು

" The author's scrupulous integrity is evident on every page, and the realistic force of his descriptions is calculated to carry conviction. Mr. Kattimani writes of what he knows - which can be said of so few of even the most reputed of modern Kannada writers. Therein lies the power of this striking novel, worthy of its predecessors."

—THE TIMES OF INDIA

" In this novel, Kattimani ruthlessly exposes the hypocrisies of the privileged classes and the corrupting influence of selfseekers on the illiterate people. He breaks idols with the fury of an iconoclast and raves to the ground institutions which are no longer useful to a growing society."

—THE BHARAT JYOTHI

" ಅತ್ಯುತ್ತಮವಾದ ಕಾದಂಬರಿ. ಬಹುಮಟ್ಟಿಗೆ ತನ್ನ ಸಾಧನೆಯಲ್ಲಿ ಯಶಸ್ವಿಯಾಗಿದೆ."

—ಕರ್ಮವೀರ

" ಕಟ್ಟೀಮನಿಯವರ ಸಾಹಿತ್ಯ ಸೃಷ್ಟಿಯಲ್ಲಿ ಇದೂ ಒಂದು ಬೆಲೆಯುಳ್ಳ ಕಾದಂಬರಿ."

—ಚಿತ್ರಗುಪ್ತ

" ಕರುಳನ್ನು ಕಲಕುವ ಜೀವಂತ ಕಥಾನಕ. ಮನೋವೇಧಕ ಅಪೂರ್ವ ಚಿತ್ರಣ."

—ಪ್ರಪಂಚ

ಶಾರದಾ ಪ್ರಕಟನಾಲಯದ ಪ್ರಕಟನೆಗಳು

				ಬೆಲೆ		
೧.	ಕಾರವಾನ್ (ದ್ವಿತೀಯ ಮುದ್ರಣ)	....	....	೧	೪	೦
೨.	ಸ್ವಾತಂತ್ರ್ಯದೆಡೆಗೆ (ದ್ವಿತೀಯ ಮುದ್ರಣ)	....	....	೨	೪	೦
೩.	ಜೀವನ – ಕಲೆ *	....	....	೧	೦	೦
೪.	ಮುಗುಳುನಗೆ *	....	....	೧	೪	೦
೫.	ಸ್ವಪ್ನಸುಂದರಿ (ದ್ವಿತೀಯ ಮುಪ್ರಣ)	....	....	೧	೪	೦
೬.	ಆಲದ ಹೂ	....	....	೧	೧೨	೦
೭.	ಹುಡುಗಾಟ	....	....	೧	೪	೦
೮.	ಶವದ ಮನೆ	....	....	೧	೪	೦
೯.	ಎದಿರೇಟು	....	....	೧	೮	೦
೧೦.	ಸರ್ವಮಂಗಳಾ (ದ್ವಿತೀಯ ಮುದ್ರಣ)	....	....	೩	೮	೦
೧೧.	ಕೇಡಿಗನ ಕಿಡಿಗಳು	....	....	೧	೦	೦
೧೨.	ದೇವತೆಗಳು ನಕ್ಕಾಗ	....	....	೧	೪	೦
೧೩.	ಜ್ವಾಲಾಮುಖಿಯ ಮೇಲೆ	....	....	೪	೦	೦
೧೪.	ನನ್ನ ರಸಿಕ ಮತ್ತು ಬಂಗಾರದ ಗೆಜ್ಜೆ	....	....	೧	೮	೦
೧೫.	ಹಾಳು – ಮೂಳು	....	....	೧	೦	೦
೧೬.	ನಾಡಿಗೇರರ ನಗೆಬರಹಗಳು ೧	....	....	೧	೪	೦
೧೭.	ಮೋಹದ ಬಲೆಯಲ್ಲಿ	....	....	೫	೧೨	೦
೧೮.	ಸಾವಿನೊಂದಿಗೆ ಸರಸ	....	....	೧	೪	೦
೧೯.	ಅನುರಾಗ	....	....	೧	೪	೦
೨೦.	ಬಿಡುಗಡೆಯ ಬೇಡಿ	....	....	೩	೪	೦
೨೧.	ಜೋಳದ ಬೆಳೆಯ ನಡುವೆ	....	....	೧	೪	೦
೨೨.	ಜರತಾರಿ ಜಗದ್ಗುರು	....	....	೩	೧೨	೦
೨೩.	ಕಾನ್ವೆಂಟ್ ಗರ್ಲ್	....	....	೧	೦	೦
೨೪.	ಖಾನಾವಳಿಯ ನೀಲಾ	....	....	೧	೦	೦
೨೫.	ರಂಗನಾಯಕಿ	....	....	೨	೦	೦

* ಪ್ರತಿಗಳು ಮುಗಿದಿವೆ.

ಈ ಕಾದಂಬರಿಯ ಬಗೆಗೆ—

ಇದು ಪತ್ತೇದಾರಿ ಕಾದಂಬರಿಯಲ್ಲ—

ಪೋಲೀಸರ ರೋಮಾಂಚಕಾರಿ ಜೀವನದ ಪ್ರಪ್ರಥಮ ಕಾದಂಬರಿಯಿದು.

ದೇಶದ ಪಾರತಂತ್ರ್ಯದ ಕಾಲದಲ್ಲಿ ಹತ್ತು ವರ್ಷಗಳ ಕಾಲ ಪೋಲೀಸನಾಗಿದ್ದವನ ಆತ್ಮಕಥೆ.

ನಮ್ಮಾ ವಿಶಾಲ ಪ್ರಪಂಚದ ಸಾವಿರಾರು ಅಂಗಗಳಲ್ಲೊಂದು ಈ ಪೋಲೀಸ್ ಪ್ರಪಂಚ; ಸಮಾಜದ ಇತರ ಅಂಗಗಳಿಗಂಟಿ ಕೊಂಡಿರುವ ವ್ಯಾಧಿಗಳು ಈ ಅಂಗಕ್ಕೂ ಅಂಟಿಕೊಂಡಿರುವುದು ಸಹಜವೇ ಆಗಿದೆ.

ಪೋಲೀಸು ಜೀವನದ ವೈಖರಿ, ಪೋಲೀಸು ಜಗತ್ತಿನ ವ್ಯಕ್ತಿಗಳ ನೈಜಸ್ವರೂಪ, ರೀತಿನೀತಿ, ಆಚಾರ ವಿಚಾರ, ಅವರ ಅಂತರಂಗದ ಬಯಕೆ, ಮನಸ್ಸಿನ ಹೊಯ್ದಾಟ, ಖಟ್ಲೆಗಳ ಬೇಟೆ, ಲಂಚ ವೃತ್ತಿ, ಪ್ರಣಯ, ಹಳ್ಳಿಗಳಲ್ಲಿನ ವ್ಯಭಿಚಾರ, ಇವುಗಳ ಕಡೆಗೆ ಓದುಗರ ದೃಷ್ಟಿಯನ್ನು ಸೆಳೆದಿದ್ದಾರೆ, ಲೇಖಕರು.

ಈ ಕೃತಿ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಮತ್ತೊಂದು ದಿಟ್ಟತನದ ಹೆಜ್ಜೆ. ಸ್ವಾತಂತ್ರ್ಯದೆಡೆಗೆ, ಜ್ವಾಲಾಮುಖಿಯಮೇಲೆ, ಮೋಹದ ಬಲೆಯಲ್ಲಿ, ಜರತಾರಿ ಜಗದ್ಗುರು, ನೀ ನನ್ನ ಮುಟ್ಟಬೇಡ, ಜನಿವಾರ ಮತ್ತು ಶಿವದಾರಗಳಂಥ ವಿಶಿಷ್ಟ ರೀತಿಯ ಕೃತಿಗಳನ್ನಿತ್ತ ಶ್ರೀ ಕಟ್ಟೀಮನಿಯವರು ಈ ಕಾದಂಬರಿಯಲ್ಲಿ ನಿಮ್ಮನ್ನು ಪೋಲೀಸು ಪ್ರಪಂಚದ ಕೋಟೆಯೊಳಕ್ಕೆ ಕೊಂಡೊಯ್ಯುತ್ತಾರೆ.